ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಕ್ಕದ ಉದಾರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಜಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಊರುಗಳಿಗೆ ತಕ್ಕ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು. ದರ ಹಾಗೂ ನಿಯಮಗಳ ಪ್ರತಿಗಳೂ ಮೊಕತ್ಯಾಂ ಪತ್ರಗಳೂ ಸದರಿ ಬ್ರಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — ತಾ|| ೧೬-೨-೨೮

ಡಿ. ಡೊನೆಲಿ, — ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಗ ಳ- ಮಂಗಳವಾರಪೇಟೆ, ಆಕವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ಟದಿಂದ ತಾಸು ಮತ್ತು ಒಡಳ ಮುದ್ಧತಿಯ ಕನಿಷ್ಠ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ಧತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮಾಡಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ

ಮ್ಯಾನೇಜಿಂಗ ಡಾ. ಕ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯ ಎಂಟು ಲಕ್ಷದ ಮೇಲುಂಟು. ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಠಾಕೀಮ ಮತ್ತು ಚೇರ ಡಿಪಾಜಿಟಗಳಿಗೆ ಜಾಸ್ತಿಯಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ೬ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳುವ ಪೆಟ್ಟಿಗೆಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೮-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಬೇಕು.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೩-೭-೨೯ ನೇ ಇಸ್ವಿ.

ಶ್ರೀ.

ವಿಜಯಂ ಶ್ರೀಕಪ್ರಿಯ
ವಸುಮತಿಯು ನಲಿಸಿರೆ ಸುಹಿತಶಶಿಕೆಗಳಂ ॥
"ವಿಜಯಂ" ಶ್ರೀಕರಣ ।
ಸಹಿತಂಗಳ ವಿಸ್ತರಿಸಿನಲಿವುದು ಸಾಜಂ ॥೧॥

ವಿಲಾಯತಿಯಲ್ಲಿ ಸ್ವರಾಜ್ಯದ ಅದ್ಭುತ ಚಳವಳಿಯು.

ಈಗ ಲಂಡನದಲ್ಲಿರುವ ಆನಿಬಿಸೆಂಟಬಾಯಿ, ಶ್ರೀ. ಷಣ್ಮುಖಶೆಟ್ಟಿ, ಈಶ್ವರಚಂದ್ರ, ಶ್ರೀ. ರಾವ ಮೊದಲಾದವರು ಸ್ವರಾಜ್ಯದ ಚಳವಳಿಯನ್ನು ಪ್ರಾರಂಭಿಸಿದ್ದಾರೆ. ಈ ಬಗ್ಗೆ ಒಂದು ಜಾಹೀರ ಸಭೆಯನ್ನು ಕರೆಸಿದ್ದರು. ಈ ಸಭೆಯಲ್ಲಿ ಆನಿಬಿಸೆಂಟಬಾಯಿಯವರು ಅಂದದ್ದೇನಂದರೆ-

ಹಿಂದುಸ್ಥಾನದಲ್ಲಿ ಸ್ವರಾಜ್ಯದ ಚಳವಳಿಯು ಕಳೆದ ೫೦ ವರ್ಷಗಳಿಂದ ನಡೆದಿದೆ. ಸ್ವರಾಜ್ಯ ದೊರೆಯದ್ದರಿಂದ ಹಿಂದುಸ್ಥಾನದ ಕೋಪವು ಅತಿಶಯ ಏರಿಹೋಗಿದೆ. "ಕೆಲವು ತಿಂಗಳಾಗದ್ದರೂ, ವರ್ಷಗಳಲ್ಲಿ ಬ್ರಿಟಿಶ ಸಾಮ್ರಾಜ್ಯದಲ್ಲಿ ಇನ್ನೊಂದು ವಸಾಹಾತಿನ ಸ್ವರಾಜ್ಯ ಭೋಗಿಸುವ ದೇಶವು ಸೇರಿಸಲ್ಪಡುವದು; ಆ ದೇಶವು ಹಿಂದುಸ್ಥಾನವೆಂದು" ಕಳೆದ ವರ್ಷ ಜುಲೈ ತಿಂಗಳಲ್ಲಿ ಮುಖ್ಯ ಮಂತ್ರಿಯಾಗಿರುವ ಮಿ. ಮ್ಯಾಕಡೋನಾಲ್ಡ ಸಾಹೇಬರು ಭಾಷಣ ಮಾಡಿದ್ದಾರೆ. ಇಂಗ್ಲಂಡ ಮತ್ತು ಹಿಂದುಸ್ಥಾನದ ಸಂಬಂಧವು ಕಡಿದುಹೋಗಬೇಕೆಂದು ಹಿಂದುಸ್ಥಾನದ ಇಚ್ಛೆಯು ಹೋಗುವದಕ್ಕೆ ಮಿ. ಮ್ಯಾಕಡೋನಾಲ್ಡ ಸಾಹೇಬರು ದಾರಿ ಕೊಡಲಾರರೆಂದು ನಾನು ತಿಳಿಯುತ್ತೇನೆ. ಹಿಂದುಸ್ಥಾನದ ಮಹತ್ವಾಕಾಂಕ್ಷೆಯನ್ನು ಪೂರ್ಣ ಮಾಡದ್ದರೆ- ಹಿಂದುಸ್ಥಾನದಲ್ಲಿ ಬಂಡಾಯವಾಗುವದೇ ಖಂಡಿತ. ಆ ಪ್ರಸಂಗ ಬರಗೊಡದೆ, ನೆಹರೂ ರಿಪೋರ್ಟನ್ನು ಸಾಹೇಬರು ಅಂಗೀಕರಿಸುವರೆಂದು ಆಶಿಸುತ್ತೇನೆ."

ಶ್ರೀ. ಷಣ್ಮುಖಶೆಟ್ಟಿಯವರು ಅಂದದ್ದು:-

"ನೆಹರು ಸ್ವರಾಜ್ಯ ರಿಪೋರ್ಟನ್ನು ನಾನು ಸ್ವೀಕರಿಸುತ್ತೇನೆ. ಸ್ವರಾಜ್ಯ ಕೊಡುವದನ್ನು ಮುಂದೆ ಹಾಕುವದರಿಂದ ಇಂಗ್ಲಂಡದ ಸಂಬಂಧವನ್ನು ಕಡಕೊಳ್ಳಬೇಕೆಂದು ಹಿಂದುಸ್ಥಾನದಲ್ಲಿ ಹುಟ್ಟಿದ ಸ್ವಾತಂತ್ರ್ಯವಾದಿಗಳ ಸಂಖ್ಯೆಯನ್ನು ಹೆಚ್ಚಿಸಲಿಕ್ಕೆ ಸಹಾಯಕ ಮಾಡಿಕೊಟ್ಟಂತಾಗುತ್ತದೆ. ಹಿಂದೂ ಮುಸಲ್ಮಾನ ಮನಸ್ತಾಪವನ್ನು ದೂರ ಮಾಡುವೆವೆಂದು ಇಂಗ್ಲಿಷ ಸರಕಾರದವರು ಜಾಹೀರ ಮಾಡಿದರೆ- ಜಾತಿಜಾತಿಗಳ ಜಗಳವು ಬೇಗನೆ ಶಾಂತವಾಗುವದು."

ಮುಸಲ್ಮಾನರು ಸ್ವರಾಜ್ಯಕ್ಕೆ ಯಾವಾಗಲೂ ಪ್ರತಿಕೂಲರಲ್ಲೆಂದು ಮುನಸಿ ಈಶ್ವರಶರಣರು ಭಾಷಣ ಮಾಡಿ ಡಾಕ್ಟರ ಅನಸಾರಿ, ಸಿ. ಪಿ. ರಾಮಸ್ವಾಮಿ ಅಯ್ಯರ, ದಿವಾನ ಬಹಾದ್ದೂರ ಚಿಂತಾಮಣಿ, ತೇಜ ಬಹಾದ್ದೂರ ಸಪ್ರು ಮೊದಲಾದವರು ಕಳಿಸಿದ ತಾರುಗಳನ್ನು ಸಭೆಯಲ್ಲಿ ಓದಿದರು. ಹಿಂದುಸ್ಥಾನವು ಎಂದಿಗೂ ಈಗಿನ ಅಸ್ಪೃಶ್ಯರದಾದ ಸ್ಥಿತಿಯಲ್ಲಿರಲಾರದೆಂದು ದಿವಾನ ಬಹಾದ್ದೂರ ಚಿಂತಾಮಣಿಯವರು ಅಂದಿದ್ದಾರೆ. ಈ ಕ್ಷಣವೇ ವಸಾಹಾತಿನ ಸ್ವರಾಜ್ಯ ದೊರೆಯಬೇಕೆಂದೇ ಹಿಂದುಸ್ಥಾನದ ಭಾವವಾಗಿದೆಂತಲೂ ಹಿಂದುಸ್ಥಾನವು ಇಂಗ್ಲಂಡದಿಂದ ಅಗಲದಂತೆ ಮಾಡುವದು ಕೂಲಿಕಾರರ ಕಯ್ಯಲ್ಲುಂಟೆಂದೂ ಡಾಕ್ಟರ ಅನಸಾರಿಯವರು ಅಂದಿದ್ದಾರೆ.

ಮಿ. ಗ್ರೇಹಾಮ ಪೋಲಸಾಹೇಬರು ಈ ತಾರುಗಳನ್ನೋದಿ ತಾವು ಸ್ವತಃ ಭಾಷಣ ಮಾಡಿದರು. ಕೂಲಿಕಾರ ಮಂತ್ರಿಗಳಿಗೆ ವ್ಹಾಯಿಸರಾಯರನ್ನು ನೇಮಿಸುವ ಸಮಯ ಬರುತ್ತದೆ. ಆಗ ಇವರು ರಾಜಮನೆತನದವರನ್ನೇ ವ್ಹಾಯಿಸರಾಯರಾಗಿ ನೇಮಿಸಬಹುದು. ಎರಡನೆಯವರು ಇವರಿಗಿಂತ ಕಡಿಮೆ ಯೋಗ್ಯತೆಯವರಾಗುವರೆಂದು ಅಭಿಪ್ರಾಯಪಟ್ಟರು.

ಶ್ರೀ ಶಿವರಾಯರು ಕಡೆಯ ಮಾತು ಹೇಳಿದರು. ಮಹಾಯುದ್ಧವು ಕೆಂಪು ಜನರಿಗಿಂತ ಕರೇ ಜನರು ಕನಿಷ್ಠರೆಂದು ತಿಳಕೊಂಡ ವೃಥಾಭಿಮಾನವನ್ನು ದೂರ ಮಾಡಿತು. ಯಾರೂ ಶ್ರೇಷ್ಠ ಕನಿಷ್ಠರಾಗಿರುವದಿಲ್ಲೆಂದು ಬ್ರಿಟಿಶ ಗೌರಕಾಯರಸ್ಥರ ಹೃದಯ ಸುಭೇದವಾಗುವಂತೆ ಉದ್ಗಾರ ತೆಗೆದರು.

ಈ ಸಭೆಯ ಇತ್ಯಾಸಿಕ ಪರಿಣಾಮವು ಹೇಗಾಗಿದೆಂಬದು ಮಂತ್ರಿಗಳು ಬಾದಶಹರ ಹೆಸರಿನಿಂದ ಓದುವ ಭಾಷಣದಲ್ಲಿ ವ್ಯಕ್ತವಾಗುವದು. ಈ ದುರೈಯೂ ಬಹಳ ಸನಿಯದಲ್ಲುಂಟು. ಮುಂದಿನ್ನು ನೋಡುವದಿಷ್ಟೇ ಉಳಿದಿದೆ.

ಪಂಜಾಬಕ್ಕೆ ಸೇರಿದ ಖಡಕಪುರದ ವಿಶಿಷ್ಟವಾದ ಧಾಂಡನೆಂಬವನು ಬ್ಯಾನರಿಗೆ ಕೊಲ್ಲುತ್ತೇನೆಂದು ಹೆದರಿಸುವ ಪತ್ರ ಬರೆದವನಾಗಿದ್ದಾನೆಂದು ಪೋಲೀಸರು ಈತನ ದಸ್ತಗಿರಿ ಮಾಡಿದ್ದಾರೆ. ಈತನಿಂದ ರಾಜಕೀಯ ಖೂನಸಂಬಂಧ ಮಹತ್ವದ ಸಂಗತಿಗಳು ತಿಳಿಯುವವೆಂದು ಪೋಲೀಸರು ನಂಬಿದ್ದಾರೆ.

ಬೆಂಗಳೂರಲ್ಲಿ ಸುಲ್ತಾನಪೇಟೆಯ ಗಲಭೆ.

ಪಟ್ಟಣದ ತುಂಬ ದಂಡಿನ ಕಾವಲು.

---(೦)---

ಬೆಂಗಳೂರಲ್ಲಿ ಸುಲ್ತಾನಪೇಟೆಯ - ಗಣಪತಿಯನ್ನು ಸ್ಥಾನಾಂತರ ಮಾಡಿ ಬೇರೊಂದು ಕಡಿಗೆ ಪ್ರತಿಷ್ಠಾಪನೆ ಮಾಡುವರೆಂದೂ, ಹಿಂದೂ ಶಾಲೆಯನ್ನು ಮುಸಲಮಾನರಿಗೆ ಕೊಡುವರೆಂದೂ ಹೂಲೆದ್ದಿತು. ಕೂಡಲೆ ಪಟ್ಟಣದ ತುಂಬ ದೊಡ್ಡ ಚಳವಳಿ ಎದ್ದಿತು. ದಂಗೆಯಾಗುವದೆಂದು ಪೋಲೀಸರು ಅಂಜಿಕೊಂಡು, ತಮ್ಮ ಬಲವಲ್ಲದೆ, ದಂಡಿನ ಬಲ ತಂದರು. ನೂರು ಜನ ಶಸ್ತ್ರಧಾರಿಯಾದ ಪೋಲೀಸರು ಮತ್ತು ನೂರು ಜನ ದಂಡಾಳುಗಳು ಸುಲ್ತಾನಪೇಟೆಯಲ್ಲಿ ಕಾವಲುಗಾರರಾಗಿ ನಿಂತರು. ಪೋಲೀಸ ಜಮೇದಾರರೂ ಬೇರೆ ಶಸ್ತ್ರಧಾರಿಗಳೂ ಮೋಟಾರಿನಲ್ಲಿ ಕೂತು ಊರ ತುಂಬ ಬಂದೋಬಸ್ತು ಮಾಡತೊಡಗಿದರು. ದಾವಣಗೇರಿಯ ದಂಗೆಯ ದೆಸೆಯಿಂದ ಅನೇಕ ಮುಸಲಮಾನರು ಅಲ್ಲಿಗೆ ಹೋಗಿದ್ದಾರೆ. ಹಿಂದೂ ಮುಸಲಮಾನ ದಂಗೆಯಾದೀತೆಂಬ ಭಯದಿಂದ ೧೪೪ ಕಲಮನ್ನು ಜಾಹೀರ ಮಾಡಿದರು. ರಾತ್ರಿ ಹತ್ತು ಹೊತ್ತಿನ ಬಳಿಕ ಸಿನೇಮಾ ತೋರಿಸಬಾರದೆಂದು ಕಟ್ಟಪ್ಪಣೆ ವಿಧಿಸಿದರು. ಗಣಪತಿಯ ಉಚ್ಚಾಟನವಿಲ್ಲೆಂದು ಹಸ್ತಪತ್ರಿಕೆಗಳನ್ನು ಊರ ತುಂಬ ಹಚ್ಚಿದರು. ಸಾವಿರಾರು ಜನರು ಸುಲ್ತಾನಪೇಟೆಗೆ ಬಂದು ಗಣಪತಿಯನ್ನು ನೋಡಿಹೋದರು. ದಂಗೆಯಾಗಲಿಲ್ಲ.

ಜರ್ಮನಿಯ ತುಂಬ ಸೂತಕ.

---(೦)---

ಜರ್ಮನ ದೇಶವು ಸೋತು, ವ್ಹರ್ಸಾಲಿಸದ ಒಡಂಬಡಿಕೆಯ ಕಾಗದದ ಮೇಲೆ ಸಹೀ ಮಾಡಿ ಹತ್ತು ವರ್ಷಗಳಾಗುತ್ತವೆ. ಈ ದಿನವು ಇಂಗ್ಲಂಡ, ಫ್ರಾನ್ಸ, ಬೆಲಜಿಯಮಗಳಿಗೆ ಅತ್ಯಾನಂದದ್ದಾಗುವಂತೆ ಜರ್ಮನಿಗೆ ಹೇಗಾಗುವದು? ಅದು ಆನಕ್ಕೆ ದುರ್ಗತಿ ಹೊಂದಿದ ದಿವಸವು. ಆದ್ದರಿಂದ ಈ ದಿನವನ್ನು ಸಮಸ್ತ ಜರ್ಮನರು ಸೂತಕದ ದಿವಸವೆಂದು ದುಃಖಾತಿಶಯದಿಂದ ಪಾಲಿಸಬೇಕೆಂದು ಅಧ್ಯಕ್ಷರಾದ ಜನರಲ ಹಿಂಡೆನಬರ್ಗ ಮತ್ತು ಮಂತ್ರಿಮಂಡಲದವರೂ ಜಾಹೀರ ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ. ವ್ಹರ್ಸಾಲಿಸದ ಒಡಂಬಡಿಕೆಯಿಂದ ಜರ್ಮನರ ಬುದ್ಧಿವಂತಿಕೆಗೆ ಕಲಂಕ ಹತ್ತಿತು. ಅದರ ಸಾಂಪತ್ತಿಕ ಸ್ಥಿತಿಯು ಕ್ಷೀಣವಾಯಿತು. ಯುದ್ಧಕ್ಕೆ ಜರ್ಮನಿಯೇ ಕಾರಣವೆಂದು ಅನ್ಯರು ಹೇಳುವದು ತಪ್ಪೆಂದು ಈ ಸಂದೇಶದಲ್ಲಿ

ಹೇಳಿದ್ದಾರೆ ಜರ್ಮನಿಯಂತೆ ಪರದ್ಯಾಸದಲ್ಲಿ ಸಿಕ್ಕು ಸೂತಕ ಮಾಡುವ ದೇಶಗಳು ಜಗತ್ತಿನಲ್ಲಿ ಎಷ್ಟೋ ಉಂಟು.

ಪೋಲೀಸ ಮತ್ತು ವಿ ಲಿಯರಿಯ ದ್ವಂದ್ವ ಯುದ್ಧ.

ಫ್ರಾನ್ಸ ದೇಶದಲ್ಲಿ ಕಾಲ್ಬಲದ ಸೇನಾಧಿಪತಿ ರ್ಯಾ ಮುಟೋರ್ಡಸಾಹೇಬರು ಪೆನಶನಂದಿದ್ದಾರೆ ಇವರು ನಾದಾರಿ ಸ್ಥಿತಿಗೆ ಬಂದಿದ್ದಾರೆ. ಕೋರ್ಟಿನ ಆಜ್ಞೆಯಹಾಗೆ ಪೋಲೀಸರು ಜಪ್ತಿಯ ವಾರಂಟು ತಂದರು. ಕೂಡಲೆ ರ್‍ಯಾವ ಟೋಲ್ಡ ಸಾಹೇಬರು ಬಾಗಿಲ ಬಂದುಮಾಡಿಕೊಂಡು ಕೂತರು. ಪೋಲೀಸರು ಬಾಗಿಲ ತೆರೆಯಿರೆಂದರು ಸಾಹೇಬರು ಇವರಿಗೆ ಉತ್ತರವಾಗಿ ಒಳಗಿಂದ ವಿಷವಾಯು ಬಿಟ್ಟರು ಪೋಲೀಸರು ತಮ್ಮ ಸ್ಟೇಶನಕ್ಕೆ ಹೋಗಿ, ವಾಯು ವಿರೋಧಕ ಬುರಕೆಗಳನ್ನು ತಂದರು. ಪೋಲೀಸರು ಬಲವಂತಿಕೆಯಿಂದ ಬಾಗಿಲು ತೆರೆದರೆ ನನ್ನ ಹೆಂಡತಿ [illegible] ಗುಂಡಿನಿಂದ ಕೊಂದು, ತಾನೂ ಗುಂಡ ಹಾಕಿಕೊಂಡು ಜೀವಕೊಡುವೆನೆಂದನು. ಪೋಲೀಸರು ಗ್ಯಾಸ ತಂದು, ಅವರ ಕೋಣೆಯಲ್ಲಿ ಬಿಟ್ಟರು, ಆದರೆ ಪರಿಣಾಮವೇನೂ ಆಗಲಿಲ್ಲ. ನಾಲ್ಕು ದಿವಸವಾಯಿತು. ಒಳಗೆ ಗಂಡಹೆಂಡರು; ಹೊರಗೆ ಪೋಲೀಸರು; ಕೋರ್ಟಿಗೆ ಮತ್ತಿಗೆ ಹಾಸ್ಯದಂತಾಯಿತು.

ಜಪ್ತಿ, ಪೋಲೀಸ ವಾರಂಟು ಮತ್ತು ವ್ಯಕ್ತಿಗಳ ವರ್ತಮಾನ ಕೇಳಿ, ಯುದ್ಧಖಾತೆಯ ಮಂತ್ರಿಯು ರೋಮ ಬೋಲ್ಡಸಾಹೇಬನ ನೆರವಿಗೆ ಬಂದನು. ಒಬ್ಬ ದಳವಾಯಿಯ ಮೇಲೆ ಈ ತರದ ಆಪತ್ತು ಬಂದರೆ- ಫ್ರೆಂಚ ಸೈನ್ಯದ ಅಪಮಾನವೆಂದೂ ಒಬ್ಬ ದೊಡ್ಡ ಕಾಮದಾರರು ಸಾಲ ತೀರಿಸುವರೆಂದೂ ಪೋಲೀಸರಿಗೆ ತಿಳಿಸಿ, ಆ ಪ್ರಕಾರ ದ್ರವ್ಯ ಕಳಿಸಿದರು. ಈ ಪ್ರಕ್ರಮವು ಒಳ್ಳೇ ಸಂಧಿಕಾಲದಲ್ಲಿ ಬಂತು. ಏಕೆಂದರೆ ಬೇಕಾದ ಉಪಾಯದಿಂದ, ಅಸಿಮಿಸಿನೋಡಿ, ರೋಮಬೋಲ್ಡಸಾಹೇಬರ ಬಾಗಿಲ ಮುರಿದು ಜಪ್ತಿ ಮಾಡಬೇಕೆಂದು ಪೋಲೀಸರು ನಿಶ್ಚಯಮಾಡಿದ್ದರು. ದೊಡ್ಡ ಅನರ್ಥದ ಪರಿಹಾರವಾಯಿತು.

ಹೊಸ ಭೂಮಿಯ ಶೋಧ

— (೦) —

ಅಮೇರಿಕೆಯ ದಕ್ಷಿಣಧ್ರುವದ ಹತ್ತರ ೩೦ ಸಾವಿರ ಚದರು ಮೈಲಿರುವಷ್ಟು ಹೊಸ ಭೂಮಿಯು ಕಂಡಿದೆ. ಇದು ಅಮೇರಿಕೆಯ ವೈಮಾನಿಕನಾದ ಕಮ್ಯಾಂಡರ ಬಾಯರ್ಡನೆಂಬವನಿಗೆ ಹತ್ತಿದೆ, ಅಮೇರಿಕೆಯವನೇ ಶೋಧ ಹಚ್ಚಿದ್ದರಿಂದ, ಇದು ಅಮೇರಿಕೆಯ ದೇಶವೇ ಆಗುವದು.

ಬೆಳಗಾವಿಯ ಪತ್ರ.

ಕನ್ನಡ ಮರಾಟಿ ಸತ್ಯಾಗ್ರಹ.

—(೦)—

ಇಲ್ಲಿಯ ೧ನೇ ನಂಬರ ಗಂಡುಹುಡುಗರ ಶಾಲೆಯಲ್ಲಿ ಬಹು ದಿವಸಗಳಿಂದ ಮರಾಠಿ ಶಾಲೆಯ ಟ್ರೈನಿಂಗ ಕ್ಲಾಸು ಇತ್ತು. ಕನ್ನಡ ಶಾಲೆಯ ಹುಡುಗರಿಗೇ ಕೂಡ್ರಲಿಕ್ಕೆ ಸ್ಥಳ ಸಾಲುವದಿಲ್ಲ. ಕಾರಣ ಇಲ್ಲಿಂದ ಮರಾಠಿ ಕ್ಲಾಸು ತೆಗೆದುಹಾಕಬೇಕೆಂದು ಈಗ ೩-೪ ವರ್ಷಗಳಿಂದ ಪರಿಷ್ಕರ ಕಡಿಗೆ ಇವರಿಗಾಗಿ ಹೋದ ಅನೇಕ ಹೆ| ಮಾಸ್ತರರು ಒದರಾಡಿದ್ದರು. ಅದರ ಉಪಯೋಗವೇನೂ ಆಗಿದ್ದಿಲ್ಲ. ಈಗ ಹೊಸದಾಗಿ ವರ್ಗಾಗಿ ಬಂದ ಹೆ| ಮಾಸ್ತರರಾದ ಕಲ್ಲೋಳ ಗಣೇಶ ವಿಜಾಪೂರ ಇವರು ಚಾರ್ಜ ತೆಗೊಂಡಕೂಡಲೆ ಮರಾಠಿ ಕ್ಲಾಸನ್ನು ತೆಗೆದೇ ಹಾಕಬೇಕೆಂದು ನಿಶ್ಚಯಿಸಿ ಎಲ್ಲ ಮಾಸ್ತರರಿಂದೊಡಗೂಡಿ ಜೇರಮನ್ನಸಾಹೇಬರ ಕಡಿಗೆ ಹೋಗಿ ಸತ್ಯಾಗ್ರಹಮಾಡಿ ಹುಕುಮು ತೆಗೊಂಡು ಬಂದು ಮರಾಠಿ ಕ್ಲಾಸಿನ್ನ ಸ್ಥಳವನ್ನು ಕಬಜಾಕ್ಕೆ ತಗೊಂಡಿದ್ದಾರೆ. ಮತ್ತು ಅಲ್ಲಿ ತಮ್ಮ ಕ್ಲಾಸು ಶುರುಮಾಡಿದ್ದಾರೆ. ಸ್ತುತ್ಯ. ಇದ್ದರಬೇಕು ಇಂಥ ಮಾಸ್ತರರು. ಆದರೆ ಮರಾಠಿಗರು (ಮಾಸ್ತರರು) ಸುಮ್ಮನೆ ಕೂಡ್ರದೆ ತಮ್ಮ ಮಹಿಮಾಟೀ ಹಕ್ಕನ್ನು ಸಾಬೀತಮಾಡಿಕೊಳ್ಳಬೇಕೆಂದು ಪರಿಷ್ಕರ ಕಡಿಗೆ ಡೆಪುಟೇಶನ ಒಯ್ದಿದ್ದಾರಂತೆ! ಭಲೇರೆ ಒಸ್! ಏನಾಗುವದೋ ನೋಡಬೇಕು!

ನೀರಿನ ಕೊರತೆಯಿಂದ ಹತ್ತಿಯ ಬಿತ್ತಿಗೆಯಾಗದು.

—(೦)—

ಸಿಂಧನದಕ್ಕೆ ಸಿಂಧೂ ದೇಶದಲ್ಲಿ ತೋಡಿದ ಪ್ರಚಂಡ ಕಾಲಿವೆಗಳಲ್ಲಿ ಸಾಕಷ್ಟು ನೀರು ಬರದಾಗಿದೆ. ಹಿಮಾಲಯದಲ್ಲಿ ಮಳೆ ಇಲ್ಲದ್ದರಿಂದ ನದಿಯ ನೀರು ಬಹಳ ಕೆಳಗೆ ಇಳಿದಿದೆ. ಆದ್ದರಿಂದ ಕಾಲಿವೆಗಳಲ್ಲಿ ಸಾಕಷ್ಟು ನೀರು ಹರಿಯದಾಗಿದೆ. ಕೆಲವು ದಿವಸಗಳಲ್ಲಿ ಕಾಲವೆಗಳು ಬತ್ತುವ ಭಯವಾಗಿದೆ ಆದ್ದರಿಂದ ಈ ವರ್ಷ ಅಲ್ಲಿಯ ಜನರು ಹತ್ತಿಯನ್ನು ಬೆಳೆಯುವ ಸಂಭವವೇ ಇಲ್ಲ, ಹತ್ತಿಯೇ ಅಲ್ಲಿಯ ಮುಖ್ಯ ಹುಟ್ಟುವಳಿಯಾಗಿರುತ್ತದೆ. ಬರಗಾಲವೇ ಸರಿ.

ಬರುವ ಒಂದೇ ವಾರದಲ್ಲಿ ಅಮೇರಿಕೆಯ ೨೯ ಸಾವಿರ ಜನರು ಇಂಗ್ಲಂಡ ದೇಶ ನೋಡಲಿಕ್ಕೆ ಬರುವರು. ಇವರು ತಮ್ಮ ಪ್ರವಾಸಕ್ಕಾಗಿ ಸ್ವತಂತ್ರ ಹಡಗುಗಳನ್ನೇ ಬಾಡಿಗೆ ಹಿಡಿದಿದ್ದಾರೆ.

ಆನೆಯ ಸೊಂಡೆ ಮತ್ತು ಕೋರೆಯ ತೆಂಗಿನಮರ.

—(೦)—

ಪಾಂಡಿಚೇರಿಯಲ್ಲಿ ಒಂದು ತೆಂಗಿನಮರವು ಆನೆಯ ಸೊಂಡೆ, ತಲೆ ಮತ್ತು ಕೋರಿಯಂತೆ ಬೆಳೆದಿದೆ. ಇದಕ್ಕೆ ಕಣ್ಣುಗಳೂ ಆಗಿವೆ. ಬಣ್ಣ ಹಸರು. ಕೋರೆಗಳು, ದಂತದಂತೆ ಗಟ್ಟಿಯಾಗಿರುತ್ತವೆ. ಜೀವಂತ ಆನೆಯ ಮತ್ತು ಈ ಗಿಡದ ತಲೆಯ ನಡುವೆ ಬಹಳ ತುಸು ಹೆಚ್ಚು ಕಡಿಮೆಯುಂಟು. ಸಾವಿರಾರು ಜನರು [illegible] ಚಮತ್ಕಾರವನ್ನು ನೋಡಲು [illegible].

ಕೋಪೇಹೇಗನದ ಕೊಬ್ಬರೆ.

ಕೋಪೇಹೇಗನ ವ್ಯಾಪಾರದಿಂದ ಕೊಬ್ಬರೆಯು ಜಗತ್ತಿನತುಂಬ ಹೋಗುತ್ತದೆ. ಮೊದಲು ಕೊಬ್ಬರಿ ಅಥವಾ ಗಿಟಕಗಳನ್ನು ಬಿಸಲಿನಲ್ಲಿ ಒಣಗಿಸುತ್ತಿದ್ದರು. ಈಗ ಹೊಗೆಯಿಂದ ಒಣಗಿಸಿ, ದೇಶದೇಶಕ್ಕೆ ಕಳಿಸುತ್ತಾರೆ. ಇಂಥ ಕೊಬ್ಬರಿಯು ಬೇಗನೇ ಕೆಟ್ಟುಹೋಗುತ್ತದೆಂದು ವ್ಯಾಪಾರಸ್ಥರು ತಕರಾರುಮಾಡಿದ್ದಾರೆ. ಆದ್ದರಿಂದ ಹೊಗೆಯಿಂದ ಒಣಗಿಸುವದನ್ನು ಬಿಟ್ಟು ಮೊದಲಿನಂತೆ ಸೂರ್ಯಪ್ರಕಾಶದಲ್ಲಿಯೇ ಒಣಗಿಸಬೇಕೆಂದು ಕೋಪೇಹೇಗನ ದಳಬಾರಿನವರು ರೈತರಿಗೆ ಎಚ್ಚರಿಕೆ ಹೇಳಿದ್ದಾರೆ.

ಬ್ಯಾಂಕಿನಲ್ಲಿ ಕೋಟಿಯ ಠೇವು ಜಿಟ್ಟು.

ಹೈದರಾಬಾದಿನ ನಿಜಾಮಸಾಹೇಬರು ತಮ್ಮ ಸ್ವಂತದ ಒಂದು ಕೋಟಿ ರೂಪಾಯಿಗಳನ್ನು ಇಂಪೀರಿಯಲ ಬ್ಯಾಂಕಿನಲ್ಲಿಡುವಂತೆ ತಮ್ಮ ಕೋಶಾಧಿಕಾರಿಗೆ ಹುಕುಮು ಮಾಡಿದ್ದು, ತಿಂಗಳಿಗೆ ಐದು ಲಕ್ಷದಂತೆ ಈ ಕೋಟಿ ರೂಪಾಯಿಗಳನ್ನು ಇಡತಕ್ಕ ಹೋಗತಕ್ಕದ್ದಾಗಿದೆ. ಇದೇ ದ್ರವ್ಯವನ್ನು ರೈತರ ಸಾಲಗೂಳಿತನವನ್ನು ಕಳೆಯಲಿಕ್ಕೂ ಕಾರಖಾನೆಗಳ ಅಭಿವೃದ್ಧಿಗೂ ಉಪಯೋಗಿಸಿದರೆ- ನಿಜಾಮರಿಗೆ ಬ್ಯಾಂಕಿನ ಬಡ್ಡಿಗಿಂತ ಹೆಚ್ಚು [illegible] ಭದೊರೆತು, ಸ್ವದೇಶಿಯರ ಅನಂತಕಲ್ಯಾಣವಾಗುವದುಂಟು.

ದಂಗೆಯಾಯಿತೆಂದರೆ- ಹಿಂದೂ ಜನರು ಪಠಾಣರನ್ನು ಕೋಳಿಗಳಂತೆ ಚರ ಚರ ಕೊಯ್ದುಹಾಕುತ್ತಾರೆ. ಆದ್ದರಿಂದ ತಮಗೆ ದಂಗೆಯ ವೇಳೆಯಲ್ಲಿ ಪೋಲಿಸ ಸಹಾಯ ಕೊಡಬೇಕೆಂದು ಮುಂಬಯಿಯಲ್ಲಿರುವ ಪಠಾಣರ ಸರದಾರರಾದ ಖಾನಸಾಹೇಬ ನಮತಖಾನರು ದಂಗೆಯ ವಿಚಾರಣಾ ಕಮಿಟಿಯ ಮುಂದೆ ಸಾಕ್ಷೀ ನುಡಿದಿದ್ದಾರೆ.

ನೋಟೀಸು

— (೧) —

ಯಲ್ಲಿ ಕೋಂ ದೇವರಾಯಪ್ಪ ಕದಮನವರ ಸಾಕಿನ ಕನಕೂರ ಹಾಲಿವಸ್ತಿ ಹುಬ್ಬಳ್ಳಿ ಗವಳಗೇರ ಓಣಿ ಮಲ್ಲಿಕಾರ್ಜುನ ಥಿಯೇಟರನ ಹಿಂದೆ–

ಕೆಳಗೆ ಹೆಬ್ಬಟ್ಟಿನ ಗುರ್ತು ಮಾಡಿದ ದೇವರಾಯಪ್ಪ ತಂದೆ ಬಸವಂತಪ್ಪ ಕದಮನವರ ಸಾಕಿನ ಕನಕೂರ ತಾಲೂಕ ಧಾರವಾಡ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ–

ನೀನು ನನ್ನ ಮದುವೆಯ ಹೆಂಡತಿಯಾಗಬೇಕು ನನ್ನಿಂದ ನಿನಗೆ ಎರಡು ಹೆಣ್ಣು ಮಕ್ಕಳಾಗಿವೆ ಆದರೆ ನೀನು ವಿನಾಕಾರಣ ನನ್ನ ತಾಯಿ ಮತ್ತು ನನ್ನ ಕೂಡ ಕದದಾಡಿ, ಸಣ್ಣ ಮಕ್ಕಳನ್ನು ಕರಕೊಂಡು ಹೋಗಿ, ಹುಬ್ಬಳ್ಳಿಯಲ್ಲಿ ನಿನ್ನ ತಾಯಿಯ ಮನೀ ಸೇರಿಕೊಂಡಿ ನಿನಗೆ ಈಗ ಅಜಮಾಸು ೩೦ ವರ್ಷ ಪ್ರಪಂಚಕಳು ಆದ್ದರಿಂದ ಈ ರೀತಿ ನಡೆಯದೆ ಸುರಳೀತವಾಗಿ ಪ್ರಪಂಚ ಮಾಡಿಕೊಂಡಿರಬೇಕೆಂದು ನಾನು ಸ್ವತಃ ಬಂದು ಹೇಳಿದೆ ದೈವದವರು ಹೇಳಿದರು ಆದರೂ ನಿನ್ನ ಹಟ ಬಿಡಲಿಲ್ಲ ನಿನ್ನ ಧೀಮಾಕಿನ ನೋಡಿ, ದೈವದವರೂ ಬೇಸತ್ತರು ಈಗ ನಾನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ– ನೀನು ಈ ನೋಟೀಸು ಮುಟ್ಟಿದ ಕೂಡಲೆ– ನನ್ನ ಮನೆಗೆ ಬಂದು ಬಾಳುವೆ ಮಾಡುವಂತೆಯಾಗಿದ್ದುಕೊಳ್ಳಬೇಕು ಇದಕ್ಕೆ ತಪ್ಪಿದರೆ– ನನ್ನಿಂದ ನಿನಗೆ ಪೋಟಗಿ ವಗೈರೆ ದೊರೆಯಲಾರದು ಕಾಯದೆಪ್ರಕಾರ ನಿನ್ನ ಹತ್ತಿರ ಇರುವ ಹುಡಿಗೆಯ ವಾರಸಾ ಹಕ್ಕು ನನ್ನದು ಇರುತ್ತದೆ ಅದನ್ನು ನನ್ನ ಕಬಜಾ ಕೊಡಬೇಕು ಅದರ ಸಂರಕ್ಷಣೆಯ ಜೋಖಾ ನನ್ನದೇ ಇರುತ್ತದೆ ಇದರ ವಿರುದ್ಧ ನೀನು ನಡೆದರೆ– ನನ್ನಿಂದ ನಿನಗೆ ಪೋಟಗಿ ವಗೈರ ಏನೂ ದೊರೆಯಲಾರದು ಮತ್ತು ನೀನು ನನ್ನ ಮನಸ್ಸಿನ ವಿರುದ್ಧ ವರ್ತಿಸುವವನನ್ನು ಉಡಿಕೆ ಮಾಡಿಕೊಳ್ಳಬಾರದು ಏಕಂದರೆ– ಸೋಡಪತ್ರ ಕೊಡಲಿಕ್ಕೆ ನನ್ನ ಬಿಲಕೂಲ ಇಚ್ಛಾ ಇರುವದಿಲ್ಲ ನೀನು ಪುನರುಡಿಕೆ ಮಾಡಿಕೊಂಡರೆ– ನಿನ್ನ ಮೇಲೆ ಹಾಗು ಉಡಿಕೆಯಾಗುವವನ ಮೇಲೆ ಏಕದಂ ಫೌಜದಾರಿ ಮಾಡುವೆನು ಗಂಡನು ಸೋಡಪತ್ರ ಕೊಟ್ಟು ಹೊರತು ಗಂಡಹೆಂಡರ ಬಿಡುಗಡೆಯಾಗುವದಿಲ್ಲೆಂದು ಕಾಯದೆ ಆದೆ ಬೇಕಾದರೆ ವಕೀಲರನ್ನು ಕೇಳಿಕೋ ನೀನು ನನ್ನ ಮನೆಯಿಂದ ಹೋಗುವಾಗ ೫೦೦ ರೂಪಾಯಿಗಳ ದಾಗೀನೆ ಒಯ್ದಿರುತ್ತೀದಿ ಬರುವಾಗ ಅವನ್ನು ತರಬೇಕು ತಂದಿದ್ದರೆ– ಮತ್ತು ನೀನು ನಿನ್ನ ತವರುಮನೆಯಲ್ಲಿಯೇ ಉಳಿದರೆ– ಇವುಗಳ ದೆಸೆಯಿಂದ ನಿನ್ನ ಮೇಲೆ ಕಾಯದೇಶೀರ ಇಲಾಜ ಮಾಡುವೆನು ಆ ಖರ್ಚು ಮತ್ತು ಈ ನೋಟೀಸಿನ ಖರ್ಚು ನಿನ್ನ ಮೇಲೆ ಮತ್ತು ನಿನಗೆ ಭುಲಕಾಫೆ ಕೊಡುವ ನಿನ್ನ ತಾಯಿಯ ಮೇಲೆಂಟು ತಿಳಿಯುವದು ತಾ॥ ೨ ಜುಲೈ ೧೯೩೯

ಈ ಎಡಗೈ ಹೆಬ್ಬಟ್ಟಿನ ಗುರ್ತು ದೇವರಾಯಪ್ಪ ತಂದೆ ಬಸವಂತಪ್ಪ ಕದಮನವರ ಈತನ ಕೈದು ಇರುತ್ತದೆ

— —

ಸುಸಮಯ

— ೦ —

ಎ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ. (ಕೊಳ್ಳೇಗಾಲ ಬ್ರ್ಯಾಂಚ) ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

—

ಚಂದಾದಾರರಿಗೆ ಸೂಚನೆ

ಜುಲೈ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಆ ದಾರರು ವ್ಹಿ. ಪಿ. ಸ್ವೀಕರಿಸಿ ನಮ್ಮ ಉದ್ಯೋಗವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

—

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೆ ದಿವಸಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು, ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಸೂಚನೆ:— ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನ ಮೇಲಿಂದ ಈ ಪೇಟಿಕೆಯನ್ನು ತರಿಸುವಿರೆಂಬುದನ್ನು ಬರೆಯಬೇಕು.

WANTED

Wanted Candidates for Telegraph and Station Master's Classes Full particulars and Railway Fare Certificate on 2 annas stamp. Apply to:= Imperial Telegraph College. Nal Sarak, Delhi.

—

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾ. ವಿಜಯ ಧಾರವಾಡ.

ಈ ಪತ್ರವನ್ನು [illegible] ಬಾಳಾಚಾರ್ಯ [illegible]ಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. 1143

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಗುರುವಾರ ತಾರೀಖು ೪ ನೇ ಜುಲೈ ೧೯೨೯ (ಸಂಚಿಕೆ ೧೪೪

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯುತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪ್ರತ್ಯೇಕವಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಂದು ವರ್ಷದವರೆಗೆ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೧೦೦ ೩॥ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩॥ ರೂ.

ಸೇವ್ಹಿಂಗ್ಸ ಬ್ಯಾಂಕ:— ಒಂದು ವರ್ಷದವರೆಗೆ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಸಾಲಗಳು.

ಬಂಗಾರದ ದಾಗಿನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮಾ ಹಿಡಿಯುವದರಲ್ಲಿ ಬರುವದು ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಕ್ಕದಾ ಉದರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಊರುಗಳಿಗೆ ಕಳ್ಳಿಸ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ ಜರೂರ್ಯಾರ ಪತ್ರಗಳೂ ಸದರಿ ಬ್ಯಾಂಕದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — ಡಿ. ಡೊನೆಲಿ,

ತಾ|| ೧೭-೬-೨೯ — ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ- ಮಂಗಳವಾರಪೇಟೆ, ರಾವಬಹಾದೂರ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ತುಸು ಮತ್ತು ಒಹಳ ಮುದ್ದತಿಯ ಕನಿಕ ಕಡ್ಡಾ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ವರೆಗೆ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ವ್ಯಾಪಾರ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ವರೆಗೆ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಇತರ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ. ಛಂಡಿವಾಲ

ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಠಾಕೀನು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತಿ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ವಿ. ಟಿ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ॥ ೪-೭-೦೯ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಪ್ರಿಯ
ಶ್ರೀ ವಸುಮತಿಯ ನಲಿಸಿ ಸುಹಿತ ಕರ್ತೃಕೆಗಳಿಂ ತಿ
ದೀ "ವಿಜಯಂ" ಶ್ರೀಕರರುಣ।
ನಾ ವಿಹಿತಂಗಳ ವಿವರಿಸಲಿಚ್ಛಿಸು ಸಾಜಂ ॥೧॥

ಹಿಂದೀ ಸಂಸ್ಥಾನಿಕರು ಮತ್ತು ಬ್ರಿಟಿಶ ಸಾರ್ವಭೌಮತ್ವ.

ಹಿಂದೀ ಸಂಸ್ಥಾನಿಕರಲ್ಲಿ ಕೆಲವರು ಮತ್ತು ಕೆಲ ಸಂಸ್ಥಾನಗಳ ದಿವಾನರು ಮುಂಬಯಿಯಲ್ಲಿ ಮೊದಲು ಸೇರಿ, ಲಾರ್ಡ ಆಯುರ್ವಿನಸಾಹೇಬರ ಮುಂದೆ ಯಾವ ಬೇಡಿಕೆಗಳನ್ನಿಡಬೇಕೆಂದು ವಿಚಾರವಮಾಡಿ, ಠರಾವುಗಳನ್ನು ಗೊತ್ತುಮಾಡಿ, ಬರಕೊಂಡು, ಸ್ಪೇಶಲ ಟ್ರೇನಿನಿಂದ ಮುಂಬಯಿಗೆ ಬಂದರು. ಇವರಲ್ಲಿ ಹೈದರಾಬಾದಿನ ನಿಜಾಮ ಸಾಹೇಬರ ಪ್ರತಿನಿಧಿ ಅಥವಾ ವಕೀಲನು ಇಂಲಿಲ್ಲ. ಶಿಂದೆನು ಟಂಡಾಯದಲ್ಲಿ ಸೇರಿದರ- ಗುಡಜೇಪೆ ಇಟ್ಟವನೆಂದು ಲಾರ್ಡ ಕ್ಯಾನಿಂಗಸಾಹೇಬನು ಭಯೋದ್ಗಾರ ತೆಗೆದಿದ್ದನು. ಆ ಶಿಂದೆನ ವಂಶಜನ ಪತಿಯಿಂದ ಲಾರ್ಡಸಾಹೇಬರ ಮುಂದೆ ನಿಲ್ಲಲು ಹಸ್ಕರರೆಂಬ ಸಾಹೇಬರೇ ಬಂದಿದ್ದರು. ಸಾಹೇಬರು ಸೇರಿಕೊಂಡಂಥ ಶಿಷ್ಟ ಮಂಡಲದವರ ಬೇಡಿಕೊಳ್ಳುವ ಹಕ್ಕುಗಳು ಮಿತವಾಗಿಯೂ, ವಿನಮ್ರವಾಗಿಯೂ ಇರಬೇಕಲ್ಲವೇ? ಅವು ಹಾಗೆಯೇ ಇದ್ದವು ಬಟಲರ ಕಮಿಟಿಯು ಸಂಸ್ಥಾನಿಕರ ಮೋರೆಯ ಮೇಲೆ ಕೈ ಎಳೆದಂಥ ಒಂದು ಕೃತ್ಯಮಾಡಿದೆ. ತಮ್ಮ ಪ್ರತ್ಯಕ್ಷ ಸಂಬಂಧವು ಬಾದಶಹರ ಕೂಡ ಇರಬೇಕೆಂದು ಸಂಸ್ಥಾನಿಕರ ಅಭಿಲಾಷೆಯು. ಅದನ್ನು ಕಮಿಟಿಯು ಒಪ್ಪಿದೆ ಬಾದಶಹರೆಂದರೆ ದಿನಾಲು ಅವರ ಕೂಡ ಪತ್ರವ್ಯವಹಾರಮಾಡುವದಲ್ಲ. ಅವರ ಪ್ರತಿನಿಧಿಯು ಹಿಂದುಸ್ಥಾನದಲ್ಲಿಯೇ ಇರುವನು. ಗವ್ಹರ್ನರ ಜನರಲ್ಲರೇ ಅವರು!! ಈ ಸಾಹೇಬರು ಗವ್ಹರ್ನರ ಜನರಲರೆಂಬ ಖರ್ಚಿಯಿಂದ ಎದ್ದು, ವ್ಹಾಯಿಸರಾಯರೆಂಬ ಖುರ್ಚಿಯ ಮೇಲೆ ಕೂತರಾಯಿತು. ಯಾವ್ಯಾವ ಬೇಡಾರಿಗೆ ಮುತ್ಸದ್ದಿ ಮತ್ತು ಫೌಜದಾರೀ ಅಧಿಕಾರವಿರುವದಿಲ್ಲವೋ ಇವನ್ನು ಬಿಡಿಸಬೇಕೆಂದ ಕೊಳೆಗ್ರಸ್ತ ಪ್ರಯುಕ್ತ ಮತ್ತು ಉದ್ದೇಶ. ಇಂಗ ಆಗಲೊಲ್ಲದು. ಅದೇ ಪ್ರಕಾರ ನ್ಯಾಯದಂಡ ಮತ್ತು ಶಿಕ್ಷೆ ಕೊಡತಕ್ಕ ಅಧಿಕಾರಗಳು ಒಂದೇ ವ್ಯಕ್ತಿಯಲ್ಲಿ ಕೇಂದ್ರಿತವಾದವು. ಸಂಸ್ಥಾನಿಕರ ದೆಸೆಯಿಂದ ನ್ಯಾಯಸರಕಾರದ ಜೊತೆ ಶಹರ ಪ್ರತಿನಿಧಿಯಾದದ್ದು ಸಂಸ್ಥಾನಿಕರಿಗೆ ಸಂತೋಷ ಆದರೆ ತಮ್ಮ ಅಧಿಕಾರದಲ್ಲಿ ವ್ಹಾಯಿಸರಾಯರು ಕೈಹಾಕಬಾರದೆಂದು ಇವರ ಮೂಲ ಉದ್ದೇಶ. ಇದಕ್ಕೆ ಮಾತ್ರ ಬಟ್ಲರ ಕಮಿಟಿಯು ಒಪ್ಪಿಲ್ಲ. ಸಾರ್ವಭೌಮ ಸರಕಾರಕ್ಕೆ ಇಂಥ ಅಧಿಕಾರ ಮತ್ತು ಹಕ್ಕು ಇರಲೇಬೇಕೆಂದು ಕಮಿಟಿಯು ಹೇಳಿದೆ. ಬ್ರಿಟಿಶ ಸರಕಾರದವರು ಮೊದಲೂ ಕೈ ಹಾಕುತ್ತಿದ್ದರು. ಪದಚ್ಯುತಮಾಡುತ್ತಿದ್ದರು. ಒಬ್ಬನ ಬದಲಾಗಿ ಬೇರೊಬ್ಬನನ್ನು ಪಟ್ಟಕ್ಕೆ ಕೂಡ್ರಿಸುತ್ತಿದ್ದರು. ಮುಂದಾದರೂ ಹೀಗೇ ಮಾಡುವರು. ಸಂಸ್ಥಾನಿಕರು ಬ್ರಿಟಿಶ ಸರಕಾರಕ್ಕೆ ಒಪ್ಪಿಗೆಯಾಗುವಂತೆ ರಾಜ್ಯಕಾರಭಾರ ಮಾಡಿದರೇ ಕ್ಷೇಮ. ಇಲ್ಲವಾದರೆ- ಕೋರ್ಟಿನ ಡಿಕ್ರಿಯಂತೆ ಇವರ ಮೇಲೆ ಸಾರ್ವಭೌಮ ಸರಕಾರದ ವಾರಂಟು ತಪ್ಪದು. ಈ ವಾರಂಟು ಸಂಸ್ಥಾನಿಕರು ಬ್ರಿಟಿಶ ಸರಕಾರದ ದಾಸ್ಯತ್ವವನ್ನು ಅಂಗೀಕರಿಸಿದ ಒಂದು ಸ್ಪಷ್ಟ ಉದಾಹರಣೆಯಾಗುವದು. ಈ ರೀತಿಯಿಂದ ಸಂಸ್ಥಾನಿಕರು ತಮ್ಮ ದಾಸ್ಯತ್ವವನ್ನು ಬಟಲರ ಕಮೀಟಿಯಿಂದ ಮತ್ತಿಷ್ಟು ಗಟ್ಟಿಮುಟ್ಟು ಮಾಡಿಕೊಂಡಂತಾಯಿತು.

ವಿಚಾರಪೂರದಲ್ಲೊಂದು ಮೋಜು.

— — —(೨)— — —

ಒಂದು ವಾರ ಅಥವಾ ಹೆಚ್ಚಾಯಿತು. ಅಲ್ಲಿಯ ಕೆಲ ಶ್ರೀ. ನೇಸಾಯಿಟಿಯ ಜನರಲ ಕಮೀಟಿ ಕೂಡಿತು. ಅಧ್ಯಕ್ಷ, ಡಾಯರೆಕ್ಟರ ಮೊದಲಾದವರನ್ನು ನೇಮಿಸುವ ಕೆಲಸ ನಡೆಯಿತು. ತಮ್ಮವರೇ ಆರಿಸಿ ಬರಬೇಕೆಂದು ಒಂದು ಬಣದವರು ಮತಪತ್ರ- ತೊಟ್ಟಿಯ ಹೋಟುಗಳು ಬೇಕಷ್ಟು; ಹೋಟಿಗೆ ಪ್ರಾಕ್ಸಿಯಿರುವದಿಲ್ಲ. ಸಭೆಯಲ್ಲಿದ್ದವರೇ ಹೋಟು ಕೊಡಬೇಕಾಗುತ್ತದೆ ಆದರೆ ಒಹುಮತದ ನಂಬಿಗೆ ಇರಲಿಲ್ಲ. ಆಗ ಊರೊಳಗೆ ಇರಲಿ; ಇಲ್ಲದಿರಲಿ; ಸಭೆಗೆ ಬಂದಿರಲಿ; ಬರದಿರಲಿ; ಸ್ಥಳದವರಾಗಲಿ; ಪರಸ್ಥಳದವರಾಗಲಿ; ತಮಗೆ ಆಗ ನೆನಪಿಗೆ ಒಂದ ಅರವತ್ತು ಜನರ ಹೆಚ್ಚಿಗೆ ಹೋಟುಗಳನ್ನು ಮಾಡಿಕೊಂಡರು. ಇದೆಲ್ಲ ಬ್ರಾಹ್ಮಣೇತರವೆಂಬ ಕಂತ್ರಾಟಕ್ಕೆ ಸೇರಿತ್ತು. ಹೋಟಿನ ಅಕ್ರಮ, ಅನ್ಯಾಯ, ಅಪ್ರಾಮಾಣ್ಯವನ್ನು ಅಧ್ಯಕ್ಷರ ಲಕ್ಷ್ಯಕ್ಕೆ ಹಾಕಿದರೂ- ಲಂಕೆಯಲ್ಲಿ ಹುಟ್ಟಿದವರೆಲ್ಲರು ಒಂದೇ ಎಂಬ ಹೇಳುವ ತರಹವಾಗಿ ಹೋಟಿನ ಕೋಲಾಹಲ ನಡೆಯಿತು. ಈ ಘಾಸಿನ ವಿರುದ್ಧ ಪ್ರತಿಪಕ್ಷೀಯರು ಕಲೆಕ್ಟರಸಾಹೇಬರ ಕಡೆಗೆ ಅರ್ಜಿಯನ್ನು ಕಳಿಸಿದ್ದಾರೆ. ಒಂದೊಂದೇ ಛಮತ್ಕಾರ!!!

ಮುಂಬಯಿ ಮದ್ರಾಸ ಮೇಲ.

— — —(೧)— — —

ಮದ್ರಾಸದಿಂದ ರಾತ್ರಿ ಹತ್ತಕ್ಕೆ ಹೊರಟ ಮೇಲಬಂಡಿಯು ಮೂರನೇ ದಿವಸ ಪ್ರಾತಃಕಾಲದಲ್ಲಿ ಮುಂಬಯಿ ತಲ್ಪುತ್ತದೆ. ೩೬ ತಾಸುಗಳ ಪ್ರಯಾಣವಾಗುತ್ತದೆ. ಜಿ. ಆಯ. ಪಿ. ಮತ್ತು ಬೇರೆ ದೊಡ್ಡ ರೇಲ್ವೆಗಳ ಮೇಲಬಂಡಿಯ ವೇಗವು ನಿಲ್ಲುವದನ್ನು ಹಿಡಿದು ತಾಸಿಗೆ ೩೮-೪೦ ಮೈಲಿರುವದು. ಆದರೆ- ಮದ್ರಾಸದ ಬಂಡಿಯ ವೇಗವು ೨೪ ಮೈಲಿಗಿಂತ ಹೆಚ್ಚಿರುವದಿಲ್ಲ. ಕಂಪನಿಯವರು ವೇಗದ ಇಂಜಿನ ತರಿಸಿದ್ದಾರೆ. ಆದರೆ ಇವುಗಳ ಭಾರವನ್ನು ತಡೆಯುವಷ್ಟು ಗಟ್ಟಿಯಾದ ಸ್ಲಿಪರ್ಸ್ ರೂಳುಗಳಿರದ್ದರಿಂದ, ಅವನ್ನು ಸರಿಪಡಿಸುವತನಕ ಹೆಚ್ಚಿಗೆ ವೇಗ ಬಿಡಲಾಗದೆಂದು ಹೋದ ವರ್ಷ ಕಂಪನಿಯವರು ಹೇಳಿದ್ದರು. ಇಷ್ಟರಲ್ಲಿ ಸೇತುವೆಗಳ ದುರಸ್ತಿಯಾಗಿರಬಹುದು. ಕಾರಣ ಮೇಲಬಂಡಿಯ ವೇಗ ಹೆಚ್ಚಿಸಬೇಕು ಮತ್ತು ಮುಂಬಯಿ ಕಲಕತ್ತೆಯ ನಡುವೆ ಇರುವಂತೆ ಎರಡು ಮೇಲಬಂಡಿಗಳನ್ನು ಬಿಡಬೇಕೆಂದು ಕಂಪನಿಗೆ ಸೂಚನೆಗಳಾಗಿರುತ್ತವೆ. ಮುಂಬಯಿ ಮದ್ರಾಸದ ನಡುವೆ ಎರಡು ಬಂಡಿಗಳನ್ನು ಬಿಡುವದಾದರೆ- ಬೆಂಗಳೂರ ಪುಣೆಯ ಮಧ್ಯದಲ್ಲಿಯೂ ಎರಡು ಬಂಡಿಗಳನ್ನು ಬಿಡಬೇಕೆಂದು ಕರ್ನಾಟಕ ಪ್ರಾಂತದವರು ಕಂಪನಿಯನ್ನು ಅಗತ್ಯಪಡಿಸುವಂತೆ ಬೆಳಗಾವಿಯ ರೇಲ್ವೆ ಮಂಡಲದವರು ಪ್ರಯತ್ನಿಸಬೇಕೆಂದು ಸೂಚಿಸುತ್ತೇವೆ.

ಸರ್ಚಲಾಯಿಟದ ಮೇಲೆ ಸರಕಾರದ ಕೋಪ.

ಪಾಟಣಾದಲ್ಲಿ ದಿನಾಲು ಹೊರಡುವ ಸರ್ಚಲಾಯಿಟವೆಂಬ ಪತ್ರಿಕೆಯಲ್ಲಿ ಸರಕಾರದ ಕೆಲ ಗುಪ್ತ ಸಂಗತಿಗಳು ಪ್ರಕಟಿಸಲ್ಪಟ್ಟವು. ತನ್ನ ಅಂತರಂಗವು ಬಹಿರಂಗವಾಯಿತೆಂದು ಸರಕಾರವು ಈ ಪತ್ರದ ಮೇಲೆ ಕೋಪಿಸಿ, ಇದರ ಕೂಡ ಅಸಹಕಾರ ಮಾಡಿದೆ ಇದಕ್ಕೆ ಸರಕಾರದ ರಿಪೋರ್ಟ, ಪ್ರೆಸನೋಟು ಮಾತ್ರವಲ್ಲ, ನೋಟೀಸು ಜಾಹೀರಾತುಗಳನ್ನು ಕೂಡ ಕೊಡಲಾಗದೆಂದು ನೋಟೀಸ ತೆಗೆದು ತನ್ನ ಹೊಟ್ಟೆಯಲ್ಲಿದ್ದ ಹಳೇ ಮತ್ತು ಹೊಸ ಸಿಟ್ಟನ್ನು ತೀರಿಸಿಕೊಳ್ಳುತ್ತಿದೆ.

ಜುಲೈ ೭ ನೆಯ ತಾರೀಖು

ಪರದೇಶಿ ವಸ್ತ್ರ ಬಹಿಷ್ಕಾರ ಕಮಿಟಿಯವರು ಜುಲೈ ೭ ನೇ ತಾರೀಖನ್ನು ಅಂದರೆ ಜುಲೈ ತಿಂಗಳ ಮೊದಲನೇ ಆದಿತ್ಯವಾರವನ್ನು "ಬಹಿಷ್ಕಾರ ದಿನ" ವನ್ನಾಗಿ ಆಚರಿಸಬೇಕೆಂದು ನಿರ್ಣಯಿಸಿದ್ದಾರೆ.

ಅಂದು—

೧ ಮನೆಮನೆಗೆ ಹೋಗಿ ಖಾದೀ ಬಟ್ಟೆಯನ್ನು ಮಾರುವದು.

೨ ಸಭೆ ಕೂಡಿಸಿ ಬಹಿಷ್ಕಾರ ಹಾಕುವದರ ಬಗ್ಗೆ ಜನರ ಮನವೊಲಿಸುವದು.

೩ ಊರಲ್ಲೆಲ್ಲ ನಗರಸಂಕೀರ್ತನೆಗಳನ್ನು ಹೊರಡಿಸುವದು

೪ ಇನ್ನು ಮೇಲೆ ಪರದೇಶೀ ಬಟ್ಟೆ ಖರಿಸದಂತೆ ಜನರ ಮನವೊಲಿಸುವದು.

ಇವೇ ಮೊದಲಾದ ಕಾರ್ಯಗಳನ್ನು ಮಾಡಿ, ನಿಮ್ಮ ಜಿಲ್ಲೆಯ ಕಾಂಗ್ರೆಸ ಕಮಿಟಿಗಳಿಗೆ ಆ ಪ್ರಕಾರ ತಿಳಿಸಿ ರಾಷ್ಟ್ರಕಾರ್ಯಕ್ಕೆ ನೆರವಾಗಿರಿ.

ಮೀರತದ ಪ್ರಕರಣದಲ್ಲಿ ಇಂಗ್ರೇಜಿ ಪತ್ರಕಾರರ ಮೂರ್ಖತನದ ವರ್ತನ.

—(o)—

ಮೀರತದ ಪ್ರಕರಣದಲ್ಲಿ ವಿಲಾಯತಿಯ ಬೊಲ್ಶೆವಿಕ ಪಂಥದ ವಿರುದ್ಧ ಪಕ್ಷದ ಪತ್ರಗಳು ಯದ್ವಾತದ್ವಾ ಲೇಖಗಳನ್ನು ಬರೆದು, ಆರೋಪಿಗಳ ವಿಷಯ ಪಾಗಿಕೋರ್ಟಿನ ಮತ್ತು ಲೋಕದ ಮತವನ್ನು ಕಲುಷಿತ ಮಾಡುವಂಥ ಕೃತ್ಯ ಮಾಡಿರುತ್ತವೆ. ಆದ್ದರಿಂದ ಇವುಗಳ ಮೇಲೆ ಕೋರ್ಟಿನ ಅಪಮಾನ ಮಾಡಿದವೆಂದು ಕೇಸ ನಡಿಸುವಂತೆ ಆರೋಪಿಗಳು ವಿಚಾರ ಮಾಡುತ್ತಿರುವಂತೆ ಪ್ರಸಿದ್ಧವಾಗಿದೆ. ಇದರಲ್ಲಿ ಮುಂಬಯಿಯ ಟಾಯಿಮ್ಸ ಪತ್ರವೂ ಸೇರುವ ಹಾಗೆ ತೋರುತ್ತದೆ.

ಮಗನ ಮೈಲೀ ತೆಗೆಯಿಸದ್ದಕ್ಕೆ ತಂದೆಗೆ ದಂಡ

—(o)—

ವಿಲಾಯತಿಯಲ್ಲಿ ಚಿಕ್ಕಮಕ್ಕಳಿಗೆ ಮೈಲೀ ತೆಗೆಯಿಸುವದರ ವಿರುದ್ಧ ಒಂದು ಸಂಘವುಂಟು. ಮೈಲಿಯಿಂದ ಪ್ರಾಣಹಾನಿಯಾಗುತ್ತದೆಂದೇ ಆ ಸಂಘದ ಮತವು. ಪಾಲಫಾಟನಲ್ಲಿ ಇದೇ ಮಾದರಿಯ ಒಂದು ಸಂಸ್ಥೆಯುಂಟು. ಅದರ ಸೇಕ್ರೆಟರಿಯು ತನ್ನ ಕೂಸಿಗೆ ಮೈಲೀ ತೆಗಿಸಲಿಲ್ಲ. ತೆಗೆಸಬೇಕೆಂತಲೇ ಈ ದೇಶದಲ್ಲಿ ಸಕ್ತಿಯ ಕಾಯದೆ ಮೈಲೀ ಹಾಕುವವರು ಅವನ ಮೇಲೆ ಕೇಸ ನಡೆಸಿದರು. ಕೋರ್ಟಿನ ಕೇಸವು ಅನ್ಯಾಯ ಮತ್ತು ನಿರಂಕುಶವಾಗಿರುತ್ತದೆಂದು ಸೇಕ್ರೆಟರಿಯು ತನ್ನ ಜವಾಬಿನಲ್ಲಿ ಹೇಳಲು ಮ್ಯಾಜಿಸ್ಟ್ರೇಟರು ಅವನಿಗೆ ಐದು ರೂಪಾಯಿ ದಂಡ ಹಾಕಿದರು. ಸೇಕ್ರೆಟರಿಯು ಸತ್ಯಾಗ್ರಹ ಮಾಡಿ, ದಂಡ ಕೊಡದೆ ತುರಂಗಕ್ಕೆ ಹೋಗಿ ಅಲ್ಲಿ ಅನ್ನ ಬಿಟ್ಟಿರುತ್ತಾನೆ.

ಬೆಳಗಾವಿಯ ಪತ್ರ.

ಹವೆಯಲ್ಲಿ ತಂಪು ಹಟ್ಟಿ ಕಟ್ಟಿ ಗಾಳಿ ಬೀಸುತ್ತಿದೆ. ಊರಲ್ಲಿ ೨-೩ ಕಡೆಗೆ ಪ್ಲೇಗದಿಂದ ಮರಣಗಳಾಗಿ ಇನಾಕ್ಯೂಲೇಶನ ಮಾಡಿಸಿಕೊಳ್ಳುತ್ತಿರುವರು. ಶಹಾಪುರದಲ್ಲಿಯೂ ಒಂದೆರಡು ಕಡೆಗೆ ಇಲಿಗಳು ಬಿದ್ದಿರುತ್ತವೆ.

ಹನುಮಾನಬೀದಿ ಎಲ್ಲರೂ ಅಡ್ಡಾಡುವ ಬೀದಿ. ಮೇನ ರೋಡ. ಆದರೆ ಎಲ್ಲಿ ನೋಡಿದಲ್ಲಿ ತಗ್ಗುದಿನ್ನೆ, ಬರೆ ಕಾಲಿನಿಂದ ಅಡ್ಡಾಡುವದು ತ್ರಾಸವಾಗಿದೆ. ಬೀದಿಯು ಕೆಟ್ಟುಹೋಗಿದೆ ಮಳೆಗಾಲ. ಈಗ ದುರಸ್ತುಮಾಡಿಸದಿದ್ದರೆ ಬಿಸಿಲುಗಾಲದಲ್ಲಿ ನೀರಿಲ್ಲದಿದ್ದರೆ ಮಾಡಿಸುವರೇ? ನಗರಾಧ್ಯಕ್ಷರು ದಿನಾಲು ಇದೇ ದಾರಿಯಿಂದಲೇ ಅಡ್ಡಾಡುತ್ತಿದ್ದರೂ ಲಕ್ಷ್ಯವೇ ಇಲ್ಲವಲ್ಲ! ಇದರಂತೆ ಅನೇಕ ಬೀದಿಗಳು ಕೆಟ್ಟುಹೋಗಿವೆ ಅಲ್ಲಲ್ಲಿ ರಾಡಿ. ಹೊಲಸು ಬಿದ್ದಿದೆ. ಕಣ್ಣಿಗೆ ಕಂಡರೂ, ಕಾಲಿಗೆ ಹತ್ತಿದರೂ, ಮನಸ್ಸಿಗೆ ಹೊಳೆಯುವದಿಲ್ಲವಲ್ಲ!!!

ಶ್ರೀ ವಿದ್ಯಾರಣ್ಯರ ಉತ್ಸವಕ್ಕೆ ಹೊಸ ವ್ಯಾಖ್ಯಾತರನ್ನಾಗಲೀ, ಕೀರ್ತನಕಾರರನ್ನಾಗಲೀ, ಕರಿಸಿ ಸಂಭ್ರಮದಿಂದ ಉತ್ಸವವನ್ನು ಸಾಂಗಗೊಳಿಸುವರೋ? ಅಥವಾ ಹೇಗಾದರೂ ಮಾಡಿ ಮುಗಿಯಿತೆನಿಸುವರೋ ನೋಡಬೇಕು.

ಇಲ್ಲಿಯ ಸುತ್ತಮುತ್ತಲಿನ ಹಳ್ಳಿಗಳಾದ ಶಹಾಪೂರ, ವಡಗಾಂವಿ, ಅನಿಗೋಳ, ಮಜ್ಗೆ, ಮಜಗಾಂವಿ ಇವುಗಳಲ್ಲಿಯ ೩/೪ ಜನರು ಕನ್ನಡಿಗರೇ ಇದ್ದರೂ ಸಂಸ್ಥಾಪಿಕರು ಮಾತ್ರ ಮರಾಟಿಗರು ಇರುವದರಿಂದ ದರ್ಬಾರವೆಲ್ಲ ಮರಾಟಿಯಲ್ಲಿಯೇ ನಡೆಯುತ್ತಿದೆ. ಹೀಗಾಗಿ ಅಲ್ಲಿಯ ಕನ್ನಡಿಗರು ಮರಾಟಿಗರೆಂಬ ಕಲ್ಲಿನ ಬುಡದಲ್ಲಿ ಸಿಕ್ಕು ಉಸಿರಾಡದಂತಾಗಿದೆ. ಉದಾಹರಣೆ- ೧೪೪ ಮತ್ತು ಹೊರಗಿನಿಂದ ಯಾರನ್ನಾದರೂ ಸಭೆಗಾಗಲೀ, ವ್ಯಾಖ್ಯಾನಕ್ಕಾಗಲೀ, ಕರೆಸಬೇಕಾದರೆ ೨೪ ತಾಸು ಮುಂಚೆಯಾಗಿ ದರ್ಬಾರಕ್ಕೆ ವರ್ದೀ ಕೊಡಬೇಕಂತೆ. ಹೀಗಾದುದರಿಂದ ಅಲ್ಲಿಯ ಕನ್ನಡಿಗರು ತಮ್ಮ ಮಾತೃಭಾಷೆಗೆ ತಿಲಾಂಜಲಿಯನ್ನು ಕೊಡಬೇಕಾದೆಯಂತೆ. ನಮ್ಮ ಕನ್ನಡ ವೀರರು ಮುಖಂಡರು ಅತ್ತ ಕಡೆಗೆ ಲಕ್ಷ್ಯಹಾಕುವರೋ? ಹಾಗೆ ಮಾಡುವೆವು, ಹೀಗೆ ಮಾಡುವೆವು, ಎಂದು ಸುಮ್ಮಸುಮ್ಮನೆ ಜಾಟಬಡಿಯುವರೋ?

ಇಲ್ಲಿಯ ಡಿ. ಕಾ. ಕ. ಯ ಸದಸ್ಯರನ್ನು ಮಾಡಲಿಕ್ಕೆಂದು ಫೆಬ್ರುವರಿಯಲ್ಲಿ ೧೯ ಜನರಿಗೆ ೨೬೫೦ ಫಾರ್ಮ್ಸಗಳನ್ನು ಕೊಟ್ಟಿತು. ಇಲ್ಲಿಯವರೆಗೆ ೧೯ ಜನರು ಕೂಡಿ ೨೯೭ ಸದಸ್ಯರನ್ನು ಮಾಡಿದ್ದಾರೆ. ಆದರೆ ಶ್ರೀ ಲೀಗಡೆ (ಹಿ. ಸೇ. ದ.) ಇವರೊಬ್ಬರೇ ಸೇವಾದಲದ ಫಾರ್ಮಿನ ಮೇಲೆ ೬೦೯ ಸದಸ್ಯರನ್ನು ಮಾಡಿದ್ದಾರೆ. ಅಲ್ಲದೆ ೨೪ ಸೇವಾದ ಮೆಂಬರನ್ನು ಮಾಡಿರುವರು. ನೋಡಿರಿ ಯಾರು ಹೆಚ್ಚು ಕೆಲಸಮಾಡಿದರು, ಮಾಡತಕ್ಕಾರೆ ಎಂಬುದನ್ನು ಗಣಿತಮಾಡಿರಿ.

ಮೊನ್ನೆ ಧಾರವಾಡದಲ್ಲಿ (೩೧-೩-೨೯) ಕ್ಕೆ ಕೂಡಿದ ಕ. ಪ್ರಾ. ಕಾ. ಕ. ಯಲ್ಲಿ ಬೆಳಗಾವಿಯ ಕಾಂಗ್ರೆಸ ಕಮಿಟಿಯು ಈಗಿದ್ದ ಹಳೇ ಫಾರ್ಮುಗಳನ್ನು ಹೆಡ್ ಆಫೀಸಿಗೆ ಕಳಿಸಬೇಕೆಂತಲೂ ಹೆಡ್ ಆಫೀಸಿಗೆ ಕಳಿಸಬೇಕೆಂತಲೂ ಹೆಡ್ ಆಫೀಸಿನಿಂದ ಶಿಕ್ಕಾ ಮೋರ್ಚಾ ಹೊಂದಿದ ಫಾರ್ಮಗಳನ್ನೇ ಎಪ್ರಿಲ ೧೫ ನೇ ತಾರೀಖಿನಿಂದ ಸದಸ್ಯರನ್ನು ಮಾಡಲು ಉಪಯೋಗಿಸಬೇಕೆಂದು ೭ ನೇ ಠರಾವು ಪಾಸಾಗಿದ್ದರೂ ಅದನ್ನು ಮೂಲೆಗೊತ್ತಿ (ಧಿಕ್ಕರಿಸಿ) ಇಲ್ಲಿಯ ಕಾರ್ಯದರ್ಶಿಗಳು ಇಲ್ಲಿಯವರೆಗೆ ಹಳೇ ಪಾವತಿ ಬುಕ್ಕುಗಳನ್ನೇ ಉಪಯೋಗಿಸುತ್ತ ಬಂದಿದ್ದಾರೆ. ಆದರೆ ಈಗ ಒಂದೆರಡು ತಿಂಗಳ ಹಿಂದೆ ಕೆಲವು (೧೫-೨೦) ಮೆಂಬರರು ಕ. ಪ್ರಾ. ಕಾ. ಕ. ಯ ಒಬ್ಬಿಬ್ಬ ಮೆಂಬರರೂ ಕೂಡಿ ಅಧ್ಯಕ್ಷರಿಗೆ ಕ. ಪ್ರಾ. ಕಾ. ಕ. ಯ ಹುಕುಮನ್ನು ಜಾರಿಯಲ್ಲಿ ತರುವ ಕುರಿತು ಅರ್ಜಿಮಾಡಿಕೊಂಡದ್ದಾಯಿತು. ಆದರೆ ಇನ್ನೂವರೆಗೆ ನಮ್ಮ ಅಧ್ಯಕ್ಷರಾಗಲೀ, ಉಪಾಧ್ಯಕ್ಷರಾಗಲೀ ಜಾರಿಯಲ್ಲಿ ತಂದಿಲ್ಲ.

ಈಗ ಡಿ. ಕಾ. ಕ. ಯ ಮ್ಯಾನೇಜಿಂಗ ಕಮಿಟಿಯ ಮೆಂಬರರೊಳಗೊಬ್ಬರಾದ ಶ್ರೀ ಲೀಂಗಡೆಯವರು ಕ. ಪ್ರಾ. ಕಾ. ಯ ಹುಕುಮನ್ನು ಮನ್ನಿಸದೆ (ಉದ್ದಾಮ) ಇರುವ ಕಾ. ಕ. ಯಲ್ಲಿ ಇನ್ನು ಮೇಲೆ ತಮ್ಮಿಂದ ಯಾವ ಕೆಲಸ ಮಾಡುವದಾಗುವದಿಲ್ಲೆಂದೂ ಇಂಥ ಬೇಜವಾಬದಾರ ಕಾ. ಕ. ಯ ಕೆಳಗೆ ಕೆಲಸಮಾಡುವದರಿಂದ ಜನರ ಹಾಗೂ ದೇಶದ ಕಲ್ಯಾಣವು ಆಗಲಾರದೆಂದೂ ಅಧ್ಯಕ್ಷ, ಉಪಾಧ್ಯಕ್ಷರಿಗೆ ಸಮಕ್ಷಮ ತಿಳಿಸಿ ಲೇಖೀ ರಾಜೀನಾಮೆಯನ್ನು ಕೊಟ್ಟಿರುವರು. ಇದಕ್ಕೆಲ್ಲ ಕಾರಣರಾರು ಬಲ್ಲಿರಾ? ಠಾಕೂರ ಸರಗುಂದಕರರೇ. (ಸೇಕ್ರೆಟರಿಗಳು)

ಬಂಗಾಲದ ಗವ್ಹರ್ನರಸಾಹೇಬರು ಶ್ರೀ. ಸೇನಗುಪ್ತರನ್ನು ಕರಿಸಿ ಮಂತ್ರಿಮಂಡಲ ಕಟ್ಟಲು ಸೂಚಿಸಿದರು. ಕಾಂಗ್ರೆಸದ ಆಜ್ಞೆಯು ಪ್ರಕಾರ ನಮಗೆ ಹಾಗೆ ಮಾಡಲಿಕ್ಕಾಗುವದಿಲ್ಲೆಂದು ಗುಪ್ತರು ಉತ್ತರ ಕೊಟ್ಟರು. ಮಂತ್ರಿಮಂಡಳ ಮತ್ತು ದಯು ಕಿರಿಯನ್ನು ಮುರಿಯಬೇಕೆಂಬಗ ಇಷ್ಟವಾಗಿರದಿದ್ದರೂ, ಸಾಹೇಬರು ಶ್ರೀ. ಗುಪ್ತರನ್ನು ಕೇಳಿದ್ದು ಸೋಜಿಗವಾದದ್ದು.

ಕಲಕತ್ತೆಯ ಕಾರ್ಪೊರೇಶನ್ನಿನ ಲಾಟರಿ ಟಿಕೇಟುಗಳನ್ನು ತಮ್ಮ ಬ್ಯಾಂಕು ಮಾರಬಾರದೆಂದು ಲಂಡನದ ಮಿಡಲಂಡ ಬ್ಯಾಂಕಿನವರು ಸರಕ್ಯುಲರ ತೆಗೆದಿದ್ದಾರೆ.

ಜುಲೈ ೭ ನೆಯ ತಾರೀಖು

ಪರದೇಶಿ ವಸ್ತ್ರ ಬಹಿಷ್ಕಾರ ಕಮಿಟಿಯವರು ಜುಲೈ ೭ ನೇ ತಾರೀಖನ್ನು ಅಂದರೆ ಜುಲೈ ತಿಂಗಳ ಮೊದಲನೇ ಆದಿತ್ಯವಾರವನ್ನು "ಬಹಿಷ್ಕಾರ ದಿನ" ವನ್ನಾಗಿ ಆಚರಿಸಬೇಕೆಂದು ನಿರ್ಣಯಿಸಿದ್ದಾರೆ.

ಅಂದು–

೧ ಮನೆಮನೆಗೆ ಹೋಗಿ ಖಾದೀ ಬಟ್ಟೆಯನ್ನು ಮಾರುವದು

೨ ಸಭೆ ಕೂಡಿಸಿ ಬಹಿಷ್ಕಾರಹಾಕುವದರ ಬಗ್ಗೆ ಜನರ ಮನವೊಲಿಸುವದು.

೩ ಊರಲ್ಲೆಲ್ಲ ನಗರಸಂಕೀರ್ತನೆಗಳನ್ನು ಹೊರಡಿಸುವದು.

೪ ಇನ್ನು ಮೇಲೆ ಪರದೇಶೀ ಬಟ್ಟೆ ತರಿಸದಂತೆ ಜನರ ಮನವೊಲಿಸುವದು.

ಇವೇ ಮೊದಲಾದ ಕಾರ್ಯಗಳನ್ನು ಮಾಡಿ, ನಿಮ್ಮ ಜಿಲ್ಹೆಯ ಕಾಂಗ್ರೆಸ ಕಮಿಟಿಗಳಿಗೆ ಆ ಪ್ರಕಾರ ತಿಳಿಸಿ ರಾಷ್ಟ್ರಕಾರ್ಯಕ್ಕೆ ನೆರವಾಗಿರಿ.

ಶ್ರೀವಿದ್ಯಾರಣ್ಯರಪುಣ್ಯತಿಥಿ

ಉತ್ಸವದ ಕಾರ್ಯಕ್ರಮ.

ಸ್ಥಳ:– ಸದರ್ನಮರಾಠಾ ಅರ್ಬನ ಬ್ಯಾಂಕಿನ ಆಫೀಸು

ವೇಳೆ:– ಸಾಯಂಕಾಲ ೬ ಗಂಟೆ

ತಾರೀಖು ೫–೭–೨೯ ಶುಕ್ರವಾರ

ವೇ. ನ್ಯಾಯರತ್ನ ನಾಗೇಶಶಾಸ್ತ್ರಿಗಳವರ ಪ್ರವಚನ

ಹಾಗೂ ನಿಬಂಧ ವಾಚನ

ತಾರೀಖು ೬–೭–೨೯ ಶನಿವಾರ

ಅಧ್ಯಕ್ಷರು.– **ಶ್ರೀ. ಗುಂಜೀ ಕೃಷ್ಣರಾಯರು** ರಿ. ಹು. ಡೆ. ಕ

ವ್ಯಾಖ್ಯಾತರು:– ಬೆಂಗಳೂರಿನಿಂದ ದಯಮಾಡಿಸಿದ **ಶ್ರೀ ಸೀ. ಕೆ. ವೆಂಕಟರಾಮಯ್ಯನವರು,** ಎಂ. ಏ. ಬಿ. ಎಲ್. ಓರಿಯಂಟಲ್ ಟ್ರಾನ್ಸಲೇಟರವರು **ವಿದ್ಯಾರಣ್ಯರೂ ಕರ್ನಾಟಕವೂ** ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ತಾರೀಖು ೭–೭–೨೯ ರವಿವಾರ

ಉತ್ಸವದ ಸಮಾರೋಪವು ಮತ್ತು ಬಾಲಭಾರತಿ ಕುಮಾರಿ **ಯದುಗಿರಿಯಮ್ಮನ "ಸತ್ಯನಾರಾಯಣ"** ವಿಷಯವಾಗಿ ಕೀರ್ತನೆ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಸರಕಾರ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ನಾಲಿಗೆ ಮಾರಾಣೆ– ಇಂಗ್ಲಿಷನಿಂದ ಅವತರಿಸಿ ಕನ್ನಡದಲ್ಲಿ ಹಾಕಬೇಕಾದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾ. ವಿಜಯ ಧಾರವಾಡ.

ಅನೇಕ ಔಷಧಗಳನ್ನು ಸೇವಿಸಿ ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೇವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ನೀವು ಔಷಧ ಬೇಡುವಾಗ ಯಾವ ವರ್ತಮಾನಪತ್ರದ ಜಾಹೀರಾತಿನಲ್ಲಿ ಈ ಜಾಹೀರಾತನ್ನು ಓದಿದಿರೆಂಬುದನ್ನು ಬರೆಯಬೇಕು.

WANTED

Wanted Candidates for Telegraph and Station Master's Classes Full particulars and Railway Fare Certificate on 2 annas stamp. Apply to:= Imperial Telegraph College, Nal Sarak, Delhi.

ಸುಸಮಯ

ಏ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ (ಕೊಳ್ಳೇಗಾಲ ಬ್ರ್ಯಾಂಚ) ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಚಂದಾದಾರರಿಗೆ ಸೂಚನೆ

ಜುಲೈ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ, ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. B 1143

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ, ಶುಕ್ರವಾರ ತಾರೀಖು ೫ ನೇ ಜುಲೈ ೧೯೩೪ (ಸಂಚಿಕೆ ೧೪೪

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಡ್ಡಿದರದಿಂದ ತೆಗೆದುಕೊಳ್ಳಲ್ಪಡುವವು- ಒಡ್ಡಿದರ ರೂ. ೩|| ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಒಡ್ಡಿದರ ೩|| ರೂ.

ಸೇವಿಂಗ್ಸ ಬ್ಯಾಂಕ:— ಒಡ್ಡಿದರದಿಂದ ತೆಗೆದುಕೊಳ್ಳಲ್ಪಡುವವು. ಒಡ್ಡಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಒಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಒಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಒದುವದು ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಖಡಾ ಉದಾರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಕುಳಗಳಿಗೆ ಹೆಚ್ಚಿನ ಸವಲತುಗಳನ್ನು ಕೊಡುವದರಲ್ಲಿ ಒದುವದು ದರ ಹಾಗೂ ನಿಯಮಗಳ ಪ್ರತಿಗಳೂ ಠೇವಕಾತ್ಯಾಂ ಪತ್ರಗಳೂ ಸದರಿ ಬ್ರ್ಯಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — ಡಿ. ಡೊನೆಲಿ,

ತಾ|| ೧೭-೬-೩೪ — ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ- ಮಂಗಳವಾರಪೇಟೆ, ಚಿಕವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ಆದಿಂದ ತೀಸು ಮತ್ತು ಬಹಳ ಮುದ್ದತಿಯ ಕನಿಷ್ಠ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಒಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಒಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.

ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ್ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ್ಕೆ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ದಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್,

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ವಿ. ಕೆ. ಕಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೫-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೫-೭-೨೯ ನೇ ಇಸ್ವಿ.

ಶ್ರೀ.

ವಿಜಯಂ ಶ್ರೀಶಪ್ರಿಯ
ವಸುಮತಿಯು ನಲಿಸಿ ಸುಹಿತಚರಿತೆಗಳಿಂ
" ವಿಜಯಂ " ಶ್ರೀಕರ್ಷಣ ।
ಸಾವಿಹಿತಂಗಳ ವಿಪರಿಸನಲಿಪುದು ಸಾಜಂ ॥೧॥

ಕಾಬೂಲದ ಯುದ್ಧ.

ಜನರಲ ನಾದಿರಖಾನನಿಗೆ ಸೋಲು.

ಸ್ವದೇಶತ್ಯಾಗವಮಾಡಿದ ಅಮಾನುಲ್ಲಾಖಾನನು ಬಚ್ಚಾಸಾಕುವಿನ ಮೇಲೆ ಅಭಿಯೋಗಮಾಡಿ, ಘಜನಿಯನ್ನು ಕೈವಶಮಾಡಿಕೊಂಡನೆಂದು ಹಿಂದು ಸ್ಥಾನಕ್ಕೆ ಸುದ್ದಿ ಬಂದಾಗ ಮುಸಲಮಾನರು ಆನಂದಭರಿತರಾಗಿ ಮಸೀದೆ ಮತ್ತು ಊರಲ್ಲಿ ದೀಪೋತ್ಸವ ಮಾಡಿದರು ಆದರೆ ಆ ಆನಂದವು ಕ್ಷಣಭಂಗುರವಾದಂತೆ ಜನರಲ ನಾದಿರಖಾನನು ಗಾಜೆಜವೆಂಬ ಆಯಕಟ್ಟಿನ ಸ್ಥಳ ತಕ್ಕೊಂಡಿದ್ದರಿಂದ ಆಯಿತು. ಈ ಸ್ಥಳವು ಕಾಬೂಲದ ಮೇಲೆ ಕಹಕೊಟ್ಟಂತಿತ್ತು. ಇದು ನಾದಿರಖಾನನ ವಶದಲ್ಲಿಯೇ ಉಳಿದಿದ್ದರೆ ಕಾಬೂಲವು ಅಂಗೈಯಲ್ಲಿ ಕುಣಿಯುತ್ತಿತ್ತು. ಆದರೆ ಆ ರಾಜ್ಯದ ದುರ್ದೈವ. ದೇಶದತುಂಬ ಅನ್ಯಾಯಕತನ ಮತ್ತು ರಕ್ತಪಾತವಾಗಬೇಕೆಂದು ಬ್ರಹ್ಮಲಿಖಿತ. ನಾದಿರಖಾನನಿಗೆ ಸೋಲು ಬಂದು, ಆತನು ಅಲ್ಲಿಂದ ತೀರ ಪೂರ್ವಕ್ಕೆ ಅಂದರೆ ಅಲ್ಲೀಖೇಲವೆಂಬಲ್ಲಿಗೆ ಹಿಮ್ಮೆಟ್ಟಿದ್ದಾನೆ ಅಲ್ಲಿಖೇಲವು ಹಿಂದುಸ್ಥಾನದ ಸರಹದ್ದಿನಿಂದ ೧೩ ಮೈಲು ಮತ್ತು ಪಾರಾಚಿನಾರದಿಂದ ೩೫ ಮೈಲುಗಳ ಮೇಲುಂಟು. ಬಚ್ಚಾಸಾಕುವಿನ ದಂಡು ಇವನನ್ನು ಬೆಂಬಳಿಸಿದರೆ ಈತನು ಸಹ ಹಿಂದುಸ್ಥಾನಕ್ಕೆ ಗುಳೇಬರುವ ಸಂಭವವುಂಟು. ಜನರಲ ನಾದಿರಖಾನನಿಗೆ ಈ ಪ್ರಕಾರ ಪರಾಭವ ಉಂಟಾಗಲಿಕ್ಕೆ ತಮ್ಮನಾದ ಹಾಶಿಮ ಖಾನನಿಂದ ಹೊತ್ತಿಗೆ ದಂಡಿನ ಸಹಾಯ ಬಾರದಿದ್ದದ್ದೇ ಕಾರಣವಾಯಿತು. ಆದ್ದರಿಂದ ರಾಜ್ಯತ್ಯಾಗದ ಅಪಶಕುನವಾಗಿದ್ದರೂ ಅದು ಹಿಂದುಮೇಳೆ ಮುಂದೆ ನಿಜವಾದರೂ ಅಫಗಾಣ ಯುದ್ಧ ಮುಗಿಯಲಾರದು. ಏಕೆಂದರೆ ದಕ್ಷಿಣದ ಕಾಬೂಲಿಗಳು ಬಚ್ಚಾಸಾಕುವಿನ ವಿರುದ್ಧ ಶಸ್ತ್ರ ಹಿಡಿದಿದ್ದಾರೆ. ಇವರಿಗೆ ಸಹಾಯವಾಗಿ ಲೋಘಾಕಣಿಯವರು ಬಚ್ಚಾಸಾಕುವಿನ ವಿರುದ್ಧ ಹೋರಾಡುವರು ಆದ್ದರಿಂದ ಕೊನೆಯ ಬೆಂಕಿ ಆರಲಿಕ್ಕೆ ಎಷ್ಟೋ ದಿವಸಗಳು ಬೇಕು ಮತ್ತು ಅದು ಜಯಮಾಲೆಯನ್ನು ಯಾರ ಕೊರಳಿಗೆ ಹಾಕುವದೆಂಬ ನಿಯಮವಿಲ್ಲದಾಗಿದೆ.

ಸದ್ಯ ತನ್ನ ಜಯದಿಂದ ಉಬ್ಬಿದ ಬಚ್ಚಾಸಾಕುವು ತನ್ನ ಏಜಂಟನನ್ನು ಪೇಶಾವರಕ್ಕೆ ಕಳಿಸಿದ್ದಾನೆ. ಜನರು ಬಚ್ಚಾಸಾಕುವೆಂದು ಹೀನೋಕ್ತಿಯಾಡಬಾರದು. ಅಮೀರ ಹಬೀಬುಲ್ಲಾಖಾನನೆಂದು ಕರೆಯಬೇಕು. ಮತ್ತು ಇಂಗ್ಲಿಷ ವಕೀಲರು ಪುನಃ ಕಾಬೂಲಕ್ಕೆ ಬಂದು ಮೊದಲಿನಂತೆ ರಾಯಭಾರಿತ್ವವನ್ನು ಅಂಗೀಕರಿಸಬೇಕೆಂದು ಅನ್ನುತ್ತಾನೆ.

ಗಿರಣಿಗಳ ಸಂಪಿನ ವಿಚಾರಣಾ ಕಮಿಟಿಯು.

)(೦)(

ಈ ಮೊದಲು ಪ್ರಸಿದ್ಧವಾದಂತೆ ಮುಂಬಯಿ ಸರಕಾರದವರು ಮುಂಬಯಿಯಲ್ಲಿ ಗಿರಣಿಗಳ ಕೂಲಿಕಾರರು ಮಾಡಿದ ಸಂಪಿನಬಗ್ಗೆ ವಿಚಾರಮಾಡಲು ಒಂದು ಕಮಿಟಿ ನೇಮಿಸುವರು ಕಮಿಟಿಯಲ್ಲಿ ಮೂವರು ಜಡ್ಜರಾಗುವರು. ಚೇರಮನ್ನರು ಕಲಕತ್ತೆಯ ಹಾಯಕೋರ್ಟಿನ ಒಬ್ಬ ಜಡ್ಜರಾಗುವರು. ಸಿಂಧದ ಜ್ಯುಡಿಶಿಯಲ ಜುಡಿಶಿಯಲ ಕಮಿಶನರರಾದ ಮಿ. ರೂಪಚಂದ ಬಿಲಾರಾಮರು ಮತ್ತು ಈ ಮೊದಲು ಮುಂಬಯಿ ಹಾಯಕೋರ್ಟಿನ ಅಕ್ಟಿಂಗ ಜಡ್ಜರಾಗಿದ್ದ ಉಳಿದ ಇಬ್ಬರು ಮೆಂಬರರಾಗುವರು. ಇವರು ವಿಚಾರಮಾಡುವಂಥ ಕಲಮುಗಳು:- ಮಿ. ಕಲೇಖಾನ

೧ ಗಿರಣಿಯ ಕೂಲಿಕಾರ ಮತ್ತು ಮಾಲಿಕರ ನಡುವೆ ಜಗಳ ಬರಲಿಕ್ಕೆ ಉಂಟಾದ ಕಾರಣ ಹಾಗು ಸ್ವರೂಪ

೨ ಈ ಸಂಪಿಗೆ ಅಥವಾ ವಾದವಿವಾದಕ್ಕೆ ಗಿರಣಿಯವರು ಮತ್ತು ಕೂಲಿಕಾರರು ತಾವು ಪರವಾಗಿ ಎಷ್ಟರಮಟ್ಟಿಗೆ ಜವಾಬದಾರರಿರುವರು?

೩ ಸಂಪು ದೀರ್ಘಕ್ಕೆ ಹೋಗಲು ಕಾರಣವೇನಾಯಿತು? ಕೂಲಿಕಾರರೂ ಗಿರಣಿಯವರೂ ಎಷ್ಟರಮಟ್ಟಿಗೆ ಜವಾಬದಾರರಿರುವರು?

೪ ಮಾಲಕ ಮತ್ತು ಕೂಲಿಕಾರರ ನಡುವಿನ ಜಗಳ ತೀರಲಿಕ್ಕೆ ಉಂಟಾದ ವಿಘ್ನಗಳಾವವು?

ಮೃತ್ಯು:-

ಕುಮಠೆಯಲ್ಲಿ ಪ್ರಕಟವಾಗುವ ಕಾನಡಾವೃತ್ತದ ಸಂಪಾದಕರಾದ ಶ್ರೀ. ಕೃಷ್ಣರಾಯರು ಜ್ವರದಿಂದ ವೈಕುಂಠವಾಸಿಗಳಾದರೆಂದು ತಿಳಿಯುವದಕ್ಕೆ ವಿಷಾದಿಸುತ್ತೇವೆ.

ಸುರಾರಾಕ್ಷಸನ ಹೆದರಿಕೆ!

ಚೇನದ ಗೋಡೆಯಂತೆ ಅಮೇರಿಕಾ ಕಾನಡಾದಲ್ಲಿ ಮುಳ್ಳಿನ ತಂತಿಯು.

— (೦) —

ತಾರ್ತರಿ ಜನರಿಗೆ ಹೆದರಿ, ಅವರ ದಾಳಿಯು ತಮ್ಮ ಮೇಲೆ ಬರಬಾರದೆಂದು ಚೇನರು ನಾಲ್ಕುನೂರ ಮೈಲು ಉದ್ದಾದಂಥ ಗೋಡೆ ಕಟ್ಟಿದ್ದು ಇತಿಹಾಸ ಪ್ರಸಿದ್ಧವಿದೆ. ಅದೇ ಮಾದರಿಯದಾಗಿ ಗೋಡೆಯ ಬದಲಾಗಿ ಮುಳ್ಳಿನ ಬೇಲಿಯನ್ನು ಸಂಯುಕ್ತದೇಶ ಮತ್ತು ಕಾನಡಾ ದೇಶಗಳ ಸರಹದ್ದಿನಗುಂಟ ಕಟ್ಟಬೇಕೆಂದು ಸಂಯುಕ್ತ ಸರಕಾರದವರಲ್ಲಿ ವಿಚಾರ ನಡೆದಿದೆ. ಕಾನಡಾದೇಶವು ಇಂಗ್ಲಿಷರಿಗೆ ಸೇರಿದ್ದು. ಸುರಾಪಾನದ ಅಭಿಮಾನಿಯೂ ಬೇಕಾದಷ್ಟು ಕುಡಿದು, ಮುಣುಮುಣುಗಿ ಏಳಬಹುದು. ಅದರ ವಿರುದ್ಧ ಸಂಯುಕ್ತ ದೇಶದಲ್ಲಿ ಒಂದು ಹನಿ ಕೂಡ ಮುಟ್ಟಲಿಕ್ಕಾಗದೆಂದು ಕಾಯದೆಯಿಂದ ನಿರ್ಬಂಧನ. ಕುಡಿತದ ವ್ಯಸನ ಹೋಗದವರು ಕಾನಡಾದಿಂದ ಕದ್ದು ತಂದು ಕುಡಿಯುವರು. ಪೋಲಿಸ ಕಾವಲ, ಜಕಾತಿ, ತಪಾಸಣೆ ಇದ್ದರೂ, ತಮ್ಮ ವ್ಯಸನ ನಡಿಸುವರು. ಇದಕ್ಕೆ ಪೂರಾ ಬಂದೋಬಸ್ತ ಮಾಡಬೇಕೆಂದು ಸಂಯುಕ್ತ ಸರಕಾರದವರು ಮುಳ್ಳಿನ ತಂತಿಯ ಯೋಜನೆ ಮಾಡತಕ್ಕವರಿದ್ದಾರೆ ತಂತಿಯ ವೆಚ್ಚವು ಈಗಿನ ಕಾವಲಗಾರರಿಗಿಂತ ಕಡಿಮೆ ಬರುವದು. ಪ್ರತ್ಯಕ್ಷದಲ್ಲಿ ಸರಹದ್ದಿನಗುಂಟ ಒಂದು ಸಾವಿರ ಕಾವಲಗಾರರಿದ್ದು ಅವರ ಪ್ರತಿತಿಂಗಳ ಸಂಬಳವು ಒಂದೂವರೆ ಲಕ್ಷವಾಗುತ್ತದೆ. ತಂತಿಯಿಂದ ತೀರ ತುಸು ಜನರು ಕಾವಲಿಗೆ ಬೇಕಾಗುವರೆಂದು ಉಪಕೋಶಾಧಿಕಾರಿಯಾದ ಲೋವೆನಸಾಹೇಬನು ಹೇಳುತ್ತಾನೆ. ತಂತಿಯು ಮೂರು ಸಾವಿರ ಮೈಲು ಉದ್ದವಾಗುವದು.

ನಾವು ಶ್ರೀಮಂತರಾದರೂ ಸ್ಥಿತಿವಂತರಾದ ಹುಕ್ಕೆಲಾಗದವರು.

—(೦)—

ಮುಂಬಯಿಯ ದಂಗೆಯ ಕಮಿಟಿಯ ಮುಂದೆ ಸರ ಮನಮೋಹನದಾಸ ರಾಮಜಿಯವರು ಮುಂದೆ ಬರೆದಂತೆ ಜವಾಬು ಕೊಟ್ಟಿದ್ದಾರೆ:-

ಸಂಪಿನಿಂದ ಗಿರಣಿಯ ಕೂಲಿಕಾರರು ತಿಂಗಳಿಗೆ ೭೦ರಿಂದ ೭೫ ಲಕ್ಷದಷ್ಟು ಹಾನಿಹೊಂದಿದರು. ಮತ್ತು ಈ ಸಂಪಿನಲ್ಲೆಲ್ಲ ಸೇರಿ, ಅದ ಹಾನಿಯು ೪ ಕೋಟಿಯಷ್ಟಾಗಿರುತ್ತದೆ. ಗಿರಣಿಗಳ ಮಾಲೀಕರ ಹಾನಿಯೂ ಅಷ್ಟೇ ಆಗಿರುವದು. ಇವರ ಹೊರತು ಉಳಿದವರ ಹಾನಿಯೂ ಅತಿಶಯ

ರವಾಗಿರುತ್ತದೆ. ಬೊಲ್ಶೆವಿಕ ಪಂಥದ ಕೆಂಪು ನಿಶಾನೆಯವರೇ ಈ ಅನರ್ಥಕ್ಕೆ ಕಾರಣರು. ಸಂಪಿನಮೂಲಕ ನಮ್ಮ ವ್ಯಾಪಾರವೆಲ್ಲ ಮುಗ್ಗಿಹೋಯಿತು. ನಾವು ಎಷ್ಟು ಸ್ಥಿತಿವಂತರಾದರೂ ಬೊಲ್ಶೆವಿಕವನ್ನು ಮುರಿಯಲು ಅಸಮರ್ಥರಾಗಿದ್ದೇವೆ.

ಕರುಣಾದಲ್ಲಿ ಬೊಲ್ಶೆವಿಕ ಭೂತಸಂಚಾರ.

—(೦)—

ಮುಂಬಯಿಯ ಕರುಣಾದಲ್ಲಿ ಇಬ್ಬಣವಾಗಿದೆ. ಒಂದು ಪಕ್ಷವು ಕಾಂಗ್ರೆಸ ಮತ್ತು ಇನ್ನೊಂದು ಪಕ್ಷವು ಬೊಲ್ಶೆವಿಕ ಪಂಥವಿಡಿದಿದೆ. ಬೊಲ್ಶೆವಿಕರೆಂದು ಹಚಿನಸನ್ನಸಾಹೇಬರನ್ನು ದಸ್ತಗಿರ ಮಾಡಿದರಷ್ಟೆ; ಈ ದಸ್ತಗಿರಿಯು ನಿಷೇಧಮಾಡುವದಕ್ಕಾಗಿ ಕರುಣಾದ ಸಭೆಯು ಕೂಡಿತು. ಹಚಿನಸನ್ನಸಾಹೇಬರು ಮಹಾತ್ಮರನ್ನೂ ಕಾಂಗ್ರೆಸವನ್ನೂ ದೂಷಿಸುತ್ತಿದ್ದದರಿಂದ, ಅವರ ದಸ್ತಗಿರಿಯ ನಿಷೇಧಕ್ಕೆ ಕೆಲವರು ಒಪ್ಪಲಿಲ್ಲ. ಹಚಿನಸನ್ನರ ಬಣದವರು ಸಭೆಯನ್ನು ನಡೆಸಿದರು. ಆಗ ಎರಡೂ ಪಂಗಡಗಳ ನಡುವೆ ಕೈಗೆ ಕೈ ಹತ್ತುವ ಹೊತ್ತು ಬಂದು, ಕೊನೆಯಲ್ಲಿ ಸಭೆಯು ಯಾವದೊಂದು ವಿಚಾರ ಅಥವಾ ಠರಾವಿಲ್ಲದೆ ದೊಡ್ಡ ಗೊಂದಲದಲ್ಲಿ ವಿಸರ್ಜನೆ ಹೊಂದಿತು.

ಬಡೋದೆಯಲ್ಲಿ ಬಾಲವಿವಾಹದ ಕಾಯದೆ.

——)(೦)(——

ಕಾಯದೆ ವಿರುದ್ಧ ನಡೆದವರಿಗೆ

ದಂಡ ಮತ್ತು ಶಿಕ್ಷೆ.

—(೦)—

ಬಡೋದೆ ರಾಜ್ಯದಲ್ಲಿ ಬಾಲವಿವಾಹದ ಕಾಯದೆಯು ಪಾಸಾಯಿತು. ಈ ಕಾಯದೆಯನ್ನು ಇಮಳಿನಲ್ಲಿ ತರುವಂತೆ ದರಬಾರಿನ ಆಜ್ಞಾಪತ್ರದಲ್ಲಿ ಜಾಹೀರಾಯಿತು. ಕಾಯದೆ ಮುರಿದವರಿಗೆ ಮತ್ತು ಅದಕ್ಕೆ ನೆರವಾದರಿಗೆ ದಂಡ ಮತ್ತು ಒಂದು ತಿಂಗಳತನಕ ಸಾದಾ ಕೈದಿನ ಶಿಕ್ಷೆಯಾಗುವದು. ಮತ್ತು ಇಂಥ ಲಗ್ನವು ಕಾಯದೇಪ್ರಕಾರ ಗೈರಕಾಯ್ದೇಯವಾಗುವದು. ಪುನಃ ಹೆಣ್ಣುಗಂಡಿನ ಮದುವೆಮಾಡಲಿಕ್ಕೆ ಬರುತ್ತದೆಂದೂ ಆಜ್ಞಾಪತ್ರದಲ್ಲಿ ಹೇಳಿದೆ.

ದಾವಣಗೇರಿಯ ದಂಗೆಯ ಆರೋಪಿಗಳೆಂದು ಈಗ ಹಿಂದೂ ೯ ಮುಸಲಮಾನರನ್ನು ಹಿಡಿದು, ಇವರನ್ನು ಮುಚ್ಚಳಿಕೆಯ ಮೇಲೆ ಬಿಟ್ಟಿದ್ದಾರೆ.

ಅಕ್ಟೋಬರ ತಿಂಗಳಲ್ಲಿ ಮುಂಬಯಿ ಗವರ್ನರ ಸಾಹೇಬರು ಈ ಪ್ರಾಂತದಲ್ಲಿ ಸಂಚಾರಕ್ಕೆ ಬರುವರು.

ಆಧುನಿಕ ಕನ್ನಡ ಸಾಹಿತ್ಯ ಸೇವಕರ ಅಲ್ಪ ಪರಿಚಯ.

ಮುಂಬಯಿ ಕರ್ನಾಟಕ.

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

(ಕನ್ನಡಿಗರ ಕೈಪಿಡಿ ಸಾಹಿತ್ಯಶಾಖೆಯಿಂದ)

ಕುಲಕರ್ಣಿ ಪ್ರಲ್ಹಾದರಾಯರು:-

೪೯ ಇವರು ಬೆಳಗಾವಿ ಜಿಲ್ಹೆಯ ಬಟಗೇರಿಯಲ್ಲಿ ೧೭-೭-೧೮೮೦ ರಲ್ಲಿ ಹುಟ್ಟಿರುವರು. ಈಗ ಹಳ್ಳಿಯಾಳ (ಬೆಳಗಾವಿ ಜಿಲ್ಹೆಯ) ದಲ್ಲಿ ಶಿಕ್ಷಕರಾಗಿರುವರು. ವೈಷ್ಣವ ಬ್ರಾಹ್ಮಣರು. ಜಯಕರ್ನಾಟಕದಲ್ಲಿ ಆಗಾಗ ಸಾಹಿತ್ಯವಿಷಯವಾಗಿ ಒಳ್ಳೇ ಅಧಿಕಾರಯುಕ್ತ ಲೇಖಗಳನ್ನು ಬರೆಯುವರು. ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸಿಸಿರುವರು. ಕವಿಗಳೂ ಆಗಿರುವರು. ಕರ್ನಾಟಕ ಛಂದಶ್ಶಾಸ್ತ್ರ, ಕರ್ನಾಟಕ ಭಾಷಾಭ್ಯಾಸ ಎಂಬೆರಡು ಸಾಹಿತ್ಯವಿಷಯಕ ಪುಸ್ತಕಗಳನ್ನು ಬರೆದಿರುವರು. ಅವು ಇನ್ನೂ ಅಚ್ಚಾಗಿರುವದಿಲ್ಲ.

ಮಾಹುಲಿ ವಾದಿರಾಜರು:-

೫೦ ಮಾಧ್ವರು; ದರೂರಲ್ಲಿ ೧೮೭೯ ನೇ ಇಸ್ವಿ ಮೇ ತಿಂಗಳ ೧ನೇ ತಾರೀಖಿನಲ್ಲಿ ಹುಟ್ಟಿರುವರು. ಈಗ ಅಲ್ಲಿಯೇ ಶಿಕ್ಷಕರಾಗಿರುವರು. ಸಂಸ್ಕೃತವನ್ನೂ ಮರಾಟಿಯನ್ನೂ ಸಾಕಷ್ಟು ಅಭ್ಯಾಸ ಮಾಡಿರುವರು. ಲೇಖಕರೂ ಕವಿಗಳೂ ಆಗಿರುವರು. ಇವರು ತಾವು ಬರೆದ ಮಾತೃಮಹಿಮೆ ಎಂಬ ಪದ್ಯ ಪುಸ್ತಕವನ್ನು ಮುದ್ರಿಸಿರುವರು. ಇದಲ್ಲದೆ ನನ್ನ ತಂದೆ (ಕಥೆ) ಸ್ವಯಂವರ (ನಾಟಕ) ಪುತ್ರವಾತ್ಸಲ್ಯ ಮೊದಲಾದವುಗಳನ್ನು ಬರೆದಿರುತ್ತಾರೆ.

ಗೆಜ್ಜಿ ಕೃಷ್ಣರಾಯರು:-

೫೦-೫೨ ವಯಸ್ಸಿನ ವೃದ್ಧರಿವರು. ಬೆಳಗಾವಿಯ, ವೈಷ್ಣವ ಬ್ರಾಹ್ಮಣರು. ಬಿ. ಎ ಎಲ್ ಬಿ. ವಕೀಲರು. ಪ್ರೋ॥ ಗೋಖಲೆಯವರ ಅಂಕಗಣಿತವನ್ನು ಕನ್ನಡಿಸಿದವರು. ವಕನೀ ಲೈಕ್ಸನ್ನು ಕನ್ನಡದಲ್ಲಿ ಬರೆದವರು. ಕನ್ನಡ ನುಡಿ ಹೆಚ್ಚಳಕ್ಕಾಗಿ ಬೆಳಗಾವಿಯಲ್ಲಿ ಯತ್ನಿಸುವ ಹಿರಿಯರಲ್ಲಿ ಒಬ್ಬರವರು.

ದೇಸಾಯಿ ದಿನಕರರು:-

೫೨ ಇವರ ಮಾತೃಭಾಷೆಯು ಕನ್ನಡವಲ್ಲ; ಕೊಂಕಣೆ. ಆದರೂ ಪ್ರಾಂತೀಯ ಭಾಷೆಗೆ ಮನ್ನಣೆ ಕೊಡಲೇಬೇಕೆಂಬ ತತ್ವಕ್ಕೆ ಅನುಸರಿಸಿ ಇವರು ಕನ್ನಡವನ್ನು ಒಳ್ಳೇ ರೀತಿಯಿಂದ ಅಭ್ಯಾಸ ಮಾಡುತ್ತಿರುವರು. ಅಂತೆಯೇ ಧಾರವಾಡ ಆರ್ಟ್ಸ್ ಕಾಲೇಜದಲ್ಲಿ ಕನ್ನಡಕ್ಕೆ ಸಾಕಷ್ಟು ಸ್ಥಳವಿಲ್ಲವೆಂದು ವಿಚಾರಿಸಿ ಇವರೀಗ ಮೈಸೂರಿನ ಕಾಲೇಜದಲ್ಲಿ ಓದುತ್ತಿರುವರು. ಕವಿತೆಗಳನ್ನು ಸರಸಾಗಿ ಮಾಡುವರು. ಇವರು ೧೦-೯-೧೮೯೮ ರಲ್ಲಿ ಅಂಕೋಲಾದಲ್ಲಿ ಹುಟ್ಟಿರುವರು. ಸಾರಸ್ವತ ಬ್ರಾಹ್ಮಣರು. ಇವರ ಅನೇಕ ಬಿಡಿಕವಿತೆಗಳು ಅಲ್ಲಲ್ಲಿ ಮುದ್ರಿತವಾಗಿರುವವು. ಇನ್ನು ಅನೇಕ ಕವಿತೆಗಳು ಮುದ್ರಿತವಾಗಬೇಕಾಗಿವೆ. ರಾಯಚೂರ ವಿಜಯವೆಂಬ ಕವಿತೆಯು ಬಹು ಸರಸಾಗಿದೆ.

ಯಾಜಿ ಗಣೇಶರಾಯರು:-

೫೩ ಕುಮಟೆಯ ಹವ್ಯಕ ಬ್ರಾಹ್ಮಣರು. ಒಳ್ಳೇ ದರಗಂಡ ಲೇಖಕರು. ಕರ್ನಾಟಕ ಧುರೀಣ ಪತ್ರಿಕೆಯ ಧುರಂಧರ ಸಂಪಾದಕರು. ನಿರ್ದಾಕ್ಷಿಣ್ಯವಾಗಿ ನಿರ್ಭಯದಿಂದ ಬರೆಯುವ ನಿಷ್ಣಾತ ಬರಹಗಾರರು; ಒಳ್ಳೇ ಸವಿಕಟ್ಟಾಗಿ ಚೊಕ್ಕಟ್ಟಾಗಿ ಬರೆಯುವ ಹದಗಾರರು. ಇವರು ಇಸಗಂಜಿಯಲ್ಲಿ ೧೮೭೬ನೇ ಇಸವಿ ಜೂನ ತಿಂಗಳ ೧ನೇ ತಾರೀಖಿನಲ್ಲಿ ಹುಟ್ಟಿರುವರು. ದೇಶಬಂಧು ಚಿತ್ತರಂಜನದಾಸರ ಚರಿತ್ರೆಯನ್ನು ಬರೆದಿರುವರು. ಸಾಹಿತ್ಯ ಸೇವಕರಿದ್ದಂತೆ ಉಜ್ವಲ ರಾಷ್ಟ್ರಭಕ್ತರೂ ಆಗಿರುವರು. ಕನ್ನಡನಾಡಿನ ಸರ್ವತೋಪರಿ ಹಿತಕ್ಕಾಗಿ ಹೆಣಗುವ ಹಿರಿಯರಲ್ಲಿ ಇವರೊಬ್ಬರು.

ಬಚ್ಚಾಸಾಕುವಿಗೆ ಸೋಲು

—೦—

ಗಾಂಡೇಜದಲ್ಲಿಯೇ ಬಚ್ಚಾ ಸಾಕುವಿನ ಸೈನ್ಯ ಸೋತು, ಆತನ ದಂಡು ಪೂರಾ ಘಾಸಿಯಾಯಿತೆಂದು ನಿನ್ನೆ ಸಾಯಂಕಾಲದಲ್ಲಿ ವರ್ತಮಾನ ಬಂದಿದೆ.

ವಿವಿಧ ವರ್ತಮಾನಗಳು

—(೦)—

ಹುನಗುಂದದ ಇಂಗ್ರೇಜಿ ಶಾಲೆಯ ಹೆಡ್ಡಮಾಸ್ತರರು ಮಾಟ್ರಿಕ ಪಾಸಾದವಂದ್ಹಾರೆ. ಇವರ ಕೈಕೆಳಗೆ ಒಬ್ಬ ಬಿ.ಎ. ಪಾಸಾದವನನ್ನು ಕೊಡುವ ವಿಚಾರ ನಡೆದಿದೆ. ವಿಸ್ಮಯ. ಅನವಶ್ಯವೇ ಸೈ.

ಮೈಸೂರಿನ ಪ್ರಜೆಗೆ ಜವಾಬದಾರ ರಾಜ್ಯ ಪದ್ಧತಿಯ ಅಧಿಕಾರ ಕೊಡಬೇಕೆಂಬ ವಾದವಿವಾದವು ಅಲ್ಲಿಯ ಲೆಜಿಸಲೇಟಿವ್ಹ ಅಸೆಂಬ್ಲಿಯಲ್ಲಿ ನಡೆಯಿತು.

ಶ್ರೀ ವಿದ್ಯಾರಣ್ಯರ ಪುಣ್ಯತಿಥಿ

ಉತ್ಸವದ ಕಾರ್ಯಕ್ರಮ.

ಸ್ಥಳ:- ಸದರ್ನ ಮರಾಠಾ ಅರ್ಬನ ಬ್ಯಾಂಕಿನ ಅಟ್ಟ

ವೇಳೆ:— ಸಾಯಂಕಾಲ ೬ ಗಂಟೆ

ತಾರೀಖು ೬—೭—೨೯ ಶನಿವಾರ

ಅಧ್ಯಕ್ಷರು- ಶ್ರೀ ಗುಂಜೀ ಕೃಷ್ಣರಾಯರು ರಿ. ಜು. ಡಿ ಜ

ವ್ಯಾಖ್ಯಾತರು:- ಬೆಂಗಳೂರಿನಿಂದ ದಯಮಾಡಿಸಿದ ಶ್ರೀ ಸೀ. ಕೆ. ವೆಂಕಟರಾಮಯ್ಯನವರು, ಎಂ. ಎ. ಬಿ. ಎಲ್. ಓರಿಯಂಟಲ್ ಟ್ರಾನ್ಸಲೇಟರವರು ವಿದ್ಯಾರಣ್ಯರೂ ಕರ್ನಾಟಕವೂ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ತಾರೀಖು ೭—೭—೨೯ ರವಿವಾರ

ಉತ್ಸವದ ಸಮಾರೋಪ ಮತ್ತು ಬಾಲಭಾರತಿ ಕುಮಾರಿ ಯದುಗಿರಿಯಮ್ಮನ "ಸತ್ಯನಾರಾಯಣ" ವಿಷಯವಾಗಿ ಕೀರ್ತನೆ.

ಜುಲೈ ೭ ನೆಯ ತಾರೀಖು

ಪಂಡಿತ ವಸ್ತ್ರ ಬಹಿಷ್ಕಾರ ಕಮಿಟಿಯವರು ಜುಲೈ ೭ ನೇ ತಾರೀಖನ್ನು ಅಂದರೆ ಜುಲೈ ತಿಂಗಳ ಮೊದಲನೇ ಆದಿತ್ಯವಾರವನ್ನು "ಬಹಿಷ್ಕಾರ ದಿನ" ವನ್ನಾಗಿ ಆಚರಿಸಬೇಕೆಂದು ನಿರ್ಣಯಿಸಿದ್ದಾರೆ.

ಅಂದು—

೧ ಮನೆಮನೆಗೆ ಹೋಗಿ ಖಾದೀ ಬಟ್ಟೆಯನ್ನು ಮಾರುವದು

೨ ಸಭೆ ಕೂಡಿಸಿ ಬಹಿಷ್ಕಾರದಾಚರಣದ ಬಗ್ಗೆ ಜನರ ಮನವೊಲಿಸುವದು.

೩ ಊರಲ್ಲೆಲ್ಲ ನಗರಸಂಕೀರ್ತನೆಗಳನ್ನು ಹೊರಡಿಸುವದು

೪ ಇನ್ನು ಮೇಲೆ ಪರದೇಶೀ ಬಟ್ಟೆ ಖರಿಸದಂತೆ ಜನರ ಮನವೊಲಿಸುವದು.

ಇವೇ ಮೊದಲಾದ ಕಾರ್ಯಗಳನ್ನು ಮಾಡಿ, ನಿಮ್ಮ ಜಿಲ್ಹೆಯ ಕಾಂಗ್ರೆಸ ಕಮೀಟಿಗಳಿಗೆ ಆ ಪ್ರಕಾರ ತಿಳಿಸಿ ರಾಷ್ಟ್ರಕಾರ್ಯಕ್ಕೆ ನೆರವಾಗಿರಿ.

ಚಂದಾದಾರರಿಗೆ ಸೂಚನೆ

ಜುಲೈ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ, ವಾರ ಪತ್ರದ ಚಂದಾದಾರರ ಹೆಸರಿಗೆ ವಿ. ಪಿ. ಗಳನ್ನು ಕಳಿಸುವೆವು. ಚಂದಾದಾರರು ವಿ. ಪಿ. ಸ್ವೀಕರಿಸಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ಅನೇಕ ಔಷಧಗಳನ್ನು ಸೇವಿಸಿ ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಸೆರಗು ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಸ್ವಷ್ಟರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆ ಖರ್ಚಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ಸೂಚನೆ:- ನೀವು ಔಷಧ ಬೇಡುವಾಗ ಯಾವ ವರ್ತಮಾನಪತ್ರದ ಜಾಹೀರಾತಿನ ಮೂಲಕ ಈ ಔಷಧವನ್ನು ನೋಡಿರುವಿರೆಂಬದನ್ನು ಬರೆಯಬೇಕು.

ನೋಟೀಸು

ಸರಸ್ವತಿಬಾಯಿ ಕೋಂ ಕಾಳಪ್ಪಾ ಕಮ್ಮಾರ ಸಾ॥ ಚಿಕ್ಕೇಟ್ಟಿ ತಾಲ್ಲೂಕ ಕೋಡ ಇವರಿಗೆ—

ಕಾಳಪ್ಪಾ ಬಿಂನ ಸಿಂಗಪ್ಪಾ ಕಮ್ಮಾರ ಸಾ॥ ಚಿಕ್ಕಮಳಗುಂದ ಈತನು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಹೆಂಡತಿಯಿದ್ದು ನನ್ನ ಸಂಗಡ ೩-೪ ವರ್ಷ ಬಾಳವೆ ಮಾಡಿದಿ. ಒಬ್ಬ ಮಗಾ ಮಹಾದೇವ ಅಂತಾ ೩ ವರ್ಷದವಾ ಇದ್ದಾನೆ. ನೀನು ಐಲಿಕಡಿಗೆ ನಿನ್ನ ತಂದಿತಾಯಿ ಮಾತು ಕೇಳಿ ನನ್ನ ಸಂಗಡ ಬಾಳ್ವೆ ಮಾಡಲಾರದೆ ನನ್ನ ಬಾ॥ ಬಂಗಾರದ ನಾಗ ರೊತ್ತಿನ ಟೀಕಿ ಕಿಂ॥ ರೂಪಾಯಿ ೩೮ ಜೋಮಾಲಿ ಕಿಂ॥ ರೂಪಾಯಿ ೧೬, ಬುಗಡಿ ಕಿಂ॥ ರೂಪಾಯಿ ೨೦ ಸಾದಾ ಮುತ್ತಿನ ಮೂಗುತಿ ಕಿಂ॥ ರೂಪಾಯಿ ೩೪ ಬೆಳ್ಳೀ ಪಟ್ಟಿ ಕಿಂ॥ ರೂಪಾಯಿ ೧೨ ತಾಳಿ ಸರಾ ಕಿಂ॥ ರೂಪಾಯಿ ೩೬ ಈ ಪ್ರಕಾರ ಸಾಮಾನ ಸಹಿತ ನನ್ನ ಸ್ವಾಧೀನದಿಂದಲ್ಲಿ ಓಡಿ ಹೋಗಿ ೭ ತಿಂಗಳಾಯಿತು. ಈ ಬಗ್ಗೆ ನಮ್ಮ ಗ್ರಾಮದ ಹಾಗೂ ಚಿಕ್ಕಕಟ್ಟಿ ಗ್ರಾಮದ ಬುದ್ಧಿವಂತರ ಸಮಕ್ಷಮ ಪಂಚಾಯತಿ ಲೆಕ್ಕಮಾಡಿಕೊಟ್ಟು ನಿನ್ನ ತಾಯಿತಂದಿ ಇಬ್ಬರು ಪಂಚರ ಮಾತು ಮೀರಿ ಕಳಿಸೋದಿಲ್ಲಾ ೨ ನೇ ಲಗ್ನಮಾಡಿಕೊ ನಿನ್ನ ಮಗನನ್ನು ಹಾಗೂ ನಿನ್ನ ದಾಗೀನೆಗಳನ್ನು ನಿನ್ನ ಮಗಾ ವಯಸ್ಸಿಗೆ ಬಂದನಂತರ ಕೊಡತ್ತೇನೆ ಇವತ್ತಿನಿಂದಾಕ ನೀನು ನನ್ನ ಮಗಳಿಗೆ ಗಂಡ ಅಲ್ಲಾ ಆಕಿ ಹೇಣತಿ ಅಲ್ಲಾ ಅಂತಾ ನಿಕಾಲಿಮಾಡಿದರು. ಈ ಮಾತಿಗೆ ನೀನು ಆಗ್ಗೆ ಕಬೂಲಮಾಡಿ ನಾನು ಕರೆದರೆ ಬರಲಿಲ್ಲಾ. ಈಗ ಈ ನೋಟೀಸ ಮುಟ್ಟಿದ ೭ ದಿವಸದಲ್ಲಿ ನನ್ನ ದಾಗೀನೆ ಮ ಹುಡುಗನ್ನ ಕರಕೊಂಡು ಬಂದು ನನ್ನ ಸ್ವಾಧೀನಮಾಡಿ ಪಾವತಿ ತಗೊಂಡು ಹೋಗಬೇಕು. ಜರ ಇದಕ್ಕೆ ತಪ್ಪಿದರೆ ನಿನ್ನ ಮೇಲೆ ಫಿರ್ಯಾದಿ ಮಾಡತೇನೆ ಇವತ್ತಿನಿಂದ ನಿನ್ನ (೭ ತಿಂಗಳಿಂದ) ಬಿಟ್ಟಿರುತ್ತೇನೆ ಇದೇ ನೋಟೀಸು ಅಂತಾ ತಿಳಿಯುತಕ್ಕದ್ದು ನೀನು ಬಸರಾಗಿ ಹಡಕೊಂಡರೆ ಆ ಹುಡುಗರ ಮಾಕ್ಕಿ ನನ್ನ ಆಸ್ತಿಗೆ ಏನೂ ಸಂಬಂಧ ಇಲ್ಲಾ. ನೀನು ವ್ಯಭಿಚಾರತನಕ್ಕೆ ಮರುಳಾಗಿದ್ದು ನಿನ್ನ ಮನಬಂದತ್ತೆ ಇರತಕ್ಕದ್ದು ನೀನು ನನ್ನ ಮೇಲೆ ಖೋಟಿಗಿ ದಾವಾ ಮಾಡಿದರೂ ನಡೆಯಲಾರದು ತಿಳಿಯುವದು

ತಾ॥ ೧—೭—೨೯ ಇಸ್ವಿ.

ಸಹಿ- ಸಿಂಗಪ್ಪಾ ಕಾಳಪ್ಪಾ ಕಮ್ಮಾರ

ಸಮಾಚಾರ

ವಿ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, (ಕೊಳ್ಳೇಗಾಲ ಬ್ರ್ಯಾಂಚ) ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಅಂಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. L 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶನಿವಾರ ತಾರೀಖು ೬ ನೇ ಜುಲೈ ೧೯೩೯ (ಸಂಚಿಕೆ ೧೫೦

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪ್ರತ್ಯೇಕವಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩|| ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩|| ರೂ.

ಸೇವ್ಹಿಂಗ್ಸ ಬ್ಯಾಂಕ:— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಸಾಲಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಕ್ಕದ ಉದಾರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಊರುಗಳಿಗೆ ಹಚ್ಚುವ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು. ದರ ಹಾಗೂ ನಿಯಮಗಳ ಪ್ರತಿಗಳೂ ಮೊಕತ್ಯಾರ ಪತ್ರಗಳೂ ಸದರಿ ಬ್ಯಾಂಕದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — ಡಿ. ಜೋಸಿಲಿ,

ತಾ|| ೧೭-೩-೩೮ — ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ನಂ ೪- ಮಂಗಳವಾರಪೇಟೆ, ಛಪವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಕಡಿಮೆ ಮತ್ತು ಬಹಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮುರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿಣಿ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟೇಶರಾವ ಕುಂಬಿಹಾಳ.

ಮ್ಯಾನೆಜಿಂಗ ಏಜಂಟ.

ದಿ ಧಾರವಾಡ ಅರ್ಬನ್ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗಾಯು ಎಂಟು ಲಕ್ಷದ ಮೇಲುಂಟು. ಚಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಚೇರ ತರದ ಡಿಪಾಜಿಟಗಳಿಗೆ ಜಾಸ್ತಿಯಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತಿ ಇಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಪಿ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ|| ೬-೭-೨೯ ನೇ ಇಸ್ವಿ.

ಶ್ರೀ.

ಈ ವಿಜಯಂ ಶ್ರೀಶಪ್ರಿಯ
ಶ್ರೀ ವಸುಮತಿಯ ನಲಿಸಿರೆ ಸುಹಿತಚರಿತೆಗಳಿಂ ಪ
ದೀ "ವಿಜಯಂ" ಶ್ರೀಕರುಣಾ।
ನಾವಿಹಿತಂಗಳ ವಿವರಿಸಿನಲಿವುದು ಸಾಜಂ ॥೧॥

ಹಿಂದುಸ್ಥಾನಕ್ಕೆ ದೊರೆಯಬೇಕಾದ ಸ್ವರಾಜ್ಯವು ಬುರಿಕೆಯಲ್ಲಿ ಉಳಿಯಿತು!!!

ಹೋದ ಮಂಗಳವಾರದ ದಿವಸ ಪಾರ್ಲಮೆಂಟ ಸಭೆಯು ಪ್ರಾರಂಭವಾಯಿತು. ಕೂಲಿಕಾರರು ಬಾದಶಹರ ಹೆಸರಿನಿಂದ ತಾವು ಬರೆದ ಭಾಷಣವನ್ನೋದಿಸಿದರು. ಬಾದಶಹರು ಗುಣವಾದ ಬಗ್ಗೆ ಸಕಲ ಬಿರುದಾವಳಿಗಳಿಂದ ನಗರ ಪ್ರವೇಶ ಮಾಡಿದರು. ಅರಮನೆಯ ಮುಂದೆ ಲಕ್ಷ ಜನರು ಮೊಣಕಾಲೂರಿ ದೇವರ ಪ್ರಾರ್ಥನೆಮಾಡಿದರು. ಆದರೂ ಪಾರ್ಲಮೆಂಟನ್ನು ತೆರೆಯುವದಕ್ಕೆ ಬರಲಿಲ್ಲ. ನಾಲ್ವರು ಪ್ರತಿನಿಧಿಗಳು ಬಂದು ಸಿಂಹಾಸನದ ಹತ್ತರ ನಿಂತು, ಭಾಷಣ ಓದಿದರು. ಇದರಲ್ಲಿ ಸ್ವದೇಶ-ಪರದೇಶದ ಬೇರೆ ಬೇರೆ ರಾಜಕೀಯ ಪ್ರಶ್ನೆಗಳ ಉಲ್ಲೇಖಗಳಿದ್ದರೂ, ಹಿಂದುಸ್ಥಾನದ ಹೆಸರಿರಲಿಲ್ಲ. ಕೂಲಿಕಾರರು ಈ ಭಾಷಣದಲ್ಲಿ ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯ ದಾನ ಮಾಡಿದಂತೆ ಜಾಹೀರಮಾಡುವರೆಂದು ಮೊದಲು ಪ್ರಸಿದ್ಧವಾಗಿತ್ತು. ಸುದ್ದೀ ಹುಟ್ಟಿಸಲಿಕ್ಕೇನು ಕೊರತೆ? ಈ ಸುದ್ದಿಯನಂತರ ಮಂತ್ರಿಯವರು ಸತ್ಯ ಮೂಕರಾಗುವರೆಂದೂ ವರ್ತಮಾನ ಬಂತು. ಶುಭಕ್ಕಿಂತ ಅಶುಭ ಸುದ್ದಿಗಳೇ ನಿಜವಾಗುವವು. ಅದೇ ಫಿಟವಾಯಿತು. ಲಾರ್ಡ ಆಯರ್ವಿನಸಾಹೇಬರು ಲಂಡನ ತಲ್ಪಲಿಲ್ಲ. ಸಾಯಮನ್ನ ಕಮಿಶನದ ರಿಪೋರ್ಟು ಟೈಪಿಗೆ ಬರಲಿಲ್ಲ. ಈ ಕಮಿಶನದ ಬಗ್ಗೆ ಮೂರೂ ಪಂಗಡಗಳ ಏಕಮತವದೆ ಇದ್ದರಿಂದ ಬಾದಶಹರ ಭಾಷಣದಲ್ಲಿ ಹಿಂದುಸ್ಥಾನ ವಿಷಯವಾಗಿ ಹೇಳತಕ್ಕ ವಿದ್ಯಮಾನವನ್ನು ಹೇಳಲಿಕ್ಕಾಗಲಿಲ್ಲೆಂದು ಮಂತ್ರಿ ಮಿ. ಮ್ಯಾಕಡೋನಾಲ್ಡಸಾಹೇಬರು ಹೇಳಿದ್ದಾರೆ. ಸಾಹೇಬರು ಇಷ್ಟೇ ಹೇಳವೆ, ಸಾಯಮನ್ನ ಕಮಿಶನದಿಂದ ಒಳಿತೇ ಆಗುವದುಂಟು. ಈ ದೇಶದ ಜವಾಬದಾರ ಮತ್ತು ಸಂಪನ್ನ ಗೃಹಸ್ಥರು ಕಮಿಶನದಲ್ಲಿ ಆದರವುಳ್ಳವರಾಗಿಲ್ಲ. ಇವರು ತಮ್ಮ ಕಡೆಯ ಸಹಕಾರಮಾಡಬೇಕೆಂಬ ಆಶೆಯನ್ನು ವ್ಯಕ್ತಪಡಿಸಿದ್ದಾರೆ. ಹಳೇ ಮಂತ್ರಿಯಾದ ಮಿ ಬಾಲ್ಡವಿನಸಾಹೇಬರು ಈ ಆಶೆಯ ಅಂಕುರವನ್ನು ಚಿಕ್ಕಹಾಕುವಂಥ ಉಲಕೋಚಿತನವನ್ನು ಆ ಕ್ಷಣವೇ ಮಾಡಿಬಿಟ್ಟರು. "ಮಂತ್ರಿಗಳು ಮಾಡಬಹುದಾದ ಕಠಿಣ ಕೆಲಸಗಳಲ್ಲಿ ಅತಿ ಕಠಿಣವಾದ ಕೆಲಸವು ಹಿಂದುಸ್ಥಾನ ವಿಷಯಕವಾಗಿದ್ದು ಇದರಿಂದ ಮಂತ್ರಿಗಳ ಅಂತಿಮ ಕರ್ತವ್ಯದ ಪರೀಕ್ಷೆಯೇ ಆಗುವದೆಂದು ಇವರು ಹೇಳಿದ್ದಾರೆ. ಕೂಲಿಕಾರರು ವಸಾಹತಿನ ಸ್ವರಾಜ್ಯವಂತಿರಲಿ; ತಮಗೆ ಉಚಿತವೆಂಥ ಹೆಚ್ಚಿನ ಅಧಿಕಾರ ಕೊಟ್ಟರೂ ಅದನ್ನು ತಾವು ವಿರೋಧಿಸುವ ಹಾಗೆ ಈ ಸಾಹೇಬರು ಸ್ಪಷ್ಟವಾಗಿ ಹೇಳಿದ್ದಾಯಿತು. ಇದೊಂದೇ ಸಂಗತಿಯಿಂದ ಸಾಯಮನ್ನ ಕಮಿಶನವು ಯಾವ ಸ್ವರೂಪದಿಂದ ಹಿಂದುಸ್ಥಾನಕ್ಕೆ ಬಂತೆಂದೂ, ಅದಕ್ಕೆ ಹಿಂದೀ ಮುಖಂಡರು ಬಹಿಷ್ಕಾರಹಾಕಿದ್ದು ಧೂರ್ತತನವಾಯಿತೆಂದೂ ಹೇಳುವಂತಾಗುತ್ತದೆ ಮತ್ತು ಇದೇ ಸಾಯಮನ್ನ ಕಮಿಶನದ ತಂತ್ರದಿಂದ ನಡೆಯುವದೇ ಕೂಲಿಕಾರರ ರಾಜಧರ್ಮವಾಗುವದು. ಇನ್ನು ಕೆಲ ಕಾಲ ಬ್ರಿಟಿಶರ ಪ್ರಭುತ್ವದಲ್ಲಿಯೇ ಹಿಂದುಸ್ಥಾನವಿರಬೇಕೆಂದು ಬಂಕಿಮಚಂದ್ರ ಚಟರ್ಜಿಯು ಎಂದೋ ಯಾವ ರಾಯನ ಕಾಲದಲ್ಲಿಯೋ ಹೇಳಿದ್ದನ್ನು ಮಿ ಮ್ಯಾಕಡೋನಾಲ್ಡಸಾಹೇಬರು ನೆನಪಿನಲ್ಲಿಟ್ಟು, ಅದನ್ನು ಹಿಂದೀ ಸಾಯಮನ್ನರ ಮುಂದೆ ಹೇಳಿದಂತೆ ಪ್ರಸಿದ್ಧವಾಗಿದೆ. ಇವರಿಗಾಗಿ ಮಾಡಿಸಿದ ಮೇಜವಾನಿ ಕಾಲಕ್ಕೆ ಮಾಡಿದ ಭಾಷಣವನ್ನು ಗುಪ್ತವಾಗಿಟ್ಟಿದ್ದಾರೆ. ಆ ಗುಪ್ತವೇ ಎಲ್ಲರನ್ನು ಗೊಂದಲದಲ್ಲಿ ಹಾಕಿರುತ್ತದೆ. ಅಂತೂ ಹಿಂದುಸ್ಥಾನವು ವ್ಯರ್ಥವಾಗಿ ಸ್ವರಾಜ್ಯದ ಭ್ರಮೆಯಲ್ಲಿ ಬೀಳಬಾರದೆಂದು ಬುರಿಕೆಯನ್ನು ಓರಿಗೆ ಮಾಡಿ ತಿಳಕೊಳ್ಳಲು ಯಾವ ಸಂಶಯವುಳಿಯಲಿಲ್ಲ.

ಮಿರಜೆಯಲ್ಲಿ ದಿವಾಣಿ ದಾವೆಗಳ ದುರ್ದೆಶೆಯು.

—(೦)—

ಮಿರಜೆ ಸಂಸ್ಥಾನವು ಸಣ್ಣದು. ಮಿರಜೆಯ ಊರು ಒಂದು ತಾಲೂಕಿನ ಸಾಧಾರಣ ಗ್ರಾಮದಂತಿರುವದು. ಸ್ಟೇಶನದಿಂದ ಇತ್ತಲಾಗಿ ಮಹತ್ವ ಬಂದಿದೆ. ಇಂಥ ಊರಲ್ಲಿ ಎರಡು ಕೋರ್ಟುಗಳೂ, ಒಂದು ಸರ ನ್ಯಾಯಾಧೀಶ ಕೋರ್ಟೂ ಉಂಟು. ಅಲ್ಲಿ ಈವರೆಗೆ ೨೦೦೦ ದಾವೆಗಳು ನಿರ್ಣಯವಾಗದೆ ಹತ್ತೆಂಟು ವರ್ಷಗಳಿಂದ ಕೊಳೆಯುತ್ತಿರುವವು. ಒಂದು ದಾವೆಯಂತೂ ಹದಿನಾರು ವರ್ಷವಾದರೂ ತೀರ್ಪಿಗೆ ಬಂದಿರುವದಿಲ್ಲ. ಅಲ್ಲಿ ದಾವೆ ಗೆದೆಯುವಂಥವರಿಗೆ ಮಾರ್ಕಂಡೆಯ ಆಯುಷ್ಯವೂ, ಕುಬೇರನ ದ್ರವ್ಯವೂ ಬೇಕೆನ್ನುವಂತಾಯಿತು.

ಶ್ರೀ ಶಿವಾಜಿಯ ಶಿಲಾಮೂರ್ತಿಗೆ ವಿಧರ್ಮಿಯರ ವಿಘ್ನ.

—(೦)—

ಪುಣೆಯಲ್ಲಿ ಸಬರ್ಬನ ಮ್ಯುನಿಸಿಪಾಲಿಟಿಯುಂಟು. ಅದು ಸ್ಟೇಶನದಿಂದ ಯರವಡೆಯವರೆಗೆ ಮೂಲಪಟ್ಟಣದ ಹೊರಗಿನ ಪ್ರದೇಶವನ್ನು ವ್ಯಾಪಿಸಿರುತ್ತದೆ. ಈ ಮ್ಯುನಿಸಿಪಾಲಿಟಿಯಲ್ಲಿ ಹಿಂದೂ, ಪಾರಸಿ, ಕ್ರಿಶ್ಚನ್ನ ಮುಸಲಮಾನ ಧನಿಕರೂ, ಯಾರಜಂಗರೂ ಮೆಂಬರಿದ್ದಾರೆ. ಇಂಥ ಅನೇಕ ಧರ್ಮಿಯರು ಕೂಡಿದ ಮ್ಯುನಿಸಿಪಾಲಿಟಿಯಲ್ಲಿ ೧೫ ಸಾವಿರ ರೂಪಾಯಿ ವೆಚ್ಚ ಮಾಡಿ, ಶ್ರೀ ಶಿವಾಜಿ ಮಹಾರಾಜರ ಶಿಲಾಮೂರ್ತಿಯನ್ನು ಸ್ಥಾಪಿಸಬೇಕೆಂಬ ಠರಾವಾಗಿ ಹಾಗೂ ಹೀಗೂ ಪಾಸಾಯಿತು. ಆದರೆ ಕಲೆಕ್ಟರರಾದ ಮಿ. ಓಲ್ಡೆನ ಟ್ರ್ಯಾಡರಸಾಹೇಬರು ಈ ಹಣಕ್ಕೆ ಮಂಜೂರಿ ಕೊಡಲಿಲ್ಲ. ಇಷ್ಟು ದೊಡ್ಡ ರಕಮು ವೆಚ್ಚ ಮಾಡಿ, ಶ್ರೀ ಶಿವಾಜಿಮಹಾರಾಜನ ಮೂರ್ತಿಯನ್ನು ನಿಲ್ಲಿಸುವ ಅಗತ್ಯವಿಲ್ಲ. ಮ್ಯುನಿಸಿಪಾಲಿಟಿಯಲ್ಲಿ ಡ್ರೇನೇಜದ ಅವಶ್ಯಕತೆಯುಂಟು. ಯರವಡೆಯಲ್ಲಿ ಮಾರ್ಕೆಟು, ಆಸ್ಪತ್ರಿ ಮತ್ತು ಸ್ನಾನಸ್ಥಳ ಬೇಕಾಗಿದೆ. ಅವುಗಳ ವ್ಯವಸ್ಥೆ ಮಾಡಿರೆಂದು ಸಾಹೇಬರು ಮ್ಯುನಿಸಿಪಾಲಿಟಿಗೆ ಪತ್ರ ಬರೆದರು. ಈ ಪತ್ರದ ಬಲದಿಂದ ವ್ಹಾಯಿಸ ಪ್ರೆಸಿಡೆಂಟರು ಮೊದಲಿನ ಠರಾವನ್ನು ರದ್ದು ಮಾಡಬೇಕೆಂಬ ಸೂಚನೆ ತಂದಿದ್ದಾರೆ. ಇವರಿಗೆ ಪಾರಸಿ ಮೆಂಬರರಾದ ಮಿ. ವೇಧಾಸಾಹೇಬರು ಜನಾಂಗ ಮತ್ತು ಧರ್ಮವನ್ನೇ ಮುಂಗುರಿ ಮಾಡಿಕೊಂಡು ಅನುಮೋದನ ಕೊಟ್ಟಿದ್ದಾರೆ. ಶಿವಾಜಿಯಂಥ ಹಿಂದೂ ಮನುಷ್ಯನ ಭಾವಪ್ರತಿಮೆಗೆ ಕ್ರಿಶ್ಚನ್ನ, ಪಾರಸಿ, ಮುಸಲಮಾನ, ಯುರೋಪಿಯನ್ನರು ಏಕೆ ರೊಕ್ಕ ಕೊಡಬೇಕೆಂದು ಇವರು ಆಕ್ಷೇಪಣೆ ತಕ್ಕೊಂಡಿದ್ದಾರೆ.

ಕೊಲ್ಹಾಪುರದಲ್ಲಿ ಹಿರೇಕ ಹಾಯಸ್ಕೂಲ

ಕೊಲ್ಹಾಪುರದಲ್ಲಿ ಶಿಕ್ಷಣದ ಪ್ರಗತಿಯು ವಿಶೇಷವಾಗಿದೆ. ದರಬಾರಿನವರು ಪೂರ್ಣ ನೆರವಾಗದಿದ್ದರೂ, ಕಲಿಯುವಂಥವರ ಸಂಖ್ಯೆಯು ಹೆಚ್ಚಿದ್ದು ಪರೀಕ್ಷೆ ಪಾಸಾದವರಿಗೆ ಸರಕಾರೀ ಕೆಲಸ ದೊರೆಯುವದು ದುರ್ಲಭವಾದ್ದರಿಂದ ಹಾಯಸ್ಕೂಲುಗಳ ಸಂಖ್ಯೆಯು ತಾನಾಗಿ ಬೆಳೆದಿದೆ. ಆರು ಹಾಯಸ್ಕೂಲುಗಳುಂಟು. ಇವೆಲ್ಲ ಗಂಡುಹುಡುಗರ ದೆಸೆಯಿಂದಲೇ ಇ

ರುವವು ಪ್ರೀತಿಕ್ಷಣವೂ ಹೆಚ್ಚಾಗಿ ಹೆಣ್ಣು ಮಕ್ಕಳು ಇಂಗ್ಲಿಷ ಕಲಿಯುವದು ಕಷ್ಟದೆ. ಇವುಗಳಿಗೆ ಒಂದು ಸ್ವತಂತ್ರ ಹಾಯಸ್ಕೂಲನ್ನು ಕಟ್ಟಬೇಕೆಂದು ಮಹಾರಾಜರು ವಿಚಾರವಮಾಡಿದ್ದಾರೆ. ಇದಕ್ಕೆ ತಮ್ಮ ತಾಯಿ ಮಹಾರಾಣಿ ಲಕ್ಷ್ಮೀಬಾಯಿಯವರ ಹೆಸರಿಡುವರು.

ಧಾರವಾಡ ಡಿ॥ ಲೋ॥ ಬೋರ್ಡ ಮತ್ತು ಶಿಕ್ಷಕರ ಸಂಬಳ.

ಬೆನ್ನ ಮೇಲೆ ಹೊಡೆಯಬೇಕ ;
ಹೊಟ್ಟೆಯ ಮೇಲೆ ಹೊಡೆಯಬಾರದು

—(೦)—

ಡಿ॥ ಲೋ॥ ಬೋ॥ ಚೀಫಆಫೀಸರರಾದ ಮಿ ಪಾಟೀಲರವರು ವಿಜಯದಲ್ಲಿ ಮುದ್ರಣಕ್ಕಾಗಿ ಕೆಳಗಿನ ಸಂಗತಿಯನ್ನು ಬರೆದು ಕಳಿಸಿದ್ದಾರೆ:-

"ಲೋಕಲಬೋರ್ಡ ಶಾಳಾಶಿಕ್ಷಕರ ಪಗಾರ ಡಿ॥ ಲೋ॥ ಬೋರ್ಡಿನಿಂದ ಒಂದು ಇಡಿಯಾಗಿದೆಂದು ಜನರ ತಪ್ಪು ಸಮಜೂತಿಯಾಗಿದೆ. ಆದರೆ ಅದು ಹಾಗೆ ಇರುವದಿಲ್ಲ. ಫಕ್ತ ಶೀಕ್ಷಾತರೀಕ ಅಲ್ಲದೇ ವರ್ಗವಾದಂಥ ಶಿಕ್ಷಕರ ಪಗಾರ ಮಾತ್ರ ಎರಡನೇ ಹುಕುಮು ಆಗುವವರೆಗೆ ಒಟವಡೆ ಮಾಡಬಾರದೆಂದು ಡಿ॥ ಲೋ॥ ಬೋರ್ಡಿನ ಠರಾವು ಆಗಿದೆ. ಉಳಿದ ಶಿಕ್ಷಕರ ಪಗಾರ ಡಿ॥ ಲೋ॥ ಬೋರ್ಡಿನಿಂದ ಒಂದೇ ಇಡಿಯುವದಿಲ್ಲ."

ಶೀಕ್ಷಾತರೀಕ ಅಲ್ಲದೆ ವರ್ಗವಾದಂಥ ಶಿಕ್ಷಕರ ಸಂಬಳವನ್ನು ಸಧ್ಯದಲ್ಲಿ ತಡಕಲಾಟ ಮಾಡಿದ್ದರೂ, ಅದು ಒಂದು ರೀತಿಯಿಂದ ಸಸ್ಪೆಂಡ ಮಾಡಿದಂತಾಗುತ್ತದೆ. ಶೀಕ್ಷಾತರೀಕ ಆದಂಥವರ ಸಂಬಳವನ್ನು ಹಿಡಿಯುವದಂತೂ ನಮಗೆ ಗೊತ್ತಿಲ್ಲ. ಅವರಿಗೆ ವರ್ಗವಾದ ಸ್ಥಳದ ಭತ್ತೆ ಮಾತ್ರ ಕೊಡುವ ಪದ್ಧತಿಯಿಲ್ಲ. ವರ್ಗವಾದ ಶಿಕ್ಷಕರ ಸಂಬಳ ಹಿಡಿಯುವ ಕಾರಣವೂ ನಮಗೆ ತಿಳಿಯುವದಿಲ್ಲ. ಇವರು ಯಾವಾಗಲು ಬೋರ್ಡಿನ ಅಧೀನದಲ್ಲಿರುತ್ತಾರೆ. ಹೊಸತನ ಕೂಡ ಬೋರ್ಡಿನ ಕಯ್ಯಲ್ಲುಂಟು. ಬಹಳವಾದರೆ ಒಂದು ತಿಂಗಳ ಸಂಬಳ ಹಿಡಿಯಬಹುದು. ಅದು ಕೂಡ ಸಸ್ಪೆಂಡ ವಿನಹ ಹಿಡಿಯಲಿಕ್ಕೆ ಬರಲಾರದು. ಸಾಕ್ಷ್ಯದು ತಿಂಗಳಿನತನಕ ಸಂಬಳವಿಲ್ಲದೆ, ಶಿಕ್ಷಕರು ಕಾಲಕ್ಷೇಪ ಮಾಡಿಕೊಂಡಿರುವದು ಬಹಳೇ ಕಠಿಣವಾಗುತ್ತದೆ. ಬೋರ್ಡಿನವರು ಬೇಕಾದಷ್ಟು ಬೆನ್ನ ಮೇಲೆ ಹೊಡೆಯಬೇಕು. ಹೊಟ್ಟೆಯ ಮೇಲೆ ಹೊಡೆಯಬಾರದೆಂದು ನಮ್ಮ ಆಗ್ರಹದ ಸೂಚನೆ ಇರುತ್ತದೆ.

ಬೆಳಗಾವಿಯ ಡಿಸ್ಟ್ರಿಕ್ಟ ಲೋಕಲಬೋರ್ಡ.

೩೦ ಸಾವಿರದ ಮಂಜೂರಿಯು ನಾಮಂಜೂರಾಯಿತು.

—(೦)—

ರಾ. ಬ. ಅಂಗಡಿಯವರು ಬೋರ್ಡಿನ ಅಧ್ಯಕ್ಷರಾಗಿದ್ದಾಗ, ಆಲ್ಲಾಗುವ ಲಿಂಗಾಯತ ಕಾಲೇಜದಲ್ಲಿ ವಿದ್ಯಾರ್ಥಿಗಳ ದೆಸೆಯಿಂದ ವಸತಿಗೃಹ ಕಟ್ಟುವದಕ್ಕಾಗಿ ೩೦ ಸಾವಿರ ರೂಪಾಯಿಗಳ ಗ್ರಾಂಟು ಕೊಡಬೇಕೆಂದು ಠರಾವು ಪಾಸಾಗಿತ್ತು. "ಈ ಠರಾವು ಅಪ್ರಸ್ತುತವೆಂದೂ, ಉಚ್ಚ ಪ್ರತಿಯ ಶಿಕ್ಷಣವು ಬೋರ್ಡಿನ ವಿಚಾರಕ್ಷೇತ್ರದಲ್ಲಿ ಬಂದರೂ, ಬೋರ್ಡಿನ ಸಾಂಪತ್ತಿಕ ಸ್ಥಿತಿಯನ್ನು ನೋಡಲಿಕ್ಕೆ ಮತ್ತು ಪ್ರಾಥಮಿಕ ಶಿಕ್ಷಣದ ಅವಶ್ಯಕತೆಯ ವಿಚಾರ ಮಾಡಲಿಕ್ಕೆ, ಈ ಮಂಜೂರಿಯು ಅನವಶ್ಯಕವೆಂದೂ, ಈ ಬಗ್ಗೆ ಬೋರ್ಡಿನವರು ಪುನಃ ವಿಚಾರ ಮಾಡಬೇಕೆಂದೂ" ಮಿ. ಕಲೆಕ್ಟರಸಾಹೇಬರು ಪತ್ರ ಬರೆದರು. ಈ ಪತ್ರದ ವಿಚಾರಣೆಯು ಹೋದ ವಾರದಲ್ಲಿ ಬೋರ್ಡಿನ ಮುಂದೆ ಬಂತು. "ಕಾಲೇಜವು ಕೇವಲ ಲಿಂಗಾಯತರ ದೆಸೆಯಿಂದಿಲ್ಲ. ವಸತಿಗೃಹವು ಎಲ್ಲ ಜಾತಿಯ ವಿದ್ಯಾರ್ಥಿಗಳ ದೆಸೆಯಿಂದ ಕಟ್ಟಲ್ಪಡುವದು. ಆದ್ದರಿಂದ ಈ ರಕಮು ಪುನಃ ಮಂಜೂರ ಮಾಡಬೇಕೆಂದು" ರಾ. ಬ. ಅಂಗಡಿಯವರು ಠರಾವು ತಂದರು. ಆದರೆ ಇದು ಬಹುಮತದಿಂದ ನಾಪಾಸಾಯಿತು.

ಕುಡಚಿಯಲ್ಲಿ ಜೈನರ ಹಿಂಸೆ

— ೦ —

ಕುಡಚಿಯಲ್ಲಿ ಕತ್ತಲರಾತ್ರಿಯ ದಿವಸ ಮುಸಲಮಾನರು ಜೈನ ದೇವಾಲಯದಲ್ಲಿ ಹೊಕ್ಕು, ಅವರ ಮೂರ್ತಿಯನ್ನು ಭಿನ್ನ ಮಾಡಿದರು. ಈ ತಪ್ಪಿಗಾಗಿ ಜೈನರು ನ್ಯಾಯ ಬೇಡಿಕೊಳ್ಳುವದರ ಬದಲಾಗಿ, ಅವರು ಕೋರ್ಟಿನ ಕಟ್ಟೆ ಏರಬಾರದೆಂದು, ಅವರಿಗೆ ಪರಿಪರಿಯಾಗಿ ತ್ರಾಸ ಕೊಡುತ್ತಿದ್ದಾರೆ, ಅಲ್ಲಿ ಮುಸಲಮಾನರ ವಸತಿಯೇ ಮುಖ್ಯವಾಗಿರುವದು. ಜೈನರ ಒಕ್ಕಲು ಬಗೆಯಬಾರದು, ಕಷ್ಟ ಮಾಡಬಾರದು; ಬಡಿಗ, ಕುಂಬಾರರು ಮನೆಗೆಲಸ ಮಾಡಬಾರದೆಂದು ಆಯಾ ಕಸಬಿನವರನ್ನು ಬಹಿಷ್ಕಾರ ಹಾಕಿಸುವದಲ್ಲದೆ, ನದಿಗೆ (ಕೃಷ್ಣಾ) ಸ್ನಾನಕ್ಕಾಗಲೀ ನೀರಿಗಾಗಲೀ ಹೋಗುವ ಹೆಣ್ಣುಮಕ್ಕಳನ್ನು ಮುಟ್ಟುವದು, ರಾತ್ರಿಯಲ್ಲಿ ಅವರ ಮನೆಯ ಮೇಲೆ ಕಲ್ಲೊಗೆಯುವದು ಇವೇ ಮುಂತಾದ ಹಿಂಸೆಯ ಕೃತ್ಯಗಳನ್ನು ನಡೆಸಿದ್ದಾರೆ. ಊರ ತಂದೆತಾಯಿಗಳಂತೂ ಸರಿಯೇ ಶಾಂತತಾರಕ್ಷಕರಾದ ಪೋಲಿಸರು ಕಣ್ಣು ಮುಚ್ಚಿಕೊಂಡಿರುವರೇ ಎಂಬ ಪ್ರಶ್ನವು ಸಹಜವಾಗಿ ಹೊರಡುತ್ತದೆ.

ಉಗ್ರ ಭಾಷಣ ಮಾಡುವಂಥವರಿಗೆ ಕೋರಡೆಯಿಂದ ಹೊಡೆಯಬೇಕು

ಮುಂಬಯಿಯಲ್ಲಿ ಕೂತ ಹಿಂದೂ ಮುಸಲಮಾನ ದಂಗೆಯ ಕಮೀಟಿಯ ಮುಂದೆ ಕಾರೋನರರಾದ ಮಿ. ಅರವಲಿಯವರ ಸಾಕ್ಷಿಯಾಯಿತು. ಉಪದ್ರವು ಕೊಂಕಣಸ್ಥರಿಂದ ಶಾಂತಿ ಕೆಟ್ಟಿರುವದಾಗಿರುತ್ತದೆ ದಂಗೆಯಾಯಿತೆಂದರೆ ಪೋಲೀಸ ಚಿಕ್ಕ ದೊಡ್ಡ ಅಮಲದಾರರು ಪೋಲೀಸ ಅಕ್ಟಿನ ಆರನೇ ಕಲಮಿನ ಅಧಿಕಾರ ಉಪಯೋಗಿಸಿ ಅಂಥವರನ್ನು ಹಿಡಿದು ದಂಗೆಗಾರರನ್ನು ಹದಾಸಬೇಕು ಮತ್ತು ದಂಗೆಗೆ ಉತ್ತೇಜನ ಕೊಡುವಂತೆ ಭಾಷಣ ಮಾಡತಕ್ಕವರನ್ನು ಮ್ಯಾಜಿಸ್ಟ್ರೇಟರ ಮುಂದೆ ಹಿಡಿಸಿ ಮ್ಯಾಜಿಸ್ಟ್ರೇಟರು ಫಟಕೆಯ ಶಿಕ್ಷೆ ವಿಧಿಸಬೇಕೆಂದು ಜವಾಬು ಕೊಟ್ಟಿದ್ದಾರೆ.

ಕೌನ್ಸಿಲ ಮೆಂಬರರ ಮೇಲೆ ಕೊಲೆಯ ಆರೋಪ.

—(೦)—

ಸಿಂಧದಲ್ಲಿ ಥರ ಮತ್ತು ಪಾರಕರ ಜಿಲ್ಹೆಯಲ್ಲಿ ಕೌನ್ಸಿಲ ಮೆಂಬರಾಗಿದ್ದಂಥ ಶ್ರೀಮಂತ ಜಮೀನದಾರರಾಗಿರುವ ಅರಬಾಬ ಅಲಿಸಾಹೇಬರನ್ನು ಕೊಲೆ ಮತ್ತು ಬೇರೆ ಆರೋಪಗಳಿಂದ ಪೋಲೀಸರು ದಸ್ತಗಿರ ಮಾಡಿದ್ದಾರೆ

ಮೃತ್ಯು-

ದರಭಂಗಾದ ಮಹಾರಾಜರಾದ ಶ್ರೀಮಂತ ರಾಮೇಶ್ವರಸಿಂಗರವರು ಸ್ವರ್ಗಸ್ಥರಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಗೋವೆಯ ಲಾಟರಿಯ ಕೃತ್ರಿಮ ಟಿಕೇಟು ಮಾರುತ್ತಿದ್ದಂಥ ಇಬ್ಬರನ್ನು ಮುಂಬಯಿಯ ಪೋಲೀಸರು ಹಿಡಿದಿದ್ದಾರೆ ಇವರ ಹತ್ತರ ೭೫ ಸಾವಿರದ ಗಳಿಗೆಯ ಟಿಕೇಟುಗಳು ದೊರೆತವು.

ಬಿಕಾನೇರ ಸಂಸ್ಥಾನದ ಮೇಜರ ಹಿಂತೆಯ ಮಂತ್ರಿಯಾದ ಠಾಕುರ ಸಾಹೇಬರು ಪತ್ನಿಸಹಿತ ಮೇಜವಾನಿ ಊಟಕ್ಕೆ ಹೋಗುತ್ತಿದ್ದಾಗ ದಾರಿಯಲ್ಲಿಯೇ ಉಸಲು ಬಂದಾಗಿ ಪರಲೋಕವಾಸಿಯಾದರು.

ಶ್ರೀ ವಿದ್ಯಾರಣ್ಯರ ಪುಣ್ಯತಿಥಿ

ಉತ್ಸವದ ಕಾರ್ಯಕ್ರಮ.

ಸ್ಥಳ:- ಸದರ್ನ ಮರಾಠಾ ಅರ್ಬನ
ಬ್ಯಾಂಕಿನ ಅಟ್ಟ
ವೇಳೆ:- ಸಾಯಂಕಾಲ ೭ ಗಂಟೆ
ತಾರೀಖು ೭-೭-೨೯ ರವಿವಾರ
ಉತ್ಸವದ ಸಮಾರೋಪವು ಮತ್ತು ಬಾಲಭಾರತಿ
ಕುಮಾರಿ ಯದುಗಿರಿಯಮ್ಮನ
"ಸತ್ಯನಾರಾಯಣ" ವಿಷಯವಾಗಿ ಕೀರ್ತನೆ.

ಜುಲೈ ೭ ನೆಯ ತಾರೀಖು

ಪರದೇಶಿ ವಸ್ತ್ರ ಬಹಿಷ್ಕಾರ ಕಮಿಟಿಯವರು ಜುಲೈ ೭ ನೇ ತಾರೀಖನ್ನು ಅಂದರೆ ಜುಲೈ ತಿಂಗಳ ಮೊದಲನೇ ಆದಿತ್ಯವಾರವನ್ನು "ಬಹಿಷ್ಕಾರ ದಿನ" ವನ್ನಾಗಿ ಆಚರಿಸಬೇಕೆಂದು ನಿರ್ಣಯಿಸಿದ್ದಾರೆ.

ಅಂದು-

೧ ಮನೆಮನೆಗೆ ಹೋಗಿ ಖಾದೀ ಬಟ್ಟೆಯನ್ನು ಮಾರುವದು

೨ ಸಭೆ ಕೂಡಿಸಿ ಬಹಿಷ್ಕಾರ ಹಾಕುವದರ ಬಗ್ಗೆ ಜನರ ಮನ ಒಪ್ಪಿಸುವದು.

೩ ಊರಿನಲ್ಲಿ ನಗರಸಂಕೀರ್ತನೆಗಳನ್ನು ಹೊರಡಿಸುವದು

೪ ಇನ್ನು ಮೇಲೆ ಪರದೇಶೀ ಬಟ್ಟೆ ತರಿಸದಂತೆ ಜನರ ಮನ ಒಪ್ಪಿಸುವದು.

ಇವೇ ಮೊದಲಾದ ಕಾರ್ಯಗಳನ್ನು ಮಾಡಿ, ನಿಮ್ಮ ಜಿಲ್ಹೆಯ ಕಾಂಗ್ರೆಸ ಕಮಿಟಿಗಳಿಗೆ ಆ ಪ್ರಕಾರ ತಿಳಿಸಿ ರಾಷ್ಟ್ರಕಾರ್ಯಕ್ಕೆ ನೆರವಾಗಿರಿ.

ಧಾರವಾಡ

ಗುಜರಾಥದವರಾದ ಮಿ. ವಕೀಲರು ದಕ್ಷಿಣಭಾಗದ ಎಜ್ಯುಕೇಶನಲ ಇನ್ಸಪೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ಮಿ. ಕೌಂಡಿನ್ಯರವರು ಇಲ್ಲಿಯ ಕಲೆಕ್ಟರರ ಹಪೀಸಿನಲ್ಲಿ ಆಸಿಸ್ಟಂಟರಾಗಿ ನೇಮಿಸಲ್ಪಟ್ಟಿದ್ದಾರೆ

ಡಿ|| ಲೋ|| ಬೋರ್ಡಿನ ಸ್ಕೂಲ ಕಮಿಟಿಯವರು ಸಂಬಳ ದೊರೆಯದ ಕೂತ ಶಿಕ್ಷಕರಿಗೆ ಸಂಬಳ ಕೊಡಬೇಕೆಂಬದಾಗಿ ಠರಾವು ಮಾಡಿದಂತೆ ತಿಳಿಯುತ್ತದೆ.

ಧಾರವಾಡ ಬ್ಯಾಂಕ ಲಿಮಿಟೆಡ್.

ನೋಟೀಸು.

ಧಾರವಾಡ ಬ್ಯಾಂಕ ಲಿಮಿಟೆಡ್ ಶೇರಹೋಲ್ಡರ ಜನರ ೩೩ ನೇ ವಾರ್ಷಿಕ ಸಾಧಾರಣ ಸಭೆಯು ಬ್ಯಾಂಕಿನ ಕಚೇರಿಯಲ್ಲಿ ತಾರೀಖು ೧೪ ನೇ ಜುಲೈ ೧೯೨೯ ಇಸವಿ ರವಿವಾರ ದಿವಸ ಮಧ್ಯಾಹ್ನ ೨ ಘಂಟೆಗೆ ಕೂಡುವದು.

ಸಭೆಯಲ್ಲಿ ನಡೆಯುವ ಕೆಲಸದ ಯಾದಿ.

(೧) ೩೧-೩-೧೯೨೯ ಕ್ಕೆ ಮುಗಿಯುವ ವರ್ಷದ ಬಗ್ಗೆ ಆಢಾವೆ ಮತ್ತು ಡಾಯರೆಕ್ಟರರ ರಿಪೋರ್ಟಿನ ವಿಚಾರಣೆ ವ ಮಂಜೂರಿ.

(೨) ಡಿವ್ಹಿಡೆಂಡ ಠರಾಯಿಸುವದು.

(೩) ಡಾಯರೆಕ್ಟರರ ಖಾಲೀ ಆದ ಜಾಗೆ ಭರಾಯಿಸುವದು.

(೪) ಮುಂದಿನ ವರ್ಷದ ಬಗ್ಗೆ ಆಡಿಟರರನ್ನು ನೇಮಿಸುವದು.

(೫) ಮ್ಯಾನೇಜಿಂಗ ಡಾಯರೆಕ್ಟರರು ಸಭೆಯ ಮುಂದೆ ತಂದ ಇತರ ಯಾವದಾದರೂ ವಿಷಯವು.

ಧಾರವಾಡ.
ತಾ|| ೨೭-೬-೧೯೨೯.

ಅಣ್ಣಾಚಾರ್ಯ ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ.

ನಿನ್ನೆಯ ದಿನ ಇಲ್ಲಿ ಶ್ರೀ ಶಂತೇಶ ವಾಚನಾಲಯದ ವರವಾಗಿ ಪ್ರಾರಂಭವಾಗಿರುವ ಶ್ರೀ ವಿದ್ಯಾರಣ್ಯರ ಉತ್ಸವದ ಮೊದಲನೆಯ ದಿನದ ಕಾರ್ಯಕ್ರಮವು ಜರುಗಿತು.

ವೇ|| ನ್ಯಾಯರತ್ನ ನಾಗೇಶಶಾಸ್ತ್ರಿಗಳವರ ವಿದ್ಯಾರಣ್ಯರೂ ಧರ್ಮವೂ ಎಂಬ ವಿಷಯ ಪ್ರವಚನವಾಯಿತು. ಹೊಸಪೇಟೆಯ ರಾ. ಬ. ಸಿ. ಹನುಮಂತಗೌಡರು ಹಾಗೂ ಶ್ರೀ ಹರ್ಡೀಕರ ಮಂಜಪ್ಪನವರಿಂದ ಬಂದ ಪ್ರಬಂಧಗಳೂ ಓದಲ್ಪಟ್ಟವು. ಶ್ರೀ ರಾಜಪುರೋಹಿತರು ವಿದ್ಯಾರಣ್ಯರ ರಾಷ್ಟ್ರೀಯ ಜೀವನ ಎಂಬ ವಿಷಯವಾಗಿ ನಿಬಂಧವನ್ನೋದಿದರು.

ಚಂದಾದಾರರಿಗೆ ಸೂಚನೆ

ಜುಲೈ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ಸುಸಮಯ

ವಿ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ. (ಕೊಳ್ಳೇಗಾಲ ಬ್ರ್ಯಾಂಚ) ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಜಾಹೀರ ನೋಟೀಸು

ಯಾವತ್ತು ಜನರಿಗೆ ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ-

ಕೆಳಗೆ ಸಹಿಮಾಡಿದ ರಾಜೇಸಾಬ ವಲ್ಲದ ಹುಶೇನಸಾಬ ಕುಸುಗಲ್ಲ ನಾನು ಯಾವತ್ತೂ ಜನರಿಗೆ ನೋಟೀಸು ಕೊಡುವದೇನಂದರೆ- ನನ್ನ ಸೋದರಮಾವನಾದ ಮೈತ ಮೋದೀನಸಾಹೇಬ ವಲ್ಲದ ಬಾಕ್ಸಸಾಬ ಒಹಾರ ಇವರ ಮಕ್ಕಳ ಪೈಕಿ ಅಬ್ದುಲಜ್ಯಾಕ ಈತನು ನನ್ನ ಹತ್ತಿರ ಇದ್ದು ಸಂರಕ್ಷಣೆ ಆಗಿ ವಿಲಿಕಡಿಗೆ ಕೆಟ್ಟ ಜನರ ಸಂಗತಿಯಲ್ಲಿ ಅಡ್ಡ್ಯಾಡಲಿಕ್ಕೆ ಹತ್ತಿರುತ್ತಾನೆ ಈತನು ಅಲ್ಪವಯಿ ಇರುವದಲ್ಲದೆ ಆತನ ತಲೆಕೆಟ್ಟಿದ್ದು ಆತನಿಗೆ ತನ್ನ ಹಿತ ಯಾವದು ಅಹಿತ ಯಾವದು ಅಂಬೋದು ತಿಳಕೊಳ್ಳುವ ಸಾಮರ್ಥ್ಯವಿಲ್ಲ ಆತನ ಕೂಡಾ ಯಾರೂ ಯಾವ ತರದ ಲೇವಾದೇವಿ ಅಗರ ವ್ಯವಹಾರಮಾಡಬಾರದು. ಮಾಡಿದರೆ ಆ ಲೇವಾದೇವಿ ಅಗರ ವ್ಯವಹಾರವು ಬೇಕಾಯದೇಶೀರ ವ ರದ್ದಬಾತಲ ನಿರುಪಯೋಗ ಆಗಿ ಆತನ ಮೇಲೆಯೂ ಆತನ ಸಂಬಂಧಿಕರ ಮೇಲೆಯೂ ವ ನನ್ನ ಮೇಲೆಯೂ ಯಾವ ರೀತಿಯಿಂದಾನೂ ಬಾಂಧಿಲಾಯಿಸಲಾರದು ತಿಳಿಯುವದು.

ತಾ|| ೬-೭-೧೯೨೯ ಇಸ್ವಿ

ಸಹಿ- ರಾಜೇಸಾಬ ವಲ್ಲದ ಹುಶೇನಸಾಬ ಕುಸೂಗಲ್ಲ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. L. 1143

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ರವಿವಾರ ತಾರೀಖು ೭ ನೇ ಜುಲೈ ೧೯೩೫ {ಸಂಚಿಕೆ ೧೫೮

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ.

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಬ್ಬೊಬ್ಬರಿಂದ ತೆಗೆದುಕೊಳ್ಳಲ್ಪಡುವವು- ಒಬ್ಬಿದರ ರೂ. ೩|| ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಒಬ್ಬಿದರ ೩|| ರೂ.

ಸೇವಿಂಗ್ಸ ಬ್ಯಾಂಕ:— ಒಬ್ಬೊಬ್ಬರಿಂದ ತೆಗೆದುಕೊಳ್ಳಲ್ಪಡುವವು- ಒಬ್ಬಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

ಬಂಗಾರದ ದಾಗೀನಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಒಬ್ಬಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಬದಗಿಸಿ ಕೊಡುವದರಲ್ಲಿ ಬರುವದು. ಒಬ್ಬಿ ಹಾಗೂ ನಫೆ ವಸೂಲ ಮಾಡಿ ಅಯಾ ತೇಗೆಗೆ ಒಮ ಹಿಡಿಯುವದರಲ್ಲಿ ಬರುವದು ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಕಡಾ ಉದರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಊರಗಳಿಗೆ ಪದ್ಧತ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ ಮೊಕದ್ದಾಂ ಪತ್ರಗಳೂ ಸದರಿ ಬ್ರ್ಯಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — **ಡಿ. ಡೊನೆಲಿ,**

ತಾ|| ೧೭-೬-೩೫ — ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ನಂ ೪- ಮಂಗಳವಾರಪೇಟೆ, ದಿವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸಾಲವು ದರದಿಂದ ತಿಂಗಳು ಮತ್ತು ಬಹಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಒಬ್ಬಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಒಬ್ಬಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲೂ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕಾಗಿ

ಕೃಷ್ಣರಾವ ವಂಕಟರಾವ ಖಂಡಿವಾಲ

ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಎಂಟು ಲಕ್ಷದ ಮೇಲುಂಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಡಿ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೭-೭-೨೯ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಪ್ರಿಯ
ಶ್ರೀ ವಸುಮತಿಯ ನಲಿಸಿರೆ ಸುಹಿತಚರಿತೆಗಳಿಂ ॥
ದೀ "ವಿಜಯಂ" ಶ್ರೀಕರಣ ।
ನಾವಿಹಿತಂಗಳ ವಿವರಿಸಿನಲಿಪುದು ಸಾಜಂ ॥೧॥

ಸರ ಸಾಯಮನ್ನಸಾಹೇಬರ ನಿರಾಶೆ ಮತ್ತು ನಿರುತ್ಸಾಹ.

—(೦)—

ಹಿಂದೀ ಸಾಯಮನ್ನ ಸಪ್ತರಿಗೆ ಮಂತ್ರಿಗಳು ಮಾಡಿಸಿದ ಮೇಜವಾನಿಯ ವೇಳೆಯಲ್ಲಿ ಗುಪ್ತವಾಗಿಯಾದ ಭಾಷಣಗಳ ತಾತ್ಪರ್ಯವು ಕುಸುಮಿಟ್ಟಿಗಾದರೂ ಹೊರಬೀಳಲಾರಂಭಿಸಿದೆ. ಮೂರು ಕಿವಿಗೆ ಮುಟ್ಟಿದ್ದು ಮೂರು ಲೋಕಕ್ಕೆ ಮುಟ್ಟುವದೆಂಬದು ಸಹಜವಾದದ್ದು. ಸವಿಸವಿಯಾದ ಪಕ್ವಾನ್ನಗಳನ್ನು ತಿನ್ನುವಾಗ ನಾಲಿಗೆ ಸಿಹಿಯಾಗಿ ಮನಸ್ಸಿಗೆ ವಿಷಾದವೆನಿಸುವಂಥ ಭಾಷಣವಾಡುವದು ಶಿಷ್ಟಸಾಂಪ್ರದಾಯಕ್ಕೇ ಸಮ್ಮತವಾದುದಲ್ಲ. ಜಗತ್ತಿನಲ್ಲಿ ದೊಡ್ಡವರ ಮತ್ತು ಸಣ್ಣವರ ಮನೆಯಲ್ಲಿ ಸಹ ಇದರ ಅನುಭವ ತಕ್ಕೊಳ್ಳಬಹುದು. ನಡೆದಿ ಪ್ರಕಾರ ಭೋಜನೋತ್ತರದಲ್ಲಿ ಮುಖ್ಯ ಪ್ರಧಾನರಾದ ಮಿ. ಮ್ಯಾಕಡೋನಾಲ್ಡಸಾಹೇಬರು "ಇಂಗ್ಲಂಡವು ಹಿಂದುಸ್ಥಾನದ ಮಹತ್ವಾಕಾಂಕ್ಷೆಗಳನ್ನು ಸಹಾನುಭೂತಿಯಿಂದಲೂ ಸ್ನೇಹವಾಗಿಯೂ ನೋಡುವ ಕಾಲ ಒದಗಿದೆ" ಎಂದು ಭಾಷಣ ಮಾಡಿದರು. ಇದರನಂತರ ಸರ ಸಾಯಮನ್ನರು ಅಂದದ್ದೇನಂದರೆ- ಸೆಂಟ್ರಲ ಕಮಿಟಿಯ ಹಿಂದೀ ಮೆಂಬರರ ಪ್ರಶಂಸೆಯನ್ನು ಎಷ್ಟು ಮಾಡಿದರೂ ಕುಸುವೇ. ಇವರು ನಿಜವಾಗಿ ಉದಾರಿಗಳಿದ್ದರು. ಏಕೆಂದರೆ- ಸ್ವದೇಶಿಯರಿಂದ ಬೇಕಾದಂಥ ವಿರೋಧ ಬಂದರೂ, ನಮ್ಮ ಕೂಡ ಸಹಕಾರ ಮಾಡಿದ್ದಾರೆ. ಹಿಂದೀ ಜನರ ಬಹಿಷ್ಕಾರವು ಸಾಮಾನ್ಯವಾಗಲಿಲ್ಲ. ಪ್ರಚಂಡವಾಯಿತು. ಮತ್ತು ಬಹಿಷ್ಕಾರವಾದಿಗಳ ಅಪಕಾರವು ನಮ್ಮಗೂ ನಮ್ಮ ಕೂಡ ಕೆಲಸಮಾಡುವಂಥವರಿಗೂ ಕಟುತರವೆನಿಸಿತು." ಹಿಂದುಸ್ಥಾನದಲ್ಲಿ ಕ್ಷುನಾನಾದ ಸ್ತ್ರೀಯರಂತೆ ಪೋಲಿಸರ ಬಂದೋಬಸ್ತಿನಲ್ಲಿ ತಿರುಗಾಡಿದ ಸಾಹೇಬರಿಗೆ ವಿಲಾಯತಿಗೆ ಹೋದನಂತರ ಬಹಿಷ್ಕಾರದ ತೀಕ್ಷ್ಣತೆಯು ಹೃದ್ರೋಗದಂತೆ ಹತ್ತಿದ್ದು ವಿಷಾದಕರವು. ಸಾಹೇಬರು ಬಹಿಷ್ಕಾರ, ಅದರಿಂದುಂಟಾದ ಕಷ್ಟವನ್ನು ದೂರಮಾಡಲು ಹಿಂದೂ ಜನರ ರಾಜಕೀಯ ಮಹತ್ವಾಕಾಂಕ್ಷೆಯನ್ನು ಪೂರ್ಣಮಾಡುವದೊಂದೇ ರಾಮಬಾಣ ಉಪಾಯವಾಗಿರುತ್ತದೆ.

—— ——

ರಾಜಕೀಯ ಶಿಕ್ಷಣದ ಬೋನರ ಲಾ ಕಾಲೇಜ.

——)(೦)(——

ಬೋನರ ಲಾ ಎಂಬ ಹೆಸರಿನ ಸಾಹೇಬರು ಇಂಗ್ಲಂಡದ ಮುಖ್ಯ ಪ್ರಧಾನರಾಗಿ ಹೋದರು. ಇವರು ದಿವಂಗತರಾಗಿ ಐದು ವರ್ಷಗಳಾದವು. ಇವರು ಕಾನ್ಸರವೇಟಿವ್ಹ ಪಕ್ಷಕ್ಕೆ ಸೇರಿದವರು. ಇವರ ಸ್ಮಾರಕವೆಂದು ಕಾನ್ಸರವೇಟಿವ್ಹ ಪಕ್ಷದವರು ಒಂದು ಕಾಲೇಜ ತೆರೆಯುವಷ್ಟು ದ್ರವ್ಯ ಕೂಡಿದೆ. ಈ ದ್ರವ್ಯದಿಂದ ಸಾಹೇಬರ ಹೆಸರಿನಿಂದ ಒಂದು ಕಾಲೇಜ ತೆರೆಯುವ ಸಮಾರಂಭವನ್ನು ಮಿ. ಬಾಲ್ಡವಿನಸಾಹೇಬರು ನೆರವೇರಿಸಿದರು. ಈ ಕಾಲೇಜದಲ್ಲಿ ಕಾನ್ಸರವೇಟಿವ್ಹ ರಾಜನೀತಿಯನ್ನೇ ಕಲಿಸುವರು. ಲಿಬರಲ ಅಥವಾ ಲೇಬರ ತತ್ವಗಳನ್ನು ಕಲಿಸುವದಿಲ್ಲ. ಅಥವಾ ಆ ಸಂಗಡಿಗರ ವಿದ್ಯಾರ್ಥಿಗಳನ್ನು ತಕ್ಕೊಳ್ಳುವದಿಲ್ಲ. ಇದೊಂದು ರಾಜಕೀಯ ದ್ವೈತಾದ್ವೈತವು.

ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಶಿಕ್ಷಣ ಕೊಡುವದಕ್ಕಾಗಿ ಲೋಕಮಾನ್ಯರ ಹೆಸರಿನಿಂದ ಹಲವು ಸ್ಥಳಗಳಲ್ಲಿ ಶಿಕ್ಷಣ ಗೃಹಗಳುಂಟು. ಅವುಗಳ ಮೇಲೆ ಆಳರಸರ ಕೋಪವೆಷ್ಟು? ಗುಪ್ತ ಪೋಲೀಸರು ಸುದರ್ಶನಚಕ್ರದಂತೆ ಅವುಗಳ ಮೇಲಿರುವರು. ಕಾನ್ಸರವೇಟಿವ್ಹ ತತ್ವಗಳಂತೆ ರಾಷ್ಟ್ರೀಯ ತತ್ವಗಳನ್ನು ಕಲಿಸುವದು ತಪ್ಪೇ? ಅಪರಾಧವೇ? ಈ ತಾರತಮ್ಯವು ಸ್ವತಂತ್ರ ಮತ್ತು ಪರತಂತ್ರದ ದೆಸೆಯಿಂದಿರುತ್ತದೆಂದು ಯಾರಿಗಾದರೂ ಹೇಳಿಯುವಂತಿದೆ

—— ——

ಲೋಣಾಡದಲ್ಲಿ ಮುಸಲಮಾನರ ಅತ್ಯಾಚಾರ

—(೦)—

ಪಂಜಾಬ ಪ್ರಾಂತದಲ್ಲಿರುವ ಲೋಣಾಡ ವೆಂಬಗ್ರಾಮವು ಶಿವಸಾನ್ನಿಧ್ಯದಿಂದ ಪವಿತ್ರವಾದದ್ದು. ಅಲ್ಲಿಯ ಮುಸಲಮಾನರು ಕಾರಣವಿಲ್ಲದೆ ಹಿಂದೂ ಜನರ ಮದಿವೆಯ ಮೆರವಣಿಗೆಯಮೇಲೆ ಹಲ್ಲೆಮಾಡಿ ಅನೇಕರನ್ನು ದೊಣ್ಣೆಗಳಿಂದ ಹೊಡೆದರು. ಶಿವಾಲಯದಲ್ಲಿ ಹೊಕ್ಕು ಮೂರ್ತಿಯನ್ನು ಭಿನ್ನ ಮಾಡಿದರು. ಹಣಮಪ್ಪನ ಕೋಳಿಗಳಲ್ಲಿ ಎಲುಬುಗಳ ಸರಹಾಕಿದರು. ಕೌನ್ಸಿಲದ ಹಿಂದೂ ಮೆಂಬರರಿಗೆ ಕೊಲ್ಲುವ ಭಯಹಾಕಿದ ಮೂಕ ಪತ್ರಬರೆದಿರುವರು.

—— ——

ಗುಂಡು ಹಾಕಬೇಡಿರಿ; ನಮ್ಮ ಮೋಟಾರನಲ್ಲಿ ಸರೆ, ಬ್ರಾಂಡಿ ಇಲ್ಲ!!

—(೦)—

ಅಮೇರಿಕೆಯ ಸಂಯುಕ್ತ ಸಂಸ್ಥಾನ ಮತ್ತು ಕೆನಡಾದ ನಡುವಿರುವ ಸೀಮೆಯಲ್ಲಿ ಕಾನಡಾದಿಂದ ಬರುವ ಮೋಟಾರಗಳು ಬ್ರಾಂಡಿ, ವ್ಹಿಸ್ಕಿ ತರುತ್ತವೆಂದು ಅಮೇರಿಕೆಯ ಪೋಲೀಸರು ಮೋಟಾರಗಳ ಮೇಲೆ ಗುಂಡು ಹಾಕುವರು. ನಮ್ಮ ಮೋಟಾರಿನಲ್ಲಿ ಸಾರಾಯಿ ಇರುವದಿಲ್ಲ. ಗುಂಡು ಹಾಕಬೇಡಿರೆಂದು ಮೋಟಾರಿನವರು ದೊಡ್ಡ ದೊಡ್ಡ ಬೋರ್ಡಗಳನ್ನು ಹಚ್ಚಿಕೊಂಡು, ಸರಸದ್ದು ಓಡಿಸುತ್ತಿದ್ದಾರೆ.

—— ——

ಮಹಾತ್ಮರಿಗೆ ಮಾನಪತ್ರ ಕೊಡಬಾರದೆಂದು ಮುಸಲಮಾನರ ಚಳವಳಿ

—(೦)—

ಸ್ವಲ್ಪ ದಿವಸದಲ್ಲಿ ಮಹಾತ್ಮರು ದಿಲ್ಲಿಗೆ ಹೋಗುವರು. ಮ್ಯುನಿಸಿಪಾಲಿಟಿಯಲ್ಲಿ ಇವರಿಗೆ ಮಾನಪತ್ರ ಕೊಡಬೇಕೆಂದು ಠರಾವು ಬಂದಿತು. ಮಹಾತ್ಮರು ನೆಹರೂ ಸ್ವರಾಜ್ಯ ರಿಪೋರ್ಟನ ಪುರಸ್ಕರ್ತರಿದ್ದಾರೆ. ನೆಹರೂ ರಿಪೋರ್ಟು ಮುಸಲಮಾನರ ಹಿತಸಂಬಂಧಗಳಿಗೆ ಬಾಧಕವಾಗಿರುತ್ತದೆ. ಕಾರಣ ಮಾನಪತ್ರ ಕೊಡಬಾರದೆಂದು ಮುಸಲಮಾನರು ವಿರೋಧ ಬೆಳೆಸಿದರು. ಜುಲಾದ ಮಾನಪತ್ರವೇ ಅಗತ್ಯವಿಲ್ಲೆಂದು ಹಿಂದೂ ಮೆಂಬರರು ಈ ವಿಚಾರವನ್ನು ರಹಿತ ಪಡಿಸಿದರು. ಒಂದು ಕಾಲದಲ್ಲಿ ಮಹಾತ್ಮರ ಸೇವಕರಾಗಿದ್ದ ಮುಸಲಮಾನರು ಮಹಾತ್ಮರನ್ನು ಈ ರೀತಿ ಮಾಡುವದು ಕಾಲಮಹಿಮೆಯೇ ಸರಿ.

—— ——

ಚೀನದಲ್ಲಿ ಭೂಸೇನೆಯಂತೆ ಜಲಸೇನೆಯನ್ನು ಕಟ್ಟಿಸಲು ಆ ಸರಕಾರದವರು ಅನೇಕ ಯುದ್ಧದ ಹಡಗಗಳನ್ನು ಕಟ್ಟಲು- ಇಂಗ್ಲಿಷ ಸರಕಾರಕ್ಕೆ ಕಾಂಟ್ರಾಕ್ಟು ಕೊಟ್ಟಿದ್ದಾರೆ.

—— ——

ಅಸೆಂಬ್ಲಿಯ ಬಾಂಬಿನ ಪ್ರಕರಣದಲ್ಲಿ ಶಿಕ್ಷೆ ಅನುಭವಿಸುತ್ತಿರುವ ಭಗತಸಿಂಗ ಮತ್ತು ದತ್ತರು ಅನ್ನಬಿಟ್ಟು ೧೭ ದಿವಸವಾಯಿತು. ಜೇಲಿನ ಅಧಿಕಾರಿಗಳು ಕೃತ್ರಿಮ ಮಾರ್ಗದಿಂದ ಇವರ ಹೊಟ್ಟೆಯಲ್ಲಿ ಹಾಲು ಹಾಕುತ್ತಿದ್ದಾರೆ

—— ——

ಆಧುನಿಕ ಕನ್ನಡ ಸಾಹಿತ್ಯ ಸೇವಕರ ಅಲ್ಪ ಪರಿಚಯ.

ಮುಂಬಯಿ ಕರ್ನಾಟಕ.

(೦)

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು)

(ಕನ್ನಡಿಗರ ಕೈಪಿಡಿ ಸಾಹಿತ್ಯಖಂಡದಿಂದ)

ಕುರಡಿ ನಾರಾಯಣರಾಯರು:-

೫೪ ಇವರು ಹವ್ಯಕ ಬ್ರಾಹ್ಮಣರು. ಕರ್ಕಿಯಲ್ಲಿ ಜನೆವರಿ ತಿಂಗಳ ೧೮೭೦ರಲ್ಲಿ ಹುಟ್ಟಿರುವರು. ಸೀನಿಯರ್ ಟ್ರೇಂಡ ಶಿಕ್ಷಕರು. ಧಾರವಾಡ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿ ಮುಖ್ಯಾಧ್ಯಾಪಕರಾಗಿರುವರು. ಕರ್ನಾಟಕ ಹಿತೈಷಿಣಿ ಗ್ರಂಥಮಾಲೆಯ ಸಂಪಾದಕರು. ಸರ್ವೋತ್ಕೃಷ್ಟ ಲೇಖಕರೂ ಮೇಲಾದ ಕವಿಗಳೂ ಆಗಿರುವರು. ಬಹುವರ್ಷಗಳಿಂದ ಕನ್ನಡಮ್ಮನ ಸೇವೆ ಶ್ರದ್ಧೆಯುಕ್ತ ಮಾಡಿರುವರು. ವಾಗ್ಭೂಷಣದ ಸಂಪಾದಕರಲ್ಲೊಬ್ಬರು. ಅನೇಕ ಪತ್ರಿಕೆಗಳಲ್ಲಿ ಅನೇಕ ಲೇಖನ ಕವಿತೆಗಳನ್ನು ಕೊಡುತ್ತ ಬಂದಿರುವರು. ಇವರು ಬರೆದ ಸಾವಿತ್ರಿ ಸತ್ಯವಾನ, ಪದ್ಮಿನಿ, ದಾಕ್ಷಾಯಣಿ ಇವೇ ಮೊದಲಾದ ಪೌರಾಣಿಕ ಐತಿಹಾಸಿಕ ಕಾದಂಬರಿಗಳು ಬಹುಲೋಕಪ್ರಿಯವಾಗಿವೆ. ಇವರ ವ್ಯಾಕರಣ ಶುದ್ಧವಾದ ಭಾಷಾಶೈಲಿಯನ್ನು ಬಹುಜನ ತಜ್ಞರು ಕೊಂಡಾಡಿದ್ದಾರೆ. ಇವರ ಪುಸ್ತಕಗಳೆಲ್ಲ ಕವಿವ. ಸಂಘದವರ ಮೆಚ್ಚುಗೆಗೆ ಪಾತ್ರವಾಗಿವೆ. ಇವರ ಕನ್ನಡ ಗೀತಾಂಜಲಿ (ಕವಿತೆ) ಮಾನುಷಧರ್ಮ ಶಾಸ್ತ್ರ, ವಿಚಾರ ವಿಲಾಸ (ಕಾದಂಬರಿ) ಶ್ರೀ ಹರ್ಷನ ನಾಟಕ (ವಿಮರ್ಶೆ) ಇವೇ ಮೊದಲಾದ ಗ್ರಂಥಗಳು ಸಿದ್ಧವಾಗಿದ್ದು ಬೇಗನೇ ಅಚ್ಚಾಗತಕ್ಕವಿರುತ್ತವೆ. ಸರಳತೆ, ಶುದ್ಧತೆಗಳೇ ಇವರ ಲೇಖನದ ವೈಶಿಷ್ಟ್ಯಗಳೆಂದು ನಿರ್ವಿವಾದವಾಗಿ ಹೇಳಬಹುದು. ಇವರು ಬಂಗಾಲಿ ಭಾಷೆಯನ್ನು ಅಭ್ಯಾಸ ಮಾಡಿದ್ದಾರೆ. ಇವರಿಗೆ ಮರಾಟಿ, ಹಿಂದೀ, ಇಂಗ್ಲಿಷ ಭಾಷೆಗಳು ಚನ್ನಾಗಿ ಬರುವವು.

ಮು. ನಾರಾಯಣಶರ್ಮಾ ಅವರು:-

೫೫ ಇವರು ಬರೇ "ನಾರಾಯಣಶರ್ಮಾ" ಎಂದೇ ಪ್ರಸಿದ್ಧರಿರುವರು. ದಟಕವಿಯಲ್ಲಿ ೧೮೮೯ನೇ ಇಸವಿ ಎಪ್ರಿಲ್ ತಿಂಗಳ ೧೦ನೇ ತಾರೀಖಿನಲ್ಲಿ ಹುಟ್ಟಿರುವರು. ಇವರ ಶಿಕ್ಷಣವು ಹೇಳಿಕೊಳ್ಳುವಷ್ಟು ಆಗಿರುವದಿಲ್ಲ. ಆದರೆ ಹೊಗಳಿಸಿಕೊಳ್ಳುವಂಥ ಬರಹಗಾರರಾಗಿರುವರು. ಅಚ್ಚುಕಟ್ಟಾಗಿ ಪತ್ರರು ಮನಮೆಚ್ಚುವಂತೆ ಲೇಖ ಬರೆಯುವದರಲ್ಲಿ ಇವರೊಬ್ಬರೇ ಹಿಂದಾದವರು. ಇವರ ಅಂದವಾದ ಭಾಷಾಶೈಲಿಯು ಅನುಕರಣೀಯವಾಗಿದೆ. ಇವರು ಬರೆದ "ಭಾರತೀಯರ ಇತಿಹಾಸ" ಎಂಬ ಪುಸ್ತಕವು ಕನ್ನಡದಲ್ಲಿ ಲೇಖಕರಾಗಬಯಸುವವರಿಗೆ ಆದರ್ಶಭೂತವಾಗಿರುವದು. ಇವರು ಬಹಳ ದಿವಸ ಕಾಲದಲ್ಲಿ ಅಖಿಲಕರ್ನಾಟಕದಲ್ಲೆಲ್ಲ ಗುಡುಗಾಡಿ ಕನ್ನಡಿಗರನ್ನೆಚ್ಚರಿಸಿದ "ಕರ್ನಾಟಕವೃತ್ತ" ಸಾಪ್ತಾಹಿಕದ ಸಂಪಾದಕರಾಗಿದ್ದರು. ಈಗ ಕಟಿಯವ್ವದಲ್ಲಿ ಉಪಸಂಪಾದಕರಾಗಿರುವರು. ಇವರ ಅರ್ಥಶಾಸ್ತ್ರ, ಗ್ರೀಸದೇಶದ ಇತಿಹಾಸ, ಐರ್ಲಂಡದ ಇತಿಹಾಸ, ಆತ್ಮೋದ್ಧಾರ ಮೊದಲಾದ ಗ್ರಂಥಗಳು ಅಚ್ಚುಕೂಟ ಸೇರಲು ಸಿದ್ಧವಾಗಿ ನಿಂತಿರುವವು. ನೀತಿಶಾಸ್ತ್ರವೆಂಬ ಗ್ರಂಥವನ್ನೀಗ ಬರೆಯತೊಡಗಿರುವರು. ಕರ್ಮವೀರ, ಕರ್ನಾಟಕವೃತ್ತ, ವಾಗ್ಭೂಷಣ, ಸಾಧ್ವಿ, ಬೋಧಿನಿ, ಭಕ್ತಿಸಂದೇಶ, ಸ್ವಧರ್ಮ, ಮೊದಲಾದ ಪತ್ರಿಕೆಗಳಲ್ಲಿ ಮೇಲಾದ ಲೇಖಗಳನ್ನು ಬರೆದು ಹಿರಿಯ ಬರಹಗಾರರೆಂದು ಪ್ರಖ್ಯಾತಿವುಳ್ಳವರು. ಇತಿಹಾಸವಿಷಯಕ ಹೊಸದಾದ ಲೇಖಗಳನ್ನು ಬರೆಯುವದರಲ್ಲಿಯಂತೂ ಇವರೊಬ್ಬರೇ ಹದಗಾರರು. ಇವರು ಮಾಧ್ವಬ್ರಾಹ್ಮಣರು.

ಮಿರ್ಜಿ ವೆಂಕಣ್ಣನವರು:-

೫೬ ಬೆಳಗಾವಿ ಜಿಲ್ಲೆಯ ಐನಾಪೂರದಲ್ಲಿ ಹುಟ್ಟಿರುವ ಮಾಧ್ವತರುಣರವರು. ರಾಷ್ಟ್ರನಿಷ್ಠೆಯನ್ನು ಮನ್ನಿಸಿ ಶಾಲೆ ಕಾಲೇಜುಗಳಿಗೆ ಶರಣು ಹೊಡೆದು ನಿಂತಬಂಟರು. ಪುಣೆಯ ಟಿಳಕ ವಿದ್ಯಾಪೀಠದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ವಾಙ್ಮಯ ವಿಶಾರದ ಸಕ್ರಿ ಲೇಖನ ವಿಶಾರದರೆಂಬ ಪದವಿಯನ್ನು ಪಡೆದವರು. ಬಹುದಿನಗಳಿಂದ ಕನ್ನಡಮ್ಮನ ಸೇವೆ ಮಾಡುತ್ತ ಬಂದಿರುವರು. ನವಶಕ್ತಿಯ ಲೇಖಕರಲ್ಲಿ ಒಬ್ಬರಾಗಿದ್ದರು. ಕರ್ನಾಟಕ ಸ್ವರಾಜ್ಯದ ಉಪಸಂಪಾದಕತ್ವವನ್ನು ಒಂದೆರಡು ವರ್ಷ ನಡೆಯಿಸಿರುವರು. ಈಗ ಕರ್ಮವೀರ ಪತ್ರಿಕೆಯ ಉಪಸಂಪಾದಕರಾಗಿರುವರು. ಇವರು ಸಕ್ಕಳಭಾರತ ಬ್ರಹ್ಮಚಾರ್ಯ ಎಂಬೆರಡು ಪುಸ್ತಕಗಳನ್ನು ಮರಾಟಿಯಿಂದಲೂ ಹಿಂದೀಯಿಂದಲೂ ಕನ್ನಡಿಸಿರುವರು. ಮರಾಟಿ ಭಾಷೆಯ ಪರಿಚಯವು ಇವರಿಗೆ ಚೆನ್ನಾಗಿರುವುದು. ಇವರ ನಮಗೆ ಸ್ವರಾಜ್ಯವು ಯಾಕೆ ಬೇಕು? ಎಂಬ ಪುಸ್ತಕವು ಸಿದ್ಧವಾಗಿದ್ದು ಮುದ್ರಣದ ಮಾರ್ಗ ನೋಡುತ್ತಿರುವದು. ಇವರು ಹುಟ್ಟಿದ್ದು ೧೯೦೩ನೇ ಜೂನ ೩೦ನೇ ತಾರೀಖಿನಲ್ಲಿ

ಜಯತು ವಿದ್ಯಾರಣ್ಯ

(ಧಾರವಾಡದಲ್ಲಿ ಶ್ರೀ. ವಿದ್ಯಾರಣ್ಯರ ಪುಣ್ಯ ದಿನೋತ್ಸವದ ಮೊದಲನೆಯ ದಿವಸ ಈ ಪದ್ಯವು ಅನ್ನಲ್ಪಟ್ಟಿತು)

ಜಯತು ವಿಜಯನಗರದಿ ವಿಜಯಧ್ವಜ ಮೆರಿಸಿದ ಗುರುವರ್ಯ!
ಜಯತು ವೀರ ಕರ್ನಾಟಕ ಸಿಂಹಾಸನಸ್ಥಾಪನಾರ್ಯ ||ಪಲ್ಲವಿ||
ಕನ್ನಡತಾಯಿಯು ಬನ್ನವ ತಾಳದೆ ಯವನಬಾಧೆಯಿಂದ!
ನಿನ್ನಯ ಚರಣಕೆ ಮೊರೆಯಿಡಲೀಧರೆಗಿಳಿದೆ ನಲ್ಮೆಯಿಂದ ||೧||
ಸಿರಿಯನೆಲ್ಲ ಚಿನ್ನದ ಸರಿಯನು ನೀ ಸುರಿಸುತೆ ದೇಶದೊಳು!
ತರಿದು ಜನರ ದಾರಿದ್ರ್ಯವ, ತುಂಬಿದೆ ಪುರುಷನು ಯುವಕರೊಳು ||೨||
ತರುಣ ಜನಾಸೆಯಿಡಗೊಂಡು ಯವನರನು ತರಿದು ಕೂರಸಿಯಿ!
ಸಿರಿಯ ರಾಜ್ಯ ನೆಲೆಗೊಳಿಸಿ ಕನ್ನಡಿಗರನ್ನು ಪೊರೆದೆ ದಯದಿ ||೩||
ಹುಕ್ಕನ ದೊರೆತನ ನಿನ್ನ ಕೃಪೆಯಿಂ ಚೊಕ್ಕಟತರವಾಯ್ತು!
ನೆಕ್ಕಿ ನಡೆವ ಮಿಕ್ಕವರೆದೆಯ ಹುಡಿಮಾಡುಕ್ಕಿಸುವಂತಾಯ್ತು ||೪||
ನಿನ್ನಾಳಿಕೆಯಿಂ ಕನ್ನಡನಾಡಿನ ಕೀರ್ತಿಯು ಮೂಜಗದ!
ಚೆನ್ನದಂತೆ ಪಸರಿಸುತೆ ಪೊಗೆಸುಂ ಬೀರಿತು ಜನಮನದಿ ||೫||
ನೀನಾಳಿದ ಕನ್ನಡನಾಡಿದು ತಾ ಹಾಳಾಗಿರುವೀಗ!
ದೀನನಾಥ ಮೊರೆಬಂದೆವು ಮಾಧವ ಪೊರೆಯಲು ಬಾ ಬೇಗ ||೬||

ಕನ್ನಡಿಗರ ಕೂಟದ ರಾಮು-

[ಈ ಕವಿತೆಯನ್ನು "ನಾಡದೇವಿ" ಯಿಂದ ಆರಿಸಿಕೊಂಡಿದೆ]

ಸಿಂಧದ ಕಾಂಗ್ರೆಸ ಕಮೀಟಿಯವರು ಮೌ. ವಜ್ಯಾಕಡೋನಾಲ್ಡ ಸಾಹೇಬರ ಹೆಸರನ್ನು ಲಾಹೋರಿನ ಕಾಂಗ್ರೆಸದ ಅಧ್ಯಕ್ಷಸ್ಥಾನಕ್ಕೆ ಸೂಚಿಸಿದ್ದಾರೆ.

ಹೈದರಾಬಾದಿನಿಂದ ವಾಡಿಗೆ ರೇಲ್ವೆಯಲ್ಲಿ ಬರುತ್ತಿದ್ದ ಒಬ್ಬ ಫರ್ಸ್ಟಕ್ಲಾಸ ಪ್ರಯಾಣಿಕನ ಪದಸಾವಿರದ ಗಂಟು ಕಳವಾಗಿ ಹೋಯಿತು.

ಇಂಗ್ಲಂಡದಲ್ಲಿ ವೃಷ್ಟಿಯು-

ಇಂಗ್ಲಂಡದಲ್ಲಿಯೂ ಭಯಾನಕರೆನಿಸುವಂಥ ಮೋಡ ಹಾಕಿ, ಗುಡುಗು ಸಿಡ್ಲಿನಿಂದ ಜನರು ಹೌಹಾರಿದರು.- ಅನಂತರ ಸಂಪೂರ್ಣ ದ್ವಾರವಾಗಿ ಮಳೆ ಸುರಿಯಿತು ಒಣಗಿದ ಸ್ಥಿತಿಯಲ್ಲಿದ್ದ ಥೇಮ್ಸ ನದಿಯು ತುಂಬಿ, ಹೊರಸೂಸಿ ಹರಿಯಿತು.

ಜಾಹೀರ ನೋಟೀಸು

—(೧)—

ಯಾವತ್ತು ಜನರಿಗೆ ತಿಳಿಸುವದೇನಂದರೆ-

ಧಾರವಾಡ ಜಿ|| ರಾಣೆಬೆನ್ನೂರ ತಾಲ್ಲೂಕ ಪೈಕಿ ಚಾಕೋಳೆ ಗ್ರಾಮದಲ್ಲಿ ಇರತಕ್ಕ ನನ್ನ ಮಾಲ್ಕಿ ವಹಿವಾಟಿಯುಳ್ಳ ಮಾಳಿಗಿ ಮನಿ ಇದರ ಚಕಬಂದಿ ಪೂರ್ವಕ್ಕೆ ಬಸವ್ವಾ ತಳವ್ವಾರ ಇವರ ಮನಿ ಪಶ್ಚಿಮಕ್ಕೆ ಕುರುಬರ ಭೀಮಣ್ಣನ ಮನಿ ಉತ್ತರಕ್ಕೆ ಹನುಮವ್ವಾ ತಳವ್ವಾರ ಇವಳ ಬೈಲು ಜಾಗಾ ದಕ್ಷಿಣಕ್ಕೆ ಹಗ್ಗಪ್ಪ ಹಿತ್ತಲಮನಿ ಇವನ ಜಾಗಾ ಈ ಮಧ್ಯದಲ್ಲಿರೋ ಮನಿಯನ್ನೆ ಈಗ ಸದರಿ ಮನಿಯಲ್ಲಿ ಗ್ರೈಣ ಹಕ್ಕಿನಿಂದ ವಾಸವಾಗಿರುವಂಥ ದುರಗವ್ವಾ ತಂದಿ ಅಸ್ನಪ್ಪಾ ತೆಂಬದವರ ಎಂಬವಳು ಸದರ ಮನಿಯನ್ನು ಯಾವದಾದರೂ ತರದಿಂದ ವಿಲೇವಾಟ ಮಾಡುವ ಸಂಭವವದೆ ಕಾರಣಾ ಸದರಿಯವಳ ಕಡಿಂದ ಸದರಿ ಮನಿಯನ್ನು ಯಾರೂ [illegible] ಖರೇದಿ ವಾಸ ವಗೈರೆ ತರದಿಂದ [illegible] ದು ಬರ ತಕ್ಕೊಂಡರೆ ಸದರ ವಿಲೇವಾ[illegible] ತರದಿಂದಲೂ ನಡೆಯಲಾರದು ಅದು [illegible] ಅಂತ ತಿಳಿಯುತ್ತೇನೆ ಯಾರಾದರೂ ತಕ್ಕೊಂಡರೆ ಅವರು ಲುಕ್ಸಾನಕ್ಕೆ ಗುರಿಯಾಗುವರು ತಿಳಿಯುವದು ತಾ|| ೪-೭ ೧೯೨೮

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಕರಿಯಪ್ಪಾ ತಂದಿ ಭೀಮ[illegible] ಕುರುಬ ಭೀಮಣ್ಣನವರ ಸಾ|| ಚಾಕೋಳೆ ಈತ [illegible] ಅದೆ

ಚಂದಾದಾರರಿಗೆ ಸೂಚನೆ

ಜುಲೈ ೩೦ ರಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ನಮ್ಮ ಪತ್ರದ ಚಂದಾದಾರರ ಹೆಸರಿನಿಂದ ರೂ. ೩, ಯನ್ನು ಕಳಿಸುವವು. ಚಂದಾದಾರರು ರೂ. ೩. ಸ್ವೀಕರಿಸಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ಸ್ವಾಗತವು

ಎ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, (ಕೊಳ್ಳೇಗಾಲ ಬ್ರ್ಯಾಂಚ) ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಧಾರವಾಡ ಬ್ಯಾಂಕ ಲಿಮಿಟೆಡ್.

ನೋಟೀಸು.

ಧಾರವಾಡ ಬ್ಯಾಂಕ ಲಿಮಿಟೆಡ್ ಶೇರಹೋಲ್ಡರ ಜನರ ೩೩ ನೇ ವಾರ್ಷಿಕ ಸಾಧಾರಣ ಸಭೆಯು ಬ್ಯಾಂಕಿನ ಕಚೇರಿಯಲ್ಲಿ ತಾರೀಖು ೧೫ ನೇ ಜುಲೈ ೧೯೨೮ ಇಸವಿ ರವಿವಾರ ದಿವಸ ಮಧ್ಯಾನ್ಹ ೨ ಘಂಟೆಗೆ ಕೂಡುವದು.

ಸಭೆಯಲ್ಲಿ ನಡೆಯುವ ಕೆಲಸದ ಯಾದಿ.

(೧) ೩೧-೩-೧೯೨೮ ಕ್ಕೆ ಮುಗಿಯುವ ವರ್ಷದ ಬಗ್ಗೆ ಆಢಾವೆ ಮತ್ತು ಡಾಯರೆಕ್ಟರರ ರಿಪೋರ್ಟಿನ ವಿಚಾರಣೆ ವ ಮಂಜೂರಿ.

(೨) ಡಿವ್ಹಿಡೆಂಡ ಠರಾಯಿಸುವದು.

(೩) ಡಾಯರೆಕ್ಟರರ ಖಾಲೀ ಆದ ಜಾಗೆ ಭರಾಯಿಸುವದು.

(೪) ಮುಂದಿನ ವರ್ಷದ ಬಗ್ಗೆ ಆಡಿಟರರನ್ನು ನೇಮಿಸುವದು.

(೫) ಮ್ಯಾನೇಜಿಂಗ ಡಾಯರೆಕ್ಟರರು ಸಭೆಯ ಮುಂದೆ ತಂದ ಇತರ ಯಾವದಾದರೂ ವಿಷಯವು.

ಧಾರವಾಡ.
ತಾ|| ೨೩—೬—೧೯೨೮.

ಅಣ್ಣಾಚಾರ್ಯ ಕಳ್ಳಿ,
ಮ್ಯಾನೇಜಿಂಗ ಡಾಯರೆಕ್ಟರ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಸ್ವತಃ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

[illegible] ನೀವು ಔಷಧ ಬೇಡುವಾಗ್ಯೆ ಯಾವ ವರ್ತಮಾನಪತ್ರದ ಜಾಹೀರಾತ ನೋಡಿದ ಈ ಬೇಡಿಕೆಯನ್ನು ಮಾಡುವಿರಿಯೋ ಅದನ್ನು ಬರೆಯಬೇಕು.

ಈ ಪತ್ರವನ್ನು ಅಂಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. No. 1443

ನಿತ್ಯಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಸೋಮವಾರ ತಾರೀಖು ೮ ನೇ ಜುಲೈ ೧೯೩೯ (ಸಂಚಿಕೆ ೧೫೩

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೬ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪ್ರತ್ಯೇಕವಾಗಿ ತೆರೆಯಲ್ಪಡುವವು.

ಮುದತಿ ಠೇವುಗಳು:— ಒಬ್ಬೀದಾರರಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩|| ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩|| ರೂ.

ಸೇವ್ವಿಂಗ್ಸ ಬ್ಯಾಂಕ:— ಒಬ್ಬೀದಾರರಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರ

ಸರಕಾರಿ ಹಾಗು ಇತರ ಕಾಗದಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ಓವ್ಹರ ಡ್ರಾಫ್ಟ ಉದಾರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಊರುಗಳಿಗೆ ಪಟ್ಟಿನ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು. ದರ ಹಾಗೂ ನಿಯಮಗಳ ಪ್ರತಿಗಳೂ ಮೊಕಬ್ಯಾಂಕ ಪತ್ರಗಳೂ ಸದರಿ ಬ್ರ್ಯಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — **ಡಿ. ಡೊನೆಲಿ,**

ತಾ|| ೧೬-೬-೩೮ — ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಶ ಳ- ಮಂಗಳವಾರಪೇಟೆ, ಲಕವಲಿ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಚಾಸು ಮತ್ತು ಒಹಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ

ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗಿಯು ಎಂಟು ಲಕ್ಷದ ಮೇಲುಂಟು. ಚಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವವು. ಕಾಯಮ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಹಾಗೀ.

ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೮-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೮-೭-೨೫ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಟ್ರಿಯು
ಳ್ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ॥
ಈ "ವಿಜಯಂ" ಶ್ರೀಕರಮ ।
ತಾ ವಿಹಿತಂಗಳ ವಿವರಿಸನಲಿವುದು ಸಾಜಂ ॥೧॥

ಭೋಳೇ ಸ್ವರಾಜ್ಯವಾದಿಗಳ ಬಾಯಿಗೆ ನೀರು ಬಿಟ್ಟಿತು.

—(೦)—

ಮಿ. ಮ್ಯಾಕಡೊನಾಲ್ಡ ಸಾಹೇಬರು ಹಿಂದ್ಯಸ್ಥಾನದ ಸ್ವರಾಜ್ಯದ ವಿಷಯವಾಗಿ ಬಿದ್ದ ತೊಡಕನ್ನು ಬಿಡಿಸಲು ಹಿಂದೀ ಮುಖಂಡರ ಸಹಾಯವನ್ನು ಕೋರಿದ್ದನ್ನು ಈ ಮೊದಲು ಬರೆದಿದ್ದೇವೆ. ಸಾಹೇಬರ ಈ ಭಾಷಣದಿಂದ ಸರ್ವ ವಿಶ್ರಾಮ್ಯತಿಯುಳ್ಳಿರುವ ಮತ್ತು ಈ ದೇಶಿಯ ಸ್ವರಾಜ್ಯವಾದಿಗಳ ಬಾಯಿಗೆ ನೀರು ಬಿಟ್ಟು, ತಮಗೆ ಬೇಗನೆ ಸ್ವರಾಜ್ಯ ದೊರೆಯುವದೆಂಬ ಬಲಿಕೆಯ ಸಮಾರಾಧನೆ ಮಾಡುತ್ತಲಿದ್ದಾರೆ. ಶ್ರೀ ಷಣ್ಮುಖಶೆಟ್ಟರೂ ಮುನಶೀ ಈಶ್ವರಶರಣರೂ ಲಂಡನದಲ್ಲಿದ್ದು ಇವರು ಹಿಂದೀ ಸೇಕ್ರೆಟರಿಯವರನ್ನು ಕಾಣಲಿಕ್ಕೆ ಹೋಗಿದ್ದರು. ಅವರ ಕೂಡ ಆದ ಭಾಷಣದಿಂದ ಅವರ ಮನಸ್ಸಿನಲ್ಲಿ ಹಿಂದುಸ್ಥಾನದ ಹಿತಮಾಡುವದೇ ಇರುತ್ತದೆಂದು ಇವರು ಮನನಂಬಿಗೆಯಾಗಿದ್ದಾರೆ. ಇವರಂತೆ ಈ ಕೇಳಿದವರಾದ ಸರ ಸೇಲವಾಡ, ಬ್ಯಾರಿಸ್ಟರ ಜಿನ್ನಾ ಮೊದಲಾದವರೂ ಸಹಕಾರದ ಕೈಯನ್ನು ಎತ್ತಿದ್ದಾರೆ. ಈ ಪ್ರಕಾರ ಇವರು ಆನಂದೋದ್ರೇಕಪಡುವಾಗ ಹಿಂದಿನ ಇತಿಹಾಸವನ್ನು ತುಸುವಾದರೂ ಲಕ್ಷ್ಯಕ್ಕೆ ತರಬೇಕಾಗಿತ್ತು. ಲಾರ್ಡ ಬರ್ಕನಹೆಡ್ ಸಾಹೇಬರು ಸ್ಪಷ್ಟವಾದ ಅಪೇಕ್ಷೆ ಮಾಡಿದರು. ಸ್ವರ್ಗವಾಸಿ ದೇಶಬಂಧು ದಾಸರಂಥವರು ಈ ಸಹಕಾರದ ಆಕಾಂಕ್ಷೆಯಲ್ಲಿ ಬಿದ್ದು, ತಮ್ಮ ಪರವಾಗಿ ಸಹಕಾರವನ್ನು ಜಾಹೀರಮಾಡಿದರು. ಅನಂತರ ಲಾಲಾ ಲಜಪತರಾಯ ಮೊದಲಾಗಿ ಅನೇಕ ಸ್ವರಾಜ್ಯಭಕ್ತರು ಲಂಡನದ ಯಾತ್ರೆಮಾಡಿ ಬಂದರು. ಆದರೆ ಸಾಹೇಬರು ಹಿಂದೂಗಳ ಸಲುವಾಗಿ ಸ್ವರಾಜ್ಯ ರಥವನ್ನು ಮುಂದೆ ಸಾಗಿಸಲಿಲ್ಲ. ಮತ್ತು ಸಾಯಮನ್ನ ಕಮೀಶನ ನೇಮಿಸುವಾಗ- ಹಿಂದೀ ಮುಖಂಡರನ್ನು ತಿರಸ್ಕರಿಸಿದರು. ಈ ತಿರಸ್ಕಾರಕ್ಕೆ ಲಾಲಾ ಲಜಪತರಾಯರಂಥವರು ಬಲೀ ಬಿದ್ದರು. ಲಾರ್ಡ ಬರ್ಕನಹೆಡ್ಡರು ತೋರಿದ ಸಹಕಾರಕ್ಕಿಂತ ಮಿ. ಮ್ಯಾಕಡೊನಾಲ್ಡ ಸಾಹೇಬರ ಸಹಕಾರವು ಕಳ್ಳಿಗಿಂತ ಇಟ್ಟಂಗಿಯು ಮೆತ್ತಗೆನ್ನುವಂತಾದೀತು! ಆದರೆ ಮಹಾತ್ಮರು ಅತಿರುವ ವಸಾಹತಿನ ಸಂಪೂರ್ಣ ಸ್ವರಾಜ್ಯ ದೊರೆಯುವದರದೆಂಬುದು ಖಾತ್ರಿ. ಆದ್ದರಿಂದಲೇ ಮಹಾತ್ಮರು ಪಂಡಿತ ನೆಹರೂ ಶ್ರೀನಿವಾಸ ಅಯ್ಯಂಗಾರ ಮೊದಲಾದವರು ಮಿ. ಮ್ಯಾಕಡೊನಾಲ್ಡ ಸಾಹೇಬರು ಬೀರಿದ ಜೇನತುಪ್ಪದಲ್ಲಿ ನೊಣದಂತೆ ಕಾಲು ಸಿಗಿಸಿಕೊಂಡು ಬೀಳುವಂಥ ಯಾವ ಅಭಿಪ್ರಾಯವನ್ನೂ ಹೇಳಿರುವದಿಲ್ಲ.

ಶ್ರೀ ಸಿದ್ಧಾರೂಢಸ್ವಾಮಿಗಳ ಮೇಲಿನ ದಾವೆಯು.

ಶ್ರೀ ಸಿದ್ಧಾರೂಢಸ್ವಾಮಿಗಳು ಸಂಪಾದಿಸಿದ ಆಸ್ತಿಯು ಏಳೆಂಟು ಲಕ್ಷದ್ದಾಗಿರುತ್ತದೆ. ಶ್ರೀ ಸ್ವಾಮಿಗಳು ಈ ಆಸ್ತಿಯನ್ನು ಒಬ್ಬ ಹುಡುಗನ ಹೆಸರಿನಿಂದ ಮಾಡಿದ್ದಾರೆ. ಇದು ದತ್ತಕಸ್ವರೂಪದ್ದಾಗಿರುತ್ತದೆ. ಶ್ರೀಗಳ ಆಸ್ತಿಯು ಸ್ವಸಂಪಾದನೆಯದಲ್ಲ, ಭಕ್ತರು ಸಾರ್ವಜನಿಕವಾಗಿ ಕೊಟ್ಟಂಥ ನಿಧಿಯು. ಆದ್ದರಿಂದ ದತ್ತಕ ಮಾಡಿಕೊಂಡು, ಒಬ್ಬನ ಹೆಸರಿಲೆ ಮಾಡಲಿಕ್ಕೆ ಬರುವದಿಲ್ಲೆಂದು ದಾವೆಯು ಸ್ವರೂಪವಾಗಿರುತ್ತದೆ. ವಿಚಾರಣೆಯು ಇಲ್ಲಿಯ ಫಸ್ಟ್‌ಕ್ಲಾಸ ಕೋರ್ಟಿನಲ್ಲಿ ಕಳೆದ ವಾರದಿಂದ ನಡೆದಿದೆ. ದಿನಾಲು ಸಾಕ್ಷಿಗಳಾಗುತ್ತಿರುವವು. ಸುನಾವಣಿ ನೋಡಲು ಜನರೂ ಬಹುವಾಗಿ ಸೇರುವರು.

ಶ್ರೀ ಸ್ವಾಮಿಗಳ ಜವಾಬನ್ನು ಕಮೀಶನದ ಮುಖಾಂತರ ತಕ್ಕೊಳ್ಳಬೇಕೆಂದು ಆದ ಅರ್ಜಿಯನ್ನು ಕೋರ್ಟಿನವರು ನಾಮಂಜೂರ ಮಾಡಿ, ಡಿಸ್ಟ್ರಿಕ್ಟ ಜಡ್ಜರ ಅಪ್ಪಣೆ ಪಡೆದುಕೊಂಡು, ಕೋರ್ಟೇ ಹುಬ್ಬಳ್ಳಿಗೆ ಹೋಗಿ ಮಠದಲ್ಲಿಯೇ ಕೋರ್ಟು ಮಾಡಿ, ಶ್ರೀ ಸ್ವಾಮಿಗಳ ಜವಾಬು ತಕ್ಕೊಳ್ಳಬೇಕೆಂದು ಮುನಸಫರು ಅಭಿಪ್ರಾಯ ಪಟ್ಟದ್ದನ್ನು ಈ ಮೊದಲು ಬರೆದಿದ್ದೇವೆ. ಈ ಪ್ರಕಾರ ಮಠದಲ್ಲಿ ಕೋರ್ಟು ಕಚೇರಿ ಮಾಡಲು ಕಾಯದೆಯ ಆಧಾರ ಹೊರಡದ್ದರಿಂದ, ಈ ವಿಚಾರವು ರಹಿತವಾದಂತಾಯಿತು. ಶ್ರೀಗಳವರ ಜವಾಬು ಧಾರವಾಡದ ಕೋರ್ಟಿನಲ್ಲಾಗುವದೋ? ಪುನಃ ಕಮೀಶನದ ಪ್ರಸ್ತಾಪ ನಡೆಯುವದೋ? ಈ ನಂತರ ತಿಳಿಯುವದು.

ಬೆಂಗಳೂರಲ್ಲಿ ಕೂಲಿಕಾರರ ಸಂಪು.

ಕೂಲಿಕಾರರ ಪ್ರಮುಖರ ದಸ್ತಗಿರಿ.

—)(೦)(—

ಬೆಂಗಳೂರಿನ ಕೂಲಿಕಾರರಲ್ಲಿ ಕೂಲಿಯ ದೆಸೆಯಿಂದ ಅಸಂತೋಷ ಬೆಳೆದು ಒಂದು ತಿಂಗಳಾಯಿತು. ಅದು ಈಗ ವಿಕೋಪಕ್ಕೆ ಹೋಗಿದೆ. ಗಿರಣಿ ಕಾರಖಾನೆಗಳ ಹತ್ತು ಸಾವಿರ ಕೂಲಿಕಾರರು ಸಂಪಿನಲ್ಲಿ ಸೇರಿದ್ದಾರೆ. ದಂಗೆಯಾಗಿ ರಕ್ತಪಾತವಾಗಬಾರದೆಂಬ ನೆವನ ಮಾಡಿಕೊಂಡು, ಪೋಲಿಸರು ತಮ್ಮ ಸಹಾಯಕ್ಕೆ ದಂಡು ತರಿಸಿ ಕೂಲಿಕಾರರು ಆಗಾಗ ಪೇಟೆಯಲ್ಲಿ ಮಾಡುತ್ತಿದ್ದ ಸಭೆಯನ್ನು ಮುರಿದರು. ಕೂಲಿಕಾರರು ಒಬ್ಬ ಸಿಪಾಯಿಯನ್ನು ಹೊಡೆದರೆಂಬ ಆರೋಪ ಹೊರಿಸಿ, ಅವರ ಗುಂಪನ್ನು ಚದರಿಸಿ ಅವರ ಕಚೇರಿಗೆ ಹೋಗಿ, ಅಧ್ಯಕ್ಷ, ಸೇಕ್ರೇಟರಿ, ಮತ್ತು ಇವರಿಗೆ ಸಹಾಯಕರೆಂದು ಮೂಜಾಗಕ್ಕೆಯ ಉಪಾಯವೆಂದು ಪ್ರಜಾಪ್ರತಿನಿಧಿ ಸಭೆಯ ಒಬ್ಬ ಮೆಂಬರರನ್ನು ದಸ್ತಗಿರ ಮಾಡಿದ್ದಾರೆ.

ಪ್ರೆಸ್ಸ ಆಕ್ಟಿನ ವಿರುದ್ಧ ಪ್ರಚಂಡ ಸತ್ಯಾಗ್ರಹ.

ನೋಟಗಳಿಗೆ ಲೆಕ್ಕಂದೆಯ ಹೊಸತ.

—(೦)—

ಕಗಡೂರ ರಾಮಚಂದ್ರರಾಯರ ಕಣೆಯರ ಪತ್ರಿಕೆಯು ಸಮುದ್ರದಲ್ಲಿರುವ ಹಡಗದ ಮೇಳದಂತೆ ದಿನಾಲು ಸಾಯುತ್ತದೆ. ಮತ್ತು ದಿನಾಲು ಹುಟ್ಟುತ್ತದೆ. ಇವರು ಮೈಸೂರು ಬಿಟ್ಟು ಬೆಂಗಳೂರಿಗೆ ಬಂದು ಕಣ್ಣಿಗೆ ಕಾಣಿಸುವಂತೆ ಹೊರಗೆ ಯಾವ ಸಾಧನವಿರದಿದ್ದರೂ, ಬೇಗು ಹರಿಯುವವರೊಳಗಾಗಿ ಪತ್ರಿಕೆಯನ್ನು ತೆಗೆಯುವರು. ಪೋಲೀಸರು ಇವನ್ನು ಜಪ್ತಮಾಡಿಕೊಂಡು ಹೋಗುವದು ಇಬ್ಬರಿಗೂ ಇದರಿಂದ ನಿತ್ಯಕರ್ಮ ದಿನಕರ್ಮವಾಗಿದೆ. ಈ ಪರ್ಯಂತರ ಕಣೆಯರ ಪತ್ರಿಕೆಯೊಂದೇ ಆಗಿತ್ತು. ಬೆಂಗಳೂರಿನ ಗಲಭೆಯ ನಿಮಿತ್ಯ ಮಾಡಿ, ವೀರಕೇಸರಿ ಮತ್ತು ನವಜೀವನವನ್ನು ಬಂದು ಮಾಡಿಸಿದ್ದಾರಂತೆ; ಆ ಪತ್ರಿಕೆಗಳೂ ಈಗ ಸರಕಾರದ ಅನ್ಯಾಯದ ಹಾಳುವಿನ ಪ್ರತೀಕಾರವೆಂದು ಹೊರಡಹತ್ತಿರಂಭಿಸಿವೆ. ಪತ್ರಿಕೆಗಳ ಪ್ರಕಟನೆ ಹಾಗು ಮಹಾರಾಷ್ಟ್ರದ ಸೋಜಿಗವನ್ನು ನೋಡಲು ಗುಂಪುಗೂಡಿದ ಜನರಿಗೆ ಪೋಲೀಸರು ಕೋರಡೆಗಳ ಪ್ರಸಾದ ಕೊಟ್ಟರೆಂದು ಇಂಗ್ರೇಜಿ ವರ್ತಮಾನಪತ್ರಗಳಲ್ಲಿ ಪ್ರಸಿದ್ಧವಾಗಿದೆ.

ಧಾರವಾಡ ಹಾಯಸ್ಕೂಲಿನ ಹೆಡ್ಡಮಾಸ್ತರರಾದ ಮಿ. ಮುಶಿಷ್ಣೆಯವರು ರಜೆಯ ಮೇಲೆ ತೆರಳಿದ್ದರಿಂದ ೧ ನೇ ಅಸಿಸ್ಟಂಟರಾದ ಮಿ. ಮುಜುಮದಾರರು ಇಲ್ಲಿಗೆ ಹೆಡ್ಡಮಾಸ್ತರರಾಗಿ ನೇಮಿಸಲ್ಪಟ್ಟಿದ್ದಾರೆ.

ರಜಪೂತರಲ್ಲಿ ಗುಲಾಮರ ವ್ಯಾಪಾರ

—(೦)—

ಇಂಗ್ರೇಜಿ ಸರಕಾರದವರು ವಿಲಾಯತಿಯಲ್ಲಿ ಗುಲಾಮರ ವ್ಯಾಪಾರ ನಿಲ್ಲಿಸಿದರು. ಆದರೆ ಅವರ ಸಾಮ್ರಾಜ್ಯಕ್ಕೊಳಪಟ್ಟಂಥ ದೇಶದಲ್ಲಿ ಇಂದಿಗೂ ಗುಲಾಮರ ವ್ಯಾಪಾರ ನಡೆಯುತ್ತಲಿದೆ. ಅದು ಹಿಂದುಸ್ಥಾನದಲ್ಲಿಯ ರಾಜಪುತಾನಾದ ರಜಪೂತರ ಸಂಸ್ಥಾನಗಳಲ್ಲೆಂದು ಹೇಳಿದರೆ- ವಾಚಕರು ಆಶ್ಚರ್ಯಚಕಿತರಾಗಬಹುದು. ಈ ವ್ಯಾಪಾರದ ತರಹವು ವಿಚಿತ್ರವಾಗಿರುತ್ತದೆ. ಚಾಕರರು, ಗೋಲರು, ದರೋಗರು ಮತ್ತು ಹಜೂರರು ಎಂಬದಾಗಿ ಗುಲಾಮರ ಕುಲಗಳೇ ಆಗಿರುತ್ತವೆ. ಇವರು ಪ್ರತಿಯೊಂದು ಸಂಸ್ಥಾನ ಮತ್ತು ಜಹಾಗೀರದಾರರ ಮನೆಗಳಲ್ಲಿ ಕೆಲಸಕ್ಕಾಗಿ ವಂಶಪರಂಪರೆಯಾಗಿ ದುಡಿಯುವರು. ಸಂಸ್ಥಾನಿಕರೂ, ಜಹಾಗಿರದಾರರೂ ಇವರ ಗಂಡಸರು, ಹೆಂಗಸರು ಮತ್ತು ಹುಡುಗ ಹುಡುಗಿಯರನ್ನು ಒಬ್ಬರಿಂದೊಬ್ಬರು ಅದಲು ಬದಲು ಮಾಡುವರು. ಅಳಿಯನಿಗೆ ಆನೆ ಕುದುರೆಯನ್ನು ಕಾಣಿಕೆ ಕೊಡುವಂತೆ ಇವರನ್ನು ಕಾಣಿಕೆ ಕೊಡುವರು. ಕೆಲ ಪ್ರಸಂಗಗಳಲ್ಲಿ ಗುಪ್ತರೀತಿಯಿಂದ ಇವರ ಮಾರಾಟ ಸಹ ಮಾಡುವರು. ಇವರು ಮಾಡುವ ಕೆಲಸವು ಕುರಂಗದ ಕೈದಿಯಂತಿರುವದು. ಬಿದ್ದ ಕೆಲಸ ಮಾಡಬೇಕು. ಹಗಲು ರಾತ್ರಿ ಆರಾಮವಿಲ್ಲದೆ ಹೇಳಿದ ಕೆಲಸಮಾಡಬೇಕು. ಆದರೆ ಅದಕ್ಕೆ ತಕ್ಕಂಥ ಊಟ ಉಡಿಗೆ ಇರುವದಿಲ್ಲ. ಅದನ್ನ ಉಂಡು, ಹರಕು ಒಟ್ಟೆ ತೊಟ್ಟು ಒಡೆಯ ಒಡತಿಯರು ಹೇಳಿದ ಕೆಲಸಮಾಡುವದೇ ಇವರ ಧರ್ಮವು. ಇವರ ಮೇಲೆ ಯಜಮಾನರ ಪೂರ್ಣಸ್ವಾಮಿತ್ವವುಂಟು. ಬೇಕಾದಾಗ ಮದಿವೆ ಮಾಡಿಸುವದು. ಬೇಡಾದರೆ- ಸೋಡಪತ್ರ ಕೊಡಿಸುವರು. ಇದು ಪದ್ಧತಿಯಲ್ಲ ಕಾಯಿದೆ ಸಹ ಉಂಟು. ಜೋಧಪೂರದವರು ಕಾಯಿದೆಮಾಡಿದ್ದಾರೆ. ಬುಂದಿ ಮತ್ತು ಕೋಟಾದವರಂತೂ ಇವರನ್ನು ಏಸಿಮಿಯ ಮಾಡಿಕೊಳ್ಳುವಂತೆ ಪರಸ್ಪರ ಒಪ್ಪಂದ ಮಾಡಿಕೊಂಡಿದ್ದಾರೆ. ಜೋಧಪೂರದಲ್ಲಿ ೪೦ ಸಾವಿರ ಮತ್ತು ಬಿಕಾನೇರದಲ್ಲಿ ಹತ್ತು ಸಾವಿರ ಗುಲಾಮರುಂಟು. ಹೀಗೆ ಪ್ರತಿಯೊಂದು ಸಂಸ್ಥಾನದಲ್ಲಿಯೂ ಇದ್ದಾರೆ.

ಮೈಸೂರಿನ ಲೆಜಿಸ್ಲೇಟಿವ್ಹ ಕೌನ್ಸಿಲದಲ್ಲಿ ಸಕ್ತಾಯದ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕೆಂಬ ಠರಾವು ಬಿದ್ದಿತು. ಎಲ್ಲ ಮೆಂಬರರು ಅನುಕೂಲವಾಗಿ ಮಾತಾಡಿದರು. ಅದಕ್ಕೆ ೫೦ ಲಕ್ಷ ರೂಪಾಯಿ ವೆಚ್ಚ ಬರುತ್ತದೆ. ಈ ಮೂಲಕ ಅಶಕ್ಯವೆಂದು ವಿದ್ಯಾಖಾತೆಯ ಡಾಯರೆಕ್ಟರರು ಹೇಳಲು ಠರಾವು ಹಿಂದಕ್ಕೆ ತೆಗೆಯಲ್ಪಟ್ಟಿತು.

ಕರ್ನಾಟಕವೃತ್ತದ ಅವತಾರ ಸಮಾಪ್ತಿಯು.

—(೦)—

ಸುಮಾರು ೩೮ ವರ್ಷಗಳಿಂದ ಪ್ರಕಟವಾಗುತ್ತಾ ಬಂದಿದ್ದ ಕರ್ನಾಟಕವೃತ್ತಪತ್ರವನ್ನು ನಿಲ್ಲಿಸಿದಂತೆ ಅದರ ಅಂತ್ಯಕಾಲದ ಸಂಪಾದಕರಾಗಿದ್ದ ಮಿ ಮುದವೀಡು ಕೃಷ್ಣರಾಯರು ಹೇಳುತ್ತಾರೆ. ಈ ಪತ್ರವು ಧಾರವಾಡ ಬಿಟ್ಟು ಬೆಳಗಾವಿಗೆ ಹೋಗುವಾಗ ಅದರ ಅಂತಃಸ್ಥಿತಿ ಬಲ್ಲವರು ಅಲ್ಲಿ ಅದಕ್ಕೆ ಅಂತ್ಯಕಾಲ ಬರುವದೆಂದು ಭವಿಷ್ಯಮಾಡಿದ್ದರು. ಆ ಭವಿಷ್ಯವು ಕೊನೆಯಲ್ಲಿ ನಿಜವಾಯಿತು. ಒಂದು ವರ್ಷದಲ್ಲಿ ೧೮೦೦ ರೂಪಾಯಿ ಹಾನಿ ಬಂದದರಿಂದ, ಪತ್ರ ಬಂದಮಾಡುವದೊಂದೇ ಹಾದಿಯಾಯಿತೆಂದು ರಾಯರು ಅಭಿಪ್ರಾಯವಾಗಿ ಹೇಳುವರು. ಒಂದು ಹಳೇ ಪತ್ರವು ಬಂದಾದಬಗ್ಗೆ ಅನೇಕರಿಗೆ ವಿಷಾದವಾಗಬಹುದು. ಯೋಗ್ಯ ಯೋಜನೆ ಆಗದ್ದರಿಂದಲೇ ಅದಕ್ಕೆ ಮರಣಕಾಲ ಬಂತೆಂದು ನಾವು ಹೇಳುವಂತಿದೆ.

ಸ್ವಾತಂತ್ರ್ಯವಾದಿಯ ರಾಜನಿಷ್ಠೆಯ ಆಣೆ.

—(೦)—

ಬಂಗಾಲ ಕೌನ್ಸಿಲದ ಚುನಾವಣೆಯಾಗಿ ಕೌನ್ಸಿಲ ಪ್ರಾರಂಭದ ದಿವಸ ಮೆಂಬರರು ಪದ್ಧತಿ ಪ್ರಕಾರ ರಾಜನಿಷ್ಠೆಯ ಆಣೆಮಾಡಿದರು. ಹಿಂದುಸ್ಥಾನವು ಬ್ರಿಟಿಶ ಸಾಮ್ರಾಜ್ಯರಹಿತವಾಗಿ ಸಂಪೂರ್ಣ ಸ್ವತಂತ್ರವಾಗಬೇಕೆಂದು ಶ್ರೀ ಸುಭಾಷಚಂದ್ರ ಬೋಸರ ಮತವು. ಆದರೆ ಇವರು ಕೌನ್ಸಿಲ ಮೆಂಬರರಾದ ಮೂಲಕ ರಾಜನಿಷ್ಠೆಯ ಆಣೆಮಾಡಿದರು. ಆಗ ಅನೇಕ ಮೆಂಬರರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಕುರಂಗವಾಸಿಗಳ ಅಭಿನಂದನ.

—(೦)—

ಅಸೆಂಬ್ಲಿಯ ಬಾಂಬಿನ ಪ್ರಕರಣದಲ್ಲಿ ಕರೇನೀರಿನ ಶಿಕ್ಷೆಯಾದಂಥ ಭಗತಸಿಂಗ ಮತ್ತು ದತ್ತರ ಅಭಿನಂದನಮಾಡುವದಕ್ಕಾಗಿ ಲಾಹೋರಿನಲ್ಲಿ ಹತ್ತು ಸಾವಿರ ಜನರ ಪ್ರಚಂಡ ಸಭೆ ಕೂಡಿತ್ತು. ಸಭೆಯಲ್ಲಿ ಸ ವಿಕ ಸಂಖ್ಯೆಯಿಂದ ಇವರ ಭಾವಪಠಗಳ ಮಾರಾಟವಾಯಿತು. ಸರಕಾರದವರು ದಿಬ್ಬಾಳಿಕೆಯನ್ನು ಬಿಡದಿದ್ದರೆ- ತಮ್ಮ ಗೋರಿಯ ಕಣಿಯನ್ನು ತಾವೇ ಕಡಿಯುವಂತಾಗುವದೆಂದು ಸಭೆಯಲ್ಲಿ ಭಾಷಣಗಳಾದವು. ಲಾಹೋರಿನಂತೆ ಕತ್ರಿಯಲ್ಲಿಯೂ ಸಭೆಗೂಡಿತ್ತು.

ಮುಪ್ಪಿನ ಮುದುಕನು ಶಾಲೆಗೆ ಹೋಗಿ ಮ್ಯಾಟ್ರಿಕ ಪರೀಕ್ಷೆ ಪಾಸಾದನು.

—(೦)—

ಬಂಗಾಲದಲ್ಲಿ ಶಿರಾಜಗಂಜದಲ್ಲಿರುವ ದಲಿಲ ವಿಜಾ ಸರಕಾರನೆಂಬ ೫೪ ವರ್ಷದ ವೃದ್ಧನು ಆ ಇಲಾಖೆಯ ಈ ಸಾರೆಯ ಮ್ಯಾಟ್ರಿಕ ಪರೀಕ್ಷೆಯಲ್ಲಿ ಪಾಸಾದನು. ಮುದುಕನಾದರೂ ಅಭ್ಯಾಸ ಮಾಡಿ, ಪರೀಕ್ಷೆ ಪಾಸಾಗಲು ಮಕ್ಕಳೇ ಕಾರಣರಾದರು. ಮಕ್ಕಳು ಓದರು. ಶಾಲೆಗೆ ಹೋಗಿ ಕಲಿಯರು; ಓದಬೇಕೆಂದರೆ- ಅನಾಸ್ಥೆಯುಳ್ಳವರಾಗುವರು. ಇವರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕೆಂದು ಮುದುಕನು ಮ್ಯಾಟ್ರಿಕದ ಅಭ್ಯಾಸಮಾಡಿ, ಹೋದವರ್ಷ ಪರೀಕ್ಷೆಗೆ ಕೂತನು. ಆದರೆ ಪಾಸಾಗಲಿಲ್ಲ. ಅಧೈರ್ಯಗೊಳ್ಳದೆ. ಪುನಃ ಅಭ್ಯಾಸ ಮಾಡಿ, ಪರೀಕ್ಷೆಗೆ ಕೂತು ಈ ಸಾರೆ ಪಾಸಾದನು.

ಆಸಾಮದಂತೆ ಬರ್ಹ್ಮದೇಶದಲ್ಲಿ ಅದ್ಭುತ ವೃಷ್ಟಿ.

ಐನೂರು ಮನೆಗಳು ಬಿದ್ದವು.

—(೦)—

೧೨ ಜನರು ಸತ್ತರು.

—(೦)—

ಆಸಾಮ ಪ್ರಾಂತದಂತೆ ಬರ್ಹ್ಮದ ಪ್ರಾಂತದಲ್ಲಿಯೂ ಅದ್ಭುತವಾಗಿ ಮಳೆ ಸುರಿದು, ಹಳ್ಳ ಹೊಳೆಗಳು ತುಂಬಿ ಹೋಗಿ, ಭಯಂಕರ ಕೇಡಾಗಿದೆ. ಒಂದೇ ದಿವಸ ಬಂದ ಸುದ್ದಿಯು ಹಾಹಾಕಾರವನ್ನುಂಟು ಮಾಡುವ ಥಾದ್ದಾಗಿದೆ. ಐನೂರು ಮನೆಗಳು ಬಿದ್ದಿದ್ದು, ೧೨ ಜನರು ಸತ್ತಿದ್ದಾರೆ.

ರಾಮಾನಂದ ಚಟರ್ಜಿ-

ಕಲಕತ್ತೆಯ ಸುಪ್ರಸಿದ್ಧ ಗೃಹಸ್ಥರಾದ ರಾಮಾನಂದ ಚಟರ್ಜಿಯವರ ಮೇಲೆ ಹಿಂದಿನ ಮಂತ್ರಿಗಳು ಮಾಡಿದ ಹುಡಿಗಟಕೆಯ ರಾಜದ್ರೋಹದ ಖಟ್ಲೆಯನ್ನು ತೆಗೆದುಹಾಕುವಂತೆ ಈಗಿನ ಸರಕಾರವು ವಿಚಾರಮಾಡುವದೇ ಎಂಬದಾಗಿ ಪಾರ್ಲಮೆಂಟದ ಸಭೆಯಲ್ಲಿ ಕೇಳಿದ ಪ್ರಶ್ನೆಕ್ಕೆ ಅಧ್ಯಕ್ಷಮಹಾಶಯರು ಅಷ್ಟು ಬಂದು ಈ ಪ್ರಶ್ನೋತ್ತರಗಳನ್ನೇ ನಡೆಯಗೊಡಲಿಲ್ಲ.

ಪರ್ಜನ್ಯ-

ಈ ವಾರದಲ್ಲೆಲ್ಲ ದಿನಾಲು ಮಳೆಯಾಯಿತು. ಹೋದ ವಾರದಂತೆ ಹಸಿಕಸ ಮಳೆಯು ನೀರಮಳೆಯು ಬೇಕಾಗಿದೆ.

ನೋಟೀಸು

—೦—

ವಾ|| ರಾ|| ತಿಪ್ಪಣ್ಣಾ ತಂದಿ ಯಲ್ಲಪ್ಪಾ ಕುರುಬರ ಸಾ|| ಇಂಗಳಗಿ ಈತನಿಗೆ

ಕೆಳಗೆ ಹೆಬ್ಬಟ್ಟಿನ ಗುರ್ತ ಮಾಡಿದ ಮಾಯಪ್ಪಾ ಬಿನ್ನ ಯಂಕಪ್ಪಾ ಪಾಲೀಕಾರ ಸಾ|| ಕ್ಯಾಲಿಕೊಂಡ ತಾಲ್ಲೂಕ ಬಂಕಾಪೂರ ಈತನು ಈ ನೋಟೀಸಿನ ದ್ವಾರಾ ತಿಳಿಸೋದೇನಂದ್ರೆ-

ನೀನು ನನ್ನ ಖಾಸ ಅಕ್ಕನ ಮಗನಾಗಬೇಕು ನಿನ್ನ ಚಿಕ್ಕಂದಿನಲ್ಲಿಯೇ ನಿನ್ನ ತಂದಿ ತಾಯಿ ಉಭಯತರು ಮೃತಪಟ್ಟರು ಆಗ್ಗೆ ನನಗೂ ಗಂಡುಮಕ್ಕಳು ಇದ್ದಿಲ್ಲಾ ನೀನೇ ನನ್ನ ಹೊಟ್ಟೆಯ ಮಗನೆಂದು ತಿಳಕೊಂಡು ನನ್ನ ಹತ್ತರಾ ಇಟಕೊಂಡು ಜೋಪಾನ ಮಾಡಿಕೋತಾ ಬಂದೆನು ನಿನ್ನ ತಂದಿ ಆಸ್ತಿ ಇಂಗಳಗಿಯಲ್ಲಿ ಇದ್ದದ್ದು ಸ್ವಲ್ಪ ಇದ್ದರೂ ಅದರ ಉತ್ಪನ್ನ ವಿಶೇಷ ಬಾರದಿದ್ದರೂ ನನ್ನ ಉತ್ಪನ್ನದ ಮೇಲಿಂದಾ ನಿನ್ನನ್ನು ಸಂರಕ್ಷಣೆ ಮಾಡಿಕೋತಾ ಬಂದು ನೀನು ದೊಡ್ಡವನಾದಬಳಿಕ ನನ್ನ ಸ್ವಂತ ಹಣಾ ಐದುನೂರು ರೂಪಾಯಿ [೫೦೦] ಖರ್ಚ ಮಾಡಿ ನಿನಗೆ ನನ್ನ ಖಾಸ ಹುಟ್ಟಿ ಮಗಳನ್ನು ಕೊಟ್ಟು ಲಗ್ನ ಮಾಡಿದೆನು ಮುಂದೆ ನಿನಗೆ ಜಮೀನುಗಳು ಸ್ವಲ್ಪ ಆಗುತ್ತವೆ ಅಂತಾ ತಿಳಕೊಂಡು ಕ್ಯಾಲಿಕೊಂಡ ಜಮೀನು ಸುಮಾರು ಆರು ಎಕರೆಕ್ಕೆ ನನ್ನ ಸ್ವಂತ ಹದಿನೈದು ನೂರು [೧೫೦೦] ರೂಪಾಯಿಗಳನ್ನು ಕೊಟ್ಟು ಪ್ರೀತಿಯಿಂದಾ ನಿನ್ನ ಹೆಸರಿಲೆ ಖರೀದಿ ಮಾಡ್ಸಿದೆನು. ಹೀಗಿರಲಾ ಈಗ ನೀನು ದೊಡ್ಡವನಾಗಿ ಚಟ್ಟತನದ ನಡಾವಳಿಯಲ್ಲಿ ಸೇರಿಕೊಂಡು ನನ್ನನ್ನು ಬಿಟ್ಟು ಈಗ ಮೂರು ವರ್ಷಗಳ ಲಾಗಾಯತ ಇಂಗಳಗಿಯಲ್ಲಿದ್ದುಕೊಂಡು ಇನಪೇಟ ಘಟಿಂಗತನ ಮಾಡುವದು ಇದರಿಂದಾ ಇದ್ದ ಆಸ್ತಿ ಮಾರಾಟ ಮಾಡುತ್ತೀದಿ ಅಂತಾ ಬಾತಮೀ ಕೇಳಿ ಈ ನೋಟೀಸು ಕೊಟ್ಟಿರುತ್ತೇನೆ ನಿನ್ನ ತಂದೆಯ ಆಸ್ತಿ ವಿಲೇವಾಟ ಮಾಡಬೇಕಾದರೆ ನಿನ್ನ ಹೆಂಡತಿ ಉಪಜೀವನದ ವ್ಯವಸ್ಥಾ ಮಾಡಿ ಮಾಡತಕ್ಕದ್ದು ಕ್ಯಾಲಿಕೊಂಡದ ಜಮೀನುಗಳು ಮಾರಬೇಕಾದರೆ ನನಗೆ ಕೊಡತಕ್ಕ [೨೦೦೦] ರೂಪಾಯಿ ಕೊಟ್ಟು ಮಾರಾಟ ಮಾಡತಕ್ಕದ್ದು ಈ ಕಾರಣದ ವೃದ್ಧಿಕ್ಯ ನಿನಗೆ ಈ ನೋಟೀಸು ಕೊಟ್ಟಿರುತ್ತೇನೆ ಇದಕ್ಕೆ ಎಂಟು ದಿವಸದಲ್ಲಿ ನಿನ್ನಿಂದಾ ಉತ್ತರ ದೊರೆಯದಿದ್ದರೆ ಮೇಲ್ಕಂಡ [೨೦೦] ರೂಪಾಯಿಗಳಿಗೆ ನಿನ್ನ ಮೇಲೆ ದಿವಾಣ್ಯಾಲ್ಲಿ ತೊಂಡೀ ದಾವೆ ಮಾಡಬೇಕಾದೀತು ಹಾಗೂ ನಿನ್ನ ಹೆಂಡತಿ ಉಪಜೀವನದ ಬಗ್ಗೆ ಸಹಾ ದಾವೇ ಮಾಡಬೇಕಾದೀತು ಈ ನೋಟಿಸಿನ ಖರ್ಚ ನಿನ್ನ ಕಳೆಯ ಮೇಲಿದೆ ತಿಳಿಯುವದು

ತಾರೀಖು. ೨೯-೬-೧೯೨೯

ಈ ಎಡಗೈ ಹೆಬ್ಬಟ್ಟಿನ ಗುರ್ತ ಮಾಯಪ್ಪಾ ಬಿನ್ನ ಯಂಕಪ್ಪಾ ಪಾಲೀಕಾರ ಸಾ| ಕ್ಯಾಲಿಕೊಂಡ ಈತನು ಮಾಡಿದ್ದು ಅದೆ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಬಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಸೂಚನೆ ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನ ಮೇಲಿಂದ ಈ ಬೇಡಿಕೆಯನ್ನು ಮಾಡುವಿರಿ ಎಂಬದನ್ನು ಬರೆಯಬೇಕು.

ನೋಟೀಸು

—(೦)—

ವೆ| ಬಸಯ್ಯಾ ತಂದಿ ಗುರುಪಾದಯ್ಯಾ ಹೊಸಳ್ಳಿ ಸಾ| ಮುದೆನೂರ ತಾಲ್ಲೂಕ ರಾಣೆಬೆನ್ನೂರ ಇವರಿಗೆ-

ಕೆಳಗೆ ಸಹಿ ಮಾಡಿದವಳು ಈ ನೋಟೀಸಿನಿಂದ ತಿಳಿಸುವದೇನಂದ್ರೆ- ತಾ|| ೨೬-೪-೨೯ ನೇ ದಿವಸ ನನ್ನ ಮೇಲೆ ನೀವು ಕೊಟ್ಟ ನೋಟೀಸಿನ ಮಜಕೂರು ಅಗದಿ ಸುಳ್ಳು ಮತಲಬಿ ಇರುತ್ತದೆ ನೀವು ನನ್ನ ಲಗ್ನದ ಗಂಡರಿದ್ದು ಅಜಮಾಸ ೪-೬ ವರ್ಷ ಹಲಕೀ ರೀತಿಯಿಂದಾ ಬಾಳ್ವೆ ಮಾಡಿದಿರಿ ಈಗ ೪-೬ ತಿಂಗಳ ಹಿಂದೆ ನನ್ನ ತವರಮನೆಗೆ ಖುಶಿಯಿಂದಾ ಕಳಿಸಿಕೊಟ್ಟಿರುತ್ತೀರಿ ನಂತರ ಬೇರೆ ಜನರ ಚಿತಾವಣೆಯಿಂದಾ ನನ್ನ ಸಂಗಡ ಬಾಳ್ವೆ ಮಾಡಲಿಕ್ಕೆ ಇರಾದೆಯಿಲ್ಲದ ಮೂಲಕ ನೋಟೀಸ ಕೊಟ್ಟಿರುತ್ತೀರಿ ನಾನು ಬರುವಾಗ ನನ್ನ ಮೈಮೇಲೆ ಇದ್ದ ದಾಗೀನೆ ಅಂದ್ರೆ ಒಂದು ಲಿಂಗದಕಾಯಿ ಬೆಳ್ಳಿದು ಅ|| ಕಿ|| ಎಂಟು ರೂಪಾಯಿ ಬೆಂಡವಾಲಿ ಜತಿ ಒಂದು ಅ|| ಕಿ|| ಮೂರು ರೂಪಾಯಿ ಕಾಲುಂಗರ ಬೆಳ್ಳಿವು ಅ|| ಕಿ|| ಮೂರು ರೂಪಾಯಿ ಇದರ ಹೊರ್ತಾಗಿ ನನ್ನ ಮೈಮೇಲೆ ದಾಗೀನೆ ಯಾವು ಇರುವದಿಲ್ಲಾ ಉಟ್ಟ ಸೀರಿ ಹೊರ್ತಾಗಿ ಒಂದೆ ಅರಿವೆ ತಂದಿಲ್ಲಾ ಈಗ ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನೀವು ಬಂದು ನನ್ನನ್ನು ಕರಕೊಂಡು ಹೋದಲ್ಲಿ ನಾನು ನಿಮ್ಮ ಕೂಡ ಬಾಳ್ವೆ ಮಾಡಲಿಕ್ಕೆ ಕಬೂಲ ಇದ್ದೇನೆ ಇಲ್ಲದಿದ್ದರೆ ನಿಮ್ಮ ಮೇಲೆ ಕೋರ್ಟಿನಲ್ಲಿ ನಾದಾರಿ ದಾವೇ ತಂದು ಪೋಟಗಿ ತೆಗೆದುಕೊಳ್ಳುತ್ತೇನೆ ಈ ನೋಟೀಸಿನ ಖರ್ಚ ನಿಮ್ಮ ತಲಿಯ ಮೇಲೆ ಇರುತ್ತದೆ ಎಂದು ಕೊಟ್ಟ ನೋಟೀಸು

ತಾ|| ೬-೭-೨೯

ಈ ಎಡಗೈ ಹೆಬ್ಬಟ್ಟಿನ ಗುರ್ತ ತಿರಕವ್ವಾ ಕೋಂ ಬಸಯ್ಯಾ ಹೊಸಳ್ಳಿ ಸಾ| ಹನಮನಹಳ್ಳಿ ತಾಲೂಕ ರಾಣೆಬೆನ್ನೂರ ಈಕಿ ಮಾಡಿದ್ದು ಅದೆ.

ಚಂದಾದಾರರಿಗೆ ಸೂಚನೆ

ಜುಲೈ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. B. 1443

ನಿತ್ಯಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಬುಧವಾರ ತಾರೀಖು ೧೦ ನೇ ಜುಲೈ ೧೯೨೯ (ಸಂಚಿಕೆ ೧೫೩

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯುತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಬ್ಬರಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩|| ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩|| ರೂ.

ಸೇವಿಂಗ್ಸ ಬ್ಯಾಂಕ:— ಒಬ್ಬರಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

[illegible] ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಬಗಿಸಿ ಕೊಡುವದರಲ್ಲಿ ಬರುವದು. [illegible] ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿ [illegible] ಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಕ್ಕದ ಉದಾರಿ ಕೊಡಲ್ಪಡುವವು

[illegible] ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡುವದಕ್ಕಾಗಿ ಊರುಗಳಿಗೆ ಕಳ್ಳಿಸ [illegible] ಕಳಿಸುವದರಲ್ಲಿ ಬರುವದು ದರ ಹಾಗೂ [illegible] ಪ್ರತಿಗಳೂ ಮೊಕದ್ದಮೆ ಪತ್ರಗಳೂ ಸದರಿ ಬ್ಯಾಂಕದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ ಡಿ. ಜೋನೆಲಿ,

ತಾ|| ೧೭-೬-೨೮ ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ನಂ ೪- ಮಂಗಳವಾರಪೇಟೆ, ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸಾಲ [illegible] ಹಾಗು ಮುದ್ದತಿಯ ಕನಿಷ್ಟ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

[illegible]

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಎಂಟು ಲಕ್ಷದ ಮೇಲಿಂದು, ಚಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾರ್ಹೋಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮುಕ್ಕುರಾವ ಬಿ. ಜಕಾತಿ.

ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೪-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಮ್ಯಾನೇಜರ ವಿಜಯ [illegible]

ವಿಜಯ.

ಧಾರವಾಡ ತಾ. ೧೦-೭-೨೯ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಪ್ರಿಯ
ಶ್ರೀ ವಸುಧಾತಿಯ ನಲಿಸಿಕೆ ಸುಹಿತಚರಿತೆಗಳಿಂ ॥
ದೀ "ವಿಜಯಂ" ಶ್ರೀಶಕರುಣ।
ನಾ ವಿಹಿತಂಗಳೆ ವಿವರಿಸಿನಲಿವುದು ಸಾಜಂ ॥೧॥

ಧಾರವಾಡ ಕನ್ನಡಿಗರ ಕೂಟದ ವಾರ್ಷಿಕೋತ್ಸವವು.

ಈ ಉತ್ಸವವು ಇದೇ ಆಷಾಢ ಶುದ್ಧ ೧ (ತಾ. ೭-೭-೨೯) ರವಿವಾರ ಪ್ರಾತಃಕಾಲದ ೮ ಗಂಟೆಯಿಂದ ೧೧ ರ ವರೆಗೆ ಶ್ರೀ ಶಾಂತೇಶ ವಾಚನಾಲಯದಲ್ಲಿ ಒಳ್ಳೇ ವಿಜೃಂಭಣೆಯಿಂದ ಜರಗಿತು. ಅಧ್ಯಕ್ಷಸ್ಥಾನವನ್ನು ಬೆಂಗಳೂರಿನಿಂದ ದಯಮಾಡಿಸಿದ ವಿದ್ವಾಂಸರಾದ ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯ ಎಂ ಎ ಎಲ್.ಟಿ. ಓರಿಯಂಟಲ್ ಟ್ರಾನ್ಸಲೇಟರರವರು ಸ್ವೀಕರಿಸಿದ್ದರು.

ಪ್ರಾರಂಭಕ್ಕೆ "ಕರ್ನಾಟಕರಾಣಿ ನೀ ಧನ್ಯ ಧನ್ಯ" ಎಂಬ ರಾಷ್ಟ್ರಗೀತೆಯನ್ನು ಕೂಟದ ಸದಸ್ಯರು ಅಂದರು. ಬಳಿಕ ಶ್ರೀ ಬೇಂದ್ರೆಯವರು ಕೂಟದ ಹಾಗೂ ಸಭಾಧ್ಯಕ್ಷರ ಪರಿಚಯವನ್ನು ಶ್ರೋತೃವೃಂದಕ್ಕೆ ಮಾಡಿಕೊಟ್ಟರು. ಆ ಮೇಲೆ ಕೂಟದ ಸದಸ್ಯರಾದ ಶ್ರೀ ಕಡ್ಲಬಾಳ ಪ್ರಲ್ಹಾದರವರು ಕೂಟದ ಪ್ರಥಮ ವರುಷದ ವರದಿಯನ್ನು ಓದಿತೋರಿಸಿದರು. ಅನಂತರ ಅಧ್ಯಕ್ಷರವರು ತಮ್ಮ ಅಸ್ಖಲಿತ ರಸಾಳ ವಾಣಿಯಿಂದ ಅಖಂಡ ೧॥ ತಾಸಿನ ವರೆಗೆ ಒಳ್ಳೇ ಮನೋಹರವಾಗಿ ಭಾಷಣಮಾಡಿದರು. ಅವರ ಭಾಷಣಪಾಂಡಿತ್ಯವನ್ನು ಎಷ್ಟು ಕೊಂಡಾಡಿದರೂ ಅಲ್ಪವೇ! ಕರ್ನಾಟಕದ ಗತವೈಭವವನ್ನು ಅವರೊಳ್ಳೇ ಹೃದ್ಯವಾಗಿ ಬಣ್ಣಿಸಿದರು. ಕನ್ನಡನಾಡು, ನುಡಿ ಮುಂದೆ ಬರಬೇಕಾದರೆ ಇದೀಗಿನ ತರುಣರು ಮಾಡಬೇಕಾದ ಕಾರ್ಯಗಳ ಯಥಾರ್ಥವಾದ ಚಿತ್ರವನ್ನವರು ಅತಿ ಮನೋಹರವಾಗಿ ಚಿತ್ರಿಸಿಕೊಟ್ಟರು. ಅವರ ಸ್ವಾರಸ್ಯಪೂರ್ಣವಾದ ಭಾಷಣದಿಂದ ಇಡೀ ಸಭೆಗೆ ಸಭೆಯೇ ತಲೆದೂಗಿತು. ಅಧ್ಯಕ್ಷರ ಭಾಷಣದನಂತರ ಕರ್ನಾಟಕ ಕುಲಪುರೋಹಿತರಾದ ಶ್ರೀಮಾನ್ ಆಲೂರ ವೆಂಕಟರಾಯರು ಕೂಟದ ಪರವಾಗಿ ಅಧ್ಯಕ್ಷರ ಹಾಗೂ ಆಮಂತ್ರಿತ ಸದ್ಗೃಹಸ್ಥರ ಆಭಾರವನ್ನಿಸಿದರು. ಸಭಾಕಾರ್ಯವು ಮುಗಿದ ಬಳಿಕ ಬಂದವರಿಗೆಲ್ಲ ವಿದ್ಯಾರ್ಥಿನಿಲಯದಲ್ಲಿ ಕೂಟದವರಿಂದ ಫಲಾಹಾರ ಕೊಡಲ್ಪಟ್ಟಿತು. ಸುಮಾರು ನೂರಿಪ್ಪತ್ತು ಜನರು ದಯಮಾಡಿಸಿದ್ದರು. ಸಾಯಂಕಾಲದ ೪॥ ಗಂಟೆಗೆ ವ್ಹಿಕ್ಟೋರಿಯಾ ಹಾಯಸ್ಕೂಲಿನಲ್ಲಿ ಕೂಟದ ಮಲ್ಲಸಜ್ಜನ ವ್ಯಾಯಾಮ ಶಾಲೆಯ ವಿದ್ಯಾರ್ಥಿಗಳು ತಮಗೆ ಅವಗತವಿರುವ ಎಲ್ಲ ಬಗೆಯ ಮುಖ್ಯ ಮುಖ್ಯ ಆಟಗಳನ್ನಾಡಿ ತೋರಿಸಿ ಅಧ್ಯಕ್ಷರನ್ನು ತುಂಬಾ ಸಂತೋಷಗೊಳಿಸಿದರು.

ಹುಣ್ಣಿನ ಮೇಲೆ ಉಪ್ಪು ಸವರಿದಂತೆ!!!

ಮುಖ್ಯ ಮಂತ್ರಿಯಾದ ಮಿ. ಮ್ಯಾಕಡೋನಾಲ್ಡ ಸಾಹೇಬರು ಸಾಯಮನ್ನ ಕಮೀಶನಕ್ಕೆ ಬಹಿಷ್ಕಾರ ಹಾಕಿದಂಥ ಹಿಂದೀ ಪ್ರಮುಖ ಗೃಹಸ್ಥರಿಗೆ ಈಗಾದರೂ ಸಹಕಾರ ಮಾಡಬೇಕೆಂದು ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಕ್ಕೆ ಪಂಡಿತ ಮೋತಿಲಾಲರು ಮುಂದೆ ಬರೆದಂತೆ ಉತ್ತರ ಕೊಟ್ಟಿದ್ದಾರೆ.

ಮಿ. ಮ್ಯಾಕಡೋನಾಲ್ಡ ಸಾಹೇಬರ ಅಪೇಕ್ಷೆಯು ಹುಣ್ಣಿನ ಮೇಲೆ ಉಪ್ಪು ಸವರಿದಂತಿರುತ್ತದೆ. ಕೂಲಿಕಾರರು ದಿವಾನಗಿರಿಗೆ ಬರುವ ಮೊದಲು ಸಾಯಮನ್ನ ಕಮೀಶನದ ನಿರ್ಮಾತಿಗೆ ಸಮ್ಮತಿ ಕೊಟ್ಟಿದ್ದಾರೆ. ಈ ಬಗ್ಗೆ ತಾವು ಮಾಡಿದ ತಪ್ಪನ್ನು ಒಪ್ಪಿ, ಮನಸ್ಸಿನಿಂದ ಸ್ವರಾಜ್ಯ ವಿಚಾರ ಪ್ರಾರಂಭಿಸುವದಿಲ್ಲ. ಹಿಂದುಸ್ಥಾನದ ಮೇಲೆ ಹಿಂದುಸ್ಥಾನದ ಅಪೇಕ್ಷೆಯ ವಿರುದ್ಧ ಹೇರಿದ ಕಮೀಶನದ ವೇಳೆಯಲ್ಲಿ ಪ್ರಜರ ಮೇಲೆ ಪಶುತುಲ್ಯ ಹಾವಳಿಹಾಕಿದ್ದಲ್ಲದೆ, ಹಿಂದುಸ್ಥಾನದ ಮಾನಕ್ಷತಿಯಾಗುವಂಥ ಕೃತ್ಯವನ್ನೂ ಮಾಡಿದ್ದಾರೆ. ಈ ಹಾವಳಿಯಲ್ಲಿ ಶಾಂತತಾಪ್ರಿಯರೂ, ಪ್ರತಿಷ್ಠಿತ ಗೃಹಸ್ಥರೂ ಪೆಟ್ಟು ತಿಂದವರಾಗಿದ್ದಾರೆ. ಈ ಪ್ರಕಾರ ನಡೆದ ಸಂಗತಿಗಳ ನಂತರ ಹಿಂದುಸ್ಥಾನಕ್ಕೆ ಶಾಂತಿ, ಸೌಖ್ಯ ಮತ್ತು ಶ್ರೇಷ್ಠತೆ ಪ್ರಾಪ್ತವಾಗುವದೆಂದು ಹೇಳುವದು ಹೇಗೆ? ಈ ಪ್ರಕಾರ ಹೇಳುವದೆಂದರೆ ಹಿಂದುಸ್ಥಾನದ ಮರ್ಯಾದೆಗೆ ಭಂಗತರುವಂತಹದೇ ಆಗುತ್ತದೆ. ಬಾದಶಹರ ಭಾಷಣದಲ್ಲಿ ಹಿಂದುಸ್ಥಾನದ ಹೆಸರು ತಕ್ಕೊಳ್ಳದಿರುವದಕ್ಕೆ ಸಾಯಮನ್ನ ಕಮೀಶನದ ವಿಚಾರಣೆಯು ಮುಗಿದಿಲ್ಲೆಂಬದೇ ನಿಜ ಕಾರಣವೆಂದು ಹೇಳುತ್ತಾರೆ. ಇದ್ದೇನು ಸಾಯಮನ್ನ ಕಮೀಶನದ ಮುಖಾಂತರವಾಗುವದೋ! ಅಥವಾ ಮಂತ್ರಿಗಳು ಇದರಲ್ಲೇನಾದರೂ ಸೇರಿಸುವರೋ! ಎಂಬದು ತಿಳಿಯದಾಗಿದೆ. ಆದ್ದರಿಂದ ಹಿಂದುಸ್ಥಾನವು ಸಾಯಮನ್ನ ಕಮೀಶನದ ಕೂಡ ಹೊಸ ಸಂಧಾನ ನಡಿಸುವದು ಸಂಶಯಾಸ್ಪದವಾದ ಪ್ರಶ್ನವಾಗುತ್ತದೆ. ಆದ್ದರಿಂದ ಕಾಂಗ್ರೆಸಿನ ವರ್ಕಿಂಗ ಕಮೀಟಿಯವರು ಸಾಹೇಬರ ಭಾಷಣವನ್ನು ಯೋಗ್ಯ ಒರೆಗಲ್ಲಿಗೆ ಹಚ್ಚಿರುತ್ತಾರೆ. ಜಾಂಗ ಸ ಧೃಷ್ಟಿಯಿಂದಂತೂ ಈ ಬಗ್ಗೆ ಜೂಜಿನಂತೆ ಪಣತಿ ನಘವತಿ ಮಾಡತಕ್ಕದ್ದೇನೂ ಇರುವದಿಲ್ಲ.

ಮದ್ಯಪಾನ ಪ್ರತಿಬಂಧಕನ ಅತ್ಯಾಚಾರ.

—(೦)—

ಇಬ್ಬರನ್ನು ಗುಂಡು ಹಾಕಿ ಕೊಂದನು.

—(೦)—

ಅಮೇರಿಕೆಯಲ್ಲಿ ಮದ್ಯಪಾನ ಪ್ರತಿಬಂಧಕರ ಹೆದರಿಕೆಯು ಎಷ್ಟಿರುತ್ತದೆಂಬದನ್ನು ಈ ಮೊದಲು ಬರೆದಿದ್ದೇವೆ. ನಮ್ಮ ಮಾತಿನಲ್ಲಿ ಸರಾಯಿ ಇಲ್ಲ. ಗುಂಡು ಹಾಕಬೇಡಿರೆಂದು ಧೈರ್ಯದಿಂದ ಬರೆಕೊಳ್ಳುವದರಿಂದ, ಅಲ್ಲಿ ಮದ್ಯಪಾನ ನಿಲ್ಲಿಸುವ ಬಗ್ಗೆ ಅತ್ಯಂತ ಕಠಿಣವಾದ ಮತ್ತು ಉಗ್ರವಾದ ಕಾಯದೆ ಇರಬೇಕೆಂದು ಸ್ಪಷ್ಟವಾಗುತ್ತದೆ. ಈ ಉಗ್ರತೆಯು ಒಂದು ಪ್ರತ್ಯಕ್ಷ ಕೃತಿಯು ಒದಗಿದೆ. ಥಾಮಸನನೆಂಬ ಹೆಸರಾದ ಮದ್ಯಪಾನ ವಿರೋಧಕನು ತನ್ನ ಮೂವರು ಕೈತಳಗಿನವರೊಂದಿಗೆ ಹ್ಯಾರಿಸನೆಂಬ ಸಾಹೇಬನ ಮನೆಯಲ್ಲಿ ಬ್ರಾಂಡಿ ಇರಬೇಕೆಂಬ ಸಂಶಯದಿಂದ ಝಡತಿಗೆ ಹೋದನು. ಝಡತಿಯಲ್ಲಿ ಏನೂ ಸಿಗದ್ದರಿಂದ ಥಾಮಸನನು ಸಾಹೇಬನು ಹ್ಯಾರಿಸ ಮತ್ತು ಆತನ ಬೀಗನನ್ನು ಗುಂಡು ಹಾಕಿ ಕೊಂದನು. ಝಡತಿಯ ವಾರಂಟು ಇರದಿದ್ದರೂ, ಸಾಹೇಬನು ತಾನಾಗಿ ಝಡತಿಗೆ ಹೋಗಿ ಕೊಲೆಮಾಡಿದನು. ಪೋಲೀಸರು ಈತನನ್ನು ದಸ್ತಗಿರ ಮಾಡಿದ್ದಾರೆ.

ಬಡೋದೆ ರಾಜ್ಯದಲ್ಲಿ ಗಂಡನ ಕೂಡ ಹೆಂಡತಿಗೂ ಶಿಕ್ಷಣ.

—(೦)—

ಬಡೋದೆ ರಾಜ್ಯದಲ್ಲಿ ಟ್ರೇನಿಂಗ ಕಾಲೇಜದಲ್ಲಿ ಗಂಡಸರ ಕೂಡ ಅವರ ಹೆಂಡಂದಿರಿಗೂ ಶಿಕ್ಷಣಕೊಡಬೇಕೆಂಬ ಏರ್ಪಾಡುಮಾಡಿದ್ದಾರೆ. ಬಾಲಿಕೆಯರ ಶಾಲೆಗಳಲ್ಲಿ ಸ್ತ್ರೀಯರೇ ಶಿಕ್ಷಕಿಯರಾಗಿರುವದಂತೂ ಸರಿಯೇ. ಗಂಡುಮಕ್ಕಳ ಶಾಲೆಯಲ್ಲಿ ಸಹ ಶಿಶುವಿನ ವರ್ಗದಲ್ಲಿ ಹೆಣ್ಣುಮಕ್ಕಳೇ ಕಲಿಸಬೇಕೆಂದು ಅಲ್ಲಿಯ ವಿದ್ಯಾ ಕಮೀಟಿಯವರು ವಿಚಾರಮಾಡಿದ್ದಾರೆ. ಆದ್ದರಿಂದ ಗಂಡಹೆಂಡರಿಬ್ಬರು ಒಂದೇ ಕಡೆಯಲ್ಲಿ ಕಲಿತರೆ ಮತ್ತು ಒಂದೇ ಸ್ಥಳದಲ್ಲಿ ಕಲಿಸಿದರೆ ಅವರ ಶಿಕ್ಷಣ ಬೆಳೆದು, ದಾಂಪತ್ಯ ಸುಖವು ಹೆಚ್ಚಿ, ಶಿಕ್ಷಣ ಕಾರ್ಯವೂ

ಸಂತೋಷಕರವಾಗಿ ಸಾಗುವವೆಂದು ಇವರಿಗೆ ವಿಮತವಾಗಿ ಮೇಲಿನ ಏರ್ಪಾಡು ಮಾಡಿದ್ದಾರೆ

ಸಿಂಧ ಹೈದರಾಬಾದಿನವರಾದ ಶಮ್ಸುಲ ಉಲೇಮಾ ಮಿರ್ಜಾ ಕಾಲೀಚ ಬೇಗರೆಂಬವರು ತಮ್ಮ ವಯಸ್ಸಿನ ೮೦ ವರ್ಷದಲ್ಲಿ ಪರಲೋಕವಾಸಿಯಾದರು. ಇವರು ಸಿಂಧಿ ಭಾಷೆಯಲ್ಲಿ ವಿದ್ವಾಂಸರಾಗಿದ್ದರು. ಅನೇಕ ಗ್ರಂಥಗಳನ್ನು ಬರೆದಿರುತ್ತಾರೆ, ಅರಬ್ಬಿ ಪರ್ಸಿಯನ್ ಮತ್ತು ಸಂಸ್ಕೃತದ ಅಭ್ಯಾಸ ಮಾಡಿದ್ದರು.

ಬ್ರಹ್ಮದೇಶದಲ್ಲಿ ಅಕ್ಯಾಬ ಜಿಲ್ಲೆಯಲ್ಲಾದ ಅತಿವೃಷ್ಟಿಯಿಂದ ೨೫ ಲಕ್ಷದ ಹಾನಿಯಾಗಿದೆ. ಕೊಂಕಣ ಪ್ರಾಂತದಲ್ಲಿಯೂ ಅನಾವೃಷ್ಟಿಯಾಗಿ ಬೆಳೆಗಳಿಗೆ ವಿಪರೀತ ನೆರೆಯಿಂದ ಬಹುವಾಗಿ ಹಾನಿಯಾಗಿದೆ.

ಧಾರವಾಡ

ಶ್ರೀ ಸಿದ್ಧಾರೂಢ ಸ್ವಾಮಿಗಳ ಜವಾಬನ್ನು ಹುಬ್ಬಳ್ಳಿಯಲ್ಲಿ ಮುಖತಃ ದ್ವಾರದಿಂದ ತಕ್ಕೊಳ್ಳಬೇಕೆಂದು ಗೊತ್ತಾಯಿತು.

ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್ ಧಾರವಾಡ

ನೋಟೀಸು.

ಸದರಿ ಬ್ಯಾಂಕಿನ ಶೇರಹೊಲ್ಡರ ಜನರ ಏಳನೆಯ ಸಾಧಾರಣ ವಾರ್ಷಿಕ ಸಭೆಯು ಆದಿತ್ಯವಾರ ತಾ. ೨೧-೭-೧೯೨೯ ದಿವಸ ಪ್ರಾತಃಕಾಲದ ೮ ಘಂಟೆಗೆ ಸರಿಯಾಗಿ ಬ್ಯಾಂಕ ಆಫೀಸಿನಲ್ಲಿ ಕೆಳಗೆ ಕಾಣಿಸಿದ ವಿಷಯಗಳನ್ನು ಚರ್ಚಿಸುವದಕ್ಕಾಗಿ ನೆರೆಯುವದು.

೧ ಡಾಯರೆಕ್ಟರರ ರಿಪೋರ್ಟನ್ನು ಹಾಗು ಆಡಿಟ್ಟಾದ ಬ್ಯಾಲನ್ಸಶೀಟ, ಮತ್ತು ಪ್ರಾಫಿಟ ಆ್ಯಂಡ ಲಾಸ ಅಕೌಂಟ ಓದಿ ಸ್ವೀಕರಿಸುವದು.

೨ ಡಿವಿಡೆಂಡ್ ಗೊತ್ತು ಪಡಿಸುವದು.

೩ ಈ ವರ್ಷ ರಿಟಾಯರ ಆಗುವ ಡಾಯರೆಕ್ಟರರ ಸ್ಥಳದಲ್ಲಿ ಪುನಃ ಡಾಯರೆಕ್ಟರರನ್ನು ಆರಿಸುವದು.

೪ ಚಾಲೂ ವರ್ಷದಬಗ್ಗೆ ಒಬ್ಬ ಸರ್ಟಿಫಾಯಿಡ ಆಡಿಟರನನ್ನು ನೇಮಿಸಿ ಆತನ ಪಗಾರವನ್ನು ತಾನೆ ಗೊತ್ತು ಪಡಿಸುವದು.

೫ ಚೇರಮನ್ನರಿಂದ ಸಭೆಯ ಮುಂದೆ ಇರಿಸಲ್ಪಡುವ ಮತ್ತು ಯಾವದೇ ವಿಷಯವನ್ನು ಗೊತ್ತು ಪಡಿಸುವದು.

ಬೋರ್ಡಿನ ಅಪ್ಪಣೆಯಿಂದ

ಧಾರವಾಡ ತಾ ೯-೭-೨೯ } ದೇಶಪಾಂಡೆ ಮತ್ತು ಕಂ. ಮ್ಯಾನೇಜಿಂಗ ಏಜಂಟ್ಸ.

ಜಾಹೀರ ನೋಟೀಸು

—(೦)—

ಕೆಳಗೆ ಸಹಿಮಾಡುವ ಎಲ್ಲಪ್ಪಾ ತಂದಿ ಗೋಣೆಪ್ಪಾ ಕರೆಗಾರ ಸಾ|| ಕಬ್ಬೂರ ತಾಲ್ಕು ಕರಜಗಿ ಈತನು ತನ್ನ ಮಗನಾದ ಗೋಣ್ಯಾ ತಂದಿ ಎಲ್ಲಪ್ಪಾ ಕರೆಗಾರ ಸಾ|| ಕಬ್ಬೂರ ಹಾಲಿವಸ್ತಿ ದೇವಿಹೊಸೂರ ತಾಲ್ಕು ಕರಜಗಿ ಈತನಿಗೆ ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಖಾಸ ಮಗನಾಗಬೇಕು ನಾನು ಹೇಳಿದ ಮಾತು ಕೇಳದೆ ಎರಡನೇಯವರ ಚಿತಾವಣಿಯಿಂದ ಹಿಸೆಮಾಡಿಕೊಡು ಅಂತಾ ತ್ರಾಸ ಮಾಡಿ ನನಗೆ ಹೇಳದೆ ಕೇಳದೆ ನಿನ್ನ ಹೆಂಡತಿಯ ಮಾತು ಕೇಳಿ ಮೊದಲು ನಿನ್ನ ಹೆಂಡತಿಯಾದ ಫಕೀರವ್ವನನ್ನು ದಾಗೀನೆಗಳು ಸಹಿತ ನಿನ್ನ ಖಾಸ ಅತ್ತೆಯಾದ ಗಂಗವ್ವಾ ತಾಯಿ ಕನ್ನವ್ವಾ ಕರೆಗಾರ ಮುರಸಂಗವರ ಸಾ|| ದೇವಿಹೊಸೂರ ಇವಳ ಮನೆಗೆ ಕಳಿಸಿಕೊಟ್ಟು ಕೆಲವು ದಿವಸಗಳನಂತರ ಮಸಲತ್ತು ಮಾಡಿ ಹೊಲಕ್ಕೆ ಹೋಗುವ ನೆವಮಾಡಿಕೊಂಡು ಎತ್ತುಗಳನ್ನು ಕೊಳ್ಳು ಕಟ್ಟಿಕೊಂಡು ಗಳೇ ಸಾಮಾನ ಹೇರಿಕೊಂಡು ಹೊಡಕೊಂಡು ಹೋಗಿ ಸದರ ಗಂಗವ್ವನ ಮನೆಯಲ್ಲಿ ನೀನು ಮ ನಿನ್ನ ಹೆಂಡತಿ ಸಹಿತ ಇರುತ್ತೀದಿ ನಿನ್ನ ಹೆಂಡತಿಯನ್ನು ತವರಮನೆಗೆ ಕಳಿಸುವಾಗ್ಗೆ ಮ ನೀನು ಅತ್ತೆಯ ಮನೆಗೆ ಹೋಗುವಾಗ್ಗೆ ಒಯ್ದ ದಾಗೀನೆಗಳ ಮ ಅರಿವೆಗಳ ಮತ್ತು ಎತ್ತುಗಳ ತಪಶೀಲು ಕೆಳಗೆ ಬರೆದ ಪ್ರಕಾರ-

ಬಂಗಾರದ ಸರಿಗಿ ೧ ತೊಲಿ ೮ ಕಿಂ| ರೂ| ೧೫೦, ಬಳಿ ಜೋಡು ೧ ಬಂಗಾರದ್ದು ತೊಲಿ ೫ ಕಿಂ| ರೂ| ೮೫, ಬೆಂಡವಾಲಿ ಜೋಡು ೧ ಬಂಗಾರದ್ದು ತೊಲಿ ೦|೦ ಕಿಂ| ರೂ| ೬, ಬೆಳ್ಳಿ ಪಟ್ಟಿ ೧ ಸಾದಾ ತೊಲಿ ೧೦ ಕಿ| ರೂ| ೮, ಬೆಳ್ಳಿ ಸರಪಳಿ ಜೋಡು ೧ ತೋಡೆ ಮಾಟದ್ದು ತೊಲಿ ೧೨೦ ಕಿಂ| ರೂ| ೯೦, ಬೆಳ್ಳಿಯ ಬಂದಿ ಜೋಡು ೧ ತೊಲಿ ೨೪ ಕಿಂ|| ರೂ| ೧೮, ಬೆಳ್ಳಿ ಕಡಗಾ ೧ ತೊಲಿ ೮ ಕಿಂ| ರೂ| ೬, ಸೀರಿ ಕರೇ ಕಾಳೆನದು ಹೊಸಾದು ೧ ಖಣಾ ೧ ಹೊಸಾದು ಇವುಗಳ ಕಿಂ| ರೂ| ೨೬, ಎತ್ತುಗಳು ಮ ಗಳೆ ಸಾಮಾನ ಸಹಿತ ಇವುಗಳ ಕಿಂ| ರೂ| ೩೨೫

ಈ ಪ್ರಕಾರ ಮೇಲೆ ನಮೂದಮಾಡಿದ ದಾಗೀನೆ ಮ ಅರಿವೆ ಮತ್ತು ಎತ್ತುಗಳನ್ನು ತಗೊಂಡು ಒಂದು ಲಗ್ನದ ಸಲುವಾಗಿ ಮ ಮನೆ ಕಟ್ಟುವದರ ಸಲುವಾಗಿ ಮತ್ತು ಎತ್ತುಗಳನ್ನು ಕೊಳ್ಳುವದರ ಸಲುವಾಗಿ ಎರಡನೇಯವರಲ್ಲಿ ೮೦೦ ರೂಪಾಯಿ ಸಾಲಾಮಾಡಿದ್ದು ಸಾಲಗಾರರು ತಗಾದಿ ಮಾಡಿರುತ್ತಾರೆ ತಗಾದೆ ದೂಂಮಾಡತಕ್ಕದ್ದು ಮತ್ತು ನಿನ್ನ ತಮ್ಮಂದಿರ ಮ ತಂಗಿಯ ಲಗ್ನದ ಖರ್ಚ ತೆಗೆದು ಹಿಸೆಮಾಡಿಕೊಂಡು ತಗೊಂಡು ಹೋಗತಕ್ಕದ್ದು ನನ್ನ ಮಗನ ಸಂಗಡ ಯಾರೂ ಯಾವ ವ್ಯವಹಾರ ಮಾಡಬಾರದು ಮಾಡಿದಲ್ಲಿ ನಾನು ಜವಾಬದಾರನು ಅಲ್ಲಾ ಈ ಜಾಹೀರ ನೋಟೀಸ ಮುಟ್ಟಿದ ೮ ದಿವಸದಲ್ಲಿ ನಿಕಾಲಿಮಾಡಿಕೊಂಡು ಹೋಗತಕ್ಕದ್ದು ಹೋಗದೆ ಇದ್ದಲ್ಲಿ ಕಾಯದೇಶೀರ ನಿನ್ನ ಮೇಲೆ ಇಲಾಜಮಾಡುವಗರಲ್ಲಿ ಬರುವದು ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲೆ ಅದೆ ತಿಳಿಯುವದು ತಾ|| ೨೪-೬-೨೯ ಇಸ್ವಿ

ಸಹಿ- ಯಲ್ಲಪ್ಪಾ ಬಿನ್ನ ಗೋಣೆಪ್ಪಾ ಕರಿಗಾರ ಸಾಕೀನ ಕಬ್ಬೂರ

ಜಾಹೀರ ನೋಟೀಸು

—(೨)—

ಕೆಳಗೆ ಸಹಿ ಮಾಡಿದವರ ಕಡಿಂದ ತಿಳಿಸುವದೇನಂದರೆ- ಧಾರವಾಡ ಶಹರ ಜನಳಿಪ್ಯಾಟಿಯಲ್ಲಿ ಸಿಟಿ ಸರ್ವೆ ನಂಬರು ೧೪೩೭ ನೇ ಅಂಗಡಿಯು ಪಿತ್ರಾರ್ಜಿತ ಮೇಲ್ಕತ್ತ ಘರಾಣೇದ ಮಿಳಕತ ಇದ್ದು ಅದು ೧೯ ೫ನೇ ಇಸ್ವಿಯಲ್ಲಿ ವಿಭಾಗ ಆಗಿ ಸದರ ಅಂಗಡಿಯಲ್ಲಿಯ ಪೂರ್ವ ದಿಕ್ಕಿನ ಅರ್ಧಾ ಅಂಗಡಿ ಗತಾಸ್ತ ಗಂಗಾಧರರಾವ ಮುಧೋಳಕರ ಅಲ್ಪವಯಿ ಸಂರಕ್ಷಣದಾರ- ಜನಕತಾಯಿ ಸಂಗಬಾಯಿ ಭ್ರಾತಾರ ಗಂಗಾಧರರಾವ ಮುಧೋಳಕರ ಇವರ ಹಿಸೇದ್ದು ಮತ್ತು ಪಶ್ಚಿಮಕಡಿಯ ಅರ್ಧಾ ಅಂಗಡಿ ನರಸಿಂಗಪ್ಪಾ ಗಂಗಾಧರರಾವ ಮತ್ತು ಶಂಕರ ಗಂಗಾಧರರಾವ ಈ ಉಭಯತರ ಹಿಸೇದ್ದು ಈ ಪ್ರಕಾರ ವಾಟಣಿ ಆಗಿರುತ್ತದೆ ಸದರ ನರಸಿಂಗಪ್ಪಾ ಇವನ ಹಿರಿಯ ಅಣ್ಣನಿದ್ದದರಿಂದ ಕಾಗದಪತ್ರದಲ್ಲಿ ಆವನ ಹೆಸರು ಹಾಗೇ ಉಳಿದದೆ ಗೊತ್ತಿಲ್ಲದೇ ಲಿಲಾವಿನಲ್ಲಿ ತಕ್ಕೊಳ್ಳುವವರಿಗೆ ಲುಕ್ಸಾನ ಆಗಬಾರದೆಂದು ಪೂರ್ವ ದಿಕ್ಕಿನ ಅರ್ಧಾ ಅಂಗಡಿ ನನ್ನ ತಾಯಿ ಮಗನ ಮಾಲ್ಕಿ ವಹಿವಾಟಿಯಲ್ಲಿ ಇತ್ತೆಂದು ಜಾಹೀರು ಮಾಡಿರುತ್ತೇವೆ ತಿಳಿಯುವದು ತಾ|| ೮-೭-೧೯೨೯

ಸಹಿ- ಇಂಗ್ಲಿಷ ಜಿ ಜಿ. ಮುಧೋಳಕರ

ಗೊತ್ತು ಪಡಿಸುವದು.

ಬೋರ್ಡಿನ ಅಪ್ಪಣೆಯಿಂದ

ಧಾರವಾಡ ता॥ ೧೦-೭-೨೯ } ದೇಶಪಾಂಡೆ ಮತ್ತು ಕಂ. ಮ್ಯಾನೇಜಿಂಗ ಏಜಂಟ್ಸ.

ಮೃತ್ಯುಪತ್ರ ರದ್ದು ಮಾಡಿದ ಜಾಹೀರ ನೋಟೀಸು.

—(೦)—

ಕೆಳಗೆ ಸಹಿಮಾಡಿದ ದೇವಪ್ಪಾ ಫಕೀರಪ್ಪಾ ಬಡಿಗೇರ ಸಾ॥ ಕೋಟೂರ ತಾಲೂಕ ಧಾರವಾಡ ಈತನು ಜಾಹೀರ ರೀತಿಯಿಂದ ತಿಳಿಸುವದೇನಂದರೆ-

ನಾನು ನನ್ನ ಹೆಂಡತಿಯ ತಂಗಿಯ ಮಗಳಾದ ರುದ್ರವ್ವಾ ಕೋಂ ಶಿವಪ್ಪಾ ಬಡಿಗೇರ ಸಾಕಿನ ಕೋಟೂರ ಈಕೆಯ ಹೆಸರಿನಿಂದ ಒಂದು ಮೃತ್ಯುಪತ್ರ ಬರೆಸಿ, ಅದನ್ನು ಧಾರವಾಡ ತಾಲೂಕ ಸಬ್ರಜಿಸ್ಟರ ಕಚೇರಿಯಲ್ಲಿ ತಾ॥ ೧೯ ಜನೆವರಿ ೧೯೨೭ ನೇ ಇಸವಿಯ ದಿವಸ ನೋಂದಣಿ ಮಾಡಿಸಿರುತ್ತೇನೆ. ಸದರ ಮೃತ್ಯುಪತ್ರದಲ್ಲಿ ಬರೆದ ಸ್ಥಾವರಾಸ್ತಿಗಳು ಅಂದರೆ- ಹೊಲಮನಿಗಳು ಸದರ ರುದ್ರವ್ವನಿಗೆ ನನ್ನ ಪಶ್ಚಾತ್ತು ವಾರಸಾನಾತೆದಿಂದ ಹೋಗತಕ್ಕದ್ದೆಂದು ಬರೆದಿದೆ ಸದರ ರುದ್ರವ್ವಾ ಈಕೆಯು ಈಗ ಮನಸ್ಸು ಕೆಟ್ಟವಳಾಗಿ ನನ್ನ ಕೂಡ ಸುಳೇಕವಾಗಿ ನಡೆಯದೆ, ನನ್ನ ಸಂರಕ್ಷಣೆಯ ಬಗ್ಗೆ ಯಾವ ಕಾಳಜಿ ತಕ್ಕೊಳ್ಳದೆ, ನನಗೆ ಅಹಿತವಾಗುವಂಥ ಕೃತ್ಯಮಾಡಲಾರಂಭಿಸಿದ್ದಾಳೆ ಈಕೆಯ ಈ ಕೃತ್ಯವು ಮೃತ್ಯುಪತ್ರದಲ್ಲಿ ಬರೆದ ಶರ್ತುಗಳಿಗೆ ವಿರುದ್ಧವಾಗುವದರಿಂದ, ಮತ್ತು ಮುಪ್ಪಿನ ಕಾಲದಲ್ಲಿ ಇವಳು ನನ್ನ ಸಂರಕ್ಷಣೆ ಮಾಡುವದು ತೀರ ಅಸಂಭವವಾದ್ದರಿಂದ, ನನಗೆ ನಿರುಪಾಯವಾಗಿ ಈ ಮೃತ್ಯುಪತ್ರ ರದ್ದುಮಾಡುವ ಅಗತ್ಯವುಂಟಾಯಿತು ಆ ಪ್ರಕಾರ ಈ ಜಾಹೀರ ನೋಟೀಸಿನಿಂದ ರದ್ದುಪಡಿಸಬೇಕಾಯಿತು ಆದ್ದರಿಂದ ಇವತ್ತಿನ ತಾರೀಖಿನಿಂದ ಸದರ ರುದ್ರವ್ವನ ಸಂಬಂಧವು ಮೃತ್ಯುಪತ್ರ ಖಾತೇದಿಂದ ನನ್ನ ಕೂಡ ಯಾವ ರೀತಿಯಿಂದಲೂ ಉಳಿಯಲಿಲ್ಲ ಮತ್ತು ಈ ಪತ್ರವನ್ನು ಸಬ್ರಜಿಸ್ಟರ ಕಚೇರಿಯಲ್ಲಿ ನನ್ನ ಸವಡಿ ಪ್ರಕಾರ ರದ್ದುಪಡಿಸುವೆನು ಒಂದು ವೇಳೆ ಯಾವದೇ ಕಾರಣದಿಂದ ಅಲ್ಲಿ ರದ್ದುಮಾಡಿಸುವದಾಗದಿದ್ದರೂ, ಈ ಜಾಹೀರ ನೋಟೀಸಿನಿಂದ ಅದು ರದ್ದಾಗಿರುತ್ತದೆಂದು ತಿಳಿಯಬೇಕು ಮತ್ತು ಸದರ ನನ್ನ ಮೃತ್ಯುಪತ್ರದಲ್ಲಿ ಕಾಣಿಸಿದ ಆಸ್ತಿಯ ವಿಲೇವಾಟ ನನ್ನ ಮರ್ಜಿ ಪ್ರಕಾರ ಮಾಡಲಿಕ್ಕೆ ನಾನು ಪೂರ್ಣ ಮಾಲೀಕನಿರುತ್ತೇನೆ ತಿಳಿಯುವದು ತಾ॥ ೯-೭-೧೯೨೯

ಸಹಿ- ದೇವಪ್ಪಾ ಫಕೀರಪ್ಪಾ ಬಡಿಗೇರ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ನೃತ್ಯರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚ ಇಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ನಿಮ್ಮ ಔಷಧ ಬೇಕಾದಾಗ ಯಾವ ವರ್ತಮಾನಪತ್ರದ ಜಾಹೀರಾತನ್ನು ನೋಡಿ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು.

ನೋಟೀಸು

—(೦)—

೧ ರುದ್ರವ್ವಾ ಕೋಂ ಶಿವಪ್ಪಾ ಕೋಟೂರ

೨ ಸಿರಸವ್ವಾ ಕೋಂ ಫಕೀರಪ್ಪಾ ಪತ್ತಾರ ಬಸನಾಳ ತಾಲೂಕ ಶಿಗ್ಗಾವಿ ಪೋ॥ ಹುಲಗೂರ ಇವರಿಗೆ-

ಕೆಳಗೆ ಸಹೀಮಾಡಿದ ದೇವಪ್ಪಾ ಫಕೀರಪ್ಪಾ ಬಡಿಗೇರ ಈತನು ನಿಮಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀವು ನನ್ನ ಸಂರಕ್ಷಣೆಮಾಡುವಿರೆಂದು ನಿಮ್ಮ ಪೈಕಿ ರುದ್ರವ್ವಾ ಈಕೆಯ ಹೆಸರಿನಿಂದ ಮೃತ್ಯುಪತ್ರ ಮಾಡಿಸಿದೆ ನೀವು ಸರಿಯಾಗಿ ನಡೆಯದ್ದರಿಂದ ಸದರ ಪತ್ರವನ್ನು ರದ್ದುಮಾಡಿದಂತೆ ಇದೇ ನೋಟೀಸಿನ ಸಂಗಡ ಅಲಾಹಿದಾ ಛಾಪಿಸಿದ್ದೇನೆ ನೀವು ನನ್ನನ್ನು ಸಂರಕ್ಷಣೆಮಾಡುವ ಬದಲು ನನ್ನ ಲುಕಸಾನ ಮಾಡುವ ದುರುದ್ದೇಶದಿಂದ ನನ್ನ ಮಾಲಕಿಯ ದಾಗೀನೆಗಳು ಅಂದರೆ-

೧ ಬಂಗಾರದ ವಂಕೀ ಜೋಡು ತೊಲಿ ೨೮

೨ ಸರಗಿ ಬಂಗಾರದ್ದು ತೊಲಿ ೮

೩ ಬಂಗಾರದ ಬಳೀ ಜೋಡು ತೊಲಿ ೬

೪ ಗುಂಡಿನ ಟೀಕಿ ದೀಡ ತೊಲಿ

ಇಷ್ಟು ಮೈದಿಟ್ಟಿರಿ ಈ ನಿಮ್ಮ ಕೃತ್ಯವು ವಿಶ್ವಾಸಘಾತವಾಗಿದ್ದಿರುತ್ತದೆ ನೀವು ಸದರೀ ದಾಗೀನೆಗಳನ್ನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನಗೆ ಕೊಟ್ಟು ನನ್ನಿಂದ ಪಾವತಿಪಡೆಯಬೇಕು ಬರೆ ಆ ಪ್ರಕಾರ ಮಾಡದಿದ್ದರೆ ನಿಮ್ಮ ಮೇಲೆ ಕಾಯದೇಶೀರ ಇಲಾಜನಾಡುವೆನು ಈ ನೋಟೀಸು ಮತ್ತು ನಿಮ್ಮ ಮೇಲೆ ಮಾಡಬೇಕಾದ ಕಾಯದೇಶಿರ ಇಲಾಜಿನ ಯಾವತ್ತು ಖರ್ಚು ನಿಮ್ಮ ಮೇಲಿರುತ್ತದೆ ತಿಳಿಯುವದು ತಾ॥ ೯ ಜುಲೈ ೧೯೨೯ ನೇ ಇಸವಿ

ಸಹಿ- ದೇವಪ್ಪಾ ಫಕೀರಪ್ಪಾ ಬಡಿಗೇರ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ನಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾ. ವಿಜಯ ಧಾರವಾಡ.

ಈ ಪತ್ರವನ್ನು ಲಿಂಗಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಗುರುವಾರ ತಾರೀಖು ೧೧ ನೇ ಜುಲೈ ೧೯೨೯ (ಸಂಚಿಕೆ ೧೫೪

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೨-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಡ್ಡೀದಾರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩॥ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩॥ ರೂ.

ಸೇವ್ಹಿಂಗ್ಸ ಬ್ಯಾಂಕ:— ಒಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಬಾಂಡುಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೋಖಡಾ ಉದಾರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಶಾಖೆಗಳಿಗೆ ಹಜ್ಜನ ಸವಲತುಗಳನ್ನು ಕೊಡುವದರಲ್ಲಿ ಬರುವದು. ದರ ಹಾಗೂ ನಿಯಮಗಳ ಪ್ರತಿಗಳೂ ಮೊಕದ್ದಾಂ ಪತ್ರಗಳೂ ಸದರಿ ಬ್ರ್ಯಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ | ಡಿ. ಡೊನೆಲಿ,
ತಾ|| ೧೭-೨-೨೮ | ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಸ್ಥಳ- ಮಂಗಳವಾರಪೇಟೆ, ಆಕವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ತುಸು ಮತ್ತು ಬಹಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸಾಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ ಬೇಕು.

ಮಧ್ವರಾವ ಬಿ. ಜಹಗೀರದಾರ.
ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ ಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇತ್ತೀಚೆ ಇಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೧-೭-೨೮ ನೇ ಇಸ್ವಿ.

ಶ್ರೀ.

ಈ ವಿಜಯಂ ಶ್ರೀಕೃಷ್ಣಿಯ
ನೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ॥
ದೀ "ವಿಜಯಂ" ಶ್ರೀಕರಣ ।
ನಾ ವಿಹಿತಂಗಳ ವಿವರಿಸಿನಲಿವುದು ಸಾಕಂ ॥೧॥

ಗೋವೆಯಲ್ಲಿ ಹೇಗೆ ಕ್ರಿಸ್ತಧರ್ಮ ಹಬ್ಬಿತು.

ಹಿಂದುಸ್ಥಾನದಲ್ಲಿ ಕ್ರಿಸ್ತಿಧರ್ಮ ಪ್ರಸಾರ ಮಾಡುವ ಮೊದಲನೆಯ ವೀರನು ಥಾಮಸನೆಂಬವನಾಗಿದ್ದಾನೆ. ಈತನ ತರುವಾಯ ಪೋರ್ತುಗೀಸರು ಈ ದೇಶಕ್ಕೆ ಬಂದರು. ಹಿಂದೀ ಜನರು ಎಷ್ಟೇ ಸಂಸ್ಕೃತಿಯನ್ನು ಹೊಂದಿದವರಾಗಿದ್ದರೂ, ಅವರು ಪರಕೀಯರ ಪರದೇಶಿಯ ರಾಜಕಾರಣದ ಕಪಟನಾಟಕದಲ್ಲಿ ಅಜ್ಞಾನರಾಗಿದ್ದರು. ಆದರೆ ಆ ಪರಕೀಯರು ಧರ್ಮ ಮತ್ತು ರಾಜಕಾರಣವನ್ನು ಒಂದು ಮಾಡಿಕೊಂಡರು. ಮೊದಲು ಇವರು ಪಾದ್ರಿಗಳನ್ನು ಕಳಿಸುವರು. ಅಲ್ಲಿ ಇವರು ಭೋಳೆ ಶಂಕರರನ್ನು ಸ್ವಕುಲದಲ್ಲಿ ತಕ್ಕೊಂಡರೆಂದರೆ- ವ್ಯಾಪಾರ ನಿಮಿತ್ಯದಿಂದ ಅಂಗಡಿಕಾರರನ್ನು ಕಳಿಸುವರು. ಇವರು ನಾಲ್ಕು ಕಡಿಗೆ ಕಾಲು ಚಾಚಿದರೆಂದರೆ- ರಾಜ್ಯಕಾರಭಾರದಲ್ಲಿ ಸೇರಿ, ಸ್ವದೇಶದಿಂದ ದಂಡು ತಂದು, ಇದ್ದ ದೇಶದಲ್ಲಿ ದಂಡು ಕೂಡಿಸಿ ರಾಜ್ಯಗಳಿಸುವರು. ಪಾದ್ರಿಗಳು ಕಾಲೂರಿದ ದೇಶವು ಆ ದೇಶಿಯರ ಬಾಯಿಯಲ್ಲಿ ಬೀಳುವದು. ಅವರಿಗೆ ಆಶ್ರಯ ಸಿಗದ ದೇಶವು ಸ್ವತಂತ್ರವಾಗಿ- ಉಳಿಯಿತು. ಜಪಾನವೊಂದೇ ದೇಶವು ಹಿಂದೂ ಮತ್ತು ಬೌದ್ಧ ಸಂಸ್ಕೃತಿಯುಳ್ಳ ದೇಶಗಳಲ್ಲಿ ಜೀವಂತ ಉಳಿಯಿತು ಏಕೆಂದರೆ- ಇದು ಪಾದ್ರಿಗಳಿಗೆ ಆಶ್ರಯ ಕೊಡಲಿಲ್ಲ. ಇವರಿಗೆ ಆಶ್ರಯ ಕೊಟ್ಟದ್ದರಿಂದ ಕ್ರಿಶ್ಚನ್ನ ಕನ್ಯೆಯವಾದವ್ವ ಗೋವೆ ಭಾಜ್ಯವಾಗಿರುತ್ತದೆ. ಅದು ನಮ್ಮಲ್ಲಿಂದ ಅರವತ್ತೇ ಮೈಲುಗಳ ಮೇಲುಂಟು. ಅದು ಹೇಗೆ ಕ್ರಿಶ್ಚನ್ನವಾಯಿತೆಂಬದು ಮುಂದೆ ಬರೆದಂತಿದೆ:-

ಪೋರ್ತುಗೀಸ ಪಾದ್ರಿಗಳಿಗೆ ಹಿಂದೂ ಜನರನ್ನು ಅಜ್ಞಾನ ಮತ್ತು ನರಕದಿಂದ ಮುಕ್ತ ಮಾಡುವದಕ್ಕೆ ಗೋವೆಯು ಒಂದು ಮೆತ್ತಗಿನ ದೇಶವಾಯಿತು. ಫ್ರಾನ್ಸಿಸ ಜೆವ್ಹಿಯರನು ಈ ದೇಶಕ್ಕೆ ಬರಹೊರಟನು. ಪೋರ್ತುಗೀಸ ಸರಕಾರದವರು ಹಿಂದೀ ಜನರನ್ನು ಕುಲಗೆಡಿಸಲು ಈತನಿಗೆ ಸಂಪೂರ್ಣ ಧರ್ಮಾಧಿಕಾರ ಕೊಟ್ಟರು. ಝೆವ್ಹಿಯರಸಾಹೇಬರು ಕಯ್ಯಲ್ಲಿ ಒಂದು ಗಂಟೆ ತಕ್ಕೊಳ್ಳುವರು. ಮತ್ತು ಇದನ್ನು ಬೀದಿಗಳಲ್ಲಿ ಬಾರಿಸುತ್ತಾ ಹೋಗುವರು. ಹುಡುಗರು ಬೆನ್ನು ಹತ್ತುವದು ಸಹಜವಾದದ್ದು. ಆಗ ಮೆಲ್ಲಗೆ ಇವರ ಬಾಯಿಯಿಂದ ಕ್ರಿಸ್ತನ ವ್ಯಾಕ್ಯಗಳನ್ನೆನಿಸುವರು. ಮತ್ತು ಇವನ್ನು ನಿಮ್ಮ ತಂದೆತಾಯಿಗಳಿಂದಲೂ ಅನಿಸಿರೆಂದು ಉಪದೇಶ ಮಾಡುವರು. ಸಾಹೇಬರು ಬರಬರುತ್ತಾ ಗೋವೆಯಲ್ಲಿ ಶಾಲೆ- ಕಾಲೇಜ ತೆಗೆದರು. ಮತ್ತು ಈ ಶಿಕ್ಷಣಾಲಯಗಳನ್ನು ಧರ್ಮಪ್ರಸಾರಕ್ಕಾಗಿ ಚೆನ್ನಾಗಿ ಉಪಯೋಗ ಮಾಡಿದರು. ಆದರೆ ಇವನ್ನು ನಡಿಸಲಿಕ್ಕೆ ದುಡ್ಡಿನ ಕೊರತೆಯಾಯಿತು. ಅದಕ್ಕೊಂದು ಉಪಾಯ ಮಾಡಿದರು. ಹೀಥನ್ನರು ಅಂದರೆ ನರಕಕ್ಕೆ ಭಾಗಿಗಳಾದಂಥ ಹಿಂದೂ ದೇವಾನುದೇವತೆಗಳ ಮೇಲೆ ವಕ್ರರಾಗಿ, ದಂಡಿನ ಸಹಾಯದಿಂದ ದೇವಾಲಯಗಳನ್ನು ನೆಲಸಮಮಾಡಿ, ದೇವರ ಮೈಮೇಲಿದ್ದ ಬೆಲೆಯುಳ್ಳ ಆಭರಣಗಳನ್ನೂ ವಜ್ರ ವೈಢೂರ್ಯಗಳನ್ನೂ ಸುಲಿದು ಈ ಸಂಪತ್ತಿನ ಉಪಯೋಗವನ್ನು ಶಾಲೆ- ಕಾಲೇಜುಗಳಿಗಾಗಿ ಮಾಡಿದರು. ಇಷ್ಟೇ ಅಲ್ಲದೆ ಅತ್ಯಂತ ಕ್ರೂರಕೃತ್ಯಗಳನ್ನು ಮಾಡಿ, ಗೋವೆ ಪ್ರಾಂತವನ್ನು ಕ್ರಿಸ್ತಮಯ ಮಾಡಿದರು.

ಮುಸಲಮಾನರು ಹಿಂದೂ ದೇವಾಲಯಗಳನ್ನು ಸುಲಿದು ಮೂರ್ತಿಗಳನ್ನು ಭಿನ್ನ ಮಾಡಿದರೆಂದು ಇತಿಹಾಸದಲ್ಲಿ ಹೇಳಲ್ಪಟ್ಟಿದೆ. ಪಾದ್ರೀಸಾಹೇಬರೂ ಅದೇ ವರ್ಗದಲ್ಲಿ ಸೇರಿದವರೆಂದು ಮೇಲಿನ ಬರಹದಿಂದ ಕಂಡುಬರುವದು. ಈಗ ಅಲ್ಲಿ ಕ್ರಿಶ್ಚನ್ನರನ್ನು ಹಿಂದೂ ಮಾಡುತ್ತಿದ್ದರೆ- ಎಷ್ಟು ಆಶ್ಚರ್ಯವಲ್ಲ.

ಕೋಚೀನದಲ್ಲಿ ಅತಿವೃಷ್ಟಿ ಮತ್ತು ಭಯಂಕರ ಹಾನಿ

—(೦)—

ಕೋಚೀನ ರಾಜ್ಯದಲ್ಲಿ ಆರೇಳು ದಿನಗಳಿಂದ ಸಂತತಧಾರವಾಗಿ ಮಳೆ ಸುರಿದು ಭಯಂಕರ ಕೇಡಾಗಿದೆ. ಹಳ್ಳ ಹೊಳೆಗಳು ಒಡುವ ಗಿಡಿಗೆ ಕಾರಣವಾಗಿವೆ. ರೇಲ್ವೆಯ ದಾರಿಗಳು ಹಂದ-ಹೋಗಿದ್ದು ಮೇಲ ಒಡಿಯನ್ನು ಸಹ ಬಿಡುವದು ನಿಂತುಹೋಗಿದೆ. ತಾರಿನ ಕಂಬಗಳು ಕಿತ್ತಿಬಿದ್ದದ್ದರಿಂದ ಅಲ್ಲಲ್ಲಿಯ ಸುದ್ದಿಗಳು ತಿಳಿಯದಾಗಿದೆ. ಭತ್ತದ ಹೊಲಗಳಲ್ಲಿ ವಿಪರೀತವಾಗಿ ನೀರು ನಿಂತು ಹೋಗಿವೆ. ದನಗಳು ನೀರಲ್ಲಿ ಮುಣುಗಿ ಸತ್ತು ಹೋದವು. ಇಷ್ಟೇ ಮನೆಗಳು ಬಿದ್ದವೆಂದು ಹೇಳಲಿಕ್ಕಾಗುವದಿಲ್ಲ.

ಮುಸಲಮಾನರ ದಾವಣಗೇರಿಯ ದಿನ.

—(—)(೦)(—)—

ದಾವಣಗೇರಿಯ ದಂಗೆಯಲ್ಲಿ ನಮ್ಮ ಮುಸಲಮಾನರ ಮೂರು ಮಸೀದೆಗಳು ನಾಶವಾದವು ಹಿಂದೂ ದಂಗೆಗಾರರು ನಾಲ್ವತ್ತು ಅಂಗಡಿಗಳಲ್ಲಿ ಸುಲಿಗೆ ಮಾಡಿ, ಸುಮಾರು ಎರಡು ಲಕ್ಷದ ಪದಾರ್ಥಗಳನ್ನು ನಾಶ ಮಾಡಿದರು. ಇನ್ನೂ ಅತ್ಯಾಚಾರಗಳನ್ನು ಮಾಡಿದರು. ಇವುಗಳ ನಿಷೇಧಕೆಂದು ಇದೇ ತಿಂಗಳ ೧೫ನೆಯ ತಾರೀಖಿನ ದಿವಸ ಮೈಸೂರ ಸಂಸ್ಥಾನದಲ್ಲಿರುವ ಸಮಸ್ತ ಮುಸಲಮಾನರು ದಾವಣಗೇರಿಯ ದುಃಖದ ದಿವಸವನ್ನು ಪಾಲಿಸಬೇಕೆಂದು ಗೊತ್ತು ಮಾಡಿದ್ದಾರೆ. ಮುಸಲಮಾನರು ದಂಗೆಯ ಸಂಬಂಧವಾಗಿ ಮಹಾರಾಜಾ ಸರಕಾರದಲ್ಲಿ ಕೆಳಗಿನ ಕಲಮುಗಳನ್ನು ಕೋರಿದ್ದಾರೆ.

೧ ಜಾತಿಭೇದ ಮಾಡದೆ, ದಂಗೆಗಾರರೆಂದು ಕಂಡು ಬಂದವರಿಗೆಲ್ಲ ಶಾಸನವಾಗಬೇಕು.

೨ ಅಲ್ಪಸಂಖ್ಯಾಕರ ಮೇಲೆ ಬಹುಸಂಖ್ಯಾಕರ ಹಿಂಸೆ ಅತ್ಯಾಚಾರಗಳು ನಡೆಯದಂತೆ ಭದ್ರೋಪಾಯಗಳಾಗಬೇಕು.

೩ ಮುಸಲಮಾನರಿಗಾದ ಹಾನಿಯನ್ನು ತುಂಬಿ ಕೊಡಬೇಕು.

೪ ದಂಗೆಯಲ್ಲಿ ನಷ್ಟವಾಗಿ, ನಿರಾಶ್ರಿತರಾದಂಥವರಿಗಾಗಿ ರಿಲೀಫ ಕಾಮಗಾರಿಗಳನ್ನು ಪ್ರಾರಂಭಿಸಬೇಕು.

೫ ನಾಶ ಹೊಂದಿದ ಮೂರೂ ಮಸೀದೆಗಳನ್ನು ಪುನಃ ಕಟ್ಟಿಸಿಕೊಡಬೇಕು.

ಬಡೋದೆಯ ಮುಸಲಮಾನರಲ್ಲಿ ಅಸಂತೋಷ ಮತ್ತು ಹರತಾಳ.

ಬಡೋದೆಯ ಮುಸಲಮಾನರು ತಮಗಾಗುವ ಅನ್ಯಾಯಗಳ ನಿಷೇಧವೆಂದು ಹರತಾಳ ಮಾಡಿ ಎಲ್ಲ ವ್ಯವಹಾರ ನಿಲ್ಲಿಸಿದ್ದರು. ಮುಸಲಮಾನರೇ ಹೆಚ್ಚಾಗಿ ಟಾಂಗಾ ಹೊಡೆಯುತಕ್ಕವರಾದ್ದರಿಂದ, ಅಂದು ರೇಲ್ವೆಯ ಪ್ರಯಾಣ ಮಾಡತಕ್ಕವರಿಗೆ ಬಹಳ ತೊಂದರೆಯಾಯಿತು. ಕಟೇರ ಅಂಗಡಿಯಿಂದ ಪ್ರಾರಂಭಿಸಿ, ಮುಸಲಮಾನರ ಎಲ್ಲ ಅಂಗಡಿಗಳು ಬಂದಾಗಿದ್ದವು. ಸಾಯಂಕಾಲದಲ್ಲಿ ಕೆಲ ಮುಖಂಡರು ದಿವಾನ ಶ್ರೀ. ಕೃಷ್ಣಮಾಚಾರ್ಯರನ್ನು ಕಾಣಲಿಕ್ಕೆ ಹೋಗಿ, ತಮ್ಮ ಅನುತಾಪಗಳ

ನ್ನು ಅವರ ಮುಂದಿಟ್ಟರು. ಮತ್ತು ಮಸೀದೆಯ ಮುಂದೆ ವಾದ್ಯ ಬಾರಿಸುವ ಹಕ್ಕಿನ ವಿಷಯವಾಗಿಯೂ ಬೇಡಿಕೊಂಡರು. ದಿವಾನರು ಈ ವಿಷಯವಾಗಿ ವಿಚಾರ ಮಾಡುತ್ತೇವೆಂದು ಹೇಳಿದನಂತರ ಹರತಾಳ ನಿಲ್ಲಿಸಿದರು.

ಲಂಡನದಲ್ಲಿ ಹಿಂದುಸ್ಥಾನದ ರಾಜಕಾರಣಗಳು.

—(೦)—

ಮಿ. ಮ್ಯಾಕಡೋನಾಲ್ಡ ಸಾಹೇಬರು ಬಾದಶಹರ ಭಾಷಣದಲ್ಲಿ ಹಿಂದುಸ್ಥಾನದ ಸ್ವರಾಜ್ಯದ ಬಗ್ಗೆ ಏನೂ ಹೇಳದ್ದರ ವಿರುದ್ಧವಾಗಿ ಹಿಂದೀ ಸಭೆಯು ಮನ್ನ ಸದಸ್ಯರು ತಮ್ಮ ಪತಿಯಿಂದ ಒಂದು ಪ್ರಕಟನೆಯನ್ನು ಪ್ರಸಿದ್ಧ ಮಾಡತಕ್ಕವರಿದ್ದರು. ಆದರೆ ಸರ ಸಾಯಮನ್ನ ಸಾಹೇಬರು ಇವರ ಗದ್ದ ಕಟ್ಟಿ ಹಿಡಿದು, ಕಮಿಶನದ ರಿಪೋರ್ಟು ಪ್ರಸಿದ್ಧವಾಗುತನಕ ಹಾಗೆ ಮಾಡಗೊಡಲಿಲ್ಲ.

ಹಿಂದುಸ್ಥಾನದ ಬಾಯಸ್ಕಾವುಟೀವರು ಬ್ರಿಟಿಶ ಸಾಮ್ರಾಜ್ಯದ ಸ್ಕಾವುಟಗಳ ಜಂಬೂರಿಗಾಗಿ ವಿಲಾಯತಿಗೆ ಹೋಗಿದ್ದಾರಷ್ಟೇ; ಮುಂಬಯಿ ಇಲಾಖೆಯ ಪತಿಯಿಂದ ಹೋಗಿರುವ ಮಿ. ವೆಂಕಟೇಶ್ವರನವರಿಗೂ ಲಂಡನ ಸೇಕ್ರೆಟರಿಯವರಿಗೂ ಭಾಷಣವಾಯಿತು. ಹಿಂದೂ ದೇಶೀಯರೂ, ಬ್ರಿಟಿಶರೂ ಒಬ್ಬರೊಬ್ಬರ ದೇಶದ ಮೇಲೆ ಅಭಿಮಾನಪಟ್ಟವರಾದರೆ- ಎರಡೂ ದೇಶಗಳ ಹಿತವಾಗುವದೆಂದು ಉಭಯತರು ವಿಚಾರ ವಿನಿಮಯ ಮಾಡಿದರು. ಮೊದಲು ಈ ವಿಚಾರವಾಗಿ ಮಾತಾಡಿದ ಮಿ. ವೆಂಕಟೇಶ್ವರನ್ನರನ್ನು ಲಂಡನ ಸೇಕ್ರೆಟರಿಯವರು ಅಭಿನಂದಿಸಿ, ಅವರ ಬೆನ್ನು ಚಪ್ಪರಿಸಿದ್ದಾರೆ.

ಒಂದು ಪ್ರಸಂಗದಲ್ಲಿ ಸ್ಟೇಟ ಸೇಕ್ರೆಟರಿಯವರಾದ ಮಿ. ಬೆನ್ನವೆಜ್ಜವುಡ್ಡ ಸಾಹೇಬರ ಭಾಷಣವೂ ಆಯಿತು. "ನಾನು ಹಿಂದುಸ್ಥಾನದ ಪ್ರಾಮಾಣಿಕ ಭೃತ್ಯನಾಗಿದ್ದೇನೆ. ನನ್ನ ಆಳಿಕೆಯಲ್ಲಿರುವ ಮಟ್ಟಿಗೆ ಮತ್ತು ದೊರೆತ ಸಮಯದಲ್ಲಿ ನಿಷ್ಕಪಟ ಬುದ್ಧಿಯಿಂದ ಹಿಂದುಸ್ಥಾನದ ಹಿತ ಸಾಧಿಸುವೆನು" ಎಂಬದಾಗಿ ಉದ್ಗಾರ ತೆಗೆದಿದ್ದಾರೆ. ಆಳಿಕೆಯಲ್ಲಿರುವ ಮಟ್ಟಿಗೆ ಎಂಬ ಶಬ್ದದಲ್ಲಿಯೇ ಕೃಷ್ಣಮೂಲ ಅನರ್ಥವಿರುವದು.

ಮಿ. ಮ್ಯಾಕಡೋನಾಲ್ಡ ಸಾಹೇಬರು ಸಕ್ಕರೆ ಬೀರಿದಂಥ ಸಂಧಿಕಾಲವನ್ನು ಸುಕಾಲವೆಂದು ತಿಳಿದುಕೊಂಡು, ಸ್ವರಾಜ್ಯ ರಥವನ್ನು ಮುಂದೆ ಸಾಗಿಸಲು ಹಿಂದೀ ಪ್ರಮುಖರು ಈಗ ಲಂಡನದಲ್ಲಿಲ್ಲವೆಂದು ಕೆಲವರು ನಿಟ್ಟುಸುರು ಹಾಕಿದ್ದಾರೆ.

ಕೂಲಿಕಾರ ಪಕ್ಷವನ್ನು ಕುರಿತು ಈಗ ಲಂಡನದಲ್ಲಿರುವ ಶ್ರೀ ಈಶ್ವರಶರಣರು ಹೇಳುವದೇನಂದರೆ-

ಕೂಲಿಕಾರರು ಹಿಂದುಸ್ಥಾನದ ಹಿತಕ್ಕಾಗಿ ತಮ್ಮ ಹಿತವನ್ನು ಗಂಡಾಂತರದಲ್ಲಿ ಹಾಕಿಕೊಳ್ಳಲಾರರೆಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ವಿಷಯವಾಗಿ ಹಿಂದೀ ಜನರೆಷ್ಟು ತಪ್ಪು ತಿಳುಕೊಳ್ಳಬಾರದು. ತಮ್ಮ ಹಿತಕ್ಕೆ ತಮ್ಮ ದೇಶದಲ್ಲಿ ಏನೂ ಬಾಧೆ ತಟ್ಟದಂತಿದ್ದರೆ- ಇವರು ತಮ್ಮಿಂದ ಶಕ್ಯವಾದಷ್ಟು ಹಿತಮಾಡುವರು. ಇದಕ್ಕೂ ಹೆಚ್ಚಿನ ಮನೋರಾಜ್ಯದಲ್ಲಿ ನಾನು ಸೇರಲಾರೆನು.

ಕೊಲೆನಿಂತರೂ ಮರದ ಹನೀ ನಿಂತಿರುವದಿಲ್ಲ

—(೦)—

ಸ್ಯಾಂಡರ್ಸ ಸಾಹೇಬನ ಕೊಲೆಯಾಯಿತು ಪೋಲೀಸರು ೩೦ ಕ್ಕಿಂತ ಹೆಚ್ಚು ಜನರನ್ನು ಹಿಡಿದಿದ್ದಾಯಿತು. ಇವರಲ್ಲಿ ಆರುಜನರು ಮಾಫೀ ಸಾಕ್ಷಿದಾರರಾಯಿತು ಆದರೂ ಕೊಲೆಯ ಸಂಬಂಧದಿಂದ ಲಾಹೋರ ಮತ್ತು ಬೇರೆ ಊರು ಗಳಲ್ಲಿ ಪೋಲೀಸ ವಾರಂಟು, ಝಡತಿ ಮೊದಲಾದವು ನಿಂತಿಲ್ಲ. ಹೋದ ವಾರದಲ್ಲಿ ಲಾಹೋರಿನಲ್ಲಿ ಒಂದೇ ವೇಳೆಯಲ್ಲಿ ಅನೇಕ ಮನೆಗಳ ಝಡತಿ ಮಾಡಿದರು ಒಂದು ಮನೆಗೆ ಹೋದ ಪಂಚರು ಆ ಬೀದಿಯವರಿಗೆ ಅಥವಾ ಅಲ್ಲಿ ನೆರೆದವರಿಗೆ ಗುರ್ತಿನವರಾಗಿರಲೇ ಇಲ್ಲ ನೀವಾರು? ನಿಮ್ಮ ದೆಸೆಯೇನು? ಎಂದು ಪ್ರಶ್ನೆ ಮಾಡಿದ್ದಕ್ಕೆ ಅವರು ಉತ್ತರಗೊಡಲಿಲ್ಲ. ಮತ್ತು ತಾವಾರೆಂದು ಹೇಳಲಿಕ್ಕೆ ಇಚ್ಛಿಸಲಿಲ್ಲ!!!

ಪೋಲೀಸ ಕಾಮದಾರರಿಗೆ ಸಸ್ಪೆಂಡ.

—(೦)—

ಮುಂಬಯಿಯಲ್ಲಿ ಪೋಲೀಸ ಆಫೀಸರರಾದ ಮಿ. ಮ್ಯಾಕಾನ ಸಾಹೇಬರು ಸರಕಾರದ ದ್ರವ್ಯಾಪಹಾರ ಮಾಡಿದರೆಂದು ಮತ್ತು ಸಬ್ಬಿನ್ಸಪೇಕ್ಟರ ಅಬ್ದುಲ ಅಮೀರರು ಡ್ಯೂಟಿಯ ಮೇಲಿದ್ದಾಗ ಕುಡಿದಿದ್ದರೆಂದು ಸಸ್ಪೆಂಡ ಮಾಡಲ್ಪಟ್ಟಿದ್ದಾರೆ

ಅಮೀರ ಅಮಾನುಲ್ಲಾ ಸಾಹೇಬರು ಫ್ರಾನ್ಸರ ಬಂದರವಾದ ಮಾರ್ಸೇಲಿಸವನ್ನು ತಲ್ಪಿದರು. ನಿಮಗೆ ಇಟಲಿಯು ಪ್ರೇಮಪೂರ್ವಕವಾಗಿ ಸ್ವಾಗತ ಮಾಡುತ್ತದೆಂದು ಮುಸಿಲೋನಿಸಾಹೇಬರು ಇವರಿಗೆ ಸ್ವಾಗತದ ಸಂದೇಶ ಕಳಿಸಿದ್ದಾರೆ.

ಕನ್ನಡಿಗರಲ್ಲಿ ಬಿನ್ನಹ.

ಇದೇ ಚಾ. ವಿ ವ. ೮ಕ್ಕೆ ಶ್ರೀವಿದ್ಯಾರಣ್ಯರ ಪುಣ್ಯತಿಥಿಯ ದಿನ "ಕನ್ನಡಿಗರ ಕೂಟವು" "ಜ್ಯೋತಿರ್ಮಂಡಲ" ವೆಂಬ ಶಾಖೆಯನ್ನು ಹೊಸದಾಗಿ ಸ್ಥಾಪಿಸಿದೆ ಜ್ಯೋತಿಃಶಾಸ್ತ್ರದ ಅಭ್ಯುದಯವೂ, ಜನತೆಯಲ್ಲಿ ಅದರ ಪ್ರಚಾರವೂ, ಅದರಿಂದಲೇ ಮಾತೃಭೂಮಿಯ ಹಿತವನ್ನು ಸಾಧಿಸುವದೂ ಈ ಶಾಖೆಯ ಧ್ಯೇಯಗಳು.

ಸದ್ಯಕ್ಕೆ ಪ್ರತಿತಿಂಗಳ ಕೆಲವು ವಿಶೇಷ ದಿನಗಳಲ್ಲಿ ಹುಟ್ಟುವ ಶಿಶುಗಳ ಕುಂಡಲಿಗಳನ್ನು ಸಂಶೋಧಿಸುವದು ಅಗತ್ಯವಾಗಿದೆ. ಆದ್ದರಿಂದ ಇದೇ ವರುಷ ಬರುವ ಶ್ರಾವಣಮಾಸದ- ಶುಕ್ಲ ೨-೬-೮-೯ ಕೃಷ್ಣ ೬-೭-೮-೧೪-೩೦ [ಕ್ರಮವಾಗಿ ಅಗಸ್ಟ ೬-೧೦-೧೨-೧೩-೨೬-೨೭-೨೮-ಸಪ್ಟಂ ೨-೩] ತಿಥಿಗಳಲ್ಲಿ ಹುಟ್ಟಿದ ಶಿಶುಗಳ ಸಂಗತಿಯನ್ನು ಪ್ರಯತ್ನಪಟ್ಟು ಸರಿಯಾದ ವೇಳೆಯೊಡನೆ ತಿಳಿಸಬೇಕೆಂದು ಬಿನ್ನಹ.

ಕಾರ್ಯದರ್ಶಿ

ಆಚಾರ್ಯ ಜ್ಯೋ. ಕೃ. ೩೦. ಜ್ಯೋತಿರ್ಮಂಡಲ

ಕನ್ನಡಿಗರ ಕೂಟ ಧಾರವಾಡ,

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್ ಧಾರವಾಡ

ನೋಟೀಸು.

ಸದರಿ ಬ್ಯಾಂಕಿನ ಶೇರಹೊಲ್ಡರ ಜನರ ಏಳನೆಯ ಸಾಧಾರಣ ವಾರ್ಷಿಕ ಸಭೆಯು ಆದಿತ್ಯವಾರ ತಾ. ೨೧-೭-೧೯೨೯ ದಿವಸ ಪ್ರಾತಃಕಾಲದ ೯ ಘಂಟೆಗೆ ಸರಿಯಾಗಿ ಬ್ಯಾಂಕ ಆಫೀಸಿನಲ್ಲಿ ಕೆಳಗೆ ಕಾಣಿಸಿದ ವಿಷಯಗಳನ್ನು ಚರ್ಚಿಸುವದಕ್ಕಾಗಿ ನೆರೆಯುವದು.

೧ ಡಾಯರೆಕ್ಟರರ ರಿಪೋರ್ಟನ್ನು ಹಾಗು ಅಡಿಟ್ಟಾದ ಬ್ಯಾಲನ್ಸಶೀಟ, ಮತ್ತು ಪ್ರಾಫಿಟ ಅ್ಯಂಡ ಲಾಸ ಅಕಾವುಂಟ ಓದಿ ಸ್ವೀಕರಿಸುವದು.

೨ ಡಿವ್ಹಿಡೆಂಡ ಗೊತ್ತು ಪಡಿಸುವದು.

೩ ಈ ವರ್ಷ ರಿಟಾಯರ ಆಗುವ ಡಾಯರೆಕ್ಟರರ ಸ್ಥಳದಲ್ಲಿ ಪುನಃ ಡಾಯರೆಕ್ಟರರನ್ನು ಆರಿಸುವದು.

೪ ಚಾಲೂ ವರ್ಷದಬಗ್ಗೆ ಒಬ್ಬ ಸರ್ಟಿಫಾಯಿಡ ಆಡಿಟರನನ್ನು ನೇಮಿಸಿ ಆತನ ಮೆಹನತಾನ ಗೊತ್ತು ಪಡಿಸುವದು.

೫ ಚೇರಮನ್ನರಿಂದ ಸಭೆಯ ಮುಂದೆ ಇರಿಸಲ್ಪಡುವ ಮತ್ತೆ ಯಾವದೇ ವಿಷಯವನ್ನು

ದತ್ತಕ ಮಹೋತ್ಸವವು.

ಬೆಳಗಾವ ಜಿಲ್ಹಾ ಗೋಕಾಕ ತಾಲೂಕ ಹೈಕೋರ್ಟ ರುಜುಟ್ಟ ದೇಸಾಯಿ ನಾಡಗೌಡಾ ಶ್ರೀಮಂತ ಖಂಡೇರಾವ ಉರ್ಫ ಬಾಬಾಸಾಹೇಬ ಇವರು ಶ್ರೀಮಂತ ಸರದಾರ ಭೀಮಪ್ಪಾ ಉರ್ಫ ಬಾಳಾಸಾಹೇಬ ಗಿರಿಯಪ್ಪ ದೇಸಾಯಿ ಹಟ್ಟಿಹೊಳಿ ನಾಯಿಕ ಒಡೆಯರ ದೇಸಾಯಿ ನಾಡಗೌಡ ಪರಗಣೆ ಯಾದವಾಡ ಇವರ ಚಿಕ್ಕಮಕ್ಕಳಾದ ಶ್ರೀಮಂತ ರಾವ ಉರ್ಫ ತಿಮ್ಮಪ್ಪ ದೇಸಾಯಿ ಇವರನ್ನು ಇದೇ ಶುಕ್ಲನಾಮ ಸಂವತ್ಸರ, ಶಕೆ ೧೮೫೦ ಆಷಾಢ ಶು|| ೨ ಸೋಮವಾರ ತಾ| ೮-೭-೧೯೨೮ ನೇ ಇಸ್ವಿ ದಿವಸ ಮುಂಜಾನೆ ೧೧ ಘಂ ೧೯ ಮಿತಿಗೆ ಸಲ್ಲುವ ಕನ್ಯಾಲಗ್ನದ ಶುಭ ಮುಹೂರ್ತದಲ್ಲಿ ಗೋಕಾಕ ತಾಲೂಕ ಹಿರೇನಂದಿ ಮುಕ್ಕಾಮಿನಲ್ಲಿ ಶಾಸ್ತ್ರೋಕ್ತ ವಿಧಾನಪೂರ್ವಕವಾಗಿ ದತ್ತಕಮಾಡಿಕೊಂಡರು. ಈ ಮಂಗಲ ಕಾರ್ಯಕ್ಕಾಗಿ ಎರಡೂ ದೇಸಗತಿಯ ರೈತರೂ ಶೆಟ್ಟಿ ಸಾವ್ಕಾರರೂ ಬಹುಜನರು ಕೂಡಿ ಅತ್ಯಂತ ಉತ್ಸವದಿಂದ ಕಾರ್ಯ ಸಾಂಗವಾಯಿತು. ಈ ಮಂಗಲ ಕಾರ್ಯದ ಆನಂದವನ್ನು ಶ್ರೀಮಂತ ದೇಸಾಯಿ ಸಾ|| ರ ಬಗ್ಗೆ ತಮ್ಮ ಅಳಲೀ ಭಕ್ತಿಯನ್ನೂ ವ್ಯಕ್ತಗೊಳಿಸಲು ಬೆಳಗಾವ ಜಿಲ್ಹಾ ಕಿತ್ತೂರ ಮುಕ್ಕಾಮಿನಲ್ಲಿ ಶ್ರೀಯುತ ವಿಷ್ಣು ಗಣೇಶ ಖಾನಾಪೂರ ಇವರು ಒಂದು ಚಿಕ್ಕ ಸಭೆಯನ್ನು ಕೂಡಿಸಿ ಶ್ರೀಮಂತರ ಅಭಿನಂದನ ಮಾಡಿ ದತ್ತಕೋತ್ಸವದ ಪ್ರೀತ್ಯರ್ಥವಾಗಿ ಊರಲ್ಲಿ ಸಕ್ಕರೆ ಹಂಚಿದರು. ಹಾಗೂ ಉಭಯ ಶ್ರೀಮಂತರ ಆಯುರಾರೋಗ್ಯ ಭಾಗ್ಯವು ವೃದ್ಧಿಂಗತವಾಗಲೆಂದು ಈಶಸ್ಮರಣೆಮಾಡಿ ಶ್ರೀಮಂತ ದೇಸಾಯರ ಜಯಜಯಕಾರದಲ್ಲಿ ಸಭೆಯು ವಿಸರ್ಜನೆಯಾಯಿತು.

ಕಿತ್ತೂರ — ತಮ್ಮ
೧೦-೭-೨೮ — ಸುದ್ದಿಗಾರ

ಕೊಲ್ಹಾಪುರದಲ್ಲಿ ಮಂತ್ರಿಯಾಗಿರುವಾಗ ನಾಭಾದ ಮಹಾರಾಜರ ಬಂಧವಿಮೋಚನೆಗಾಗಿ ಪುನಃ ಪ್ರಯತ್ನ ಮಾಡುವರು. ಮುಂಬಯಿಯ ಓರ್ವ ವ್ಯಾಪಾರಿ ಕೋಟೇಟರು ಇದೇ ಉದ್ದೇಶ್ಯವಾಗಿ ಲಂಡನಕ್ಕೆ ಹೋಗುವರು.

ಮುಂಬಯಿಯಲ್ಲಿ ಸಸ್ಪೆಂಡಾದ ಪೋಲಿಸ ಇನ್ಸಪೆಕ್ಟರ ಮಾನೆ ಸಾಹೇಬರು ಒಪ್ಪಿ, ಸರಕಾರದ ಹಣವನ್ನು ಖರ್ಚ ಮಾಡಿದ್ದರಿಂದ, ಮ್ಯಾಜಿಸ್ಟ್ರೇಟರು ಇವರಿಗೆ ಒಂದೇ ದಿನದ ಶಿಕ್ಷೆ ವಿಧಿಸಿದರು.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಕಿಲೆ ಎರಡೇ ರೂಪಾಯಿ, ಅಂಚೆ ವೆಚ್ಚ ಸಲ್ಲ. ಆ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ವ ಬ್ಯಾಂಕ ಧಾರವಾಡ

ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನಿಂದ ಈ ಬೇಡಿಕೆಯನ್ನು ಮಾಡಿರುವಿರಿ ಎಂಬವನ್ನು ಬರೆಯಬೇಕು.

ನೋಟೀಸು

ಫಕರುದ್ದೀನ ಉರ್ಫ ಪತ್ತೇಸಾಬ ಸೂರಣಗಿಯವರ ಜಾತಿ ಮುಸಲಮಾನ ಸಾ|| ಲಕ್ಷ್ಮೇಶ್ವರ ತಾ|| ಲಕ್ಷ್ಮೇಶ್ವರ ಇವರಿಗೆ–

ನಾನು ರಾಜಬಿ ಕೋಂ ಫಕರುದ್ದೀನ ಉರ್ಫ ಪತ್ತೇಸಾಬ ಸೂರಣಗಿಯವರ ಸಾ|| ಲಕ್ಷ್ಮೇಶ್ವರ ಹಾಲಿವಸ್ತಿ ಎಲವಿಗಿ ಈ ನೋಟೀಸಿನಿಂದ ತಿಳಿಸುವದೇನಂದರೆ– ನೀವು ನನ್ನ ಲಗ್ನದ ಗಂಡ ಇದ್ದು ನನ್ನ ಲಗ್ನವಾಗಿ ೫-೬ ವರ್ಷಗಳಾದವು ಮತ್ತು ಏನಕೆ ವರ್ಷ ನಮ್ಮ ನಿಮ್ಮ ಬಾಳ್ವೆ ನಡೆಯು ಈಗ ಎರಡು ವರ್ಷದಿಂದ ನಮ್ಮ ನಿಮ್ಮ ಮನಸ್ಸು ಮನಸು ಸರಿಯದ ಕಾರಣ ನನ್ನನ್ನು ಈಗ ಎರಡು ವರ್ಷದ ಹಿಂದೆ ಮನೆ ಬಿಟ್ಟು ಹೊರಗೆ ಹಾಕಿದಿರಿ ನಾನು ನನ್ನ ತಾಯಿಯ ತವರಮನೆಯವರು ಅಂದರೆ ಅಬ್ದುಲ ರಹಿಮಾನಸಾಬ ವಲ್ಲದ ಗೂಡುಸಾಬ ಲಂಗಡೆ ಸಾ|| ಲಕ್ಷ್ಮೇಶ್ವರ ಹಾಲಿವಸ್ತಿ ಎಲವಿಗಿ ಇವರ ಕಡೆಗೆ ಸಾಲಾವಾಡಿ ನನ್ನ ಹೊಟ್ಟೆ ತುಂಬಿಕೊಂಡೆ ಈಗ ಎರಡು ವರ್ಷ ಆದರೂ ನನ್ನನ್ನು ಕರಕೊಂಡು ಹೋಗಲಿಲ್ಲಾ ಒಂದು ನೂರಾ ಐವತ್ತು ೧೫೦ ರೂಪಾಯಿಗಳ ಸಾಲವಾಯಿತು ನಮ್ಮ ಮಹಮ್ಮದೀ ಧರ್ಮದಂತೆ ನನ್ನ ಮಹಾರ ೧೫೦ ನೂರ ಐವತ್ತು ರೂಪಾಯಿ ಕೊಟ್ಟಿರುತ್ತಾರೆ ನೀವು ಈ ನೋಟೀಸು ಮುಟ್ಟಿದ ೧೫ ದಿವಸದಲ್ಲಿ ನನ್ನ ಸಾಲಾ ಕೊಟ್ಟು ಕರಕೊಂಡು ಹೋಗಬೇಕು ಇಲ್ಲವಾದರೆ ನನ್ನ ಮಹಾರದ ಬಗ್ಗೆ ೧೫೦ ರೂಪಾಯಕ್ಕೆ ಇಲಾಜ ಮಾಡುವದರಲ್ಲಿ ಬರುವದು ಇದಲ್ಲದೆ ನಾನು ಎರಡನೇ ದವನ್ನು ಉಡಿಕೆಮಾಡಿಕೊಂಡು ಹೋಗುವೆನು ನನ್ನ ಮೇಲೆ ಯಾವ ತರದ ಹಕ್ಕು ಇರಲಿಕ್ಕಿಲ್ಲಾ ಇದು ನೋಡಬೇಕು ಅಂತಾ ತಿಳಿಸುಬೇಕು.

ತಾ|| ೧೧ – ೭ – ೧೯೨೮

ಈ ಎಡಗೈ ಹೆಬ್ಬೆಟ್ಟಿನ ಗುರ್ತ ರಾಜಬಿ ಕೋಂ ಫಕರುದ್ದೀನ ಸಾ|| ಸೂರಣಗಿ ಇವಳ ಕೈದ ಇರುತ್ತದೆ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಿಗಳಿಗೆ ಇಮ್ಮಡಿ. ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾ. ವಿಜಯ ಧಾರವಾಡ.

ಈ ಪತ್ರವನ್ನು ಅಂಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. L. 1443

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಆಕ್ಕಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶುಕ್ರವಾರ ತಾರೀಖು ೧೨ ನೇ ಜುಲೈ ೧೯೨೯ (ಸಂಚಿಕೆ ೧೫೫

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಬ್ಬೊಬ್ಬರಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೧ರೂ. ೩॥ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩॥ ರೂ.

ಸೇವಿಂಗ್ಸ್ ಬ್ಯಾಂಕ:— ಒಬ್ಬೊಬ್ಬರಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಸಾಲಗಳು.

ಬಂಗಾರದ ದಾಗೀನಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಕ್ಕದ ಉದರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಜಕ್ಕ ಹುಂಡಿಗಳನ್ನು ಕೊಡುಕೊಳ್ಳುವದಕ್ಕಾಗಿ ಊರುಗಳಿಗೆ ಕಳಿಸ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು. ದರ ಹಾಗೂ ನಿಯಮಗಳ ಪ್ರತಿಗಳೂ ಮೊಕದ್ದಮೆ ಪತ್ರಗಳೂ ಸದರ ಬ್ಯಾಂಕಿನಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ
ತಾ॥ ೧೭ ೨-೨೮

ಡಿ. ಜೋನೆಲಿ,
ಏಜಂಟರು

ದಿ ಹಿಂದುಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ.

ಆ ಫೀ- ಮಂಗಳವಾರಪೇಟೆ, ಶ್ರೀ ಕವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನಗಳ ಮೇಲೆ ಸಾಲ ದರದಿಂದ ತಾಸು ಮತ್ತು ಒಹಕ ಮುದ್ದತಿಯ ಕಸಕ ಸ್ವಲ್ಪ ರಕಮಿನಿಂದ ಪೇರಿಂದನ್ನು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸಂಬಂಧ ನಮ್ಮನ್ನು ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ನಮ್ಮನ್ನು ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ನಮ್ಮನ್ನು ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣಾಜಿ ಪಂಡಿತರಾವ [illegible]

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗಿಯು ಎಂಟು ಲಕ್ಷದ ಮೇಲುಂಟು. ಜಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು. ಠಾಕೀಮು ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ,

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩ ೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬೇಕು.

ಮ್ಯಾನೇಜರ ವಿಜಯ [illegible]

ವಿಜಯ.

ಧಾರವಾಡ ತಾ- ೧೨-೭-೨೯ ನೇ ಇಸ್ವಿ.

ಶ್ರೀ.

ಈ ವಿಜಯಂ ಶ್ರೀಶಪ್ರಿಯ
ಶ್ರೀ ವಸುಮತಿಯು ನಲಿಸಿತೆ ಸುಹಿತತರಿತೆಗಳಿಂ ಶ್ರೀ
ದೀ "ವಿಜಯಂ" ಶ್ರೀಕರಮಾ ।
ನಾ ವಿಹಿತಂಗಳ ವಿವರಿಸುತಲಿರ್ಪುದು ಸಾಜಂ ॥೧॥

ಲಂಡನದಲ್ಲಿ ಮೀರತದ ಚಳವಳಿಯು.

ಮಂತ್ರಿಗಳಿಗೆ ಬಂದ ಫಜೀತಿ.

—(೦)—

ಕೂಲಿಕಾರರು ಮಂತ್ರಿಯಾಗಿರುವದು ಕೂಲಿಕಾರ ಮತ್ತು ಅವರ ಹಿತೈಷಿಗಳಿಗೆ ಆನಂದದ ಸಂಗತಿಯು. ಅಂತೇ ಈ ದೇಶದಲ್ಲಿ ಕೂಲಿಕಾರ ರ ಸಂಘಟನೆಗಳನ್ನು ಮುಂಗುರಿಯಾಗಿಟ್ಟು ಕೊಂಡಿರುವ ಮತ್ತು ಮೀರತದ ಕಾರಾಗೃಹದಲ್ಲಿ ಕೊಳೆಯುತ್ತಿರುವ ಆರೋಪಿಗಳು ಕೂಲಿಕಾರ ಪ್ರಧಾನನ್ನು ಅಭಿನಂದಿಸಿದ ತಾರುಗಳನ್ನು ಕಳಿಸಿದರು. ಆರೋಪಿಗಳು ಈ ಪ್ರಕಾರ ತಾರುಗಳನ್ನು ಕಳಿಸುವದು ಅಪೂರ್ವವೇ ಸರಿ. ಕೂಲಿಕಾರ ಬಣಗವರು ಮಂತ್ರಿಯಾದರು; ತಮ್ಮ ಧ್ಯೇಯ ಪೂರ್ಣವಾಗುವದೆಂದೇ ಇವರ ನಂಬಿಗೆಯು. ಈ ನಂಬಿಗೆಯ ಪ್ರಕಾರ ಬಡ ಕೂಲಿಕಾರರ ಹಿತವಾಗುವಂಥ ಘನ ಕಾರ್ಯಗಳು ಇಂಗ್ಲಂಡದಲ್ಲಿ ನಡೆದು, ಅವುಗಳ ಬೆಂಬಲದಿಂದಷ್ಟು ಹಿತವು ಈ ದೇಶಿಯರಿಗಾಗಬಹುದು. ಈ ಹಿತವು ಕೂಲಿಕಾರ ಪಕ್ಷವೆತ್ತಿದ ಆರೋಪಿಗಳಿಗಷ್ಟರಮಟ್ಟಿಗೆ ಆಗುವದೆಂಬ ಸಂಶಯವುಂಟಾಗಿದೆ. ಪಟ್ಟಣದಲ್ಲಿ ಪಟ್ಟಾಭಿಷೇಕವಾದರೆ, ಅಡವಿಯಲ್ಲಿರುವಂಥವರಿಗೇನನ್ನುವಂತೆ ಇವರ ವರ್ತಮಾನ ಅವಸ್ಥೆಯಾಗಿದೆ.

ಇವರ ಕಾರಾಗೃಹವಾಸವನ್ನು ತಪ್ಪಿಸಬೇಕೆಂದು ಲಂಡನ್ನದಲ್ಲಿ ಒಂದು ಕಮಿಟಿ ನೇಮಿಸಿದ್ದಾರೆ. ಇದರಲ್ಲಿ ಪಾರ್ಲಮೆಂಟದ ಮೆಂಬರರೂ ಇರುವರು. ಕೂಲಿಕಾರರಲ್ಲಿ ಎರಡು ಬಣಗಳುಂಟು. ಒಂದು ನೈಗಮಿಕ, ಮತ್ತೊಂದು ಸ್ವತಂತ್ರ. ಸ್ವತಂತ್ರರ ಪೈಕಿ ವರ್ಗದವರಾದ ಮೆ. ಮ್ಯಾಕ್ಸಟನ್ನ ಸಾಹೇಬರು ಈ ಕಮಿಟಿಯ ಚೇರಮನ್ನರಾಗಿದ್ದಾರೆ. ಇದರಲ್ಲಿ ಸ್ತ್ರೀಯರು ಕೂಡ ಮೆಂಬರರಿದ್ದಾರೆ. ಆರೋಪಿಗಳನ್ನು ಬಂಧಮುಕ್ತವಾಡಬೇಕೆಂದು ಇವರದೊಂದು ನಿಯೋಗವು ಸ್ಟೇಟ ಸೇಕ್ರೆಟರಿಯವರಾದ ವೆ. ಬೆನ್ನವೆಜ್ಜವುಡ್ಡ ಸಾಹೇಬರ ಕಡೆಗೆ ಹೋಗತಕ್ಕದ್ದಿತ್ತು. ಆದರೆ ಸಾಹೇಬರು ಇದಕ್ಕೆ ದರ್ಶನ ಲಾಭ ಕೊಡಲಿಲ್ಲ. ಆದರೂ ಮೆ. ಮ್ಯಾಕ್ಸಟನ್ನಸಾಹೇಬರ ಕೂಡ ಈ ವಿಷಯವಾಗಿ ಗುಪ್ತವಾಗಿ ಮಾತಾಡಿರುವರು. ಇದರಿಂದ ಯಾವದೊಂದು ಹೇಳುವಂಥ ಪ್ರಯೋಜನವಾದೀತೆಂದು ಕಂಡುಬರುವದಿಲ್ಲ.

ಇಂಗ್ರೇಜಿ ರಾಜಕಾರಣವು ವಿಚಿತ್ರವಾಗಿರುವದು. ಮೀರತದ ಅಧಿಕಾರವು ಕೈಕೆಳಗಿನವರ ಮೇಲೆ ನಡೆಯುವಂಥ ಪದ್ಧತಿಯುಂಟು. ಮೀರತದ ಆರೋಪಿಗಳ ಮೇಲೆ ಖಟ್ಲೆ ಹಾಕಿದವರು ಕಾನ್ಸರ್ವೇಟಿವ್ಹ ಪಕ್ಷದ ಗವ್ಹರ್ನರ ಜನರಲರು. ಯಾವದೊಂದು ಖಟ್ಲೆ ಹಾಕಲಿಕ್ಕೆ ಇವರು ಸಂಪೂರ್ಣ ಸ್ವತಂತ್ರರಿದ್ದು, ಇವರ ಮೇಲೆ ಸ್ಟೇಟ ಸೇಕ್ರೆಟರಿಯವರ ಹುಕುಮತ್ತೇ ನಡೆಯುವದಿಲ್ಲ. ಗವ್ಹರ್ನರ ಜನರಲರು ಕೂಲಿಕಾರರಿಂದ ನೇಮಿಸಲ್ಪಟ್ಟು, ಅವರ ಬಣಕ್ಕೆ ಸೇರಿದವರಾಗಿದ್ದರೆ- ಸೂಚನಾರೂಪದಿಂದಾದರೂ ಆರೋಪಿಗಳನ್ನು ಬಿಡಿಸಬಹುದಾಗಿತ್ತು. ಲಾರ್ಡ ಆಯರ್ವಿನಸಾಹೇಬರು ಇವರ ಜಸ್ತಿಕರಲ್ಲ. ಅನಾಯಾಸವಾಗಿ ಲಂಡನಕ್ಕೆ ಬಂದಿರುವ ಲಾರ್ಡ ಆಯರ್ವಿನಸಾಹೇಬರು ಲಂಡನದಲ್ಲಿರುವರು. ಅವರ ಕಿವಿಯಲ್ಲಿ ಮಂತ್ರಿಗಳು ಆರೋಪಿಗಳನ್ನು ಬಿಟ್ಟುಬಿಡುವಂತೆ ಹೇಳಬಹುದು. ಆದರೆ ಗವ್ಹರ್ನರ ಜನರಲರೊಬ್ಬರೇ ಇವರ ಹೊಣೆಗಾರರಲ್ಲ. ಸಿಮಲಾದಲ್ಲಿರುವ ಉಪಮಂತ್ರಿಗಳು ಈ ವಿಚಾರಕ್ಕೆ ಅಸ್ಪದ ಕೊಡಲಾರರು. ಅಂತೂ ಆರೋಪಿಗಳ ಅವಸ್ಥೆಯು ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲದಂತಾಗಿದೆ.

ಮಂತ್ರಿಗಳು ಈ ಮೊದಲು ಏವ ನರಾಗಿದ್ದಾಗ- ಕ್ಯಾಂಬಲನೆಂಬಸಾಹೇಬನ ಪ್ರಕರಣವನ್ನು ರದ್ದುಮಾಡಿಸಿದರು. ರಾಜ್ಯಕಾರಭಾರದಲ್ಲಿ ಹೀಗೆ ಕೈ ಹಾಕಿದ್ದರಿಂದ, ದಿವಾನಗಿರಿಯು ಅದರಿಂದು ಹೇಳುವರು. ಮೀರತದ ಪ್ರಕರಣದಲ್ಲಿಯೂ ಕೈ ಹಾಕಿದರೆ- ಕಾನ್ಸರ್ವೇಟಿವ್ಹರು ಗೊಂದಲವೆಬ್ಬಿಸುವರೆಂಬ ಭಯವಾಗಿದೆ. ಆದರೂ ಸ್ವತಂತ್ರರಾದ ಕೂಲಿಕಾರರು ಒತ್ತಾಯ ಹಿಡಿಸಿದರೆ- ಮಂತ್ರಿಗಳ ಮನಸ್ಸು ಕುಸುಮಟ್ಟಿಗೆ ಕರಗಬಹುದು. ಮೆ. ಮ್ಯಾಕ್ಸಟನಸಾಹೇಬರು ಇದನ್ನು ಇಷ್ಟು ದೀರ್ಘಕ್ಕೆ ಬೆಳೆಸುವರೇ ಎಂಬ ಪ್ರಶ್ನವಿರುತ್ತದೆ.

ಕಾಬೂಲದ ಇನ್ನೊಬ್ಬ ಅಮೀರರಾದ ಇನಾಯತುಲ್ಲಾಖಾನರು ಮುಂಬಯಿಯಲ್ಲಿ ೫೦ ಸಾವಿರ ವಜ್ರ ಮುತ್ತುಗಳನ್ನು ಮಾರಿಕೊಂಡು ಇರಾಣಕ್ಕೆ ಹೋದರು. ಅಲ್ಲಿಂದ ಇರಾಣದಲ್ಲಿ ವಾಸವಾಗಲು ಹೋಗುವರು.

ಲಂಡನದಲ್ಲಿ ಸಾಯಮನ್ನ ಕಮೀಶನ್ನ

—(೦)—

ಲಂಡನನಲ್ಲಿರುವ ಹಿಂದೀ ಮತ್ತು ಇಂಗ್ಲಿಷ ಸಾಯಮನ್ನ ಕಮೀಶನಗಳ ಮುಂದೆ ಪಾರ್ಲಿಯವರ ಸಾಕ್ಷಿಗಳು ನಡೆದಿವೆ. ಇವರ ರಿಪೋರ್ಟ ಯಾವಾಗ ಪಾರ್ಲಮೆಂಟದ ಮುಂದೆ ಬರುವದೆಂಬ ಬಗ್ಗೆ ಮಾಡಿದ ಪ್ರಶ್ನಕ್ಕೆ ಸ್ಟೇಟ ಸೇಕ್ರೆಟರಿಯವರು ನಿಶ್ಚಯದ ಮದುವೆಯ ತಿಥಿಯಂಥ ಉತ್ತರಕೊಟ್ಟಿದ್ದಾರೆ. ರಿಪೋರ್ಟ ಯಾವಾಗ ಬರುವದೆಂಬದನ್ನು ಹೇಳಲಾರೆನು ಮತ್ತು ಇಂದೇ ರಿಪೋರ್ಟ ಕೊಡಬೇಕೆಂದು ಒತ್ತಾಯಪಡಿಸಲಾರೆನು. ಬಹಶಃ ಈ ವರ್ಷದ ಕೊನೆಯಲ್ಲಿ ಬರಬಹುದು. ಸಾಹೇಬರು ಆಶೀರ್ವಾದ ಸೂಕ್ತಪಠಣ ಮಾಡಿದ್ದಾರೆ. ಕಮೀಶನದ ಇನ್ನೊಮ್ಮೆ ಹಿಂದುಸ್ಥಾನಕ್ಕೆ ಬರುವದೆಂಬ ಅಲ್ಲಿ ಸುದ್ದಿಯಾಗಿದೆ. ಆದರೆ ಇದು ನಿರಾಧಾರವಾದದ್ದೆಂದು ಉತ್ತರ ಕೊಟ್ಟಿರುವರು.

ಮದ್ರಾಸದ ರಿಪೋರ್ಟ ಮೇಲು.

ಪ್ರತಿಯೊಂದು ಇಲಾಖೆಯ ಹಿಂದೀ ಸಾಯಮನ್ನರು ತಂತಮ್ಮ ಪರವಾಗಿ ರಿಪೋರ್ಟ ಬರೆದರು ಕಾತ್ರರಷ್ಟೇ, ಇವುಗಳಲ್ಲಿಯ ಮದ್ರಾಸದ ಸಭ್ಯರು ಬರೆದದ್ದೇ ಮೇಲಾಗಿರುತ್ತದೆಂದು ಸಾಯಮನ್ನರ ಮತವಾಗಿದೆ. ಇವರಲ್ಲಿ ಅಲ್ಲಲ್ಲಿ ಕಂಡುಬರುವ ಆಕಾರ- ಇಕಾರಗಳನ್ನು ತಿದ್ದಬರೆಯುವರು. ಕಮೀಟಿಯವರು ಬಹು ಕಳಕಳಿಯಾಗಿ ಪ್ರಾಂತಿಕ ಸ್ವರಾಜ್ಯಗಳಬಗ್ಗೆ ತಮ್ಮ ವಿಚಾರಗಳನ್ನು ಮುಗಿಸಿದ್ದು, ಹಿಂದುಸ್ಥಾನ ಸರಕಾರದ ಆಡಳಿತೆಯನ್ನು ಕುರಿತು ಪ್ರಸ್ತಾಪಮಾಡುತ್ತಿರುವರು. ಆಗಸ್ಟದ ಕೊನೆಯಲ್ಲಿ ಈ ವಿಷಯವೂ ಮುಗಿಯಬಹುದೆಂದು ಹೇಳುತ್ತಾರೆ.

ಮಹಾತ್ಮರಿಗೆ ಒಂದು ಲಕ್ಷದ ಇನಾಮು.

—(೦)—

ನೂಲುವದಕ್ಕೆ ಸರಳವಾಗುವಂಥ ರಾಟಿಯನ್ನು ಹೊಸ ಮಾದರಿ ಪ್ರಕಾರ ಮಾಡಿಕೊಡುವಂಥವನಿಗೆ ಮಹಾತ್ಮರು ಒಂದು ಲಕ್ಷ ರೂಪಾಯಿಯ ಇನಾಮು ಕೊಡುವಂತೆ ಬೇಗನೆ ಒಂದು ಜಾಹೀರಾತನ್ನು ಪ್ರಸಿದ್ಧ ಮಾಡತಕ್ಕವರಿದ್ದಾರೆ.

ಕೋರ್ಟ ಸುಟ್ಟಿತು.

—(೦)—

ಬ್ರಹ್ಮದೇಶದಲ್ಲಿ ಪ್ರೋಮ ಜಿಲ್ಲೆಗೆ ಸೇರಿದ ಪಾಡುಂಗವೆಂಬ ಕೋರ್ಟಿಗೆ ಬೆಂಕಿ ಹತ್ತಿ ಕಾಗದಪತ್ರ ಸಹಿತವಾಗಿ ಕೋರ್ಟ ಬೂದಿಯಾಯಿತು.

ಹುಬ್ಬಳ್ಳಿಯ ವರ್ಕ್‌ಶಾಪಿನಲ್ಲಿ ಅಸಂತೋಷ

ಮೂರು ಸಾವಿರ ಕೂಲಿಕಾರರ ಮೆರವಣಿಗೆ

——(೦)——

ಹುಬ್ಬಳ್ಳಿಯ ರೇಲ್ವೆ ವರ್ಕ್‌ಶಾಪಿನಲ್ಲಿ ಕೆಲಸ ಮಾಡುವಂಥ ವಿಶೇಷವಾಗಿ ಫೌಂಡರಿ ಮತ್ತು ಬಿಲ್ಡಾಯಿಲ ಭಾಗದಲ್ಲಿ ಕೆಲಸಮಾಡುವಂಥ ಕೂಲಿಕಾರರಲ್ಲಿ ಹಿರಿಯರೂ, ಅನುಭವಿಕರೂ, ಮುಖಂಡರೂ ಆದಂಥವರನ್ನು ಮಿ ಅಟಕಿನ್ಸ ಸಾಹೇಬರು ಕೆಟ್ಟ ರೀತಿಯಿಂದ ನಡಿಸಿಕೊಳ್ಳುವರೆಂದೂ ಅಸಹ್ಯವೆನಿಸುವಂಥ ಬೈಗಳನ್ನು ಬೈಯ್ಯುವರೆಂದೂ, ಈ ಒಗ್ಗೆ ತಮಗೆ ವ್ಯಸನ ಮತ್ತು ಸಂತಾಪವಾಗಿರುತ್ತದೆಂದೂ ಜಾಹೀರ ರೀತಿಯಿಂದ ವ್ಯಕ್ತಪಡಿಸಲು ಮೈಲಾರಿ ಮೈದಾನದಲ್ಲಿ ಕೂಲಿಕಾರರ ಪ್ರಚಂಡ ಸಭೆಯು ಕೂಡಿತ್ತು. ಸಭೆಯಲ್ಲಿ ಶ್ರೀ. ಬಾಲಸುಂದರಂ ಮತ್ತು ಏಕಾಂಬರಮ ಇವರು ಭಾಷಣಮಾಡಿ, ಕೂಲಿಕಾರರಿಗೆ ಶಾಂತ ಮತ್ತು ಗಂಭೀರ ವೃತ್ತಿಯಿಂದರುವದಕ್ಕೆ ಉಪದೇಶಮಾಡಿದರು. ಏಜಂಟಸಾಹೇಬರು ಮಿ ಅಟಕಿನ್ಸಸಾಹೇಬರ ದುಷ್ಟತನದ ಯೋಗ್ಯ ಬಂದೋಬಸ್ತು ಮಾಡಿ, ವರ್ಕ್‌ಶಾಪಿನಲ್ಲಿ ಶಾಂತಿ ಸಮಾಧಾನ ನೆಲೆಗೊಳ್ಳುವಂತೆ ಮಾಡಬೇಕೆಂದೇ ಸಭೆಯ ಉದ್ದೇಶವಾಗಿತ್ತು.

ಇದೇ ಸಮಯದಲ್ಲಿ ಒಂದು ವಾನರವು ವಿದ್ಯುತ್ತಿನ ತಂತಿಯಲ್ಲಿ ಸಿಕ್ಕು ಮೃತವಾಯಿತು. ಸಭಿಕರು ಅದರ ಸ್ಮಶಾನಯಾತ್ರೆಯ ಮೆರವಣಿಗೆ ತೆಗೆದರು. ಮೂರು ಸಾವಿರ ಕೂಲಿಕಾರರು ನೆರೆದಿದ್ದರು.

ಮುಸಲಮಾನರ ಕಾಂಗ್ರೆಸ ಪಕ್ಷ-

ಮುಸಲಮಾನ ಲೀಗ, ಜಮಾಯತುಲ್ಲಾ ಮೋಮಿನ ಮುಂತಾದವುಗಳು ಕಾಂಗ್ರೆಸದ ವಿರುದ್ಧ ಚಳವಳಿ ನಡೆಸಿದ್ದರಿಂದ, ಮುಸಲಮಾನರಲ್ಲಿ ಕಾಂಗ್ರೆಸದ ತತ್ವಗಳ ಪ್ರಸಾರ ಮಾಡುವದಕ್ಕಾಗಿ ಮುಂಬಯಿಯಲ್ಲಿ ಮಿ. ಪ್ರೆಲ್ವಿ ಮೊದಲಾದ ಅನೇಕ ಪ್ರಮುಖರು ಮುಸಲಮಾನ ಕಾಂಗ್ರೆಸ ಕಮಿಟಿ ಸ್ಥಾಪಿಸಿದ್ದಾರೆ ಮುಂಬಯಿಯಂತೆ ಲಾಹೋರದಲ್ಲಿಯೂ ಕಾಂಗ್ರೆಸ ಕಮಿಟಿಯು ಸ್ಥಾಪನೆಯಾಗಿದೆ. ಇದರಲ್ಲಿ ಸ್ತ್ರೀಯರೂ ವಿಶೇಷ ಭಾಗತೆಕೊಂಡಿದ್ದಾರೆ. ಫಿರೋಜಾಬಾದದವರಾದರೂ ವೆಸರ್ದ ಚಾಫರ್ಲಿಖಾನ, ಅಬ್ದುಲ ಅಲ್ಲಿಖಾನ, ಶಿರಾಜುದ್ದೀನ ಪಾಲಾ, ಡಾಕ್ಟರ ಮಹಮದ ಆಲಮ ಇವರ ಪತ್ನಿಯರು ಕಾಂಗ್ರೆಸದ ಮೆಂಬರರಾಗಿ, ತಮ್ಮ ಸಮಾಜದ ಹಲವು ಸ್ತ್ರೀಯರನ್ನು ಮೆಂಬರ ಮಾಡುತ್ತಿದ್ದಾರೆ.

ವಿಜಾಪೂರ ಮ್ಯುನಿಸಿಪಾಲಿಟಿ.

ಸ್ಕೂಲಬೋರ್ಡಿನಲ್ಲಿ ದ್ರವ್ಯಾಪಹಾರ.

——(೦)——

ವಿಜಾಪೂರ ಮ್ಯುನಿಸಿಪಾಲಿಟಿಯಲ್ಲಿ ರಾವಸಾಹೇಬ ಹಳಕಟ್ಟಿಯವರು ಸ್ಕೂಲಬೋರ್ಡಿನ ಚೇರಮನ್ನರಾಗಿ ಆರಿಸಲ್ಪಟ್ಟಿದ್ದಾರೆ. ಇವರು ಚಾರ್ಜ ತಕ್ಕೊಳ್ಳುವಾಗ ಲೆಖ್ಖಪತ್ರದಲ್ಲಿ ಬಹಳ ಗೊಂದಲ ಕಂಡುಬಂತು. ಆರು ಸಾವಿರ ರೂಪಾಯಿತನಕ ದ್ರವ್ಯದ ಅಪಹಾರವಾಗಿರಬೇಕೆಂಬ ಸಂಶಯವುಂಟಾಗಿದೆ. ರಾವಸಾಹೇಬರು ಈಗ ಎಲ್ಲ ಕಾಗದಪತ್ರಗಳನ್ನು ಜಪ್ತ ಮಾಡಿಸಿ, ಮೊಹರು ಮಾಡಿಸಿಟ್ಟು, ಕಂಡ ಸಂಗತಿಯನ್ನು ಕಲೆಕ್ಟರಸಾಹೇಬರಿಗೆ ತಿಳಿಸಿದ್ದಾರೆ. ಹಿಂದಿನ ಚೇರಮನ್ನರು ಮಿ ಜಾನವೇಕರೆಂಬ ಮುಸಲಮಾನ ಗೃಹಸ್ಥರಿದ್ದು, ಕೌನ್ಸಿಲ ಮೆಂಬರರಾಗಿದ್ದಾರೆ.

ಜೇಲಿನ ಕಾಯಿದೆಯೋ?

ಯಮನ ಕಾಯಿದೆಯೋ?

——(೦)——

ಭಗತಸಿಂಗನು ಅನ್ನತ್ಯಾಗ ಮಾಡಿ, ಇಂದಿಗೆ ೨೨ ದಿವಸಗಳಾದವು. ಕೂಡ್ರಲಿಕ್ಕೆ ಬರದಷ್ಟು ನಿತ್ರಾಣನಾಗಿದ್ದಾನೆ ಮೂಗಿನಿಂದ ಹಾಲು ಹಾಕಿ; ಜೀವ ಬದುಕಿಸಬೇಕೆಂದು ತುರಂಗದ ಅಧಿಕಾರಿಗಳು ನಿಷ್ಫ ಪ್ರಯತ್ನಿಸುತ್ತಿದ್ದಾರೆ. ಅದು ಕಿಂಚಿತ್ತು ಜೀವಧಾರಣ ಮಾಡಲಿಕ್ಕೆ ಸಹಾಯವಾಗುವದಲ್ಲದೆ, ಮೈಯಲ್ಲಿ ಬಲಬರುವದಕ್ಕಾಗುವದಿಲ್ಲ. ಈತನು ಅತ್ಯಂತ ನಿತ್ರಾಣನಾಗಿ ಬಿದ್ದಲ್ಲಿ ಬಿದ್ದುಕೊಂಡಿರುವನು ಯಮದೂತರ ಆಗಮನವನ್ನು ನಿರೀಕ್ಷಿಸುತ್ತಾ ಬಿದ್ದುಕೊಂಡಿರುವ ಮಗನನ್ನು ನೋಡಲು ತಂದೆಯು ಹೋದನು. ಮಗನ ಕಾಲೊಳಗಿನ ಭಾರವಾದ ಬೇಡಿಗಳನ್ನು ನೋಡಿ, ಅಂತಃಕರಣಾದ್ರವಿಸಿದವನಾಗಿ ಇದೇನು ಕ್ರೂರತನವೆನಿಸುವಂಥ ಕೃತ್ಯವೆಂಬ ಪ್ರಶ್ನೆಯನ್ನು ಜೇಲಿನ ಅಧಿಕಾರಿಗಳಿಗೆ ಮಾಡಲು-ಮೂರು ವರ್ಷಗಳಿಗಿಂತ ಹೆಚ್ಚಿಗೆ ಶಿಕ್ಷೆಯಾದವರಿಗೆಲ್ಲ ಬೇಡಿ ಹಾಕುವಂತೆ ಜೇಲಿನ ಕಾಯಿದೆಯುಂಟೆಂದು ಸಾಹೇಬರು ಉತ್ತರ ಕೊಟ್ಟರು. ಕಾಯಿದೆಯು ಇರಬಹುದು. ಭೂತದಯೆಯೂ ಯುಕ್ತಾಯುಕ್ತ ವಿಚಾರವೂ ಇರಬೇಕಲ್ಲವೇ? ಸಾಯುವ ಪಂಥದಲ್ಲಿರುವಂಥವನ ಕಾಲೊಳಗೆ ಬೇಡಿ ಹಾಕುವದು ಕೇವಲ ಕ್ರೂರತನವನ್ನು ತೋರಿಸುತ್ತದೆಂದು ಯಾರಾದರೂ ಹೇಳಬಹುದು.

ರಾಜವಲ್ಲಭದ ಪ್ರಯೋಗ-

ಶ್ರೀ. ಗಂಗುಬಾಯಿ ಗುಳೇದಗುಡ್ಡ ಇವರ ನಾಟಕ ಕಂಪನಿಯವರು ವಿಜಾಪೂರದಲ್ಲಿದ್ದು ಇವರು ರಾಜವಲ್ಲಭವೆಂಬ ಹೊಸ ಪ್ರಯೋಗವನ್ನು ಕಲಿಸಿದ್ದಾರೆ. ಇದರ ಮೊದಲನೆಯ ಆಟವನ್ನು ನಾಳಿನ ದಿವಸ ಭಕ್ತರ ಥಿಯಟರದಲ್ಲಿ ಶ್ರೀ. ಶ್ರೀನಿವಾಸರಾವ ಕೌಜಲಗಿಯವರ ಅಧ್ಯಕ್ಷತೆಯಲ್ಲಿ ಆಡುವರು.

ಹಜರತಸಾಹೇಬರ ದಸ್ತಗಿರಿ-

ಕಾಬೂಲದಲ್ಲಿ ಶೋರಬಝಾರದ ಹಜರತಸಾಹೇಬರು ಹಬಿಬುಲ್ಲಾಖಾನನನ್ನು ಪಟ್ಟಕ್ಕೆ ಕೂಡಿಸುವದಕ್ಕೂ ಈತನ ಪಕ್ಷ ಬೆಳೆಸುವದಕ್ಕೂ ಗುರುಸ್ಥಾನದಲ್ಲಿದ್ದರು. ಆದರೆ ಇವರಿಗೆ ಈಗ ತುರಂಗವಾಸ ಒಂದಿರುತ್ತದೆ. ಹಜರತಸಾಹೇಬರು ಶೇರಬಾಗಾ ಎಂಬವನ ಬಂಧುವಾಗಿದ್ದಾರೆ. ಶೇರಬಾಗಾನು ಹಬಿಬುಲ್ಲಾನ ವೈರಿಯಾಗಿದ್ದಾನೆ. ಹಜರತಸಾಹೇಬರು ತನ್ನ ರಹಸ್ಯಗಳನ್ನು ಶೇರಬಾಗಾನಿಗೆ ತಿಳಿಸಬಹುದೆಂದು ಹಬಿಬುಲ್ಲನು ಈಗ ಇವರನ್ನು ತುರಂಗದಲ್ಲಿ ಹಾಕಿದ್ದಾನೆ.

ಶಿಗ್ಗಾವಿಯಲ್ಲಿ ಶ್ರೀ ವಿದ್ಯಾರಣ್ಯರ ಉತ್ಸವವು

ಶಿಗ್ಗಾವಿಯಲ್ಲಿ ವಿಶೇಷತಃ ಬಾಲಕವರ್ಗದ ಯತ್ನಗಳಿಂದ ಇಲ್ಲಿ ಒಂದು ನೂತನ ಭಜನ ಮಂದಿರವು ಅಕ್ಷತ್ರಿತಿಯಾ ದಿವಸ ಸ್ಥಾಪಿಸಲ್ಪಟ್ಟಿದ್ದು, ಆ ಮಂಡಲದ ವತಿಯಿಂದ ಜುಲೈ ೭ ನೇ ತಾರೀಖು ಶುಕ್ರವಾರ ದಿವಸ ಜಗದ್ಗುರು ಸ್ವಾಮಿ ವಿದ್ಯಾರಣ್ಯರ ಪುಣ್ಯತಿಥಿಯು ಒಳ್ಳೇ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಉತ್ಸವದ ಕಾರ್ಯಕ್ರಮ- ಸ್ವಾಮಿಗಳ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಇಟ್ಟುಕೊಂಡು ವಾದ್ಯಗಳೊಂದಿಗೆ ಜಯಘೋಷ ಮಾಡುತ್ತ ಬಾಲಕರೆಲ್ಲರೂ ನಗರದ ಬೀದಿಗಳನ್ನು ಸಂಚರಿಸಿ ಆ ಮೇಲೆ ತಳಿರು ತೋರಣಗಳಿಂದ ಅಲಂಕರಿಸಿದ್ದ ಭಜನ ಮಂದಿರಕ್ಕೆ ಬಂದವೇಳೆ ಶ್ರೀಯುತ ವೆಂಕಣ್ಣಾಚಾರ್ಯ ಗುಡಿ ಇವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಕೆಲವು ಸಭ್ಯ ಗೃಹಸ್ಥರ ಸಮಯೋಚಿತ ಭಾಷಣಗಳಾದಮೇಲೆ ಉತ್ಸವವು ಪೂರ್ಣವಾಯಿತು.

ಆಸಾಮು- ಕೋಚಿನ ದೇಶಗಳಲ್ಲಿ ಅತಿವೃಷ್ಟಿಯಿಂದ ಅನರ್ಥವಾಗುತ್ತಿದ್ದಾಗ- ಸಿಂಧ ದೇಶದಲ್ಲಿ ಮಳೆಯ ಹನಿಕೂಡ ಇಲ್ಲ. ಬಿಸಿಲು ವಿಪರೀತವಾಗಿ ಕಾಯ್ದು ಜನರು ನೆತ್ತರು ಬಿರಿದು, ಸಾಯುತ್ತಿದ್ದಾರೆ.

ಜಾಹೀರ ನೋಟೀಸು

—(೦)—

ಕೆಳಗೆ ಗುರ್ತುಮಾಡಿದ ನೀಲವ್ವಾ ಕೋಂ ಫಕೀರವ್ವಾ ವಾಲೀಕಾರ ಸಾ|| ಸತ್ತಿಗಿಹಳ್ಳಿ ಈಕೆಯಿಂದ ಯಾವತ್ತು ಜನಂಗೆ ತಿಳಿಸುವದೇನೆಂದರೆ ನನ್ನ ಗಂಡನಾದ ಫಕ್ಕೀರಪ್ಪಾ ಬಿನ ನಿಂಗಪ್ಪಾ ವಾಲಿಕಾರ ಸಾಕೀನ ಸತ್ತಿಗಿಹಳ್ಳಿ ತಾಲ್ಲೂಕ ಹಾನಗಲ ಈತನು ತಂದೆ ಬಾ|| ಕೋಡ ತಾಲ್ಲೂಕ ಸತ್ತಿಗಿಹಳ್ಳಿ ಗ್ರಾಮದಲ್ಲಿಯ-

ಸರ್ವೆ ನಂ	ಯಕರೆ	ಕರಂ ರೂಪಾಯಿ
೪೮/೩ (ಬ)	೦-೧೩	೦-೫-೦
೪೧/೨	೧-೦	೦-೧೫-೦
೨/೧ (ಅ)	೧-೩೨	೨-೧೦-೦

ಈ ಮೂರು ಪೋಟ ಹಿಸ್ಸಾ ನಂಬರ ಪೂರಾ ಮತ್ತು ತನ್ನ ತಾಯಿಯಾದ ಧರ್ಮವ್ವಾ ಈಕಿಗೆ ಜೀವನಾಂಶದ ಬಗ್ಗೆ ಕೊಟ್ಟ ನಂಬರು ಸರ್ವೆ ನಂಬರು ೩೮/೨ ಯಕರೆ ೨/೨೩ ೩೦ ರೂಪಾಯಿ ೪/೬ ಈ ನಂಬರದಲ್ಲಿ ಆಕೆಯ ಪಶ್ಚಾತ್ ೧/೨ ಸಮಾಯಿಕ ಮಾಲ್ಕಿ ಇದ್ದು ನನ್ನ ಗಂಡನ ಬಾ| ಅದೆ ಮತ್ತು ಸತ್ತಿಗಿಹಳ್ಳಿ ಗ್ರಾಮದಲ್ಲಿಯ ಹುಲ್ಲುಮನಿ ವ ಹಿತ್ತಲು ಈ ಎಲ್ಲ ಆಸ್ತಿಗಳನ್ನು ಎರಡನೇದವರಿಗೆ ಖರೀದಿಮಾಡಬೇಕು ಅನ್ನುವ ಆಲೋಚನೆಯಲ್ಲಿ ಇದ್ದಾನೆ ಅಂತಾ ಕೇಳತೇನೆ ಅವನು ಬಂದೀ ಇಟ್ಟು ನನಗೆ ಅನ್ನವಸ್ತ್ರ ಇಲ್ಲದಂತೆ ಈಗ ಮಾಡಿದ್ದು ಈಗ ಆ ಆಸ್ತಿಗಳನ್ನು ಮಾರಿ ನನಗೆ ಲುಕ್ಸಾನಮಾಡುವ ಇರಾದೆ ಅದೆ ಈ ಆಸ್ತಿಗಳ ಮೇಲೆ ನನ್ನ ಸಂರಕ್ಷಣೆ ಬಗ್ಗೆ ಪೋಟಗಿ ಬೋಜಾ ಇದ್ದು ಆ ಬಗ್ಗೆ ಕೆಲಸನಡಿಸತಕ್ಕವಳಿರುತ್ತೇನೆ ಕಾರಣ ಯಾರೂ ನನ್ನ ಗಂಡನ ಕಡಿಯಿಂದ ಖರೀದಿ ವಗ್ಯೆರೆ ಮಾಡಬಾರದು ಈ ನೋಟೀಸು ಜಾಹೀರ ಆದಮೇಲೆ ಮಾಡಿದರೆ ಸದರ ಆಸ್ತಿಯ ಮೇಲೆ ನನ್ನ ಪೋಟಗಿ ಹಕ್ಕು ನನ್ನ ಜೀವಮಾನ ಇರುವವರೆಗೆ ಇರುವದು ಅಲುಕ್ಸಾನಕ್ಕೆ ಪಾತ್ರ ಆಗುವ ಸಂಭವ ಅದೆ ಕಾರಣ ಜಾಹೀರಮಾಡಿದ್ದೇನೆ ತಿಳಿಯುವದು ತಾ| ೮-೭-೨೪

ಈ ಎಡಗೈ ಹೆಬ್ಬೆಟ್ಟಿನ ಗುರ್ತು ನೀಲವ್ವಾ ಕೋಂ ಫಕೀರಪ್ಪಾ ವಾಲೀಕಾರ ಸಾ|| ಸತ್ತಿಗಿಹಳ್ಳಿ ಈಕೆಯು ಮಾಡಿದ್ದು ಅದೆ.

ಚಂದಾದಾರರಿಗೆ ಸೂಚನೆ

ಜುಲೈ ೩೦ ರಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚ ದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಸೆಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರಭಾವ! ಪ್ರತ್ಯಕ್ಷ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ, ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕಿಬಾಯಿ ದೀಕ್ಷಿತ

C/o ಮಧ್ಯ ಬ್ಯಾಂಕ ಧಾರವಾಡ

ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನ ಮೂಲಕ ಈ ಬೇಡಿಕೆಯನ್ನು ಮಾಡುವಿರಿ ಎಂಬುದನ್ನು ಬರೆಯಬೇಕು.

ನೋಟೀಸು

—(೮)—

ಗವಡಾ ಬಿನ ಕೆಂಚಪ್ಪಾ ಗವಡರ ಸಾಕೀನ ಚಿಕ್ಕಬಾಗೋಡಿ ತಾಲ್ಲೂಕ ಸದರ ಜಿಲ್ಲಾ ಬೆಳಗಾವ ಇವರಿಗೆ-

ಕೆಳಗೆ ಗುರ್ತುಮಾಡಿದವಳ ಕಡಿಂದಾ ನೋಟೀಸು ಕೊಡುವದೇನಂದರೆ- ನೀನು ನನ್ನ ಮದುವಿ ಗಂಡನಿದ್ದು ನಂನ ಕೂಡ ನೀನು ನಾನು ಪ್ರಬುದ್ಧಳಾದ ಮೇಲೆ ಸರಾಸರಿ ೧ ತಿಂಗಳ ಬಾಳವೆಮಾಡಿದಿ ನೀನು ನಾನು ಬಾಳವೆಗೆ ಹತ್ತಿದಕ್ಕಿಂತ ಮೊದಲೇ ಕೆಟ್ಟ ವ್ಯಸನಕ್ಕೆ ಬಿದ್ದಿದ್ದು ಆ ನಾದಿನ ದೆಸೆಯಿಂದ ನನ್ನ ಕೂಡ ನೆಟ್ಟಗೆ ಬಾಳವೆಮಾಡಲಿಲ್ಲಾ ನೀನು ಸ್ಥಾವರ ಜಂಗಮ ಆಸ್ತಿಯಿಲ್ಲದ ದರಿದ್ರ ಮನುಷ್ಯನಾಗಿರುತ್ತೀ ನನ್ನ ತವರಮನಿಯವರು ದಾಗೀನೆ ಇಟ್ಟು ಮದಿವೆಮಾಡಿಕೊಟ್ಟರು ನೀನು ನಿನ್ನ ವ್ಯಸನದ ದೆಸೆಯಿಂದ ನನ್ನ ಮೈಮೇಲಿನ ಯಾವತ್ತು ದಾಗೀನೆ ಕಸಕೊಂಡು ಹೊಡದು ಬಡದುಮಾಡಿ ಹೊರಗೆ ಹಾಕಿದಿ ಆಗಿನಿಂದ ಇವತ್ತಿನತನಕ ನೀನು ನನ್ನನ್ನು ಕರಕೊಂಡು ಹೋಗಬೇಕೆಂದು ನನ್ನ ನಿನ್ನ ಹತ್ತಿಗಡಿಯವರು ಪ್ರಯತ್ನಮಾಡಿದರು ಆದರೆ ನೀನು ದರಕಾರಮಾಡಲಿಲ್ಲಾ ಕಾರಣ ಸಾವುಕಾರರಲ್ಲಿ ೩೦೦ ರೂಪಾಯಿ ಸಾಲಾ ಮಾಡಿರುತ್ತೇನೆ ಉಪಜೀವನ ನಾಗಿಸಿಕೊಂಡೆ ಈಗ ಸಾವಕಾರರ ತಗಾದಿ ಆಗಿದೆ ನೀನು ಕರಕೊಂಡು ಹೋಗಲಿಲ್ಲಾ ನೀನು ನನ್ನ ಕೂಡಾ ಬಾಳವೆಮಾಡುವ ಬಾಗ ಉಳಿಯಲಿಲ್ಲಾ ಅಂತಾ ತಿಳಿದು ಈ ನೋಟೀಸು ಕೊಡುವ ಭಾಗಬಿತ್ತು ಈ ನೋಟೀಸು ಮುಟ್ಟಿದ ೮ ದಿವಸದಲ್ಲಿ ಸದರ ಸಾಲಾ ಬಡ್ಡಿ ಸಹಿತ ತೀರಿಸಬೇಕು ತವರುಮನೆ ದಾಗೀನೆ ನನಗೆ ಮರತ ಕೊಡಬೇಕು ಇದು ಸ್ತ್ರೀಧನ ಇದ್ದು ಇದರ ಮೇಲೆ ನನ್ನದೇ ಮಾಲ್ಕಿ ಇರುತ್ತದೆ ಮತ್ತು ನೀನು ಒಳ್ಳೇ ರೀತಿಯಿಂದ ಬಾಳವೆಮಾಡುತ್ತೇನೆಂದು ದೈವದವರ ಜಾಮೀನು ಕೊಟ್ಟು ಕರಕೊಂಡು ಹೋಗಬೇಕು ಈ ಪ್ರಕಾರ ಮಾಡದಿದ್ದರೆ ನೀನು ನನ್ನ ಕೂಡ ಬಾಳವೆಮಾಡುವದಿಲ್ಲಾ ಅಂತಾ ಖಚಿತ ತಿಳಕೊಂಡು ನಾನು ಎರಡನೇದವರನ್ನು ಉಡಕಿಮಾಡಿಕೊಳ್ಳುತ್ತೇನೆ ಅನಂತರ ನನ್ನ ಮೇಲೆ ವ ನನ್ನ ಉಡಕಿ ಆದ ಗಂಡನ ಮೇಲೆ ನಿನ್ನ ಹಕ್ಕು ಯಾವ ತರಹದ್ದು ನಡಿಯಲಾರದು ಈ ನೋಟೀಸ ನೋಡಪತ್ರ ಅಂತಾ ನೀನು ತಿಳಿಯಬೇಕು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ ತಿಳಿಯುವದು ತಾ|| ೯-೭-೧೯೨೪

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಗಂಗವ್ವಾ ಕೋಂ ಗವಡಾ ಗವಡರ ಸಾ|| ಕವಲಗೇರಿ ತಾ|| ಧಾರವಾಡ ಈಕಿ ಕೈದು ಅದೆ

ಈ ಪತ್ರವನ್ನು ಅಂಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. B. 1443

ವಿಜಯ

ನಿತ್ಯಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶನಿವಾರ ತಾರೀಖು ೧೩ ನೇ ಜುಲೈ ೧೯೨೯ (ಸಂಚಿಕೆ ೧೫೬

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು:

ಚಾಲು ಖಾತೆಗಳು:— ಪ್ರತ್ಯೇಕವಾಗಿ ತೆರೆಯಲ್ಪಡುವವು.

ಮುದತಿ ಠೇವುಗಳು:— ಒಂದ್ವರ್ಷದವರೆಗೆ ತೆರೆದು ಕೊಳ್ಳಲ್ಪಡುವವು- ಬಡ್ಡಿದರ ರೂ. ೩॥ ೬ ತಿಂಗಳ ಕರಾರಿನಿಂದಲೂ ತೆರೆದುಕೊಳ್ಳಲ್ಪಡುವವು. ಬಡ್ಡಿದರ ೩॥ ರೂ.

ಸೇವ್ಹಿಂಗ್ಸ ಬ್ಯಾಂಕ:— ಒಂದ್ವರ್ಷದವರೆಗೆ ತೆರೆದು ಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

[illegible] ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ [illegible] ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ [illegible] ಬರುವದು. ಸಾಲ ಹಾಗೂ [illegible] ಉದರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು [illegible] ಬರುವದು ಮತ್ತು ಹಾಗೂ [illegible] ಪ್ರತಿಗಳೂ ಮೊಕತ್ಯಾರ ಪತ್ರಗಳೂ ಸದರಿ ಬ್ಯಾಂಕಿನಲ್ಲಿ [illegible] ದೊರೆಯುವವು.

ಹುಬ್ಬಳ್ಳಿ ಡಿ. ಡೊನೆಲಿ.

ತಾ॥ ೧೭-೬-೨೯ ಏಜಂಟರು

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಎಂಟು ಲಕ್ಷದ ಮೇಲುಂಟು. ಚಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ.

ಧಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತಿ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

[illegible] ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ.

ದಿ ಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ-

[illegible] ಮಂಗಳವಾರಪೇಟೆ, [illegible] ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ [illegible] ದರದಿಂದ ಆಸು ಮತ್ತು ಬಹಳ ಮುದ್ದತಿಯ ಕಿಸ್ತಿನಿಂದ [illegible] ದೊರೆಯುವದು. ಬಡ್ಡಿಯ ದರ [illegible] ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು, ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

[illegible]

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೩-೭-೨೯ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಪ್ರಿಯು
ಶ್ರೀ ವಸ್ತುಮಾತಿಯು ನಲಿಸಿ ಸುಹಿತಚರಿತೆಗಳಿಂ ಗ
ದೀ "ವಿಜಯಂ" ಶ್ರೀಶಕರುಣ ।
ನಾ ವಿಹಿತಂಗಳ ವಿವರಿಸಿನಲಿವುದು ಸಾಜಂ ॥೧॥

ಶ್ರೀ ವಿದ್ಯಾರಣ್ಯೋತ್ಸವವು.

ಶ್ರೀ ಶಾಂತೇಶ ವಾಚನಾಲಯದ ಪರವಾಗಿ ಈ ಉತ್ಸವವು ತಾರೀಖು ೨೭-೬-೨೯ ರಿಂದ ಮೂರು ದಿವಸಗಳವರೆಗೆ ಬಳ್ಳೇ ಸಡಗರದಿಂದ ಸಾಂಗವಾಯಿತು.

ಮೊದಲನೆಯ ದಿನ ಅಂದರೆ ಶ್ರೀ ವಿದ್ಯಾರಣ್ಯರ ಪುಣ್ಯತಿಥಿ ದಿನ ಜ್ಯೇ. ವ. ೧೩ ಶುಕ್ರವಾರ ಮುಂಜಾನೆ ಶ್ರೀ ಶಾಂತೇಶ ವಾಚನಾಲಯದಲ್ಲಿ ಶ್ರೀ ವಿದ್ಯಾರಣ್ಯರ ಭಾವಚಿತ್ರವನ್ನು ಹೂವಮಾಲೆಗಳಿಂದ ಅಲಂಕರಿಸಿ ಪೂಜಾ ಆರತಿಗಳನ್ನು ಮಾಡಿ ಜಯತು ವಿದ್ಯಾರಣ್ಯ ಎಂಬ ಮಂಗಳ ಪದ್ಯದಿಂದ ಮುಗಿಸುವದರಲ್ಲಿ ಬಂದಿತು. ಅಂದೇ ಸಾಯಂಕಾಲದ ೬ ಗಂಟೆಗೆ ಸ. ಮು. ಅರ್ಬನ ಬ್ಯಾಂಕಿನ ಅಟ್ಟದ ಮೇಲೆ ಸಭೆಗೂಡಿ ಮೊದಲಿಗೆ ವಿದ್ಯಾರಣ್ಯರ ಸ್ತೋತ್ರವನ್ನಲ್ಪಟ್ಟಿತು. ಬಳಿಕ ಕೇವಲ ಉತ್ಸವಕ್ಕಾಗಿಯೇ ಬರೆದು ಕಳುಹಿದ ಆಲೂರ ಹರ್ಡೇಕರ ಮಂಜಪ್ಪನವರು ಬರೆದ ಸ್ವರಾಜ್ಯಸ್ಥಾಪನಾಚಾರ್ಯರಾದ ವಿದ್ಯಾರಣ್ಯರು ಎಂಬ ಹಾಗೂ ಹೊಸಪೇಟೆಯಿಂದ ರಾ. ಬ. ಸಿ. ಹನುಮಂತಗೌಡರವರಿಂದ ಶ್ರೀ ವಿದ್ಯಾರಣ್ಯರು ಎಂಬ ಸರಸವಾದ ಪ್ರಬಂಧಗಳನ್ನು ಕ್ರಮವಾಗಿ ಗೆಳೆಯರ ಗುಂಪಿನ ಪ್ರಹ್ಲಾದರೂ ಕನ್ನಡಿಗರ ಕೂಟದ ಶ್ರೀ ಪ್ರಹ್ಲಾದರೂ ಓದಿ ತಿಳಿಸಿದರು. ಶ್ರೀಮಾನ್ ರಾಜಪುರೋಹಿತರು ತಾವು ಬರೆದು ತಂದಿದ್ದ ವಿದ್ಯಾರಣ್ಯರ ರಾಷ್ಟ್ರೀಯ ಜೀವನ ಎಂಬ ನಿಬಂಧವನ್ನು ಓದಿದರು. ಅಲ್ಲಿಂದ ವೇ॥ ನ್ಯಾಯರತ್ನ ವಾಗೀಶಶಾಸ್ತ್ರಿಗಳವರು ವಿದ್ಯಾರಣ್ಯರೂ ಧರ್ಮವೂ ಎಂಬ ವಿಷಯವಾಗಿ ಬಳ್ಳೇ ವಿಚಾರಪೂರ್ಣವಾದ ಪ್ರವಚನವನ್ನು ಮಾಡಿದರು ಅವರ ಪ್ರವಚನದಲ್ಲಿ ಮುಖ್ಯವಾಗಿ ಶ್ರೀ ವಿದ್ಯಾರಣ್ಯರು ಹೇಗೆ ಧರ್ಮಕ್ಕಾಗಿ ಹೆಣಗಾಡಿದರೆಂಬ ಮಾತನ್ನು ಬಳ್ಳೇ ಸ್ಪಷ್ಟವಾಗಿ ವಿವರಿಸಿದರು. ಶ್ರೀ ವಿದ್ಯಾರಣ್ಯರು ಕರ್ನಾಟಕ ಸಿಂಹಾಸನವನ್ನು ಕೇವಲ ಐಹಿಕ ದೃಷ್ಟಿಯಿಂದ ಸ್ಥಾಪಿಸದೆ ಪಾರಮಾರ್ಥಿಕ ದೃಷ್ಟಿಯಿಂದ, ಆರ್ಯರ ಧರ್ಮವನ್ನು ಪ್ರಸಾರಗೊಳಿಸುವ ದೃಷ್ಟಿಯಿಂದ ಸ್ಥಾಪಿಸಿದರೆಂಬುದನ್ನು ಅನೇಕಾನೇಕ ಉದಾಹರಣೆಗಳಿಂದ ಸಿದ್ಧ ಮಾಡಿ ತೋರಿಸಿದರು.

ಮರುದಿನ ಅಂದರೆ ಶನಿವಾರ ದಿವಸ ಬೆಂಗಳೂರಿನಿಂದ ಈ ಉತ್ಸವಕ್ಕಾಗಿಯೇ ಉತ್ಸವ ಮಂಡಲದವರ ಆಮಂತ್ರಣದ ಮೇರೆಗೆ ದಯ ಮಾಡಿದ ಶ್ರೀ. ಸೀ. ಕೇ. ವೆಂಕಟರಾಮಯ್ಯನವರು, ಎಂ. ಎ. ಎಲ್. ಎಲ್. ಬಿ. ಓರಿಯಂಟಲ್ ಟ್ರಾನ್ಸಲೇಟರ ಅವರು ವಿದ್ಯಾರಣ್ಯರೂ ಕರ್ನಾಟಕವೂ ಎಂಬ ವಿಷಯವಾಗಿ ಅತ್ಯಂತ ವಿಚಾರಪೂರ್ಣ ಸ್ವಾರಸ್ಯಮಯವಾದ ಭಾಷಣವನ್ನು ಮಾಡಿದರು. ಅಂದು ಬ್ಯಾಂಕಿನ ವಿಶಾಲವಾದ ಅಟ್ಟವು ಶ್ರೋತೃಜನರಿಂದ ತುಂಬಿ ಕಿಕ್ಕಿರಿದು ಹೋಗಿತ್ತು. ಎಲ್ಲೆಲ್ಲಿಯೂ ಉತ್ಸಾಹವು ಮೂರ್ತಿಮಂತವಾಗಿ ತೋರುತ್ತಿತ್ತು. ವ್ಯಾಖ್ಯಾತರ ಸುಮನೋಹರವಾದ ಹಾಸ್ಯ, ಅರ್ಥಪೂರ್ಣ ಭಾಷಣದಿಂದ ಇಡಿ ಸಭೆಗೆ ಸಭೆಯೇ ತಲ್ಲಣಗೊಂಡಿತು. ಸೀ. ಕೆ. ಅವರು ಅಖಂಡವಾಗಿ ಎರಡು ತಾಸಿನವರೆಗೆ ತಮ್ಮ ಅಸ್ಖಲಿತವಾಣಿಯಿಂದ ಮಾತನಾಡಿದರು. ಅವರು ಭಾಷಣದಲ್ಲಿ ಮುಖ್ಯವಾಗಿ ವಿದ್ಯಾರಣ್ಯರ ಕಾಲದ ಕಠಿಣ ಪರಿಸ್ಥಿತಿಯ ಯಥಾರ್ಥ ಚಿತ್ರವನ್ನು ಆರ್ಯಧರ್ಮಕ್ಕೊದಗಿದ ಗಂಡಾಂತರವನ್ನು ಬಳ್ಳೇ ಹೃದ್ಯವಾಗಿ ಬಣ್ಣಿಸಿದರು. ಹಾಗೂ ವಿದ್ಯಾರಣ್ಯರ ತಪೋಬಲ ಅಗಾಧವಾದ ವಿದ್ವತ್ತೆಯನ್ನು ದರೂ ಅತಿ ಸರಸವಾಗಿ ತಿಳಿಸಿದರು. ವಿಜಯನಗರದ ಸಾಂಪತ್ತಿಕ, ಕಲಾಕೌಶಲ್ಯ, ಶೃಂಗಾರಿಕೆ, ರಾಜ್ಯವ್ಯವಸ್ಥೆ ಇವೇ ಮೊದಲಾದ ಅನೇಕ ಸಂಗತಿಗಳ ವಿಷಯವಾಗಿ ಸಪ್ರಮಾಣವಾಗಿ ಮಾತನಾಡಿದರು. ತಾತ್ಪರ್ಯ, ವ್ಯಾಖ್ಯಾತರ ಭಾಷಣವು ಸರ್ವ ವಿಧದಿಂದಲೂ ಪರಿಪೂರ್ಣವಾಗಿತ್ತು. ಅವರು ತಮ್ಮ ಮನೋಹರವಾದ ವಾಗ್ಝರಿಯಿಂದ ಶ್ರೋತೃವೃಂದವನ್ನು ಮುಗ್ಧಗೊಳಿಸಿಬಿಟ್ಟರು!

ಶ್ರೀ ಸಿದ್ಧಾರೂಢಸ್ವಾಮಿಗಳ ಜವಾಬು.

—(೦)—

ಶ್ರೀಗಳವರ ಮೇಲಾದ ದಾವೆಯಲ್ಲಿ ಶ್ರೀಗಳವರ ಜವಾಬು ವಾದಿಯ ತರ್ಫೆನಿಂದ ಇಂದು ನಾಳೆ ಇಷ್ಟರಲ್ಲಿ ಶ್ರೀಗಳವರ ಮಠದಲ್ಲಿ ನಡೆಯಬಹುದಾಗಿ ತಿಳಿಯುತ್ತದೆ. ಹುಬ್ಬಳ್ಳಿಯ ಮುನಸಫರಾದ ಎ. ಫಡಕೆಯವರು ಕಮಿಶನರರಾಗುವರು.

ಮದ್ಯಪಾನ ಮತ್ತು ಗೋವಧೆ.

ದಿವಾನ ಮಾಧವರಾಯರ ಹೇಳಿಕೆ.

—(೦)—

ದಿವಾನ ಮಾಧವರಾಯರು ನೀಲಗಿರಿಗೆ ಹೋಗಿಬಂದರು ರೈತರು ಇವರಿಗೆ ಮಾನಪತ್ರ ಕೊಟ್ಟರು. ಬ್ರಾಹ್ಮಣೇತರವೆಂಬ ಅಸಹ್ಯ ಹೆಸರಿಗೆ ತಿಲಾಂಜಲಿ ಕೊಟ್ಟು, ಒಕ್ಕಲಿಗರ ಸಂಘವೆಂಬ ಹೊಸ ಹೆಸರಿಟ್ಟುಕೊಂಡವರೇ ಇವರು. ದಿವಾನರೂ ಒಕ್ಕಲಿಗರೇ. ಮಾನಪತ್ರದಲ್ಲಿ ಮೂರು ವಿಷಯಗಳಿದ್ದವು. ಹತ್ತಿಯ ರಿವಿಜನವು ಮೊದಲನೆಯದು. ಇದು ತಮ್ಮ ಅಧಿಕಾರಗಿರಿಯ ವಿಷಯವಲ್ಲವೆಂದೂ ಮೆಂಬರರ ವಿಚಾರವೆಂದರು. ಎರಡನೆಯದು ಮದ್ಯಪಾನ ಪ್ರತಿಬಂಧವು ಇದಕ್ಕೆ ಉತ್ತರ ಕೊಡುವಾಗ ದಿವಾನರು ಅಂದದ್ದೇನಂದರೆ- ನಾನು ಕರೆ ಕುಡಿಯುವದಿಲ್ಲ. ಹುಟ್ಟಿದಂದಿನಿಂದ ಕುಡಿಯುವದಿಲ್ಲ. ಮದ್ಯಪಾನ ನಿಲ್ಲಿಸಬೇಕೆಂದೇ ನನ್ನ ಅಭಿಲಾಷೆ. ಆದರೆ ಇದಕ್ಕೆ ಬಹಳ ರೊಕ್ಕ ಬೇಕು. ಸರಕಾರದ ಯಂತ್ರ ನಡಿಯಬೇಕಾಗಿರುತ್ತದೆ ಹೊಸ ಕರ ಕೂಡಿಸಬೇಕು. ಈ ಕರ ಕೂಡಿಸಲು, ಮತ್ತು ಹೊಸ ರೊಕ್ಕದ ದಾರಿ ತೋರಿಸಿ ಕೊಡಲು, ನಿಮ್ಮ ಜಿಲ್ಲೆಯ ಕೌನ್ಸಿಲ ಮೆಂಬರರಾದ ಮೊಸರ್ ಪ್ರಧಾನ ಮತ್ತು ಪಾಂಡೆ ಇವರಿಗೆ ಹೇಳಿರಿ. ಸರಕಾರದವರು ಆಲೋಚಿಸಬಹುದಾದ ಉಪಾಯಕ್ಕೆ ಮಂಜೂರಿ ಕೊಡಲು ಇವರು ಸಿದ್ಧರಾಗಿರುವರೆಂದು ಭಾವಿಸುತ್ತೇನೆ. ಮೂರನೆಯದು- ಗೋವಧ ನಿಲ್ಲಿಸಬೇಕಾದರೆ- ಉತ್ತಮವಾದ ಧಷ್ಟಪುಷ್ಟ ಆಕಳುಗಳ ಬೆಳಗೆ ಮಾಡಬೇಕು. ಕಟುಕರು ಬಡಕ ಮತ್ತು ಬೀಕಲು ದನಗಳನ್ನು ಕೊಳ್ಳುತ್ತಾರೆ. ಅವರಿಗೆ ಬೆಲೆ ನೀಗದಂಥ ದನಗಳ ಉತ್ಪತ್ತಿಮಾಡಿದರೆ ಗೋವಧವು ತಾನಾಗಿ ನಿಲ್ಲುವದು. ನಾನು ಸಾತಾರಿಯಲ್ಲಿ ಈ ತೆರವಾಗಿ ಪ್ರಯತ್ನ ಮಾಡಿ, ಯಶಹೊಂದಿದ್ದೇನೆ. ಅದೇ ಪ್ರಕಾರ ನೀವೂ ಮಾಡಿರಿ.

ಶಿಕ್ಷೆಯ ಸುದ್ದಿ ಕೇಳಿದ ಕೂಡಲೆ ಸಿಟ್ಟಿನಿಂದ ಜೀವ ಹೋಯಿತು.

—(೦)—

ಬೆಳಗಾವ ಜಿಲ್ಲೆಯಲ್ಲಿ ಹುಕ್ಕೇರಿ ತಾಲೂಕಿಗೆ ಸೇರಿದ ರಾಜಾರಾಮ ಪರಶುರಾಮ ಕಿಹಾ ಎಂಬ ಸಧನ ಗೃಹಸ್ಥನು ತನ್ನ ಸೂಳೆಯ ಮಾತು ಕೇಳಿ, ಪ್ರೇಡತಿಯಾದ ಚಂಪಾವತಿಯನ್ನು ಪರಿಸರಿಯಿಂದ ಉರಿಕೊಂಡದ್ದಲ್ಲದೆ, ಕಡೆಗೆ ಅವಳ ಮೈಮೇಲೆ ಕಲ್ಲೆಣ್ಣೆ ಸುರವಿ, ಬೆಂಕಿ ಹಚ್ಚಿ, ಸುಟ್ಟುಕೊಂದನು ಈ ಕ್ರೂರ ಕರ್ಮಕ್ಕಾಗಿ ಅ॥ ಜಡ್ಜರಾದ ಎ. ಹುಲಕೋಟೆಯವರು ಆತನಿಗೆ ಕರೇ

ಫಾಶೀನ ಶಿಕ್ಷೆ ವಿಧಿಸಿದರು. ಇದರ ಮೇಲೆ ಆತನು ಕೋರ್ಟಿಗೆ ಅಪೀಲು ಮಾಡಿದನು. ಅಲ್ಲಿ ಶಿಕ್ಷೆಯು ಕಾಯಮವಾಯಿತು. ತುರಂಗದಲ್ಲಿ ಈ ಸುದ್ದಿಯನ್ನು ಕೇಳಿದ ಕೂಡಲೆ ಆತನು ಹೌಹಾರಿ ಎಚ್ಚರ ತಪ್ಪಿ ಬಿದ್ದನು. ಒಮ್ಮೆ ತಪ್ಪಿದ ಎಚ್ಚರವು ತಿರುಗಿ ಬರಲೇ ಇಲ್ಲ.

ಭಗತಸಿಂಗನನ್ನು ಲಾಹೋರಿಗೆ ತಂದ ಸಂಭ್ರಮ.

—(೦)—

ಸ್ಯಾಂಡರ್ಸ್ ಸಾಹೇಬನ ಕೊಲೆಯ ಸಂಬಂಧದಿಂದ ಭಗತಸಿಂಗನನ್ನು ಮಿಯಾನವಾಲಿಯಿಂದ ಲಾಹೋರಿಗೆ ತಂದರು. ಈತನ ಬಂದೋಬಸ್ತಿಗಾಗಿ ಡೆಪ್ಯುಟಿ ಪೋಲೀಸಸಾಹೇಬ, ಮೂವರು ಸಬ್ ಇನ್ಸ್‌ಪೆಕ್ಟರು ಮತ್ತು ಒಂದು ಡಜನ ಕಾನ್ಸ್ಟೇಬಲರಿದ್ದರು. ಇವರ ಗಾಡಿಯು ಲಾಹೋರಿಗೆ ಬಂದಾಗ, ಪೋಲೀಸರು ಪ್ಲಾಟಫಾರ್ಮಿನ ಮೇಲೆ ಹಗ್ಗದ ದಾವಣೆ ಕಟ್ಟಿದರು. ೫೦ ಜನ ಸಿಪಾಯರು ಕೈಯಲ್ಲಿ ರಿವಾಲ್ವರ ಹಿಡಕೊಂಡು ಭಗತಸಿಂಗನ ಸುತ್ತಲು ಕಾವಲುಗಾರರಾಗಿದ್ದರು. ಇದೇ ಬಂದೋಬಸ್ತಿನಲ್ಲಿ ಕೈದಿಗಳನ್ನು ಕೂಡಿಸುವ ಬಂಡಿಯಲ್ಲಿ ಇವನನ್ನು ತುರಂಗಕ್ಕೆ ಒಯ್ದರು. ಭಗತಸಿಂಗನು ಅನ್ನ ಬಿಟ್ಟು, ೩೫ ದಿವಸಗಳಾದರೂ ಆತನ ಮುಖ ಕಾಂತಿಯು ಎಷ್ಟೂ ಕುಂದಿರುವದಿಲ್ಲ.

ಶ್ರೀವಿದ್ಯಾರಣ್ಯ ಏಜನ್ಸಿ, ಬೆಳಗಾವಿ.

—(೦)—

ಶ್ರೀ ವಿದ್ಯಾರಣ್ಯರ ಪುಣ್ಯ ಸ್ಮರಣೆಗಾಗಿಯೂ, ಕನ್ನಡ ವಾಙ್ಮಯದ ಅಭಿರುಚಿಯನ್ನು ಹುಟ್ಟಿಸಿ ಹರಡಿಸುವದಕ್ಕಾಗಿಯೂ, ಕರ್ನಾಟಕದೊಳಗಿನ ನುರಿತ ಬರಹಗಾರರ ಉತ್ತಮೋತ್ತಮ ಗ್ರಂಥಗಳನ್ನು ತರಿಸಿ, ಪ್ರಸಾರ ಮಾಡಲೋಸುಗ ಮೊನ್ನೆ ತಾ ೫-೭-೩೯- ನೇ ದಿನ [ಶ್ರೀವಿದ್ಯಾರಣ್ಯರ ಪುಣ್ಯತಿಥಿ] ಮಾರುತಿ ಗುಡಿಯಲ್ಲಿ ಸಾಯಂಕಾಲ ೬ ಘಂಟೆಗೆ ದೇ. ಭ. ಬೆಳವಿಯವರ ನೇತೃತ್ವದಲ್ಲಿ ಶ್ರೀವಿದ್ಯಾರಣ್ಯ ಏಜನ್ಸಿ ಎಂಬ ಹೆಸರಿನಿಂದ ಒಂದು ಕನ್ನಡ ಗ್ರಂಥಾಲಯವನ್ನು ಶ್ರೀ ಪೇಟಕರ ರಾಮರಾಯರು ಹೊಂದಿಸಿದ್ದಾರೆ, ಶ್ರೀ ಜೋಶಿ ನಾರಾಯಣರಾಯರೂ, ಡಾ. ಸನಣಾರ, ಗೆಜ್ಜಿ, ಬಳವಂತರಾವ, ದಾತಾರ, ಗೋಕುಲೆ, ಕಟ್ಟಿ, ಮುಂಡಗಿ ವ್ಹಿ. ವ್ಹಿ. ಪಾಟೀಲ ಮುಂತಾದ ಮಹನೀಯರು ಈ ಸಮಾರಂಭಕ್ಕೆ ಬಂದಿದ್ದರೆಂದು ಅಲ್ಲಿಂದ ಬಂದ ಪತ್ರದ ಸಾರಾಂಶವಾಗಿರುತ್ತದೆ.

ವ್ಯಾಯಾಮ ವಿದ್ಯಾಪೀಠದ ವಾರ್ಷಿಕೋತ್ಸವವು

ಪ್ರಕಟನೆ ನಂ. ೧

—(೦)—

ಬಾಗಲಕೋಟೆಯಲ್ಲಿರುವ ಹಿಂದುಸ್ಥಾನೀ ಸೇವಾದಲದ ವ್ಯಾಯಾಮ ವಿದ್ಯಾಪೀಠದ ಪ್ರಾರಂಭೋತ್ಸವವು ಕಳೆದವರ್ಷ ಅಗಸ್ಟ ೧ ನೇ ತಾರೀಖಿನ ದಿವಸ ಆಚರಿಸಲ್ಪಟ್ಟಿತು. ಕಾರಣ ಅದರ ನೆನಪಿಗಾಗಿ ವಿದ್ಯಾಪೀಠದ ಮೊದಲನೇ ವಾರ್ಷಿಕೋತ್ಸವವನ್ನಾದರೂ ಅದೇ ದಿವಸ ಅಂದರೆ ಬರುವ ಅಗಸ್ಟ ೧ ನೇ ತಾರೀಖಿನ ದಿವಸ ಆಚರಿಸಬೇಕೆಂದು ನಿಶ್ಚಯಮಾಡಿರುತ್ತದೆ.

ಅದೇ ದಿವಸ ಲೋಕಮಾನ್ಯ ಬಾಳ ಗಂಗಾಧರ ಟಿಳಕರ ಪುಣ್ಯತಿಥಿಯೂ ಇರುವದರಿಂದ ಲೋಕಮಾನ್ಯರ ಛಾಯಾಚಿತ್ರದ ಅನಾವರಣವನ್ನಾದರೂ ಮಾಡಬೇಕೆಂದು ನಿಶ್ಚಯಿಸುತ್ತದೆ. ಆಬಗ್ಗೆ ಬಾರಡೋಲಿಯ ವೀರರಾದ ಶ್ರೀಯುತ ವಲ್ಲಭಭಾಯಿ ಪಟೇಲ ಮತ್ತು ಶ್ರೀಯುತ ಶ್ರೀನಿವಾಸ ಅಯ್ಯಂಗಾರ ಇವರಿಬ್ಬರನ್ನು ಕೇಳಿಕೊಂಡಿರುತ್ತದೆ. ಅವರಲ್ಲೊಬ್ಬರು ಅನಾವರಣ ಕಾರ್ಯವನ್ನು ಮಾಡಬಹುದೆಂದು ಆಶೆಯಿದೆ.

ವಾರ್ಷಿಕೋತ್ಸವದ ಕಾಲಕ್ಕೆ ಹಿಂದುಸ್ಥಾನೀ ಸೇವಾದಲದ ಕರ್ನಾಟಕ ಶಾಖೆಯ ನಾಲ್ಕನೇ ಸಮ್ಮೇಲನವನ್ನೂ ಸಮಗ್ರ ಕರ್ನಾಟಕದ ವ್ಯಾಯಾಮೋತ್ಸಾಹಿಗಳ ಪರಿಷತ್ತೊಂದನ್ನೂ ಕೂಡಲು ಕರೆಯುತ್ತದೆ.

ಹಿಂದುಸ್ಥಾನೀ ಸೇವಾದಲದ ಸಮ್ಮೇಲನಕ್ಕೆ ಆಂಧ್ರದ ಪ್ರಸಿದ್ಧ ಮುಂದಾಳುಗಳಾದ ಶ್ರೀಯುತ ಜಿ ಹರಿಸರ್ವೋತ್ತಮ ರಾವ ಎಮ್, ಎ; ಎಮ್. ಎಲ್ ಸಿ. [ಇವರಿಗೆ ಕನ್ನಡದಲ್ಲಿ ಪರಿಶ್ರಮವುಂಟು] ಇವರು ಅಧ್ಯಕ್ಷರಾಗಲೊಪ್ಪಿರುವರು. ಸಮ್ಮೇಲನದಲ್ಲಿ ವಿಚಾರಿಸಲ್ಪಡತಕ್ಕ ಮುಖ್ಯ ವಿಷಯಗಳೇನೆಂದರೆ (೧) ಸೇವಾದಲದವರು ಕರ್ನಾಟಕದಲ್ಲಿ ಇಷ್ಟುವರೆಗೆ ಮಾಡಿರುವ ಕಾರ್ಯಗಳ ಗುಣದೋಷ ವಿಮರ್ಶೆ (ಸುಧಾರಿಸುವ ದೃಷ್ಟಿಯಿಂದ) ಮತ್ತು (೨) ಹಿಂದುಸ್ಥಾನದ ಸದ್ಯದ ರಾಜಕೀಯ ಪರಿಸ್ಥಿತಿಯ ಮೇಲಿಂದ ಸಮಗ್ರ ಕರ್ನಾಟಕದ ಸ್ವಯಂ ಸೇವಕರ ಸಲುವಾಗಿ ಒಂದು ಪರಿಣಾಮಕಾರಕ ಕಾರ್ಯಕ್ರಮವನ್ನು ತಯಾರಿಸುವದು

ಅಖಿಲ ಕರ್ನಾಟಕದ ವ್ಯಾಯಾಮೋತ್ಸಾಹಿಗಳ ಪ್ರಥಮ ಪರಿಷತ್ತು- ಇದಕ್ಕೆ ಕರ್ನಾಟಕದ ಪ್ರಸಿದ್ಧ ವ್ಯಾಯಾಮ ಪಟುಗಳಾದ ಬೆಂಗಳೂರಿನ ಶ್ರೀಯುತ ಕೆ ಪಿ. ಅಯ್ಯರವರು ಅಧ್ಯಕ್ಷರಾಗುವರು ಈ ಪರಿಷತ್ತಿನ ಮುಂದೆ ಬರುವ ಮುಖ್ಯ ವಿಷಯವೆಂದರೆ ಅಖಿಲ ಕರ್ನಾಟಕದ ವ್ಯಾಯಾಮ ಶಾಲೆಗಳ ಉಪಯೋಗಕ್ಕಾಗಿ ಒಂದು ವರ್ಗೀಕೃತ ವ್ಯಾಯಾಮ ಶಿಕ್ಷಣಪದ್ಧತಿಯೊಂದನ್ನು ತಯಾರಿಸುವದು.

ಈ ಕಾಲಕ್ಕೆ ಕರ್ನಾಟಕದಲ್ಲಿ ರಾಜಕೀಯ ಕೆಲಸಗಳಲ್ಲಿ ತೊಡಗಿರುವ ಎಲ್ಲ ಕೆಲಸಗಾರರೂ ವ್ಯಾಯಾಮ ಪ್ರೇಮಿಗಳೂ ಬಂದು ಮೇಲಿನ ಕಾರ್ಯಗಳನ್ನು ಯಶಸ್ವಿಯಾಗಿ ಮಾಡುವದಕ್ಕಾಗಿ ತಮ್ಮ ಅನುಭವದ ಮತ್ತು ಜ್ಞಾನದ ಸಂಪೂರ್ಣ ಸಹಕಾರವನ್ನು ಕೊಡಬೇಕೆಂದು ಆಗ್ರಹಪೂರ್ವಕ ವಿನಂತಿ ಇದೆ.

ಹಿಂ ಸೇ ಕ. ಹುಬ್ಬಳ್ಳಿ   ನಾ ಸು. ಹರ್ಡೀಕರ

ಹುಬ್ಬಳ್ಳಿ ೧-೭-೩೯   ಕಾರ್ಯದರ್ಶಿ.

ಧಾರವಾಡ ಅಮೇಚೂರ ಸಂಘಕ್ಕೆ ಶ್ರೀ. ಸಿ. ಕೆ. ವೆಂಕಟರಾಮಯ್ಯನವರ ಆಗಮನ.

—(೦)—

ಅಮೇಚೂರ ಸಂಘದವರ ಬಿನ್ನಹದ ಮೇರೆಗೆ ಬೆಂಗಳೂರಿನ ಶ್ರೀಮಾನ್ ಸಿ ಕೆ ವೆಂಕಟರಾಮಯ್ಯನವರು ಎಮ್ ಎ ಎಲ್. ಎಲ್ ಬಿ. ಅವರು ಮೊನ್ನೆ ರವಿವಾರ ತಾ| ೭-೭-೩೯ನೇ ದಿನ ಸಂಘಕ್ಕೆ ಆಗಮಿಸಿದ್ದರು. ಆ ಸಮಯಕ್ಕೆ ಇಲ್ಲಿನ ಶ್ರೀ ಆಲೂರು ವೆಂಕಟರಾಯರು, ಶ್ರೀ. ಮುದವೀಡು ಕೃಷ್ಣರಾಯರು, ಶ್ರೀ. ಕಮಲಾಪುರ ಶಂಕರರಾಯರು, ಶ್ರೀ. ಹೊಸಕೇರಿ ಅಣ್ಣಾಚಾರ್ಯರು ಮೊದಲಾದ ಮುಖಂಡರೂ, ಇನ್ನೂ ಅನೇಕ ಸದ್ಗೃಹಸ್ಥರೂ, ಅಲ್ಲದೆ ಸಂಗಮದ, ಕನ್ನಡಿಗರ ಕೂಟ, ಶಾಂತೇಶ ವಾಚನಾಲಯಗಳ ಮುಖ್ಯರೂ ದಯಮಾಡಿಸಿದ್ದರು. ರಾತ್ರಿ ೯ ಗಂಟೆಗೆ ಉಪಹಾರವಾದ ಕೂಡಲೇ ಶ್ರೀ. ಆಲೂರ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಶ್ರೀ ವೆಂಕಟರಾಮಯ್ಯನವರು ತಮ್ಮ ಅನುಭವಪೂರ್ಣವೂ ಅಸ್ಖಲಿತವೂ ಆದ ವಾಣಿಯಿಂದ ಸದ್ಯದ ನಾಟಕಗಳ ಸ್ಥಿತಿಯ ವಿಷಯವಾಗಿ ಭಾಷಣ ಮಾಡಿ ಸಂಘದವರಿಗೂ ಅವಶ್ಯವಾದ ಉಪದೇಶ ಮಾಡಿದರು. ಅಧ್ಯಕ್ಷ ಮಹನೀಯರ ಉಪದೇಶಪರ ಭಾಷಣವು ಮುಗಿದೊಡನೆಯೇ, ಸಂಘದವರು ಆರಂಭಿಸಿರುವ ಸಂಗೀತ ವಂದಸ್ಸಣೆಯೆಂಬ ನಾಟಕದಲ್ಲಿಯ ಕೆಲವು ದೃಶ್ಯಗಳನ್ನು ಅಭಿನಯಿಸಿ ತೋರಿಸಿದರು. ತರುವಾಯ ಅಧ್ಯಕ್ಷರಿಗೂ ಮತ್ತು ಶ್ರೀ. ವೆಂಕಟರಾಮಯ್ಯನವರಿಗೂ ಪುಷ್ಪಮಾಲೆಗಳು ಅರ್ಪಿಸಲ್ಪಟ್ಟು, ಅಂದಿನ ಕಾರ್ಯವು ಮುಗಿಸಲ್ಪಟ್ಟಿತು. ಇದರಂತೆಯೇ ಅಂದಿನ ಕಾರ್ಯದಲ್ಲಿ ನಮಗೆ ತನುಮನಗಳಿಂದ ಸಹಾಯಮಾಡಿದ ಶ್ರೀ ಕಟ್ಟಿ ರಾಮರಾಯರ ಉಪಕಾರವನ್ನು ಸ್ಮರಿಸದಿರಲಾರೆವು.

ಇಂಥ ಮಹನೀಯರು ಈ ಸಂಘದವರೆಗೆ ಬಂದು ಉಪದೇಶಾಮೃತವನ್ನಿತ್ತದ್ದಕ್ಕೆ ಅವರ ಉಪಕಾರವನ್ನು ಎಷ್ಟು ಸ್ಮರಿಸಿದರೂ ಕಡಿಮೆಯೇ ಇದೆ.

ಕಾರ್ಯದರ್ಶಿ,

ಅಮೇಚೂರ ಸಂಘ,

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಹೆರೆಯ ಸೆರಗು ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರಭಾವ! ವೈದ್ಯರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಸೌ. ಜಾನಕೀಬಾಯಿ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತ ನೋಡಿ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು.

ನೋಟೀಸು

—(೦)—

ಮ॥ ರಾ॥ ರಾ॥ ಶೇಷೋ ರಾಮಚಂದ್ರ ಸೊರಣಗಿ ಸಾ॥ ಮದಿಹಾಳ ಶಹರ ಧಾರವಾಡ ಇವರಿಗೆ-

ಜಾನಕಿಬಾಯಿ ಭ್ರ. ಕಾರ ರಾಮಾಚಾರ್ಯ ಕವಲಗಿ ಭ್ರಾಂತಿಷ್ಟ ಗಾರ್ಡಿಯನ್ ಕೇಶವಾಚಾರ್ಯ ಬಾಳಾಚಾರ್ಯ ಹೊಸನೂರ ಸಾ॥ ಧಾರವಾಡ ನೋಟೀಸು ಕೊಡುವದೇನಂದರೆ- ನೀವು ಧಾರವಾಡ ಶಹರ ಪೈಕಿ ಮದಿಹಾಳದಲ್ಲಿ ನಮ್ಮ ಮಾಲ್ಕಿ ವಹಿವಾಟಿಯಲ್ಲಿರುವ ಮ್ಯು. ನಂಬರ ೫೪೪೧ ವ ಸಿ. ಸ. ನಂಬರ ೩೪೭ನೇ ಮನಿಯನ್ನು ನಮ್ಮ ಕಡಿಂದಾ ಮೂರು ವರ್ಷದಿಂದಾ ದರತಿಂಗಳಾ ಎರಡು ರೂಪಾಯಿದಂತೆ (೨) ಭಾಡೆ ಕೊಡುವದು ಗೊತ್ತುಮಾಡಿಕೊಂಡು ಭಾಡೇಪತ್ರ ಸಹಾ ಬರಕೊಟ್ಟಿರುತ್ತೀರಿ ಆ ಪ್ರಕಾರ ಮನಿ ಕಬಜಾ ತೆಗೆದುಕೊಂಡು ಸದರಿ ಮನಿಯಲ್ಲಿ ಭಾಡೇದ ನಾತೇದಿಂದಾ ಇರತೀರಿ ಆದರೆ ಸದರ ಮನೆಯ ಭಾಡೇದ ಮೂರು ವರ್ಷದ ಪೈಕಿ ಒಂದು ವರ್ಷದ ಭಾಡೇದ ಇಪ್ಪತ್ತು ನಾಲ್ಕು ರೂಪಾಯಿ ೨೪ ಮಾತ್ರ ಕೊಟ್ಟಿರುತ್ತೀರಿ ಬಾಕಿ ಉಳಿದ ಎರಡು ವರ್ಷದ ಭಾಡೆ ನಾಲ್ವತ್ತೆಂಟು ರೂಪಾಯಿ ೪೮ ಮಾತ್ರ ಕೊಡತಕ್ಕದ್ದು ಇವತ್ತಿಗೂ ಕೊಟ್ಟಿರುವದಿಲ್ಲಾ ಹತ್ತಾರು ಸಾರೆ ಬಾಕಿ ಉಳಿದ ಭಾಡೇದ ರಕಮು ಕೊಡುವದಕ್ಕೆ ಕೇಳಿದರೂ ಇಂದು ನಾಳೆ ಅಂತ ದಿನ ಮ್ಹೇಕ ಮಾಡಿಕೋತಾ ಬರುತ್ತೀರಿ ಕಾರಣಾ ಈ ನೋಟೀಸು ಕೊಡುವ ಭಾಗಬಿತ್ತು ನಿಮ್ಮ ಭಾಡೇದ ಮುದ್ದತ ತೀರಿದ್ದು ನಿಮಗೆ ಸದರಿ ಮನಿಯನ್ನು ಭಾಡೇದಿಂದಾ ನಿಮಗೆ ಕೊಡುವದು ನಮ್ಮ ಇಚ್ಛಾ ಇಲ್ಲಾ ಸದರಿ ಮನಿಯನ್ನು ದರ ತಿಂಗಳಾ ನಾಲ್ಕು ರೂಪಾಯಿ ೪ ಭಾಡೆ ಬೇಡುತ್ತಾರೆ ನಿಮಗೆ ಮನಿ ಕಬಜಾ ಕೊಡಲಿಕ್ಕೆ ಹೇಳಿದರೆ ಕಬಜಾನೂ ಕೊಡಲಿಲ್ಲಾ ಭಾಡೇದ ಮುದ್ದತ ತೀರಿ ಹೆಚ್ಚಿಗೆ ದಿವ್ಸ ಸದರಿ ಮನಿಯಲ್ಲಿ ಇರುವದರಿಂದಾ ದರ ತಿಂಗಳಾ ನಾಲ್ಕು ರೂಪಾಯಿ ೪ ಪ್ರಕಾರ ಸದರಿ ಮನೆ ನಮ್ಮ ಕಬಜಾ ಆಗುವವರೆಗೆ ನಮಗೆ ಭಾಡೇ ಕೊಡಬೇಕು ಸದರ ಮನೆಯ ಸಂಬಂಧಿ ಮ್ಯುನಿಸಿಪಾಲಿಟಿ ಮನೆಯ ಪಟ್ಟಿ ವಗೈರೆ ನೀವು ಕೊಟ್ಟಿದ್ದರೆ ಅದರ ಸಂಬಂಧಿ ಲೆಖ್ಖಾ ನಮಗೆ ಕೊಟ್ಟು ಬಾಕಿ ಬಾಕಿ ರಕಮು ವ ಸದರ ಮನೆಯನ್ನು ತಾರೀಖು ೧೧-೭-೧೯೧೮ನೇ ದಿವ್ಸ ನಮಗೆ ಒಪ್ಪಿಸಿ ನಮ್ಮ ಕಡಿಂದಾ ಪಾವತಿ ತೆಗೆದುಕೊಳ್ಳಬೇಕು ಇದರಂತೆ ನೀವು ಮಾಡದೆ ಇದ್ದರೆ ಕಾಯದೆಪ್ರಕಾರ ಇಲಾಜ ಮಾಡುವದರಲ್ಲಿ ಬರುವದು ಹಿಂದಿನಿಂದಾ ನಿಮ್ಮ ತಕರಾರ ನಡಿಯಲಿಕ್ಕಿಲ್ಲಾ ವಿನಹ ಕಾರಣ ಲುಕಸಾನ ಆಗಬಾರದಂತಾ ತಿಳಿಸಿದೆ ತಿಳಿಯೋದು

ತಾರೀಖು ೧೨-೭-೧೯೧೮

ಸಹಿ- ಜಾನಕಿಬಾಯಿ ಭ್ರ. ಕಾರ ರಾಮಾಚಾರ್ಯ ಕವಲಗಿ ಭ್ರಾಂತಿಷ್ಟ ಗಾರ್ಡಿಯನ್ ಕೇಶವಾಚಾರ್ಯ ಬಾಳಾಚಾರ್ಯ ಹೊಸನೂರ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾ. ವಿಜಯ ಧಾರವಾಡ.

WANTED

Wanted Candidates for Telegraph and Station Master's Classes Full particulars and R ilway Fare Certificate on 2 annas stamp. Apply to:— Imperial Telegraph College Nal Sarak, Delhi.

ಚಂದಾದಾರರಿಗೆ ಸೂಚನೆ

ಜುಲೈ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ಸುಸಮಯ

ವಿ ಕೆ. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ-ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

N. W. 1443

ನಿತ್ಯಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ರವಿವಾರ ತಾರೀಖು ೧೪ ನೇ ಜುಲೈ ೧೯೩೫ (ಸಂಚಿಕೆ ೧೫೭

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೨ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯುತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಂದ್ವರ್ಷದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩॥ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩॥ ರೂ.

ಸೇವ್ಹಿಂಗ್ಸ ಬ್ಯಾಂಕ:— ಒಂದ್ವರ್ಷದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಖಡಾ ಉದಾರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಕುಳಗಳಿಗೆ ಬೇಕಾದ ಸವಲತ್ತುಗಳನ್ನು ಕೊಡುವದರಲ್ಲಿ ಬರುವವು ದರ ಹಾಗೂ ನಿಯಮಗಳ ಪ್ರತಿಗಳೂ ಮೊಕತ್ಯಾರ ಪತ್ರಗಳೂ ಸದರಿ ಬ್ಯಾಂಕದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ ಬಿ. ಜೋಸೆಫ,

ತಾ॥ ೧೭-೬-೩೫ ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಗ್ರೇಸ- ಮಂಗಳವಾರಪೇಟೆ, ಚಿಕವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ತುಸು ಮತ್ತು ಬಹಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿಗೆ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಬಂಡಿವಾಡ

ಮ್ಯಾನೇಜಿಂಗ ಏಜಂಟ

ದಿ ಧಾರವಾಡ ಅರ್ಬನ ಕ್ರೆಡಿಟ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗೆಯು ಎಂಟು ಲಕ್ಷದ ಮೇಲುಂಟು. ಚಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತಿ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೧-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೧೪-೭-೨೯ ನೇ ಇಸ್ವಿ.

ಶ್ರೀ.

ಈ ವಿಜಯಂ ಶ್ರೀಕಷ್ಟ್ರಯು
ಶ್ರೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ತ
ಶ್ರೀ "ವಿಜಯಂ" ಶ್ರೀಕರುಣ ।
ವಾ ವಿಹಿತಂಗಳ ವಿವರಿಸುತಿರ್ಪುದು ಸಾಜಂ ॥೧॥

ಡಾಕ್ಟರ ಸತ್ಯಪಾಲರಿಗೆ ಶಿಕ್ಷೆ ಮತ್ತು ದಂಡ.

ಪಂಜಾಬದ ಸುಪ್ರಸಿದ್ಧ ದೇಶಸೇವಕರಾದ ಡಾಕ್ಟರ ಸತ್ಯಪಾಲರ ಮೇಲಿನ ರಾಜದ್ರೋಹದ ಪ್ರಕರಣದಲ್ಲಿ ಡಾಕ್ಟರಸಾಹೇಬರು ಡಿಫೆನ್ಸ ಕೊಡದೆ ನಾನ-ಕೋ-ಆಪರೇಟರ ಶಿಲ್ಪಕ್ಕೆ ಒಪ್ಪುವಂತೆ ತಮ್ಮದೊಂದು ಜವಾಬನ್ನು ಬರೆದು ಕೋರ್ಟಿನ ಮುಂದೆ ಓದಿತೋರಿಸಿದರು. ಆದ್ದರಿಂದ ಮ್ಯಾಜಿಸ್ಟ್ರೇಟರು ಇವರ ಮುಚ್ಚಳಿಕೆಯನ್ನು ರದ್ದುಮಾಡಿ ಇವರನ್ನು ತುರಂಗಕ್ಕೆ ಕಳಿಸಿದರು. ಆಗ ಕೂಡಿದ ಜನರು ವಂದೇಮಾತರಮ್‌ದ ಜಯಜಯಕಾರ ಮಾಡಿದರು.

ಸರಕಾರದ ಹೇಳಿಕೆ-

ಡಾಕ್ಟರರ ಮೇಲೆ ಸರಕಾರದಿಂದ ಆರೋಪ ಹೊರಿಸಲ್ಪಟ್ಟ ಭಾಷಣದ ಭಾಗವು ಮುಂದೆ ಕೊಟ್ಟಂತಿರುತ್ತದೆ. "ಹಿಂದುಸ್ಥಾನದಲ್ಲಿ ಜಾಗೃತಿಯು ಸಮಯವು ತೀರ ಸನಿಯವಾಗಿದೆ. ಆ ಪ್ರಕಾರ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆಯಬೇಕೆಂಬ ಪರಿಸ್ಥಿತಿಯೇ ಉಂಟಾಗಿರುತ್ತದೆ. ಸರಕಾರದ ಕೂಡ ನಮ್ಮ ಯುದ್ಧವು ಪ್ರಾರಂಭವಾಗಿದೆ. ನಾವು ಈಗಿನ ರಾಜ್ಯಪದ್ಧತಿಯ ನಾಶದಲ್ಲಿ ತಪ್ಪದಂತೆ ಮಾಡುವೆವು. ಅಥವಾ ನಾವಾದರೂ ಸತ್ತು ಹೋಗುವೆವು. ಈ ದೇಶ ನಮ್ಮ ನಿಶ್ಚಯ. ಮುಂದಾಳುಗಳನ್ನು ತುರಂಗದಲ್ಲಿ ಹಾಕಿದರೆ ಸ್ವಾತಂತ್ರ್ಯದ ಚಳವಳಿಯು ನಿಂತುಹೋಗುವದೆಂದು ಸರಕಾರವು ಗರ್ವಪಟ್ಟಿದೆ. ನಾವು ಹಿಂದೆ ನಮ್ಮ ಕೆಡುತ್ತಿರುವ ಇಂಗ್ಲಿಷರನ್ನು ಹೊರಗೆ ಹಾಕುವವು. ಅಥವಾ ಸತ್ತುಹೋಗುವೆವೆಂದು ಸಭಿಕರು ಪ್ರತಿಜ್ಞೆ ಮಾಡಲಿ"

ಈ ಭಾಷಣವಾಗಿ ನಾಲ್ಕು ತಿಂಗಳಾಯಿತು ಹೀಗೆಯೇ ಮಾತಾಡಿದ್ದೇನೆಂದು ಹೇಳಲಿಕ್ಕೆ ಬರುವದಿಲ್ಲ. ಆದರೂ ನನ್ನ ಜವಾಬು ಮುಂದೆ ಕೊಟ್ಟಂತಿರುತ್ತದೆಂದು ನುಡಿದು, ಡಾಕ್ಟರರು ಅದನ್ನು ಓದಿದರು:-

ಈಗಿನ ರಾಜ್ಯಪದ್ಧತಿಯು ತೀರ ಅಸಂತೋಷಕಾರಕವಾಗಿರುತ್ತದೆ. ಅದರ ಬದಲಾಗಿ ಪತ್ಯೇಕವಾದ ಪದ್ಧತಿ ಇರಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದಂತೆ ತೋರುತ್ತದೆ. ಹಿಂದುಸ್ಥಾನದಲ್ಲಿ ಹಿಂದೀ ಜನರೇ ರಾಜ್ಯವಾಡಬೇಕು; ಅದಲ್ಲಿ ಪರಕೀಯರಿಕ್ಕೆ ಇರಬಾರದೆಂದು ಅದರ ಅರ್ಥವಾಗುತ್ತದೆ. ನನ್ನಂತೆಯೇ ಪ್ರತಿಯೊಬ್ಬ ಹಿಂದುವಿನ ಭಾವನೆ ಇರುವದು; ಇದರ ವಿರುದ್ಧ ಭಾವನೆಯುಳ್ಳಂಥವನೊಬ್ಬನೂ ಇರಲಾರನು. ಹೆಂಗೆ ಹೀಗೆ ಮಾತಾಡದವರ ಮನಸ್ಸಿನಲ್ಲಿ ಕೂಡ ಒಳಗೆ ಹೀಗೆಯೇ ಇರುವದು. ನಾನೊಬ್ಬ ರಾಷ್ಟ್ರಸೇವಕನಾಗಿರುವದರಿಂದ ಮೇಲಿನ ಅಪೇಕ್ಷೆಯನ್ನು ಮರೆಮಾಚ್ಚಲ್ಲದೆ ಹೇಳುವದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. ಮೇಲಿನ ಇಚ್ಛೆ ಅಥವಾ ಭಾವನೆಗಿಂತ ನಾನು ಹೆಚ್ಚಿಗೆ ಭಾಷಣ ಮಾಡಿಲ್ಲ. ನನ್ನ ಭಾಷಣವು ಅಪರಾಧವೆನಿಸಿದರೆ- ಇಡೀ ಹಿಂದುಸ್ಥಾನವು ಅಪರಾಧ ಮಾಡಿದಂತಾಗುತ್ತದೆ. ಸ್ವದೇಶವನ್ನು ಪ್ರೀತಿಸುವಂಥವರಿಗೆ ಶಿಕ್ಷೆ ಮಾಡಬೇಕೆಂಬ ಕಾಯದೆಯು ಹೇಳುತ್ತಿದ್ದರೆ- ನಾನ ಶಿಕ್ಷೆ ಅನುಭವಿಸಲು ಸಿದ್ಧನಿದ್ದೇನೆ. ಮತ್ತು ಶಿಕ್ಷೆ ಅನುಭವಿಸಲು ಅಭಿಮಾನ ಪಡುತ್ತೇನೆ. ದೇವರು, ಸದಸದ್ವಿವೇಕಬುದ್ಧಿ ಮತ್ತು ರಾಷ್ಟ್ರವು ನನ್ನನ್ನು ನಿರ್ದೋಷಿಯಾಗಿಯೇ ತಿಳಿಯುವದು. ಪರಕೀಯ ಸರಕಾರವು ನನಗೆ ಬೇಕಾದಂಥ ಬೇಕಾದಷ್ಟು ಶಿಕ್ಷೆ ಕೊಡಲಿ.

ಮ್ಯಾಜಿಸ್ಟ್ರೇಟರು ಡಾಕ್ಟರರಿಗೆ ಎರಡು ವರ್ಷ ಸಕ್ತ ಕೈದು ಮತ್ತು ಐನೂರು ರೂಪಾಯಿ ದಂಡ ವಿಧಿಸಿದರು. ಇವರನ್ನು ತುರಂಗಕ್ಕೆ ಕರಕೊಂಡು ಹೋಗುವಾಗ ನಾಗರಿಕರು ಇವರನ್ನು ಹೂಮಾಲೆಗಳಿಂದ ಪೂಜಿಸಿ, ವಂದೇಮಾತರಮ್‌ದ ಜಯಘೋಷದಿಂದ ವಂದಿಸಿದರು.

ಭೋಜನದಲ್ಲಿ ೩೦ ಬ್ರಾಹ್ಮಣರ ಮರಣ

—(೦)—

ಪಂಜಾಬ ಇಲಾಖೆಗೆ ಸೇರಿದ ಹೋಶಿಯಾಪೂರ ಜಿಲ್ಲೆಯಲ್ಲಿರುವ ಒಟ್ಟೆಂಬ ಗ್ರಾಮದಲ್ಲಿ ಮದುವೆಯ ನಿಮಿತ್ತದಿಂದ ಬ್ರಾಹ್ಮಣ ಭೋಜನವಾಯಿತು. ಊಟದಲ್ಲಿ ಯಾವದೊಂದು ವಿಷಪದಾರ್ಥ ಕೂಡಿತೋ ಅಥವಾ ಮಾರಿಕೋಪವಾಯಿತೋ ತಿಳಿಯುವದಿಲ್ಲ. ಉಂಡವರು ವಾಂತಿ ಭ್ರಾಂತಿಗೆ ಪ್ರಾರಂಭಮಾಡಿ ಒಟ್ಟರ ಮೂವತ್ತುಮಂದಿ ಬ್ರಾಹ್ಮಣರು ಸತ್ತು ಬೀಳಹತ್ತಿದರು. ಒಟ್ಟು ಮೂವತ್ತು ಜನರು ಅಸುವು ನೀಗಿದರೆಂಬ ಹೃದಯದ್ರಾವಕ ವರ್ತಮಾನ ಬಂದಿರುತ್ತದೆ.

ಸ್ಯಾಂಡರ್ಸ್ ಸಾಹೇಬನ ಕೊಲೆಯ ವಿಚಾರಣೆ

—(೦)—

ಆರೋಪಿಗಳ ಮೇಲಿನ
ಆರೋಪಗಳು

—(೦)—

ಈ ಕೊಲೆಯ ವಿಚಾರಣೆಯಲ್ಲಿ ೧೬ ಜನ ಆರೋಪಿಗಳು ಈಗ ಕೋರ್ಟಿನಲ್ಲಿ ಹಾಜರಿರುವರು ಒಂಬತ್ತು ಜನರು ಸಿಕ್ಕಿರುವದಿಲ್ಲ. ವಿಚಾರಣೆಯು ತುರಂಗದಲ್ಲಿ ನಡೆದಿದೆ. ೨೦೦ ಪೋಲೀಸರ ಕಾವಲಿರುವದು. ಆರೋಪಿಗಳು ಒಂದರ್ಧ ತಾಸು ತುರಂಗದ ಬಾಗಿಲಲ್ಲಿ ನೆರೆದ ಜನರು ರಾಜ್ಯಕ್ರಾಂತಿಯ ಜಯಜಯಕಾರವಾಗಲೆಂದೂ ಅದು ದೀರ್ಘಾಯುಷಿಯಾಗಲೆಂದೂ ಕೂಗೆಬ್ಬಿಸಿದರು. ಇವು ಮೇಲಿನ ಆರೋಪಗಳು-

೧ ಹಿಂದುಸ್ಥಾನದಲ್ಲಿರುವ ಬ್ರಿಟೀಶ ಸಾಮ್ರಾಜ್ಯದ ಬುಡವೇ ಕಿತ್ತು ಮಾಡುವದು; ಅದಕ್ಕಾಗಿ ಮದ್ದು ಗುಂಡಿನ ಸಂಗ್ರಹಮಾಡುವದು; ಗುಪ್ತ ಸಂಘ ಸ್ಥಾಪಿಸುವದು ಹಸ್ತಪತ್ರಿಕೆಗಳನ್ನು ಹಂಚುವದು, ಮನುಷ್ಯ ಬಲ ಸಂಪಾದಿಸುವದು.

೨ ಹಿಂದುಸ್ಥಾನದಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆ ಸ್ಥಾಪಿಸುವದು ಮತ್ತು ಪ್ರಜಾಸತ್ತಾತ್ಮಕ ಸೈನ್ಯ ಕೂಡಿಸುವದು ಇವುಗಳ ಸಿದ್ಧತೆಗಾಗಿ ಮಾಡಿದ ಉಪಾಯ

ಬ್ಯಾಂಕು ಮತ್ತು ಖಜಾನೆಗಳ ಮೇಲೆ ದರೋಡೆಹಾಕಿ, ದ್ರವ್ಯ ಸಂಪಾದನೆ ಮಾಡುವದು ಕೊಲೆಮಾಡಿ, ಸರಕಾರವನ್ನು ಹೆದರಿಸುವದಕ್ಕೆ ಬಾಂಬು ಮುಂತಾದವುಗಳ ಗೆಸೆಯಿಂದ ಜ್ವಾಲಾಗ್ರಾಹಿ ದ್ರವ್ಯಗಳನ್ನು ಕೂಡ ಹಾಕುವದು. ಸರಕಾರದ ರಾಜ್ಯಕಾರಭಾರಕ್ಕೆ ಸಹಾಯ ಮಾಡುವಂಥ ಮತ್ತು ಅಡ್ಡಬರುವಂಥ ಜನರ ಕೊಲೆಮಾಡುವದು ಬಾಂಬಿನಿಂದ ಉಗಿಬಂಡಿಗಳನ್ನು ಹಾರಿಸುವದು ತುರಂಗದಲ್ಲಿ ಶಿಕ್ಷೆ ಅನುಭವಿಸುತ್ತಿರುವಂಥವರನ್ನು ಬಂಧಮುಕ್ತ ಮಾಡುವದು. ತಮ್ಮ ಗುಪ್ತ ಸಂಘದಲ್ಲಿ ಸೇರುವಂತೆ ತರುಣರ ಮನವೊಲಿಸುವದು ಹಿಂದುಸ್ಥಾನದಲ್ಲಿ ಕ್ರಾಂತಿಯಾಗಬೇಕೆಂದು ಪರದೇಶದಲ್ಲಿ ಆಸಕ್ತಿಯುಳ್ಳಂಥವರಿಂದ ದ್ರವ್ಯಸಂಗ್ರಹ ಮಾಡುವದು.

ಶಿಕ್ಷಣಾಭಿವೃದ್ಧಿ

ಮುಂಬಯಿ ಇಲಾಖೆಯಲ್ಲಿ ೧೯೨೭-೨೮ ಸಾಲಿನ ಔದ್ಯೋಗಿಕ ಶಿಕ್ಷಣ ಖಾತೆಯ ೧೯೨೮ ನೇ ಸಾಲಿನ ರಿಪೋರ್ಟಿನಲ್ಲಿ ಹಾಯಸ್ಕೂಲು ಮತ್ತು ವಿದ್ಯಾರ್ಥಿಸಂಖ್ಯೆ

೬೮] ಮತ್ತು ೧೫೮೫೫ ಪ್ರಾಥಮಿಕ ಶಾಲೆಗಳು ಇರುತ್ತವೆ. ಇವುಗಳಲ್ಲಿ ಕಲಿಯುವಂಥ ವಿದ್ಯಾರ್ಥಿಗಳ ಸಂಖ್ಯೆಯು ೫ ಲಕ್ಷ ವುಂಟು.

ಧಾರವಾಡ ಕನ್ನಡಿಗರ ಕೂಟದ

ಖಾದೀ ಶಾಖೆ.

ಗುರಿ: ಅಖಿಲ ಕರ್ನಾಟಕದಲ್ಲಿ ಖಾದಿಯು-ಅದರಲ್ಲಿಯೂ ಮುಖ್ಯವಾಗಿ ಕರ್ನಾಟಕದ ಖಾದಿಯ ಪ್ರಚಾರಮಾಡುವುದು.

ಸಾಧನಗಳು:-

೧ ಖಾದಿಯ ವಿಷಯದಲ್ಲಿ ಮಹಾತ್ಮರ ಸಂದೇಶವನ್ನು ಮೇಲಿಂದ ಮೇಲೆ ತಿಳಿಸಿಹೇಳುವುದು.

೨ ಖಾದೀ ವಿಷಯಕ ಸಾಹಿತ್ಯವನ್ನು ಹೆಚ್ಚಾಗಿ ಪ್ರಸಾರಗೊಳಿಸುವುದು; ಆಗಿದ್ದ ಖಾದೀ ಸಾಹಿತ್ಯಕ್ಕೆ ಉತ್ತೇಜನ ಕೊಡುವುದು

೩ ಮ್ಯಾಜಿಕ್ ಲ್ಯಾಂಟರ್ನದ ಸಹಾಯದಿಂದ ಹಳ್ಳಿಗಳಲ್ಲಿ ಜನರಿಗೆ ಖಾದಿಯ ಉತ್ಪತ್ತಿಯನ್ನೂ ಅವಶ್ಯತೆಯನ್ನೂ ತಿಳಿಸುವುದು.

೪ ಆಗಾಗ್ಗೆ ಖಾದಿಯ ನಿಸ್ಸೀಮ-ಭಕ್ತರಾದ ಮಹಾಜನರಿಂದ ವ್ಯಾಖ್ಯಾನ ಪ್ರವಚನಗಳನ್ನು ಮಾಡಿಸುವುದು.

೫ ಖಾದಿಯ ಮಹತ್ವವು ಸುಲಭವಾಗಿ ತಿಳಿಯುವಂತೆ ಅನೇಕ ಚಿಕ್ಕಪುಟ್ಟ ಪುಸ್ತಕ ಹಸ್ತಪತ್ರಿಕೆಗಳನ್ನು ಹಂಚುವುದು.

೬ ಮನೆಮನೆಗೆ ಹೋಗಿ ಖಾದಿಯನ್ನು ತೋರಿಸಿ ಆದರವನ್ನು ಹುಟ್ಟಿಸುವುದು

೭ ಜಾತ್ರೆ ಪರಿಷತ್ತು ಮೊದಲಾದ ಮಹಾಜನರು ನೆರೆಯುವ ಸಂಧಿಯನ್ನು ಸಾಧಿಸಿ ಖಾದೀ ಪ್ರದರ್ಶನವನ್ನು ಏರ್ಪಡಿಸುವುದು.

೮ ವರುಷಕ್ಕೊಮ್ಮೆಯಾಗಲಿ ಎರಡು ವರುಷಕ್ಕೊಮ್ಮೆಯಾಗಲಿ ಎಲ್ಲ ಕನ್ನಡ ನಾಡಿನ ಖಾದೀ ಪ್ರೇಮಿಗಳ ಸಮ್ಮೇಲನವನ್ನು ಕೂಡಿಸುವುದು; ಅಥವಾ ಕೂಡಿಸುವವರಿಗೆ ಶಕ್ತ್ಯನುಸಾರವಾಗಿ ಸಹಾಯ ಮಾಡುವುದು.

೯ ಖಾದಿಯ ಬಗ್ಗೆ ಪ್ರೇಮಾದರಗಳನ್ನು ಹುಟ್ಟಿಸುವಂತಹ ಮೇಲಾದ ಲೇಖ ನಿಬಂಧಗಳನ್ನು ಬರೆಯುವವರಿಗೆ ಪ್ರೋತ್ಸಾಹ ಕೊಡುವುದು

೧೦ ಉತ್ಸವ ಪ್ರಸಂಗಗಳಲ್ಲಿ ಪೂರ್ಣ ಖಾದಿಯನ್ನೇ ಧರಿಸುವಂಥ ಚಿಕ್ಕಮಕ್ಕಳ ಮೇಳಗಳನ್ನು ಸಿದ್ಧಪಡಿಸಲು ಪ್ರೋತ್ಸಾಹನ ಕೊಡುವುದು

೧೧ ಸಂಭಾಷಣ ಪ್ರಹಸನಾದಿ ರೂಪದಿಂದ ಜನತೆಯಲ್ಲಿ ಖಾದಿಯ ವಿಷಯವಾಗಿ ಆದರಾಭಿಮಾನವುಂಟಾಗುವಂತೆ ಯುಕ್ತಿಸುವುದು.

೧೨ ಸಂಪೂರ್ಣ ಖಾದೀ ಧಾರಕರ ಪಟ್ಟಿಯನ್ನು ಸಿದ್ಧಪಡಿಸುವುದು.

ಸದಸ್ಯರು:-

೧ ತಮ್ಮ ಕೈನೂಲಿನ ಖಾದಿಯನ್ನು ಧರಿಸತಕ್ಕವರು.

೨ ಸರ್ವದಾ ಸಂಪೂರ್ಣ ಖಾದಿಯನ್ನು ಧರಿಸತಕ್ಕವರು.

೩ ವರುಷಕ್ಕೆ ಏನಿಲ್ಲೆಂದರೂ ೨೫ ರೂಪಾಯಿಯ ಖಾದಿಯನ್ನು ಕೊಳ್ಳತಕ್ಕವರು.

ಒಮ್ಮೆ ಎರಡಾಣೆ ಪ್ರವೇಶಧನದ ಹೊರತು ವರ್ಗಣಿ ಮೊದಲಾದುದೇನೂ ಇಲ್ಲ. ಕನ್ನಡನಾಡಿನ ಖಾದೀ ಭಕ್ತರು ನಮ್ಮೀ ಕಾರ್ಯದಲ್ಲಿ ಪೂರ್ಣ ನೆರವಾಗಬೇಕಾಗಿ ಬೇಡಿಕೆ.

ಬಾ ಎ ಬಿ ೪ ತಮ್ಮ ವಿಧೇಯ
ಆಷಾಢ ಶು. ೭ ಖಾದೀ ಶಾಖೆಯ ಕಾರ್ಯದರ್ಶಿ.
ಕ. ಕೂ. ಧಾ.

ಆನೆಗುಂದಿಯ ದಿವಾನಗಿರಿಯಾದರೂ ಹಗೋಲಿಗೆ ಚೀಟಿ ಬೇಕೇ?

—(o)—

ಆನೆಗುಂದಿಯ ದಿವಾನಗಿರಿಯಾದರೂ ಹರಗೋಲಿಗೆ ಚೀಟಿ ಬೇಕೇ! ಎಂಬೊಂದು ಗಾದೆಯುಂಟಷ್ಟೆ; ಅದರ ಪ್ರತ್ಯಕ್ಷ ಭೋಗವು ಮುಖ್ಯ ಪ್ರಧಾನರಾದ ಮಿ. ಮ್ಯಾಕಡೋನಾಲ್ಡ ಸಾಹೇಬರಿಗೇ ಬಂದೊದಗಿದೆ. ಸಾಹೇಬರು ತಮ್ಮ ಪಕ್ಷದ ಒಂದು ಸಭೆಯ ದೆಸೆಯಿಂದ ಸರಕಾರೀ ವಿಮಾನದಲ್ಲಿ ಕೂತು ಲಂಡನದಿಂದ ಡರಹ್ಯಾಮಕ್ಕೆ ಹೋದರು. ಸಾಹೇಬರು ಸ್ವಂತ ಕೆಲಸಕ್ಕಾಗಿ ಸರಕಾರೀ ವಿಮಾನವನ್ನು ಉಪಯೋಗಿಸಬಹುದೇ ಎಂಬ ಪ್ರಶ್ನವನ್ನು ಕಾನ್ಸರವೇಟಿವ್ಹರು ಪಾರ್ಲಮೆಂಟದಲ್ಲಿ ತೆಗೆದರು. ಕೆಲಸದ ಸೋಯಿಗಾಗಿ ಮಂತ್ರಿಗಳು ಬೇಗನೆ ಲಂಡನಕ್ಕೆ ತಿರುಗಿ ಬರಬೇಕೆಂದು ವಿಮಾನದ ಉಪಯೋಗ ಮಾಡಿತೆಂದು ಉತ್ತರ ಕೊಟ್ಟರು. ಇದರಿಂದ ಕಾನ್ಸರವೇಟಿವ್ಹರ ಸಮಾಧಾನವಾಗಿಲ್ಲ. ಪುನಃ ಇದನ್ನು ಎತ್ತಿ ಚರ್ಚಿಸತಕ್ಕವರಿದ್ದಾರೆ

ಅನಿಬಿಝಾಂಟಮ್ಮನವರ ರಾಜೀಯ ಸಂಧಾನ.

—(o)—

ಪ್ರಕೃತ ಲಂಡನದಲ್ಲಿರುವ ಅನಿಬಿಝಾಂಟಮ್ಮನವರು ಮಂತ್ರಿ ನೆಹರೂ ಕಮಿಟಿಯವರ ನಡುವೆ ಒಡಂಬಡಿಕೆ ಮಾಡಿಸಬೇಕೆಂಬ ಆಲೋಚನೆಯಲ್ಲಿದ್ದಾರೆ. ನೆಹರೂ ರಿಪೋರ್ಟಂತೂ ಸಿದ್ಧವಿದೆ. ಸಾಯಮನ್ನ ರಿಪೋರ್ಟ ಈವರೆಗೆ ಸಿದ್ಧವಾಗುವದು. ಇವೆರಡನ್ನೂ ಬೇರೊಂದು ಕಮಿಟಿಗೆ ಒಪ್ಪಿಸಬೇಕು. ಅದರಲ್ಲಿ ವಿಲಾಯತಿ ಮತ್ತು ಹಿಂದುಸ್ಥಾನದ ಪ್ರತಿನಿಧಿಗಳಿರಬೇಕು. ಈ ಕಮಿಟಿಯ ರಿಪೋರ್ಟನ್ನು ಉಭಯತರು ಒಪ್ಪಬೇಕು. ಇದಕ್ಕೆ ನೆಹರೂ ಕಮಿಟಿಯವರು ಒಪ್ಪಿಕೊಳ್ಳಲಾರರೆಂದು ತಿಳಿಯುತ್ತಿನೆಂದು ಅಮ್ಮನವರು ಅಭಿಪ್ರಾಯಪಟ್ಟಿರುತ್ತಾರೆ.

ಹಕ್ಕಿ ಹಾರುತಿದೆ ನೋಡಿದಿರಾ?

ಇರುಳಿರುಳಳಿದು ದಿನದಿನ ಬೆಳಗೆ |
ಸುತ್ತು ಮುತ್ತಲು ಮೇಲಕೆ ಕೆಳಗೆ ||
ಗಾವುದ ಗಾವುದ ಗಾವುದ ಮುಂದೆ |
ಎವೆಕೆರದಿಕ್ಕುವ ಹೊತ್ತಿನ ಒಳಗೆ ||೧||
ಹಕ್ಕಿ ಹಾರುತಿದೆ ನೋಡಿದಿರಾ?

ಕರಿನರೆ ಬಣ್ಣದ ಪುಚ್ಛಗಳುಂಟು
ಬಿಳಿಹೊಳೆ ಬಣ್ಣದ ಗರಿಗಳುಂಟು
ಕೆಂಪಿನ ಹೊಂಪಿನ ಬಣ್ಣಬಣ್ಣಗಳ |
ರೆಕ್ಕೆಗಳೆರಡೂ ಪಕ್ಕದಲ್ಲುಂಟು ||೨||
ಹಕ್ಕಿ ಹಾರುತಿದೆ ನೋಡಿದಿರಾ

ನೀಲ ಮೇಘ ಮಂಡಲ ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣ ||
ಚಿಕ್ಕೆಯ ಮಾಲೆಯ ಸಿಕ್ಕಿಸಿಕೊಂಡು
ಸೂರ್ಯ ಚಂದ್ರರು ಮಾಡಿದೆ ಕಣ್ಣು ||೩||
ಹಕ್ಕಿ ಹಾರುತಿದೆ ನೋಡಿದಿರಾ?

ರಾಜ್ಯದ ಸಾಮ್ರಾಜ್ಯದ ಕೆಡಬಿಕ್ಕಿ
ಮಂಡಲಗಿಂಡಲಗಳ ಗಡಮುಕ್ಕಿ
ಕೆಳಿಸಿ ಮುಳುಗಿಸಿ ಖಂಡ ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ ||೪||
ಹಕ್ಕಿ ಹಾರುತಿದೆ ನೋಡಿದಿರಾ?

ಯುಗ ಯುಗಗಳ ಹಣೆ ಬರಹಗಳ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲಿನ ಹಸು ಮಕ್ಕಳ ಹರಸಿ ||೫||
ಹಕ್ಕಿ ಹಾರುತಿದೆ ನೋಡಿದಿರಾ?

ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳನೂರಿನ ನೀರನು ಹೀರಿ
ಆಚಲು ಹಾರಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ ||೬||
ಹಕ್ಕಿ ಹಾರುತಿದೆ ನೋಡಿದಿರಾ

ಮುಟ್ಟಿದೆ ದಿಙ್ಮಂಡಲಗಳ ಅಂಚ
ಆಚೆಗೆ ಚಾಚಿದೆ ಚುಂಚ
ಬ್ರಹ್ಮಾಂಡಗಳನ್ನು ಒಡೆಯಲು ಎಂದೋ!
ಒಲ್ಲರು ಯಾರಾ ಹಾಕಿದ ಹೊಂಚ ||೭||
ಹಕ್ಕಿ ಹಾರುತಿದೆ ನೋಡಿದಿರಾ?

ಬೇಂದ್ರೆ ದತ್ತಾತ್ರೆಯರಾಯರು.
ಬಿ ಎ. ಧಾರವಾಡ

ನ ಟೀಕ ಬಂದು ತೊಲಿ ... ರೂಪಾಯಿ ಕೊಟ್ಟು ... ರೂಪಾಯಿ ಈ ಪ್ರಕಾರ ಇರುವ ಸಾಮಾನುಗಳನ್ನು ... ಸಕೊಂಡು ಉಟ್ಟ ಸೀರಿ ದರಿಸಿಲೇ ಹೊಡೆದು ಹೊರಗೆ ಹಾಕಿದಿ ಆದರೆ ಈಗ ಈ ನೋಟೀಸಿನಿಂದ ನಿನಗೆ ತಿಳಿಸುವದೇನಂದರೆ ನೀನು ಹೊರಗೆ ಹಾಕಿದನಂತರ ನಿರಾಶ್ರಿತಳಾಗಿ ಗರ್ಭಿಣಿ ಇದ್ದ ನಾನು ಏನೊಂದು ಉಪಾಯ ಕಾಣದೇ ಮುಗಳೀ ಗ್ರಾಮದಲ್ಲಿ ಸಾಲಾ ಮಾಡಿ ಹೊಟ್ಟೆ ತುಂಬಿಸಿಕೊಂಡಿದ್ದೇನೆ ಮತ್ತು ಹಡದಾಗ್ಗೆ ನನ್ನ ಬಾಣಂತೀ ತನದ ಕೆಲಸಕ್ಕೆ ಹತ್ತಿದ ಖರ್ಚು ೫೦ ರೂಪಾಯಿ ಸಾಲಾ ಮಾಡಿದ್ದೇನೆ ಆದರೆ ನೀನು ಈ ನೋಟೀಸು ಮುಟ್ಟಿದ ಎರಡು ವಾರದೊಳಗಾಗಿ ಮೇಲ್ಕಂಡ ದಾಗೀನೆ ಮತ್ತು ರೂಪಾಯಿ ನಗದ ಕೊಡಬೇಕು ಮತ್ತು ಈ ಐವತ್ತು ರೂಪಾಯಿ ದಾಗೀನೆ ತಕ್ಕೊಂಡು ಯೋಗ್ಯವಾದ ಎರಡು ಜಾಮೀನದಾರರನ್ನು ಕರಕೊಂಡು ಬರಬೇಕು ಹಾಗೆ ಮಾಡದೇ ಇದ್ದ ಪಕ್ಷದಲ್ಲಿ ಹಿಂದಿನ ಸಾಲದ ರೂಪಾಯಿ ಮತ್ತು ದಾಗೀನೆ ಇದಲ್ಲದೆ ಮುಂದಿನ ಉಪಜೀವನದ ಖರ್ಚಿನ ಬಗ್ಗೆ ಕೋರ್ಟಿನಲ್ಲಿ ಇಲಾಜ ಮಾಡಲಾದೀತು ಮತ್ತು ಈ ನೋಟೀಸಿನ ಖರ್ಚು ನಿನ್ನ ತಲೀ ಮೇಲೆ ಆದೆ ತಿಳಿಯುವದು ತಾ|| ೨೭-೬-೭೯

ಈ ಎಡಗೈ ಹೆಬ್ಬಟ್ಟಿನ ಗುರ್ತು ಕೊಂಕೆವ್ವಾ ಗಂಡ ಅರ್ಜಪ್ಪಾ ಗದ್ದಿಯವರ ಸಾ|| ಬನ್ನೀಕೊಪ್ಪ ಹಾಲಿವಸ್ತಿ ಮುಗಳಿ ಈಕೀದು ಅದೆ

ಜಾಹೀರ ನೋಟೀಸು

—(೦)—

ವೆಂಕನಗೌಡಾ ರಾಮನಗೌಡಾ ಮೇಟಿಯವರ ಲಂಕಣ್ಣಣದಾರ ರಾಮನಗೌಡಾ ಮೇಟಿಯವರ ಸಾಕೀನ ಹೊಸೂರ ತಾಲೂಕ ಬದಾಮಿ ಇವರಿಗೆ—

ಕೆಳಗೆ ಸಹಿ ಮಾಡಿದವರು ಈ ನೋಟೀಸಿನಿಂದ ನಿಮಗೆ ತಿಳುಹಿಸುವದೇನಂದರೆ— ನಾನು ನಿನ್ನ ಲಗ್ನದ ಹೆಂಡತಿ ಇದ್ದು ಮೊದಲನೇಸಾರೆ ನಾನು ನಿಮ್ಮ ಮನಿಗೆ ನಡಿಯಲಿಕ್ಕೆ ಬಂದಾಗ್ಗೆ ನೀನು ನನ್ನ ಕೂಡ ಚಲೋರೀತಿಯಿಂದ ಬಾಳ್ವೆ ಮಾಡದೆ ನನ್ನನ್ನು ಹೊಡಿದು ಬಡಿದು ನನ್ನ ಮೈಮೇಲಿನ ಇದ್ದ ಯಾವತ್ತು ದಾಗೀನು ಬಿಚ್ಚಿಕೊಂಡು ನನಗೆ ವಿಶೇಷ ತ್ರಾಸುಕೊಟ್ಟದ್ದರಿಂದ ನಾನು ನನ್ನ ತವರುಮನಿಗೆ ಹೋದೆನು ಪುನಃ ನೀನು ಬಂದು ನನ್ನನ್ನು ಕರಕೊಂಡು ಹೋಗಿ ನನ್ನ ಕೂಡ ಬಾಳ್ವೆ ಮಾಡಲಿಲ್ಲಾ ನೀನು ನನ್ನನ್ನು ಕರೆದುಕೊಂಡು ಹೋಗದೇ ಅಜಮಾಸು ಹನ್ನೆರಡು ೧೨ ವರ್ಷವಾಯಿತು ಆಗಿನಿಂದ ನಾನು ನನ್ನ ಹೊಟ್ಟೆಯ ಖರ್ಚಿನದಸಿಂದಾ ಎರಡನೇಯವರಲ್ಲಿ ಆರು ನೂರು (೬೦೦) ರೂಪಾಯಿ ಸಾಲಾಮಾಡಿರುತ್ತೇನೆ ನನಗೆ ಸಾಲಾ ಕೊಟ್ಟವರು ತಾವು ಕೊಟ್ಟ ರೂಪಾಯಿ ಮರತ ಕೊಡಬೇಕೆಂದು ನನಗೆ ವಿಶೇಷ ತ್ರಾಸುಕೊಟ್ಟದ್ದರಿಂದ ನಿಮಗೆ ಈ ನೋಟೀಸು ಕೊಡುವ ಭಾಗಬಿತ್ತು ಈ ನೋಟೀಸು ಮುಟ್ಟಿದ ಎಂಟು(೮) ದಿವಸಗಳೊಳಗಾಗಿ ಮೇಲೆಬರೆದಪ್ರಕಾರ ನಾನು ೬೦೦ ರೂಪಾಯಿ ಸಾಲಾಮಾಡಿದವು ನನಗೆ ತಂದುಕೊಟ್ಟು ನೀವು ನನ್ನನ್ನು ಕರೆದುಕೊಂಡು ಹೋಗಿ ನನ್ನ ಸಂಗಡ ಚಲೋರೀತಿಯಿಂದ ಬಾಳ್ವೆ ಮಾಡಬೇಕು ಸದರ ಮುದ್ದತಿಯೊಳಗಾಗಿ ನೀನು ಸದರ ರೂಪಾಯಿ ಕೊಟ್ಟು ಕರೆದುಕೊಂಡು ಹೋಗದಿದ್ದರೆ ಇದೇ ಸೋಡಪತ್ರ ಯೆಂದು ತಿಳಿದು ನಾನು ನನ್ನ ಪಸಂದೀಪ್ರಕಾರ ನನ್ನ ಮರ್ಜಿಗೆಬಂದವನನ್ನು ಉಡಿಕಿ ಮಾಡಿಕೊಳ್ಳುತ್ತೇನೆ. ಅನಂತರ ನನ್ನ ಮೇಲಿನ ನನ್ನ ಉಡಕೀ ಗಂಡನಮೇಲೆ ನಿನ್ನದು ಯಾವ ತರದ ಹಕ್ಕು ವ ಜವಾಬದಾರಿ ಕಾಯದೆ ಪ್ರಕಾರ ಉಳಿಯುವದಿಲ್ಲಾ ಈ ನೋಟೀಸಿನ ಖರ್ಚು ನಿನ್ನ ತಲೆಮೇಲಿದೆ.

ತಾ|| ೧೩-೭-೧೯೨೯ ಈ ಎಡಗೈ ಹೆಬ್ಬಟ್ಟಿನ ಗುರ್ತು ತಿಮ್ಮವ್ವಾ ಕೋಂ ವೆಂಕನಗೌಡಾ ಮೇಟಿಯವರ

ಸುಸಮಯ

ಎ. ಕೆ. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಬಿಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ಸಹಸ್ರಾರು ಜನ ಅನುಭವ ಪ್ರಮಾಣ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೇವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ವಿಶೇಷ ಸೂಚನೆ:— ಬೇರೆ ಔಷಧ ಬೇಡುವಾಗ, ಯಾವ ವರ್ತಮಾನಪತ್ರದ ಜಾಹೀರಾತು ನೋಡಿದೆ ಈ ಬೇನೆಯನ್ನು ವಿವರಿಸಿ ಬರೆಯಿರಿ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ—ಇಂಗ್ಲಿಷನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾ. ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

ಜುಲೈ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಂಬಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1449

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಸೋಮವಾರ ತಾರೀಖು ೧೫ ನೇ ಜುಲೈ ೧೯೨೮ (ಸಂಚಿಕೆ ೧೫೮

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯುತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪ್ರಕಟಿಯಾಗಿ ತೆರೆಯಲ್ಪಡುವವು.

ಮುದತಿ ಠೇವುಗಳು:— ಒಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩|| ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩|| ರೂ.

ಸೇವ್ಹಿಂಗ್ಸ ಬ್ಯಾಂಕ:— ಒಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಒಡ್ಡಿದರ ೩ ರೂ.

ಸರಕಾರಿ ಹಾಗು ಇತರ ಸಾಲಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸ್ವಾಕ್ಸಿಕೆಯು ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಖಡಾ ಉದಾರಿ ಕೊಡಲ್ಪಡುವವು.

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕ ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಕುಳಗಳಿಗೆ ಹೆಚ್ಚಿನ ಸವಲತುಗಳನ್ನು ಕೊಡುವದರಲ್ಲಿ ಬರುವದು. ದರ ಹಾಗೂ ನಿಯಮಗಳ ಪ್ರತಿಗಳೂ ಫೊರಂ ಪತ್ರಗಳೂ ಸದರಿ ಬ್ರ್ಯಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — ಡಿ. ಡೊನೆಲಿ,

ತಾ|| ೧೭-೨-೨೮ — ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಠಿಕಾಣೆ- ಮಂಗಳವಾರಪೇಟೆ, ಲಾತವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯು ದರದಿಂದ ಖಾಸು ಮತ್ತು ಒಹಳ ಮುದ್ದತಿಯ ಕವಳ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಒಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಒಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಇತರ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ

ಮ್ಯಾನೇಜರ

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯೀಸು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ ಇಟ್ಟುಕೊಳ ಲಾಗುವು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತಿಗೆ ಇಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ-

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೧೫-೭-೨೯ ನೇ ಇಸ್ವಿ.

ಶ್ರೀ.

ಈ ವಿಜಯಂ ಶ್ರೀಶಪ್ರಿಯ
ಶ್ರೀ ವತ್ಸವಾತಿಯ ನಲಿಸಿರೆ ಸುಹೃಜ್ಜನಕಿಗೆಳಂ ॥
ದೀ "ವಿಜಯಂ" ಶ್ರೀಕರುಣ ।
ನಾ ವಿಹಿತಂಗಳ ವಿವರಿಸಿನಲಿಪ್ಪನು ಸಾಧು ॥೧॥

ಮುಂಬಯಿಯಲ್ಲಿ ಹುಡುಗಹುಡುಗರ ಹೊಡದಾಟ.

ದೊಡ್ಡವರ ಜಗಳ ಚಿಕ್ಕವರೊಳಗೂ ಹಬ್ಬಿತು.

—(೦)—

ಮುಂಬಯಿಯಲ್ಲಿ ಕೂಲಿಕಾರ ಮತ್ತು ಬಂಡವಲಗಾರರ ನಡುವೆ ಹುಟ್ಟಿದ ಮನಸ್ತಾಪವು ಒಳಗೂ ಹೊರಗೂ ಭಯಂಕರವಾಗಿದೆ. ಕೂಲಿಕಾರರ ಚಳವಳಿಯ ವಿರುದ್ಧ ಗಿರಣಿಯವರು ತಮ್ಮ ಸೇನೆಯನ್ನೂ ಕಟ್ಟಿದ್ದಾರೆ. ಇವರಿಗೆ ನೀಲೀ ಬಣ್ಣದ ಕೆಲವು ಗುರುತುಗಳ ಅರಿವೆ ಮತ್ತು ಬಿಳಿ ಕೊಟ್ಟಿದ್ದಾರೆ. ಬಹುತೇಕವಾಗಿ ಇವರು ಮುಸಲಮಾನರಿದ್ದಾರೆ. ಈ ಸೈನಿಕರಾದ ಸ್ವಯಂಸೇವಕ ಹಾಗು ಗಿರಣಿಯವರ ಪಕ್ಷಪಾತಿಗಳಾದವರ ಮಕ್ಕಳು ಕೂಡ ನೀಲಿ ಬಣ್ಣದ ಬಿರಡಿಗಳನ್ನು ಹಾಕುವರು. ಗಿರಣಿಯ ಕೂಲಿಕಾರರು ಬಹ್ವಂಶವಾಗಿ ಮರಾಟರಿದ್ದಾರೆ. ಇವರ ಮಕ್ಕಳು ಕೆಂಪು ನಿಶಾನೆ ಹಿಡಿಯುವರು. ಕೆಂಪು ಬಣ್ಣವುಳ್ಳ ಅರಿವೆ ತೊಡುವರು. ಮತ್ತು ಕೂಲಿಕಾರರ ಚಿನ್ಹವಾದ ಕುಡಗೋಲು- ಕೊಡ್ಡಿಯ ಫೀತುಗಳನ್ನು ಹಚ್ಚುವರು. ಈ ತೆರವಾಗಿ ಎರಡು ಬಣಗಳೇ ಆಗಿರುತ್ತವೆ. ಇವೆರಡೂ ಬಣಗಳ ವಿದ್ಯಾರ್ಥಿಗಳ ನಡುವೆ ಹೋದ ಗುರುವಾರದ ದಿವಸ ಸ್ವಪಕ್ಷ ಸಮರ್ಥನೆಯ ಬಗ್ಗೆ ಮೊದಲು ಬಾಯಿಗೆ ಬಾಯಿ ಹತ್ತಿತು. ಅನಂತರ ಕೈಗೆ ಕೈ ಹತ್ತಿ ದೊಡ್ಡ ಹೊಡೆದಾಟವಾಗಿ ಮೂವರು ಭಯಂಕರ ಗಾಯ ಹೊಂದಿದ್ದು ಪೋಲೀಸರು ಇವರನ್ನು ಆಸ್ಪತ್ರಿಗೆ ಕಳಿಸಿದ್ದಾರೆ. ದಂಗೆಯಲ್ಲಿ ಇವಾರು ನೂರು ವಿದ್ಯಾರ್ಥಿಗಳು ಸೇರಿದ್ದರು. ಇವರೆಲ್ಲರು ಪ್ರಾಥಮಿಕ ಶಾಲೆಗಳಲ್ಲಿಯ ೧೫ ವರ್ಷದೊಳಗಿನವರೇ! ದಂಗೆಯಾದನಂತರ ಶಾಲೆಗಳು ಬಂದಾಗಿವೆ, ಸ್ಕೂಲ ಕಮೀಟಿಯವರು ಈ ಬಗ್ಗೆ ವಿಚಾರ ಮಾಡುತ್ತಲಿದ್ದಾರೆ.

ತುರಂಗಕ್ಕೆ ಹೋಗುವಾಗ ಡಾಕ್ಟರ ಸತ್ಯಪಾಲರು ಹೇಳಿದ ಸಂದೇಶವು.

ಇನ್ನು ತುಸು ವಿನಿಟುಗಳ ನಂತರ ನಾನು ತುರಂಗದ ಕಬ್ಬಿಣದ ಕಟಾಂಜನದ ಹಿಂದೆ ಪ್ರತಿಬಂಧಿಸಲ್ಪಡುವೆನು. ಅಲ್ಲಿ ಎಷ್ಟು ದಿವಸ ಇರಬೇಕಾದೀತೆಂದು ನಾನು ಹೇಳಲಾರೆನು, ನಾನು ಈ ಸಾರೆ ಕಾಂಗ್ರೆಸದ ಸ್ವಾಗತ ಕಮೀಟಿಯಲ್ಲಿ ಕೆಲಸ ಮಾಡಲಾರೆನೆಂಬದನ್ನು ಮಾತ್ರ ಹೇಳಬಲ್ಲೆನು. ಕಾಂಗ್ರೆಸದ ಭಾರ ಹೊತ್ತಂಥ ಪ್ರತಿಯೊಬ್ಬ ರಾಷ್ಟ್ರೀಯನ ಜವಾಬದಾರಿಯು ಎಷ್ಟಿರುತ್ತದೆಂಬದನ್ನು ನಾನು ಬಲ್ಲೆನು. ಆದ್ದರಿಂದ ಪ್ರತಿಯೊಂದು ನಿಮಿಷವನ್ನು ಈ ಕಾರ್ಯಕ್ಕೇ ನಾನು ವಹಿಸಿದಂತೆ ಸಂಕಲ್ಪ ಮಾಡಿದ್ದೆನು. ನಾನು ಒಂದು ರೀತಿಯಿಂದ ಆ ಕರ್ತವ್ಯ ಮಾಡಿದಂತೆ ತಿಳಿಯುತ್ತೇನೆ ಈ ಕೆಲಸವು ನನ್ನಿಂದಾಗದಿದ್ದರೆ- ಅದು ನನ್ನ ತಪ್ಪಲ್ಲ. ನನ್ನ ಕರ್ತವ್ಯದಿಂದ ನಾನು ದೂರ ಮಾಡಲ್ಪಟ್ಟಿದ್ದೇನೆ. ಅಥವಾ ಆ ಕೆಲಸವನ್ನು ಕಸಕೊಂಡಿದ್ದಾರೆಂತಲೂ ಹೇಳಬಹುದು. ಆದ್ದರಿಂದ ನಾನು ಈ ಜವಾಬದಾರಿಯಿಂದ ಮುಕ್ತನಾಗಿದ್ದೇನೆ.

ಪಂಜಾಬ ಸರಕಾರವು ಕಾಂಗ್ರೆಸದ ಸ್ವಾಗತ ಕಮೀಟಿಯ ಕೆಲಸದಲ್ಲಿ ಶಕ್ಯವಾದಂಥ ಎಲ್ಲ ತರದ ವಿಘ್ನ ತರಬೇಕೆಂದಿದೆಂಬದನ್ನು ನಾನು ಬಲ್ಲೆನು, ಆದರೂ ಪಂಜಾಬವು ಮನುಷ್ಯತ್ವಕ್ಕೆ ಒಪ್ಪುವಂತೆ ಈ ವಿಘ್ನಗಳಿಗೆ ಸೆಡ್ಡುಗೊಟ್ಟು ತನ್ನ ಕರ್ತವ್ಯ ಮಾಡುವದೆಂದು ಭಾವಿಸುತ್ತೇನೆ. ಇದರಿಂದ ಕಾಂಗ್ರೆಸವು ಅಪೂರ್ವವಾದ ಯಶ ಹೊಂದಿ, ದೇಶವು ಎಷ್ಟು ಮುಂದೆ ಹೋಗಿರುತ್ತದೆಂಬ ಬಗ್ಗೆ ಸರಕಾರ ಕೂಡ ಆಶ್ಚರ್ಯಚಕಿತವಾಗುವಂತಾಗಬೇಕು.

ನನ್ನ ಈ ಪ್ರಕರಣದಲ್ಲಿ ನನಗೆ ಸಹಾಯ ಮಾಡುವಂಥ ಸದ್ಗೃಹಸ್ಥರಿಗೆ ನಾನು ಸಂಪೂರ್ಣ ಕೃತಜ್ಞನಾಗಿದ್ದೇನೆ ಸ್ವದೇಶ ವಿಷಯಕವಾದ ನನ್ನ ಪ್ರೀತಿಯು ತುಸುವಾದರೂ ಕಡಿಮೆಯಾಗಬಾರದೆಂದೂ, ಮತ್ತು ಜಗತ್ತಿನಲ್ಲಿ ದೇಶಸೇವೆಯ ಹೊರತು ಬೇರೊಂದು ಕರ್ತವ್ಯವಿರುವದಿಲ್ಲೆಂದೂ ನಾನು ತಿಳಿಯುತ್ತೇನೆ. ಇದಕ್ಕೆ ಜ್ಯೋತಿ ಬೆಳಗಬೇಕೆಂದೇ ನನ್ನ ಮನದಾಶಯವು.

ಬೆಳಗಾವಿಯಲ್ಲಿ ಶ್ರೀ. ಸೌ॥ ಮೋಡಕಬಾಯಿಯವರ ಅಧ್ಯಕ್ಷತೆಯಲ್ಲಿ ಸ್ತ್ರೀಯರದೊಂದು ಸೇವಾಸಂಘ ಸ್ಥಾಪಿಸಲ್ಪಟ್ಟಿತು. ಶ್ರೀ. ಗುರುಬಾಯಿ ಕರಮರಕರ, ಬನಹಟ್ಟಿ ಮೊದಲಾದ ಮಹಿಳೆಯರು ಇದರ ಮುಖ್ಯ ಪ್ರವರ್ತಕರಾಗಿದ್ದಾರೆ.

ಸ್ವದೇಶೀ ಕಾರವಾರ ಜಿಲ್ಹೆಯು.

—(೦)—

ಕಾರವಾರ ಜಿಲ್ಹೆಯಲ್ಲಿ ಕಲೆಕ್ಟರ, ಜಡ್ಜ, ಪೋಲೀಸ ಸು॥ ಪ॥ ಇವರು ಏತದ್ದೇಶೀಯರೇ ಆಗಿರುವದರಿಂದ, ಕಾರವಾರವು ರಾಷ್ಟ್ರೀಯರ ಕೋರಿಕೆಯ ಪ್ರಕಾರ ಹಿಂದೀ ಸ್ವರಾಜ್ಯವಾಗಿರುತ್ತದೆಂದು ಒಬ್ಬ ಲೇಖಕರು ಅಭಿಮಾನಪಟ್ಟಿರುತ್ತಾರೆ. ಇವರು ಹಿಂದೀ ಆದಮಟ್ಟಿಗೆ ಆ ಜಿಲ್ಹೆಯ ರೈತರ ದುಃಖವಿಮೋಚನೆಯಾಯಿತೆಂದು ಇವರು ತಿಳಿಯುತ್ತಿರುವಂತೆ ಭಾಸವಾಗುತ್ತದೆ. ಇದು ಮಾತ್ರ ಶುದ್ಧ ತಪ್ಪು ಇವರು ಈಗಿನ ರಾಜ್ಯಪದ್ಧತಿಯ ಪ್ರಕಾರ ಹುಕುಮತ ನಡಿಸತಕ್ಕವರೇ ಹೊರತು, ತಮ್ಮ ಇಚ್ಛೆಯಿಂದ ಅದಲುಬದಲುಮಾಡತಕ್ಕಂಥ ಸಮರ್ಥರಲ್ಲ; ಅಂಥ ಸ್ವಾತಂತ್ರ್ಯವುಳ್ಳವರಲ್ಲ. ಮೇಲಾಗಿ ಕಾರವಾರ ಜಿಲ್ಹೆಯ ಮುಖ್ಯ ತಾಪವು ವನಗಾವಲಖಾತೆಯಾಗಿರುತ್ತದೆ ಯಾರು ಅದರ ಮೇಲಧಿಕಾರಿ ಇರುವರು? ಅವರಿಂದ ಅಥವಾ ಸರಕಾರವು ಮಾಡಿದ ವನಗಾವಲದ ಕಾಯದೆಯಿಂದ ರೈತರು ಸುಖಸಾಧನದಲ್ಲಿದ್ದಾರೇನೆಂದು ನೋಡತಕ್ಕದ್ದು. ಊರೂರಿಗೆ ಸಭೆಮಾಡಬೇಕು. ಮುಲಕೀ ಫೌಜದಾರೀ ಮತ್ತು ದಿವಾಣೀ ನ್ಯಾಯಾಧಿಕಾರಿಗಳು ಹಿಂದೀ ಆಗಿರುವದರಿಂದ ನೀವು ಸುಖವಾಗಿದ್ದೀರೇನೆಂದು ರೈತರನ್ನು ಕೇಳಬೇಕು. ಅಂದರೆ ನಿಜ ಸಂಗತಿಯು ಗೊತ್ತಾಗುವದು. ಹೊಳೆಯುವದೆಲ್ಲ ಚಿನ್ನವಾದರೆ- ಬಡವನು ಭಾಗ್ಯವಂತನಾಗಲಿಕ್ಕೆ ಅವಕಾಶವೇ ಉಳಿಯದು.

ವಿಶ್ರಾಮ ಬಾಗ ಮತ್ತು

ವಿವಿಧ ವಸ್ತು ಪ್ರದರ್ಶನ

—(೦)—

ಪುಣೆಯಲ್ಲಿರುವ ವಿಶ್ರಾಮಬಾಗವು ಶ್ರೀಮಂತರ ಕಾಲದಲ್ಲಿ ಜನಸೌಖ್ಯದ ಸ್ಥಳವಾಗಿತ್ತು. ಪೇಶ್ವೆಯು ಅಳಿದನಂತರ ಸರಕಾರದವರು ಇದನ್ನು ಹಾಯಸ್ಕೂಲ ಮಾಡಿದರು. ಹಾಯಸ್ಕೂಲನ್ನು ಬಂದುಮಾಡಿದನಂತರ ಅದು ಯಾವದೊಂದು ನಿಶ್ಚಿತವಾದ ಕೆಲಸಕ್ಕೆ ಉಪಯೋಗಿಸಲ್ಪಟ್ಟಿರುವದಿಲ್ಲ. ಸ್ವದೇಶೀ ಕಲಾ ಕೌಶಲ್ಯಗಳ ಪ್ರದರ್ಶನಾಲಯ ಮಾಡಬೇಕೆಂದು ಶ್ರೀ ಕೇಳಕರ ಮೊದಲಾದವರು ಮನಸು ಮಾಡಿ ಈ ಸ್ಥಾನವನ್ನು ತಮಗೆ ಕೊಡಬೇಕೆಂದು ದಿವಾನ ಪ್ರಧಾನರನ್ನು ಕಂಡು ಕೇಳಲು ಅವರು ಸಹಾನುಭೂತಿಯ ಉತ್ತರ ಕೊಟ್ಟಿದ್ದಾರೆ.

ಬಾಗಲಕೋಟೆಯಲ್ಲಿ ಸೋಲಾಪೂರದ ವಿಷ್ಣುಮಿಲ್ಲಿನವರು ಗಿರಣಿಯನ್ನು ಕಟ್ಟುವ ಆಲೋಚನೆ ಮಾಡಿದ್ದಾರೆ.

ಮಾಧವನ ಚರಿತ್ರಂ

(ದ್ವಿಪದಿ)

ಎದೆಗೆಟ್ಟ ಕಗ್ಗಲ್ಲ ಬೆಟ್ಟಗಳ ಸಾಲು |
ಅದರ ಗರ್ಭದಿ ಹರಿವ ಸ್ವರ್ಣತೀರ್ಥಯಿದು ಪೊನಲು ||೧||
ಹಲವು ದೇವಾಗಾರ ಶಿಲ್ಪಗಳ ಚೆಲುವು |
ನೆಲೆಸಿರುವ ಪನ್ನಿಯಿದು ದೇವವಿಗ್ರಹವು ||೨||
ಫಲರಕ್ತಬಿಂದುಗಳು ಕಟಿಕಲ್ಲಡಿಗಳು |
ಬಲಸಾಹಸಂಗಳಿವು ಹುಕ್ಕಬುಕ್ಕವರು ||೩||
ಎನ್ನೆದೆಯ ಗೂಡೆಯುವು ಕೋಟೆಗೋಡೆಗಳು |
ಕನ್ನರಿವು ದಕ್ಷಿಣದ ಕಾಪಲದ ಆಳು ||೪||
ಅಲ್ಲಿಯೇ ಬೇತಾಳವೊಂದು ಕಿರುಗವಿಯು |
ಅಲ್ಲಿಯೇ ವಿವೇಕ ವಿದ್ಯಾರಣ್ಯಮುನಿಯು ||೫||
ಆತ್ಮತೇಜಸ್ಸು ಕರ್ನಾಟ ವೈಭವವು |
ಈ ಕೆರದೊಳೀಹೃದಯ ವಿದ್ಯಾನಗರವು ||೬||

* * * * *

'ಅಜ್ಞಾತ' ವಾಸವನು ನೀನು ಕೈಕೊಳಲು |
ಅಜ್ಞಾನ ತಮ ನಾಡೊಳೆಲ್ಲ ಪಸರಿಸಲು ||೭||
ಅನ್ಯರಿನಿಬರನೆಲ್ಲ ಮುತ್ತಿಕೊಂಡಿರಲು |
ಬಿನ್ನವರಿಯದೆ ಒಡಿಮುಖರಾಗಿ ಇರಲು ||೮||
ಕರ್ನಾಟಕೇತಿಹಾಸೇಂದು ಮುಚ್ಚಿರಲು |
ಕರ್ನಾಟಕದ ಕೀರ್ತಿಜ್ಯೋತ್ಸ್ನೆ ಮಾಸಿರಲು ||೯||
ಕನ್ನಡಿತಿ ನೊಂದೆಚ್ಚರಿಸಲು ಕನಸಿನೊಳು |
ತನ್ನ ಮಸುಕಾದ ರೂಪನು ತೋರಿಸಿದಳು ||೧೦||
ಮರುಗಿನಿಬರೆಲ್ಲ ವೈಭವಕೃಷ್ಣೆಯಿಂದ |
ಗುರುವನು ಸುತ್ತಿಹರು ದೀನಸಂಧಿಂದ ||೧೧||
ಮುಂಕಿಬಾ, ಗವಿಯೊಳಿರು, ಭುವನೇಶ್ವರಿಯನು ನೆನೆ
ಇವರ್ಗೆಲ್ಲ ಜೀವನವನೀಡು |
ಕರುಣೆಯಿಂದೆನ್ನೆದೆಯ ಹಾಳು ಹಂಪೆಯ ವಿಜ
ಯನಗರವನು ಮುನ್ನಿನೊಲು ಮಾಡು ||೧೨||

-ಮಲ್ಹಾರಿ

ಪುಣೆಯಲ್ಲಿ ಮೋಟಾರಿನವರ ಸಂಪು.

—(೦)—

ಪುಣೆಯಲ್ಲಿ ಬಾಡಿಗೆಯ ಐನೂರು ಮೋಟಾರಗಳುಂಟು. ಇವರೆಲ್ಲರೂ ಪೋಲಿಸರ ಹಿಂಸೆಯ ಬೇಸಿಗೆಯಿಂದ ಸಂಪು ಮಾಡಿದ್ದಾರೆ. ಚಿಕ್ಕ ಪುಟ್ಟ ಅಪರಾಧದ ಬೆಸೆಯಿಂದ ಇವರ ಲಾಯಸೆನ್ಸ ರದ್ದ ಮಾಡುವರು. ದಂಡವಂತೂ ನೂರರ ಕೆಳಗೆ ಇರುವದೇ ಇಲ್ಲ. ಈ ಜುಲುಮೆಯ ಅನ್ಯಾಯವನ್ನು ದೂರ ಮಾಡುವತನಕ ಇವರು ಸಂಪಿನ ಸತ್ಯಾಗ್ರಹ ನಡಿಸುವರು. ಆದರೆ ಕಲೆಕ್ಟರರ ಮಧ್ಯಸ್ಥಿಕೆಯಿಂದ ಸದ್ಯ ಸಂಪು ತಪಶೂಬ ಮಾಡಲ್ಪಟ್ಟಿತೆಂದ ನಿನ್ನೆ ಬಂದ ವರ್ತಮಾನವಾಗಿದೆ.

ಮುಂಬಯಿಯಲ್ಲಿ ಪುನಃ ಗುಂಡು ಹಾರಿದವು.

ಕೂಲಿಕಾರರ ಕೆಂಪು ನಿಶಾನೆಯವರ ಜಾಹೀರ ಸಭೆ ನೇರಬಾರದೆಂದು ಪೋಲೀಸ ಕಮೀಶನರರು ಹುಕುಮು ಮಾಡಿದರು. ಕೂಲಿಕಾರರು ಈ ಹುಕುಮು ಮುರಿದು ಸ್ತ್ರೀಪುರುಷರ ಸಭೆಕೂಡಿಸಿದರು ಪೋಲೀಸರನ್ನು ಇದನ್ನು ಮುರಿಯ ಹೋಗಿ, ಅಧ್ಯಕ್ಷ, ಸೇಕ್ರೇಟರಿ ಮೊದಲಾದ ಮೂವರನ್ನು ದಸ್ತಗಿರ ಮಾಡಿಕೊಂಡು ನಡೆದರು. ಕೂಲಿಕಾರರು ಪೋಲಿಸರ ಮೇಲೆ ಕಲ್ಲಿನ ಮಳೆ ಸುರಿಸಿದರು. ಪೋಲಿಸರು ಗುಂಡು ಹಾಕಿದರು. ಕೂಲಿಕಾರರು ಘಾಯವಾದರು. ಆದರೂ ಇವರು ತಂಡತಂಡವಾಗಿ ಇವರ ಬೆನ್ನಟ್ಟಿದರು. ಪೋಲಿಸರು ಹೆದರಿಕೊಂಡು ದಸ್ತಗಿರಿ ಮಾಡಿದವರನ್ನು ಅಲ್ಲೇ ಬಿಟ್ಟು ಪಲಾಯನ ಹೇಳಿದರು. ಹಿಂದಿನಿಂದ ಪೋಲಿಸ ಪಡೆಯು ಬಂದು ದಂಗೆಯನ್ನು ಶಾಂತ ಮಾಡಿತು.

ರಿವ್ಹಿಜನ ಮತ್ತು
ಲ್ಯಾಂಡ ರೆವ್ಹಿನ್ಯೂದ ವಿರುದ್ಧ ಚಳವಳಿಯು.

—(೦)—

ಬಾರಡೋಲಿಯ ಜಯದಿಂದ ಮಹಾರಾಷ್ಟ್ರದ ನಾಲ್ಕೈದು ತಾಲೂಕಿನವರು ರಿವ್ಹಿಜನ ಮತ್ತು ಸರಕಾರೀ ಹಪ್ತೆಯ ವಿರುದ್ಧ ಸತ್ಯಾಗ್ರಹದ ಚಳವಳಿ ಮಾಡತೊಡಗಿದ್ದಾರೆ ಈ ವಿಷಯವಾಗಿ ಸರದಾರ ಪಟೇಲರ ಸಹಾಯವನ್ನು ಕೋರಿದ್ದು, ಅವರು ಸಂಪೂರ್ಣ ಸಹಾಯಮಾಡಲೊಪ್ಪಿದ್ದಾರೆ ಇದೇ ವಿಷಯವಾಗಿ ಪುಣೆಯಲ್ಲಿ ಕೌನ್ಸಿಲ ಕೂಡಿದಾಗ, ಮೆಂಬರರಿಗೆ ಭೆಟ್ಟಿಯಾಗಿ, ಅವರ ಸಹಾಯ ಮತ್ತು ಸಹಾನುಭೂತಿಯನ್ನು ಕೋರುವರು. ೧೯೩೪ ರ ತರುವಾಯಾ ಅವಂಧ ರಿವ್ಹಿಜನವೆಲ್ಲ ಬದಲಾಗಬೇಕಲ್ಲದೆ, ಈಗಿನ ಹಪ್ತೆಯ ಆಕಾರದ ಅನಿಷ್ಟ ಪದ್ಧತಿಯು ಹೋಗಿ, ಅದರಲ್ಲಿ ಸಂಪೂರ್ಣ ತಿದ್ದುಪಡೆಯಾಗಬೇಕೆಂದು ಶ್ರೀ ಪಟೇಲರ ಮತವಿರುತ್ತದೆ.

ಕಾವೇರಿ ಹೊಳೆಗೆ ಮಹಾಪೂರ.

——(೦)——

ಕೋಚೀನದಂತೆ ಕೊಡಗು ಪ್ರಾಂತದಲ್ಲಿಯೂ ಮೂರು ದಿವಸ ಅತ್ಯಂತ ವೃಷ್ಟಿ ಸುರಿದು, ಕಾವೇರಿ, ಕಪಿಲಾ ಹೊಳೆಗಳಿಗೆ ಅದ್ಭುತ ನೆರೆ ಬಂದಿದೆ. ಆಯಾ ಭಾಗದ ಕಲೆಕ್ಟರ ಮತ್ತು ಬೇರೆ ಅಧಿಕಾರಿಗಳು ಈ ನೆರೆಯಲ್ಲ [illegible] ನ್ನು ಉಳಿಸಿಕೊಳ್ಳುವ ಕೆಲಸದಲ್ಲಿ ತೊಡಗಿದ್ದಾರೆ.

ಶೋಚನೀಯ ಮೃತ್ಯು—

ವಿಜಾಪೂರ ಮ್ಯುನಿಸಿಪಾಲಟಿಯ ಸ್ಕೂಲ ಬೋರ್ಡಿನಲ್ಲಿ ಹಣದ ದುರುಪಯೋಗವಾದ ಬಗ್ಗೆ ಬಂದ ಆರೋಪದ ವರ್ತಮಾನ ಕೇಳಿ, ಹೃದಯ ಕ್ರಿಯೆ ನಿಂತು ಚೇರಮನ್ನರಾಗಿದ್ದ ಮಿ. ಜಾನವೇಕರರು ಸ್ವರ್ಗವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಲಾರ್ಡ ಆಯರ್ವಿನಸಾಹೇಬರ ಸರ್ವಾಧಿಕಾರತ್ವಕ್ಕೆ ಇನ್ನೂ ಎರಡೂವರೆ ವರ್ಷವಿದ್ದರೂ, ಅವರ ಸ್ಥಳದ ನೇಮಣೂಕಿಯ ಹೆಸರುಗಳು ಈಗಾಗಲೇ ಬರಲಿಕ್ಕೆ ಹತ್ತಿವೆ ಸರ ಸಾಯಮನ್ನ ಮತ್ತು ಲಾರ್ಡ ಲಾಯಿಡ ಇವರ ಹೆಸರು ಈಗ ಮುಂದೆ ಬಂದಿವೆ.

ತಮಗೆ ನಾಮೀನೇಶನವು ಬೇಕವೇ ಬೇಡ, ಎಲ್ಲರೂ ಚುನಾಯಿಸಲ್ಪಟ್ಟಂಥ ಮೆಂಬರರೇ ಇರಬೇಕೆಂದು ಭಾವನಗರದ ಮ್ಯುನಿಸಿಪಾಲಿಟಿಯವರು ತಮ್ಮ ದರಬಾರಕ್ಕೆ ತಿಳಿಸಿದ್ದಾರೆ.

ಧಾರವಾಡ—

ಕಾರವಾರದ ಡಿಪುಟಿ ಅಕೌಂಟಂಟರಾದ ಮಿ. ನಾಡಕರ್ಣಿಯವರು ಇಲ್ಲಿ ಪ|| ಅ|| ರಾಗಿ ನೇಮಿಸಲ್ಪಟ್ಟಿರುತ್ತಾರೆ.

ನೋಟೀಸು

—(೦)—

ಮ|| ರಾ| ರಾ| ಅರ್ಜುನಪ್ಪಾ ವೀರಪ್ಪಾ ಗದ್ದಿ ಸಾ|| ಬನ್ನೀಕೊಪ್ಪ ತಾ|| ಶಿಗ್ಗಾವಿ ಇವರಿಗೆ-

ಕೆಳಗೆ ಗುರ್ತು ಮಾಡಿದವಳು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಗಂಡನಿದ್ದು ಲಗ್ನವಾದಂದಿನಿಂದಾ ಅಂದರೆ ೩೪-೩೫ ವರ್ಷಗಳಿಂದಾ ನನ್ನನ್ನು ಪಂಪರಿಯಿಂದ ತ ಡಿ ೪-೬ ತಿಂಗಳ ಕರಕೊಂಡು ಹೋಗಿ ಬಾಳ್ವೆ ಮಾಡದೇಳು ನಂತರ ಇಲ್ಲದ್ದೊಂದು ಕಾಟೀ ತೆಗೆದು ಹೊರಗೆ ಹಾಕಬೇಕು ಇದರಂತೆಯೇ ೪-೬ ಸಾರೆ ಮಾಡಿ ಈಗ ಒಂದು ವರ್ಷದ ಹಿಂದೆ ಗರ್ಭಿಣಿ ಇದ್ದ ನನ್ನನ್ನು ಹೊಡೆದು ಬಡೆದು ಮಾಡಿ ನನ್ನ ಮೈಮೇಲೆ ಇದ್ದ ದಾಗೀನೆಗಳು ಅಂದರೆ ನನ್ನ ತವರಮನಿಯವರು ಕೊಟ್ಟಿದವು ಭಂಗಾರ ಬಳಿ ಒಂದು ತೊಲಿ ೩ ಅ|| ಕಿ|| ೬೦ ರೂಪಾಯಿ ಗುಂಡಿ

ಬಾಬತು ರೂಪಾಯಿಗಳು (೧೦೦೦) ಇವತ್ತಿನವರಿಗೆ ನೀವು ಗಂಗಾರಾಮನಿಗೆ ಕೊಟ್ಟು ಖರೀದಿ ಪತ್ರ ಮಾಡಿಸಿಕೊಳ್ಳದ್ದರಿಂದಾ ಆ ಮಾತಿಗೆ ಅಜಮಾಸ ೩ ವರ್ಷ ಆಗಿ ಅದರಿಂದಾ ತನಗೆ ಬಹಳೇ ಲುಕಸಾನ ಆಗಿದ್ದು ಆ ಲುಕಸಾನ ತನಗೆ ಬರಲಿಕ್ಕೆ ಬೇಕು ಮುಂದೆ ನಾನು ಕೇಳುವದಿಲ್ಲಾ ಅಂತಾ ಗಂಗಾರಾಮ ಮಾರವಾಡಿಯು ನನಗೆ ಬಹಳೇ ತೊಂದರೆ ಕೊಟ್ಟು ಧಾರವಾಡದಲ್ಲಿ ನನ್ನನ್ನು ಬಿಡದೆ ಸದರಿ ಪಾವತಿ ತನ್ನ ಕಡಿಗೆ ಕೊಡಲಿಕ್ಕೆಬೇಕು ಅದರ ಜವಾಬದಾರಿ ತಾನೇ ನೋಡಿಕೊಳ್ಳುತ್ತೇನೆ ಇಲ್ಲದಿದ್ದರೆ ಪುನಃ ಫಿರ್ಯಾದಿ ಮಾಡುತ್ತೇನೆ ಅಂತಾ ನನಗೆ ಬಹಳೇ ತಸ್ತಿ ಕೊಟ್ಟು ಹಮೇಷ ನನ್ನ ದೇಖರೇಖಿಯಲ್ಲಿಯೇ ಇದ್ದಾನೆ ನಿಮ್ಮ ದೆಶೆಯಿಂದಾ ಈ ರೀತಿ ತ್ರಾಸ ನಾನು ಯಾಕೆ ಅನಭೋಗಿಸಬೇಕು ಕದಾಚಿತ್ತು ಗಂಗಾರಾಮನು ನನ್ನ ಮೇಲೆ ಮುಂದೆ ಏನಾದರೂ ಕೆಲ್ಸ ನಡಿಸಿದರೆ ಅದರ ಜವಾಬದಾರಿ ಯಾರದು, ಗಂಗಾರಾಮನು ಸಾವಕಾರನಿದ್ದು ಅವನ ಸಂಗಡಾ ಒಡದಾಡುವದು ನನ್ನಿಂದಾಗದು ಸದರ ಪಾವತಿ ಇನ್ನು ಮುಂದೆ ನನ್ನ ಕಡಿಗೆ ಯಾಕೆ ಇರಬೇಕು ಅದನ್ನು ಕಾಯುವ ಜವಾಬದಾರಿಯು ನನಗೆ ಬೇಕಾಗಿಲ್ಲಾ ಆದ್ದರಿಂದಾ ನಿಮಗೆ ಗಂಗಾರಾಮನು ಬರಕೊಟ್ಟ ಪಾವತಿಯಲ್ಲಿದ್ದಂತೆ ಈ ನೋಟೀಸು ಮುಟ್ಟಿದ (೮) ದಿನ್ನಗಳಲ್ಲಿ ಅವನಿಗೆ (೧೦೦೦) ರೂಪಾಯಿಗಳನ್ನು ನನ್ನ ಸಮಕ್ಷಮಾ ನೀವು ಕೊಟ್ಟು ನಂಬರು ೨೯೯ ರ ಬಾಬತು ಖರೀದಿ ಪತ್ರವನ್ನು ನಿಮ್ಮ ಹೆಸರ್ಲೆ ಮಾಡಿಸಿಕೊಂಡು ಸದರ ಪಾವತಿ ನೀವು ನನ್ನ ಕಡಿಯಿಂದಾ ವೈಯ್ಯಬೇಕು ಇಲ್ಲದಿದ್ದರೆ ಸದರ ಪಾವತಿ ನಿಮ್ಮ ಹುಕೂಮ ಇಲ್ಲದೆ ಗಂಗಾರಾಮನಿಗೆ ಕೊಟ್ಟ ನನ್ನ ಜವಾಬದಾರಿ ಕಳಕೊಳ್ಳುತ್ತೇನೆ ಮುಂದೆ ಅದರ ಲಾಭ ಲುಕಸಾನಕ್ಕೆ ನೀವೇ ಪಾತ್ರರಿದ್ದೀರಿ ಅದರ ಜವಾಬದಾರಿ ನನ್ನ ಮೇಲೆ ಏನೊಂದೂ ಇರದೆ ಮುಂದೆ ಆ ಸಮ್ಮಂಧಿ ಯೇನೊಂದು ತಕರಾರ ನನ್ನ ಮೇಲೆ ನಿಮ್ಮದು ನಡಿಯಲಿಕ್ಕಿಲ್ಲಾ ತಿಳಿಯೋದು ತಾ|| ೧೪-೭-೨೯

ಸಹಿ- ಇಂಗ್ಲಿಷ ಜಿ. ಪಿ. ಶಿದ್ರಾಮಶೆಟ್ಟಿ
ನವಲಗುಂದ

ಚಂದಾದಾರರಿಗೆ ಸೂಚನೆ

ಜುಲೈ ೩೦ ಕ್ಕೆ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ, ವಾರ ಪತ್ರದ ಚಂದಾದಾರರ ಹೆಸರಿಗೆ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ಪತ್ರವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ನೋಟೀಸು

ಮ|| ರಾ|| ಮಹಾದೇವಪ್ಪಾ ಬಿನ್ನ ಖಂಡಪ್ಪಾ ಆಲೇರ ಸಾ|| ಜಕ್ಲಿಗೇರಿ ತಾಲ್ಲೂಕ ಶಿರಹಟ್ಟಿ ಇವರಿಗೆ-

ಕೆಳಗೆ ಸಹಿ ಮಾಡಿದವಳ ಕಡಿಂದ ನೋಟೀಸು ಕೊಡುವದೇನಂದರೆ- ನೀನು ನನ್ನ ಲಗ್ನದ ಗಂಡನಿದ್ದು ನನ್ನ ಸಂಗಡ ಎರಡು ವರ್ಷ ಚಲೋ ರೀತಿಯಿಂದ ಬಾಳ್ವೆ ಮಾಡಿ ಈಗ ನಾಲ್ಕು ವರ್ಷಗಳ ಹಿಂದೆ ಎರಡನೇಯವರ ಚಿತಾವಣಿಯಿಂದ ನನ್ನನ್ನು ಹೊಡದು ಬಡದು ನನ್ನ ಮೈಮೇಲೆ ಇದ್ದ ದಾಗೀನೆ ವಗೈರೆ ಮತ್ತು ನನ್ನ ತವರಮನೆಯವರು ಕೊಟ್ಟ ದಾಗೀನೆ ಸಹಾ ಕಸಕೊಂಡು ಹೊರಗೆ ಹಾಕಿದಿ ಕಾರಣ ಎಷ್ಟೋ ಸಾರೆ ನನ್ನ ಕೂಡ ಬಾಳ್ವೆ ಮಾಡಬೇಕು ಅಂತಾ ಬುದ್ಧಿವಂತರ ಸಮಕ್ಷಮ ಹೇಳಿಸಿದೆ ಆದರೂ ನೀನ ಬುದ್ಧಿವಂತರ ಮಾತು ಕೇಳಲಿಲ್ಲಾ ನಾನು ನನ್ನ ಉಪಜೀವನ ಮಾಡುವದರ ಸಲುವಾಗಿ ಎರಡನೆದವರಲ್ಲಿ ಎರಡು ನೂರು ರೂಪಾಯಿ ದೇಣೇ ಮಾಡಿದ್ದೇನೆ ಈ ನೋಟೀಸು ಮುಟ್ಟಿದ ಎಂಟು ದಿವಸಗಳೊಳಗಾಗಿ ಬಂದು ನಾನು ಮಾಡಿದ ದೇಣೆ ತೀರಿಸಿ ನನ್ನನ್ನು ಕರಕೊಂಡು ಹೋಗಬೇಕು ಇಲ್ಲದಿದ್ದರೆ ನಾನು ದೇಣೇ ತೀರಿಸುವದರ ದೆಸೆಯಿಂದ ನನ್ನ ಉಪಜೀವನ ರಕ್ಷಿಯಿಂದ ಎರಡನೇ ಕಡಿಗೆ ಉಡಕಿ ಮಾಡಿಕೊಂಡು ಹೋಗುತ್ತೇನೆ ಆ ವೇಳೆ ನನ್ನ ಉಡಿಕೆ ಮಾಡಿಕೊಂಡವನ ಮೇಲೆ ಯಾವ ತಂದ್ಬು ನಿನ್ನ ಮಾಲ್ಕಿ ಯಾವದಕ್ಕೂ ನಡಿಯಲಾರದು ಈ ನೋಟಿಸಿನ ಖರ್ಚು ನಿನ್ನ ತಲೆಯ ಮೇಲಿದೆ ಅಂತಾ ಕೊಟ್ಟ ನೋಟೀಸು ತಾ|| ೧೩- ೭- ೨೯-

ಈ ಎಡಗೈ ಹೆಬ್ಬಟ್ಟಿನ ಗುರ್ತು ರೂಮವ್ವಾ ಕೋಂ ಮಹಾದೇವಪ್ಪಾ ಆಲೇರ ಸಾ|| ಜಕ್ಲಿಗೇರಿ ಹಾಲೀವಸ್ತಿ ಕರಜಗಿ ತಾಲೂಕ ಕರಜಗಿ ಈಕಿ ಮಾಡಿದ್ದು ಅದೆ

ಜಾಹೀರ ನೋಟೀಸು

ಕೆಳಗೆ ಸಹಿ ಮಾಡಿದವನು ಈ ಜಾಹೀರನೋಟಿಸಿನಿಂದ ಯಾವತ್ತೂ ಜನರಿಗೆ ತಿಳಿಸುವದೇನಂದರೆ- ನಾನು ಸವದತ್ತಿ ತಾಲೂಕಪೈಕಿ ಹಿರೇಕುಂಬಿಯಲ್ಲಿ ವ ನವಲಗುಂದ ತಾಲೂಕ ಅಳಗವಾಡಿ ಗ್ರಾಮದಲ್ಲಿಯೂ ಇರತಕ್ಕಿನೆ ನನ್ನ ಮಗನಾದ ಧರ್ಮಪ್ಪಾ ಇವನು ಕೆಟ್ಟಜನರ ಸಹವಾಸದಿಂದ ದುರ್ವ್ಯಸನಗಳಿಗೊಳಗಾಗಿ ಎರಡನೇಯವರಲ್ಲಿ ದೇಣೆ ವಗೈರೆ ಫೋಕಳ ಕಾಗದಾ ಮಾಡಿಕೊಡಲಿಕ್ಕೆ ಹತ್ತಿರುತ್ತಾನೆಂದು ಕೇಳುತ್ತೇನೆ. ನಾನೇ ಪ್ರಸಂಗ ಯಾವತ್ತೂ ಕೆಲಸ ಮಾಡುತ್ತಿರುವದರಿಂದ, ಮತ್ತು ಲೇವಾ ದೇವಿ ಮಾಡುತ್ತಿರುವದರಿಂದ ನನ್ನ ಮಗನಿಗೆ ಸಾಲ ಸಂಬಂಧ ಮಾಡಲಿಕ್ಕೆ ಏನೂ ಜರೂರ ಇಲ್ಲ. ಆತನು ಮಾಡುವ ಸಾಲ ಸಂಬಂಧವು ಬೇಕಾಯದೇಶೀರ ಇದ್ದು ಅದು ನನ್ನನ್ನು ಮತ್ತು ನನ್ನ ಸ್ಥಾವರ ಜಂಗಮ ಆಸ್ತಿಯನ್ನು ಯಾವರೀತಿಯಿಂದಲೂ ಬಾಂಧಾಯಿಸುವದಿಲ್ಲ. ಮತ್ತು ನನ್ನ ಆಸ್ತಿಯು ಸ್ವಸಂಪಾದನೆಯದಿದ್ದು ಅದರ ಮೇಲೆ ನನ್ನ ಈ ಮಗನ ಹಕ್ಕಸಂಬಂಧ ಏನೂ ಈಗ ಇರುವದಿಲ್ಲ ಆದ್ದರಿಂದ ಈತನಿಗೆ ಯಾರಾದರೂ ಸಾಲ ವಗೈರೆ ಕೊಟ್ಟರೆ- ನಾವೇನೂ ಜವಾಬದಾರರಿಲ್ಲ ಅವರು ಲುಕಸಾನಕ್ಕೆ ಪಾತ್ರರಾಗಬಾರದೆಂದು ಈ ಜಾಹೀರ ನೋಟೀಸು ಕೊಟ್ಟಿರುತ್ತೇನೆ ತಿಳಿಯುವದು.

ತಾ|| ೧೩-೭-೧೯೨೯

ಈ|| ಎ|| ಹೆ|| ಗ|| ಫಕೀರಪ್ಪಾ ಪಂಚಪ್ಪಾ ಗುಮ್ಮಗೊಳ ಸಾ|| ಹಿರೇಕುಂಬಿ

ನಿಮಗೆ ಉತ್ತಮವಾಗಿ ಉರಿಯುವ

ಒಣ ಕಟ್ಟಿಗೆ ಬೇಕೆ ?

ನಮ್ಮ ಕಟ್ಟಿಗೆಯ ಅಡ್ಡೇದಲ್ಲಿ ಉತ್ತಮ ತರದ ದಿಂಡಲು, ಮತ್ತು ಮುಂತಾದ ಕಾಡ ಕಟ್ಟಿಗೆಗಳು ಒಪ್ಪ ನೇಮಿಯ ದರದಿಂದ ಸಿಗುತ್ತವೆ. ಮಳೆಗಾಲದಲ್ಲಿ ಒಣಗಿದ ಕಟ್ಟಿಗೆಗಳು ನಮ್ಮಲ್ಲಿ ಯುಕ್ತಿ ಎರಡನೇ ಕಡೆಗೆ ಸಿಗುವದು ಕ್ವಚಿತವು. ಮಳೆಗಾಲ ದಿವಸದಲ್ಲಾಗುವ ಹಸೀ ಕಟ್ಟಿಗೆಯ ತಾಪವನ್ನು ಳಿಸಬೇಕೆಂದು ನಾವು ಮುದ್ದಾಮ ಕಟ್ಟಿಗೆಯ ಅಡ್ಡೆಯನ್ನು ಜನರ ಸೋಯಿಗಾಗಿ ಇಟ್ಟಿರುತ್ತೇವೆ. ಗ್ರಾಹಕರು ಇದರ ಲಾಭವನ್ನು ತಕ್ಕೊಳ್ಳಬೇಕು.

ಅಡ್ಡೆಯ ಮಾಲಕ,
ಬಾಳಾಚಾರ್ಯ ಕಾಂತಾಚಾರ್ಯ
ಮುನವಳ್ಳಿ.
ಧಾರವಾಡ.
(ಸೆಂಟ್ರಲ ಬ್ಯಾಂಕಿನ ಗಡಿಯಾಳದ ಎದುರಿಗೆ)

ಸುಸಮಯ

ಪಿ ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಅಂಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. B. 1143

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಚ್ಯುತಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಬುಧವಾರ ತಾರೀಖು ೧೨ ನೇ ಜುಲೈ ೧೯೩೯ (ಸಂಚಿಕೆ ೧೫೯

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯುತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಒಡ್ಡಿದರ ರೂ. ೩॥ ೬ ತಿಂಗಳ ಕಂತಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಒಡ್ಡಿದರ ೩॥ ರೂ.

ಸೇವಿಂಗ್ಸ ಬ್ಯಾಂಕ:— ಒಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು. ಒಡ್ಡಿದರ ೩ ರೂ.

ಸರಕಾರಿ ಹಾಗು ಇತರ ಸಾಲಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಒಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಒಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮಾ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಕ್ಕದಾ ಉದರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಊರುಗಳಿಗೆ ಕಟ್ಟಿನ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ ಮೊಕಸ್ಸಾರ ಪತ್ರಗಳೂ ಸದರಿ ಬ್ಯಾಂಕದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — ತಾ॥ ೧೭-೫-೩೮

ಡಿ. ಡೊನೆಲಿ, ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಆಫೀಸ- ಮಂಗಳವಾರಪೇಟೆ, ದಿ. ಶವಲಿ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸಾಲವು ಬರದಿಂದ ಕಡಿಮೆ ಮತ್ತು ಒಡಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಒಡ್ಡಿಯ ದರ ಸಂಬಂಧ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಒಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ಪಾಂಡುರಂಗ ಕಂಠಿ...

ದಿ ಧಾರವಾಡ ಅರ್ಬನ ಕೋ- ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಒಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತಿ ಇಟ್ಟುಕೊಳುವ ಒಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೧೭-೭-೨೯ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಪ್ರದು
ಶ್ರೀ ವಸುಮತಿಯು ನಲಿಸಿತೆ ಸುಹಿತಚರಿತೆಗಳಿಂ ॥
ದೀ "ವಿಜಯಂ" ಶ್ರೀಕರಕರುಣಾ ।
ನಾ ವಿಹಿತಂಗಳ ವಿವರಿಸಿನಲಿಪುದು ಸಾಜಂ ॥೧॥

ಶ್ರೀ ಸಿದ್ಧಾರೂಢ ಮಹಾಸ್ವಾಮಿಗಳ ಮೇಲಿನ ದಾವೆಯು.

ಸ್ವತಃ ಸ್ವಾಮಿಗಳ ಜವಾಬು

ಶ್ರೀ ಸಿದ್ಧಾರೂಢಸ್ವಾಮಿಯವರು ತಮ್ಮ ಮಠದ ಸ್ಥಾವರಜಂಗಮ ಆಸ್ತಿಗಳನ್ನು ಒಬ್ಬ ಗುರುಸಿದ್ಧಪ್ಪ ಅನ್ನುವನ ಹೆಸರಿಗೆ ಮೃತ್ಯುಪತ್ರ ಮಾಡಿಟ್ಟದ್ದು ಬದ್ಲು ಆಗಬೇಕೆಂತಾ ಇಲ್ಲಿಯ ೧ನೇ ವರ್ಗ ಸಬ ಜಡ್ಜ ಕೋರ್ಟಿನಲ್ಲಿ ದಾವೇ ನಡೆದದ್ದು ನಮ್ಮ ವಾಚಕರಿಗೆ ಈ ಮೊದಲೇ ಗೊತ್ತಿದ್ದ ಮಾತು. ಕಳೆದ ಶನಿವಾರ ತಾ॥ ೧೩ನೇ ದಿವಸ ವಾದಿ ಸಿದ್ದಯ್ಯನವರ ತರ್ಫೆ ಎಲ್ಲ ಪುರಾವೆ ಮುಗಿದು ಶ್ರೀ ಸಿದ್ಧಾರೂಢಸ್ವಾಮಿಯವರ ಜಬಾನಿಯು ಅವರ ಮಠದಲ್ಲಿಯೇ ಆಗಬೇಕೆಂದು ಎಲ್ಲರ ಅನುಮತಿಯಿಂದ ಠರಾಯಿಸಲ್ಪಟ್ಟಿತು ಅದರಂತೆ ನಿನ್ನೆ ಮಂಗಳವಾರ ತಾ॥ ೧೬ನೇ ದಿವಸ ಮುಂಜಾನೆ ೯ ಘಂಟೆಗೆ ಪ್ರಾರಂಭವಾಯಿತು. ಸ್ವಾಮಿಯವರ ಜವಾಬು ತೆಗೆದುಕೊಳ್ಳುವ ಕಾಲಕ್ಕೆ ವಾದಿ ಪ್ರತಿವಾದಿಯರ ವಕೀಲರ ಹೊರತಾಗಿ ಯಾರನ್ನೂ ಒಳಗೆ ಬಿಡಲಾಗದೆಂದು ಈ ಮೊದಲೇ ಜಾಹೀರಾಗಿದ್ದರೂ ೩೦೦-೪೦೦ ಜನರ ಸಮಾಜವು ಮಠದ ಎದುರಿಗೆ ನೆರೆದಿತ್ತು. ಅವರಲ್ಲಿ ಅನೇಕ ತರ್ಕಗಳು ನಡೆದಿದ್ದವು. ಈಗಿನವರೆಗೆ ನಿರ್ಮಮತ್ವಬುದ್ಧಿಯಿಂದ ನಡೆಕೊಂಡು ಬಂದ ಹಾಗೆಯೇ ಅದೇ ವೃತ್ತಿಯನ್ನಿಟ್ಟುಕೊಂಡು ನಿರಹಂಕಾರ ಬುದ್ಧಿಯಿಂದ ಎಲ್ಲ ಮಠದ ಆಸ್ತಿಯು ಸರ್ವಜನರ ಕಲ್ಯಾಣಕ್ಕಾಗಿಯೇ ಇವೆ ಎಂದು ಹೇಳುವರೆಂದು ಕೆಲವರು ಅನ್ನುತ್ತಿದ್ದರು. ಇದರ ವಿರುದ್ಧವಾಗಿಯೂ ಕೆಲವರ ತರ್ಕಗಳಾಗಿದ್ದವು. ಸರಿಯಾಗಿ ೯ ಘಂಟೆಗೆ ಈ ಜಬಾನಿ ಬರೆಕೊಳ್ಳುವದಕ್ಕಾಗಿ ನಿಯಮಿಸಲ್ಪಟ್ಟ ಶ್ರೀ ಘಟಕೆ ಮುನಸೂಫರು ವಾದಿಯ ತರ್ಫೆ ವಕೀಲರಾದ ಶ್ರೀ ವಿಶ್ವನಾಥರಾವ ಜೋಗ, ಹನಮಂತರಾವ ಲಕ್ಷ್ಮೇಶ್ವರ, ರಾಘುರಾವ ದೇಶಪಾಂಡೆ, ದತ್ತಾತ್ರೇಯರಾವ ಕರಮರಕರ ಮತ್ತು ಸ್ವಾಮಿಯವರ ತರ್ಫೆ ಶ್ರೀ ಕಂಬಳಿ ಮತ್ತು ಶ್ರೀ. ಸುಂಠಣಕರ ಈ ಪ್ರಕಾರ ಎಲ್ಲರೂ ಮಠದಲ್ಲಿ ಕೂತಿದರು. ಸ್ವಾಮಿಯವರ ಜಬಾನಿಯನ್ನು ದೊಡ್ಡ ಅಡಗಿಮನೆಯ ಆವಾರದಲ್ಲಿ ತೆಗೊಳ್ಳುವ ಯೋಜನೆಯಾಗಿತ್ತು. ಮಠದಲ್ಲಿ ಏನಾದರೂ ಗದ್ದಲವಾಗಬಹುದೆಂದು ವ್ಯವಸ್ಥೆ ಇಡಲಿಕ್ಕೆ ಸಬ್ ಇನ್ಸಪೇಕ್ಟರ ಚಂದಾವರಕರರು ಪೋಲೀಸರೊಂದಿಗೆ ಬಂದಿದ್ದರು. ಇಲ್ಲಿ ಏನು ವ್ಯವಸ್ಥೆ ಇಡಬೇಕೆಂದು ಅವರು ಶ್ರೀ ಘಟಕೆಯವರನ್ನು ಕೇಳಲು, ನಾವು ಒಳಗೆ ಹೊರಗಿನವರನ್ನು ಯಾರನ್ನೂ ಬಿಡುವದಿಲ್ಲ. ಹೊರಗೆ ವ್ಯವಸ್ಥೆ ಇಡಿರಿ ಎಂದು ಹೇಳಿದರು. ಸ್ವಾಮಿಗಳ ಜಬಾನಿಯು ಸರಿಯಾಗಿ ೯॥ ವರೆಗೆ ಪ್ರಾರಂಭವಾಗಿ ೧೧॥ ವರೆಗೆ ನಡೆಯಿತು. ಇನ್ನು ಅವರ ಜವಾಬು ಮುಗಿದಿಲ್ಲ. ಜಬಾಬಿನ ಕೆಲಸವು ಇಂದು ಬುಧವಾರ ತಾ॥ ೧೭ನೇ ದಿವ್ಸ ಮುಂಜಾನೆ ೯ಕ್ಕೆ ಪ್ರಾರಂಭವಾಗುವದು. ಅವರ ಜವಾಬನ್ನು ಈ ಕೆಳಗೆ ಕೊಟ್ಟಿದ್ದೇವೆ.

ದೇವರ ಆಣೆ ಮಾಡಿ ಖರೇ ಹೇಳುತ್ತೇನೆ-

ನಿಮ್ಮ ಹೆಸರೇನು? ಸಿದ್ದಪ್ಪ.

ತಂದೆಯ ಹೆಸರು? ಶಿವಪ್ಪ

ವಯಸ್ಸು ಎಷ್ಟಾಗಿರಬಹುದು? ೭೫ರ ಮೇಲೆ

ಕಸಬು ಧಂದೆ ಏನು ಮಾಡತೀರಿ? ಯಾಚನೆ- ಭಕ್ತರು ಮನೆಗೆ ಕರೆದರೆ ಹೋಗ್ತೇದು

ಇರೋದು ಎಲ್ಲಿ? ಹುಬ್ಬಳ್ಳಿಯಲ್ಲಿ

ನಿಮ್ಮ ಕಿವಿ ಚಲೋ ಕೇಳಸತವೆ ಏನು? ಇಲ್ಲ ಸ್ವಲ್ಪ ಮಂದ ಆಗಿವೆ.

ಈ ಮೃತ್ಯುಪತ್ರ ಬರೆಕೊಟ್ಟೀರೇನು? ಹೌದು ಗುರಪ್ಪನ ಹೆಸರಲೆ ಬರೆಕೊಟ್ಟಿದ್ದೇನೆ.

ಅದಕ್ಕೆ ಸಹಿ? ಹೌದು ಸಹಿ ಮಾಡೇನಿ.

ಸಬ್ರಜಿಸ್ಟರ ಎದುರಿಗೆ ಸಹಿ ಮಾಡೀರೇನು? ಮಾಡೇನಿ.

ಈ ಮೃತ್ಯುಪತ್ರವನ್ನು ಯಾರು ಬರೆದಿದ್ದಾರೆ? ಸಿದ್ದಯ್ಯನು ಬರೆದಿದ್ದಾನೆ.

ಯಾರು ಹೇಳಿದರು? ನಾನೇ ಹೇಳೇನಿ.

ಈ ಮೃತ್ಯುಪತ್ರ ಬರೆದುಕೊಡಲಿಕ್ಕೆ ಯಾರಾದರು ಒತ್ತಾಯ ಅಥವಾ ಭುಲಥಾಪ್ಯ ಹಾಕಿದರೇನು? ಇಲ್ಲಾ.

ಇದರಲ್ಲಿ ಬರೆದ ಮಜಕೂರು ಖರೇ ಅದೇ ಏನು? ಹೌದು ಖರೇ ಅದೆ.

ಈ ಸಿದ್ದಯ್ಯಾ ನಿಮ್ಮ ಮೇಲೆ ದಾವೇ ಮಾಡ್ಯಾನಲ್ಲಾ ಅದರೊಳಗಿನ ಕೈಫಿಯತ್ತಿಗೆ ನೀವೇ ಸಹಿಮಾಡೀರಿ? ಹೌದು. ಮಾಡೇನಿ.

ನೀವೇ ಸ್ವತಃ ಹೇಳಿ ಬರಿಸೀರಿ? ಹೌದು ನಾನೇ ಹೇಳಿ ಬರಿಸೇನಿ.

ಹುಲಕೋಟಿ ನಿಂಗಪ್ಪನವರ ಗುರ್ತು ಅದೆ? ಹೌದು ಗುರ್ತು ಅದೆ.

ಅವರು ನಿಮಗೆ ಅಂಗಡಿ ಖರೀದಿಕೊಟ್ಟರೇನು? ಹೌದು ನನಗೇ ಖರೀದಿ ಕೊಟ್ಟಾರೆ.

ಅದನ್ನು ಎಷ್ಟು ರೂಪಾಯಕ್ಕೆ ಖರೀದಿ ತಗೊಂಡಿರಿ? ೧೮೦೦೦ ರೂಪಾಯಕ್ಕೆ.

(ನಿಶಾನೆ ೫೪ ತೋರಿಸಿ) ಇದೇ ಏನು ಖರೀದಿಪತ್ರ? ಹೌದು.

ಕೈಲಾಸಮಂಟಪದ ಜಾಗಾ ಯಾರ ಕಡಿಂದ ತಗೊಂಡಿರಿ? ಒಬ್ಬ ಜಹಾಗೀರದಾರ ಖರೀದಿಗೆ ಕೊಟ್ಟಿರುತ್ತಾನೆ.

ಬ್ಯಾಹಟ್ಟಿ ವಕೀಲರ ಕಡಿಂದ ಏನು ತಗೊಂಡಿರಿ? ಎರಡು ಜಮೀನ ತಗೊಂಡೇನಿ. ಒಂದು ಅರೇರ ಕ್ಕಿಯಲ್ಲಿ ಮತ್ತೊಂದು ಗಣೇಶಪೇಟಿಯಲ್ಲಿ

ಸಾಕ್ಷಿಯ ಉಳಿದ ಭಾಗವನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು.

ಡಾಕ್ಟರ ಪರಾಂಜಪೆಯವರ ಸ್ವಾಭಿಮಾನ, ದೇಶಾಭಿಮಾನ.

——(೦)——

ಡಾಕ್ಟರ ರಘುನಾಥ ಪುರುಷೋತ್ತಮ ಪರಾಂಜಪೆಯವರು ಇಂಡಿಯಾ ಕೌನ್ಸಿಲದಲ್ಲಿ ಒಬ್ಬ ಮೆಂಬರರಾಗಿದ್ದಾರಷ್ಟೇ; ಇವರು ಲಿಬರಲರು. ಲಿಬರಲರು ಸಾಯಮನ್ನ ಕಮಿಶನಕ್ಕೆ ಬಹಿಷ್ಕಾರಹಾಕಿದ್ದಾರೆ. ಆದ್ದರಿಂದ ಇವರು ಸರ ಸಾಯಮನ್ನಸಾಹೇಬರ ಸ್ವಾಗತಮಾಡಲು ಲಂಡನದಲ್ಲಿ ಸ್ಟೇಶನಕ್ಕೆ ಹೋಗಲಿಲ್ಲ. ಸರಕಾರೀ ಕಾಮದಾರ ಮತ್ತು ಲಿಬರಲ ತತ್ವಕ್ಕೆ ಅರ್ಥಾತ್ ಸಂಬಂಧವೇ ಇರುವದಿಲ್ಲೆಂದು ಇವರು ಸ್ಪಷ್ಟೀಕರಿಸಿದ್ದಾರೆ. ಡಾಕ್ಟರ ಪರಾಂಜಪೆಯವರು ಇತ್ತಲಾಗಿ ಒಳ್ಳೇ ಧೈರ್ಯಶಾಲಿಗಳಾಗಿದ್ದು, ಅವರಂಥ ಸ್ವಾಭಿಮಾನ ಸ್ವದೇಶಾಭಿಮಾನವು ಹಿಂದೀ ಕಾಮದಾರರಲ್ಲಿ ಜಾಗೃತವಾದರೆ- ದೇಶಾಭ್ಯುದಯವಾಗಲಿಕ್ಕೆ ಅವಕಾಶವಾಗಲಾರದು.

ನಾಳಿನ ರಜೆ-

ವಾರ್ಷಿಕ ಪದ್ಧತಿ ಪ್ರಕಾರ ಪ್ರಥಮೈಕಾದಶಿಯ ರಜೆಯಿಂದ ನಾಳಿನ ನಿತ್ಯದ ವಿಜಯವು ಪ್ರಕಟಿಸಲ್ಪಡಲಾರದು.

ಮುಂಬಯಿ ಸರಕಾರದವರು ಶಿಕ್ಷಣ ವಿಷಯವಾಗಿ ಬ್ರಾಹ್ಮಣೇತರರಿಗೆ ಕೊಟ್ಟ ಸರ್ಟಿಫಿಕೇಟು.

ಮುಂಬಯಿ ಸರಕಾರದ ವಿದ್ಯಾಖಾತೆಯ ಐದು ವರ್ಷದ ವರದಿಯು (೧೯೩೨-೧೯೩೭) ಇದೀಗ ಪ್ರಕಟವಾಗಿದೆ. ಮುಂಬಯಿ ಇಲಾಖೆಯಲ್ಲಿ ಇಂದು ೧೬,೨೧೧ ವಿದ್ಯಾ ವಿಷಯಕ ಸಂಸ್ಥೆಗಳಿವೆ. ಇವುಗಳಲ್ಲಿ ೨೩ ಕಾಲೇಜುಗಳೂ; ೫-೯ ಹೈಸ್ಕೂಲುಗಳೂ ೧೩, ೮೫೫ ಪ್ರಾಥಮಿಕ ಶಾಲೆಗಳೂ, ೩೯೫ ವಿಶಿಷ್ಟ ವಿಷಯಗಳ ಶಾಲೆಗಳೂ ಇವೆ. ಒಟ್ಟಿಗೆ ೧,೨೧, ೫೯,೮೭೯ ರೂ ಗಳು ಸರಕಾರದಿಂದ ಗ್ರಾಂಟ ಕೊಡಲ್ಪಟ್ಟಿವೆ. ಹಿಂದುಸ್ಥಾನದ ಎಲ್ಲ ಪ್ರಾಂತಗಳ ಕ್ಕಿಂತಲೂ ಮುಂಬಯಿ ಇಲಾಖೆಯ ವಿದ್ಯಾರ್ಥಿಗಳ ಸಂಖ್ಯೆಯೇ ಮಿಗಿಲಾಗಿದೆಯಂತೆ! ಎಂದರೆ ೫.೩೮% ದ ಪ್ರಮಾಣವಿದೆ! ಇದು ನೋಡಿ! ಎಲ್ಲಕ್ಕೂ ದೊಡ್ಡ ಪ್ರಮಾಣವೆಂದರೆ ನೂರಕ್ಕೆ ೫.೩೮ ರಂತೆ ಮಾತ್ರ! ಇದು ಸಧಾರಿಸಿದ ಪ್ರಾಂತದ ಹಣೇಬರಹ! ಆದರೂ ಮುಂಬಯಿ ಸರಕಾರವು ಈ ಒಗ್ಗೆ ಹೆಮ್ಮೆ ಪಟ್ಟಿದೆ!

ಜಾತೀಯ ಮಾತ್ಸರ್ಯ ಹಾಗೂ ಅದರಿಂದ ಶಿಕ್ಷಣಕ್ಕೆ ಉಂಟಾದ ಹಾನಿಯ ಬಗ್ಗೆ ಇದೇ ಸರಕಾರೀ ರಿಪೋರ್ಟಿನಲ್ಲಿ ಹಲವು ವಿಶೇಷ ಬೋಧಪ್ರದ ವಿಧಾನಗಳಿವೆ. ೧೯೨೩ ನೇ ಇಸ್ವಿಯಲ್ಲಿ ಮುಂಬಯಿ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಣ ಕಾಯದೇ ಪಾಸಾಯಿತಷ್ಟೇ? ಅಂದಿನಿಂದ ಶೈಕ್ಷಣಿಕ ಆಡಳಿತೆಯು ಬ್ರಾಹ್ಮಣೇತರರ ಕೈಯಲ್ಲಿ ಹೋಗಿದೆಂದೂ, ಇವರು ಅಧಿಕಾರಾರೂಢರಾದಂದಿನಿಂದ ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಶಿಕ್ಷಣದ ಸಂಗತಿಗಳಲ್ಲಿ ಅನ್ಯಾಯ, ಅರ್ಜುನ ಅತಿರೇಕಗಳು ಒದಗಿ ಬಂದಿವೆಯೆಂದೂ ಇದೇ ಸರಕಾರೀ ವರದಿಯಲ್ಲಿ ಬರೆಯಲ್ಪಟ್ಟಿದೆ. ಒಂದೇ ಜಾತಿಯವರ ಕೈಯಲ್ಲಿ ಸೂತ್ರಗಳೆಲ್ಲ ಹೋಗಿದ್ದರಿಂದ ಉಳಿದ ಜಾತಿಯವರಿಗೆ ಹಾನಿಯಾಗಿಯೆಂದೂ. ಕೇವಲ ಜಾತಿಯವರೆಂದು ಅದೇ ಜಾತಿಯ ಇನ್‌ಸ್ಪೆಕ್ಟರರೂ, ಮಾಸ್ತರರೂ ಯೋಗ್ಯತೆಯಿಲ್ಲದಿದ್ದರೂ ಹೆಚ್ಚಾಗಿ ಸೇರಿಸಲ್ಪಟ್ಟಿದ್ದರಿಂದ ಜಾಣವಂತರೂ ಪ್ರಶಸ್ತಿಯುಳ್ಳವರೂ ಶಿಕ್ಷಣಕ್ಕಾಗಿ ಒಂದಿರುವದಿಲ್ಲೆಂದೂ, ಉಳಿದ ಜಾತಿಯ ಶಿಕ್ಷಕರನ್ನು ಅನನುಕೂಲವಾದ ಸ್ಥಳಗಳಿಗೆ ಮುದ್ದಾಂ ವರ್ಗ ಮಾಡಿ ಬಹು ದಿವಸಗಳಿಂದ ಕೆಲಸ ಮಾಡಿ, ಸಿನಿಯರ ಹೊಂದಿದರನ್ನು ಸಹ ಹಿಂದಕ್ಕಟ್ಟಿ, ಹೊಸದಾಗಿ ಬಂದ ಅಪಕ್ವ ಜನರನ್ನು ಮೇಲಕ್ಕೆತ್ತಿರುವರೆಂದೂ, ಪೋಸ್ಟಿನ ಭತ್ತೆ ದೊರೆಯುವ ಸ್ಥಾನಗಳಿಗೆ ಬೇಕೆಂದು ಅದೇ ಜಾತಿಯವರು ನೇಮಿಸಲ್ಪಟ್ಟಿರುವರೆಂದೂ, ಸ್ಪಷ್ಟವಾಗಿ ವರದಿಯು ಹೇಳುತ್ತದೆ "ಸಾರಾಂಶದಲ್ಲಿ ಹೇಳಬೇಕೆಂದರೆ ಕಡೇ ನಂಬರಿನ ನಾಯಿಯು ಎಲ್ಲಕ್ಕೂ ಮೇಲೆ ಬಂದಿದೆ! ಹಾಗೂ ಅದರ ತಲೆಗೇನೇ ಯಶದ ಭಾರವು ಕಟ್ಟಲ್ಪಟ್ಟಿದೆ" ಎಂಬದಾಗಿ ಶಬ್ದಗಳ ಪ್ರಯೋಗವಿದೆ. ಇದರಿಂದ ಶಿಕ್ಷಣ ವಿಷಯದಲ್ಲಿ ಅತ್ಯಂತ ಗೊಂದಲವೂ ಅವ್ಯವಸ್ಥೆಯೂ ಉಂಟಾಗಿದೆಯೆಂದು ಈ ವರದಿಯು ಬ್ರಾಹ್ಮಣೇತರರಿಗೆ ಸರ್ಟಿಫಿಕೇಟನ್ನು ಕೊಟ್ಟು, ಇದಕ್ಕೆ ಜಾತಿ ಮಾತ್ಸರ್ಯವೇ ಮೂಲ ಕಾರಣವೆಂದು ಇದೇ ಸರಕಾರೀ ರಿಪೋರ್ಟ ಘಂಟಾಘೋಷವಾಗಿ ಪ್ರಕಟಿಸಿದೆ; ಶಿಕ್ಷಣ, ವಿದ್ಯಾರ್ಥಿ ಹಾಗೂ ಶಾಲೆಗಳ ಹಿತದೃಷ್ಟಿಯಿಂದ ಸ್ಕೂಲಬೋರ್ಡುಗಳು ಬೇಗನೇ ಎಚ್ಚರಿಯುವವೋ ಇಲ್ಲವೋ ಎಂಬದನ್ನು ನೋಡತಕ್ಕದ್ದಾಗಿದೆಯೆಂದು ಈ ರಿಪೋರ್ಟ ಕಡೆಗೆ ಹೇಳಿದೆ!

ಹಿಂದಕ್ಕೆ ಕೂಲಿಕಾರರ ಮಂತ್ರಿಮಂಡಲ ಹಬ್ಬಿಸಿದವನಿಗೆ ಶಿಕ್ಷೆ.

೧೯೨೪ ರಲ್ಲಿ ಕೂಲಿಕಾರರ ಮಂತ್ರಿಮಂಡಲವು ಬುಡವೇಲಾಗುವದಕ್ಕೆ ಝಿನೋವ ಹೆಸರಿನಿಂದ ಪ್ರಸಿದ್ಧ ಮಾಡಿದ ಕೃತಕ ಪತ್ರವೇ ಕಾರಣವಾಯಿತು. ಆ ಪತ್ರ ಮತ್ತು ಆಗರಂತೆ ಬೇರೆ ಪತ್ರಗಳನ್ನು ಬರೆಯುತ್ತಿದ್ದ ಇಬ್ಬರು ಪ್ರಸಿದ್ಧ ರಶಿಯರಿಗೆ ಬರ್ಲಿನದಲ್ಲಿ ಇದೇ ಅಪರಾಧಕ್ಕಾಗಿ ಶಿಕ್ಷೆಯಾಯಿತು. ಇವರು ಝಾರಶಾಹಿಯಲ್ಲಿ ಘನತೆಗೇರಿದಂಥ ದೊಡ್ಡ ಕಾಮದಾರರು. ತಾವು ಝಿನೋವನ ಪತ್ರ ಬರೆದಂತೆ ಇವರು ತಾವಾಗಿ ಕಬೂಲಿ ಜವಾಬು ಕೊಟ್ಟಿದ್ದಾರೆ.

ಮಿ. ಹೆಂಡರಸನ್ನ ಸಾಹೇಬರನ್ನು ಕೊಲ್ಲುವ ಪ್ರಯತ್ನ.

—(೦)—

ಇಂಗ್ಲಂಡದ ಪರರಾಷ್ಟ್ರಗಳ ಮಂತ್ರಿಯಾದ ಮಿ ಹೆಂಡರಸನ್ನ ಸಾಹೇಬರು ಲಂಡನದಲ್ಲಿ ವೆಸ್ಟಮಿನಿಸ್ಟರವೆಂಬ ಭೋಜನಗೃಹದಲ್ಲಿ ಕೆಲ ಸ್ನೇಹಿತರಿಗೆ ಮೇಜವಾನಿ ಮಾಡುತ್ತಿದ್ದಾಗ, ಒಬ್ಬನು ಇವರನ್ನು ಕೊಲ್ಲಲು ರಿವಾಲ್ವರ ಮುಚ್ಚಿಕೊಂಡು ಬಂದನು. ಇದು ಬಾಗಿಲದಲ್ಲಿದ್ದ ಆಳಿಗೆ ಕಾಣಿಸಿತು. ಇವನು ಸಂಶಗ್ರಸ್ತನಾಗಿ ಸಾಹೇಬರು ಇಲ್ಲಿಲ್ಲ. ಕಚೇರಿಯಲ್ಲಿ ಅವರನ್ನು ಕಾಣಬಹುದೆಂದು ಹಿಂದಕ್ಕೆ ಕಳಿಸಿದನು. ಅಲ್ಲಿಯೂ ಕೆಲವಾತಗಳಿದ್ದಂತಾಯಿತು.

ನಾಗಪೂರದಲ್ಲಿ ಪುನಃ ಪ್ರಧಾನರು.

—(೦)—

ಬಂಗಾಲದಂತೆ ನಾಗಪೂರ ಇಲಾಖೆಯಲ್ಲಿಯೂ ದ್ವಿದಳ ದೊರೆತನವು ಅಳಿದುಹೋಗಿದೆ. ಇದಕ್ಕೆ ಮೊದಲು ಕಡಕ ಕೂಡಿಸಿದವರು ನಾಗಪೂರಿನ ಸ್ವರಾಜ್ಯ ಪಕ್ಷೀಯರೇ. ಅಲ್ಲಿ ಪುಣೆಯ ಪ್ರತಿಯೋಗ ಸಹಕಾರದ ಮುಂಕ ತಗಲಿ, ಶ್ರೀ ರಾಘವೇಂದ್ರ ರಾಯರು ಮಂತ್ರಿಪದ ಕಟ್ಟಿದರು. ಆದರೆ ರಾಷ್ಟ್ರೀಯರು ಇವರನ್ನು ದಿವಾನಗಿರಿಯಿಂದ ತಳ್ಳಿಹಾಕಿದರು. ಹೊಸ ಚುನಾವಣೆಯು ಸಮೀಪಿಸಿದ್ದರೂ ಪ್ರತಿಯೋಗಿ ಸಹಕಾರಿಗಳಾದ ಶ್ರೀ ಬಾಬಾಸಾಹೇಬ ತಾಂಬೆಯವರು ಪುನಃ ದಿವಾನಗಿರಿಯನ್ನಾಳಲು ಸಿದ್ಧರಾಗಿದ್ದಾರೆ. ಮಾಜೀ ದಿವಾನರಾದ ಜ್ಯಾರಿಸ್ಟರ ದೇಶಮುಖ, ಬಾಲಪೂರ ಮ್ಯುನಿಸಿಪಾಲಿಟಿಯ ಅಧ್ಯಕ್ಷರೂ ಕೌನ್ಸಿಲ ಮೆಂಬರರೂ ಆಗಿರುವ ರಾವ ಬಹಾದ್ದೂರ ಬೋಸರು ಹೊಸ ದಿವಾನರಾಗುವರು. ತಮ್ಮ ತಳ ಯಶವಾಗ ಅದರುವದೆಂದು ಹೆದರಿಕೊಂಡು ಹಿಂದೆ ನೋಡುತ್ತಲೇ ಇವರು ಪ್ರಧಾನಪಟ್ಟವೇರಬೇಕಾಗುವದೆಂಬದು ನಿಸ್ಸಂಶಯ.

ನೋಟೀಸು

ರಾ|| ರಾ|| ಲಿಂಗೋ ಅಣ್ಣಾಜಿ ಯಜಮಾನ ಸಾ|| ನವಲಗುಂದ ಇವರಿಗೆ-

ಕೆಳಗೆ ಸಹಿ ಮಾಡಿದವರು ತಿಳಿಸುವದೇನಂದರೆ- ನೀವು ಗಂಗಾರಾಮ ಮಾರವಾಡಿ ನವಲಗುಂದ ಇವರಿಗೆ ಕೊಡತಕ್ಕ ಯಾವತ್ತು ರಕಮಿನ ಬಗ್ಗೆ ತಾರೀಖು ೪-೧೦-೨೭ನೇ ಇಸ್ವಿ ದಿವಸ ಅವರಿಗೆ ನೀವು ರೋಖ (೨೫೦೦) ರೂಪಾಯಿ ಕೊಟ್ಟ ಬಾಬತು ನಿಮ್ಮ ಹೆಸರಿನ ಅವರು ಪಾವತಿ ಬರಕೊಟ್ಟಿದ್ದು ಸದರಿ ಪಾವತಿಯಲ್ಲಿ ನಂಬರು ೨೯೯ ನೇ ಬಾಬತು ಎರಡು ಸಾವಿರ ರೂಪಾಯಿ ಗಂಗಾರಾಮ ಇವರಿಗೆ ನೀವು ಕೊಟ್ಟು ಅವರಿಂದಾ ಸದರ ಜಮೀನು ನೀವು ಖಂತ ಖರೇದಿ ಪತ್ರ ಬರಿಸಿಕೊಳ್ಳಬೇಕಂತಾ ನಮೂದ ಇರುತ್ತದೆ ಆ ಪ್ರಕಾರ ನೀವು ಅವರಿಗೆ ರೂಪಾಯಿಗಳನ್ನು ಕೊಟ್ಟು ಖಂತ ಖರೇದಿ ಬರಿಸಿಕೊಳ್ಳುವವರೆಗೆ ಸದರ ಪಾವತಿ ನನ್ನ ಕಡಿಗೆ ಇರಬೇಕಂತಾ ಗೊತ್ತು ಆ ಪ್ರಕಾರ ನನ್ನ ಕಡಿಗೆ ಇತ್ತು ನಂತರಾ ಸದರ ಗಂಗಾರಾಮ ವ ನಿಮ್ಮ ನಡುವೆ ತಂಟೆ ಬಂದು ಸದರ ಪಾವತಿ ನಾನು ಧಾರವಾಡ ಕೋರ್ಟಿನಲ್ಲಿ ಹಾಜರ ಮಾಡಲಾಗಿ ಅಲ್ಲಿ ಯೋಗ್ಯ ವಿಚಾರ ಆಗದೆ ಸದರ ಪಾವತಿ ನಾಬೀತ ಹಿಡಿಯದೆ ಆ ಬಗ್ಗೆ ನನ್ನೆಲ್ಲರ ಮೇಲೆ ಫಿರ್ಯಾದಿ ಸಹಾ ದಾಖಲ ಆಗಿತ್ತು ಅದು ಅಪೀಲಿ ಕೋರ್ಟಿನಲ್ಲಿ ನಿಕಾಲೆಯಾಯಿತು ಆದರೆ ಸದರ ಪಾವತಿಯಲ್ಲಿ ಕಂಡ ರಿ. ಸ ನಂಬರು ೨೯೯ ರ

R. N. B. 1443

ನಿತ್ಯ ಪತ್ರ — ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶುಕ್ರವಾರ ತಾರೀಖು ೧೯ ನೇ ಜುಲೈ ೧೯೩೮ (ಸಂಚಿಕೆ ೧೬೦

ಶ್ರೀ ಸಿದ್ಧಾರೂಢ ಮಹಾಸ್ವಾಮಿಗಳ ಮೇಲಿನ ದಾವೆಯು.

ಸ್ವತಃ ಸ್ವಾಮಿಗಳ ಜವಾಬು

ಶ್ರೀ ಸಿದ್ಧಾರೂಢಸ್ವಾಮಿಯವರು ತಮ್ಮ ಮಠದ ಸ್ಥಾವರಜಂಗಮ ಆಸ್ತಿಗಳನ್ನು ಒಬ್ಬ ಗುರುಸಿದ್ದಪ್ಪ ಅನ್ನುವನ ಹೆಸರಲೆ ಮೃತ್ಯುಪತ್ರ ಮಾಡಿಟ್ಟದ್ದು ರದ್ದು ಆಗಬೇಕೆಂತಾ ಇಲ್ಲಿಯ ೧ನೇ ವರ್ಗ ಸಬ ಜಜ್ಜ ಕೋರ್ಟಿನಲ್ಲಿ ದಾವೆ ನಡೆದದ್ದು ನಮ್ಮ ವಾಚಕರಿಗೆ ಈ ಮೊದಲೇ ಗೊತ್ತಿದ್ದ ಮಾತು. ಕಳೆದ ಶನಿವಾರ ತಾ|| ೧೩ನೇ ದಿವಸ ವಾದಿ ಸಿದ್ದಯ್ಯನವರ ತರ್ಫೆ ಎಲ್ಲ ಪುರಾವೆ ಮುಗಿದು ಶ್ರೀ ಸಿದ್ಧಾರೂಢಸ್ವಾಮಿಯವರ ಜಬಾನಿಯು ಅವರ ಮಠದಲ್ಲಿಯೇ ಆಗಬೇಕೆಂದು ಎಲ್ಲರ ಅನುಮತಿಯಿಂದ ಠರಾಯಿಸಲ್ಪಟ್ಟಿತು ಅದರಂತೆನಿನ್ನೆ ಮಂಗಳವಾರ ತಾ|| ೧೬ ನೇ ದಿವಸ ಮುಂಜಾನೆ ೮ ಘಂಟೆಗೆ ಪ್ರಾರಂಭವಾಯಿತು. ಸ್ವಾಮಿಯವರ ಜವಾಬು ತೆಗೆದುಕೊಳ್ಳುವ ಕಾಲಕ್ಕೆ ವಾದಿ ಪ್ರತಿವಾದಿಯರ ವಕೀಲರ ಹೊರತಾಗಿ ಯಾರನ್ನೂ ಒಳಗೆ ಬಿಡಲಾಗದೆ ಇದ್ದು ಈ ವೇಳೆ ಜಾಹೀರಾಗಿದ್ದರೂ ೩೦೦-೪೦೦ ಜನರ ಸಮಾಜವು ಮಠದ ಎದುರಿಗೆ ನೆರೆದಿತ್ತು. ಅವರಲ್ಲಿ ಅನೇಕ ತರ್ಕಗಳು ನಡೆದಿದ್ದವು. ಈಗಿನವರೆಗೆ ನಿರ್ಮಲ ಸ್ವಬುದ್ಧಿಯಿಂದ ನಡೆಕೊಂಡು ಬಂದ ಹಾಗೆಯೆ ಅದೇ ವೃತ್ತಿಯನ್ನಿಟ್ಟುಕೊಂಡು ನಿರಹಂಕಾರ ಬುದ್ಧಿಯಿಂದ ಎಲ್ಲ ಮಠದ ಆಸ್ತಿಯು ಸರ್ವಜನರ ಕಲ್ಯಾಣಕ್ಕಾಗಿಯೇ ಇದೆ ಎಂದು ಹೇಳುವರೆಂದು ಕೆಲವರು ಅನ್ನುತ್ತಿದ್ದರು ಇದರ ವಿರುದ್ಧವಾಗಿಯೂ ಕೆಲವರ ತರ್ಕಗಳಾಗಿದ್ದವು. ಸರಿಯಾಗಿ ೯ ಘಂಟೆಗೆ ಈ ಜಬಾನಿ ಬರಕೊಳ್ಳುವದಕ್ಕಾಗಿ ನಿಯಮಿಸಲ್ಪಟ್ಟ ಶ್ರೀ ಪ ತ ವ ... ವಾದಿಯ ತರ್ಫೆ ... ಶ್ರೀ ವಿಶ್ವನಾಥರಾವ ಜೋಶಿ ಹನಮಂತರಾವ ... ರಾವ ರಾವ ದೇಶಪಾಂಡೆ ... ರಾವ ಕರಮರಕರ ಮತ್ತು ಸ್ವಾಮಿಯವರ ತರ್ಫೆ ಶ್ರೀ ಕಂಬಳಿ ಮತ್ತು ಶ್ರೀ ...ಕರ ಈ ಪ್ರಕಾರ ಎಲ್ಲರೂ ಮಠದಲ್ಲಿ ಕೂಡಿದರು ಸ್ವಾಮಿಯವರ ಜಬಾನಿಯನ್ನು ದೊಡ್ಡ ಅಡಿಗೆ ಮನೆಯ ಆವಾರದಲ್ಲಿ ತಗೊಳ್ಳುವ ಯೋಜನೆಯಾಗಿತ್ತು ಮಠದಲ್ಲಿ ಏನಾದರೂ ಗದ್ದಲವಾಗಬಹುದೆಂದು ವ್ಯವಸ್ಥೆ ಇಡಲಿಕ್ಕೆ ಸಬ್ ಇನ್ಸ್‌ಪೆಕ್ಟರ ಛಂದಾವರಕರರು ಪೋಲೀಸರೊಂದಿಗೆ ಬಂದಿದ್ದರು ಇಲ್ಲಿ ಏನು ವ್ಯವಸ್ಥೆ ಇಡಬೇಕೆಂದು ಅವರು ಶ್ರೀ ಪಡಕೆಯವರನ್ನ ಕೇಳಲು, ನಾವು ಒಳಗೆ ಹೋಗಿನವರನ್ನ ಯಾರನ್ನೂ ಬಿಡುವದಿಲ್ಲ ಹೊರಗೆ ವ್ಯವಸ್ಥೆ ಇಡಿರಿ ಎಂದು ಹೇಳಿದರು ಸ್ವಾಮಿಗಳ ಜಬಾನಿಯು ಸರಿಯಾಗಿ ೯|| ವರೆಗೆ ಪ್ರಾರಂಭವಾಗಿ ೧೧|| ವರೆಗೆ ನಡೆಯಿತು ಇನ್ನು ಅವರ ಒಪಾಟು ಮುಗಿದಿಲ್ಲ ಜಬಾಬಿನ ಕೆಲಸವು ಇಂದು ಬುಧವಾರ ತಾ|| ೧೭ನೇ ದಿವಸ ಮುಂಜಾನೆ ೯ ಕ್ಕೆ ಪ್ರಾರಂಭವಾಗುವದು ಅವರ ಜವಾಬನ್ನು ಈ ಕೆಳಗೆ ಕೊಟ್ಟಿದ್ದೇವೆ.

ದೇವರ ಆಣೆ ಮಾಡಿ ಖರೇ ಹೇಳತ್ತೀನೆ-

ನಿಮ್ಮ ಹೆಸರೇನು? ಶಿದ್ದಪ್ಪಾ

ತಂದೆಯ ಹೆಸರು? ಶಿವಪ್ಪಾ

ವಯಸ್ಸು ಎಷ್ಟಾಗಿರಬಹುದು? ೭೫ ರ ಮೇಲೆ

ಕಸಬು ಧಂದೆ ಏನು ಮಾಡತೀರಿ? ಯಾಚನೆ-ಭಿಕ್ಷಾ ಮನೆಗೆ ಕರೆದರೆ ಹೋಗೋದು

ಇರೋದು ಎಲ್ಲಿ? ಹುಬ್ಬಳ್ಳಿಯಲ್ಲಿ

ನಿಮ್ಮ ಕಿವಿ ಒಳ್ಳೇ ಕೇಳಸತವೆ ಏನು? ಇಲ್ಲ ಸ್ವಲ್ಪ ಮಂದ ಆಗಿವೆ

ಈ ಮೃತ್ಯುಪತ್ರ ಬರಕೊಟ್ಟೀರೇನು? ಹೌದು ಗುರಪ್ಪನ ಹೆಸರಲೆ ಬರಕೊಟ್ಟೇನೆ

ಅದಕ್ಕೆ ಸಹಿ? ಹೌದು ಸಹಿ ಮಾಡೇನಿ

ಸಬ್ ರಜಿಸ್ಟರ ಎದುರಿಗೆ ಸಹಿ ಮಾಡೀರೇನು? ಮಾಡೇನಿ

ಈ ಮೃತ್ಯುಪತ್ರವನ್ನು ಯಾರು ಬರೆದಿದ್ದಾರೆ? ಒಬ್ಬ ಅಯ್ಯನು ಬರೆದಿದ್ದಾರೆ

ಯಾರು ಹೇಳಿದರು? ನಾನೇ ಹೇಳೇನಿ

ಈ ಮೃತ್ಯುಪತ್ರ ಬರೆದುಕೊಡಲಿಕ್ಕೆ ಯಾರಾದರು ಒತ್ತಾಯ ಅಥವಾ ಭುಲಥಾಪಿ ಹಾಕಿದರೇನು? ಇಲ್ಲಾ.

ಇದರಲ್ಲಿ ಬರೆದ ಮಜಕೂರು ಖರೇ ಅದೇ ಏನು? ಹೌದು ಖರೇ ಅದೆ

ಈ ಶಿದ್ದಯ್ಯಾ ನಿಮ್ಮ ಮೇಲೆ ದಾವೇ ಮಾಡ್ಯಾನಲ್ಲಾ ಅದರೊಳಗಿನ ಕೈಫಿಯತ್ತಿಗೆ ನೀವೇ ಸಹಿಮಾಡೀರಿ? ಹೌದು. ಮಾಡೇನಿ

ನೀವೇ ಸ್ವತಃ ಹೇಳಿ ಬರೆಸೀರಿ? ಹೌದು ನಾನೇ ಹೇಳಿ ಬರೆಸೇನಿ

ಹುಲಕೋಟಿ ನಿಂಗಪ್ಪನವರ ಗುರ್ತು ಅದೆ? ಹೌದು ಗುರ್ತು ಅದೆ.

ಅವರು ನಿಮಗೆ ಅಂಗಡಿ ಖರೀದಿಕೊಟ್ಟರೇನು? ಹೌದು ನನಗೇ ಖರೀದಿ ಕೊಟ್ಟಾರೆ

ಅದನ್ನು ಎಷ್ಟು ರೂಪಾಯಕ್ಕೆ ಖರೀದಿ ತಗೊಂಡಿರಿ? ೧೮೦೦೦ ರೂಪಾಯಕ್ಕೆ,

(ನಿಶಾನೆ ೫೪ ತೋರಿಸಿ) ಇದೇ ಏನು ಖರೀದಿಪತ್ರ? ಹೌದು

ಕೈಲಾಸಮಂಟಪದ ಜಾಗಾ ಯಾರ ಕಡಿಂದ ತಗೊಂಡಿರಿ? ಒಬ್ಬ ಜಹಾಗೀರದಾರ ಖರೀದಿಗೆ ಕೊಟ್ಟಿರುತ್ತಾರೆ

ಬ್ಯಾಹಟ್ಟಿ ವಕೀಲರ ಕಡಿಂದ ಏನು ತಗೊಂಡಿರಿ? ಎರಡು ಜಮೀನ ತಗೊಂಡೇನಿ ಒಂದು ಆರೇರ ಓಣಿಯಲ್ಲಿ ಮತ್ತೊಂದು ಗಣೇಶಪೇಟೆಯಲ್ಲಿ ಒಂದು ೧೬ ಸಾವಿರ ಮತ್ತೊಂದು ೧೧ ಸಾವಿರ (ಸಾಧಾರಣ ಹೇಳತೇನೆ)

ಚನ್ನಪ್ಪ ಗದ್ದದವರ ಕಡಿಂದ ಏನಾದರೂ ತಗೊಂಡೀರಾ? ವಿಶೇಷ ನೆಪ್ಪು ಇಲ್ಲಾ.

ಅಬ್ದುಲಸಾಬ ಕೋಲವಾಲೆ ಒಬ್ಬ ಮಸಲಮಾನನ ಕಡಿಂದ ತಗೊಂಡೀರಲ್ಲಾ ಅದು ಎಲ್ಲೆ ಅದ? ಗಣೇಶಪೇಟೆಯಲ್ಲಿ ನಾನು ಸಾಮಾನ್ಯವಾಗಿ ಹೇಳತೇನೆ ವಿಶೇಷ ನೆಪ್ಪು ಇಲ್ಲ

ಇದೇ ಅದು ಖರೀದಿಪತ್ರ? (೬೬) ಎಷ್ಟಕ್ಕೆ ತಗೊಂಡಿರಬಹುದು ನೆನಪದೇನು? ಸಾಮಾನ್ಯ ಹೇಳಬೇಕಾದರೆ ೮೦೦೦ ಕ್ಕೆ ತಗೊಂಡಿರಬಹುದು? ವಿಶೇಷ ನೆಪ್ಪಿಲ್ಲ

ಮೇಲಗಿರಿಯಪ್ಪ ಕರ್ಜಗಿಯವರಿಂದ? ಅವರ ಕಡಿಂದ ಒಂದು ಹೊಲಾ ತಗೊಂಡೇನಿ

ಅದು ಎಷ್ಟಕ್ಕೆ ತಗೊಂಡೀರಿ? ಅದು ಬಹಳ ನೆನಪು ಇಲ್ಲಾ ಅಜಮಾಸು ೫೦೦೦ ಕ್ಕೆ ಇರಬಹುದು

ಬಡಣಿ ಗುರಪ್ಪನ ಕಡಿಂದ ಖರೀದಿ ತಗೊಂಡೀರಿ? ಹೂ ತಗೊಂಡೇನಿ

ಏನು ತಗೊಂಡೀರಿ? ಹೊಲಾ

ಅದು ಎಷ್ಟು ರಕಮಿಗೆ ತಗೊಂಡೀರಿ ನೆಪ್ಪು ಅದೆ ಏನು? ಅದೇನು ನೆಪ್ಪಿಲ್ಲಾ

ಇದೇ ಆ ಖರೀದಿ ಪತ್ರ? ಹೌದು (೫೦)

ಒಸೆಟ್ಟೆಪ್ಪಾ ನೀಲಿ ಇವರ ಕಡಿಂದ ಏನಾದರೂ ಖರೀದಿ ತಗೊಂಡೀರಿ? ಹೊಲಾ ತಗೊಂಡೇನಿ ಇದೇ ಆ ಖರೀದಿಪತ್ರ (ನಿ ೫೩)

ಕುಸುಗಲ್ಲಾಗ ಫಕೀರಪ್ಪಾ ಜನ್ನೋಜಿ ಇವರ ಕಡಿಂದ ಏನಾದರೂ ಖರೀದಿ ತಗೊಂಡೀರಿ? ಅಲ್ಲಿ ಹೊಲಾನ ಇದೇ ಕಾಗದ ಕುಸುಗಲ್ಲಪ್ಪರ ಕಡಿಂದ ತಗೊಂಡದ್ದು

ಹರ್ತಿ ಪೈಕಿ ಚನಬಸಪ್ಪ ಅಂಬುಮಠನು ದಾನ ಕೊಟ್ಟಾನೇನು? ಹೌದು ಹೊಲಾ ಕೊಟ್ಟಾನೆ

ಇದೇ ದಾನಪತ್ರ ಅದು? ಹೌದು (೪೫)

ಬಿ ಜಿರಾಬಾಯಿ ಅಂತಾ ಅಂಬುಮಾತಿ ದಾನ ಕೊಟ್ಟಾಳೇನು? ಹೌದು ದಾನಕೊಟ್ಟಾಳೆ ಒಂದು ಹೊಲಾ ಕೊಟ್ಟಾಳೆ

ಇದೇ ಅದು? (೪೪) ಹೌದು (ಮಿ ಕಂಬಳಿಯವರು ಒಂದು ಮರಾಟಿ ಕತಬ ತೋರಿಸುತ್ತಾರೆ)

ಪಶುಪತಿಹಾಳದ ಶಿವಪ್ಪ ದಾನ ಕೊಟ್ಟಾನೇನು? ಹೌದು ಕೊಟ್ಟಾನೆ

ಏನು ಕೊಟ್ಟಾನೆ? ಹೊಲಾ

ಇದೇ ಆ ಕಾಗದ? ಹೌದು

ಇಲ್ಲೆ ತಮ್ಮ ದರ್ಶನಕ್ಕೆ ಮಂದಿ ಬರತಾರೇನ? ಬರತಾರೆ

ಇಲ್ಲೆ ಜಾತ್ರೆ ಉತ್ಸವ ಆಗತದೇನು? ಭಕ್ತರು ಭಕ್ತಿಯಿಂದ ನಾ ಮಾಡು ಅಂದರೆ ಮಾಡತಾರೆ

ಇಲ್ಲೆ ಪಂಜರು ಯಾತಾದರೂ ಇದ್ದಾರೇನು? ಯಾರಿಲ್ಲಾ ಇಲ್ಲಾ

ಎಂದಾದರೂ ಹಿಂದಕ್ಕೆ ಎಂದಾದರೂ ಇದ್ದರೇನು? (ಕೈಯಿಂದ ತೋರಿಸಿ) ಏನೂ ಇಲ್ಲಾ

ದರ್ಶನಕ್ಕೆ ಬಂದ ಮಂದಿ ನಿಮಗೆ ಏನಾದರೂ ಕೊಡತಾರೇನು? ಮಂದಿ ಬಂದವರು ಭಿಕ್ಷಾ ಕೊಡತಾರೆ (ಇದು ಸೂಚಕ ಪ್ರಶ್ನವೆಂದು ಜೋಗರು ಅಡ್ಡಿ ಮಾಡುತ್ತಾರೆ)

ಯಾರಿಗೆ ಕೊಡತಾರೆ? ನನಗೆ ಕೊಡತಾರೆ

ಮಂದಿ ದರ್ಶನಕ್ಕೆ ಬರೋದು ಪ್ರತಿ ನಿತ್ಯ ಬರೋದ? ಪ್ರತಿ ನಿತ್ಯನೂ ಬರತಾರೆ ಒಂದು ಕಾಲಕ್ಕೆ ಹೆಚ್ಚು ಒಂದು ಕಾಲಕ್ಕೆ ಕಡಿಮಿ

ಈ ಸಂಸ್ಥೆದೊಳಗಿನ ಇಮಾರತಿಗಳೆಲ್ಲಾ ಯಾರು ಕಟ್ಟಿಸಿದರ? ಎಲ್ಲಾ ನಾನೇ ಕಟ್ಟಿಸೇನೆ

ಬ್ರಾಹ್ಮಣರ ಸಮಾಧಿ ಅದೆಲ್ಲಿ ಅದು ಎಂದು? ಅದು ಇತ್ತು? ಅದು ಮೊದಲೇ ಇತ್ತು ನಿಮಗೆ ಗೊತ್ತಿಲ್ಲಾ ನನಗೆ ಗೊತ್ತಿಲ್ಲಾ

ಅದಕ್ಕೇನು ನೀವು ಕಟ್ಟಿಸಿಲ್ಲಾ? ನಾನೇನು ಕಟ್ಟಿಸಿಲ್ಲಾ ಮೇಲಿಂದಷ್ಟೇ ಕಟ್ಟಿಸ್ಯೇತಿ

ಎಲ್ಲಕಿಂತಾ ಎತ್ತರ ಇರೋ ಇಮಾರತಿ ಅದಕ್ಕೆ ಮಂದಿ ಕೈಲಾಸಮಂಟಪ ಅಂತಾರ? ಅದನ್ನು ಯಾರು ಕಟ್ಟಿಸಿದರು? ಅದನ್ನು ನಾನೇ ಕಟ್ಟಿಸೇನೆ

ಬಾದಾಮಿ ಕಲ್ಲಿನ ಇಮಾರತು ಯಾರು ಕಟ್ಟಿಸ್ಯಾರ? ಅದನ್ನು ನಾನು ಕಟ್ಟಿಸೇನಿ *

ಈ ಕೈಲಾಸಮಂಟಪ ಬಾದಾಮಿ ಕಲ್ಲಿನ ಇಮಾರತು ಸಮಾಧಿ ಹೊರ್ತು ಅವೆಲ್ಲನ್ನೂ ಯಾರು ಕಟ್ಟಿಸ್ಯಾರ? ನಾನೇ ಕಟ್ಟಿಸೇನೆ ಸಮಾಧಿ ಹೊರ್ತು

ಬಾದಾಮಿ ಕಲ್ಲು ಎಲ್ಲಿಂದ ತರಿಸಿದಿರಿ? ಒಡ್ಡರಿಗೆ ಹೇಳಿತ್ತು ಒಡ್ಡರೇ ತಂದಿದ್ದರು

ಫೋಟೋ? ಏನು ಕೊಂಡಿರೋ? ಫೋಟೋ ಏನು ಕೊಂಡಿರೋ? ಅವನ್ನು ರೊಕ್ಕಾ ಕೊಟ್ಟು

ಈ ಕೈಲಾಸಮಂಟಪಕ್ಕೆ ಸಾಮಾನ ಕಬ್ಬಿಣದ ಕಂಬ? ಅವೆಲ್ಲಾ ರೊಕ್ಕಾ ಕೊಟ್ಟು ಕೊಂಡದ್ದವು

ಈ ಇಮಾರತು ಇದರ ಹಿಂದಿನ ಇಮಾರತು ಹಂಚುಗಳಿ? ಎಲ್ಲಾ ರೊಕ್ಕಾ ಕೊಟ್ಟು ಕೊಂಡೇತಿ ಮತ್ತು ಕೆಳಗೆ ಹೊಂದಿಸಿದ ಕಲ್ಲು? ಎಲ್ಲಾ ರೊಕ್ಕಾ ಕೊಟ್ಟು ತಗೊಂಡೇತಿ

ನಿಮಗೆ ಮಂದಿ ಬಂದವರು ಭಿಕ್ಷಾ ಕೊಡತಾರೆಂತಾ ಹೇಳಿದಿರಲ್ಲಾ ವರ್ಷ ಎಷ್ಟು ಬರತದೆ? ಮದಲೇ ಈಗಿಂದ? ಈಗ ಹತ್ತು ವರ್ಷದೊಳಗೆ ಎಷ್ಟು ಬರತದೆ? ವರ್ಷ ೧೦೦೦೦ ದ ಮೇಲೆ ಬರತದೆ

ಅದರಕಿಂತ ಹಿಂದೆ? ಅದರ ಕಿಂತಾ ಹಿಂದೆ ಏಳು ಸಾವಿರ ಆಗಲಿ ಎಂಟು ಸಾವಿರ ಆಗಲಿ

ಈ ಹಣಾ ನಿಮಗೇನು ಭಕ್ತರು ಕೊಡುತ್ತಿದ್ದರು ಯಾವದಾದರೂ ಶರ್ತಿನಿಂದ ಕೊಡುತ್ತಿದ್ದಾರೋ? ಹ್ಯಾಗೆ? ಏನೂ ಇಲ್ಲಾ ಕೊಟ್ಟು ನಮಸ್ಕಾರ ಮಾಡಿ ಹೋಗೋದು

ಇಂಥಾದ್ದಕ್ಕೆ ಈ ಹಣಾ ಉಪಯೋಗ ಮಾಡಬೇಕು ಇಂಥಾದ್ದಕ್ಕೆ ಬಾಡಾ ಎನಾದರೂ ಹೇಳುತ್ತಿದ್ದರೇನು? (ಕೈಮಾಡಿ) ಏನೂ ಇಲ್ಲಾ

ಇವು ಏನು ಖರೀದಿ ತಗೊಂಡಿರಿ ಅದನ್ನು ಯಾವ ಹಣದಿಂದ ತಗೊಂಡಿ? ಭಕ್ತರು ಶಿಷ್ಯರು ಏನು ಕೊಟ್ಟರು ಭಿಕ್ಷಾ ಮತ್ತು ಹೊಲಾ ಅಂಗಡಿ ಏನದಾವು ಅದರಿಂದ ಎಲ್ಲಕ್ಕೂ ಮೊದಲು ನಿವೃತ್ತಿ ಭಿಕ್ಷೆದಿಂದ

ಇವೆಲ್ಲಾ ಇಮಾರತುಗಳನ್ನು ಈ ಜಾಗಾದಲ್ಲಿ ಕಟ್ಟಿಸೀರಿ ಇವೆಲ್ಲಾ ಯಾತರಿಂದ ಕಟ್ಟಿಸಿದಿರಿ? ಏನಿ ಭಕ್ತರಹಣದಿಂದ ಅನಂತರ ಹೊಲಾ ಅಂಗಡಿಯಿಂದ ಎಲ್ಲಕ್ಕೂ ಮೊದಲು ಭಿಕ್ಷಾದೊಳಗಿಂದ

ನೀವು ಯಾರಿಗೆ ಈ ಇಮಾರತು ಕಟ್ಟಿಸೋದರ ದಶಿಂದ ವರ್ಗಣಿ ಮಾಡಲಿಕ್ಕೆ ಹೇಳಿದ್ದಿರಿ? ಇಲ್ಲಾ ಯಾರಿಗೂ ಕೇಳಿಲ್ಲಾ ಅಂತಾ ಹೇಳ್ಯಾನೆ ವಾದೀ ಹೇಳತಾನೆ. ವರ್ಗಣಿಮಾಡಿ ಕಟ್ಟಿಸ್ತಾನ ಅದು ಖರೇ ಅದೇನು? ಇಲ್ಲ ಅದು ಖರೇ ಇಲ್ಲ

ಇವೆಲ್ಲಾ ಇಮಾರತು ಯಾರ ಮಾಲ್ಕೀತು? ಇವೆಲ್ಲಾ ನನ್ನ ಮಾಲ್ಕೀವೆ

ಖರೀದಿ ತಗೊಂಡದವು ಮತ್ತು ದಾನ ಬಂದವು ಇವು ಇವೆಲ್ಲಾ ನನ್ನ ಮಾಲ್ಕೀವೆ

ಆ ಬ್ರಾಹ್ಮಣರ ಸಮಾಧಿ? ಅದು ನನ್ನ ಮಾಲ್ಕೀದು ಅಲ್ಲಾ

ಮನಿಆರ್ಡರದಿಂದ ತಮಗೆ ದಾನ ಅಥವಾ ಭಿಕ್ಷಾ? ಬರತದೆ

ಇಂಥಾದಕ್ಕೆ ಉಪಯೋಗ ಮಾಡಿರಿ ಅಂತ? (ಕೈಯಿಂದ ಇಲ್ಲಾ ಅಂತಾ ಸೊನ್ನಿ ಮಾಡತಾರೆ)

ಈ ಮನಿಆರ್ಡರಲೆ ಹಣಾ ಕೋಡೋದು ಭಿಕ್ಷಾ ಕೋಡೋದು ಯಾಕೆ ಕೊಡತಿದ್ದಾರು? ಪ್ರೀತೀಲೆ ಕೊಡತಿದ್ದರು

ನೀವು ಮುಖ್ತ್ಯಾರನ ನೇಮಿಸಿಕೊಂಡಿರೇನು ಇಲ್ಲಾ ಯಾರನ್ನು ನೇಮಿಸಿಕೊಂಡಿಲ್ಲಾ

ಮುಖ್ತ್ಯಾರ? ಶಿದ್ದು ಶಿದ್ದಪ್ಪನ ಕೆಲಸ ನೋಡಲಿಕ್ಕೆ (ನನಗೆ ಕೇಳೋದಿಲ್ಲಾ ಅದಕ್ಕೆ ಹಂಗ ಆಗದೆ)

ಎಷ್ಟು ವರ್ಷ ಆಗಿದ್ದೀತು. ಮುಖ್ತ್ಯಾರನ್ನ? ಹನ್ನೆರಡು ವರ್ಷ ಆಯಿತು

ಈ ಖರೀದಿ ಆದ ಮನಿಗಳು ಯಾರ ಹೆಸರಲೆ ಅವೆ? ನನ್ನ ಹೆಸರಲೆ ಅವೆ

ಮ್ಯುನಿಸಿಪಾಲಿಟಿಯೊಳಗೆ ಸರಕಾರೀ ಲೆಖ್ಖದೊಳಗೆ? ನನ್ನ ಹೆಸರಲೆ ಅವೆ

ಅವರ ಭಾಡೇದ ಹಣಾ ಯಾರಿಗೆ ಮುಟ್ಟತದೆ? ನನಗೇ ಮುಟ್ಟತದೆ

ಖರೀದಿ ಆದನಂತರ ಯಾರ ತಾಬೇದಲ್ಲಿ ಅವೆ? ನನ್ನ ತಾಬೇದಲ್ಲಿಯೇ ಅವೆ

ನೀವು ಕಟ್ಟಿಸಿದ ಇಮಾರತಗಳ ಮೇಲಾಗಲಿ ಖರೀದಿ ಮಾಡಿದ ಆಸ್ತಿ ಮೇಲಾಗಲಿ ಸಾರ್ವಜನಿಕರದು ನಿಮ್ಮ ಹೊರತಾಗಿ ಹಕ್ಕು ಅದೇ ಏನು? (ಕೈಯಿಂದ ತೋರಿಸಿ) ಯಾರದೂ ಇಲ್ಲ

ಇಲ್ಲೆ ಈ ಜಾಗಾದೊಳಗೆ ಪಾಠಶಾಲಾ ಇತ್ತೇನು? ಪಾಠಶಾಲಾ ಹೇಳಿದ್ದೆ ಇಟ್ಟಿದ್ದರು ಬ್ಯಾಡಾ ಅಂದೆ ಬಿಟ್ಟರು

ಎಷ್ಟು ದಿವಸ ಇತ್ತದು? ಬ್ಯಾಡಾ ವರ್ಷ ಇದ್ದೀತು ವರ್ಷದ ಮೇಲೆ ೨ ತಿಂಗಳಾಗಲಿ ಇದ್ದೀ

ಯಾರ ಪೂಜಾ ಆಗತದೆ? ನನ್ನದೇ ಆಗತದೆ

ಯಾರ ಉತ್ಸವ ಆಗತದೆ? ನನ್ನದೇ ಆಗತದೆ ಪೂಜಾನೇ-ಮುಖ್ಯ

ರಥದೊಳಗೆ ಯಾರು ಕೂಡತಾರೆ? ನಾನೇ ಕೂಡತೇನೆ

ಆ ಬ್ರಾಹ್ಮಣ ಸಮಾಧಿಯ ಪೂಜಾ ಯಾರಾರು ಮಾಡ್ತಾರೇನು? ಇಲ್ಲಾ ಎಂದೂ ಇಲ್ಲಾ

ಇಲ್ಲೆ ಮಂದಿ ಒಂದರೆ ಇಳಿಯಗೊಡತೀರೇನು? ನನ್ನ ಅಜ್ಞಾ ಆದರೆ ಇಳಿತಾರೆ

ಧಂಗಾಂ ಬೆಳ್ಳಿ ಸಾಮಾನ ಹಿತ್ತಾಳಿ ತಾಮ್ರದ ವು ಸಾಮಾನ ಅವೆ ಅಲ್ಲ? ಅವೆ

ಅವು ಯಾರ ಮಾಲ್ಕೀವು? ನನ್ನ ಮಾಲ್ಕೀವು

ಅವುಗಳ ಮೇಲೆ ಸಾರ್ವಜನಿಕರ ಹಕ್ಕು ಅದೆ ಏನು? (ಕೈಯಿಂದ) ಏನೂ ಇಲ್ಲಾ

ಹಿತ್ತಾಳಿ ತಾಮ್ರದ ಬಾಂಡೇದ ಮೇಲೆ ಯಾರ ಹೆಸರು ಅವೆ? ನನ್ನ ಹೆಸರು ಅದೆ

ಬೆಳ್ಳಿ ಬಂಗಾರದ ಸಾಮಾನದ ಮೇಲೆ ಯಾರ ಹೆಸರು ಅವೆ? ನನ್ನ ಹೆಸರು ಅವೆ

ಬೆಳಮುಕರ ಹನಮಂತಪ್ಪಂದು ಗೊತ್ತದ ನಿಮಗೆ? ಗೊತ್ತದ

ಅವರಲ್ಲಿ ಬಂಡೆಪ್ಪಂದು ಗೊತ್ತದೆ? ಗೊತ್ತದ

ಕರಜಗಿ ವೀರಭದ್ರಪ್ಪಂದು? ವೀರಭದ್ರಪ್ಪಂದು ಗೊತ್ತದ

ಕರಜಗಿ ಸೋಮಪ್ಪ? ಗೊತ್ತದ

ಮಹಿಷಿ ರಾಮಣ್ಣಾ? ಗೊತ್ತದ

ತುಕ್ಕಪ್ಪ ಸಕಾರಿ? ಗೊತ್ತದ

ದಿವಟೆ ಮಲ್ಲಪ್ಪ? ಹಣಮಂತಪ್ಪ ಗೊತ್ತದ

ದಿವಟೆ ಭೀಮಪ್ಪ? ಗೊತ್ತದ

ಇವರ ಪೈಕಿ ಯಾರಾದರೂ ನೀವು ಪಂಚರನ್ನು ನೇಮಿಸಿದ್ದರೇ? ಇಲ್ಲಾ

ಇವರೇನಾದರೂ ಪಂಚರಂತಾ ಕೆಲಸ ಮ್ಯಾಡ್ಯಾರೇನು? ಇಲ್ಲಾ

ಅವರು ಹಣವನ್ನು ಎಣಿಸುತ್ತಾರೋ? ನೇವಿಲ್ಲ ನಾನೂ ಎಣಿಸುತ್ತಿದ್ದೆ ನಂತರ ಭಕ್ತರೂ ಎಣಿಸುತ್ತಿದ್ದರು ಅಕಸ್ಮಾತ್ತಾಗಿ ಅವರೂ ಇದ್ದರೆ ಅವರೂ ಎಣಿಸುತ್ತಿದ್ದರು ನೇಮವಿಲ್ಲ

ಎಣಿಸಲಿಕ್ಕೆ ಯಾರು ಹೇಳುತ್ತಿದ್ದರು? ನಾನೇ ಹೇಳುತ್ತಿದ್ದೆನು

ನಮ್ಮ ಅಜ್ಞೆ ಇಲ್ಲದೇ ಆ ಹಣವನ್ನು ಯಾರಾರು ಮುಟ್ಟುತ್ತಿದ್ದರೇನು?

ಅದು ಹ್ಯಾಗೆ (ಗೋಣ ಅಗಳಾಡಿಸಿ)

ಈಗೇನು ನಾ ಮೇಲೆ ಹೆಸರು ಹೇಳಿದೆ ಇವರ ಮನಿಯವರ್ಲ್ಲಾಗಲಿ ಎಂದಾದರೂ ಹಣಾ ಇಟ್ಟಿದ್ದಿರೇನು ನೀವು? (ಕೈಯಿಂದಾ ಇಲ್ಲಾ ಅಂತಾ ಸೊನ್ನೆ ಮಾಡುತ್ತಾರೆ)

ಮ್ಯಾಲೆ ಹೇಳಿದವರು ಅವರು ಬರುತ್ತಿದ್ದಾರೇನ? ದರ್ಶನಕ್ಕೆ ಯಾವಾಗಾದರೂ ನಿಮಿತ್ತಕ್ಕೆ ಬರತಿದ್ದರು

ಈಗ ನೀವು ಮುಖ್ತ್ಯಾರರನ್ನು ನೇಮಿಸಿದಿರಿ ಈಗ ಬಂದ ಹಣಾ ಯಾರಿಗೆ ಕೊಡತ್ತೀರಿ?

ಈಗ ಬಂದದ್ದು ಖರ್ಚು ಆಗೋದೇ ಬಹಳ ಉಳಿದದ್ದರ ಪೈಕಿ ಸ್ವಲ್ಪ ಇದ್ದರೆ ಇಲ್ಲೆ ಇಡತೇನೆ ಬಹಳ ಆದರೆ ಅವನ ಕಡಿಗೆ ಕೊಡತೇನೆ

ಅದಕ್ಕಿಂತ ಮೊದಲು ಹಣ ಎಲ್ಲಿ ಇಡುತ್ತಿದ್ದಿರಿ? ಬಹಳ ಬಂತಿದ್ದಿಲ್ಲ ಅದನ್ನು ಅವನ ಕಡಿಗೇ ಇಡತಿದ್ದೆ

ಮಂದಿ ಟೆಂಗಿನಕಾಯಿ ತಮಗೆ ಕೊಡತಾರೇನು? ಕೊಡತಾರೆ

ನೀವು ತಿರುಗಿ ಅವರಿಗೆ ಪ್ರಸಾದ ಕೊಡತೀರಿ? ಕೊಡತೇವಿ

ಉಳಿದ ಟೆಂಗಿನಕಾಯಿ ಏನು ಮಾಡತೀರಿ? ಮಾರತೇವ

ಯಾರ ಅಪ್ಪಣೆ ಪ್ರಕಾರ ಮಾರತಾವೆ ಅವನ್ನ? ನಾನು ಹೇಳಿದ ಹಾಂಗೆ ಮಾರತಾರೆ

ಈ ಸಾಳೇರು ಒಂದು ಅನ್ನಛತ್ರ ಇಡುತ್ತಿದ್ದಾರೇನು? ಅನೇಕರು ಇಡತಾರೆ ನೇಮವಿದ್ದಲ್ಲ ಸಾಳೇರ ಮುಖ್ಯವಲ್ಲ ಸಾಳೇರು ಪಟೇಗಾರರು ಚಿಂಪಿಗೇರು ಇಡತಾರೆ

ಧಾನ್ಯ ಅವರಿಗೆ ಬೇಕಾಗಿದ್ದರೆ? ನಾವು ಕೊಡತಿದ್ದಿವಿ ಹ್ಯಾಂಗೆ? ಖರೀದಿ

ಹೀಂಗ ಎಷ್ಟು ವರ್ಷದಿಂದ ಕೊಡತಿದ್ದಿರಿ? ಎಂಟು ವರ್ಷ ಆಗಿದ್ದೀತು ಹೆಚ್ಚು ಕಡಿಮಿ ಎಂಟು ವರ್ಷ ಆಗಿದ್ದೀತು

ವರ್ಷಾ ಅಜಮಾಸು ಎಷ್ಟು ಕೊಳತ್ತಿದ್ದರು? ೪೦೦, ೫೦೦, ೬೦೦, ೩೦೦ ನಿಯಮ ಮಾತ್ರ ಇಲ್ಲ

ಸಾಳೇರು ಪಟೇಗಾರರು ಚಿಂಪಿಗೇರ ಅವರು ಎಲ್ಲಿ ಇಡುತ್ತಿದ್ದರು? ಅಲ್ಲೇ ಕೂಡೀ ಆಗೀ ಮನಿಯಲ್ಲಿ ಇಡುತ್ತಿದ್ದರು

ಈ ದಾಸೋಗ ಇಡುತ್ತಿದ್ದರು ಅವರು ಹಕ್ಕಿನಿಂದ ಇಡುತ್ತಿದ್ದಾರೋ? ಎನಿಲ್ಲಾ ಆಜ್ಞೆಕ್ಕೆ ಸರಿಯಾಗಿ

ಯಾರ ಅಜ್ಞೆಕ್ಕೆ ಸರಿಯಾಗಿ? ನನ್ನ ಅಜ್ಞೆಕ್ಕೆ ಸರಿಯಾಗಿ

ಈ ವಾದೀ ಅಣ್ಣ ಶಿವಾನಂದ ಅಂತಾ ಇದ್ದಾನಲ್ಲ? ಇದ್ದಾ

ಈಗ ಎಲ್ಲಿದ್ದಾನೆ ಅವಾ? (ಎರಡು ಕೈಯಿಂದ) ನನಗೆ ಗೊತ್ತಿಲ್ಲಾ

ತಮ್ಮ ಸನ್ನಿಧಿಯಲ್ಲಿ ಇದ್ದಾನೇನು? ಒಳಗಡೆ ಇದ್ದಾ ಈಗೇನೂ ಇಲ್ಲಾ

ಯಾರ ಅಜ್ಞೆಯಿಂದ ಇರತಿದ್ದ? ಇರು ಅಂಬರೆ ಇರತಿದ್ದಾ ಹೋಗು ಅಂದೆ ಹೋದಾ ಸಂಚಾರದ ಮೇಲೆ ಇರತಿದ್ದಾ ಯಾವಾಗಾರ ೧೫ ೧೫ ದಿವಸ ಇರುತ್ತಿದ್ದಾ

ಇಲ್ಲಿಂದ ಅವ ಯಾಕೆ ಹೋದಾ? ಅವನ ಪ್ರೀತಿಗೆ ನಾ ಬ್ಯಾಡಾ ಅಂದೆ ಹೋದಾ

ಇಲ್ಲೀದ ಬಿಟ್ಟು ಹೋಗಿ ಎಷ್ಟು ವರ್ಷ ಆಯಿತು? ಆಗಿದ್ದೀತು ನಾಲ್ಕೈದು ವರ್ಷ ಆಗಿದ್ದೀತು ಎನ್ನಿ ನೆನಪಿಲ್ಲದವು ಅಜಮಾಸಲೆ ಹೇಳತೇನ)

ತಮಗೆ ನೆನಪಿನ ಶಕ್ತಿ? ಕಮ್ಮಿ ಆಗೇತಿ

ಹನುಮಂತಪ್ಪ ಬೆಳಮುಕರ ಕರಜಗಿ ಸೋಮಪ್ಪನಿಗೆ ಮಸಿಕಟ್ಟಿಕೊಡಲಿಕ್ಕೆ ಕಟಗಿ ಕೊಟ್ಟೀರಿ ಅಂತಾ ಅಂತಾರೆ, ಖರೆ ಅದೆ ಏನು ಅದು? ಇಲ್ಲಾ

(ಬಾಜೂಕ್ಕೆ ಕೆಮ್ಮುತಾರೆ)

ಈ ಜಾತ್ರಿ ಯಿಂದಾದರೂ ಒಂದಾಗಿತ್ತೇನು? ಪ್ಲೇಗಿನೊಳಗೆ ಒಂದು ವರ್ಷ ಬಂದು ಆಗಿತ್ತು.

ಯಾರು ಹುಕುಮಿನಪ್ರಕಾರ ಅಜ್ಞಾಪ್ರಕಾರ ಬಿಟ್ಟು ಬಿಟ್ಟಿರಿ? ಅದೇನೂ ಇಲ್ಲಾ ಪ್ಲೇಗ ಜಾಸ್ತಿ ಆಯಿತು ಬಿಟ್ಟು ಬಿಟ್ಟವಿ

ಇಲ್ಲೆ ನಿಮ್ಮ ಪೂಜಾದ ಹೊರ್ತು ಮತ್ತು ನಿಮ್ಮ ಉತ್ಸವದ ಹೊರ್ತು ಎಂದು ಯಾರದಾದರೂ ಉತ್ಸವ ನಡೆದದೇನು? (ಕೈಯಿಂದ ತೋರಿಸಿ) ಇಲ್ಲಾ?

ನೀವು ಇಲ್ಲೆ ಬರುವವರ ಮೊದಲು ಯಾರದಾರ ಯಾರದರದು ಉತ್ಸವ ಇತ್ತೇನ? ಯಾರದೂ ಇದ್ದಿಲ್ಲಾ

ಇಲ್ಲೆ ನಿಮ್ಮ ಪೂಜಾ ಉತ್ಸವ ಮಾಡತಾರೋ? ಮಠದ್ದು ಅಂತಾ ಹೇಳಿ ಮಾಡತಾರೋ? ದನ್ನದೇ ಮಾಡತಾರೆ?

ಇಲ್ಲೆ ನಿಮ್ಮ ಉತ್ಸವ ನಿಮ್ಮದು ಮಾಡತಾರೋ ಮಠದ್ದು ಮಾಡತಾರೊ? ಮಠದ ಸೂದ್ದೀನೋ ಇಲ್ಲಾ

ರಥದ ಉತ್ಸವ ನಿಮ್ಮದಾಗತದೋ ಮಠದ್ದಾಗತದೋ? ಇಲ್ಲಾ ನನ್ನದೇ ಆಗತದೆ, ಮಠದ್ದಾಗೋದಿಲ್ಲಾ?

ನಿಂಗವ್ವ ಅನ್ನುವಾಕಿ ದಾನ ಕೊಟ್ಟಾಳೇನು? ಹೌದು? ಏನು? ಭೂಮಿ (೪೭)

ಶಿದ್ರಾಮಪ್ಪ ನಿಂಬರಗಿ ಅನ್ನುವವ ಮನಿಕೊಟ್ಟಾನೆ

ಯಾರಿಗೆ ದಾನ ಕೊಟ್ಟಾನೆ? ನನಗೆ ಕೊಟ್ಟಾನೆ

ಈ ನಿಂಗವ್ವ ದಾನಕೊಟ್ಟ ಆಸ್ತಿ ಶಿದ್ರಾಮಪ್ಪ ನಿಂಬರಗಿ ಕೊಟ್ಟ ಆಸ್ತಿ ಝುಂಗರಾಬಾಯಿ ಕೊಟ್ಟ ಆಸ್ತಿ ಯಾರ ತಾಬೇದಾಗ ಅವೆ? ನನ್ನ ತಾಬೇದಲ್ಲಿಯೇ ಅವೆ? (೪೩,೪೪,೪೫,೪೭,೪೭)

ಚಾಳವ್ವ ಅಂತಾ ಮೃತ್ಯುಪತ್ರ? ಚಾಳವ್ವನ ಆಸ್ತಿ ನಿಮ್ಮ ತಾಬೇದಲ್ಲಿ ಅದೆ? ಯಾರ ಬಾಳಪ್ಪನಂಡ ನೆಪ್ಪಿಗೆ ಬಂದಿಲ್ಲಾ ಅದನ್ನ ಒಡಂಬಟ್ಟಿಲ್ಲಾ ಮೊದಲೇ ಬ್ಯಾಡಾ ಅಂದೆ ಈಗೂ ಬ್ಯಾಡಾ ಅಂತೇನಿ (೪೮)

ಭೀಮರಡ್ಡಿ? ಅದೂ ಒಡಂಬಟ್ಟಿಲ್ಲಾ ಆಬ್ಜಿ ತಿಕ್ಕಿಲ್ಲಾ (೪೧) ಇದೇ ಆ ಭೀಮರಡ್ಡಿ ದಾನಪತ್ರ? ಹೌದು (೪೧)

ಯಲ್ಲಪ್ಪಗೌಡಾ (ಕೂಸೂಗಲ್ಲ?) ಮುಗಳಿಗೆ ಹೌದು ಏತಿ ಅದು ಬಹಾಳಾಗಿ ಇದ್ದೀತು ಅನುಮಾನದಿಂದ ಹೇಳತೇನಿ ಇದ್ದೀತು (ಅದು ಅವಗೆ ಮತ್ಯಾರಿಗೆ ಗೊತ್ತಿದ್ದೀತು)

ಕುಂದಗೋಳದ ಸೋಗುಣ್ಣ ಅನ್ನುವವ ಖರೀದಿ ಕೊಟ್ಯಾನೆ? ಒಂದು ಜಮೀನು ಖರೀದಿಕೊಟ್ಟಾನೆ ಇದೇ ಅವನಿಗೆ ಬರಕೊಟ್ಟ ಖರೀದಿಪತ್ರ (೬೨)

ಕುಂದಗೋಳದ ನಾಶಿ ಅವರು? ಒಂದು ಹೊಲಾ ಖರೀದಿ ಕೊಟ್ಟಾರೆ ಇದೇ ಆ ಖರೀದಿ ಪತ್ರ (೬೧)

ಈ ನಾಶಿಯವರು ಒಂದು ಹೊಲಾ ಕೊಟ್ಟಾರೆ ಅಂದರೆ ಎರಡು ಜಮೀನು ಕೊಟ್ಟಾರೆ (೬೧)

ಕುಸೂಗಲ್ಲೊಳಗೆ? ಹೌದು ಖರೀದಿ ಹೌದೇನು? ಖರೀದಿಯಿನ? ಅಲ್ಲಾ ರಾಚಯ್ಯನ ಮಠ್ಯಾಂ? ಗೊತ್ತಿಲ್ಲಾ.

ಈಗೇನು ನಿಮಗೆ ಖರೀದಿಪತ್ರ ತೋರಿಸಿದೆ. ಇವು ಯಾರ ಕಬ್ಜಾದಲ್ಲಿ ಅವೆ? ನನ್ನ ಕಬ್ಜಾದಲ್ಲಿ ಅವೆ ಖರೀದಿ ಆದಂದಿನಿಂದ? ಹೌದು

ಇವುಗಳ ಉತ್ಪನ್ನ ಯಾರು ತಗೊಂತಾರೆ? ನಾನೇ ತಗೊಂತೇನೆ

ಯಾರಾದರೂ ತಮಗೆ ಈ ಉತ್ಪನ್ನದ ಲೆಖ್ಖ ಕೊಡಿ ಅಂತಾ ಕೇಳ್ಯಾರೇನು? ಇಲ್ಲಾ

ಅಥವಾ ದಾನಪತ್ರದ ಆಸ್ತಿ ವಿಷಯಕ್ಕೆ ಲೆಖ್ಖ ಕೇಳ್ಯಾರೇನ, ಇಲ್ಲಾ

ಅದವಾ ಭಿಕ್ಷ ಬಂದ ಹಣ ಆ ಹಣದ ಲೆಖ್ಖ ಯಾರಾದರೂ ಕೇಳ್ಯಾರೇನು ಇವತ್ತಿನತನಕ? (ಕೈಯಿಂದ) ಇಲ್ಲಾ

ನೀವು ಜಮಾ ಖರ್ಚಿನ ಲೆಖ್ಖ ಇಟ್ಟೀರೇನು? ಇಲ್ಲಾ

ಒಂದಕ್ಕೊಂದಾದಕಡ ಇಟ್ಟೀರೇನು? ಇಲ್ಲಾ

ಯಾರಾದರೂ ಬಂದು ಎಂದಾದರೂ ಮಠಕ್ಕೆ ದಿಕ್ಷಾ ಅಂತಾ ಕೊಟ್ಟಾರೇನ? ಇಲ್ಲಾ ಯಾಂದೂ ಇಲ್ಲಾ

ಇಲ್ಲೆ ಕೀರ್ತನದ ಸಂಸ್ಥಾ ಅದೇ ಏನು? ಇಲ್ಲಾ

ಪಾರ ಶಾಲಾದ ಸಂಸ್ಥಾ ಅದೇ ಏನು ಇಲ್ಲೆ? ಇಲ್ಲಾ

ಉತ್ಸವದ ಸಂಸ್ಥಾ ಅದೆಏನು ಇಲ್ಲೆ? ಇಲ್ಲಾ

ಜಾತ್ರೀದು ಸಂಸ್ಥಾ ಅದೆ ಏನು? ಇಲ್ಲಾ

ಮಠ ಅಂತ ಏನಾದರೂ ಸಂಸ್ಥಾ ಅದೇ ಏನ?

ಅನ್ನಛತ್ರದ ಸಂಸ್ಥಾ ಅದೆ ಇಲ್ಲೆ? ಇಲ್ಲಾ

ಯಾರಾದರೂ ಊಟಾ ಮಾಡಬೇಕಾದರೆ ಹಕ್ಕಿನಿಂದ ಮಾಡತಾರೇನ? ಇಲ್ಲಾ

ಯಾರಾದರೂ ಪರಂಪರೆಗಿ ಅದೆ ಏನ? ಅವರಿಗೆ ವರೆಗೆ ಹೋಗ ಅಂತೇನಿ ಹೋಗತಾರೆ

ನಿಮ್ಮ ಪರಂಪರೆಗಿ ಯಿಲ್ಲದ ಯಾರಾದರೂ ಊಟಾ ಮಾಡತಾರೇನ? ಇಲ್ಲಾ

ನೀವು ಮುಂಜಾನೆ ಉಪದೇಶ ಮಾಡತೀರೇನು ಶಿಷ್ಯರಿಗೆ? ಉಪದೇಶ ಮಾಡತೇನಿ

ಶಿಷ್ಯ ಅಂತಾ ಯಾರಿಗೆ ಅಂತೀರಿ? ನಿತ್ಯ ಯಾರು ಉಪದೇಶ ತಗೊತಾರೆ ಅವರಿಗೆ ಶಿಷ್ಯ ಅಂತೇನಿ

ಈ ಕೆರಿ ಯಾರ ಮಾಲ್ಕೀದು? ಆ ಚಟಗುಪ್ಪಿಯವರ ಮಾಲ್ಕೀದು

ಆ ಕಲ್ಲಿನ ಪಾವಟಿಗೀ ಯಾರು ಕಟ್ಟಿಸ್ಯಾರ? ನಾನೇ ಕಟ್ಟಿಸೇನಿ

ಚಟಗುಪ್ಪಿಯವರನ್ನೇ ಕೇಳಿ ಕಟ್ಟಿಸೀರೊ? ಹಾಗೇ ಕಟ್ಟಿಸಿರೊ? ಅವರನ ಕೇಳಿ ಕಟ್ಟಿಸೇನಿ

ಈ ಸರ್ವೆ ನಂಬರು ಯಾರ ಮಾಲ್ಕೀದು? ಮೊದಲು ಬ್ರಾಂಬರದು ಇತ್ತು

ಈ ಕೈಲಾಸಮಂಟಪದ್ದು ಜಾಗಾ? ಮುಸಲ್ಮಾನರದು ಅದು ಜಹಗಿರದಾರನದು ಇತ್ತು ನಾ ಖರೀದಿ ತೆಗೆದುಕೊಂಡಿರತೇನೆ

ಆ ಕೈಲಾಸಮಂಟಪದ ಉತ್ತರಕ್ಕಿರೊ ಜಮೀನ ನನ್ನ ಮಾಲ್ಕೀದು ಅದು ಬ್ರಾಂಬರದು

ಮೊದಲು ಯಾರ ಮಾಲ್ಕೀಯನು? ಬಹಳವಾಗಿ ಪಾಂಡಪ್ಪಾ

ಅವರು ಯಾವೂರಲ್ಲಿ ಇರತಿದ್ದರು? ಅವರು ಹಾವೇರಿಯಲ್ಲಿರುತಿದ್ದರು

ಬ್ರಾಂಬರ ಸಮಾಧಿಇದ್ದ ಜಾಗಾ? ಪಾಂಡಪ್ಪನ ಜಾಗಾದಲ್ಲಿಯೇ ಇತ್ತು

ಪಾಂಡಪ್ಪ ಈಗ ಇದ್ದಾನೇನು ಅವ ಈಗ? ಇಲ್ಲಾ ಸತ್ತಾನೆ

ನೀವು ಮೊದಲು ಬಂದಾಗ್ಯೆ ಎಲ್ಲಿ ಇರುತ್ತಿದ್ದಿರಿ? ಯಿವಲ್ಲಾರು ಇರತಿದ್ದೆ ಯಲ್ಲಾರು ಮಲಗತಿದ್ದೆ ಇಂಥಾದ ನೇಮದ್ದು ಅಂತಾ ಇರತಿದ್ದಿಲ್ಲಾ

(ಮುಂದೆ ಸಾಗುವದು)

ಜಾಹೀರ ನೋಟೀಸು

ನಾನು ಅಬ್ದುಲಗಫಾರಸಾಬ ವಲ್ದ ರಜಿಕ ಸಾಹೇಬ ವಿಜಾಪೂರ ಸಾ|| ಬಟಿಗೇರಿ ತಾಲ್ಲೂಕ ದಾರವಾಡ ಕೊಡುವ ಜಾಹೀರ ನೋಟೀಸಯೆನಂದರೆ-

ಅಮ್ಮದ ಸಾ|| ವಲ್ದ ಲಾಡಅಮ್ಮದ ಸಾ|| ವ ಲಾಡಅಮ್ಮದ ಸಾ|| ವಲ್ದ ಖಾಜಾ ಸಾ|| ವ ಹವಾಲಿ ಕಾಸಿಂ ಲಾಡಅಮ್ಮದ ಸಾ|| ವಿಜಾಪೂರ ಸಾ|| ಧಾರವಾಡ ಪೈಕಿ ಹಾವೇರಪೇಟ ಇವರು ಧಾರವಾಡ ತಾ|| ಕಸಬಾ ಬಟಗೇರಿ ಗ್ರಾಮದಲ್ಲಿ ಇರುವ ತಮ್ಮ ವ ನಿ ವ ಅಂಗಳಾ ವ ಹಿತ್ತಲಾ ನಮಗೆ ಖರೀದಿ ೧೩೦೦ ರೂಪಾಯಿಗಳಿಗೆ ಕೊಡುವದು ಗೊತ್ತು ಮಾಡಿ ಸದರ ಖರೀದಿಯ ಬಗ್ಗೆ ನಮ್ಮ ಕಡಿಂದಾ ಸಂಚಗಾರ ಕೋಟು ೩೦೦ ರೂಪಾಯಿ ತೆಗೆದುಕೊಂಡು ಆ ಬಗ್ಗೆ ತಾ|| ೫-೩-೫೭ ನೇ ಇಸ್ವಿ ದಿವಸ ನಮ್ಮ ಹೆಸರಲೆ ಪಾವತಿ ಸಹಾ ಬರೆದು ಕೊಟ್ಟಿರುತ್ತಾರೆ ಸದರ ಕರಾರ ಪ್ರಕಾರ ಬಾಕಿ ಉಳಿದ ಹಣವನ್ನು ಪಾವತಿ ತಾರೀಖಿನಿಂದ ಐದು ೫ ತಿಂಗಳಲ್ಲಿ ಖರೀದಿ ಕಾಗದಾ ಬಂದ ನೋಂದಣಿ ಮಾಡಿಸಿಕೊಂಡು ಕೊಡತಕ್ಕದ್ದು ಇರುತ್ತದೆ ಹೀಗೆ ಇದ್ದು ಸದರಿಯವರು ಕರಾರಕ್ಕೆ ವಿರುದ್ಧವಾಗಿ ಸದರ ಮನಿಯನ್ನು ನಮಗೆ ತಿಳಿಸದಂತೆ ನಮ್ಮ ಅಣ್ಣ ತಮ್ಮಂದಿರ ವ ಬ್ಯೇಹಿತರ ಚಿತಾವಣೆಯಿಂದಾ ವ ನಮ್ಮ ಸಮ್ಮತಿ ಇಲ್ಲದೆ ಎರಡನೇದವರಿಗೆ ವಿಕೇವಾಟ ಮಾಡುವ ಉದ್ಯೋಗದಲ್ಲಿ ಇದ್ದಾರೆ ಅಂತಾ ತಿಳಿಯುತ್ತದೆ ಆದರೆ ಯಾವತ್ತು ಜನರಿಗೆ ಈ ನೋಟೀಸಿನ ಮೂಲಕಾ ತಿಳಿಸುವದೇನಂದ್ರೆ ಸದರಿಯವರಿಗೆ ಸದರ ಬಟಗೇರಿಯಲ್ಲಿ ಇದ್ದ ಸದರ ಆಸ್ತಿಯನ್ನು ಎರಡನೇದವರಿಗೆ ಯಾವ ರೀತಿಯಿಂದಾ ವಿಲೇವಾಟ ಮಾಡಲಿಕ್ಕೆ ಏನೂ ಅಧಿಕಾರ ಇರುವದಿಲ್ಲ ವ ಸದರಿಯವರ ಮೇಲೆ ಸದರ ಆಸ್ತಿ ಬಗ್ಗೆ ನಾವು ನಾವೆ ಮಾಲ್ಕತ್ತುವರು ಇದ್ದೇವೆ ಸದರಿಯವರ ಕಡಿಂದಾ ಸದರ ಆಸ್ತಿಯನ್ನು ಯಾವ ಕರಿಂದಲೂ ತೆಗೆದುಕೊಳ್ಳಬಾರದು ಯಾರಾದರು ತೆಗೆದುಕೊಂಡರೆ ಅವರು ಲುಕ್ಸಾನಕ್ಕೆ ಪಾತ್ರರಾದಾರು ಅಂತಾ ಕೊಟ್ಟ ಜಾಹೀರ ನೋಟೀಸ.

ತಾ|| ೧೫-೭-೧೯೫೭

ಸಹಿ— ಅಬ್ದುಲಗಫಾರಸಾ ವ|| ರಜಾಕ ಸಾಹೇಬ ವಿಜಾಪೂರ

ನೋಟೀಸು

ತೀ|| ರಾ|| ರಾ|| ಕೃಷ್ಣಪ್ಪಾ ತಿಮ್ಮಪ್ಪಾ ಪಾಸ್ಕರ ಸಾಕೀನ ಧಾರವಾಡ ಮಂಗಳವಾರಪೇಟ ಇವರಿಗೆ.

ಕೆಳಗೆ ಸಹಿ ಮಾಡುವವರ ಕಡಿಂದಾ ನೋಟೀಸು ಕೊಡುವದೇನಂದರೆ- ನೀವು ತಾ|| ೧೩ ಜುಲೈ ೧೯೫೭ನೇ ಇಸ್ವಿ ದಿವಸ ರಜಿಸ್ಟರ ದ್ವಾರಾ ಕಳುಹಿಸಿದ ನೋಟೀಸು ಮುಟ್ಟಿತು ಮುಜಕೂರು ನಿವು ನೋಟೀಸಿನಲ್ಲಿ ಬರೆದ ಪ್ರಕಾರ ನಾನೇನೂ ನೋಟೀಸು ಕೊಟ್ಟಿರುವದಿಲ್ಲಾ ನಮ್ಮ ಮಾವನಾದ ದೊಡ್ಡಪ್ಪಾ ತಂದಿ ಅಪ್ಪಣ್ಣಾ ಮನಲೇಕರ ಸಾಕೀನ ಧಾರವಾಡ ಇವರು ಒಂದು ನೋಟೀಸು ಕೊಡುವದು ಅದೆ ಅಂತಾ ಅಂದವರು ಸಹೀ ಮಾತ್ರ ಮಾಡಿದೆ ನೋಟೀಸು ಯಾವದು ಅಂಬುವದು ನನಗೆ ಗೊತ್ತಿಲ್ಲಾ ಆದರೆ ನನಗೂ ಮತ್ತು ನಿಮಗೂ ನನ್ನ ಹೆಂಡತಿ ಕಳಿಸುವ ಸಮ್ಮಂಧಿ ತಂಟೇ ವಗೈರೆ ಏನೂ ಇಲ್ಲಾ ಮತ್ತು ದಾಗೀನೆ ಸಹಿತಾ ನನ್ನ ಹೆಂಡತಿ ಕಳಿಸಬೇಕು ಅಂತಾ ನಾನು ಅನ್ನುವದಿಲ್ಲಾ ಅದ್ದರಿಂದಾ ನಾನು ಕೊಟ್ಟ ನೋಟೀಸು ನಿಮಗೆ ಲಾಗೂ ಇಲ್ಲಾ ಅದರ ಹಕೀಕತ್ತು ನನಗೆ ಮೊದಲೇ ತಿಳಿದಿದ್ದರೆ ನಾನು ನೋಟೀಸು ಕೊಡುತ್ತಿದ್ದಿಲ್ಲಾ ನೀವು ನನ್ನ ಹೆಂಡತಿ ಕರಿಯಲಿಕ್ಕೆ ಬಂದರೆ ನನ್ನ ತಾಯಿ ತಂಟೇ ತೆಗೆದಳು ಅವಾಗ್ಯೆ ನಾಲ್ಕು ಮಂದಿ ಸಮ್ಮುಖದ ಫಕ್ತ ನನ್ನ ಹೆಂಡತಿನ್ನ ಮಾತ್ರ ಕರಕೊಂಡು ಹೋದಿರಿ ಆವಾಗ್ಯೆ ದಾಗೀನೆ ವಗೈರೆ ಯಾವೂ ನನ್ನ ತಾಯಿ ಕೊಡಲಿಲ್ಲಾ ಈ ಮಾತು ಖರೇ ಅದೆ ಈಗ ನನ್ನ ಹೆಂಡತಿಯನ್ನು ಕಳಿಸಿಕೊಡಲಿಕ್ಕೆ ನಿಮಗೆ ಕೇಳಿದರೆ ನೀವು ಕಬೂಲ ಮಾಡಿದಿರಿ ಆ ಪ್ರಕಾರಕ್ಕೆ ಕಳಿಸಿಕೊಡಬೇಕು ಮತ್ತು ನೀವು ಬರೆದ ಪ್ರಕಾರಾ ನನ್ನ ಅಜ್ಜಾ ವಗೈರೇರು ಒಂದು ಕಾಗದಾ ಪೋಕಳ ಮಾಡಿಕೊಂಡದ್ದು ಖರೇ ಅದೆ ನಿಮ್ಮ ಹೇಳಿಕೆಪ್ರಕಾರಾ ಉಲಟ ಕಾಗದಾ ಮಾಡಿಸಿಕೊಳ್ಳುತ್ತೇನೆ ನಾನು ಸಣ್ಣವನು ಇದ್ದು ಈಗ ವಯಸ್ಸಿಗೆ ಬಂದಿದ್ದೇನೆ ನನಗೆ ಇನ್ನೂ ವ್ಯವಹಾರಜ್ಞಾನ ಇರುವದಿಲ್ಲಾ ನಿಮ್ಮ ಹೇಳ್ಕಿ ಪ್ರಕಾರಾ ನಡಕೊಳ್ಳಲಿಕ್ಕೆ ನಾನು ಕಬೂಲ ಇದ್ದೇನೆ ತಿಳಿಯೋದು

ತಾರೀಖು ೧೫ನೇ ಜುಲೈ ೧೯೫೭ನೇ ಇಸ್ವಿ

ಸಹಿ- ಜೀವಣ್ಣಾ ಅಣ್ಣಾಪ್ಪಾ ತ್ರಾಸದ

ಈ ಪತ್ರವನ್ನು ಅಂಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ರಾಮನು ಸದರ ಪಾವತಿ ಸಂಬಂಧದಿಂದಾ ಮತ್ತ ಲಂಚದಿಂದಾ ಒಳಗಡೇ ನಮ್ಮ ವ ನಿಮ್ಮ ಮೇಲೆ ಫಿರ್ಯಾದಿಮಾಡಿದ್ದರಿಂದಾನೇ ನೀವು ಅವನಿಗೆ ಪೆ ದರಿದಂತೆ ತೋರುತ್ತದೆ ಆದರೆ ಸದರ ಪಾವತಿ ಬಿಟ್ಟಿ ಅಲ್ಲಾ ಅಂತಾ ಅಪೀಲ ಕೋರ್ಟಿನಿಂದಾ ನಿಖಾಲಿ ಆಗಿದ್ದು ಇನ್ನು ಮುಂದೆ ನೀವ ಹೆದರತ ಕ್ಕ ಕಾರಣವಿಲ್ಲಾ ಗಂಗಾರಾಮನು ನಮ್ಮ ಕ ಡಿಂದಾ ರೋಖು ರೂಪಾಯಿಗಳನ್ನು ನಿಮ್ಮೆಲ್ಲರ ಸಮಕ್ಷಮಾ ತೊಗೊಂಡು ಪಾವತಿ ಬರಕೊಟ್ಟು ಹಿಂದಿನಿಂದಾ ಅನ್ಯಾಯದಿಂದಾ ಕೆಲಸ ನಡಿಸಿದ್ದು ನಿಮಗೆ ಗೊತ್ತೇ ಅದೆ ಈಗ ಗಂಗಾರಾಮನು ನು ಸಾವಕಾರನಿದ್ದು ಪುನಃ ಯೇನಾದರೂ ಕೆಲಸ ನಡಿಶ್ಯಾನೆಂಬ ಹೆದರಿಕೆಯಿಂದಾಗಲೀ ಅಥವಾ ಅವ ನ ಭುಲತಾಪಿ ವ ಮೋಸಕ್ಕೆ ಒಳಪಟ್ಟು ಯಾವ ದಾದರೆಸಿಂದು ಕಾರಣದಿಂದಾ ವ ಯಾವದೇ ಆ ಕಾರದಿಂದಾ ನೀವು ಸದರ ಪಾವತಿ ಗಂಗಾರಾಮನಿ ಗೆ ಕೊಡಬಾರದು ಸದರ ಪಾವತಿ ನಮ್ಮ ಮಾಲ್ಕಿ ದು ಇದ್ದು ಅದನ್ನ ಈ ನೋಟೀಸ ಮಟ್ಟಿದ ೮ ದಿವಸದೊಳಗಾಗಿ ನೀವು ನಮ್ಮ ಕಡಿಗೆ ಕೊಟ್ಟು ನಮ್ಮ ಕಡಿಂದಾ ಪಾವತಿ ಒಯ್ಯಬೇಕು ಇದಾ ಚತ ಇದರಂತೆ ಮಾಡದೆ ಸದರ ಪಾವತಿ ನೀವು ಗಂ ಗಾರಾಮನಿಗೆ ಕೊಟ್ಟಲ್ಲಿ ಅಗರ ಗಫಲತ ಮಾಡಿ ದಲ್ಲಿ ಇದರಿಂದ ನಮ್ಮ ಲುಕ್ಸಾನ ಏನಾದರೇ ಆಗು ವ ಸಂಭವವಿದ್ದು ಆ ಲುಕ್ಸಾನ ವಗೈರೆ ಸಂಬಂಧ ದಿಂದಾ ಮತ್ತು ನೀವು ನಮ್ಮ ಮೇಲೆ ವಿಶ್ವಾಸ ಘಾತಮಾಡಿದ ವಗೈರೆ ಕಾರಣಗಳಿಂದಾ ನಿಮ್ಮ ಮೇಲೆ ರೀತಿ ಪ್ರಕಾರ ನಾವು ಕೆಲಸ ನಡಿಸತಕ್ಕ ಭಾ ಗ ಬರುವದು ಅನ್ಯಾಯಮಾಡದ ನಮ್ಮ ಪಾವತಿ ನಮ್ಮ ಕೈಯಲ್ಲಿ ಕೊಡಬೇಕು ಖಿರೇ ಕಲಸದಲ್ಲಿ ನೀವು ಗಂಗಾರಾಮನಿಗೆ ಹೆದರತಕ್ಕ ಕಾರಣವೂ ಇಲ್ಲಾ ತಿಳಿಯುವದು ತಾ| ೩೦-೬-೧೯೩೮

ಸಹಿ- ಇಂಗ್ಲಿಷ, ಲಿಂಗೋ ಬಸಪ್ಪ ಯಜ ಮಾನ, ನವಲಗುಂದ

ನೋಟೀಸಿನ ಹಂಗಳು.

ಸಿಂಗಲ ಕಾಲಮಿನ ಇಂಚು ಪಂಗಳಿಗೆ ಒ ಮ್ಮೆ ರೂಪಾಯಿ ಮುಂದ ಪ್ರತಿಯೊಂದು ಮಳೆ ಬರುವರ ಆಣೆ ಇಂಗ್ಲಿಷ ಪ್ರತಿಯೊಂದು ಮಳ ಐದು ಆಣೆ ಸರಕಾರ, ಮ್ಯುನಿಸಿಪಾಲಟಿ ಲೋಕಲ ಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವ ಜನಿಕ ನೋಟೀಸುಗಳಿಗ ನಾಲಗೆ ಮೂರಾಣೆ— ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದ ಕ್ಕೆ [illegible]

ನೋಟೀಸು

ಕೆಳಗೆ ಸಹಿಮಾಡಿದವರು ಈ ನೋಟೀಸಿನಿಂ ದ ಯಾವತ್ತೂ ಜನರಿಗೆ ತಿಳಿಸುವದೇನಂದರೆ- ನಾ ನು ನನ್ನ ೧೯-೧ ನೇ ಇಸ್ವಿಯಲ್ಲಿ ಶಂಕರೆಪ್ಪಾ ರಂ ಗಪ್ಪಾ ಕಡಕೋಳ ಈತನ ಮೇಲೆ ದಾವೇಮಾಡಿ ಅವನ ಮಾಲ್ಕಿ ಮನಿ ಧಾರವಾಡ ಶಹರ ಭೂಸ ಗಲ್ಲಿಯಲ್ಲಿರೋದು ಕಬ್ಜಾ ಜಪ್ತಿ ಮಾಡಿಸಿರತೇನೆ ಈಗ ಅವನು ಅದನ್ನು ಮಾರತಾನಂತಾ ಕೇಳತೇನೆ ಈ ಮೊದಲು ಬೇನೆಯವರ ಹೆಸರಿನಲ್ಲಿ ಮಾಡುವ ಖರೀದಿಪತ್ರ ಪೋಕಳ ಆದೆ ಅಂತಾ ಠರಾಯಿಸಲಿ ಕ್ಕೆ ದಾವೇ ಮಾಡತಕ್ಕವನಿರುತ್ತೇನೆ ಕಾರಣ ಸೂ ಚನೆಮಾಡುವದೇನಂದರೆ ಸದರೀ ಮನಿ ಯಾರೂ ಖ ರೀದಿ ತಗೊಳ್ಳಬಾರದು ಜರ ತಕ್ಕೊಂಡರೆ ಲುಕ್ಸಾ ನಕ್ಕೆ ಗುರಿಯಾದೀರಿ ತಿಳಿಯುವದು ತಾ ೧೯ ೭-೩೮

ಸಹಿ- ಪಕ್ಕೀರಪ್ಪಾ ಗುರಶಿದ್ದಪ್ಪಾ ಮೆಣಸಿ ಕಾಯಿ

ನೋಟೀಸು

ರಾ|| ರಾ|| ಹೊಳಿಯಪ್ಪಾ ತಂದಿ ವಿರೂಪಾ ಪಾಕ್ಷಪ್ಪ ಸಾ|| ಮುದೇನಗುಡಿ ತಾ|| ರೋಣ ಇವರಿಗೆ-

ನಾನು ಕೆಳಗೆ ಸಹಿಮಾಡಿದವನು ಈ ನೋ ಟೀಸಿನ ಮೂಲಕ ತಿಳಿಸುವದೇನಂದರೆ-

ನೀನು ನನ್ನ ಲಗ್ನದ ಗಂಡನಿದ್ದು ಕೆಲವು ದಿನ್ನ ಪ್ರೀತಿಯಿಂದ ಪ್ರಪಂಚಮಾಡತಾ ಬಂದು ಆ ಬಳಿಕ ಬರಬರುತ್ತ ನನ್ನನ್ನು ಕಳೆಗೆ ನಿಮ್ಮ ತವರುಮ ನಿಯವರ ಚಿತಾವ ಗೆ ಒಳಪಟ್ಟು ನನ್ನ ಮೇಲಿನ ಪ್ರೇ ಮಭಾವನ್ನು ಬಿಟ್ಟು ಏನು ತರದ ವೈಮನಸ್ಸು ಮನಸ್ಸಿನಿಂದಾ ನನ್ನನ್ನು ದೂಷಣಮಾಡಿ ನಮ್ಮ ಮನಿಯಲ್ಲಿ ಕಳುಹಿಸದು ತವರುಮನಿಗೆ ಹೋದಿ ಆ ಗ್ಗೆ ಊರೊಳಗಿನ ನಾಲ್ಕು ಮಂದಿ ಸಂಭಾವಿತರ ನ್ನು ಕರಕೊಂಡು ನಿನ್ನನ್ನು ಕರಿಯಲಿಕ್ಕೆ ಬಂದರೆ ನೀ ನು ನನ್ನ ಮನಿಗೆ ಬರೋದಿಲ್ಲಾ ನಿನ್ನ ಕೂಡ ಬಾಳ್ವೆ ಮಾಡೋದಿಲ್ಲಾ ಅಂದ ಮತ್ತು ನಿಮ್ಮ ತಂದಿಸಹಿತ ಕಳಿಸೋದಿಲ್ಲಾ ಅಂತಾ ಕರಿಯಲಿಕ್ಕಬಂದ ಪಂಚರ ಸಮಕ್ಷಮ ಹೇಳಿದ್ದರಿಂದಲೂ ನೀನು ಪತಿ ಆಜ್ಞಾ ಮೀರಿದ್ದರಿಂದಲೂ ಮತ್ತು ನಿನ್ನ ತಂದೆ ವ ಅಣ್ಣನ ಚಿತಾವಣಿಗೆ ಲಕ್ಷಗೊಟ್ಟು ನನ್ನನ್ನು ಬೇದಿಸಿದಮಾ ಡಿದ್ದರಿಂದಲೂ ಆಗ್ಯೇನೆ ಪಂಚಜನರ ವಿದ್ಯಮಾನ ಉ ಭಯತರ ಕಬೂಲಿಯಿಂದಾನೆ ಗಂಡ ಹೆಂಡತಿಂಬುವ ಹಕ್ಕನ್ನು ನಷ್ಟಪಡಿಸಿಕೊಂಡು ಲಗ್ನದ ವಿಮೋಚನಕ್ಕಾ ಗ ಪತ್ರ ಮಾಡಿಕೊಂಡು ಕೊಡತೊಗೊಳ್ಳುವದು ಸ ಹಾ ನಿಖಾಲ ಮಾಡಿಕೊಂಡು ನೀನು ನಿನ್ನ ಸ್ವತಂತ್ರ ಪಕ್ಕಿನಿಂದಾ ತವರ ಮನಿಯಲ್ಲಿ ಬಾಳ್ವೆ ಮಾಡತಾ ಬಂದು ಏಳೆಂಟು ದಿನಕ್ಕೆ ದುರ್ಲಕ್ಷನಕ್ಕೆ ಬಿದ್ದು ವ್ಯಭಿ ಚಾರತ್ವದಿಂದಾ ಗರ್ಭಿಣಿಯಾಗಿರುತ್ತೀ ಆ ತಾಬಾ ತ್ಮೆ ತಿಳಿದಡೆ ಕದಾಚಿತ ನೀನು ಗರ್ಭಿಣಿಯಿದ್ದದ್ದು ನಿಜವಾಗಿ ನಿನ್ನ ಹೊಟ್ಟಿಯಲ್ಲಿ ಜನಿಸಿದ ಕೂಸು ನ ನಗೇನೂ ಸಂಬಂಧಿಸಿದ್ದು ಅಲ್ಲಾ ಮತ್ತು ಅದ ನಿಮ್ಮ ಸ್ವಂತ ಊರಿನ ಕೂಸು ಅನಿಸುತ್ತದೆ ಕಾ ರಣ ನನ್ನ ಘರಾಣೆದ ಮಿಳಕತುಗಳ ಮೇಲೆ ಸದಿ ಕೂಸಿನ ಹಕ್ಕು ನಡಿಯಲಾರದು ಮಂದು ಮೇಳೆ ಗ್ರಾಮದ ಜನನದ ರಜಿಸ್ಟರದಲ್ಲಿ ನನ್ನ ಹೆಸರು ದಾ ಖಲ ಮಾಡಿಸಿದರೂ ಅದು ಕಾಯ್ದೆ ವಿರುದ್ಧ ಆಗು ತ್ತದೆ ತಿಳಿಯುವದು ಈ ನೋಟೀಸಿನ ಖರ್ಚು ನಿ ನ್ನಮೇಲೆಅದೆ

ತಾ|| ೧೭ ೭-೩೮

ಈ ಎಡಗೈ ಹೆಬ್ಬೆಟ್ಟಿನ ಗತಾರ್ ಸಣ್ಣಮರಿಯ ಪ್ಪಾ ಬಿನ್ ಶಿದ್ದಪ್ಪಾ ಕಿತ್ತಿ ಸಾ|| ಮುದೇನಗುಡಿ ತಾ||ರೋಣ ಯಿತನದು ಸಹಿ

ನಿಮಗೆ ಉತ್ತಮ [illegible] ಯುವ

ಒಣ ಕಟ್ಟಿ[illegible] [illegible]?

ನಮ್ಮ ಕಟ್ಟಿಗಯು ಉತ್ತಮ [illegible] ತರದ ದಿಂಡು, ಮತ್ತಿ [illegible] ಕಟ್ಟಿ ಗೆಗಳು ಒಣ ಸಿಗುಯೀ ಸಿಗುತ್ತವೆ ಮಳೆಗಾಲದಲ್ಲಿ ಒಣಗಿದ ನಮ್ಮಲ್ಲಿ ಯಂತ್ರ ಎರಡನೇ ಕಡೆ [illegible] ಸಿಚಿಕವು. ಮಳೆಗಾಲ ದಿವಸದಲ್ಲಾಗ [illegible] ಕಟ್ಟಿಗೆಯು ತಾಪವನ್ನು ಕಳೆಬೇಕೆಂದು [illegible] ನು ಕಟ್ಟಿ ಗೆಯ ಅಡ್ಡೆಯನ್ನು ಜನರ [illegible] ಇಟ್ಟಿ ರುತ್ತೇವೆ. ಗ್ರಾಹಕರು [illegible] ನನ್ನು ತ ಕ್ಕೊಳ್ಳಬೇಕು.

ಅಡ್ಡೆಯ,

ಬಾಳಾಚಾರ್ಯ [illegible] ಚಾರ್ಯ

ಮುನವಳ್ಳಿ

ಧಾರವಾಡ.

(ಸೆಂಟ್ರಲ ಬ್ಯಾಂಕಿನ ಗಡಿಯಾರದ ಎದುರಿಗೆ)

ಸಾಸಮಯ

ಎ ರ್. ಶ್ರೀನಿವಾಸಯ್ಯಂಗಾರ್, ಗೌರ ವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ರಂಗಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1440

ವಿಜಯ

ನಿತ್ಯಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶನಿವಾರ ತಾರೀಖು ೨೦ ನೇ ಜುಲೈ ೧೯೩೯ (ಸಂಚಿಕೆ ೧೬೧

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಂದು ವರ್ಷದ ಕರಾರಿನಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ३॥ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ३॥ ರೂ.

ಸೇವ್ಹಿಂಗ್ಸ ಬ್ಯಾಂಕ:— ಒಂದು ವರ್ಷದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ३ ರೂ.

ಸರಕಾರಿ ಹಾಗೂ ಇತರ ಸಾಲಗಳು.

ಬಂಗಾರದ ದಾಗಿನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಅವುಗಳ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಒರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಒರುವದು. ಸಾಲ ಹಾಗೂ ರೋಖಡಾ ಉದಾರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕ ಹುಂಡಿಗಳನ್ನು ಕೊಡುವದಕ್ಕಾಗಿ ಶಾಖೆಗಳಿಗೆ [illegible] ಕೊಡುವದರಲ್ಲಿ ಒರುವದು ದರ ಹಾಗೂ ನಿಯಮಗಳ ಪ್ರತಿಗಳೂ ವಾರ್ಷಿಕ್ಯಾಂ ಪತ್ರಗಳೂ ಸದರ ಬ್ಯಾಂಕದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — ಬಿ. ಜೋಶಿ,
ತಾ॥ ೧೬-೨-೨೮ — ಏಜಂಟರು

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಎಂಟು ಲಕ್ಷದ ಮೇಲುಂಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ,

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಶಂಕರಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

[illegible] ಮಂಗಳವಾರ ಪೇಟೆ, [illegible] ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ [illegible] ಮುದ್ದತಿಯ ಕರಾರಿನಿಂದ [illegible] ದೊರೆಯುವದು. ಬಡ್ಡಿಯ ದರ [illegible] ತಿಳಕೊಳ್ಳಬೇಕು.

೨ ಸರಕಾರ [illegible] ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ [illegible] ಲಾಭಕರವಾಗಿ ಅವುಗಳ ಮಾರಾಟ [illegible].

೩ ಮುದ್ದತಿ ಠೇವಿನ [illegible] ರಕಮಿನ ಕನಕ [illegible] ಬಡ್ಡಿಯ ದರವನ್ನು [illegible] ವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ [illegible].

೫ ಬ್ಯಾಂಕಿಗೆ ಸಂಬಂಧಿಸಿದ [illegible] ವ್ಯವಹಾರ [illegible] ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು [illegible] ವೇಳೆಯಲ್ಲಿ [illegible] ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಧಂಡಿಮಾಳ
ಮ್ಯಾನೇಜಿಂಗ [illegible].

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	३-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ. ೨೦-೭-೨೫ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಪ್ರಿಯು
ಶ್ರೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ೩
ದೀ "ವಿಜಯಂ" ಶ್ರೀಕರರುಣ ।
ನಾ ವಿಹಿತಂಗಳ ವಿವರಿಸಿನಲಿವುದು ಸ್ವಾಂತಂ ॥೧॥

ಶ್ರೀ. ಸಿದ್ಧಾರೂಢ ಮಹಾಸ್ವಾಮಿಗಳ ಮೇಲಿನ ದಾವೆಯು.

ಸ್ವತಃ ಸ್ವಾಮಿಗಳ ಜವಾಬು

(ಹಿಂದಿನಿಂದ ಮುಂದೆಸಾಗಿದ್ದು)

ತಾ॥ ೧೭-೭-೧೯೨೫

. ವಾದಿಯು ಇಲ್ಲಿ ಈಗಿರುವದಿಲ್ಲಾ ಅವನು ನನ್ನ ಶಿಷ್ಯನಲ್ಲಾ. ಶರಣಪ್ಪಾ ಮತ್ತು ಗುರಪ್ಪಾ ಇವರು ನನ್ನ ಶಿಷ್ಯಂದರಿರುತ್ತಾರೆ ಸೋಮಪ್ಪಾ, ಹಣಮಂತಪ್ಪಾ, ದಿವಟೆ ಇವರು ನನ್ನ ಶಿಷ್ಯಂದರಲ್ಲಾ. ಅವರು ನಿತ್ಯಾ ಬರುದಿಲ್ಲಾ. ವಸಂತರಾವ ದಾಭೋಳಕರ ಇಲ್ಲಿಗೆ ಬರುತ್ತಿರುತ್ತಾರೆ. ನಾನು ಧಾತುನಾಮ ಸಂವತ್ಸರದಲ್ಲಿ ೪೧ ವರ್ಷದವನಿದ್ದೆನು. ಈ ಇಮಾರತುಗಳನ್ನು ಕಟ್ಟಲಿಕ್ಕೆ ಹತ್ತಿ ೩೦ ವರ್ಷಗಳಾದವು. ಇದಕ್ಕೂ ಮೊದಲು ಚಿದ್ದಾನಂದ ಸ್ವಾಮಿಯ ಸಮಾಧಿ ಗುಡಿಯಲ್ಲಿದ್ದೆ. ಮೊದಲು ಈ ಜಾಗಾದಲ್ಲಿ ಮೂದು ಚಪ್ಪರ, ೧ ಭಾವಿ, ವಂದು ಆಶ್ರಾಂ ಗೋಡಿ ಇತ್ತು ಅಲ್ಲಿ ಈಗ ಇಲ್ಲಾ ಬಿದ್ದಾವೆ. ಅವನ್ನೆಲ್ಲಾ ನಾನೇ ಕಟ್ಟಿಸಿದ್ದೆ. ಕಾಂಡಪ್ಪಾ ಇಕಡೆಗೆ ಬರುತ್ತಿದ್ದ.. ಅವನು ಭೂಮಿ ಕೊಟ್ಟ. ೬॥ ಎಕರೆ ಅಥವಾ ಗುಂಟೆ ಏನೋ ಅಂತಾರೆ. ಅವನ ಮಗನು ಆ ಜಾಗಾ ೭ ಮಂದಿ ಹೆಸರಿನ ಕೊಟ್ಟು ಅವರು ನನಗೆ ಅದನ್ನು ಭಿಕ್ಷಾ ಕೊಟ್ಟರು. ಆ ಏಳು ಜನರಿಗೆ ನಾನು ಖರೀದಿ ತಗೊಳ್ಳಲಿಕ್ಕೆ ಹೇಳಿದ್ದೆ. ಆ ಪ್ರಕಾರ ಅವರು ತಗೊಂಡಿದ್ದರು. ಭಿಕ್ಷಾದಿಂದ ಬಂದ ಹಣಾ ನನ್ನದೇ ಇತ್ತು. ಅವರಿಂದ ತಗೊಂಡರು. ಕಾಂಡಪ್ಪ ಕೊಟ್ಟ ಮೇಲೆ ೨೫ ವರ್ಷದ ಮೇಲೆ ಖರೀದಿ ಆಗಿರಬಹುದು. .. ಮಂದಿ ನನಗೆ ಕೊಟ್ಟು ಈಗ ೩೦ ವರ್ಷ ಆಗಿರಬಹುದು. ಆ ಜಮೀನು ನನ್ನ ತಾಬೇದಲ್ಲಿರುತ್ತದೆ. ಗಣೇಶಪ್ಪಾ ಟಿಮಲ್ಲಿಯ ವಂದು ಜಾಗಾದ ಮೇಲೆ ಇಮಾರತ ಕಟ್ಟಿಸಿರುತ್ತೇನೆ. ಮೊದಲ ಮೇಟಿ ಇಲ್ಲಾ, ಅದನ್ನು ಭಾಡೆ ಕೊಟ್ಟಾರೆ ಇದರಿಂದ್ಲ ೧೦-೧೨ ಸಾವಿರ ರೂಪಾಯಿ ಭಾಡೆ ಬರುತ್ತದೆ. ನಾನು ದಿನಾಲು ಉಪದೇಶ ಕೊಡುವದು ನಿಯಮವಿಲ್ಲಾ. ನನಗೆ ನಾಲಾ ಕೇಳಲಿಕ್ಕೆ ಬಂದಿದ್ದರು. ರಾತ್ರಿಯಲ್ಲಿ ದಿವಟೆ ಭೀಮಪ್ಪಾ ವಗೈರೇರು ಬಂದಿದ್ದರು. ನಾನು ಕೊಡಲಿಲ್ಲಾ. ಯಾವಾಗರ ಇಲ್ಲಿಗೆ ಪಂಡಿತರು ಬರುತ್ತಾರೆ ಮತ್ತು ಹೋಗುತ್ತಾರೆ ಶಿವಪುತ್ರನದು ನನಗೆ ಗೊತ್ತದೆ. ಅವನು ಈಗ ಇಲ್ಲಿ ಇರುವದಿಲ್ಲ. ಅವನು ನನ್ನ ಶಿಷ್ಯನಾಗಿಲ್ಲಾ. ನಾನು ನನ್ನ ಚರಿತ್ರ ಛಾಪಿಸಂತ ಯಾರಿಗೂ ಹೇಳಿಲ್ಲಾ. ಯಾರೂ ನನಗೆ ಚರಿತ್ರ ಬರದು ಕೋರಿಸಿಲ್ಲಾ, ಶಂಕರಾನಂದನು ನೆನಪಿಗೆ ಬರುವದಿಲ್ಲ. ದಿನಾಲು ಅನ್ನ ಛತ್ರ ನಿಯಮದಿಂದ ಇಟ್ಟಿಲ್ಲಾ. ಶಿವರಾತ್ರಿಯಲ್ಲಿ ಬಡಬಗ್ಗರಿಗೆ ಅನ್ನಛತ್ರ ಇಟ್ಟಿಲ್ಲಾ. ಶಿವರಾತ್ರಿಯಲ್ಲಿ ಉಳಿದ ಜಾತಿ ಜನರು ಅನ್ನಛತ್ರ ಇಟ್ಟಿರತ್ತಾರೆ. ಅವರಿಗೆ ಸಾಮಾನು ನನ್ನ ಹೇಳ್ಕಿ ಪ್ರಕಾರಾ ಖರೀದಿಗೆ ತೆಗೋತಾರೆ. ನನ್ನ ಸ್ಥಾನವು ಊರ ಹೊರಗೆ ಅದೆ. ಎರಡನೆ ಜನರು ನನ್ನ ಜಾಗಾ ಬಿಟ್ಟು ಹೊರಗೆ ಇಟ್ಟಿರುತ್ತಾರೆ. ನನ್ನ ಕಡಿಗೆ ಮುಂಜಿ ಆಗುವದದೆ ಲಗ್ನ ಆಗುವದದೆ ಥಂತಾ ನನ್ನ ಕಡಿಗೆ ಬರುತ್ತಾರೆ. ಆಕಾಲಕ್ಕೆ ಹಣಾ ಕಡ್ಮಿ ಬಿದ್ದರೆ ರೂಪಾಯಿ ಆಠ ಆಣೆ ಕೊಡುತ್ತೇನೆ. ಶರಣಪ್ಪನು ಇಮಾರತ ಕಟ್ಟಿದ್ದು ಗೊತ್ತದೆ. ಅವರಿಗೆ ಜಾಗಾ ಫುಕಟ ಕೊಟ್ಟಿರುತ್ತೇನೆ. ಅದನ್ನು ನನಗೆ ಮೂರಸಾವಿರಪ್ಪ ಕೊಟ್ಟಿದ್ದಾ. ಕೆರಿಯಿಂದ ಇರುವ ರಸ್ತೇದ ಜಾಗಾ ಚಟಗುಬ್ಬಿಯವರದು. ಆ ಜಾಗಾದ ಮೇಲೆ ಜನರು ಅಂಗಡಿ ಹಚ್ಚುತ್ತಾರೆ. ಕಾಂಡಪ್ಪನ ಜಾಗಾ ಇಮಾರತ ಕೂಡಿ ಸಿದ್ಧರ ಆಥವಾ ಆಶ್ರಮ ಆಗಬೇಕು. ಇದರ ಮೇಲೆ ಯಾರೂ ಏನೂ ಮಾಲ್ಕಿ ಕೋರಿಸಿಲ್ಲಾ. ಕಾಂಡಪ್ಪ ಕೊಟ್ಟ ಜಾಗಾದ ಮೇಲೆ ಇವತ್ತಿನವರಿಗೆ ನಾನೇ ಮಾಲೀಕನು ಇರುತ್ತೇನೆ. ಮತ್ಯಾಂದು ಇಲ್ಲಾ ಇದು ಸಂಗೂ ಮಾಲ್ಕೀ ನಾತೇದಿಂದ ವಹಿವಾಟ ಉಳಿದ ಜಾಗಾದ ಮೇಲೆ ನನ್ನ ಮಾಲ್ಕಿಯಿಂದ ವಹಿವಾಟ ಮಾಡುತ್ತಾ ಬಂದಿರತ್ತಾರೆ ಜಾತ್ರಿ ವಗೈರೆ ಮಾಡಿಸುವದು ವಗೈರೆ ನನ್ನ ಮರ್ಜಿ ಪ್ರಕಾರ ಇರುತ್ತದೆ. ಉಪದೇಶ ಮಾಡು ನನ್ನ ಮರ್ಜಿ ಮೇರಿಗೆ ಇರುತ್ತದೆ. ಕಲೆಕ್ಟರ ಕಡಿಗೆ ನಾನು ಅರ್ಜಿ ಮಾಡಲಿಕ್ಕೆ ಹೇಳಿಲ್ಲಾ. ಲೋಕಲಬೋರ್ಡಿಗೆ ಅರ್ಜಿ ಮಾಡಲಿಕ್ಕೆ ಹೇಳಿಲ್ಲಾ ಅರ್ಜಿ ಮಾಡಿದ್ದನ್ನು ಇವತ್ತಿಗೂ ಯಾರೂ ಹೇಳಿಲ್ಲಾ. ಈ ಇಮಾರತ ಕಟ್ಟಿಸುವಕ್ಕೆ ದಂಡದ ಹಣಾ ಕೊಟ್ಟಿದೆ ಊರೊಳಗಿನ ಅಂಗಡಿ ಭ ಡೆವ್ಯ ಬರಿಸಿಕೊಂಡೇನಿ ಮುನಸಿಪಾಲಟಿ ಟ್ಯಾಕ್ಸ ಇದ್ದ ದಿವಸ ಕೊಡುತ್ತಾರೆ

ಬಾರಡೋಲಿಯ ಎರಡನೇ ದೊಡ್ಡ ಜಯ.

—(೦)—

ಆತ್ಯಾಂತ ರೆವ್ಹಿನ್ಯೂ ಕೋಡಿನಲ್ಲಿ ದುರಸ್ತಿಗಳು.

—(೦)—

ಬಾರಡೋಲಿಯ ಜಯದನಂತರ ಮ. ಹಾಂತ್ಸ್ಯ ದೇಶದ ಭಾಗಗಳಾ, ವಸಯಿ, ಪಾಲಘರ ಮತ್ತು ಮಾಲೇಗಾಂವದಲ್ಲಿಯೂ ರಿವ್ಹಿಜನ್ನದ ಭೂತವೆದ್ದು, ರೈತರು ಬಾರಡೋಲಿಯಂತೆ ಸತ್ಯಾಗ್ರಹದ ರಣಭೇರಿ ಹೊಡೆಯಲು ಸಿದ್ಧರಾದರು ಇದರ ಬೇಗೆಯು ಬೇರೆ ಕಡೆಯಲ್ಲಿಯೂ ಹಬ್ಬಬಹುದಾಗಿತ್ತು, ರಿವ್ಹಿಜನವು ದೋಷಪೂರ್ಣವಾಗಿರುತ್ತದೆಂದು ಬಾರಡೋಲಿಯಿಂದ ಸ್ಪಷ್ಟವಾಯಿತು. ಆದರೂ ಬೇರೆ ತಾಲೂಕುಗಳಲ್ಲಿ ರಿವ್ಹಿಜನಗಂತೆ ಹಪ್ತೆ ವಸೂಲಮಾಡುವದೆಂದರೆ- ಹಾದೀ ಹೋಗುವ ದೆವ್ವವನ್ನು ಮನೆ ಹೊಗಿಸಿಕೊಳ್ಳುವಂತಾದ್ದರಿಂದ ಸರಕಾರದವರು ಮೇಲಿನ ತಾಲೂಕ ... ವ್ಹಿಜನ ಹಪ್ತೆ ವಸೂಲಿಯನ್ನು ತಹಕೂಬ... ... ಲ್ಯಾಂಡ ರೆವ್ಹಿನ್ಯೂ ಕೋಡಿನಲ್ಲಿಯೇ ... ಮಾಡಬೇಕೆಂದಿದ್ದಾರೆ ಸರಕಾರಕ್ಕೆ ಹುಟ್ಟಿ... ಸುಬುದ್ಧಿಯು ಬಾರಡೋಲಿಯ ಎರಡನೆಯ ಪಪ್ಪ ಜಯವೇ ಸರಿ

ವಿಜಾಪುರದ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಮೇಲೆ ಶಿಕ್ಷಕರ ದಾವೆಯು

-೦-

ವಿಜಾಪುರದ ಹಿಂದಿನ ಡಿಸ್ಟ್ರಿಕ್ಟ ಲೋಕಲ ಬೋರ್ಡಿನವರು ಅನೇಕ ಜನ ಶಿಕ್ಷಕರಿಗೆ ವರ್ಗ, ಹಿಂಬಡತಿ, ದಂಡಮಾಡಿದ್ದು ... ವಿಷಯವಾಗಿದ್ದೆ, ಇವರು ಬೋರ್ಡಿನ ವಿರು... ದೆ. ರಾಜುರೆಕ್ಟರ ಸಾಹೇಬರ ಕಡಿಗೆ ಅರ್ಜಿಮಾಡಿದರು. ಹೀಗೆ ಅರ್ಜಿ ಮಾಡಿರೆಂದು ಇನ್ಸಪೇಕ್ಟರರಿಂದ ಬಂದ ಹುಕುಮಿನ ಮೇರೆಗೆ ಅರ್ಜಿಮಾಡಿದ್ದರು ಎಂಟು ತಿಂಗಳಾದನಂತರ ಡಾಯರೆಕ್ಟರ ಸಾಹೇಬರು ಈ ಕೆಲಸದಲ್ಲಿ ಕೈಹಾಕುವದಿಲ್ಲೆಂದು ಉತ್ತರಕೊಟ್ಟು ಶಿಕ್ಷಕರ ನಿರಾಶೆ ಮಾಡಿದರು. ಅನಂತರ ರಾವಸಾಹೇಬ ಹಳಕಟ್ಟಿಯವರು ಬೋರ್ಡಿನ ಮತ್ತು ಶಿಕ್ಷಕರನಡುವೆ ರಾಜೇ ಮಾಡಿಸಬೇಕೆಂದು ಬಹಳ ಪ್ರಯತ್ನಮಾಡಿದರು ಇವರು ಹೇಳಿದ ಶರ್ತುಗಳು ಒಪ್ಪುವಂತಿದ್ದವು. ಆದರೆ ಬೋರ್ಡಿನವರು ದುರಾಗ್ರಹಕ್ಕೆ ಬಿದ್ದು, ರಾಜಿಯಾಗಲಿಲ್ಲ, ಆದ್ದರಿಂದ ಕೊನೆಯ ಉಪಾಯವೆಂದು ಹತ್ತುಜನ ಶಿಕ್ಷಕರು ಬೋರ್ಡಿನ ಮೇಲೆ ದಿ

ಬಾಣಿಯಲ್ಲಿ ದಾವೇಮಾಡಿದ್ದರೆ ಈ ದಾವೆ ನಡಿಸಲಿಕ್ಕೆ ಬೋರ್ಡಿನವರು ಜಂಗುಕಟ್ಟಿದ್ದು, ವಕೀಲಿ ಮುಂತಾದ ವೆಚ್ಚಕ್ಕಾಗಿ ಐನೂರು ರೂಪಾಯಿ ಮಂಜೂರ ಮಾಡಿದ್ದಾರೆ.

---

೨೪ ತಾಸುಗಳಲ್ಲಿ ೩೦ ಇಂಚು ಮಳೆ

ಊರೊಳಗೆ ಆಳೆತ್ತರ ನೀರು.

—(೦)—

ಕೋಚೀನ-ಕೊಡಗಿನಲ್ಲಿ ವಿಪರೀತವಾಗಿ ಸುರಿದ ಮಳೆಯು ಮಧ್ಯದಲ್ಲಿ ಗಿವೆ ಮತ್ತು ಕೊಂಕಣದಲ್ಲಿ ವಿಶ್ರಾಂತಿ ಕೊಟ್ಟು, ಗುಜರಾಥದಲ್ಲಿ ಸಮುದ್ರದಿಂಡೆ ಹಿಡಿಯಿತು. ಸೂರತ ಜಿಲ್ಹೆಯಲ್ಲಿ ಮನಸೋಕ್ತವಾಗಿ ತಾಂಡವನೃತ್ಯವಾಡಿದೆ. ಹಗಲು ರಾತ್ರಿ ಎನ್ನದೆ ಸತತವಾಗಿ ಜಲಪ್ರಳಯವೇ ಆಗುವದೆನ್ನುವಂತೆ ಪ್ರಚಂಡವಾಗಿ ಸುರಿಯಿತು. ೨೪ ತಾಸುಗಳಲ್ಲಿ ೩೦ ಇಂಚು ಮಳೆಯಾಯಿತೆಂಬುದೊಂದೇ ಸಂಗತಿಯಿಂದ ಅಲ್ಲಿ ಎಷ್ಟು ಹಾನಿಯಾಗಿರಬೇಕೆಂಬ ಕಲ್ಪನೆಯನ್ನು ಮಾಡಬಹುದು. ನೂರಾರು ಮೈಲುಗಳ ವರೆಗೆ ಎತ್ತ ನೋಡಿದತ್ತ ನೀರೇನೀರಾಗಿದೆ. ಇದು ಹಳ್ಳ, ಇದು ನದಿ, ಇದು ಕೆರೆ ಎಂದು ತಿಳಿಯಲಿಕ್ಕೆ ಬಾರದಂತೆ ನೀರು ನಿಂತದೆ. ಹಳ್ಳಿಗಳು ಒಂದಕ್ಕೊಂದು ಸಂಬಂಧವಿಲ್ಲದ್ದಾಗಿವೆ. ಪಟ್ಟಣಗಳ ಪಡಿಪಾಟಲವನ್ನಂತೂ ಯಮದೂತರೇ ಹೇಳಬೇಕು. ಜಾಮನಗರವು ಸಂಸ್ಥಾನದ ಗ್ರಾಮವು. ಅಲ್ಲಿ ಒಂದೊಂದು ಬೀದಿಯಲ್ಲಿ ಒಂಭತ್ತು ಫೂಟು ಎತ್ತರ ನೀರು ನಿಂತದೆ. ಮನೆಗಳು ತೆಪ್ಪದೆ ಬೀಳುತ್ತಿದ್ದು, ಜನರು ಅನ್ನವಸನಗಳೆರಡೂ ಇಲ್ಲದೆ ದುಃಖಾಕ್ರಾಂತರಾಗಿದ್ದಾರೆ. ಜಾಮನಗರದಂತೆ ತುಸು ಕಡಿಮೆ ಪ್ರಮಾಣದಿಂದ ಸೂರತದ ಭ ಣಮಾಗಿರುತ್ತದೆ.

ಚೀನ ರಶಿಯಾ ಯುದ್ಧ ಸಂಭವ.

—(೦)—

ಚೀನ ಮತ್ತು ರಶಿಯಾಕ್ಕೆ ಯುದ್ಧ ಹತ್ತುವ ಸಂಪೂರ್ಣ ಲಕ್ಷಣಗಳಾಗಿದ್ದು, ರಶಿಯನ್ನರು ಚೀನದಲ್ಲಿದ್ದ ತಮ್ಮ ರಾಯಭಾರಿಯನ್ನು ಸಹ ಕರಿಸಿಕೊಂಡರು. ಚೀನದ ಸೈನ್ಯವು ರಶಿಯಾದ ಸರಹದ್ದಿಗೆ ಹೋಗುತ್ತಿದ್ದು, ಮುಕಡೆನ್ನದಲ್ಲಿ ಯುದ್ಧದ ಸೌರಣೆ ನಡೆದಿದೆ. ಜಪಾನರು ಈ ಸರಹದ್ದಿಗೆ ಹೋಗುವ ರೇಲ್ವೆ ಅಥವಾ ಉಗಿಬಂಡಿಯ ಟಿಕೀಟು ನಿಲ್ಲಿಸಿದ್ದಾರೆ.

ಧಾರವಾಡ

ಶ್ರೀ ವಿದ್ಯಾಧರೂಗರ ವತಿಯಿಂದ ಇಲ್ಲಿಯ ಮುನಸಫ ಕೋರ್ಟಿನಲ್ಲಿ ಮುಂಬಯಿಯ ಸರ ವಸಂತರಾವ ದಾಭೋಳಕರರ ಸಾಕ್ಷಿಯಾಯಿತು.

೭೩ ವರ್ಷದ ಹರೆಯದ ಪಂಡಿತನ ಮದುವೆ.

—(೦)—

ಕಾಶಿಯಲ್ಲಿ ೭೩ ವರ್ಷದ ಒಬ್ಬ ಹರೆಯದ ವಿದ್ವಾಂಸ ಮತ್ತು ಘನ ವೈದ್ಯನಾದ ಶಾಸ್ತ್ರಿಯು ೧೩ ವರ್ಷದ ಒಬ್ಬ ಕುಮಾರಿಯ ಕೂಡ ಮದುವೆಯಾದನು. ಈತನಿಗೆ ೧೭ ವರ್ಷದ ಒಬ್ಬ ಮಗನಿದ್ದು ಈ ಮೊದಲು ಆರು ಜನ ಹೆಂಡಂದಿರು ಸತ್ತಿರುತ್ತಾರೆ.

ಕಮೀಶನದ ಮುಂದೆ ಸಾಕ್ಷಿ

ಡಾಕ್ಟರ ಪರಾಂಜಪೆಯವರನ್ನು ಕಮೀಶನದ ಮುಂದೆ ಸಾಕ್ಷಿ ನುಡಿಯಲು ಲಿಬರಲರಾದ್ದರಿಂದ ಬರುವದಾಗುವದಿಲ್ಲೆಂದು ಸ್ಪಷ್ಟವಾಗಿ ಹೇಳಿದರು ಇವರಂತೆ ಇನ್ನಿಬ್ಬರು ಹಿಂದೀ ಮೆಂಬರರಿದ್ದಾರೆ. ಅವರು ಸಾಕ್ಷೀಗೆ ಹೋಗುವರು. ಸರ ಶಂಕರನಾಯರರಂಥ ಆಳು ಒಬ್ಬರು ಒಣ್ಣದವರಾಗಿರಬೇಕು ಇವರ ಕರ್ಮವಾಯ. ಇದೇ ಕಮಿಟಿಯ ಯುರೋಪಿಯನ್ನ ಮೆಂಬರರ ಸಾಕ್ಷಿಯಾಯಿತು ಅವರು ಸ್ವರಾಜ್ಯವನ್ನು ಕನಸಿನಲ್ಲಿ ಕೂಡಾ ನೆನೆಯಬಾರದೆನ್ನುವಂತೆ ಜವಾಬ ಕೊಟ್ಟಿದ್ದಾರೆ.

ಮುಂಬಯಿ ಮ್ಯುನಸಿಪಾಲಿಟಿಯ ಸ್ಕೂಲ ಬೋರ್ಡಿನಲ್ಲಿ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಧಾರ್ಮಿಕ ಶಿಕ್ಷಣ ಕೊಡಬೇಕೆಂಬ ವಿಷಯ ಹೊರಟಿತು. ಮುಸಲಮಾನ, ಪಾರ್ಸಿ, ಕ್ರಿಶ್ಚನ್ನ ಮೊದಲಾದವರು ನೈತಿಕ ಶಿಕ್ಷಣ ಮಾತ್ರ ಕೊಡಬೇಕೆಂದು ವಾದಿಸಿದರು. ಕೊನೆಯಲ್ಲಿ ಹಿಂದೂ ವಿದ್ಯಾರ್ಥಿಗಳ ಮಟ್ಟಿಗೆ ಧಾರ್ಮಿಕ ಶಿಕ್ಷಣಕೊಡಲು ಒಂದು ಕಮೀಟಿಯು ನೇಮಿಸಲ್ಪಟ್ಟಿತು.

ಶಿಯಾ ಪಂಥದ ಅಫತಾಪವೆಂಬ ಮುಂಬಯಿಯಲ್ಲಿ ಹೊರಡುವ ಉರ್ದು ಪತ್ರವು ಸುನ್ನಿ ಪಂಥದ ಮುಸಲಮಾನರ ಧಾರ್ಮಿಕ ತಿಳುವಳಿಕೆಗೆ ವ್ಯಥೆಯನ್ನುಂಟು ಮಾಡುವಂಥ ಮತ್ತು ಮೊದಲಿನ ಮೂವರು ಖಲೀಫರ ವಿಷಯವಾಗಿ ದುರ್ವಚನವಾಡಿದಂಥ ಲೇಖವನ್ನು ಪ್ರಸಿದ್ಧ ಮಾಡಿತೆಂಬ ಆರೋಪದ ವಿಚಾರಣೆಯು ಅಲ್ಲಿಯ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ನಡೆದಿದೆ.

ಮೈಸೂರಿನ ದಿವಾನರು ದಾವಣಗೇರಿಗೆ ಬರತಕ್ಕವರಿದ್ದರು. ನಡುವೆ ಯಾವದೋ ಅನಶಕು ನವಾಯಿತು. ದಾವಣಗೇರಿಯ ಶಾಮದಾರರ ರಿಪೋರ್ಟ ಬರುವತನಕ ಪ್ರಯಾಣವನ್ನು ನಿಲ್ಲಿಸಿದ್ದಾರೆ.

ಲಾರ್ಡ ಅಯರ್ವಿನ್ನಸಾಹೇಬರಿಗೂ ಸ್ಟೇಟ ಸೇಕ್ರೆಟರಿಯವರಿಗೂ ಹಿಂದುಸ್ಥಾನದ ವಿಷಯವಾಗಿ ಸಂಭಾಷಣೆಯಾಯಿತು. ಲಾರ್ಡಸಾಹೇಬರು ಲಂಡನದಲ್ಲಿಳಿದ ಕೂಡಲೆ, ಹಿಂದುಸ್ಥಾನದಲ್ಲಿ ಎಲ್ಲವೂ ಸುರಕ್ಷಿತವಾಗಿದೆಯೆಂದು ಉದ್ಗಾರ ತೆಗೆದಿದ್ದಾರೆ.

ನೋಟೀಸಿನ ಉತ್ತರಾ.

ಶ್ರೀ. ರಾ ಗುರುಸಾಂತಪ್ಪಾ ಪರಪ್ಪಾ ಶಿದ್ರಾಮಶೆಟ್ಟಿ ಸಾ|| ನವಲಗುಂದ ತಾ|| ನವಲಗುಂದ ಇವರಿಗೆ-

ಕೆಳಗೆ ಸಹಿಮಾಡಿದವರು ತಿಳಿಸುವದೇನಂದರೆ ನೀವು ತಾ||೧೪-೭-೨೯ ದಿನ್ನದ ನೋಟೀಸ ವಿಜಯ ಪತ್ರದಲ್ಲಿ ನಮ್ಮ ಹೆಸರಿಗೆ ಕೊಟ್ಟದ್ದರ ಮಜಕೂರು ತಿಳಿಯಿತು. ಸದರ ಗಂಗಾರಾಮ ಮಾರವಾಡಿ ಇವರಿಗೆ ನಾವು (೧೦೦೦) ರೂಪಾಯಿ ಕೊಟ್ಟು ರಿ| ಸ| ನಂಬರ ೨೯೯ ನೆ ಜಮೀನು ಖರೀದಿ ಪತ್ರ ಅವನಿಂದ ಮಾಡಿಸಿಕೋಬೇಕೆಂದು ಒಳಗಡೇನೆ ಅವನಿಗೆ ನಾವು ಕೇಳಿದ್ದಕ್ಕೆ ಸದರ ಗಂಗಾರಾಮನು ತಮ್ಮ ಮೇಲಿನ ಮನೊದ್ವೇಷದಿಂದಾ ಸದರ ಜಮೀನಿಯ ವರತ ಖರೀದಿಪತ್ರ ನಾನು ಮಾಡಿ ಕೊಡುವದಿಲ್ಲಾ ಆ ಜಮೀನು ಬಿಡುವದಿಲ್ಲಾ ಅಂತ ಹೇಳಿದ್ದರಿಂದಾ ಆ ಸಂಗತಿಯನ್ನು ಸದರ ಖರೀದಿಪತ್ರದ ಮೇಲಿನ ಸಾಕ್ಷೀದಾರರಿಗೆ ನೋಟೀಸಿನ ದ್ವಾರಾ ಆಗಿಂದಾಗ್ಗೆ ತಿಳಿಸುತ್ತೇವೆ. ಕಾರಣ ಸದರ ಜಮೀನಿನ ಸಂ| ಅಲಾಯಿದಾ ನಾವು ಗಂಗಾರಾಮನ ಮೇಲೆ ಕೋರ್ಟಿನಲ್ಲಿ ದಾವಾಮಾಡಿ ಕಬಜಾ ತಗೋತೇವೆ. ಸದರ ... ಸಂ| ವ್ಯವಹಾರಕ್ಕೆ ವ ಸದರ ಗಂಗಾರಾಮನ ನಮ್ಮ ಕಡಿಂದಾ ರೋಖ ನಿಮ್ಮ ಸಮಕ್ಷಮ (೨೫೦) ರೂಪಾಯಿ ತಗೊಂಡು ಪಾವತಿ ರಕೊಟ್ಟ ವ್ಯವಹಾರಕ್ಕೆ ಒಂದಕ್ಕೊಂದು ಸಂಬಂಧವಿಲ್ಲಾ. ಗಂಗಾರಾಮನಲ್ಲಿ ನಾವು ಮಾಡಿದ ಯಾವತ್ತು ವ್ಯವಹಾರಗಳ ಸಂಬಂಧ ಫೇಡ ಆದಬಗ್ಗೆ ಸದರ ಪಾವತಿ ಇದ್ದು ಆ ಪಾವತಿಯ ಮೇಲೆ ಪೂರ್ಣ ನಮ್ಮದೇ ಮಾಲ್ಕಿ ಇರುತ್ತದೆ. ಸದರ ಪಾವತಿಯನ್ನು ಗಂಗಾರಾಮನಿಗೆ ಕೊಡಲಿಕ್ಕೆ ಅಗರ ನಿಮ್ಮ ಹತ್ತರ ಇಡಲಿಕ್ಕೆ ಏನೊಂದು ಸಂಬಂಧವಿಲ್ಲಾ ಸದರ ಪಾವತಿ ಆ ವ್ಯವಹಾರಕ್ಕೆ ಮಾತ್ರ ನಿಮ್ಮ ಕಡಿಗೆ ಅಮಾನತ ಇಟ್ಟಿರುವದರಿಂದಾ ಅದನ್ನು ನೀವು ಪರತ ನಮಗೆ ಕೊಡಲಿಕ್ಕೆ ಬೇಕು. ಸದರ ಗಂಗಾರಾಮನು ನಮ್ಮ ಮೇಲಿನ ದ್ವೇಷದಿಂದ ವ ನಮ್ಮನ್ನು ಮುಣಗಿಸುವ ದುರಾಲೋಚನೆಯಿಂದ ನಿಮ್ಮನ್ನು ಫಿತೂರ ಮಾಡಿಕೊಂಡು ಸದರ ಪಾವತಿ ತನ್ನ ತಾಬೇಕ್ಕೆ ತಗೊಳ್ಳುವ ಆಲೋಚನೆ ನಡಿಸಿರುವಂತೆ ಗೊತ್ತಾಗುತ್ತದೆ. ಸದರ ಗಂಗಾ

ಜಾಹೀರ ನೋಟೀಸು

ಕೆಳಗೆ ಸಹಿ ಮಾಡಿದವರ ಕಡಿಯಿಂದಾ ಯಾವತ್ತು ಜನರಿಗೆ ಜಾಹೀರ ನೋಟೀಸಿನಿಂದಾ ಜಾಹೀರ ಮಾಡುವದೇನಂದರೆ- ಧಾರವಾಡ ಜಿಲ್ಹಾ ನವಲಗುಂದ ತಾಲೂಕ ಪೈಕಿ ತಡಹಾಳ ಗ್ರಾಮದಲ್ಲಿ ನಮ್ಮ ಖಾಸ ತಂದಿಯಾದ ಬಸಪ್ಪಾ ಮಲ್ಲಪ್ಪಾ ಮೇಟಿ ಸಾ ತಡಹಾಳ ಈತನ ಹೆಸರಿನ ಖಾತೆಯಿರುವ ತಡಹಾಳ ಗ್ರಾಮದ ಜಮೀನು

ರಿ. ಸ.	ಯಕರೆ	ತರಮ
೩೩	೨೫।೧೭	೩೮
೪೩	೧೧।೯	೧೩
ಪೊ.	೧।೮	

೧೧।೧೭

೯೫೨ ಆಟಗೇರ ಕಟ್ಟಿ ೧೯।೩೨ ತರಮ ರೂಪಾಯಿ ೧೯ ಈ ಪ್ರಕಾರ ಜಮೀನಗಳು ಪಿತ್ರಾರ್ಜಿತ ಆಸ್ತಿಗಳು ಇದ್ದು ಸದ್ರಿ ನನ್ನ ಜನಕ ತಂದಿಯು ಈಗ ಅಜಮಾಸು ೫-೬ ವರುಷಗಳಿಂದಾ ದುರ್ಜನರ ಸಂಗತಿ ಹಿಡಿದು ನನ್ನ ಖಾಸ ಪಿತ್ರಾರ್ಜಿತ ಆಸ್ತಿಯನ್ನು ನನಗೆ ಮುಳುಗಿಸಬೇಕು ಅಂಬುವ ದುರ್ಬುದ್ಧಿಯಿಂದಾ ಒಬ್ಬ ಜ್ಞಾನಪ್ಪಾ ಬಿನ ಸಿಂಗಪ್ಪಾ ದೊಡ್ಡಮೇಟಿ ಸಾ. ಚಿಕ್ಕ ತಾರ್ಲ್ಯಾ ರೋಣ ಅಂಬುವರು ತಾ॥ ೨೪-೧೧-೨೪ನೇ ದಿವಸ ರೋಖು ರೂಪಾಯಿ ೧೬೦೦ ನನ್ನ ತಂದಿಗೆ ಕೊಟ್ಟಂತೆ ಮಾಡಿ ಅದರ ಬದಲಿಗೆ ಅಂದರೆ ರೋಖು ೩೪೦೦ ರೂಪಾಯಿಗೆ ವಂದು ಕಾಗದ ಅಂದರೆ ತಡಹಾಳ ಗ್ರಾಮದ ರಿ॥ ಸ॥ ನಂಬರು ೩೩ ಯಕರೆ ೨೫।೧೭ ತರಮ ರುಪಾಯಿ ೩೮ ಈ ಪೂರಾ ಜಮೀನು ತೋಲಿ ವತ್ರಿಯಾಗಿ ಬರಸಿಕೊಂಡಿರುತ್ತಾರೆ ಸದ್ರಿ ನನ್ನ ಖಾಸ ತಂದಿಯು ಇವತ್ತಿನವರೆಗೂ ದುರ್ಜನರಲ್ಲಿ ಇದ್ದು ಈಗ ಈ ನೋಟೀಸಿನಲ್ಲಿ ನಮೂದ ಮಾಡಿದ ರಿ॥ ಜನ ಸರ್ವೆ ನಂಬರು ಯಾವತ್ತು ವತ್ತಿ ವಿಕ್ರಿ ಮಾಡಿ ತಾನು ಫರಾರಿ ಆಗಬೇಕು ಅಂಬುವ ದುಷ್ಟ ಜನರ ಚಿತಾವಣೆಯಿಂದಾ ಈ ಪ್ರಕಾರ ಸದ್ರಿ ನನ್ನ ಪಿತ್ರಾರ್ಜಿತ ಆಸ್ತಿಗೆ ನಾನೇ ಖಾಸ ಮಾಲಕನಿರುತ್ತೇನೆ ಮತ್ತು ನನ್ನ ತಂದಿಯು ಯಾವತ್ತು ಆಸ್ತಿಗೆ ಮಾಲಿಕ ಹಕ್ಕ ಯಾವ ತರದ್ದು ಇರುವದಿಲ್ಲಾ ಸದ್ರಿ ನನ್ನ ಖಾಸ ತಂದಿ ಬಸಪ್ಪಾ ಮಲ್ಲಪ್ಪಾ ಮೇಟಿ ಸಾ॥ ತಡಹಾಳ ತಾಲೂಕ ನವಲಗುಂದ ಇವನ ಕಡಿಂದಾ ಯಾರಾದರೂ ಯಾವ ತರದಿಂದಾ ಸದ್ರಿ ಗ್ರಾಮದ ಜಮೀನು ವತ್ತಿ ಅಗರ ಖರೀದಿ ವ ಅಗಾವ ಲಾವಣಿ ವಗೈರೆ ಯಾವತರದ್ದು ಕಾಗದಾ ಬರಸಿ ನೋಂದಣಿ ಮಾಡಿಸಿ ಕೊಂಡಾಗ್ಯು ಸದರಿ ಆಸ್ತಿ ಮೇಲೆ ಬಾಧ್ಯಸಲಾರದು ಮತ್ತು ಈಗ ನನ್ನ ಮನಿಯೊಳಗೆ ಇರುವ ಜಂಗಮ ಮಾಲು ಅಂದರೆ ಕೆಳಗೆ ವಿವರಿಸಿದಂತೆ ಅವೆ-

೧ ಯತ್ತು ಎರಡು ಅದರ ಚರಿ ಪಟ್ಟಿ ಬಿಳಿದು ನಟ್ಟರಗೊಂಡು ವಂದು, ಬಾಲಾ ಮತ್ತು ಯಾವತ್ತು ಅವಯವಗಳು ಸಾಬೀತ ಇರೋವದು

೨ ಮತ್ತೊಂದು ಯತ್ತು ಅದರ ಚರಿಪಟ್ಟಿ ಗೂಟಗೊಂಬು ಯಲ್ಲಾ ಅವಯವಗಳು ಸಾಬಿತ ಇರೋದು ಈ ಎರಡು ಯತ್ತಿನ ಕಿಮ್ಮತ್ತು ಅಜಮಾಸು ೩೦೦ ರೂಪಾಯಿ

೩ ಹೋರಿ ವಂದು ಮೈಯಲ್ಲಾ ಬಿಳಿದು ಅದರ ಅಜಮಾಸ ವಯಾ ೩ ಎರಡಲ್ಲಿನದು ಕೊಡು ಸಣ್ಣವು ಅದು ಮನಿಯಲ್ಲಿ ಹುಟ್ಟಿದ್ದು ಯಾವತ್ತು ಅವಯವ ಸಾಬಿತ ಅದರ ಅಜಮಾಸ ಕಿಮ್ಮತ್ತು ರೂಪಾಯಿ ೧೦೦

೪ ವಂದು ಯಮ್ಮಿಗೊಡ್ಡ ಅದರ ಚಹರೆ ಮೂಡಲಕೋಡು ಕರೀ ಬಣ್ಣದ್ದು ಯಾವತ್ತು ಅವಯವ ಸಾಬಿತು ಅದರ ಅಜಮಾಸ ಕಿಮ್ಮತ್ತು ರೂಪಾಯಿ ೬೦

೫ ಮೇವಿನ ಬಣವಿ ಮೂರು ಅದರ ಅಜಮಾಸ ಕಿಮ್ಮತ್ತು ರೂಪಾಯಿ ೨೦೦

೬ ಚಕ್ಕಡಿ ವಂದು ಅದರ ಅಜಮಾಸ ರೂಪಾಯಿ ೧೦೦

೭ ದಾಗೀನಗಳು ಬಂಗಾರದ ಬಳಿ ಎರಡು ಅಜಮಾಸ ತೊಲಿ ೫ ಕಿಮ್ಮತ್ತು ರೂಪಾಯಿ ೧೦೫, ಬೆಳ್ಳಿ ತೋಡೆ ಅಜಮಾಸ ತೊಲಿ ೧೦೦ ಕಿಮ್ಮತ್ತು ರೂಪಾಯಿ ೫೦, ಇದರ ಶಿವಾಯಿ ಮನಿಯೊಳಗಿನ ತಾಂಬ್ರ ವ ಹಿತ್ತಾಳಿ ಸಾಮಾನು

೮ ಮತ್ತು ನನ್ನ ಖಾಸ ಜಮೀನಿನಲ್ಲಿ ಬೆಳೆದ ಜೋಳದ ಹಗೆ ಹೇರ ೨೦ ಅದರ ಕಿಮ್ಮತ್ತು ರೂಪಾಯಿ ೪೦೦

ಈ ಹಗಿ ಕರಬಸಪ್ಪಾ ಮೇಟಿಯವರ ಬಾಗಲ ಮುಂದೆ ಇರೋದು ಮತ್ತು ಮನಿಯೊಳಗಿನ ಜಂಗಮ ಮಾಲು ಯಾರಾದರೂ ನನ್ನ ತಂದಿ ಕಡಿಂದಾ ತಗೊಂಡರೆ ಅದು ಖರೀದಿ ಅನಿಸಲಾರದು ಯಾಕಂದರೆ ನಾನು ಸದರಿ ಆಸ್ತಿಗೆ ಮಾಲ್ಕಿ ಹಕ್ಕದಾರನು ಇರುತ್ತೇನೆ ಈ ನೋಟೀಸಿನಲ್ಲಿ ನಮೂದ ಮಾಡಿದ ಯಾವತ್ತು ಸಾಮಾನಗಳನ್ನು ಯಾರಾದರೂ ತಗೊಂಡು ಲುಕಸಾನ ಆಗಬಾರದು ಅಂತಾ ಈ ಜಾಹೀರ ನೋಟೀಸಿನಿಂದಾ ತಿಳಿಸುತ್ತೇನೆ ಮತ್ತು ಈ ನೋಟೀಸಿನಿಂದಾ ತಿಳಿದೂ ತಿಳಿದು ತಗೊಂಡರೆ- ಅವರ ಮೇಲೆ ರೀತ ಪ್ರಕಾರ ಇಲಾಜ ಮಾಡುವದರಲ್ಲಿ ಬರಲಾದೀತು ಅಂತಾ ಈ ನೋಟೀಸಿನಿಂದಾ ಜಾಹೀರ ಮಾಡುತ್ತೇನೆ ಅಂತಾ ಕೊಟ್ಟ ಜಾಹೀರ ನೋಟೀಸು

ತಾ॥ ೧೯—೭—೧೯೨೯ನೇ ಇಸ್ವಿ

ಸಹಿ- ಗುರಪ್ಪಾ ಬಸಪ್ಪಾ ಮೇಟಿ ಸಾ॥ ತಡಹಾಳ ತಾಲೂಕ ನವಲಗುಂದ.

ನಿಮಗೆ ಉತ್ತಮವಾಗಿ ಉರಿಯುವ

ಒಣ ಕಟ್ಟಿಗೆ ಬೇಕೆ?

ನಮ್ಮ ಕಟ್ಟಿಗೆಯ ಅಡ್ಡೆಯಲ್ಲಿ ಉತ್ತಮ ತರದ ದಿಂಡ, ಮತ್ತು ಮುಂತಾದ ಕಾಡ ಕಟ್ಟಿಗೆಗಳು ಬಹು ಸೋವಿ ದರದಿಂದ ಸಿಗುತ್ತವೆ. ಮಳೆಗಾಲದಲ್ಲಿ ಒಣಗಿದ ಕಟ್ಟಿಗೆಗಳು ನಮ್ಮಲ್ಲಿಯಂತೆ ಎರಡನೇ ಕಡೆಗೆ ಸಿಗುವದು ಕ್ವಚಿತವು. ಮಳೆಗಾಲ ದಿವಸದಲ್ಲಾಗುವ ಹಸೀ ಕಟ್ಟಿಗೆಯ ತಾಪವನ್ನು ಳಿಸಬೇಕೆಂದು ನಾವು ಮುದ್ದಾಮು ಕಟ್ಟಿಗೆಯ ಅಡ್ಡೆಯನ್ನು ಜನರ ಸೋಯಿಗಾಗಿ ಇಟ್ಟಿರುತ್ತೇವೆ. ಗ್ರಾಹಕರು ಇದರ ಲಾಭವನ್ನು ತಕ್ಕೊಳ್ಳಬೇಕು.

ಅಡ್ಡೆಯ ಮಾಲಕ,
ಬಾಳಾಚಾರ್ಯ ಕಾಂತಾಚಾರ್ಯ
ಮುನವಳ್ಳಿ.
ಧಾರವಾಡ.
(ಸೆಂಟ್ರಲ ಬ್ಯಾಂಕಿನ ಗಡಿಯಾಳದ ಎದುರಿಗೆ)

THE ANKALIGI BANK LTD.

Head Office–
Kamankatta Dharwar
Branches
Ranebennur & Hirekerur
5%
Interest allowed on
ANNA SAVINGS *BANK*
DEPOSIT.

Dharwar 3-1-1927 — K. B. ANKALIGI, Managing Director

ಈ ಪತ್ರವನ್ನು ಅಂಗಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:- ಅಚ್ಚಾಚಾರ್ಯ ಬಾಳಾಚಾರ್ಯರ ಹೊಸಕೇರಿ.

ವರ್ಷ ೧೦) ಧಾರವಾಡ ರವಿವಾರ ತಾರೀಖು ೩೧ ನೇ ಜುಲೈ ೧೯೩೮ (ಸಂಚಿಕೆ ೧೬೩

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩|| ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩|| ರೂ.

ಸೇವ್ಹಿಂಗ್ಸ ಬ್ಯಾಂಕ:— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ಸಫೆ ವಸೂಲ ಮಾಡಿ ಖಾತೆಗಳಿಗೆ ಜಮಾ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೋಖಾ ಉದಾರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮಿಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡುಕೊಳ್ಳುವದಕ್ಕಾಗಿ ಕುಳಗಳಿಗೆ ಹೆಚ್ಚಿನ ಸವಲತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ ಮೊಕಶ್ಯಾಂ ಪತ್ರಗಳೂ ಸದರಿ ಬ್ರ್ಯಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ

ತಾ|| ೧೭-೨-೩೮

ಡಿ. ಡೊನೆಲಿ,
ಏಜಂಟರು

ದಿ ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ-

ಗ ಛ- ಮಂಗಳವಾರಪೇಟೆ, ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಸಾಲ ಮತ್ತು ಬೇರೆ ಮುದ್ದತಿಯ ಕಸಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಬಿಂದುಮಾಧವ
ಮ್ಯಾನೇಜಿಂಗ ಏಜಂಟ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಏಟು ಲಕ್ಷದ ಮೇಲುಂಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ದಕ್ಷಿಣ ಇಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಪನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೨೧-೭-೨೯ ನೇ ಇಸ್ವಿ.

ಶ್ರೀ.

ವಿಜಯಮಂ ಶ್ರೀಶಪ್ರಿಯ
ರೀ ವಸುಮತಿಯು ನಲಿಸುತೆ ಸುಹಿತಚರಿತೆಗಳಿಂ ॥
ದೀ "ವಿಜಯಮಂ" ಶ್ರೀಕರಣ ।
ನಾವಿಹಿತಂಗಳ ಪಿವರಿಸುವಲವು ಸಾಜಂ ॥೧॥

ಚೀನ ಮತ್ತು ರಶಿಯಾ.

ಬೊಲ್ಶೆವಿಕ ಭೂತವು ಕಲಹಕ್ಕೆ ಕಾರಣ.

—)(—)(೦)(—)(—

ಯುದ್ಧ ಸಂಭವವೋ? ಅಸಂಭವವೋ.

——(೦)——

ಒಂದು ವಾರವಾಯಿತು. ಚೀನ ಮತ್ತು ರಶಿಯಾದ ನಡುವೆ ಯುದ್ಧ ಹತ್ತುವಂಥ ಅವಲಕ್ಷಣಗಳಾಗಿರುತ್ತವೆ. ಯುದ್ಧಕ್ಕೆ ರಶಿಯದ ಬೊಲ್ಶೆವಿಕ ತತ್ವಗಳೇ ಕಾರಣ. ರಶಿಯರ ಈ ತತ್ವಗಳನ್ನು ತಮ್ಮ ದೇಶದೊಳಗಿಂದ ಹೊರಗೆ ಹಾಕಬೇಕು; ಸಾಧ್ಯವಾದರೆ- ಅವುಗಳ ಮೂಲೋತ್ಪಾಟನ ಮಾಡಬೇಕೆಂದು ಜಗತ್ತಿನಲ್ಲಿ ಪ್ರತಿಯೊಂದು ದೇಶವು ಮಾಡಬೇಕಾದ ಪ್ರಯತ್ನವನ್ನು ಮಾಡುತ್ತಲಿದೆ. ಬೊಲ್ಶೆವಿಕ ಭೂತಚೇಷ್ಟೆಗ್ರಸ್ತರಾದ ಜರ್ಮನ ಕೂಲಿಕಾರರು ಕೇಸರಸಾಹೇಬರನ್ನು ಪದಚ್ಯುತ ಮಾಡಿ, ಅವರನ್ನು ದೇಶಾಂತರಕ್ಕೆ ಕಳಿಸಿದರು. ಅದೇ ಭೂತವು ಇಂಗ್ಲಂಡದಲ್ಲಿ ಒಂದು ವೇಳೆಯಲ್ಲಿ ದೊಡ್ಡ ಧೂಮಚಕ್ರ ಕ್ರಿಯನ್ನು ಹಾಕಬೇಕೆಂದಿತ್ತು. ಆದರೆ ಈಗಿನ ಮಂತ್ರಿಯಾದ ಮ. ಮ್ಯಾಕಡೋನಾಲ್ಡಸಾಹೇಬರು ರಣಬತ್ತರವಾಗಗೊಡಲಿಲ್ಲ. ಆದರೂ ಅವರ ದಿವಾನಗಿರಿಯನ್ನು ಕಳೆಯಿತು. ಫ್ರಾನ್ಸ, ಜಪಾನ ದೇಶಗಳಲ್ಲಿಂತೂ ರಾಜ್ಯಕರ್ತರು ಈ ಬೊಲ್ಶೆವಿಕರನ್ನು ಹುರಿದು ಹಾಕತೊಡಗಿದ್ದಾರೆ. ಸದ್ಯ ಹಿಂದುಸ್ಥಾನ, ತುರ್ಕಸ್ಥಾನದಲ್ಲಿ ಈ ತತ್ವದವರ ಮೇಲೆ ಖಟ್ಲೆಗಳು ನಡೆದಿವೆ.

ಚೀನದಲ್ಲಿ ರಶಿಯರ ವಕಾಲತಿಯುಂಟು. ರಶಿಯರೇ ಇದ್ದಾರೆ. ಅವರು ಆ ದೇಶದಲ್ಲಿ ತಮ್ಮ ತತ್ವಗಳ ಜುಜುಂದ್ರಿ ಬಿಡತೊಡಗಿದರು. ಹೋದ ವರುಷವಂತೂ ಬೊಲ್ಶೆವಿಕ ಮತ್ತು ರಾಷ್ಟ್ರೀಯವೆಂಬೆರಡು ಬಣಗಳಾಗಿ ರಕ್ತದ ಕಾಲಿವೆ ಹರಿದು, ಕೊನೆಯಲ್ಲಿ ರಾಷ್ಟ್ರೀಯರ ಕೈ ಮೇಲಾಯಿತು. ಆದರೂ ಅಲ್ಲಿ ವಾಸವಾಗಿರುವ ರಶಿಯರು ಬೊಲ್ಶೆವಿಕ ಹಾವಿನ ಮರಿಗಳನ್ನು ದೇಶದ ತುಂಬ ಹರಿಬಿಡಲಾರಂಭಿಸಿದರು. ಇದನ್ನು ಕಂಡು ಚೀನ ಅಧಿಕಾರಿಗಳು ಈ ಜನರನ್ನು ತಮ್ಮ ದೇಶದ ಹೊರಗೆ ಹಾಕದೆ, ಅವರನ್ನು ಹಿಡಿದು ತುರಂಗದಲ್ಲಿ ಹಾಕಿದರು. ಈ ಪ್ರಕಾರ ತುರಂಗದಲ್ಲಿ ಹಾಕುವದು ರಾಷ್ಟ್ರರಾಷ್ಟ್ರಗಳ ನಡುವಿನ ಕಾಯದೆ ಕಾನೂನಿಗೆ ವಿರುದ್ಧವಾದ ಕೃತ್ಯವೆಂದೂ, ದಸ್ತಗಿರಿ ಮಾಡಿದ ಜನರನ್ನು ಕೂಡಲೆ ಬಂಧಮುಕ್ತ ಮಾಡಬೇಕೆಂದೂ, ರಶಿಯಾ ಸರಕಾರದವರು ಚೀನರಿಗೆ ತಿಳಿಸಿದರು. ಚೀನರು ಆ ಪ್ರಕಾರ ನಡೆದಿದ್ದರೆ- ಯುದ್ಧದ ಹೊಗೆಯು ಏಳುತ್ತಿದ್ದಿಲ್ಲ. ಚೀನರು ಬಲಾಬಲ ಅಥವಾ ಮುಂದೇಳುವ ಅನರ್ಥದ ವಿಚಾರ ಮಾಡದೆ, ತಾವು ರಶಿಯರನ್ನು ಹಿಡಿದು, ತುರಂಗದಲ್ಲಿ ಹಾಕಿದ್ದು ಯೋಗ್ಯವೇ ಎಂದು ಉತ್ತರ ಕೊಟ್ಟಿರುತ್ತಾರೆ. ಈ ಪ್ರಕಾರ ಇವರು ಖಂಡತುಂಡಿನ ಉತ್ತರ ಕೊಟ್ಟದ್ದರಿಂದ, ರಶಿಯರು ಚೀನದಲ್ಲಿದ್ದ ತಮ್ಮ ವಕಾಲತಿಯ ಜನರನ್ನು ಅಲ್ಲಿಂದ ತರಿಸಿಕೊಂಡಿರುತ್ತಾರೆ. ಸ್ವಜನರನ್ನು ತರಿಸಿಕೊಳ್ಳುವದೆಂದರೆ- ಸ್ನೇಹ ಮುರಿಕೊಂಡಂಥ ಸೂಚನೆಯು. ರಾಷ್ಟ್ರ-ರಾಷ್ಟ್ರಗಳ ನಡುವಿನ ಮಾತು ಕಥೆಯು ಈ ತೆರವಾಗಿ ನಿಂತು ಹೋಯಿತೆಂದರೆ- ಯುದ್ಧವೇ ಕೊನೆಯ ಉಪಾಯವು. ಮಾತಿನಿಂದ ಬಗೀ ಹರಿಯದ್ದು ಶಸ್ತ್ರದಿಂದ ಬಗೀ ಹರಿಯುವದೆಂದು ಹೇಳುವರು. ಆ ಪ್ರಕಾರ ಚೀನ ರಶಿಯಾಕ್ಕೆ ಯುದ್ಧ ಹತ್ತುವದು ತೀರ ಸನಿಯವಾಗಿದೆ.

ವಿಲಾಯತಿಯಲ್ಲಿ ಶಾಂತತಾ ಪರಿಷತ್ತುಂಟು. ರಾಷ್ಟ್ರಸಂಘವುಂಟು. ಅದರ ವಿದ್ಯಮಾನ ಈ ಜಗಳ ತೀರಿಸಿಕೊಳ್ಳಬೇಕೆಂದು ಎಲ್ಲಿಯೋ ಒಂದು ಮೂಲಿಯಲ್ಲಿ ಸೂಚನೆಯಾಗಿದೆ. ವಾಸ್ತವಿಕವಾಗಿ ರಾಷ್ಟ್ರಸಂಘದವರು ಮಧ್ಯಸ್ಥಿಕೆ ಮಾಡಿ, ಯುದ್ಧ ಮತ್ತು ಯುದ್ಧದಿಂದಾಗುವ ಚಸಲಯವನ್ನು ನಿಲ್ಲಿಸಬಹುದಾಗಿದೆ. ಆದರೆ ಬೊಲ್ಶೆವಿಕದ ಮೂಲೋತ್ಪಾಟನವಾಗಬೇಕೆಂದು ಎಲ್ಲರ ಹೊಟ್ಟೆಯಲ್ಲಿರುತ್ತಿರುವದರಿಂದ, ಮಧ್ಯಸ್ಥಿಕೆಯಿಂದ ಯುದ್ಧ ನಿಲ್ಲುವ ಸಂಭವವಿಲ್ಲ. ರಶಿಯಾದ ಅಂತಃಸ್ಥಿತಿಯು ನೆಟ್ಟಗಿಲ್ಲ; ಅದರಂತೆ ಚೀನದ್ದೂ ಇರುವದಿಲ್ಲ. ಇವೇ ಎರಡು ಕಾರಣಗಳಿಂದ ಯುದ್ಧವಾಗಲಾರದೆಂದು ಕೆಲವರ ತರ್ಕವಿರುತ್ತದೆ.

ಚೀನರಾದ ನಾವು ರಶಿಯರ ಕೂಡ ಯುದ್ಧಮಾಡಲಿಕ್ಕೆ ಹೆದರುವದಿಲ್ಲ. ನಮ್ಮ ಸಿದ್ಧತೆಯೂ ಉಂಟು. ಆದರೆ ಯುದ್ಧವಾಗುವ ಸಂಭವವಿಲ್ಲೆಂದು ಚೀನದ ಪರರಾಷ್ಟ್ರಗಳ ಮಂತ್ರಿಯು ಹೇಳುತ್ತಾನೆ.

ಗುರುರಾವ ಕೃಷ್ಣ ಹರಕಾರೆ ಯಾರು?

ಪಂಡಿತ ಮೋತಿಲಾಲರ ಮೇಲೆ ರಾಜಕೀಯ ಸ್ವಾತಂತ್ರ್ಯದ ವಿರುದ್ಧ ವ್ಯಕ್ತಿಯು ಹತ್ತಿರುವ ಪಾಂಡ್ಯೆಯು ಕೋರ್ಟಿನಲ್ಲಿ ದಾವೆ ಮಾಡಿದ್ದ ಗುರುರಾವ ಕೃಷ್ಣ ಹರಕಾರಿ ಎಂಬ ವಿಕ್ಷಿಪ್ತ ವ್ಯಕ್ತಿಯು ಯಾರೆಂಬುದನ್ನು ತಿಳಿಕೊಳ್ಳುವ ಜಿಜ್ಞಾಸೆಯು ಯಾರೊಬ್ಬರಿಗೆ ಹುಟ್ಟುವದು ಸಹಜವದೆ. ಅವರೊಬ್ಬ ಪ್ರಚಂಡ ಸಾಹಸ ಮಾಡಬೇಕೆಂಬ ವಿಕ್ಷಿಪ್ತಯಾದ ವಾಮನ ಮೂರ್ತಿ ಎಂದು ಹೇಳಬಹುದು. ಗುರುರಾಯರು ವಿಜಾಪೂರ ಜಿಲ್ಲೆಯವರು. ಸುದಾಮ ದರಿದ್ರರು. ಧಾರವಾಡಕ್ಕೆ ಬಂದು ವಾರ ಹಚ್ಚಿಕೊಂಡು ವಿದ್ಯೆ ಕಲಿತರು. ಆದರೆ ಯಾವ ಪರೀಕ್ಷೆ ಪಾಸಾದಂತೆ ತೋರುವದಿಲ್ಲ. ವಿಜಾಪೂರ ಜಿಲ್ಲೆಗೆ ಸೇರಿದ ಒಂದ ದೊಡ್ಡ ದೇಸಗತಿಯ ಕಾರಭಾರಿಯಾದರು. ದತ್ತಕವು ತಮ್ಮಂತೆ ಸಾಬೀತ ಮಾಡಿಸಿದರೆ- ಒಂದೆರಡು ಗ್ರಾಮಗಳನ್ನು ಮೆಚ್ಚಿ ಕೊಡುತ್ತೇನೆಂದ ಬಾದಶಹಾಗ್ರೆ ಕರಾರು ಮಾಡಿದರು. ಅದಾದ ಮೇಲೆ ಕೆಲವು ಕಾಲ ಅಜ್ಞಾತವಾಸವೆಂದರೆ ನಿರುದ್ಯೋಗಿಯಾಗಿದ್ದರು. ಅನಂತರ ಎಲ್ಲಾ ಸ್ವಾಮಿಗಳನ್ನು ಒಂದೆಡೆಯಲ್ಲಿ ಕೂಡಿಸಿ, ಧಾರ್ಮಿಕ ಸಹಿಷ್ಣುತೆ ಒಪ್ಪಂಟ ಮಾಡಬೇಕೆಂಬ ಆಗಲಾರದ ನಿಗಲಾರದ ಕಲಹಕ್ಕೆ ಹತ್ತಿದರು. ಶೆಫರ್ಡಸಾಹೇಬರ. ಆಗ ವಿಜಾಪೂರದ ಕಲೆಕ್ಟರರಾಗಿದ್ದರು. ಅವರು ಗುರುರಾಯರ ತಂತ್ರದಲ್ಲಿ ಸಿಕ್ಕರು. ಉಡುಪಿಯು ಒಬ್ಬ ಸ್ವಾಮಿಗಳೂ ಇವರ ಮೋಹದ ಮಾತಿಗೆ ಒಳಗಾದರು. ಶೆಫರ್ಡ ಸಾಹೇಬರು ಸ್ವಾಮಿಗಳನ್ನು ತಮ್ಮ ಬಂಗಲೆಗೆ ಕರೆಸಿ, ಟೆಲನೀಸರಿಂದ ಪಾದಪೂಜೆ ಮಾಡಿಸಿದರು. ಆಗಿನ ಮುಂಬಯಿಯ ಗವ್ಹರ್ನರಸಾಹೇಬರಿಗೂ ಈ ಹುಚ್ಚು ತಗಲಿಕೊಂಡಿತು. ಅವರ ಸೇಕ್ರೆಟರಿಯು ಗುರುರಾಯರ ಕೂಡ ಪತ್ರವ್ಯವಹಾರ ನಡಿಸಿದನು. ಬ್ರಾಹ್ಮಣರೊಳಗಿನ ದ್ವೈತಾ-ದ್ವೈತ, ಮುಸಲಮಾನರೊಳಗಿನ ಸಿಯಾ ಸುನಿ, ಕ್ರಿಶ್ಚನ್ನರೊಳಗಿನ ಪ್ರೊಟೆಸ್ಟಂಟ, ರೋಮನಕ್ಯಾಥಲಿಕ, ಜೈನ, ಬೌದ್ಧ, ಆರ್ಯಸಮಾಜ, ಮೊದಲಾದ ಧರ್ಮಗುರುಗಳು ಎದುರಾ ಎದುರು ಕೂತು, ಧಾರ್ಮಿಕ ಸಹಿಷ್ಣುತೆಯ ಠರಾವು ಮಾಡುವದು ಅಸಂಭವನೀಯ ಮತ್ತು ಅಶಕ್ಯವೆಂದು ತೋರಿದ ನಂತರ ಗವ್ಹರ್ನರಸಾಹೇಬರು ಹರಕಾರೆಯವರನ್ನು ನಡುನೀರಲ್ಲಿ ಬಿಟ್ಟರು. ಅನಂತರ ಇವರು ಹಂಪಿಯ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳ ಸಂಸ್ಥಾನ ಮಂತ್ರಿಯಾಗಿ ಗುತ್ತಿಯ ದಿವಾನಬಹಾದ್ದೂರ ಕೇಶವ ಪಿಳ್ಳೆಯವರಂಥವರನ್ನು ಬಗಲಿಗೆ ಹಾಕಿ, ವಿವಿಧ ಠಾರಸ್ಥಾನಗಳನ್ನು ನಡೆಸಿದರು. ಅಲ್ಲಿಯೂ ನೈಪೆ ಇಳ್ಳ

ಬಾಗಿಲು ನಾಸಿಕ ಪ್ರಾಂತವಾಸಿಯಾದರು. ಗೋರಕ್ಷಣದ ಪುರಸ್ಕರ್ತರಾಗಿ, ದೇಶದ ತುಂಬ ಗೋವಧವಾಗಬಾರದೆಂದು ದಿವಾಣಿ ಕೋರ್ಟಿನಲ್ಲಿ ಸರಕಾರದ ಮೇಲೆ ದಾವೇ ಮಾಡಿದರು. ಆ ದಾವೆಯು ಸ್ವಾಂಪು ಪಟ್ಟದ್ದಕ್ಕೂ ಬೇರೆ ಕಾರಣಗಳಿಂದಲೂ ಕಿತ್ತಿ ಹೋಯಿತು. ಅನಂತರ ಪಂಡಿತ ಮೋತಿಲಾಲರ ಮೇಲೆ ಸ್ವರಾಜ್ಯ ಸ್ವಾತಂತ್ರ್ಯದ ಚಳವಳಿಯ ಮೂಲಕ ದೇಶದಲ್ಲಿ ರಕ್ತ ಪಾತವಾಗುವ ಕಾರಣ ಅದನ್ನು ನಿಲ್ಲಿಸಬೇಕೆಂದು ದಾವೇ ತಂದರು. ಆದರೆ ಕೋರ್ಟಿನವರು ಇದನ್ನು ಕಿತ್ತಿ ಹಾಕಿದರು. ಈ ಪ್ರಕಾರ ಮೂರ್ತಿ ಸಣ್ಣದಾದರೂ ವಿಶೇಷ ಪ್ರಕಾರದಿಂದ ಕೀರ್ತಿ ದೊಡ್ಡದಾಗಿ ಹೊಂದ ವ್ಯಕ್ತಿಯು ಈ ಗುರುರಾಯರಾಗಿದ್ದಾರೆ.

ಶಿಕ್ಷಕರ ಸಂಬಳ ಕೊಡಿಸಬೇಕೆಂದು ಶಿಕ್ಷಣದ ಸಚಿವರಿಗೆ ಸಂದೇಶ.

—(೦)—

ಹಾವೇರಿಯ ಒಬ್ಬ ಸ್ವದೇಶಾಭಿಮಾನಿ ವಕೀಲರಾದ ಶ್ರೀ ಕರಿಮತ್ತಿಹಳ್ಳಿ ಹುಚ್ಚರಾಯರು ಶಿಕ್ಷಣಮಂತ್ರಿಯವರಿಗೆ ಧಾರವಾಡ ಜಿಲ್ಲಾ ಲೋಕಲ್‌ಬೋರ್ಡಿನ ಶಿಕ್ಷಕರ ಸಂಬಳ ಕೊಡಿಸಬೇಕೆಂಬ ತಾರನ್ನು ಕಳಿಸಿದ್ದಾರೆ. ಆ ತಾರು ಧಾರವಾಡದ ಜನಕ ಹೇಳಿ ಬಂದಂತೆ ವರ್ತಮಾನವುಂಟು. ಶಿಕ್ಷಕರಿಗೆ ಸಂಬಳ ಕೊಡುವ ಸಾರೋದ್ಧಾರ ಅಧಿಕಾರವುಳ್ಳಂಥ ಗೃಹಸ್ಥರು ಹಾವೇರಿಯಲ್ಲಿಯೇ ಇದ್ದಾರೆ. ಅವರನ್ನು ಕೇಳಿದ್ದಾರೆ. ಮತ್ತು ಅವರ ಸ್ನೇಹಿತರಾದ ವಕೀಲರಲ್ಲಿ ಕೆಲವರು ಅವರ ಮನೆಯ ಮುಂದೆ ಸತ್ಯಾಗ್ರಹ ಮಾಡಿ ಕೂತಿದ್ದರೆ. ಶಿಕ್ಷಕರ ಸಂಬಳದ ದೆಸೆಯಿಂದ ಐನೂರು ಮೈಲಿನ ಮೇಲಿರುವ ಶಿಕ್ಷಣಮಂತ್ರಿಗೆ ತಾರು ಮಾಡುವ ಅಗತ್ಯ ಉಂಟಾಗುತ್ತಿದ್ದಿಲ್ಲ. ಶ್ರೀ. ಹುಚ್ಚರಾಯರು ತಾರು ಮಾಡಿದ್ದು, ಶಿಕ್ಷಕರ ವಿಷಯವಾಗಿ ಸಹಾನುಭೂತಿ ತೋರಿಸುವಂತ ಗಿರುವದು ನಿಜ. ಆದರೆ ತಾರಿಗಿಂತ ಸತ್ಯಾಗ್ರಹವು ರಾಮಬಾಣ ಉಪಾಯವಾಗುತ್ತಿತ್ತು. ಇನ್ನೂ ಕೆಲವರು ನಾಲ್ಕೇ ಬೇಳಿನ ಅಂತರವಿದ್ದರೂ, ಅವಕ್ಕೆ ಜನ್ಮಜನ್ಮಾಂತರದಲ್ಲಿ ಭೆಟ್ಟಿಯಾಗುವದಿಲ್ಲ!! ಆ ತರದ ಸಂಬಂಧವು ಮಿ. ಹುಚ್ಚರಾವ ಮತ್ತು ಮಿ. ಸಿದ್ದಪ್ಪನವರ ನಡುವೆ ಇರುತ್ತದೆಂದು ನಾವಂತೂ ಹೇಳಲಾರೆವು.

ಲಾಹೋರ ಮುಂತಾದ ಸ್ಥಳಗಳಲ್ಲಿ ಕೆಂಪು ಪತ್ರಗಳನ್ನು ಬರೆದ ಜನರನ್ನು ಹಿಡಿದಿರಿಸಿದನೆಂದು ದಸ್ತಗಿರ ಮಾಡಲ್ಪಟ್ಟ ಧಾಂಧನೆಂಬವನು ಅನ್ನಬಿಟ್ಟು, ನಿರಾಹಾರದ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾನೆ.

ಮುಸಲಮಾನರ ಕಾಂಗ್ರೆಸ ಪಕ್ಷ.

—(೦)—

ಮುಂಬಯಿಯಲ್ಲಿ ಮಿ. ಬ್ರೆಲ್ವಿ ಮೊದಲಾದ ಪ್ರಮುಖ ಮುಸಲಮಾನರು ಹೆಚ್ಚಾಗಿ ಕಾಂಗ್ರೆಸದಲ್ಲಿ ಸೇರಿ, ದೇಶಕ್ಕೆ ಸ್ವಾತಂತ್ರ್ಯ ದೊರಕಿಸಬೇಕೆಂಬದಾಗಿ ಒಂದು ಸಂಘ ಸ್ಥಾಪಿಸಿದ್ದನ್ನು ಈ ಮೊದಲು ಬರೆದಿದ್ದೇವೆ. ಇದೇ ಉದ್ದಿಷ್ಟವಾಗಿ ಬರುವ ಆದಿತ್ಯವಾರದ ದಿವಸ ಮುಂಬಯಿಯಲ್ಲಿ ಒಂದು ಪೂರ್ವಾಲೋಚನೆಯ ಕಮಿಟಿಯನ್ನು ಕೂಡಿಸಬೇಕೆಂದು ಗೊತ್ತು ಮಾಡಿ, ಇಲ್ಲಿಯ ಪ್ರಮುಖ ಮುಸಲಮಾನರು ಈ ಕಮಿಟಿಗೆ ಬರಬೇಕೆಂದು ಒಂದು ಜಾಹೀರ ವಿನಂತಿಪತ್ರವನ್ನು ಕಳಿಸಿದ್ದಾರೆ. ಮುಸಲಮಾನ ಬಾಂಧವರು ಮೊದಲು ದೇಶ, ಅನಂತರ ಧರ್ಮವೆಂದು ಭಾವಿಸಿಕೊಂಡು, ಹಿಂದೂರೊಡನೆ ಒಂದಾಗಿ, ಕಾಂಗ್ರೆಸ ರಥವನ್ನು ಮುಂದೆ ಸಾಗಿಸುವರೆಂದು ಆಶಿಸುತ್ತೇವೆ.

ಬಾಗಲಕೋಟೆಯಲ್ಲಿ ಬಜಂತ್ರಿಯವರಿಗೆ ಬಹಿಷ್ಕಾರ.

—(೦)—

ಆಷಾಢ ಏಕಾದಶಿಯ ದಿವಸ ಶ್ರೀ ವಿಠ್ಠಲದೇವರ ಪಲ್ಲಕ್ಕಿಯು ವಾದ್ಯ ವೈಭವದೊಡನೆ ಹೊರಡುವ ಪುರಾತನ ಸಾಂಪ್ರದಾಯ. ಆದರೆ ಮಸೀದಿಯ ಮುಂದೆ ವಾದ್ಯ ಬಾರಿಸಬಾರದೆಂದು ಮುಸಲಮಾನರು ವಿಘ್ನ ತಂದಿದ್ದಾರೆ. ಬಜಂತ್ರಿಯವರಲ್ಲಿ ಊದುವವರು ಹಿಂದೂ, ಬಾರಿಸುವವರು ಮುಸಲಮಾನರು. ಬಾರಿಸುವವರು ಮಸೀದಿಯ ಮುಂದೆ ಬಾರಿಸತಕ್ಕವರಲ್ಲ ಎಂದು ಹೇಳಿದ್ದರಿಂದ ಹಿಂದೂ ಜನರು ಇವರಿಗೆ, ಊದುವ ಹಿಂದೂ ಬಜಂತ್ರಿಯವರಿಗೂ ಬಹಿಷ್ಕಾರ ಹಾಕಿದ್ದಾರೆ. ಹಿಂದೂ ಬಜಂತ್ರಿಯವರು ಮುಸಲಮಾನ ಕಾಸೆದವರ ಪಕ್ಷ ಹಿಡಿದದ್ದರಿಂದ, ಅವರ ಪಾಲಿಗೂ ಬಹಿಷ್ಕಾರ ಒಂದಿದೆ.

ಕಳೆದ ವಾರದಲ್ಲಾಗುವ ಮಳೆಯಿಂದ ಉತ್ತರ ನಾಡಿನ ತ್ರಿಚಿನಾಪಳ್ಳಿ ಮತ್ತು ತಂಜಾವರ ಜಿಲ್ಲೆಗಳಲ್ಲಿ ನದಿಯ ನೀರು ಹೊರಚಿಮ್ಮಿ ಬಹುವಾಗಿ ಕೆಡಿಸುತ್ತಿರುವದು. ಇದನ್ನು ತಪ್ಪಿಸುವದಕ್ಕಾಗಿ ನದಿಗೆ ಎರಡು ದೊಡ್ಡ ಬಿಸಲುಗಳನ್ನು ತೊಡುವರು ಮತ್ತು ಉತ್ತರವಾಹಿನಿಯಾಗಿ ಒಂದು ದೊಡ್ಡ ಕಾಲುವೆ ತೋಡುವರು.

ಕಾಬೂಲದಿಂದ ಕಂದಹಾರ-ಹವೆನ ಮಾರ್ಗವಾಗಿ ಹಿಂದುಸ್ಥಾನಕ್ಕೆ ಟಪಾಲು ಬರಲಾರಂಭಿಸಿದೆ. ರಶಿಯಾದ ಮಾಸ್ಕೋ ಪಟ್ಟಣದಿಂದ ವಿಮಾನದಿಂದ ಟಪಾಲು ಬರಹೋಗುತ್ತಿರುವದು.

ಗುಜರಾಥದ ಮಳೆಯು ಸಿಂಧಕ್ಕೆ ಹೋಯಿತು. ಮಳೆಯು ಮಾಡತಕ್ಕಷ್ಟು ಅನರ್ಥ ಮಾಡಿದೆ. ಆಸ್ಪತ್ರಿ ಮತ್ತು ಪೋಲೀಸಠಾಣಿಗಳಲ್ಲಿ ಕೂಡ ಎದೆಮಟ ನೀರು ನಿಂತದೆ. ಸಕ್ಕರದ ಆಗಮಗಾರಿಯ ದೆಸೆಯಿಂದ ಕಟ್ಟಿದ ಆರತರ ಜನರ ಕಟ್ಟಡವು ಭೂದೇವಿಗೆ ನಮಸ್ಕಾರ ಹಾಕಿತು. ಮಳೆಯಿಂದ ಅಲ್ಲಲ್ಲಿ ಜನರು ಸತ್ತ ವರ್ತಮಾನಗಳು ಬರುತ್ತಿರುವವು.

ನೋಟೀಸು

ಅಂತಪ್ಪಾ ಬಿನ್ನ ಜ್ಞಾನಪ್ಪಾ ನೇಟಿ ಸಾ|| ಚಿಕ್ಲಿ ತಾಲ್ಲೂಕ ರೋಣ ಇವನಿಗೆ-

ಕೆಳಗೆ ಸಹಿ ಮಾಡಿದವನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ- ತಾರೀಖು ೧೫-೭-೧೯೨೪ನೇ ಇಸ್ವಿ ರೋಜ ಸೋಮವಾರ ದಿವಸ ನನ್ನ ಮನೆಯೊಳಗಿನ ಎರಡು ಎತ್ತು ಒಂದು ಹೋರಿ ಈ ಪ್ರಕಾರ ದನಗಳನ್ನು ನೀನು ಹಿಡಿದು ಮತ್ತು ..... ಗಿಡಗಂಟೆಗಳು ಹಾಗು ..... ರದು ..... ರಲ್ಲಿ ೪-೫ ಜನರು ಅಂದರೆ (೧) ಅಂತಪ್ಪಾ (೨) ಮಾ.....ಪ್ಪಾ (೩) ಗುಳಪ್ಪಾ (೪) ಮರಿಗಪ್ಪಾ ಇನ್ನು ಒಬ್ಬ ಈ ಪ್ರಕಾರ ಜನರು ಒಂದು ನನಗೆ ಈ ಕಾಗದಕ್ಕೆ ಸಹಿ ಮಾಡು ಅಂತಾ ಕೇಳಿದರು. ಅದಕ್ಕೆ ನಾನು ಸಹಿ ಮಾಡಿ ಕೊಡಲ್ಲ ಅಂತಾ ತಕರಾರು ಮಾಡಿದೆ. ಅದಕ್ಕೆ ಅವರು ೩-೪ ಜನರು ನನ್ನ ಗಿಡಾ ಕಡಿಯುವ ಬಾ(ಚು)ಗತ್ತಿ ಕಸಕೊಂಡು ಇದ್ದರೆ ನಿನ್ನ ವ್ಯವಸ್ಥಾ ಮಾಡುತೇವೆ ಅಂತಾ ನನ್ನನ್ನು ಬೆದರಿಕೆ ಕೂತರು. ನಾನು ಒಬ್ಬನೇ ಇದ್ದದರಿಂದಾ ಹೆದರಿ ಒಂದು ಬಿಳೀ ಕಾಗದದ ಮೇಲೆ ಪೋಸ್ಟಿನ ಟಿಕಿಟು ಹಚ್ಚಿ ಅದರ ಮೇಲೆ ತಾ|| ೧೫-೭-೧೯೨೪ ನೇ ತಾರೀಖು ಹಾಕಿಸಿಕೊಂಡು ಹೋಗಿರುತ್ತಾರೆ. ಸದ್ರಿ ಕಾಗದಾ ತಾರೀಖು ೧೫-೭-೧೯೨೪ನೇ ಇಸ್ವಿ ರೋಜ ಸೋಮವಾರ ದಿವಸ ನಾನು ಹೊಲದಿಂದಾ ಬಂದು ನಮ್ಮ ಊರ ಪೋಲಿಸಪಾಟೀಲ ಚನ್ನಪ್ಪಗೌಡಾ ಮರಿಗೌಡಾ ಪಾಟೀಲ ಇವರಿಗೆ ಸಹಾ ತಿಳಿಸೇನಿ ಮತ್ತು ಎಲ್ಲ ಊರೊಳಗಿನ ಜನರಿಗೆ ತಿಳಿಸೇನಿ. ಆ ಕಾಗದಾ ಎಲ್ಲಿ ಹೋರಡತದಯೋ ಅಲ್ಲಿ ನನ್ನ ಫಿರ್ಯಾದಿ ಅದೆ. ಅದು ನನ್ನ ಕಡಿಂದಾ ಬಲಜೋರಿಯಿಂದಾ ತಗೊಂಡದ್ದು ಇರುತ್ತದೆ. ಈ ನೋಟೀಸಿನಿಂದಾ ನಿಮಗೆ ತಿಳಿಸುತ್ತೇನೆ.

ತಾ|| ೧೯-೭-೨೪

ಸಹಿ— ಗುರಪ್ಪಾ ಬಸಪ್ಪಾ ನೇಟಿ ಸಾ|| ಕಡಹಾಳ ತಾಲ್ಲೂಕ ನವಲಗುಂದ

ಜಾಹೀರ ನೋಟೀಸು

ಕೆಳಗೆ ಸಹಿ ಮಾಡಿದವರ ಕಡೆಯಿಂದಾ ಯಾವತ್ತು ಜನರಿಗೆ ಜಾಹೀರ ನೋಟೀಸಿನಿಂದಾ ಜಾಹೀರ ಮಾಡುವದೇನಂದರೆ- ಧಾರವಾಡ ಜಿಲ್ಹಾ ನವಲಗುಂದ ತಾಲೂಕ ಪೈಕಿ ಕಡಹಾಳ ಗ್ರಾಮದಲ್ಲಿ ನಮ್ಮ ಖಾಸ ತಂದಿಯಾದ ಬಸಪ್ಪ ಮಲ್ಲಪ್ಪ ಮೇಟಿ ಸಾ ಕಡಹಾಳ ಈತನ ಹೆಸರಲೇ ಖಾತೆಯಿರುವ ಕಡಹಾಳ ಗ್ರಾಮದ ಜಮೀನು

ರಿ ಸ.	ಯಕರೆ	ಕರವು
೩೩	೨೫।೧೭	೩೮
೪೩	೧೧।೯	೧೩
ಪೊ.	೧।೮	

೧೧।೧೭

೧೯೨೩ ಆಟಗೇರ ಕಟ್ಟಿ ೧೫೩ ಕರವು ರೂಪಾಯಿ ೧೯ ಈ ಪ್ರಕಾರ ಜಮೀನಗಳು ಪಿತ್ರಾರ್ಜಿತ ಆಸ್ತಿಗಳು ಇದ್ದು ಸದ್ರಿ ನನ್ನ ಜನಕ ತಂದಿಯು ಈಗ ಅಜಮಾಸು ೫-೬ ವರುಷಗಳಿಂದಾ ದುರಜನರ ಸಂಗತಿ ಹಿಡಿದು ನನ್ನ ಖಾಸ ಪಿತ್ರಾರ್ಜಿತ ಆಸ್ತಿಯನ್ನು ನನಗೆ ಮುಳಗಿಸಬೇಕು ಅಂಬುವ ದುರಬುದ್ಧಿಯಿಂದಾ ಒಬ್ಬ ಜ್ಞಾನಪ್ಪಾ ಬಿನ ನಿಂಗಪ್ಪಾ ದೊಡ್ಡಮೇಟಿ ಸಾ. ಚಿಕ್ಕ ಹಾಂಡ್ಯಾ ರೋಣ ಅಂಬುವದು ತಾ|| ೨೪-೧೧-೨೪ನೇ ದಿವಸ ರೋಖ ರೂಪಾಯಿ ೧೭೦೦ ನನ್ನ ತಂದಿಗೆ ಕೈ ಬಾಜಿ ಮಾಡಿ ದಬಲಿಗೆ ಅಂದರೆ ರೋಖ ೩೪೦೦ ರೂಪಾಯಿಗೆ ವಂದು ಕಾಗದ ಅಂದರೆ ಕಡಹಾಳ ಗ್ರಾಮದ ರಿ| ಸ| ನಂಬರು ೩೩ ಯಕರೆ ೨೫।೧೭ ಕರವು ರುಪಾಯಿ ೩೮ ಈ ಪೂರಾ ಜಮೀನು ತೋರಿಸಿ ಖಾತ್ರಿಯಾಗಿ ಬರಸಿಕೊಂಡಿರುತ್ತಾರೆ ಸದ್ರಿ ನನ್ನ ಖಾಸ ತಂದಿಯು ಇವತ್ತಿನವರೆಗೂ ದುರಜನರಲ್ಲಿ ಇದ್ದು ಈಗ ಈ ನೋಟೀಸಿನಲ್ಲಿ ನಮೂದ ಮಾಡಿದ ರಿ| ಜಮೀನ ಸರವೆ ನಂಬರು ಯಾವತ್ತು ವಿಕ್ರಿ ಮಾಡಿ ತಾನು ಘರಾಕಿ ಆಗಬೇಕು ಅಂಬುವ ದುಷ್ಟಜನರ ಚಿತಾವಣಿಯಿಂದಾ ಈ ಪ್ರಕಾರ ಸದ್ರಿ ನನ್ನ ಪಿತ್ರಾರ್ಜಿತ ಆಸ್ತಿಗೆ ನಾನೇ ಖಾಸ ಮಾಲಕನಿರುತ್ತೇನೆ ಮತ್ತು ನನ್ನ ತಂದಿಯು ಯಾವತ್ತು ಆಸ್ತಿಗೆ ಮಾಲಿಕಿ ಹಕ್ಕ ಯಾವ ತರದ್ದು ಇರುವದಿಲ್ಲಾ ಸದ್ರಿ ನನ್ನ ಖಾಸ ತಂದಿ ಬಸಪ್ಪಾ ಮಲ್ಲಪ್ಪಾ ಮೇಟಿ ಸಾ| ಕಡಹಾಳ ತಾಲೂಕ ನವಲಗುಂದ ಇವನ ಕಡೆಯಿಂದಾ ಯಾರಾದರೂ ಯಾವ ತರದಿಂದಾ ಸದ್ರಿ ಗ್ರಾಮದ ಜಮೀನು ವಿಕ್ರಿ ಅಗರ ಖರೀದಿ ವ ಅಗಾವ ಲಾವಣಿ ವಗೈರೆ ಯಾವತರದ್ದು ಕಾಗದಾ ಬರಸಿ ನೋಂದಣಿ ಮಾಡಿಸಿ ಕೊಂಡಾಗ್ಯು ಸದರಿ ಆಸ್ತಿ ಮೇಲೆ ಬಾಂಧಾಯಿಸಲಾರದು ಮತ್ತು ಈಗ ನನ್ನ ಮನಿಯೊಳಗೆ ಇರುವ ಜಂಗಮ ಮಾಲು ಅಂದರೆ ಕೆಳಗೆ ವಿವರಿಸಿದಂತೆ ಅವೆ-

೧ ಯತ್ತು ಎರಡು ಅದರ ಚೆರೆ ಪಟ್ಟಿ ಬಳೇದ ಪಟ್ಟಿಯಂಗೊಂಡಿಂದು ವಂದು, ಬಾಲಾ ಮತ್ತು ಯಾವತ್ತೂ ಅವಯವಗಳು ಸಾಬಿತ ಇರೋವದು

೨ ಮತ್ತೊಂದು ಯತ್ತು ಅದರ ಚೆರೆಪಟ್ಟಿ ಗೊಟಗೊಂಬು ಯಲ್ಲಾ ಅವಯವಗಳು ಸಾಬಿತ ಇರೋದು ಈ ಎರಡು ಯತ್ತಿನ ಕಿಮ್ಮತ್ತು ಅಜಮಾಸು ೩೦೦ ರೂಪಾಯಿ

೩ ಹೋರಿ ವಂದು ವೈಯಲ್ಲಾ ಬಳೇದು ಅದರ ಅಜಮಾಸ ವಯಾ ೩ ಎರಡಲ್ಲಿರದು ಕೊಡು ಸಣ್ಣವು ಅದು ಮನಿಯಲ್ಲಿ ಹುಟ್ಟಿದ್ದು ಯಾವತ್ತು ಅವಯವ ಸಾಬಿತ ಅದರ ಅಜಮಾಸ ಕಿಮ್ಮತ್ತು ರೂಪಾಯಿ ೧೦೦

೪ ವಂದು ಯಮ್ಮಿಗೊಡ್ಡ ಅದರ ಚೆಹರೆ ಮೂಡಲಕೋಡು ಕರೀ ಬಣ್ಣದ್ದು ಯಾವತ್ತು ಅವಯವ ಸಾಬಿತು ಅದರ ಅಜಮಾಸ ಕಿಮ್ಮತ್ತು ರೂಪಾಯಿ ೬೦

೫ ಮೇವಿನ ಬಣವಿ ಮೂರು ಅದರ ಅಜಮಾಸ ಕಿಮ್ಮತ್ತು ರೂಪಾಯಿ ೩೦೦

೬ ಚಕ್ಕಡಿ ವಂದು ಅದರ ಅಜಮಾಸ ರೂಪಾಯಿ ೧೦೦

೭ ದಾಗೀನಗಳು ಬಂಗಾರದ ಬಳಿ ಎರಡು ಅಜಮಾಸ ತೊಲಿ ೫ ಕಿಮ್ಮತ್ತು ರೂಪಾಯಿ ೧೦೫, ಬೆಳ್ಳಿ ತೋಡೆ ಅಜಮಾಸ ತೊಲಿ ೧೦೦ ಕಿಮ್ಮತ್ತು ರೂಪಾಯಿ ೫೦, ಇದರ ಶಿವಾಯ ಮನಿಯೊಳಗಿನ ತಾಂಬ್ರ ವ ಹಿತ್ತಾಳಿ ಸಾಮಾನು

೮ ಮತ್ತು ನನ್ನ ಖಾಸ ಜಮೀನಿಯಲ್ಲಿ ಬೆಳೆದ ಜೋಳದ ಹಗೆ ಹೇರ ೨೦ ಅದರ ಕಿಮ್ಮತ್ತು ರೂಪಾಯಿ ೪೦೦

ಈ ಹಗೆ ಕರಿಬಸಪ್ಪಾ ಮೇಟಿಯವರ ಬಾಗಲ ಮುಂದೆ ಇರೋದು ಮತ್ತು ಮನಿಯೊಳಗಿನ ಜಂಗಮ ಮಾಲು ಯಾರಾದರೂ ನನ್ನ ತಂದಿ ಕಡಿಂದಾ ತಗೊಂಡಂಗ ಅದು ಖರಿದಿ ಅನಿಸಲಾರದು ಯಾಕಂದರೆ ನಾನು ಸದರಿ ಆಸ್ತಿಗೆ ಮಾಲ್ಕಿ ಹಕ್ಕದಾರನು ಇರುತ್ತೇನೆ ಈ ನೋಟೀಸಿನಲ್ಲಿ ನಮೂದ ಮಾಡಿದ ಯಾವತ್ತು ಸಾಮಾನಗಳನ್ನು ಯಾರಾದರೂ ತಗೊಂಡು ಲುಕಸಾನ ಆಗಬಾರದು ಅಂತಾ ಈ ಜಾಹೀರ ನೋಟೀಸಿನಿಂದಾ ತಿಳಿಸುತ್ತೇನೆ ಮತ್ತು ಈ ನೋಟೀಸಿನಿಂದಾ ತಿಳಿದೂ ತಿಳಿದು ತಗೊಂಡರೆ- ಅವರ ಮೇಲೆ ರೀತಿ ಪ್ರಕಾರ ಇಲಾಜ ಮಾಡುವದರಲ್ಲಿ ಬರಲಾಡೀತು ಅಂತಾ ಈ ನೋಟೀಸಿನಿಂದಾ ಜಾಹೀರ ಮಾಡುತ್ತೇನೆ ಅಂತಾ ಕೊಟ್ಟ ಜಾಹೀರ ನೋಟೀಸು

ತಾ|| ೧೯—೭—೧೯೨೭ನೇ ಇಸ್ವಿ

ಸಹಿ- ಗುರಪ್ಪಾ ಬಸಪ್ಪಾ ಮೇಟಿ ಸಾ|| ಕಡಹಾಳ ತಾಲೂಕ ನವಲಗುಂದ.

ನಿಮಗೆ ಉತ್ತಮವಾಗಿ ಉರಿಯುವ

ಒಣ ಕಟ್ಟಿಗೆ ಬೇಕೆ?

ನಮ್ಮ ಕಟ್ಟಿಗೆಯ ಅಡ್ಡೆದಲ್ಲಿ ಉತ್ತಮ ತರದ ದಿಂಡಲ, ಮತ್ತಿ ಮುಂತಾದ ಕಾಡ ಕಟ್ಟಿಗೆಗಳು ಬಹು ಸೋಯೀ ದರದಿಂದ ಸಿಗುತ್ತವೆ. ಮಳೆಗಾಲದಲ್ಲಿ ಒಣಗಿದ ಕಟ್ಟಿಗೆಗಳು ನಮ್ಮಲ್ಲಿಯಂತೆ ಎರಡನೇ ಕಡೆಗೆ ಸಿಗುವದು ಕ್ವಚಿತವು. ಮಳೆಗಾಲ ದಿವಸದಲ್ಲಾಗುವ ಹಸೀ ಕಟ್ಟಿಗೆಯ ತಾಪವನ್ನು ಳಿಸಬೇಕೆಂದು ನಾವು ಮುದ್ದಾಮು ಕಟ್ಟಿಗೆಯ ಅಡ್ಡೆಯನ್ನ ಜನರ ಸೋಯಿಗಾಗಿ ಇಟ್ಟಿರುತ್ತೇವೆ ಗ್ರಾಹಕರು ಇದರ ಲಾಭವನ್ನು ತಕ್ಕೊಳ್ಳಬೇಕು.

ಅಡ್ಡೆಯ ಮಾಲಕ,
ಬಾಳಾಚಾರ್ಯ ಶಾಂತಾಚಾರ್ಯ
ಮುನವಳ್ಳಿ
ಧಾರವಾಡ.
(ಸೆಂಟ್ರಲ ಬ್ಯಾಂಕಿನ ಗಡಿಯಾಳದ ಎದುರಿಗೆ)

THE ANKALIGI BANK LTD.

Head Office–
Kamanlatta Dharwar
Branches
Ranebennur & Hirekerur
5%
Interest allowed on
ANNA SAVINGS *BANK*
DEPOSIT.

Dharwar 3-1-1927 | K B ANKALIGI Managing Director

ಈ ಪತ್ರವನ್ನು ಅಂಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ರವಿವಾರ ತಾರೀಖು ೨೧ ನೇ ಜುಲೈ ೧೯೨೯ (ಸಂಚಿಕೆ ೧೬೨

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩॥ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩॥ ರೂ.

ಸೇವ್ಹಿಂಗ್ಸ ಬ್ಯಾಂಕ:— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ಡ್ರಾಫ್ಟ ಉದಾರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಕುಳಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ ಮೊಕತ್ಯಾರ ಪತ್ರಗಳೂ ಸದರಿ ಬ್ರ್ಯಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ ತಾ|| ೧೭-೨-೨೮

ಡಿ. ಡೊನೆಲಿ, ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ನ ೫- ಮಂಗಳವಾರಪೇಟೆ, ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ತಾಸು ಮತ್ತು ಬಹಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಬಂಡಿವಾಡ

ಮ್ಯಾನೇಜರ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ್ಕ ಹುಂಡಿ ಮೊದಲಿಗೆ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವಕ್ಕಿ ಇಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಕಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬೇಕು.

ಮ್ಯಾನೇಜರ ವಿಜಯ ಧಾರವಾಡ.

ನಿಮಗೆ ಈ ಈರಯ್ಯಾ ಬಸಲಿಂಗಯ್ಯಾ ಇವರ ಗುರ್ತು ಅದೇನು? ಗುರ್ತು ಅದೆ.

ಇದು ನೋಡಿರಿ ನೀವು ನಕ್ಕಾ ರೊಕ್ಕಾ ಅಪೇಕ್ಷಾ ಮಾಡಲಿಲ್ಲಾ? ಯಾವ ಜನರನ್ನೂ ಕೇಳಲಿಲ್ಲಾ

ನೀವು ನಿಮಗೆ ಅವರು ಭಕ್ತಿಯಿಂದ ಅನ್ನ ಅರಿವೆ ಕೊಡೋದು ಯಾಕೆ ದುಡ್ಡು ಕೊಟ್ಟರು? ಪ್ರೀತಿಯಿಂದ ಕೊಟ್ಟರು ನೀರಿಲ್ಲಾ ಭಾವಿಗೆ ಕಟ್ಟಿಸಿದೆ

ಈ ದುಡ್ಡು ಬರತಿತ್ತಲ್ಲಾ ಎಲ್ಲಿ ಇಡತಿದ್ದಿರಿ? ಆ ಗುಡಿಯಲ್ಲೆ ಇಡತಿದ್ದೆ ಕಡಿಯುವವರಿಗೇ ಕೊಡತಿದ್ದೆ

ಕೂಲಿ ಕೊಡೋದು ವಗೈರೆ ಯಾರು ಮಾಡುತ್ತಿದ್ದರು? ಇಲ್ಲಿ ಒಬ್ಬರು ಗುರುಪಾದಯ್ಯನವರು ಬರತಿದ್ದರು ಸೇವೆಗೆ ನಿತ್ಯ ಬರುತ್ತಿದ್ದರು ಅವರಿಗೆ ಹೇಳಿದೆ ಅದೇನು ಬಂದ ಬಂದ ಹಾಗೆ ಖರ್ಚು ಮಾಡಿತು ಅದೇನು ನೇಮವಿದ್ದಿಲ್ಲ

ಸುರು ಮಾಡುವ ಕಾಲಕ್ಕೆ ಎಷ್ಟು ರೂಪಾಯಿ ಇದ್ದವು? ೪-೫ ರೂಪಾಯಿ ಇದ್ದವು

ಸುರು ಮಾಡಿದನಂತ್ರ ಭಾವಿ ಸುರೂ ಮಾಡೇದೆ ಕ್ಕೊಡಿರಿ ಅಂತಾ ಕೇಳಿದಿರೇನು? ಇಲ್ಲಾ

ಯಾರಾದರೂ ಕೊಡದಿದ್ದರೆ ಭಾವೀ ಕೆಲ್ಸ ಅಲ್ಲೇ ನಿಲ್ಲುತಿತ್ತು? ನಿಂದರತಿತ್ತು ಅದು ಹಾಂಗೆ ಚಾಲೂ ಆಯಿತು

ಈ ಪ್ರಕಾರ ೧ ॥ ವರೆಗೆ ಜಬಾನಿಯಾದ ನಂತ್ರ ಆ ಹೊತ್ತಿನ ಕೆಲಸವು ಮುಗಿಯಿತು. ಮುಂದಿನ ಜಬಾನಿ ಶುಕ್ರವಾರ ೯॥ ಘಂಟೆಗೆ ಪ್ರಾರಂಭವಾಯಿತು

ರಶಿಯಾ ಮತ್ತು ಚೀನಕ್ಕೆ ಯುದ್ಧ ಪ್ರಾರಂಭ.

ರಶಿಯರು ರಶಿಯಾ ಮತ್ತು ಮಂಚೂರಿಯಾದ ಗಡಿಯಲ್ಲಿರುವ ಚೀನ ಛಾವಣಿಯ ಮೇಲೆ ದಾಳಿಯಿಟ್ಟರು. ಚೀನರು ಇವರನ್ನು ಹಿಂದಕ್ಕೆ ಸರಿಸಿದರು.

ರಶಿಯಾದ ವಿಮಾನಗಳು ಚೀನದ ಸರಹದ್ದಿನಲ್ಲಿ ತಿರುಗಾಡುತ್ತಾ ಚೀನ ಸೈನ್ಯದ ಚಲನವಲನ ನೋಡುತ್ತಿರುವವು.

ಚೀನ ಪಟ್ಟಣವಾದ ಹಾರ್ಬಿನ್ನದಲ್ಲಿ ಲಷ್ಕರೀ ಕಾಯದೆಯನ್ನು ಜಾಹೀರಮಾಡಿದ್ದಾರೆ.

ಸುಳ್ಳು ಸುದ್ದೀ ಹುಟ್ಟಿಸುವಂಥವರನ್ನು ತೋಫಿನ ಬಾಯಿಗೆ ಕೊಡುವಂತೆ ಗವ್ಹರ್ನರನು ಜಾಹೀರನಾಮೆ ಹಚ್ಚಿಸಿದ್ದಾನೆ.

ಯುದ್ಧ ಮಾಡಬಾರದೆಂಬ ತಹ್ನದ ಕಾಗದದ ಮೇಲೆ ಸಹೀ ಮಾಡಿದ್ದೀರಿ. ಎಚ್ಚರಿಕೆ ಎಂದು ಅಮೇರಿಕೆಯ ಅಧ್ಯಕ್ಷರು ರಶಿಯಾ ಮತ್ತು ಚೀನಕ್ಕೆ ಕಡ್ಡಾಯವಾಗಿ ತಿಳಿಸಿದ್ದಾರೆ.

ನೋಟೀಸು

ಹಾಲಪ್ಪಗೌಡಾ ತಂದಿ ಹನಮಂತಗೌಡಾ ಚಟ್ನಳ್ಳಿ ಇವರಿಗೆ —

ಕೆಳಗೆ ಸಹಿ ಮಾಡಿದ ಕಸ್ತವ್ವಾ ಕೋಂ ಹಾಲಪ್ಪಗೌಡಾ ಚಟ್ನಳ್ಳಿ ಹಾಲಿವಸ್ತಿ ಕಗೇರಿ ತಾಲೂಕ ಕೋಡ ನಾನು ಈ ನೋಟೀಸಿನ ದ್ವಾರದಿಂದ ಜಾಹೀರ ಮಾಡುವದೇನಂದರೆ ನಾನು ಮುದ್ದ ಲಗ್ನದ ಹೆಂಡತಿಯಿದ್ದು ನನ್ನನ್ನು ಕರಕೊಂಡು ಹೋಗಿ ಬಾಳ್ವೆ ಮಾಡುವದು ಬಿಟ್ಟಿರುತ್ತೀರಿ ಅಜಮಾಸು ಎಂಟು ವರ್ಷಗಳಾದವು ಆ ಅಂಗಾಯ್ತು ಇವತ್ತಿನವರಿಗೂ ನನ್ನ ಹೊಟ್ಟೆ ಉಪಜೀವನದ ದಶಿಯಿಂದ ಮ ನನ್ನ ಹೊಟ್ಟೇರಿ ಒಬ್ಬ ಗಂಡುಮಗ ಇದ್ದು ಆತನ ಉಪಜೀವನ ದಶಿಯಿಂದ ನಾನು ಎರಡನೇದವರ ಒಕ್ಕಲಲ್ಲಿ ೩೦೦ ರೂಪಾಯಿಗಳನ್ನು ಸಾಲ ಮಾಡಿರುತ್ತೇನೆ ಈ ಸಾಲಾ ತೀರಿಸುವದರ ದಶಿಯಿಂದಾ ಈ ನೋಟೀಸು ಮುಟ್ಟಿದ ತಾರೀಖಿನಿಂದಾ ಒಂದು ತಿಂಗಳೊಳಗಾಗಿ ನಾನು ಸಾಲಾ ಮಾಡಿದ ರಕಂ ಕೊಡಬೇಕು ಇಲ್ಲವಾದರೆ ನನ್ನನ್ನು ಮ ನನ್ನ ಮಗನನ್ನು ಕರಕೊಂಡು ಹೋಗಿ ಬಾಳ್ವೆ ಮಾಡಬೇಕು ಇದಕ್ಕೆ ನಿನ್ನ ವಪ್ಪಿಗೆ ಏನು ಇರುವದು ಸಮಕ್ಷಮ ನಾನು ಇದ್ದಲ್ಲಿಗೆ ಒಂದು ನಾಲ್ಕು ಮಂದಿ ಸಮಕ್ಷಮ ಮೇಲೆ ಬರೆದ ಹಕೀಕತ್ತು ಸಮ್ಮಂಧಿ ನಿಕಾಲೆ ಮಾಡಿಕೊಂಡು ಹೋಗತಕ್ಕದ್ದು ಇಲ್ಲವಾದರೆ ರೀತಿಪ್ರಕಾರ ಕೋರ್ಟಿನಲ್ಲಿ ನಿನ್ನ ಮೇಲೆ ದಾವಾ ನಡಿಸುತ್ತೇನೆ ಆ ಸಮ್ಮಂಧಿ ಲುಕಸಾನಕ್ಕೆ ನಾನೇನು ಬಾಧ್ಯಸ್ಥಳಾಗುವದಿಲ್ಲಾ ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ ನಾನು ಮುಂದೆ ಕೇಸ ನಡಿಸಿ ನಿನ್ನ ಕಡಿಯಿಂದಾ ಹೊಲಾ ಮನಿಗಳಲ್ಲಿ ಮ ಜಂಗಮ ಆಸ್ತಿಗಳಲ್ಲಿ ಹಿಸೇ ತಗೊಳ್ಳತಕ್ಕವಳಿದ್ದು ನೀನು ಹಿಸೇ ವಗೈರೆ ಕೊಡಬಾರದು ಬುದ್ಧ್ಯಾ ಖೊಟ್ಟಿ ಇರಾದೆಯಿಂದಾ ಎರಡನೇದವರಿಗೆ ಹೊಲಾ ಮನಿ ಜಂಗಮ ಆಸ್ತಿಗಳನ್ನು ಪೋಕಳ ರೀತಿಯಿಂದ ಬರೆದುಕೊಡಬೇಕಂತಾ ಮತ್ತು ಬಾಧ್ಯನಸಿಗೆ ಮುಣಾಗಿಸಬೇಕೆಂಬ ಇರಾದೆಯಿಂದಾ ನೀನು ಎರಡನೇದವರ ಕೂಡ ವ್ಯವಹಾರ ಮಾಡುವದು ಕಾಯಿದೆಕ್ಕೆ ಬದ್ಧತಾ ಇರಲಾರದು ಅದ್ದರಿಂದ ನೀನು ಈ ಸಮ್ಮಂಧಿ ವ್ಯವಹಾರ ಮಾಡಿದರೆ ಅದು ಸುಳ್ಳು ಇರುವದು ಅಂತಾ ನಾನು ತಿಳಿಯುತ್ತೇನೆ ನೀನು ಎರಡನೇ ಅಕ್ಕನ ಮಗನಿಗೆ ಹೊಲಾಮನಿಗಳನ್ನು ಖಾತೆ ಮಾಡಬೇಕಂತಾ ನೀನು ನಡಿಸಿದ ವ್ಯವಹಾರವೆ ಪೂರಾ ಸುಳ್ಳು ಇರುತ್ತದೆ ಮತ್ತು ಈ ವ್ಯವಹಾರ ನೀನು ಎಷ್ಟು ಮಾತ್ರವೂ ಮಾಡಕೂಡದು ಅದ್ದರಿಂದ ಈ ನೋಟೀಸಿನ ದ್ವಾರದಿಂದ ನಿನಗೆ ಎಚ್ಚರಗೊಳಿಸಿದೆ ತಾ ೧೫-೭-೧೯೨೯ನೇ ಇಸ್ವಿ

ಈ ಎಡಗೈ ಹೆಬ್ಬೆರಳಿನ ಗುರ್ತು ಕಸ್ತವ್ವಾ ಕೋಂ ಹಾಲಪ್ಪಗಡ ಚಟನಿಹಳ್ಳಿ ಈಕಿ ಕೈದು ಇರುತ್ತದೆ.

ನಿಮಗೆ ಉತ್ತಮವಾಗಿ ಉರಿಯುವ

ಒಣ ಕಟ್ಟಿಗೆ ಬೇಕೆ.?

ನಮ್ಮ ಕಟ್ಟಿಗೆಯ ಅಡ್ಡೆಯಲ್ಲಿ ಉತ್ತಮ ತರದ ದಿಂಡು, ಮತ್ತು ಮುಂತಾದ ಕಾಡ ಕಟ್ಟಿಗೆಗಳು ಒಹು ಸೋಯೀ ದರದಿಂದ ಸಿಗುತ್ತವೆ. ಮಳೆಗಾಲದಲ್ಲಿ ಒಣಗಿದ ಕಟ್ಟಿಗೆಗಳು ನಮ್ಮಲ್ಲಿ ಹೊರತೆ ಎರಡನೇ ಕಡೆಗೆ ಸಿಗುವದು ಕ್ವಚಿತವು. ಮಳೆಗಾಲ ದಿವಸದಲ್ಲಾಗುವ ಹಸೀ ಕಟ್ಟಿಗೆಯ ತಾಪವನ್ನು ಳಿಸಬೇಕೆಂದು ನಾವು ಮುದ್ದಾಮು ಕಟ್ಟಿಗೆಯ ಅಡ್ಡೆಯನ್ನು ಬದರ ಸೋಯಿಗಾಗಿ ಇಟ್ಟಿರುತ್ತೇವೆ. ಗ್ರಾಹಕರು ಇದರ ಲಾಭವನ್ನು ತಕ್ಕೊಳ್ಳಬೇಕು.

ಅಡ್ಡೆಯ ಮಾಲಕ,

ಬಾಳಾಚಾರ್ಯ ಕಾಂತಾಚಾರ್ಯ

ಹುನಸಗಿ,

ಧಾರವಾಡ.

(ಸೆಂಟ್ರಲ ಬ್ಯಾಂಕಿನ ಗಡಿಯಾಳದ ಎದುರಿಗೆ)

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾ. ವಿಜಯ ಧಾರವಾಡ

ಈ ಪತ್ರವನ್ನು ಲಿಂಗಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಸೋಮವಾರ ತಾರೀಖು ೨೨ ನೇ ಜುಲೈ ೧೯೨೯ (ಸಂಚಿಕೆ ೧೬೪

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩|| ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩|| ರೂ.

ಸೇವಿಂಗ್ಸ ಬ್ಯಾಂಕ:— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಖಾತೆಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು ಅಲ್ಲದೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಕ್ಕದ ಉದರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮಿಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಕುಳಗಳಿಗೆ ಹೆಚ್ಚಿನ ಸವಲತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ ಮೊಕತ್ಯಾರ ಪತ್ರಗಳೂ ಸದರಿ ಬ್ರ್ಯಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ
ತಾ|| ೧೭-೭-೨೯

ಡಿ. ಡೊನೆಲಿ,
ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಸ್ಥಳ- ಮಂಗಳವಾರಪೇಟೆ, ಲಕಮಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಕಿಸು ಮತ್ತು ಬಹಳ ಮುದ್ದತಿಯ ಕನಕ ಸಣ್ಣ ರಕಮಿನಿಂದ ದೇಕಾದಷ್ಟು ದೊಡ್ಡ ರಕಮಿನ ಕನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ಕನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟೇಶ [illegible]
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಎಲ್ಲ ಬಕ್ಷದ ಮೇಲಾಗಿ, ಚಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳಲಾಗುವು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೇ ಇಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿಕೊಳ್ಳಿರಿ.

ಮ್ಯಾನೇಜರ ವಿಜಯ, ಧಾರವಾಡ.

ಶ್ರೀ ಜೋಗ ವಕೀಲರ ಸವಾಲಿಗೆ ಶ್ರೀಗಳವರ ಉತ್ತರ.

ಪ್ರಶ್ನೆ ಮತ್ತು ಉತ್ತರ ತಿಳಿಯಬೇಕೆಂದು ಎರಡನ್ನೂ ವಿವರವಾಗಿ ಕೊಟ್ಟಿದ್ದೇವೆ.

ಗುರುವಾರ ತಾ|| ೧೮ನೇ ದಿವಸ ಸ್ವಾಮಿಯವರ ಜವಾಬಿಗೆ ಮುಂಜಾನೆ ಸರಿಯಾಗಿ ೯|| ಘಂಟೆಗೆ ಪ್ರಾರಂಭವಾಯಿತು.

ಶ್ರೀ ಜೋಗ ಇವರ ಕ್ರಾಸಿನಲ್ಲಿ ಸ್ವಾಮಿಯವರು ಕೊಟ್ಟ ಉತ್ತರಗಳು.

ತಾವು ತಮ್ಮ ತಂದೆ ಹೆಸರು ಶಿವಪ್ಪ ಅಂತಾ ಹೇಳಿದಿರಿ ಅದು ತಮ್ಮ ಹಡದ ತಂದಿ ಹೆಸರೋ? ಹೌದು

ಗುರುಶಾಂತಪ್ಪ ಅದ್ಯಾವದೂ ಅಲ್ಲಾ

ತಮ್ಮ ತಾಯಿ ಹೆಸರು ದೇವಮಲ್ಲವ್ವ ಏನು? ಅಲ್ಲಾ ನೆಪ್ಪ ಇಲ್ಲಾ ದೇವಮಲ್ಲವ್ವಾ ಅಲ್ಲಾ

ತಾವು ಹುಟ್ಟಿದ ಊರು ಬಿದರಕೋಟಿ ಸನು ಮೊಗಲಾಯಿಯೊಳಗೆ? ಹೌದು

ತಾಯಿತಂದೆಗಳು ವೀರಶೈವರು ಲಿಂಗಾಯತರು? ಲಿಂಗಾಯತರು ಹೌದು

ನಿಮಗೆ ಗೊತ್ತಿದ್ದಷ್ಟರ ಮಟ್ಟಿಗೆ ಅವರು ಲಿಂಗಾಯತ ಧರ್ಮವನ್ನೇ ಸ್ವೀಕರಿಸಿದ್ದರು ಎರಡನೆ ಯಾವದೂ ಇಲ್ಲ? ಇಲ್ಲಾ

ಈ ಶಿದ್ದಪ್ಪ ಅನ್ನೋ ಹೆಸರು ೧೨ನೇ ದಿವಸ ಇಟ್ಟ ನಾಮಕರಣದ ಹೆಸರು? ಹೌದು ಆ ಹೆಸರು

ಮತ್ತು ನಿಮಗೆ ಲಿಂಗಾಯತ ಧರ್ಮದ ಸಂಸ್ಕಾರ ಆಗೇದೆ ಲಿಂಗಸ್ವೀಕಾರ ಆಗೇದೆ? ಹೌದು ಆಗೇದೆ

ಈಗ ನಿಮಗೆ ಲಿಂಗ ಇಲ್ಲಾ? ಇಲ್ಲಾ

ಯಾಕೆ ವಿರಕ್ತ ಆಗೀರಿ? ಸನ್ಯಾಸಿ ಆಗೀನಿ ಅಂತ? ಸನ್ಯಾಸಿ ಆಗೇನ್ರಿ ಅಂತಾ ಲಿಂಗ ಇಲ್ಲ ವಿರಕ್ತ ಆಗಿದ್ದರೆ ಲಿಂಗ ಇರುತ್ತಿತ್ತು

ತಾವು ಹೇಳಿದ್ದು ವಿರಕ್ತ ಇದ್ದರೆ ಅಂದರೆ ಲಿಂಗಾಯತರ ವಿರಕ್ತ ಆದರೆ ಲಿಂಗ ಇರುತ್ತಿತ್ತು? ಹೌದು ಲಿಂಗಾಯತರು ವಿರಕ್ತ ಆದರೆ

ಸನ್ಯಾಸಿ ಅಂದರೆ ಏನು? ಬ್ರಹ್ಮಚರ್ಯ ವಗೈರೆ "ಸರ್ವಂ ನ್ಯಸ್ಯತಿ ಸಂನ್ಯಸ್ತಃ" ಅಂದರೆ ಅಷ್ಟು ಸರ್ವ ಅಂದರೆ ಎಲ್ಲಾ ಆಹಾರನಿದ್ರಾ ವಗೈರೆ ದೇಹ ಸಂಬಂಧಗಳ ರಹಿತ ಭಾಕಿ ಎಲ್ಲಾ

ಈ ಸನ್ಯಾಸತ್ವ ಎಂದ ಪಡೆಕೊಂಡಿರಿ ತಾವು? ವರ್ಷ ನೆಪ್ಪಿಲ್ಲ

ಸಾಧಾರಣ ತಾವು ಎಷ್ಟು ವರ್ಷ ಆಗಿದ್ದಿರಿ? ಸಾಧಾರಣ ೬ ವರ್ಷ ನಿಶ್ಚಯ ಹೇಳೋದಿಲ್ಲ ೬-೭ ಇರಬಹುದು

ಹತ್ತರಕ್ಕಿಂತ ಹೆಚ್ಚಿಗಿ ಇಲ್ಲಾ? ಹತ್ತರಕ್ಕಿಂತ ಹೆಚ್ಚಿಗೆ ಇಲ್ಲಾ

ಈ ಸನ್ಯಾಸ ತಮಗೆ ಯಾರಾದರು ಕೊಟ್ಟರೇನು? ಗುರುಗಳು ಕೊಟ್ಟರು

ಅವರ ಹೆಸರು ಹೇಳಲಿಕ್ಕೆ ಆಗತೈತೋ? ನೆಪ್ಪು ಇಲ್ಲಾ

ಲೌಕಿಕ ಹೆಸರು ಅಲ್ಲ ಆತನ ಹೆಸರು ಏನಂತಾ ಕರೆಸುತ್ತಿದ್ದರು? ಅದು ನನಗೆ ನೆಪ್ಪು ಇಲ್ಲಾ ಹೇಳಲಿಕ್ಕೆ ಆಗೋದಿಲ್ಲ ಸಾಧಾರಣ ಆನಂದಪ್ಪನವರು ಅಂತಾ ಇರಬಹುದು

ಬಿದರಕೋಟಿಯವರೇ? ಹೌದು ಬಿದರಕೋಟಿಯವರು

ಅವರಿಗೆ ಗಜದಂಡ ಅಂತ ಅನ್ನುತ್ತಿದ್ದರು? ಅಲ್ಲಾ

ಆ ವೇಳೆ ದೇಶಸಂಚಾರದಲ್ಲಿ ಅನೇಕ ಜನರು ಭೆಟ್ಟಿಯಾಗುತ್ತಿದ್ದರು? ಅನೇಕರು ಭೆಟ್ಟಿಯಾಗುತ್ತಿದ್ದರು ಶ್ರವಣ ಮಾಡಿಕೊಳ್ಳಾಕ ಇಷ್ಟೆ ಸಾಧು ಬಂದರೆ ಸಹವಾಸ ಮಾಡಿಕೊಳ್ಳಲಿಕ್ಕೆ ಉಪದೇಶಕ್ಕೆ ಅಲ್ಲಾ

ಗಜದಂಡ ಅಂತಾ ಧಾರ್ಮಿಕ ಗುರೂ ಎಂದಾದರೂ ಮಾಡಿಕೊಂಡಿದ್ದಿರೋ? ಇಲ್ಲ

ತಾವು ಸನ್ಯಾಸ ತಗೊಳ್ಳಲಿಕ್ಕೆ ಏನು ಕಾರಣ ಅದೇನು? ಅದು ಜನ್ಮಾಂತರ ಸಂಸ್ಕಾರ ಅದರಂತೆ ವಾಸನಾ ಆಗತದೆ ಅದರಂತೆ ಕ್ರಿಯಾ ಆಗತದೆ

ತಮ್ಮ ತಾಯಿತಂದೆಗಳು ಧರ್ಮ ಸ್ಥಿತಿಯಲ್ಲಿದ್ದರು? ಇದ್ದರು

ಧರ್ಮ ವರ್ತನ ಮಾಡಿಕೊಂಡು ಸುಖರೂಪದಿಂದ ದುಃಖಳಿದು ಇದ್ದರು? ಹೌದು ಇದ್ದರು

ತಾವು ಮನಿ ಬಿಟ್ಟಾಗ ಎಷ್ಟು ವರ್ಷದವರಿದ್ದಿರಿ? ೧೦ ವರ್ಷದ ಒಳಗೆ ಇರತೇನ ಮನಿ ಬಿಟ್ಟೆ

ಮನಿ ಬಿಡುವ ಮುಂದೆ ತಾಯಿತಂದೆಗಳ ಏನು ಇತ್ತಲ್ಲಾ ಬದುಕು ಇತ್ತಲ್ಲಾ ಅದರ ಮೇಲೆ ಆಶೆ ಇದ್ದಿದ್ದಿಲ್ಲ? ಇದ್ದಿದ್ದಿಲ್ಲ

ತಾವು ಮನಿ ಬಿಟ್ಟಾಗ ತಮ್ಮ ಹತ್ತಿರವೇನಾದರೂ ಇದ್ದಿದ್ದಿಲ್ಲಾ? ಇಲ್ಲಾ ಒಂದು ವಸ್ತ್ರ ಮಾತ್ರ ಇತ್ತು ಮತ್ತು ಒಂದು ಕೌಪೀನ

ವಸ್ತ್ರ ಅಂದರೆ ಹೊದಿಯೋ ವಸ್ತ್ರ? ಹೌದು

ಮತ್ತು ತಾವು ಮನಿ ಬಿಟ್ಟ ಕಾಲಕ್ಕೆ ಅನ್ನ ವಗೈರೆ ಮಾಡಬೇಕು ಅಂತಾ ಇಚ್ಛೆಯೂ ಇತ್ತಲ್ಲಾ? ಇಲ್ಲಾ

ಹಾಂಗಾದರೆ ಮನಿ ಏನು ತಾವು ಬಿಟ್ಟಿರಲ್ಲಾ? ಹಾಂಗೇನು ಬಿಟ್ಟಿಲ್ಲಾ ಯಾವದಾದರೂ ಗುರುದರ್ಶನ ಆಗಬೇಕು ಅಂತಾ ಬಿಟ್ಟಿಲ್ಲ

ಹೆಚ್ಚಿನ ಜ್ಞಾನ ಘಳಿಸಬೇಕೆಂದು ಹೊರಗೆ ಹೊರಟಿರಿ? ಆತ್ಮಜ್ಞಾನ ಪ್ರತ್ಯಗಾತ್ಮಜ್ಞಾನ ಜೀವಾತ್ಮಾ ಅಲ್ಲ ಪ್ರತ್ಯಗಾತ್ಮಾ ಆತ್ಮನಾತ್ಮ ಜ್ಞಾನ ದೊರೆಕಿಸಲಿಕ್ಕೆ

ಅಂದರೆ ಈ ವ್ಯವಹಾರದ ಸಂಬಂಧಿ ಜ್ಞಾನ ಅಲ್ಲಾ? ಅಲ್ಲಾ

ಹೀಗೆ ಉತ್ತರ ಹಿಂದುಸ್ಥಾನ ಎಲ್ಲಾ ತಿರುಗಾಡಿದಿರಿ? ಪೂರ್ವ ಪಶ್ಚಿಮ ದಕ್ಷಿಣ ಉತ್ತರಕ್ಕೆ ಹೋಗಿದ್ದೆ

ಯಾತ್ರಾ ಕ್ಷೇತ್ರಗಳಿಗೂ ಹೋದಿರಿ? ಎಲ್ಲಾ ಕ್ಷೇತ್ರಕ್ಕೆ ಹೋಗಿದ್ದೆ

ಹುಬ್ಬಳ್ಳಿಗೆ ಬರುವದರೊಳಗಾಗಿ ಎಷ್ಟು ವರ್ಷ ಆಗಿದ್ದೀತು? ಆಗಿದ್ದೀತು ಮೂವತ್ತು ವರ್ಷ ಆಗಿದ್ದೀತು? ಅನುಮಾನದಿಂದ

ಈ ಮೂವತ್ತು ವರ್ಷದಲ್ಲಿ ನಿಮ್ಮ ಆಸ್ತಿಯು ಜ್ಞಾನವೂ ಹೊರತು ಯಾವದೂ ದೊರಕಲಿಲ್ಲ? ಒಂದು ವಸ್ತ್ರದ ಹೊರತಾಗಿ ಯಾವದೂ ಇಲ್ಲಾ

ಮತ್ತು ಆಗ ಈ ಜಗತ್ತು ಮಿಥ್ಯಾ ಅದೆ ಅಂತಾ ಜ್ಞಾನ ಮಾಡಿಕೊಂಡಿರಿ? ಹೌದು

ಮತ್ತು ವ್ಯವಹಾರದೊಳಗೆ ಅರ್ಥ ಇಲ್ಲಾ? ಅರ್ಥ ಅಂದರೆ ಸುಖ, ಸುಖ ಇಲ್ಲಾ ಅಂತಾ ದೃಢ ಭಾವನಾನೂ ಆಗಿತ್ತು

ಜ್ಞಾನ ಸಂಪಾದನ ಮಾಡತ್ತಿದ್ದಿರಿ ಯಾತರದ್ದಾದರೂ ಉಪಾಸನಾ ಮಾಡತ್ತಿದ್ದಿರೇನು? ಆತ್ಮೋಪಾಸನೆಯ ಹೊರತಾಗಿ ಏನೂ ಇಲ್ಲಾ

ರಾಮಮೂರ್ತಿ ಕೃಷ್ಣಮೂರ್ತಿ ಪ್ರತ್ಯಕ್ಷೋಪಾಸನೆ? ಅಲ್ಲಾ

ಆತ್ಮನ ಹೊರತು ಬಾಕಿದೆಲ್ಲಾ ಮಿಥ್ಯಾ ಆತ್ಮ ಒಬ್ಬನೇ ಖರೆ ಅಂತಾ ನಿಮ್ಮ ಮತ? ಹೌದು

ಆತ್ಮಾ ಅಂದರೆ ಪ್ರತ್ಯಗಾತ್ಮಾ? ಹೌದು

ನೀವು ಸ್ವತಃ ನಿಮಗೆ ಸೋಹಂ ಬ್ರಹ್ಮ ಅಂತಾ ಅನಿಸಿಕೊಳ್ಳತೀರಿ? ಹೌದು

ಸೋಹಂ ಬ್ರಹ್ಮ ಈ ಭಾವನಾದಿಂದ ಮಾಡತೀನಿ? ಹೌದು

ತಾವು ಸೋಹಂ ಬ್ರಹ್ಮ ಇದು ನಿಮಗೆ ಮನವರಿಕೆ ಆಗೇದೆ? ಹೌದು

ತತ್ವಮಸಿ ಅಂತಾ ತಿಳಕೊಂಡೀರಿ? ಹೌದು ಅದರರ್ಥ ಅವರರ್ಥ ಒಂದೇ ಅದೆ

ಈ ಜಗತ್ತು ಮತ್ತು ಆತ್ಮ ಒಂದೇ ಅದೆ? ಆತ್ಮಾ ಬೇರೆ ಜಗತ್ತು ಬೇರೆ

ನೀವು ಹೇಳಿರಿ ಮೂವತ್ತು ವರ್ಷ ಇತ್ತಲಾ? ಅತ್ತಲಾಗ ತಿರುಗಾಡಿದಿರಿ ಅಂತಾ ನೀವು ಹೇಳ್ಳು

ಸ್ಸಿಗೆ ಬಂದಾಗ ಕೌಪೀನ ಮತ್ತು ವಸ್ತ್ರದ ಹೊರತಾಗಿ ಏನೂ ಇದ್ದಿಲ್ಲ? ಇದ್ದಿದ್ದಿಲ್ಲ

ಹುಬ್ಬಳ್ಳಿಗೆ ಬರುವದಕ್ಕಿಂತ ಮೊದಲು ಯಾರಿಗಾದರೂ ಶಿಷ್ಯ ಮಾಡಿಕೊಂಡು ಉಪದೇಶ ವಗೈರೆ ಮಾಡುತಿದ್ದಿರೇನು? ಇಲ್ಲಾ ಏನೇನೂ ಇಲ್ಲ

ತಾವೇನು ಜ್ಞಾನ ಸಂಪಾದನ ಮಾಡಿಕೊಂಡಿಲ್ಲಾ ಅದು ಅದ್ವೈತ ವೇದಾಂತ ಹೌದಲ್ಲೋ? ಹೌದು ಅದ್ವೈತ

ತಾವು ಇಲ್ಲಿ ಬಂದಾಗ ೪೦ ವರ್ಷ ಆಗಿದ್ದಾವು? ಆಗಿದ್ದೀತು

ತಾವು ಬಂದವರು ಒಬ್ಬರೇ ಸಂಗತೀಲೆ ಯಾರೂ ಬಂದಿದ್ದಿಲ್ಲಾ? ಇಲ್ಲಾ (ಕೈ ಬಟ್ಟು ಮಾಡಿ ತೋರಿಸಿ)

ತಾವು ಇಲ್ಲಿ ಬಂದಾಗ? ಗಿಡ ಇದ್ದಲ್ಲೆ ನೆರಳಿಗೆ

ಎಲ್ಲಿ ವಾಸ್ತವ್ಯ ಇತ್ತು? ಗುಡಿ ಇದ್ದಲ್ಲೆ ಮನಿಯೊಳಗೆ

ಈ ಊರೊಳಗೆ ಗುರ್ತಿನವರು ಯಾರೂ ಇದ್ದಿಲ್ಲ? ಇಲ್ಲ

ತಾವು ಇಲ್ಲಿ ಬಂದಾಗ ಕೊಂವಿಯ ಮೇಲಿನ ಭಾವಿಯಲ್ಲಿ ಇರುತ್ತಿದ್ದಿರೇನು? ನೇವುದಲ್ಲಿ ಯಾವಾಗಾಂ ಬಂದಾಗ ಕೂಡತಿದ್ದೆ

ತಮ್ಮ ಶರೀರ ರಕ್ಷಣಾ ಭಿಕ್ಷಾ ಬೇಡಿಕೊಂಡು ಮಾಡುತಿದ್ದಿರಿ? ಭಿಕ್ಷಾ ಬೇಡಿಕೊಂಡು ಮಾಡುತಿದ್ದೆ

ಭಕ್ತರೂ ಯಾರೂ ಇದ್ದಿಲ್ಲ? (ಕೈ ಸನ್ನೆಯಿಂದ) ಇಲ್ಲಾ

ಇಲ್ಲಿ ಬರುವದಕ್ಕಿಂತ ಮೊದಲು ಚಿದ್ಘನಾನಂದ ಸಮಾಧಿ? ಹುಬ್ಬಳ್ಳಿಗೆ ಬಂದನಂತರ [illegible] ತಿಂಗಳದೊಳಗೆ ಇಲ್ಲಿ ಇರಲಿಕ್ಕೆ ಬಂದೆ

ಆವಾಗ ಆ ಸಮಾಧಿ ಮೇಲೆ ಗುಡಿ ಇತ್ತು? ಇತ್ತು

ಆ ಸಮಾಧಿಯ ಪೂಜಾ ಮಾಡುತ್ತಿದ್ದರೋ? ಇಲ್ಲಾ ಅಕಸ್ಮಾತ ವರ್ಷ ವರ್ಷಕ್ಕೆ ಯಾರಾದರೂ ಬಂದು ಪೂಜಾ ಮಾಡುತ್ತಿದ್ದರು

ಹಳೇ ಹುಬ್ಬಳ್ಳಿಯವರು? ಹೌದು

ಅಲ್ಲಿ ಇರಲಿಕ್ಕೆ ಯಾರಾದರೂ ಪರವಾನಗಿ ತಗೊಂಡಿದ್ದರೇನು? ಇಲ್ಲ

ಹೀಂಗ ಆ ಸಮಾಧಿಯಲ್ಲಿ ಏನೂ ಇಮಾರತಿ ಏನೂ ಇಲ್ಲ. ಹೀಗೆ ಎಷ್ಟು ವರ್ಷ ಇದ್ದಿರಿ? ನೆಪ್ಪು ಪೂರಾ ಬರೋದಿಲ್ಲ ೨-೩ ವರ್ಷ ಆಗಿರಬಹುದು ನೆಪ್ಪು ಪೂರಾ ಬರೋದಿಲ್ಲ

ಆ ೨-೩ ವರ್ಷದ ಅವಧಿಯಲ್ಲಿ ಜನರು ಬರೋ ಹೋಗೋದು ಇರುತ್ತಿದ್ದರೋ? ವಿಶೇಷ ಜನರು ಬರುತ್ತಿದ್ದರು

ಯಾವಾಗಲೂ ಸ್ವಲ್ಪ ಮಂದಿ ಬರುತ್ತಿದ್ದರೋ? ಯಾವಾಗಾದರೂ ಒಬ್ಬರು ಇಬ್ಬರು ಬರುತ್ತಿದ್ದರು

ಆವಾಗೇನೂ ಅವರಿಗೆ ಉಪದೇಶ ವಗೈರೆ ಮಾಡುತಿದ್ದಿರೋ? ಆವಾಗ ೨ ವರ್ಷ ಯಾರ ಕೂಡ ಮಾತು ಕಥಿ ಮಾಡುತಿದ್ದಿಲ್ಲಾ ಅವರು ಬಂದೂ ಕೂತು ಹೋಗುತಿದ್ದರು

ಮಾತು ಕಥಿ ಆಡದೆ ಮೌನವ್ರತದಿಂದ ಇರುತಿದ್ದಿರಿ? ಹೌದು

ನಿಮ್ಮ ಜೀವನ ಕ್ರಮ ಭಿಕ್ಷಾ? ಹೌದು ಹೋಗೋದು ಭಿಕ್ಷಾ

ಇಲ್ಲೆ ತಗೊಂಡು ಬಂದು? ಇಲ್ಲಾ ಇಲ್ಲೇನು ತರುತಿದ್ದಿಲ್ಲಾ ಅಲ್ಲೆ ದಾರ್ಯಾಗ ತಗೊಂಬೋದು ತಿನ್ನೋದು ಮಾಡುತಿದ್ದೆ

ಮೌನವ್ರತ ಯಾವಾಗ ಬಿಟ್ಟಿರಿ? ಬ್ರಾಹ್ಮಣರು ಸನ್ಯಾಸಿಗಳು ಬಂದರು ಶಾಸ್ತ್ರ ಚರ್ಚಾ ವಗೈರೆ ಮಾಡುತ್ತಿದ್ದರು ಆಗ ನಾನು ಮಾತಾಡಲಿಕ್ಕೆ ಹತ್ತಿದೆ

ಅವರು ಯಾರು ಬ್ರಾಹ್ಮಣ? ನರಸಿಂಹ ಸನ್ಯಾಸಿಗಳು ಅಂತಾ ಅವರ ಹೆಸರು ಅವರಿಗೆ ಸುದ್ದಿ ಹತ್ತಿದ ಕೂಡಲೆ ಅವರು ಬರುತ್ತಿದ್ದರು ಹೊತ್ತು ಮುಣಗೋದು ಇಬ್ಬರು ಭಾಷಣ ಮಾಡಿಕೊಳ್ಳುತಾ ಕೂಡುತಿದ್ವಿ

ಅವರು ಎಲ್ಲಿಯವರು? ಅವರು ಇಲ್ಲಿಯವರೆ

ಅಂಗರ ಹಳೇಹುಬ್ಬಳ್ಳಿ? ಹೌದು

ಎಷ್ಟು ದಿವಸ ಹೀಗೆ ಚರ್ಚಾ ಮಾಡುತಿದ್ದಿರಿ? ೪-೫ ವರ್ಷ ಆಗಿದ್ದೀತು ಅವರ ಕೂಡ ಚರ್ಚಾ ಮಾಡುತಿದ್ದೆ ಅವರೇ ಏನಾದರೂ ಅನ್ನ ತಗೊಂಡು ಕೊಡುತಿದ್ದರು ನಾನೇನು ಭಿಕ್ಷಕ್ಕೆ ಹೋಗುತಿದ್ದಿಲ್ಲ

ಹೀಗೆ ನಾಲ್ಕೈದು ವರ್ಷ ಆಯಿತು ಏನೂ ಹೆಚ್ಚಿಗೆ ಕಟ್ಟಿಸಿದ್ದಿಲ್ಲ? ಇಲ್ಲಾ

ಅದೇ ಗುಡಿಯೊಳಗೆ? ಹೌದು ಅದೇ ಗುಡಿಯೊಳಗೆ

ನೀವು ಹೇಳಿರಿ? ಒಂದು ಭಾವಿ ಒಂದು ಛಪ್ಪರ ಎಷ್ಟು ವರ್ಷಗಳಲ್ಲಿ? ಅದು ೧-೧॥ ವರ್ಷದಲ್ಲಿ ಆಗಿದ್ದೀತು ಆಮೊಂದು ಭಾವಿ ಕಟ್ಟಿತ್ತು ಆದೊಂದು ಛಪ್ಪರ ಹಾಕಿತು

ಅದು ಮಾಡಿದ್ದು ಆ ಗುಡಿ ಎನಿತ್ತಲ್ಲಾ ಗುಡಿ ನೈರ್ಋತ್ಯ ದಕ್ಷಿಣ ಭಾಗಕ್ಕೇನೂ? ಉತ್ತರ ದಿಕ್ಕಿಗೆ ಆ ಭಾವೀ ಮೇಲೆ ಛಪ್ಪರಾ

ಆ ಸಮಾಧಿಯಿಂದ ಎಷ್ಟು ದೂರ ಆದೀತು? ಆ ಲಾಟಿನ ಏನು ಇಲ್ಲಾ ಅಷ್ಟಾದೀತು

ಅವರ ಹೊರಗಿನ ಜಾಗವೆಲ್ಲ ಖುಲ್ಲಾ ಜಾಗಾ? ಹೌದು ಖುಲ್ಲಾ ಜಾಗಾ

ಈ ಭಾವೀದಕಿಂದ ಯಾರಾದರೂ ಏನಾದರೂ ಕೊಟ್ಟರೇನ? ಭಾವೀದಕಿಂದ ಯಾರಾದರೂ ಕೊಡುತ್ತಿದ್ದಿಲ್ಲಾ ಪ್ರೀತಿಯಿಂದ ಯಾರಾದರೂ ಕೊಡತಿದ್ದರು ಅದರೊಳಗಿನಿಂದ ಕೂಲಿ ಮಾಡಿ ಕಟ್ಟಿತು.

ಜನರು ಬಂದರಲ್ಲಾ ಭಾವಿ ಕಟ್ಟಿಸೋ ಮೊದಲು ಯಾರಾರಿಗೆ ಹೇಳಿದಿರೇನ? ಯಾರ್ಯಾರಿಗೂ ಹೇಳಲಿಲ್ಲ.

ನಿಮಗೆ ದುಡ್ಡು ಕೊಡಲಿಕ್ಕೆ ಯಾವಾಗ ಹತ್ತಿದರ? ಭಾವಿ ಕಟ್ಟಿಸುವದರಕಿಂತ ಮೊದಲು ೧-೨ ತಿಂಗಳ ಮೊದಲು.

ಊರಾಗಿನ ಜನರು ಹಳೇ ಹುಬ್ಬಳ್ಳಿಯವರು ಹುಬ್ಬಳ್ಳಿಯವರು? ಹೂ ಫಕ್ಕನೆ ಹಳ್ಳಿಯವರು ಬಂದರೆ.

೨ ತಿಂಗಳಕಿಂತ ಮೊದಲು ದುಡ್ಡು ಅಂತಾ ಯಾರೂ ಇಡತಿದ್ದಿಲ್ಲಾ? ಇಲ್ಲ.

ಮತ್ತು ನನಗೆ ರೊಕ್ಕ ಬೇಕು ಅಂತಾ ನೀವು ಯಾರಿಗೂ ಕೇಳುತ್ತಿದ್ದಿಲ್ಲಾ? ಇಲ್ಲಾ.

ಹಾಂಗಾರೆ ಈ ಭಾವಿ ಛಪ್ಪರ ಕಟ್ಟಿಸೋದಕಿಂತ ಮೊದಲು ಯಾಕೆ ಇಡತಿದ್ದರು ಹೇಳಬಹುದೇನು? ಅದೇನು ಇಲ್ಲಾ ಭಕ್ತಿಯಿಂದ ಇಡತಿದ್ದರು ಭಾವಿಗೆ ಉಪಯೋಗಕ್ಕೆ ಮಾಡತಿದ್ದೆ.

ಮತ್ತು ಛಪ್ಪರದ ದಕ್ಷಿಣ? ಛಪ್ಪರ ಭಾವಿ.

ನಾಲ್ಕೈದು ವರ್ಷ ರೊಕ್ಕಾ ಏನು ಇಡುತ್ತಿದ್ದರು ಭಾವೀ ಕಟ್ಟಿಸುವ ಮೊದಲು ಯಾಕೆ ಇಡಲಿಕ್ಕೆ ಹತ್ತಿದರ? ಈ ಪ್ರಶ್ನಕ್ಕೆ ಕಂಬಳಿಯವರ ತಕರಾರು.

ನಿಮಗೆ ಅನ್ನ ಕೊಡತಿದ್ದರು. ಪ್ರೀತಿಯಿಂದ ಕೊಡತಿದ್ದರೇನು? ಹೌದು ಪ್ರೀತಿಯಿಂದ ಕೊಡತಿದ್ದರು. ಅವರು ಅಕಸ್ಮಾತ ಅನ್ನವನ್ನು ಕೊಟ್ಟರೆ ತಗೋಬೇಕು ಇಲ್ಲದಿದ್ದರೆ ಊರಾಗ ಕರಿತಿದ್ದರು.

ಹಾಂಗಾದರ ನಿಮಗೆ ರೊಕ್ಕಾ ಯಾಕೆ ಕೊಡತಿದ್ದರು? (ಕಂಬಳಿಯವರ ತಕರಾರು)

ನಿಮ್ಮಲ್ಲೆ ಪುಷ್ಕಳ ಜನರು ಬರುತ್ತಿದ್ದರು. ಎಲ್ಲರೂ ಮೊದಲು ಜನರು ಏನಾದರೂ ಕೊಡತಿದ್ದರೇನ? ಎಲ್ಲರೂ ಮೊದಲೆ ಯಾರಾರು ಕೊಡುತ್ತಿದ್ದರು. ಅರಿವೆ ಅನ್ನ ಕಾಣಿಕೆ ಮಾಡಿ ಹೋಗುತಿದ್ದರು ನಮಸ್ಕಾರ ಮಾಡಿ

ಅನ್ನ ವಸ್ತ್ರ ಅರಿವೆ ಏನು ಕೊಡತಿದ್ದರು, ಅವರೇ ಅನ್ನ ವಸ್ತ್ರದ ಕೂಡ ದುಡ್ಡು ಕೊಡಲಿಕ್ಕೆ ಹತ್ತಿದರೇನ? ಇಲ್ಲಾ. ಅವರೇ ಕೊಡತಿದ್ದರು ಅಂತಾ ನೇಮವಲ್ಲಾ.

ಅವರ ಪೈಕೀನೂ ಕೆಲವರು ತಮಗೆ ರೊಕ್ಕ ಕೊಟ್ಟಿದ್ದರೂ ಕೊಟ್ಟಿರಬಹುದು? ನೆಪ್ಪಿಲ್ಲಾ ಕೊಟ್ಟಿದ್ದರೂ ಕೊಟ್ಟಿರಬಹುದು

ಸಿಂಧ ಪ್ರಾಂತದಲ್ಲಾದ ಅತಿವೃಷ್ಟಿಯಿಂದ ಒಂದು ಕೋಟಿಗಿಂತ ಹೆಚ್ಚು ಹಾನಿಯಾಗಿರುತ್ತದೆಂಬ ಅಂದಾಜು ಮಾಡಲ್ಪಟ್ಟಿದೆ.

ನೋಟೀಸಿನ ಉತ್ತರಾ

ರಾ|| ರಾ|| ಲಿಂಗೋ ಅಣ್ಣಾಜಿ ಯಜಮಾನ ರಾ|| ನವಲಗುಂದ ಮುಕ್ಕಾಂ ಧಾರವಾಡ ಇವರಿಗೆ

ಕೆಳಗೆ ಸಹಿ ಮಾಡಿದವರು ತಿಳಿಸುವದೇನಂದರೆ- ನೀವು ತಾ|| ೨೦-೬-೨೯ ದಿನದ ವಿಜಯ ಪತ್ರದಲ್ಲಿ ಕೊಟ್ಟ ನೋಟೀಸಿನ ಮಜಕೂರು ತಿಳಿಯಿತು ನೀವು ಬರೆದಂತೆ ಗಂಗಾರಾಮನು ನಿಮಗೆ ಬರೆದುಕೊಟ್ಟ ಪಾವತಿ ನಾನು ನಿಮಗೆ ಕೊಟ್ಟದ್ದೂ ಅಡ್ಡಿಯಿದ್ದಿಲ್ಲಾ ಆದರೆ ಈಗ ನೀವು ಧಾರವಾಡದಲ್ಲಿದ್ದು ನಾನು ನಿಮಗೆ ತಿಳಿಸಿದಂತೆ ರಾ|| ಶೆಂಬರ ೨೯ ನೇ ತಾರೀಖು ಒಂದು ಸಾವಿರ ರೂಪಾಯಿಗಳನ್ನು ನೀವು ಕಾರಣದಿಂದಾ ಗಂಗಾರಾಮನಿಗೆ ನಾನು ಏನೊಂದು ಸಟಿ ಹೇಳಿ ತಪ್ಪಿಸಲಿಕ್ಕೆ ಮಾರ್ಗವಿಲ್ಲದಂತಾಯಿತು. ಗಂಗಾರಾಮನು ನನಗೆ ಎಷ್ಟೆಂಯೂ ಬಿಡದೆ ಬಹಳೇ ಉಪದ್ರವ ಕೊಟ್ಟು ಸದರ ಪಾವತಿ ತನಗೆ ಕೊಡದಿದ್ದರೆ ಕ್ರಿಮಿನಲ್ ಫಿರ್ಯಾದಿ ಮಾಡಿ ಸದರ ಪಾವತಿ ಕೋರ್ಟಿಗೆ ಒಪ್ಪಮಾಡಿಸಿ ಒಟ್ಲೆ ಮಾಡತಕ್ಕೆನೆಂತಾ ಬಹಳೇ ತಸ್ತಿ ಕೊಟ್ಟದ್ದರಿಂದಾ ಆ ವಾಕ್ಯಕ್ಕೆ ನನಗೆ ನಿಮ್ಮ ಕೂಡ ಹೇಳಲಿಕ್ಕೆ ಯಾರೂ ಇಲ್ಲದೆ ನನಗೆ ಏನೊಂದು ಸುಚಾಯಿಸದೆ ಆಗದಿ ನಿರುಪಾಯ ಆಗಿ ಗಂಗಾರಾಮನ ಕೈಲೆ ತಪ್ಪಿದರೆ ಸಾಕು ಅವನು ಶ್ರೀಮಂತನಿದ್ದು ಯಾವ ರೀತಿಯಿಂದಾದರೂ ನನ್ನ ಫುರ್ಜಾಟಿ ಕಳೆದಾನು ಯೆಂಬ ಹೆದರಿಕೆಯಿಂದ ಮತ್ತು ನಾನು ಪಟ್ಟವಟಿಗನಿದ್ದು ದಿನಾಲೂ ಅವನ ಉಪದ್ರವ ತ್ರಾಸದಾ ಅಂತಾ ತಿಳಿದು ಅವನ ತಾಸಕ್ಕೆ ಬೇಸತ್ತು ಸದರ ಪಾವತಿ ಗಂಗಾರಾಮನ ಕೈಯಲ್ಲಿ ಕೊಟ್ಟಿರುತ್ತೇನೆ ಇದರ ಹೊರ್ತಾಗಿ ಎರಡನೇ ಕಾರಣ ಯಾವದೂ ಇಲ್ಲಾ ಸದರ ಪಾವತಿ ಗಂಗಾರಾಮನ ಕಡೆಗೆ ಇದ್ದಮಾತ್ರದಿಂದಾನೇ ನೀವು ಗಂಗಾರಾಮನಿಗೆ (೨೫೦೦) ರೂಪಾಯಿ ರೊಖ ಕೊಟ್ಟದ್ದು ಮತ್ತು ಅವನು ಆ ಒಗ್ಗೆ ನಿಮ್ಮ ಹೆಸರಿಗೆ ಪಾವತಿ ಬರಕೊಟ್ಟದ್ದು ಸುಳ್ಳು ಅಲ್ಲ. ಸದರ ಪಾವತಿ ಸಂಗಂ ಯಾವತ್ತೂ ಖರೇ ಇದ್ದು ಅದರಂತೆ ಯಾವಾಗ್ಯಾದರೂ ನಾನು ಪ್ರಮಾಣದಿಂದಾ ಹೇಳತೇನ ಖರೇ, ಕಲಸ ಇದ್ದು ಇದರಿಂದ ನಿಮ್ಮ ಲುಕ್ಸಾನ ರಿಗಳಿಕ್ಕ ಏನೂ ಕಾರಣ ಇಲ್ಲಾ- ತಿಳಿಯಬೇಕು

ತಾ|| ೨೩-೬-೨೯

ಸಹಿ- ಇಂಗ್ಲಿಷು ಜಿ. ಪಿ. ಶಿದ್ರಾಮಶೆಟ್ಟಿ

ಜಾಹೀರ ನೋಟೀಸು.

ಯಾವತ್ತು ಮೋಟಾರ ಸರ್ವೀಸ ಮತ್ತು ವ್ಯಾಪಾರಸ್ಥರಿಗೆ ತಿಳಿಸುವದೇನಂದರೆ- ಇತ್ತೀಚಿನವರೆಗೂ ನಡೆದ ಪ್ರಕಾರ ಬಹುತೇಕ ನಮ್ಮ ಗಿರ್‍ಹಾಯಿಕರು ಹಣಾ ಕೊಟ್ಟದ್ದು ನಮ್ಮ ಆಫೀಸಿಯಲ್ ಪಾವತಿ ತಗೊಳ್ಳುತ್ತಾರೆ ಕೆಲವರು ಅಂಗಡಿವಳಿಗೆ ಹಣಾ ಕೊಟ್ಟು ಜಮಾ ಮಾಡ್ಸಿ ಹೋಗುತ್ತಾರೆ ಆ ಕಾರಣದಿಂದ ಎಲ್ಲರಿಗೂ ತಿಳಿಸುವದೇನಂದರೆ- ಹಣಾ ಕೊಟ್ಟದ್ದು ತಗೊಂಡಿದ್ದು ಕ್ಯಾಶ್ಯರ ಸಹಿಸೀತಿ ಇದ್ದ ಪಾವತಿಗಳಿಗೇನೆ ಮಾತ್ರ ನಾವು ಬಾಧ್ಯಸ್ಥರು ಇರುವೆವು ಅದರ ಹೊರ್ತು ಯಾವದೇ ಸಾಧಾ ಪಾವತಿಗಳಿಗೆ ಅಥವಾ ಜಮಾಖರ್ಚಿಗೆ ವ್ಯತ್ಯಾಸ ಬಂದರೆ ಅದಕ್ಕೆ ಯಾವ ತರದ ಜವಾಬದಾರರು ಅಲ್ಲಾ

ಮತ್ತು ಯಾವದೇ ಅಂಗಡಿಕಾರರು ಸಾಮಾನ ಕೊಡುವದಾದರೇ ಖುದ್ದ ಮಾಲಕರ ಸಹಿಸೀತಿ ಚೀಟಿ ಶಿವಾಯ ಕೊಟ್ಟರೆ ಆ ಹಣಕ್ಕೆ ಮಾಲಕರು ಯಾವದೇ ತರದ ಜವಾಬದಾರರು ಅಲ್ಲಾ

ನಮ್ಮ ಕೊಡಾ ಚಾಲು ಇದ್ದ ವ್ಯವಹಾರಸ್ಥರು ದರ ತಿಂಗಳ ಒಪ್ಪಕ್ಕೆ ತಮ್ಮ ಬಿಲ್ಲುಗಳು ತಂದು ರುಜು ಮಾಡಿಕೊಂಡು ಹೋಗತಕ್ಕದ್ದು ಇಲ್ಲವಾದರೆ ನಮ್ಮಲ್ಲಿ ಲೆಖ್ಖದಲ್ಲಿ ತೋರ್ಪಟ್ಟ ಮಾತಿಗೆ ಒಪ್ಪಿಕೊಂಡಿರುತ್ತೀರಿ ಅಂತಾ ತಿಳಕೊಳ್ಳತ್ತೇನೆ ನಂತರಾ ನಿಮ್ಮ ಯಾವ ತರದ ತಕರಾರು ಕೇಳಲಿಕ್ಕಿಲ್ಲ ತಿಳಿಯುವದು

ತಾ|| ೨೦-೬-೨೯

ಸಹಿ- ಇಂಗ್ಲಿಷ ತ್ರಿಲೋಚನಲಾಲ ಬ್ರದರ್ಸ

ನೋಟೀಸು

ಗಂಗಿ ಕೋಂ|| ಗಿಡ್ಡಪ್ಪಾ ಕೊರ್ಲಗಟ್ಟಿ ಸಾ|| ಮುಂಡರಗಿ ಇವಳಿಗೆ—

ಕೆಳಗೆ ಸಹಿಮಾಡುವವನು ಅಂದರೆ ಗಿಡ್ಡಪ್ಪಾ ಬಿನ ಹನುಮಪ್ಪಾ ಕೊರ್ಲಗಟ್ಟಿ ಸಾ|| ಮುಂಡರಗಿ ನಾನು ಈ ನೋಟೀಸಿನ ಮೂಲಕ ತಿಳಿಸುವದೇನೆಂದರೆ—

ನೀನು ವ್ಯಭಿಚಾರ ಮಾಡಿದ್ದು ನನ್ನ ನಜರಿಗೆ ಬಂದ ಕಾರಣ ನಿನ್ನನ್ನು ನಾನು ಬಿಟ್ಟುಬಿಟ್ಟಿರುತ್ತೇನೆ ಆದ್ದರಿಂದ ಇದೇ ಸೋಡ ಚೀಟಿಯಿಂದ ತಿಳಿಯತಕ್ಕದ್ದು ಈಗ ನೀನು ನಿನ್ನ ತಂದೆಯ ಮನಿಯಲ್ಲಿ ರುತ್ತೀದಿ ಈಗ ನೀನು ಒಸಬುಯಿರುವದಿಲ್ಲಾ ಯಿದ್ದು ವರಿಗೂ ಹಕ್ಕದಿರುವದಿಲ್ಲಾ ನಾನು ಯಿನ್ನು ಮುಂದೆ ಲಗ್ನಮಾಡಿಕೊಂಡರೆ ನನ್ನ ಮೇಲೂ ವ ನನ್ನಗೆ ಲಗ್ನಮಾಡಿಕೊಂಡವಳ ಮೇಲೂ ಮತ್ತು ನನ್ನ ಜೊಳ್ಳ ಮನಿ ಆಸ್ತಿಗಳ ಮೇಲೂ ನಿನ್ನದು ಮಾಲ್ಕಿ ವ ಹಕ್ಕ ಯೇನೂ ಯಿರುವದಿಲ್ಲಾ ನೀನು ನಿನ್ನ ಮರ್ಜಿಪ್ರಕಾರ ಯಾರಲಿಕ್ಕೂ ವ ಉಪ್ಪಿ ಪಗ್ಗಿರೆ ಮಾಡಿಕೊಂಡು ಹೋಗಲಿಕ್ಕೆ ನನ್ನದೇನೂ ಅಡ್ಡಿಯಿಲ್ಲಾ

ನಾನು ನಿನ್ನನ್ನು ಲಗ್ನ ಮಾಡಿಕೊಳ್ಳುವಾಗ್ಗೆ ಇಟ್ಟ ದಾಗೀನು ನಿನ್ನ ಮೈಮೇಲೆ ಇರುತ್ತವೆ.

ಅವುಗಳ ವಿವರಾ.

ಸಾಮಾನು	ತೊ	ಕಿ,ರೂ,
೧ ಜತಿ ಬೆಳ್ಳಿಯ ಬಂದಿ	೨೪	೧೮
೧ ಜತಿ ಭಂಗಾರದ ಬೆಂಡವಾಲಿ		೧೬
೧ ಬೆಳ್ಳಿಯ ಕಟ್ಟಿ	೧೬	೧೨

ಅಂತು ೪೬ ರೂಪಾಯಿ.

ಈ ಪ್ರಕಾರ ಯಾವತ್ತು ಸಾಮಾನುಗಳನ್ನು ಈ ನೋಟೀಸ ಮುಟ್ಟಿದ (೮) ದಿವಸಗಳಲ್ಲಿ ನನಗೆ ಮುಟ್ಟಿಸಿ ಪಾವತಿ ತಗೊಳ್ಳಬೇಕು ಇಲ್ಲದಿದ್ದರೆ ನಿನ್ನ ಮೇಲೆ ರೀತಿ ಪ್ರಕಾರ ಕೆಲಸ ನಡಿಸುವದರಲ್ಲಿ ಬರುವದು ಈ ನೋಟೀಸಿನ ಖರ್ಚು ನಿನ್ನ ತಲಿಯಮೇಲೆ ಅದೆ ತಾ|| ೨೦-೬-೧೯೨೯

ಸಹಿ- ಗಿಡ್ಡಪ್ಪಾ ಮುಂಡರಗಿ ತಾ|| ಗದಗ

ನಿಮಗೆ ಉತ್ತಮವಾಗಿ ಉರಿಯುವ

ಒಣ ಕಟ್ಟಿಗೆ ಬೇಕೆ?

ನಮ್ಮ ಕಟ್ಟಿಗೆಯ ಅಡ್ಡೆಯಲ್ಲಿ ಉತ್ತಮ ತರದ ದಿಂಡಲ, ಮತ್ತಿ ಮುಂತಾದ ಕಾಡ ಕಟ್ಟಿಗೆಗಳು ಒಹು ಸೋಯಿಯ ದರದಿಂದ ಸಿಗುತ್ತವೆ. ಮಳೆಗಾಲದಲ್ಲಿ ಒಣಗಿದ ಕಟ್ಟಿಗೆಗಳು ನಮ್ಮಲ್ಲಿ ಯಾತೆ ಎಂದ ನೇ ಕಡೆಗೆ ಸಿಗುವದು ಕ್ವಚಿತ್. ಮಳೆಗಾಲ ದಿವಸದಲ್ಲಾಗುವ ಹಸೀ ಕಟ್ಟಿಗೆಯ ತಾಪವನ್ನು ಕಳೆಯಬೇಕೆಂದು ನಾವು ಮುದ್ದಾಮ ಕಟ್ಟಿಗೆಯ ಅಡ್ಡೆಯನ್ನು ಜನರ ಸೋಯಿಗಾಗಿ ಇಟ್ಟಿರುತ್ತೇವೆ. ಗ್ರಾಹಕರು ಇದರ ಲಾಭವನ್ನು ತಕ್ಕೊಳ್ಳಬೇಕು.

ಅಡ್ಡೆಯ ಮಾಲಕ,
ಬಾಳಾಚಾರ್ಯ ಶಾಂತಾಚಾರ್ಯ
ಮುನವಳ್ಳಿ.
ಧಾರವಾಡ.

(ಸೆಂಟ್ರಲ ಬ್ಯಾಂಕಿನ ಗಡಿಯಾಳದ ಎದುರಿಗೆ)

ಸೂಸಮಯ

ಎ. ಕೆ. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರ್ಯಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಅಂಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಬುಧವಾರ ತಾರೀಖು ೨೪ ನೇ ಜುಲೈ ೧೯೨೯ (ಸಂಚಿಕೆ ೧೬೪

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯುತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಬ್ಬೀದರದಿಂದ ತೆಗೆದುಕೊಳ್ಳಲ್ಪಡುವವು- ಒಬ್ಬಿದರ ರೂ. ೩॥ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಒಬ್ಬಿದರ ೩॥ ರೂ.

ಸೇವ್ಹಿಂಗ್ಸ ಬ್ಯಾಂಕ:— ಒಬ್ಬೀದರದಿಂದ ತೆಗೆದುಕೊಳ್ಳಲ್ಪಡುವವು- ಒಬ್ಬಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಒಬ್ಬಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಒಬ್ಬಿ ಹಾಗೂ ನಫೆ ವಸೂಲ ಮಾಡಿ ಅದಾ ಖಾತೆಗಳಿಗೆ ಜಮಾ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೋಖಡಾ ಉದಾರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಊರುಗಳಿಗೆ ಚಲ್ಲನ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ ಮೊಕತ್ಯಾರ ಪತ್ರಗಳೂ ಸದರಿ ಬ್ರ್ಯಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ   ಟಿ. ಜೋನೆಲಿ,
ತಾ॥ ೧೭-೬-೨೯   ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಆಫೀಸ- ಮಂಗಳವಾರಪೇಟೆ, ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಕಾಸು ಮತ್ತು ಒಹಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಜೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಒಬ್ಬಿಯ ದರ ಸ್ವಂತ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭದಾಯಕವಾಗಿ ಅವುಗಳ ವ್ಯವಹಾರ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಒಬ್ಬಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟೇಶ ಇಂಡಿಕಾರ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋ ಆಪರೆಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಪೇಟು ಲಕ್ಷದ ಕೊಯಲುಟು. ಚಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಠೇವು ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಒಬ್ಬಿ ಕೊಡುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವತಿ ಇಟ್ಟುಕೊಳಲಾಗುವು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟುಕೊಳುವ ಒಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ವಿ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ-ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೮-೦
೪ ,,	೪-೨-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ. ೨೪-೩-೨೯ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಸ್ತ್ರಿಯ
ಶ್ರೀ ವಸುಮತಿಯ ನಲಿಸಿತೆ ಸುಹಿತಚರಿತೆಗಳಿಂ ಜ
ದೀ "ವಿಜಯಂ" ಶ್ರೀಕರಣ ।
ನಾ ವಿಹಿತಂಗಳ ವಿವರಿಸನಲಿಪ್ಪುದು ಸಾಜಂ ॥೧॥

ರಶಿಯಾ ಮತ್ತು ಇಂಗ್ಲಂಡ.

——)(೦)(——

ಮಹಾಯುದ್ಧ ಮುಗಿದ ಕೂಡಲೆ ರಶಿಯರ ಬೊಲ್ಶೆವಿಕ ಭೂತವು ಇಂಗ್ಲಂಡದಲ್ಲಿ ಕ್ರಾಂತಿಯನ್ನುಂಟು ಮಾಡಬಹುದೆಂಬ ಭಯ ಮತ್ತು ಚಿಂತೆಯಿಂದ ಕಾನ್ಸರವೇಟಿವ್ಹರು ರಶಿಯವನ್ನು ಮೂರು ಮೊಳದ ಅಂತರದ ಮೇಲಿಟ್ಟರು. ರಾಜಕೀಯ ಮಾತ್ರವಲ್ಲ; ವ್ಯಾಪಾರ ವಿಷಯವಾಗಿಯೂ ಅದರ ಮಲುರ್ ಹರಕೊಂಡರು. ೧೯೨೪ ರಲ್ಲಿ ಮಿ. ಮಾಕಡೋನಾಲ್ಡ ಸಾಹೇಬರು ಮಂತ್ರಿಯಾದರು. ರಾಜಕೀಯ ವ್ಯೊಂದನ್ನು ಹೊತ್ತಿಸಿ, ಉದ್ಯೋಗ-ವ್ಯಾಪಾರ ದೃಷ್ಟಿಯಿಂದ ರಶಿಯಾದ ಕೂಡ ಒಪ್ಪಂದ ಮಾಡಿಕೊಂಡು ಇಂಗ್ಲಂಡದ ನಿರುದ್ಯೋಗಿಗಳಿಗೆ ಉದ್ಯೋಗವಾಗಬೇಕೆನ್ನುವಂಥ ಉಪಾಯ ನಡಿಸಿದರು. ಇವರ ದಿವಾನಗಿರಿಯು ಮೂರೂ ಮುಕ್ಕಾಲು ಗಳಿಗೆಯದಾಗಿ, ಕಾನ್ಸರವೇಟಿವ್ಹರೇ ಪುನಃ ಮಂತ್ರಿಯಾದರು. ಇವರ ಪರರಾಷ್ಟ್ರಗಳ ಮಂತ್ರಿಯಾದ ಮಿ. ಚೆಂಬರಲಿನ್ನಸಾಹೇಬರು ರಶಿಯರಿಗೆ ಇಂಗ್ಲಂಡದಲ್ಲಿ ಅನುವು ಕೊಡುವಂತಿಲ್ಲ; ಜಗತ್ತಿನಲ್ಲಿ ಯಾವ ದೇಶದಲ್ಲಿಯೂ ಇವರಿಗೆ ನಿಲ್ಲಲು ಸ್ಥಳ ದೊರೆಯದಂತೆ ಪ್ರಯತ್ನಿಸುತ್ತಾ ಬಂದರು. ಚೆಂಬರಲೇನರ ಕಾಲಹಿಂದಾಗಿ, ಮತ್ತೆ ಮಿ. ಮ್ಯಾಕಡೋನಾಲ್ಡರ ಕಾಲ ಬಂದಿದಷ್ಟೇ; ಇವರು ದಿವಾನಗಿರಿಯನ್ನು ನೋಡಲಾರಂಭಿಸಿದ ಮರುದಿವಸವೇ ರಶಿಯರ ಕೂಡ ಒಪ್ಪಂದವೆಂದು ಜಾಹೀರ ಮಾಡಿದರು. ಆ ವಿಷಯವಾಗಿ ಒಡಂಬಡಿಕೆಯ ಶರ್ತುಗಳ ಚರ್ಚೆ ಮಾಡಲು- ರಶಿಯಾದ ಬ್ರಿಟಿಶ ಪ್ರತಿನಿಧಿಯು ಶಾಪ್ಪರಲ್ಲಿ ಇಂಗ್ಲಂಡಕ್ಕೆ ಬರತಕ್ಕವನಿದ್ದಾನೆ. ರಶಿಯರು ಬರಲಿ; ವ್ಯಾಪಾರ ಬರಲಿ; ಸಂಸ್ಕಾರ ಕೊಕ್ಕದ ವಿನಿಮಯವಾಗಲಿ. ಆದರೆ ಅವರು ತಮ್ಮ ತತ್ವಗಳ ಚಾಚುಂದ್ರಿಯನ್ನು ಮಾತ್ರ ಇಂಗ್ಲಂಡದಲ್ಲಿ ಬಿಡಬಾರದು. ಮತ್ತು ಅದನ್ನು ನಾವು ಶಾಂತವಾದರೂ ತಡೆಯಲಾರೆವೆಂದು, ಆಗಿನ ಪರರಾಷ್ಟ್ರಗಳ ಪ್ರಧಾನಿಯಾದ ಮಿ. ಹೆಂಡರಸನ್ನಸಾಹೇಬರು ರಶಿಯಾದ ದರಬಾರಕ್ಕೆ ಸಾರಿ, ದೂರಿ ಹೇಳಿದ್ದಾರೆ.

ಇಂಗ್ಲಿಷರು ಒಂದು ಕಾಲದಲ್ಲಿ ಯುರೋಪದ ಬೇರೆ ದೇಶಗಳ ರಾಜಕೀಯ ಕಾರಣಕ್ಕಾಗಿ ದೇಶತ್ಯಾಗ ಮಾಡುವಂಥವರಿಗೆ ಆಶ್ರಯ ಕೊಡುತ್ತಿದ್ದರು. ಅಂಥ ಆಶ್ರಯವು ತಮಗೆ ದೊರೆವ ಬೇಕೆಂದು ಟ್ರಾಸ್ಕಿಸಾಹೇಬನು ಮಿ. ಮ್ಯಾಕಡೋನಾಲ್ಡಸಾಹೇಬರಿಗೆ ವಿನಂತಿ ಮಾಡಿಕೊಂಡನು. ಕೂಲಿಕಾರರು ತಮ್ಮವರೇ ಎಂದು ಟ್ರಾಸ್ಕಿಯ ಭಾವನೆ. ಏಕೆಂದರೆ- ಇವರು ಪ್ರಜ್ಞನ ಬುದ್ಧರೆನ್ನುವಂತೆ ಪ್ರಜ್ಞನ್ನ ಕಾನ್ಸರವೇಟಿವ್ಹರೇ ಆಗಿದ್ದಾರೆಂದು ಇದೇ ಟ್ರಾಸ್ಕಿಸಾಹೇಬರು ಇವರ ಮೇಲೆ ಟೀಕೆ ಮಾಡಿದ್ದರು. ಟ್ರಾಸ್ಕಿ ಸಾಹೇಬರು ಇಂಗ್ಲಂಡದಲ್ಲಿ ವಾಸಿಸಿದರೆ- ಪುನಃ ಬೊಲ್ಶೆವಿಕ ಭೂತಕ್ಕೆ ಜೀವಕ್ಕೆ ಪ್ರಾರಂಭವಾಗುವದೆಂದು ಸ್ಪಷ್ಟವಾಗಿ ಹೇಳಿ. ಇವರಿಗೆ ಆಶ್ರಯ ದೊರೆಯಲಾರದೆಂದಿದ್ದಾರೆ. ಇದರಿಂದ ಕೂಲಿಕಾರ ಮಂತ್ರಿಗಳಿಂದ ಬ್ರಿಟಿಶ ಸಾಮ್ರಾಜ್ಯದ ಯಾವದೇ ಭಾಗದಲ್ಲಿ ಬೊಲ್ಶೆವಿಕ ತತ್ವಕ್ಕೆ ಅನುವು ದೊರೆಯಲಾರದೆಂದು ಖಚಿತವೆನಿಸುತ್ತದೆ.

ಬಚ್ಚಾಸಾಕುವಿಗೆ ಬಾರಕೋಲಿನ ಏಟು.

——(೦)——

ಜನ್ಮಾಂತರದ ಭೋಗ.

—(೦)—

ಪೇಶಾವರದ ಒಂದು ಚಹಾದ ಅಂಗಡಿಯಲ್ಲಿ ಅವಿಚಾರವಾಗಿರುವ ಬಚ್ಚಾಸಾಕುವು ಮುಸುರಿ ತೊಳೆಯುವ ಆಳಾಗಿದ್ದಾನೆಂಬದಾಗಿ ಹಬ್ಬಿದ ಸುದ್ದಿಯು ನಿಜವೇ ಎಂದು ವಿಚಾರಮಾಡಲೋಸುಗ ಖಾದೀ ಪ್ರಸಾರಕ್ಕಾಗಿ ಪೇಶಾವರಕ್ಕೆ ಹೋದ ಜಮುನಾಲಾಲ ಬಜಾಜರು ಬಚ್ಚಾನು ದುಡಿಯುತ್ತಿದ್ದ ಚಹಾದ ಅಂಗಡಿಗೆ ಹೋದರು. ಅಂಗಡಿಕಾರನು ಈ ಸಂಗತಿಯು ನಿಜವೆಂದು ಹೇಳಿದನು. ಈತನು ಬಚ್ಚಾನ ವಿಷಯವಾಗಿ ಹೆಚ್ಚಿಗೆ ಹೇಳಿದ್ದೇನಂದರೆ-

ಹಲವು ವರ್ಷಗಳ ಹಿಂದೆ ಬಚ್ಚಾನು ನನ್ನಲ್ಲಿದ್ದನು. ಒಂದು ಕಳವಿನ ಪ್ರಕರಣದಲ್ಲಿ ಸಿಕ್ಕನು. ಪೋಲೀಸರು ಕೈದಿಯನ್ನಿಟ್ಟಾಗ ಆತನನ್ನು ಕಾಣಲಿಕ್ಕೆ ಹೋದೆನು. ಸಬ್ಇನ್ಸಪೆಕ್ಟರನು ಆಗ ಈತನ ವ್ಯವಸ್ಥೆ ಮಾಡಿದ್ದನು. ಅನಂತರ, ಇವನು ನನಗೆ ಹೇಳದೆ ಕೇಳದೆ, ಕೃಷ್ಣಮುಖನಾಗಿ, ಪಲಾಯನ ಹೇಳಿಸಿ ಕಾಬೂಲದ ಗಡಿನಾಡಿನ ಪ್ರಾಂತವನ್ನು ಸೇರಿಕೊಂಡನೆಂದು ಹಿಂದಿನಿಂದ ತಿಳಿಯಿತು. ದೈವ ತೆರೆಯಿತು, ಪುಂಡನು ಪರಾಕ್ರಮಶಾಲಿಯಾಗಿ, ಅಮೀರ ಪಟ್ಟವನ್ನು ಆಳುತ್ತಿದ್ದಾನೆ.

ಇಂಗ್ಲಂಡದಲ್ಲಿ ನೀರಿನ ಬರ.

——೦——

ಗಿರಣಿ ಕಾರಖಾನೆಗಳು ಬಂದಾಗುವ ಹೊತ್ತು ಬಂತು.

—(೦)—

ಜನರಿಗೆ ಬಂಕಾಪೂರದ ಬರಕ.

—(೦)—

ಇಂಗ್ಲಂಡದಲ್ಲಿ ಸರಾಬುಕ್ಕೆ ಮಳೆ ನಾಗದ್ದರಿಂದ, ನೀರಿನ ಭಯಂಕರ ಕುಟಾಗ್ರತೆ ನಾಗಿದೆ. ಜನರು ವಿ ತತ್ವಯಿಂದ ನೀರನ್ನು ಉಪಯೋಗಿಸಬೇಕೆಂದು ಲಂಡನದ ವರ್ಕ್ಸ ಕಮಿಟಿಯವರು ಜಾಹೀರ ಪ್ರಕಟನೆಯನ್ನು ಹೊರಡಿಸಿ ನೀರಿನ ಹೆಚ್ಚು ಉಪಯೋಗ ಮಾಡದಂತೆ ಕಂಡು ಬಂದಿದೆ. ೧೫ ದಿವಸಗಳಲ್ಲಿ ಮೂರು ಕೋಟಿ ಗ್ಯಾಲನ್ನ ನೀರನ್ನು ನಿತ್ಯ ನಿಯಮಕ್ಕಿಂತ ಹೆಚ್ಚು ಹಾಳು ಮಾಡಿದ್ದಾರೆ ಅದ್ದರಿಂದ ಮ್ಯುನಿಸಿಪಾಲಿಟಿಯವರು ಈ ಬಗ್ಗೆ ಬೇರೆ ಮತ್ತು ಉಗ್ರವಾದ ಉಪಾಯ ಕೈಕೊಳ್ಳ ತೊಡಗಿದ್ದಾರೆ. ತೋಟಗಳಿಗೆ ನೀರು ಕೊಡುವದನ್ನು ತಡೆಗಟ್ಟ ಬಂದು ಮಾಡಿದರು. ಮೋಟಾರ ಸಹ ತೊಳೆಯಬಾರದೆಂದು ಕಟ್ಟಪ್ಪಣೆ ಮಾಡಿರುವರು. ಜನರು ಈ ಹುಕುಮನ್ನು ಅವಮಾನ್ಯ ಮಾಡಿದರೆ ಕಾಯದೆಯ ಪ್ರಕಾರ ಕೇಸ ನಡಿಸುವರು. ಮೋಟಾರಗಳಂತೆ ಜನರ ಮೇಲೂ ನೀರಿನ ಬ್ರಹ್ಮಹಸ್ತ ಬೆನ್ನು ಹತ್ತಿರುವದು. ಅನೇಕರಂತೆ ಸ್ನಾನ ಮಾಡಬೇಕೆಂಬ ಹೇಳಿಕೆಯನ್ನು ಮರೆಯಿರಿ; ಮತ್ತು ಒಬ್ಬೆ ಒಟ್ಟಿಯಿಂದ ಪ್ರಯತ್ನಿಸಿಕೊಳ್ಳಿರೆಂದೂ, ತಿಳುವಳಿಕೆಯುಳ್ಳ ಗೃಹಸ್ಥರು ಈ ಸೂಚನೆಯ ವಿರುದ್ಧ ನಡೆದು, ನೀರಿನ ಅಪವ್ಯಯ ಮಾಡಲಾರರೆಂದೂ ಕಮಿಟಿಯವರು ಆಶಿಸಿದ್ದಾರೆ.

ಲಂಕಾಶೈರದಂತೆ ಮ್ಯಾಂಚೆಸ್ಟರ, ಬಾಲ್ಟನ, ಬ್ರಾಡಫೋರ್ಡ ಮುಂತಾದ ಪಟ್ಟಣಗಳ ಕರ್ಮಕಥೆ ಹಾಗಿದೆ. ಬಾಲ್ಟನದಲ್ಲಿ ಉಣ್ಣೆಯ ದೊಡ್ಡ ದೊಡ್ಡ ಗಿರಣಿಗಳುಂಟು. ನೀರಿಲ್ಲದ್ದರಿಂದ ಗಿರಣಿಗಳ ಕೆಲಸ ಕೆಲ ತಾಸು ಬಂದು ಮಾಡಿದರು. ಮತ್ತು ಈ ಮೂಲಕ ಕೆಲ ಕೂಲಿಕಾರರಿಗೆ ಮನೆಗೆ ಹೋಗಬೇಕಾಯಿತು. ಮ್ಯಾಂಚೆಸ್ಟರದಲ್ಲಿ ೩೮ ದಿವಸಗಳ ವರೆಗೆ ಸಾಲುವಷ್ಟು ನೀರಿದ್ದು, ಅಷ್ಟರಲ್ಲಿ ಮಳೆಯಾಗದಿದ್ದರೆ- ಅದರ ಧ್ವನಿ ಹೀಗೇ ಆಗುವದೆಂದು ಯಾರು ಹೇಳಲು ಸಮರ್ಥರಾಗುವರು?

ಹಿಂದುಸ್ಥಾನದ ಸ್ವರಾಜ್ಯದ ಆಶೆ ನಿರಾಶೆ.

—(೦)—

ದೇವಿ ಸರೋಜನಿಯವರು ಲಂಡನದಿಂದ ಬರ್ಲಿನ ಪಟ್ಟಣಕ್ಕೆ ಹೋದರು. ಅಲ್ಲಿ ವಾಸವಾಗಿರುವಂಥ ಹಿಂದೂ ವ್ಯಾಪಾರಸ್ಥರೂ, ವಿದ್ಯಾರ್ಥಿಗಳೂ ಇವರಿಗೋಸ್ಕರ ಸನ್ಮಾನ ಸಮಾರಂಭವನ್ನು ಮಾಡಿದರು. ಆ ಸಮಾರಂಭದಲ್ಲಿ ದೇವಿಯವರ ಹಿಂದುಸ್ಥಾನದ ಸ್ವರಾಜ್ಯ ವಿಷಯವಾಗಿ ಭಾಷಣವಾಯಿತು. ಈಗಿನ ಮಂತ್ರಿಯಾದ ಕೂಲಿಕಾರರು ಹಿಂದುಸ್ಥಾನದ ಮಿತ್ರರೆಂದು ಒಂದು ಕಾಲದಲ್ಲಿ ತಿಳಿಯಲ್ಪಟ್ಟಿತ್ತು. ಆದರೆ ಅವರಿಂದ ಸ್ವರಾಜ್ಯ ವಿಷಯವಾಗಿ ನಮ್ಮ ಮನದಾಶೆಯು ಪೂರ್ಣವಾಗುವ ರೀತಿಯಿಲ್ಲೆಂದೂ ಹಿಂದೀ ಜನರು ಸ್ವಾವಲಂಬನದಿಂದಲೇ ಸ್ವರಾಜ್ಯ ಸ್ವಾತಂತ್ರ್ಯ ದೊರಕಿಸಬೇಕೆಂದೂ ದೇವಿಯವರು ಸ್ಪಷ್ಟವಾಗಿ ಹೇಳಿದ್ದಾರೆ.

ಅಸೆಂಬ್ಲಿಯ ಮೆಂಬರರಾದ ಶ್ರೀ ಷಣ್ಮುಖ ಶೆಟ್ಟಿ, ಆನಿಬಿಸೆಂಟ ಮೊದಲಾದವರು ಲಂಡನದಲ್ಲಿ ಸ್ವರಾಜ್ಯ ಚಳವಳಿಯನ್ನು ಪ್ರಾರಂಭಿಸಿದ ಸಂಗತಿಯನ್ನು ಈ ಮೊದಲು ಬರೆದಿರುತ್ತೇವೆ. ಅದರಲ್ಲಿ ಶ್ರೀ ಷಣ್ಮುಖಶೆಟ್ಟರು ಲಂಡನಕ್ಕೆ ಸಲಾಮು ಮಾಡಿ ಹಿಂದುಸ್ಥಾನದ ದಾರೀ ಹಿಡಿದಿದ್ದಾರೆ. ಹಿಂದುಸ್ಥಾನದ ಕಲ್ಯಾಣವಾಗಬೇಕೆಂದು ಪ್ರಸ್ತುತದ ಪ್ರಧಾನರು ಅಪೇಕ್ಷಿಸುತ್ತಾರೆ. ಅವರ ಮನಸ್ಸನ್ನೊಯಿಸಬೇಡಿರಿ ತಲೆಗೊಟ್ಟರಂತೆ ಮನಬಂದಂತೆ ಮಾತ ಹೇಳುತ್ತಾ ಕೂಡ್ರದೆ, ಒಂದೇ ಹಿಡಿತವನ್ನು ಪ್ರತಿಪಾದಿಸುತ್ತಾ ಹೋಗಿರಿ ಅಂದರೆ ನಿಜವಾಗಿ ಹಿಂದುಸ್ಥಾನದ ಹಿತವಾಗುವದೆಂದು ಶೆಟ್ಟರು ಹೇಳಿದಂತೆ ಡಾಬಿನ ವರ್ತಮಾನ ಪ್ರಸಿದ್ಧವಾಗಿದೆ

ಗವ್ಹರ್ನರಸಾಹೇಬರಿಗೆ ಮಾನಪತ್ರ.

—(೦)—

ಆಕ್ಟೋಬರ ತಿಂಗಳ ಕೊನೆಯ ಭಾಗದಲ್ಲಿ ಕರ್ನಾಟಕ ಪ್ರಾಂತದಲ್ಲಿ ನಾಮದಾರ ಗವ್ಹರ್ನರ ಸಾಹೇಬರು ಸಂಚಾರಾರ್ಥ ಬರುವರಷ್ಟೇ; ಇವರಿಗೆ ಮಾನಪತ್ರ ಕೊಡಬೇಕೆಂದು ಇಲ್ಲಿಯ ಮ್ಯುನಿಸಿಪಾಲಿಟಿ, ಡಿ॥ ಲೋ॥ ಬೋರ್ಡಿನಲ್ಲಿ ಠರಾವು ಪಾಸಾಗಿದ್ದು, ಈ ಕೆಲಸಕ್ಕಾಗಿ ಅನುಕ್ರಮವಾಗಿ ೧೦೦೦ ಮತ್ತು ೧೫೦೦ ರೂಪಾಯಿ ವೆಚ್ಚ ಮಾಡುವದೆಂತ ಗೊತ್ತಾಗಿರುತ್ತದೆ

ಮೊಂಟೆಗ್ಯು ಸುಧಾರಣೆಯಿಂದ ಲಾರ್ಡ ಸಿಂಹರು ಬಿಹಾರದ ಗವ್ಹರ್ನರರಾದಂತೆ, ಸಾಯಮನ್ನ ಸುಧಾರಣೆಯಿಂದ ಸರ ಶಂಕರನಾಯರರು ನಾಗಪೂರದ ಗವ್ಹರ್ನರರಾಗುವರೆಂದು ಈಗಾಗಲೆ ವರ್ತಮಾನವಾಗಿದೆ.

ಲಾಹೋರಿನಲ್ಲಿ ಸರದಾರ ಮಂಗಳಸಿಂಗ ಮುತ್ತು ಜಾಫರಲ್ಲಿಯವರ ದಸ್ತಗಿರಿ

—(೦)—

ಅಸೆಂಬ್ಲಿಯಲ್ಲಿ ಬಾಂಬು ಚಲ್ಲಿದ ಆರೋಪದಿಂದ ಕರೀ ನೀರಿನ ಶಿಕ್ಷೆ ಹೊಂದಿದ ಭಗತಸಿಂಗ ಮುತ್ತು ದತ್ತರು ಸಹಿತವಾಗಿ ಸ್ಯಾಂಡರ್ಸ ಸಾಹೇಬರ ಕೊಲೆಯ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಜನರ ಸಹಾಯಕ್ಕಾಗಿ ಲಾಹೋರಿನಲ್ಲಿ ಫಂಡು ಕೂಡಿಸುವ ಕೆಲಸ ನಡೆದಿದ್ದು, ಫಂಡಿನ ಉದ್ದೇಶ್ಯವಾಗಿಯೇ ದಿನಾಲು ಸಾರ್ವಜನಿಕ ಮೆರವಣಿಗೆಯು ಹೊರಡುವದು. ಮೆರವಣಿಗೆಯಲ್ಲಿ ರಾಜ್ಯಕ್ರಾಂತಿಯು ದೀರ್ಘಾಯುಷಿಯಾಗಲಿ; ಸಾಮ್ರಾಜ್ಯತ್ವದ ಅಧಃಪತನವಾಗಲೆಂದು ಕೂಗುವರೆಂದೂ ಇದ ಶಾಂತತಾಭಂಗಕ್ಕೆ ಕಾರಣವಾಗುವದೆಂದೂ ಹೇಳಿ, ಪೋಲೀಸರು ಇಂಥ ಮೆರವಣಿಗೆ ತೆಗೆಯಬಾರದೆಂದು ಹುಕುಮು ಮಾಡಿದರು. ಈ ಬಗ್ಗೆ ವಿಚಾರ ಮಾಡಲು ಸರದಾರ ಮಂಗಲಸಿಂಗರ ಮನೆಯಲ್ಲಿ ಕಮಿಟಿ ಕೂಡಿತು ಅಲ್ಲಿ ಮೆರವಣಿಗೆ ಹೊರಡಿಸುವಂತೆ ಗೊತ್ತಾಯಿತು. ಎಲ್ಲ ಜನರು ಹುರಿಯಾಗಿ ಕಾಯದೆಭಂಗ ಮಾಡಲು ಸಿದ್ಧರಾದರು ಇವರಿಗೆ ಉತ್ತೇಜಕರೆಂದು ಪೋಲೀಸರು ಸರದಾರ ಮಂಗಲಸಿಂಗ ಮುತ್ತು ಮಿ. ಜಾಫರ ಅಲ್ಲಿಯವರನ್ನು ಹಿಡಿದಿರುತ್ತಾರೆ.

ನಾಯಿಗಿಂತ ಕನಿಷ್ಠ

ಸ್ಯಾಂಡರ್ಸರ ಕೊಲೆಯ ಪ್ರಕರಣದ ಆರೋಪಿಗಳೂ ಅನ್ನ ವರ್ಜ ಮಾಡಿದ್ದಾರೆ ನಾವು ನ್ಯಾಯ ವಿಚಾರಣೆಯಲ್ಲಿದ್ದರೂ, ಸರಕಾರವು ನಮಗೆ ಕೊಡುವ ಅನ್ನವು ನಾಯಿಗೆ ಹಾಕುವದಕ್ಕಿಂತ ಕನಿಷ್ಠವಿದ್ದು, ರಾಜಕೀಯ ಕೈದಿಗಳನ್ನು ಹೇಗೆ ನಡಿಸಿಕೊಳ್ಳುವದೆಂಬ ಬುದ್ಧಿ ಬರುವಂತೆ ನಾವು ಪ್ರತ್ಯಕ್ಷ ಕೃತಿಯಿಂದ ತೋರಿಸುತ್ತೇವೆಂದು ಇವರು ಹೇಳುತ್ತಾರೆ.

ದಬ್ಬಾಳಿಕೆ ನಿಲ್ಲಿಸಿರಿ

ಭಗತಸಿಂಗ ಮತ್ತು ದತ್ತರು ಅಷ್ಟು ತ್ಯಾಗ ಮಾಡಿದ್ದು, ಆಯರ್ಲಂಡಿನ ಮ್ಯಾಕಸ್ವಿನಿಯಂಥ ಮರಣವನ್ನು ಹಾರೈಸುವ ತಪೋಬಲದ್ದಾಗಿರುತ್ತದೆ ಮತ್ತು ಬೇರೆ ಜನರನ್ನು ಹಿಡಿಯುವದು ಕೇವಲ ದಬ್ಬಾಳಿಕೆಯಾಗಿರುತ್ತದೆ. ಆದ್ದರಿಂದ ಈ ದಬ್ಬಾಳಿಕೆಯನ್ನು ನಿಲ್ಲಿಸಬೇಕೆಂದು ಅಲ್ಲಿಯ ಕಾನ್ಸಿಲದ ಮೆಂಬರರಾದ ಮಿ. ಮಹಮದ ಆಲಮರು ಮುಖ್ಯ ಮಂತ್ರಿಯಾದ ಮಿ ಮ್ಯಾಕಡೋನಾಲ್ಡ ನಾಮಕರಿಗೆ ತಂತಿಯಿಂದ ವಿನಂತಿ ಮಾಡಿಕೊಂಡಿದ್ದಾರೆ

ಕರ್ನಾಟಕ ಸೆಂಟ್ರಲ ಬ್ಯಾಂಕ ಧಾರವಾಡ.

—(೦)—

ಮೊನ್ನಿನ ದಿವಸ ಇಲ್ಲಿಯ ಕರ್ನಾಟಕ ಸೆಂಟ್ರಲ ಬ್ಯಾಂಕಿನ ಜನರಲ ಕಮಿಟಿಯು ಕೂಡಿತ್ತು. ಬರುವ ವರ್ಷದ ಬಗ್ಗೆ ಶ್ರೀ ಹೊಸಮನಿಯವರು ಚೇರಮನ್ನ ಮತ್ತು ಮಿ ಗಿರಿಯಪ್ಪನವರು ಮ್ಯಾನೇಜಿಂಗ ಡಾಯರೆಕ್ಟರರಾಗಿ ನೇಮಿಸಲ್ಪಟ್ಟರು ಶ್ರೀ ದ್ಯಾವನಗೌಡಾ ಪಾಟೀಲ ಮೊದಲಾದವರು ಮ್ಯಾನೇಜಿಂಗ ಕಮಿಟಿಯಲ್ಲಿ ಬಂದಿದ್ದಾರೆ. ಅಗ್ರಿಕಲ್ಚರ ಮಾರ್ಗೇಜ ಬ್ಯಾಂಕಿಗಾಗಿ ಹತ್ತು ಲಕ್ಷ ರೂಪಾಯಿವರೆಗೆ ಕೊಡಬೇಕೆಂದು ಠರಾವು ಪಾಸಾಯಿತು.

ಕನ್ನಡದ ಬದಲಾಗಿ ಮರಾಠಿಯ ಉಪಯೋಗ.

....೦....

(ಒಬ್ಬ ಚಿಕಿತ್ಸಕನಿಂದ)

ಕರ್ನಾಟಕದಲ್ಲಿ ಕನ್ನಡದ ಧ್ವನಿಯು ಹೆಚ್ಚಾಗಬೇಕೆಂದು ಮುನ್ನಡೆ ಬಯಸುವ ಒಂದು ಕನ್ನಡದ ಓಲೆಯಲ್ಲಿ ಬಂದ ಮರಾಠಿ ಶಬ್ದಗಳು

೧ ಖಾಸ, ೨ ಗಾಡಿಗೆ, ೩ ಉಪ್ಕೇಬು, ೪ ಪಟ್ಟಿ, ೫ ತಯಾರ, ೬ ರಸ್ತೆ, ೭ ರಾಜ್ಯಕ್ರಾಂತಿಕೀ ಚಳ, ೮ ತರುವರು, ೯ ನಿರಾಶೆ, ೧೦ ಘರಾವಿ, ೧೧ ಜಾಗೀ, ೧೨ ದಾಖಲು, ೧೩ ಖಮೀನಿ, ೧೪ ಜಾಸೂದ, ೧೫ ಮಾಲಕ, ೧೬ ಭೆಟ್ಟಿ, ೧೭ ನಾಪತ್ತೆ

ಇವು ಒಂದೇ ಬರಹದೊಳಗಿನ ಶಬ್ದಗಳು. ಇವಕ್ಕೆ ಕನ್ನಡ ಶಬ್ದಗಳು ಇಲ್ಲವೇ ಹೇಗೆಂದು ಆ ಪತ್ರ ಸಂಪಾದಕರು ಹೇಳಲಿ;

ಚಿನಾಬ ನದಿಯಲ್ಲಿ ೧೦೦ ಜನರು ಕೂತ ಹೋಗುತ್ತಿದ್ದ ಹರಗೋಲು ಮುಣುಗಿ, ೬೩ ಜನರು ಜಲಸಮಾಧಿ ಹೊಂದಿದರು.

ಸಿರಿಗನ್ನಡಂಗೆಲ್ಗೆ

ದಿ ಧಾರವಾಡ ಅಮೆಚೂರ್ಸ

ಸಂಘದವರ

ಸಾಂಗ್ರ ಸಂಗೀತ

ವರದಕ್ಷಿಣೆ

ಎಂಬ ಸಾಮಾಜಿಕ ನಾಟಕವು ತೀವ್ರವೇ ರಂಗಭೂಮಿಯಮೇಲೆ ಬರುವದು. ಆಶ್ರಯವನ್ನು, ಪ್ರೋತ್ಸಾಹನವನ್ನು ದಯಪಾಲಿಸಬೇಕಾಗಿ ಬಿನ್ನಹ. ತಾರೀಖಿನ ಕಡೆಗೆ ಲಕ್ಷ್ಯಕೊಡಿರಿ.

ಕಾರ್ಯದರ್ಶಿ.

ನೋಟೀಸ

ರಾ|| ರಾ|| ಇಮಾಮಸಾಬ ವಲ್ಲದ ಫಕೀರಸಾಬ ಪಿಂಜಾರ ವಯಾ ೩೬ ಜಾತಿ ಮುಸಲ್ಮಾನ ಕಸಬು ಶೇತಕಿ ಸಾ|| ಕರ್ಲವಾಡ ತಾಲೂಕ ನವಲಗುಂದ ಇವನಿಗೆ—

ಕೆಳಗೆ ಸಹಿಮಾಡಿದ ಬಸಪ್ಪ ಭೀಮಪ್ಪ ಮಾಡಳ್ಳಿ ಸಾ|| ಹಳ್ಳಿಕೇರಿ ತಾಲೂಕ ನವಲಗುಂದ ಇವನು ಈ ನೋಟೀಸಿನ ದ್ವಾರದಿಂದ ತಿಳಿಸುವದೇನಂದರೆ ನೀನು ನಿನ್ನ ಮನೆತನದ ಅಡಚಣಿಯ ಮೂಲಕವಾಗಿ ನಮ್ಮ ಒಳಿಯಲ್ಲಿ ರೋಖ ೧೫೦ ರೂಪಾಯಿಗಳನ್ನು ಸಾಲಾ ತೆಗೆದುಕೊಂಡು ಸದರ ರೂಪಾಯಿಗಳಿಗೆ ದರಮಹಾ ದರಶೇಕಡಾ ೧-೮-೦ ರೂಪಾಯಿಯಂತೆ ಬಡ್ಡಿ ಕೊಡುವ ಕರಾರುಮಾಡಿಕೊಂಡು ಸದರ ಅಸಲ ರೂಪಾಯಿ ವ ಅದಕ್ಕೆ ಬಡ್ಡೀ ರೂಪಾಯಿ ಬೇಡಿದಾಗ್ಯೆ ಕೊಡುವ ಶರ್ತಿನಿಂದಾ ವೈದಿರುತ್ತಿ ಮತ್ತು ಸದರ ರೂಪಾಯಿಗಳ ಬಾಬತು ಏನೂ ಹಣವನ್ನು ವಸೂಲ ಕೊಟ್ಟಿರುವದಿಲ್ಲ ಕಾರಣ ಸದರ ರೂಪಾಯಿಗಳನ್ನು ನಿನಗೆ ಅನೇಕಸಾರೆ ಕೊಡಲಿಕ್ಕೆ ಕೇಳಿದರೆ ಸುರಳೀತ ಕೊಡವಲ್ಲಿ ಕಾರಣ ಸದರ ಹಣದ ವಸೂಲಿಯ ಒಗ್ಗೆ ನಾನೆ ಧಾರವಾಡ ಕೋರ್ಟಿನಲ್ಲಿ ನಿನ್ನ ಮೇಲೆ ದಾವಾ ಮಾಡಿದ್ದು ಸದರ ದಾವಾದ ಹಕಿಕತ್ತು ನಿನಗೆ ತಿಳಿದ ಮೂಲಕ ನೀನು ನನಗೆ ಕೊಡತಕ್ಕ ಹಣಾ ಮುಳುಗಿಸುವ ಬುದ್ಧಿ ಇಚ್ಛಾದೆಯಿಂದ ನವಲಗುಂದ ತಾಲೂಕ ಪೈಕಿ ಅರಿಕೇರಹಟ್ಟಿ ಗ್ರಾಮದಲ್ಲಿಂದ ವ ರಿ|| ಸರ್ವೆನಂಬರ ೧೦೯/೧ ಎಕರೆ ೧೧ ಗುಂಠೆ ೧೯ ತರಮ ರೂಪಾಯಿ ೧೯-೯ ಇದರ ಪೈಕಿ ಎಕರೆ ೫-೭೯ ಖರೀದಿ ಕೊಟ್ಟು ಬಾಕಿ ಉಳಿದ ಎಕರೆ ೫-೩೦ ತರಮ ರೂಪಾಯಿ ೯-೧-೬ ಈ ಜಮೀನನ್ನು ನೀನು ಖರೀದಿಗೆ ಹಚ್ಚಿರುವದಾಗಿ ತಿಳಿಯುತ್ತದೆ ಕಾರಣ ನೀನು ಒಂದು ವೇಳೆ ಯಾರಿಗಾದರೂ ಖರೀದಿ ಕೊಟ್ಟದ್ದಾದರೆ ಸದರ ಖರೀದಿ ರದ್ದಬಾತಲ ಆಗುತ್ತದೆ ಮತ್ತು ನಿನಗೆ ಈ ಜಮೀನಿಯ ಹೊರತು ಬೇರೆ ಜಂಗಮ ಅಸ್ತಿ ವ ಸ್ಥಾವರ ಅಸ್ತಿಯೇನೂ ಇರುವದಿಲ್ಲ ಕಾರಣ ನನ್ನ ಡಿಕ್ರಿಯ ಹಣಾ ಸದರ ಜಮೀನಿಯ ಮೇಲೆ ಫೇಡ ಆಗತಕ್ಕದ್ದು ಇರುತ್ತದೆ ಅದ್ದರಿಂದ ನೀನು ಬೇರೆ ಎರಡನೇ ಜನರಿಗೆ ಯಾವದೇ ತರದಿಂದಾಗಲಿ ವಿಲೇವಾಟ ಮಾಡಿದರೆ ಅದರ ವಿರುದ್ಧವಾಗಿಯೂ ಕಾಯಿದೆ ಪ್ರಕಾರ ಇಲಾಜ ಮಾಡಲಾಗುವದು ಅಂತಾ ಕೊಟ್ಟ ನೋಟೀಸ ಮತ್ತು ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲೆಯೇ ಅದೆ

ತಾ|| ೨೩—೭—೧೯೨೯ ನೇ ಇಸ್ವಿ

ಸಹಿ- ಬಸಪ್ಪ ಭೀಮಪ್ಪ ಮಾಡಳ್ಳಿ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ರೋಗವು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ನೂರಾರು ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆಖರ್ಚು ಬೇರೆ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮ್ಯು[illegible] ಬ್ಯಾಂಕ ಧಾರವಾಡ

[illegible]

ಜಾಹೀರ ನೋಟೀಸು

ಕೆಳಗೆ ಸಹಿಮಾಡುವಳು ಈ ನೋಟೀಸಿನ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದರೆ—

ನನ್ನ ಗಂಡ ಮಹಾರುದ್ರಪ್ಪಾ ಭೀಮಪ್ಪಾ ಕಂಬಾರ ಸಾ| ಶಿಕ್ಕೂರ ತಾ| ಸಂಪಗಾಂವಿ ಈತನು ಕೆಟ್ಟ ವ್ಯಸನಕ್ಕೆ ಬಿದ್ದು ನನ್ನ ಸಂಗಡ ಪ್ರಪಂಚ ಮಾಡದೆ ನನ್ನನ್ನು ಹೊರಗೆಯೇ ತಿರುಗುತ್ತಾನೆ ನನ್ನ ಹೊಟ್ಟೆಯ ವ್ಯವಸ್ಥಾ ಮಾಡುವದಿಲ್ಲಾ ಸದ್ರಿಯವನು ಹುಡುಗಳ ಜನರ ಸಂಗತಿ ಹಿಡಿದು ಹೊಲ ಮನೆ ವಗ್ಯೆರೆ ಹಾಳಮಾಡಿ ವಿಲೇವಾಟ ಮಾಡತಕ್ಕವನಿದ್ದಂತೆ ತಿಳಿದಿದೆ ಸದ್ರಿಯವನ ಕಡೆಯಿಂದ ಯಾರಾದರೂ ಮನೆ ಹೊಲ ವಗೈರೆಗಳನ್ನು ಖರಿಸಿಕೊಂಡರೆ ಅವರು ವಿನಾಕಾರಣಾ ಲುಕ್ಸಾನಕ್ಕೆ ಪಾತ್ರರಾಗಬೇಕು ಸದ್ರಿ ಆಸ್ತಿ ಪಿತ್ರಾರ್ಜಿತವಿದ್ದು ಅದರ ಮೇಲೆ ನನ್ನ ಉಪಜೀವನದ ಬೋಜಾ ಇರುತ್ತದೆ ತಿಳಿಯುವದು. ತಾರೀಖು ೨೨-೭-೨೯

ಈ ಎಡಗ್ಯೆ ಹೆಬ್ಬಟ್ಟಿನ ಗುರ್ತ ಸಾವಿತ್ರೆವ್ವಾ ಗಂಡ ಮಹಾರುದ್ರಪ್ಪಾ ಕಂಬಾರ ಸಾ|| ಶಿಕ್ಕೂರ ತಾ|| ಸಂಪಗಾಂವಿ ಈಕೆಯದು ಅದೆ

ಸುಸಮಯ

ವಿ. ಕೆ. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಿಕೊಳ್ಳಿರಿ.

ನಿಮಗೆ ಉತ್ತಮವಾಗಿ ಉರಿಯುವ

ಒಣ ಕಟ್ಟಿಗೆ ಬೇಕೆ?

ನಮ್ಮ ಕಟ್ಟಿಗೆಯ ಅಡ್ಡೆಯಲ್ಲಿ ಉತ್ತಮ ತರದ ದಿಂಡಲ, ಮತ್ತಿ, ಮುಂತಾದ ಜಾತಿ ಕಟ್ಟಿಗೆಗಳು ಒಣ ಸೋಯಿಯ ದರದಿಂದ ಸಿಗುತ್ತವೆ. ಮಳೆಗಾಲದಲ್ಲಿ ಒಣಗಿದ ಕಟ್ಟಿಗೆಗಳು ನಮ್ಮಲ್ಲಿಯಂತೆ ಎರಡನೇ ಕಡೆಗೆ ಸಿಗುವದು ಕ್ವಚಿತವು. ಮಳೆಗಾಲ ದಿವಸದಲ್ಲಾಗುವ ಹಸೀ ಕಟ್ಟಿಗೆಯ ತಾಪವನ್ನು ತಪ್ಪಿಸಬೇಕೆಂದು ನಾವು ಮುದ್ದಾಮ ಕಟ್ಟಿಗೆಯ ಅಡ್ಡೆಯನ್ನು ಜನರ ಸೋಯಿಗಾಗಿ ಇಟ್ಟಿರುತ್ತೇವೆ. ಗ್ರಾಹಕರು ಇದರ ಲಾಭವನ್ನು ತೆಗೆದುಕೊಳ್ಳಬೇಕು.

ಅಡ್ಡೆಯ ಮಾಲಕ,
ಬಾಳಾಚಾರ್ಯ ಕಾಂತಾಚಾರ್ಯ
ಮುನವಳ್ಳಿ.
ಧಾರವಾಡ.
(ಸೆಂಟ್ರಲ ಬ್ಯಾಂಕಿನ ಗಡಿಯಾರದ ಎದುರಿಗೆ)

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಗುರುವಾರ ತಾರೀಖು ೨೫ ನೇ ಜುಲೈ ೧೯೨೯ (ಸಂಚಿಕೆ ೧೬೫

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೨ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ

ಬ್ಯಾಂಕಿನಲ್ಲಿ ನಡೆಯುತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆರೆಯಲ್ಪಡುವವು.

ಮುದತಿ ಠೇವುಗಳು — ಒತ್ತೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ ೫॥ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩॥ ರೂ.

ಸೇವಿಂಗ್ಸ ಬ್ಯಾಂಕ:— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ಸಾವೆ ನಾಡಿ ಬಂದ ಮೊತ್ತಗಳಿಗೆ ಒಮ್ಮೆ ಹಿಡಿಯುವದರಲ್ಲಿ ಒದುವದು ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಕ್ಕದ ಉದಾರಿ ಕೊಡಲ್ಪಡುವವು

ವ್ಯಾಪಾರಿ ಹುಂಡಿಗಳು ಯೋಗ್ಯ ಅನುಕೂಲದಿಂದ ತೆಗೆದುಕೊಳ್ಳಲ್ಪಡುವವು. ಜಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಸ್ಥಳಗಳಿಗೆ ಪಟ್ಟಿ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ ಮೊದಲಾದ ಪತ್ರಗಳೂ ಸದರ ಬ್ಯಾಂಕಿನಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ ತಾ॥ ೧೭-೭-೨೯ — **ಬಿ. ಜೋನೆಲಿ,** ಏಜಂಟರು

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಸುಭಾಸ ರೋಡ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬೆಂಗಳೂರು ಬಿಟ್ಟು ಉತ್ತರ ಕರ್ನಾಟಕ, ಜಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಸಲ್ಪಡುವದು. ಕಾಡೇವು ಮತ್ತು ಬೇರೆ ತರದ ಠೇವು-ಚಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಬಾತಿ.
ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಹಿಂದುಸ್ಥಾನ ಬ್ಯಾಂಕ ಲಿಮಿಟೆಡ್, ಧಾರವಾಡ-

ಸ್ಥಳ- ಸುಭಾಸ ರೋಡ, ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸಾಲವು ದರದಿಂದ ತಿಂಗಳು ಮತ್ತು ಬಹಳ ಮುದ್ದತಿಯ ವರೆಗೆ ಸಣ್ಣ ರಕಮಿನಿಂದ ದೊಡ್ಡ ರಕಮಿನ ವರೆಗೆ ಸಾಲ ದೊರೆಯುವದು. ಬಡ್ಡಿಯ ದರ ಮುಂತಾದವು ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ದರದಿಂದ ಕಳ್ಳೋದು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ವರೆಗೆ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ಮಂಗಳೂರಾವ ಧಂಡಿವಾಡ

ಮ್ಯಾನೇಜರು

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೪ ,,	೪-೦-೦
ವಾರ ಪತ್ರಿಕೆ ೧ ವರ್ಷಕ್ಕೆ	೪-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬೇಕು

ಮ್ಯಾನೇಜರ ವಿಜಯ ಧಾರವಾಡ.

ಶ್ರೀ ಜೋಗ ವಕೀಲರ ಸವಾಲಿಗೆ ಶ್ರೀಗಳವರ ಉತ್ತರ.

ಪ್ರಶ್ನೆ ಮತ್ತು ಉತ್ತರ ತಿಳಿಯಬೇಕೆಂದು ಎರಡನ್ನೂ ವಿವರವಾಗಿ ಕೊಟ್ಟಿದ್ದೇವೆ.

ಶುಕ್ರವಾರ ತಾರೀಖು ೧೯ನೇ ದಿವಸ ಮುಂಜಾನೆ ದಿನದಂತೆ ೯॥ ಘಂಟೆಗೆ ಸ್ವಾಮಿಯವರ ಜಬಾನಿಗೆ ಪ್ರಾರಂಭವಾಯಿತು. ಇವತ್ತಿನ ಜಬಾನಿಯನ್ನು ಈ ಕೆಳಗೆ ಕೊಟ್ಟಿದ್ದೇವೆ

ತಾವು ಗುಡಿಯಲ್ಲಿದ್ದಾಗ್ಗೆ ಚಿದ್ಘನಾನಂದಸ್ವಾಮಿ ಗುಡಿಯೊಳಗೆ ಇದ್ದಿರೆಲ್ಲಾ ಅದು ಮುಂದಿ ಸ್ವಲ್ಪ ಹೆಚ್ಚು ಒಂದಲಕ್ಷ ಹತ್ತಿತಲ್ಲಾ ಅವರ ದಸಿಂದ್ರಾ ಆ ಭಾವಿ ಕಟ್ಟಿಸಿದಿರಿ? ಹೌದು.

ತಾವು ಸಣ್ಣ ಇದ್ದಾಗಿತು ಮತ್ತು ಭಾವಿ ಕಟ್ಟಿಸಿದಿರಲ್ಲಾ ಅದು ತಾವು ಗುಡಿಯೊಳಗೆ ಇರಲಿಕ್ಕೆ ಹತ್ತಿದಿರಲ್ಲಾ ಅದರ ನಂತರ ಆ ವರ್ಷ ಆಗಿದ್ದೀತು? ಹೂಂ ೬-೭ ವರ್ಷ ಆಗಿದ್ದೀತು ಪೂರಾ ನೆಪ್ಪಿಲ್ಲಾ

ಒಬ್ಬ ಹೊಂಬಣ್ಣಾ ತಿರಗುಪ್ಪಿ ಇವರ ಗುರ್ತು ಇತ್ತು ನಿಮಗೆ? ಇತ್ತು.

ಮಲ್ಲಪ್ಪಾ ಕಲಾದಗಿ ಇವರ ಗುರ್ತು ಇತ್ತಲ್ಲಾ? ಇತ್ತು.

ಕಲಾದಗೀನೋ? ಕಾರಡಗೀನೋ? ಕಾರಡಗಿ.

ಈ ಹೊಂಬಣ್ಣಾ ತಿರಗುಪ್ಪಿ ಈ ಊರಲ್ಲಿ ಧನಿಕರು? ಹೂಂ ಧನಿಕರು.

ಅವರ ಮಕ್ಕಳು ರಾಯಪ್ಪಂದೂ ಗುರ್ತು ಅದೆ? ಹೂಂ. ರಾಯಪ್ಪ ಗುರ್ತು ಅದೆ.

ಇಲ್ಲೆ ತಾವೇನು ಗುಡಿಹತ್ತರ ಜಾಗಾ ಕಟ್ಟಿಸಿದಿರಲ್ಲಾ ಅನಂತರನೂ ಗುಡಿಯೊಳಗೆ ಇರತಿದ್ದಿರಿ? ಹೂಂ (ಚಿದ್ಘನಾನಂದರ ಸಮಾಧಿ ಕಡೆ ಬಟ್ಟು ಮಾಡಿ ತೋರಿಸಿ)

ಯಾರಾರು ಬಂದರೆ ಆ ಇಮಾರತಿಯಲ್ಲಿ ಇರತಿದ್ದರು? ಇರತಿದ್ದರು. ರಾತ್ರಿ ಇರೋ ವಹಿವಾಟ ಆಗ ಇರಲಿಲ್ಲಾ.

ಮುಂಜಾನೆ ಬಂದ ಸಾಯಂಕಾಲದ ವರೆಗೆ ಇರತಿದ್ದರೋ ಇಲ್ಲೋ? ಮನಸ್ಸು ಬಂದರೆ ಇರತಿದ್ದರು.

ಇಲ್ಲಿ ಅವರು ಇದ್ದರೆ ಅಡಿಗಿ ಮಾಡಿಕೋತಿದ್ದರು? ಇಲ್ಲಿ ಅಡಿಗಿ ಮಾಡೋ ಸಂಪ್ರದಾಯ ಇದ್ದಿಲ್ಲಾ

ಅವಾಗ ಇಲ್ಲಿ ಬರಲಿಕ್ಕೆ ದಾರಿ ಇದ್ದಿಲ್ಲ? ದಾರಿ ಇದ್ದಿಲ್ಲ.

ಸುತ್ತಲೆ ಬಳ್ಳಿ ಮುಳ್ಳುಗಳೆ? ಮುಳ್ಳು ಇಂಥಾದ್ದು ಇತ್ತು.

ಅಜಮಾಸು ನೀವು ಆ ಗುಡಿಯೊಳಗೆ ಇರಲಿಕ್ಕೆ ಬಂದನಂತರ ಒಂದು ಹತ್ತು ವರ್ಷದನಂತರ ರಸ್ತೆ ಆಗಿದ್ದೀತು? ಆಗಿದ್ದೀತು ಅಜಮಾಸು ನೆಪ್ಪಿಲ್ಲಾ ಆಗಿದ್ದೀತು.

ಗುಡ್ಡದ ಶಿವಪ್ಪನ ಗುರ್ತು ಇತ್ತೆ? (ಗೋಣಿನಿಂದ) ಇತ್ತು.

ಆಗಳೇ ಹೇಳೇನಲ್ಲಾ ರಾಯಪ್ಪ ತಿರಗುಪ್ಪಿ ಮತ್ತು ಗುಡ್ಡದ ಶಿವಪ್ಪಾ ಇವರು ಕಟ್ಟಿಸಿದರಲ್ಲ? ಜಮಖಂಡಿ ಸರಕಾರದವರು ರೂಪಾಯಿ ಕೊಟ್ಟರು ಒಡ್ಡರನ್ನು ಕರಿಸಿ ಗೊತ್ತುಮಾಡಿ ರಸ್ತೆ ಮಾಡಿಸಿತು

ರಾಯಪ್ಪ ತಿರಗುಪ್ಪಿ ಗುಡ್ಡದ ಶಿವಪ್ಪ? ಇವರೇನು ರಸ್ತೆ ಮಾಡಿಸಲಿಲ್ಲ.

ಹೊಂಬಪ್ಪ ಏನಾದರೂ ಮಾಡಿದನೇನ? ರಸ್ತೆದ ಸಲುವಾಗಿ ಹೊಲದ ಜಾಗಾ ಬೇಕಾಗಿತ್ತು. ಅದರೊಳಗೆ ಹೊಂಬಪ್ಪ ಹೇಳಿದಾ ಅವಾ ಕೊಟ್ಟಾ

ಆ ಜಾಗಾದ ಮಾಲಕರೆಂದರೆ ಮಲ್ಲಪ್ಪ ಮತ್ತು ಗದಿಗೆಪ್ಪಾ? ಬಹಳಾಗಿ ಮಲ್ಲಪ್ಪಾ ಆಗಿದ್ದಂತಿಲ್ಲ ಗದಿಗೆಪ್ಪ

ಗದಿಗೆಪ್ಪ ಮಟ್ಟಿ? ಹೌದು.

ಎಷ್ಟು ಅಜಮಾಸು ಮೂರು ಎಕರೆ ಜಾಗಾ ಏನು? ಅದೇನು ನೆಪ್ಪಿಲ್ಲ.

ಅದು ಖರೀದಿ ತಗೊಂಡಿತು? ಅದೆ? ಅದು ಬಹಳ ದಿನದ್ದು ನೆಪ್ಪಿಲ್ಲಾ.

ಅದರ ಬಾಬತು ಖರೀದಿಪತ್ರ ಕೊಟ್ಟದ್ದು ಗೊತ್ತದೆಯೇನು? ಅದೇನ ಗೊತ್ತಿಲ್ಲಾ ಅವರು ಹೊಲ ಕೊಟ್ಟರು ವಸ್ತರವರು ಮಾಡಿದರು

ಈ ರಾಯಪ್ಪ ಮತ್ತು ಹೊಂಬಪ್ಪ ಇವರು ಖರೀದಿಪತ್ರ ಬರಿಸಿಕೊಂಡದ್ದು ತಮಗೆ ಗೊತ್ತಿಲ್ಲಾ? ಗೊತ್ತಿಲ್ಲಾ.

ತಾವೇನು ಆಶ್ರಮ ಅಥವಾ ಸ್ಥಾನ ಅಂತೀರಲ್ಲಾ ಅದಕ್ಕೆ ಬರುವ ರಸ್ತೆ ಈಗ್ಯಾ ಅದೇ ಜಾಗಾದ ಮೇಲೆ ಅದೆ? ಹೌದು ಅದೇ ಜಾಗಾದ ಮೇಲೆ ಅದೆ

ರೂಪಾಯಿ ಎಷ್ಟು ಕೊಟ್ಟರು? ಅದೇನು ಗೊತ್ತಿಲ್ಲಾ ವಸ್ತರವನೇ ತಗೊಂಡಾ

ರೂಪಾಯಿ ನೀವು ಏನೂ ಕೊಟ್ಟಿಲ್ಲಾ? ಇಲ್ಲ.

ಜಮಖಂಡಿ ಯಜಮಾನರು ಎಷ್ಟು ರೂಪಾಯಿ ಕೊಟ್ಟರು? ಮುನ್ನೂರು ರೂಪಾಯಿ. ವಸ್ತರವಗೇ ಹೋಗಿದೋದು.

ಅವರು ಬಂದಿದ್ದರೇನು ಅಪ್ಪಾಸಾಹೇಬರು? ಹೌದು ಬಂದಿದ್ದರು,

ಅಪ್ಪಾಸಾಹೇಬರಲ್ಲಾ ಬಂದವರು? ಹೌದು.

ಅವಾಗ ಜನರು ಕೂಡಲಿಕ್ಕೆ ಹತ್ತಿದರಲ್ಲಾ ಅವಾಗ ಸಿದ್ಧಾರೂಢ ಅಂತಾ ಕರಿಯಲಿಕ್ಕೆ ಹತ್ತಿದರು? ಆಜೆಗೆ ಜನಾ ಕೂಡಾಕ ಹತ್ತಿ ಸಿದ್ಧಾರೂಢ ಅಂತಾ ಅನ್ನಲಿಕ್ಕೆ ಹತ್ತಿದರು.

ಅವಾಗ ಇವರು ಕಟ್ಟಲಿಕ್ಕೆ ಹತ್ತಿದಾಗ? ಅವಾಗ.

ನೀವು ಯಾರಿಗ್ಯಾರ ಹೇಳಿದ್ದಿರಿ? ಒಬ್ಬ ಇಬ್ಬರಿಗೆ ಹೇಳಿತ್ತು ಅದೇ ಪ್ರಸಿದ್ಧ ಆಯಿತು.

ಯಾವ ಹೆಸರು ಹೇಳಿದ್ದಿರಿ? (ಕೈಯಿಂದ) ಒಬ್ಬಗೆ ಸಿದ್ಧಪ್ಪ ಅಂತಾ ಇಷ್ಟ ಹೇಳಿದ್ದೆ

ಮುಂದಿನವರೊಳಗೆ ಯಾವ ಹೆಸರು ಪ್ರಸಿದ್ಧ ಆಯಿತು? ಸಿದ್ಧಪ್ಪ ಅಂತಾ ಹೇಳಿದ್ದೆ ಅನಂತರ ಮುಂದಿ ತಮಗೆ ಬೇಕಾದಂಗ ಕರಕೊಳ್ಳಾಕ ಹತ್ತಿದರು. ಅದೇನೂ ನೇಮ ಇಲ್ಲಾ.

ತಾವೇನು ಇರತಿದ್ದಿರಲ್ಲಾ ಅದರ ಹೊರತಾಗಿ ಮತ್ಯಾವದಾದರೂ ಗುಡಿ ಇತ್ತೇನು ಆ ಕಾಲಕ್ಕೆ? ಇದ್ದಿದ್ದಿಲ್ಲಾ

ಆಗಿನ ಕಾಲಕ್ಕೆ ಆ ಗುಡಿಗೆ ಸಿದ್ಧಾರೂಢರ ಗುಡಿ ಅಂತಾ ಅಂತಿದ್ದರೇನು? ಇಲ್ಲ.

ಜನರು ತಾವೇನು ಆ ಗುಡಿಯೊಳಗೆ ಇರತಿದ್ದಿರಲ್ಲಾ ಅದಕ್ಕೆ ಸಿದ್ಧಾರೂಢರ ಗುಡಿ ಅಂತಿದ್ದರೋ ಇಲ್ಲೋ? ([illegible]) ಇಲ್ಲ

ಆ ರಸ್ತೆ ಮಾಡಿಸೋದಕ್ಕೆ ಯಾರಾದರೂ ಪಂಚರನ್ನು ನೇಮಿಸಿದ್ದರೇನು? ಇಲ್ಲ.

ಆ ಜಾಗಾದ ರಸ್ತೆ ಮಾಡಿಸೋ ಜಾಗಾದ ಮಾಲ್ಕಿ ಬಗ್ಗೆ ನಿಮ್ಮಲ್ಲಿ ಏನಾ ತಂಗಟಾ ಇಲ್ಲ? ಇಲ್ಲಾ

ಮಾಲ್ಕಿ ನಿಮಗೆ ಇದ್ದ ಬಗ್ಗೆ? (ಗೋಣಿನಿಂದ) ಇಲ್ಲಾ.

ಈರಯ್ಯಾ ಬಸಲಿಂಗಯ್ಯಾ ಪುರಾಣೀಕ? ಗುರ್ತ ಅದೆ ರಾಚಪ್ಪಾ ಬಿನ್ ಚನ್ನಪ್ಪ ನೀಲಿ? ಅದ. ಹೊಂಬಪ್ಪ ಬಿನ ಶೇಷಪ್ಪ ತಿರಗುಪ್ಪಿ ಶೇಠಿ? ಇದ್ದೀತು.

ಹನುಮಂತಪ್ಪ ಬಿನ್ ಬಸಪ್ಪ ಹೊಂಬಣ್ಣವರ? (ಗೋಣಿನಿಂದ ಹೌದು ಅಂತಾ ಅಂತಾರೆ)

ಸಂಗಪ್ಪ ಚನ್ನಬಸಪ್ಪಾ ಕಂಬಳಿ? (ಗೋಣಿನಿಂದ ಹೌದು.)

ವೀರಭದ್ರಪ್ಪ ಬಿನ್ ಬಸಪ್ಪಗೌಡ್ರ? (ಗೋಣಿನಿಂದ ಹೌದು)

ಪರಪ್ಪ ವೀರಭದ್ರಪ್ಪ ಲಕ್ಕೀಮರದ? ಹೂ.

ಸಾತಪ್ಪ ಬಿನ್ ಪರಪ್ಪ ಮಾಲಗತ್ತಿ? ಹೂ.

ಇವರೆಲ್ಲ ಗುರ್ತ ಇತ್ತೆ? ಇತ್ತು.

ಈ ಜನರೆಲ್ಲರೂ ತಮ್ಮಲ್ಲಿಗೆ ಬರತಿದ್ದರು? ಬರತಿದ್ದರು.

ಆ ಕಾಲಕ್ಕೆ ಈ ಜನರು ಬಂದು ಹೋಗಿ ಮಾಡುತಿದ್ದರು? ಹೌದು.

ಅವ ಪಾಂಡಪ್ಪ ತಾನೇನು.

ಹೇಳಿದಿಂಲ್ಲಾ ಆ ಪಾಂಡಪ್ಪ.

ತಮ್ಮಲ್ಲೇನಾದರೂ ಬರತಿದ್ದಾನೇನು? ಬರತಿದ್ದಾ.

ಈ ಎಂಟು ಮಂದಿ ಹೆಸರು ಹೇಳಿದೆನಲ್ಲಾ ಅವರಲ್ಲಿ ಸಾತಪ್ಪ ಮತ್ತು ಹೊಂಬಪ್ಪ ಇವರು ಜೈನರು? ಹೌದು.

ಪಾಂಡಪ್ಪ ಬ್ರಾಹ್ಮಣ? ಹೌದು.

ಬಾಕೀಯವರು ಲಿಂಗಾಯತರು? (ಗೋಣಿನಿಂದ ಹೌದು ಅಂತಾ ಸೊನ್ನಿ ಮಾಡತಾರೆ.)

ಇಲ್ಲೆ ನೀವೇನು ಆ ಭಾವಿ ಮತ್ತು ಇವಾರಿ? ಹೌದು.

ಹಾಕಿಸಲಿಕ್ಕೆ ಸುರು ಮಾಡಿದಿಲ್ಲಾ ಅದು ಪಾಂಡಪ್ಪನ ಜಾಗಾ? ಹೌದು

ಆ ಪಾಂಡಪ್ಪಗೆ ಕೇಳಿ ಹಾಕಿಸಿದಿರೇನು? ಕೇಳಿ, ಕೇಳಿ

ಅವರ ... ಏನಾದರೂ ಕಾಗದಾ ಬೀಗದಾ ಒಪ್ಪಿಕೊಂಡಿರೇನು? ಅದೇನಿಲ್ಲ.

ಎಷ್ಟು ಮೊದಲ ಮೊದಲ ನೀವೇನು ಭಾವಿ ಕಟ್ಟಿಸಿದಿರಿ ಛಪ್ಪರ ೧ ಇತ್ತೋ ಎರಡು ಇದ್ದವೋ? ಭಾವಿ (ಕೈಬೆರಳಿನಿಂದ) ಅದರ ಮೇಲೆ ಛಪ್ಪರ ಕಟ್ಟಿಸಿದೆ

ಅವಾರಗ್ಯಾಡಿ? ಅವಾರಗ್ಯಾಡಿ ಹಿಂದಾಗಡೆ.

ಈ ಭಾವಿ ಛಪ್ಪರ ಕಟ್ಟಿಸಿದಿರಲ್ಲಾ ಅವು ಆದ ಮೇಲೆ ಎಷ್ಟು ದಿವಸಕ್ಕೆ ಅವಾರಗ್ಯಾಡ ಕಟ್ಟಿಸಿದಿರಿ? ಒಂದು ನಾಲ್ಕು ವರ್ಷದ ಮೇಲೆ

ಮತ್ತು ಹೆಚ್ಚಿಗಿ ಇವಾರಂತು ಯಾವೂ ಹಾಕಿಸಲಿಲ್ಲಾ? ಇಲ್ಲಾ.

ಆ ಭಾವಿಗೆ ಭಾವೀ ಕಟ್ಟಿ ಏನಾದರೂ ಮಾಡಿಸಿದ್ದೀರಿ? ಸಾಧಾರಣ ಇತ್ತು.

ಈ ಜಾಗಾ ನೀವೇನು ಇವಾರಕು ಅವಾರಗೋಡಿ ಹಾಕಿಸಿದಿರಿ ಅದರ ಸುತ್ತಮುತ್ತಲಿನ ಜಾಗಾ ಕಬಜಾವತ್ತಿ ಹಿಡಿದಿದ್ದಿರಿ? ಪಾಂಡಪ್ಪನ ಮಗನ ಕಡಿಂದಾ ವೆಹಗಲು ವತ್ತಿ ಹಿಡಿದಿತ್ತು.

ಅಂದರೆ ಈ ಗಡಿ ಅವರ ಸುತ್ತಮುತ್ತಲಿನ ಜಾಗಾ ಬಿಟ್ಟು? ಹೌದು.

ಜಾಗಾ ಕಬಜಾವತ್ತಿ ಹಿಡಿದಿತ್ತು? ಹೌದು.

ಅಜಮಾಸು ... ಎಕರೆ? ಹೌದು ಅದು ಎಕರೆ

ಪಾಂಡಪ್ಪನ ಮಗಾ ಅಂದರೆ ಗುರುನಾಥಪ್ಪ? ಹೌದು.

ಅವನ ತಾಯಿ ಜೀವಬಾಳವ್ವ ಬರಕೊಟ್ಟರು? ಹೌದು.

ಆ ರಕಮು ಯಾಕ್ಕೆ ಬೇಕಾಗಿತು? ಆಕೆಗೆ.

ಕಲ್ಲು ಬೂವಾಯಕ್ಕೆ ಬರಕೊಟ್ಟರು? ಹೌದು.

ಆ ಕಬಜಾವತ್ತಿ ಮಾಡಲಿಕ್ಕೆ ನೀವು ಹೇಳಿದಿರಿ ಹೇಳಿತು ಅವರು ಮಾಡಿಕೊಟ್ಟರು.

ಯಾರು? ಅತಾ ಈರಯ್ಯಾ.

ಈ ಎಂಟು ಜನರು? (ದಸ್ತಿನ ಕಡೆಗೆ ತೋರಿಸಿ) ಹೌದು.

ಈ ವ್ಯವಹಾರ ಆಗೋ ಮುಂದೆ ತಾವು ಇದ್ದಿರಲ್ಲಾ? ಹೌದು

ನಿಮ್ಮ ಹೇಳಿಕೆಪ್ರಕಾರ ಅವರು ಕಾಗದಾ ಬರಿಸಿಕೊಂಡರು? ಹೌದು

ಆ ಕಾಗದ ತಮ್ಮ ಕಡೆಗೆ ಅದೆ? ಇಲ್ಲ. ಅದು ಅವರ ಕಡೆಗೇ ಉಳಿತು.

ನೋಂದಣೀ ಆ ನೋಂದಣಿ? ನೋಂದಣೀ? ಆಗೇತಿ.

ಆ ಕಾಗದಾ ಬರೆದು ತಮಗೆ ಓದಿ ತೋರಿಸಿದರು? ಎಲ್ಲಾ ಅವರು ಮಾಡಿದರು. ಅವರು ಒಂದು ಹೀಂಗ ಮಾಡೇವಿ ಅಂತಾ ಹೇಳಿದರು.

ಅವರು ಒಪ್ಪಿಕೊಂಡ ಕಾಗದ ಓದಿ ಹೇಳಿದೇವಿ ಕೇಳಿದಿರಿ? ಒಪ್ಪಿಂದು.

೫೦೦ ರೂಪಾಯಿ ನೀವ ಕೊಟ್ಟಿರಿ ಅವರಿಗೆ? ಹೌದು

ಎಷ್ಟೆಂದ ಕೊಟ್ಟಿರಿ? ಧಿಕ್ಕಾ ಬಂದಿದ್ದವು ಅವಸ್ಥೆ ಕೊಟ್ಟಿವಿ.

ಅಂದರೆ ಜನರ ಕಡಿಗೆ ಹೋಗಿ ಕೂಡಿಸಿಕೊಂಡು ಬಂದಿರೇನು? ಇಲ್ಲಾ.

ಅದಕ್ಕೆ ಇಲ್ಲಿ ತಮ್ಮ ದುರಿಗೆ ಇಟ್ಟಿದ್ದು, ಹೋಗಿ ತಂದಿದ್ದು ಅದಲ್ಲಾ? ಅಲ್ಲಾ.

ಎಷ್ಟು ವರ್ಷದ್ದು? ಮೂರುನಾಲ್ಕು ವರ್ಷದ್ದು ಆಗ್ಗ್ಯಾಸೂ ಆಗಿದ್ದೀತು ಅದು.

ಎಲ್ಲಿಡತಿದ್ದಿರಿ? ಈ ಈ ಮಮತ್ಕಾರ ಏನಿದ್ದಾನೆ ಅವನ ಅಜ್ಜನ ಹತ್ತರ ಇಡತಿದ್ದೆ.

ಹೆಸರೇನವರದು? ಭೀಮಪ್ಪ ಉಜ್ಜನವರು

ಲೆಕ್ಕ ಟಿಪ್ಪಣ ಇಟ್ಟಿದ್ದಿರೇನು? ಅವರ ಮೇಲೆ ವಿಶ್ವಾಸ ಇತ್ತು.

ಅವರಲ್ಲೂ ಏನೂ ಲೆಕ್ಕ ಇದ್ದಿಲ್ಲಾ? ಊಹೂಂ

ಇದು ನೋಡಿರಿ ಆ ಕಾಗದಾ ಏನು ಬರಕೊಟ್ಟರಲ್ಲಾ? ಅದನ್ನ ಓದಿ ತೋರಿಸತೇನೆ.

ಆ ಎಂಟು ಮಂದಿ ಹೆಸರು ಅದನ್ನೇ ತಾನು ಹೀಂಗ ಬರದಾರೆ (ಶ್ರೀ. ಜೋಗ ಇವರು ನಿಧಾನೆ ನಂ ೩೭ ತೋರಿಸ ತ್ತಾರೆ) ಒಂದೊಂದು ವಾಕ್ಯವಾದನಂತರ ಸ್ವಾಮಿಗಳು ಹೂಂ ಹೂಂ ಅಂತಾ ಅಂತಿದ್ದರು.

ಕಾಗದ ಇದೇ ಪ್ರಕಾರ ಬರದಿತ್ತೇನು? ಹೂಂ.

ಹಣಾ ಹೆಚ್ಚಾ ಮಾತ್ರ ನಾನೇ ಕೊಟ್ಟೇನೆ.

ಕಾಗದ ಹೀಗೇ ಬರದಿತ್ತೇನು? ಹೂಂ.

(೧೨-೩೦ ಘಂಟೆಗೆ ಒಂದಾಯಿತು?)

ವಿವಿಧ ವರ್ತಮಾನಗಳು.

ಲಾಹೋರಿನಲ್ಲಿ ದಸ್ತಗಿರ ಮಾಡಲ್ಪಟ್ಟ ಮಂಗಳಶಿಂಗ, ಮ. ಜಾಫರಲಿಖಾನ ಮೊದಲಾದವರು ಮುಚ್ಚಳಿಕೆ ಬರಕೊಡಕೇಳಲ್ಪಟ್ಟಿಲ್ಲ. ಇವರ ವಕೀಲರು ವಿಚಾರಣೆಯು ಬೇರೊಂದು ಕೋರ್ಟಿನಲ್ಲಿ ನಡೆಯಬೇಕೆಂದು ಹಾಯಕೋರ್ಟಿಗೆ ಅಪೀಲು ಮಾಡತಕ್ಕವರಿದ್ದಾರೆ.

ಬೆಳಗಾವಿ, ಸವದತ್ತಿ, ಹುಬ್ಬಳ್ಳಿ, ಹಾವೇರಿ, ಕಾನಡೂರ ದುಂದುರ, ನರಗುಂದ, ಕುಷ್ಟಗಿ ಜೇಗನೆ ರೆಲ್ವೆ ಹಾಕಬೇಕೆಂದು ಶ್ರೀ ಜೋಗರು ಕೌನ್ಸಿಲದಲ್ಲಿ ಠರಾವು ತರತಕ್ಕವರಿದ್ದಾರೆ.

ಮುಂಬೈ ಕೌನ್ಸಿಲದ ಚುನಾವಣೆಯು ಯಾವಾಗಾದೀತೆಂದು ಹೇಳಲಿಕ್ಕಾಗುವದಿಲ್ಲೆಂದು ನಾಮ ದಾರ್ಜನರ ಸಾಹೇಬರು ಪುಣೆಯಲ್ಲಿ ಕೌನ್ಸಿಲ ಪ್ರಾರಂಭದ ದಿವಸ ಭಾಷಣಮಾಡಿದ್ದಾರೆ. ಹಾಗಾದರೆ ಇಲ್ಲಿ ಈಗಿಂದಲೇ ವೋಟರ ಲಿಸ್ಟು ಮುದ್ರಣವಾಗಿರುವದಿಲ್ಲ?

ನಾಗಪೂರದ ಗವರ್ನರರಾದ ಮಿ. ಬಟ್ಲರ ಸಾಹೇಬರು ಮುಯಿನಗುಡ್ಡದ ಮೇಲೆ ಕಟ್ಟಿದ ಕೇತುವೆಯನ್ನು ತೆರೆಯುವ ಸಮಾರಂಭ ಮಾಡುತ್ತಿರುವಾಗ ರಂಪ್ತಿಗರು ನಾಕೆ ಬರ ಸ್ವಾಗತವನ್ನು ಕರೇ ನಿಶಾನೆಗಳಿಂದ ಮಾಡಿ, ಸಾಹೇಬರೇ ಹಿಂದಿರುಗಿ ಹೋಗಿರೆಂಬ ಕೋಲಾಹಲವೆಬ್ಬಿಸಿದರು.

ಜನರಲ ನಾಬಿಲನನು ಹಬಿಬುಲ್ಲಾನ ಮೇಲೆ ಹೋದ ವಾರದಲ್ಲಿ ಜಯಸಂಪಾದನೆ ಮಾಡಿದನು ಕಾಬೂಲದ ಮೇಲೆ ದಂಡೆಯಿಟ್ಟು ಹೋಗಲು ಯೋಗ್ಯ ಸಮಯ ನಿರೀಕ್ಷಿಸುತ್ತಿದ್ದಾನೆಂದು ವರ್ತಮಾನ ಬಂದಿದೆ

ಲಂಡನದ ಚಾಂಬರಿಗೆ ಅಮೇರಿಕೆಯಿಂದ ನೂರು ಸ್ತ್ರೀವಕೀಲರು ಹೊರಟಿದ್ದಾರೆ ಅಲ್ಲಿಯ ಬೊಲ್ಶೆವಿಕ ತರುಣಿಯರು ಇವರ ಪ್ರಯಾಣವನ್ನು ವಿರೋಧಿಸಿ, ಹುಯಿಲೆಬ್ಬಿಸಿದರು.

ಬೈಲಹೊಂಗಲದಲ್ಲಿ ಪೊಡವಿ ನಡುಗಿತು.

(ಅರ್ಥವಾರ್ಧಿಕ)

ಶುಕ್ಲ ಸಂವತ್ಸರದಾಷಾಢ ಮಾಸದಲಿ!
ಶುಕ್ಲ ಪಕ್ಷ ತ್ರಯೋದಶ ಶುಕ್ರವಾರದಲಿ!
ವಿಕ್ಲಿಷ್ಟ ತಾವೆ ತಾರೀಖಿನಲಿ ಪೊಡವಿ ನಡುಗಿತು
ಮಳೆ ನಿಂತಿನೋನೆ!!

ಆನಂದಕವಿ ಕುಂದಗೋಳ

ನೋಟೀಸು

ತಿ|| ಯಲ್ಲಪ್ಪಾ ಬಿನ್ನ ಗೋಣೆಪ್ಪಾ ಕರಿಗಾರ ಸಾ|| ಕಬ್ಬೂರ ತಾಲ್ಲೂ ಕಲಘಟಗಿ ಇವರಿಗೆ-

ನಿನ್ನ ಚಿ|| ಗೋಣೆಪ್ಪಾ ಯಲ್ಲಪ್ಪಾ ಕರಿಗಾರ ಸಾ|| ಕಬ್ಬೂರ ಹಾಲಿವಸ್ತಿ ದೇವಿಹೊಸೂರ ನಾನು ನಿಮಗೆ ಈ ನೋಟೀಸಿನಿಂದ ತಿಳಿಸುವದೇನಂದರೆ- ನೀನು ವಿಜಯದಲ್ಲಿ ನನಗೆ ಕೊಟ್ಟ ನೋಟೀಸು ಮುಟ್ಟಿ ಮಜಕೂರ ತಿಳಿಯಿತು ಅದರಲ್ಲಿ ಕೊಟ್ಟ ಮಜಕೂರ ಸುಳ್ಳು ಇದೆ ನೀನು ನನ್ನ ತಾಯಿ ಸಹಾ ನನ್ನ ಮೇಲೆ ನನ್ನ ಹೆಂಡತಿ ಮೇಲೆ ಬೇಸರವಾಗುತ್ತ ಬಂದಿರಿ. ಆದಾಗ್ಯೂ ನಾನು ಸಹಿಸುತ್ತ ಬಂದೆನು. ಹೀಗೆ ಇರತಿರಲಿಕ್ಕೆ ದೇವೀಹೊಸೂರಿಗೆ ನಮ್ಮ ಅತ್ತಿಗೆ ಬಂದು ಕರಕೊಂಡು ಹೋಗಬೇಕೆಂತಾ ಹೇಳಿ ಕಳಿಸುತ್ತ ಬಂದ್ರಿ ನಂತರಾ ನಮ್ಮ ಅತ್ತಿ ಗಂಗವ್ವಾ ಕರಿಲಿಕ್ಕೆ ಬಂದಳು ಆಕೆಯ ಸಂಗಡ ನನ್ನ ಹೆಂಡತಿಯನ್ನು ಒಂದು ಬಿಲ್ಲಿ ಒಳ್ಳೆ ಸಹಾ ಇಲ್ಲದೆ ಹಾಂಗೇ ಬೇಸರದಿಂದ ಕಳಿಸಿಕೊಟ್ರಿ ಆದಾಗ್ಯೂ ಕೂಡಾ ನಾನು ನನ್ನ ಉದಕುವ ಮಾಡುತ್ತಾ ಇದ್ದೆನು ಹೀಗಿದ್ದರೂ ಕೂಡಾ ನನ್ನ ಮೇಲೆ ಬೇಸರದಿಂದ ವರ್ತಿಸಿಕೋತಾ ಬಂದ್ರಿ ಇದನ್ನೆಲ್ಲಾ ನುಂಗಿಕೊಂಡೆನು ಮತ್ತು ಎತ್ತುಗಳನ್ನು ಯಾವ ದಿವಸ ಹೊಡದುಕೊಂಡು ಬಂದನೋ ಆ ದಿವಸ ಗಳೇ ಕಟ್ಟಿಗ್ಯೂ ಸಹ ಊಟಕ್ಕೆ ಕರಿಯಲಿಲ್ಲಾ ಹೊಲಕ್ಕೆ ರೊಟ್ಟಿ ಸಹ ನನಗೆ ಕಟ್ಟಲಿಲ್ಲಾ ಆದಾಗ್ಯೂ ನುಂಗಿಕೊಂಡು ಹೊಲಕ್ಕೆ ಹೋದು ಬಂದು ತಾನು ಕೂತು ಗಳೇ ಹೊಡದ ಒಟ್ಟು ಒಂದೇ ಎರಡು ಎತ್ತು ಹೊಡಕೊಂಡು ನಾನು ದೇವೂರಿಗೆ ಬಂದೆನು ಕೆಲವು ದಿವಸಗಳ ನಂತರಾ ನೀವು ೪ ಜನರನ್ನು ಕರಕೊಂಡು ಬಂದಿರಿ ಬುದ್ಧಿವಂತರ ಮುಂದೆ ನಿನ್ನ ಹೆಂಡತಿ ಬಿಡಬೇಕು ನಾವು ಮತ್ತೊಂದು ಲಗ್ನ ಮಾಡಬೇಕೆಂತಾ ನನಗೆ ಹೇಳಿಸಿದ್ರಿ ನಾನು ಬುದ್ಧಿವಂತರ ಮುಂದೆ ಏನುಕಾರಣ ಹೆಂಡತಿಯನ್ನು ಬಿಡುವದಿಲ್ಲಾ! ಇಬ್ಬರೂ ಕೂಡೇ ಬರುತ್ತೇವೆ ಅಂದೆನು ನೀವು ಹಾಂಗೆ ಹೋದ್ರಿ ನಾನು ಎತ್ತುಗಳನ್ನು ನನ್ನ ಉಪಜೀವನ ಸಾಗಿಸುವದಕ್ಕೆ ಇಟ್ಟುಕೊಂಡೆನು ಹೀಗೆ ಇರತಿರಲಿಕ್ಕಾಗಿ ನಿಮಗೆ ಕಾರಣವಾಗದೆ ನನ್ನ ಮೇಲೆ ಈ ನೋಟೀಸು ಕೊಟ್ಟೀರಿ ನಾನು ನಿಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗನು ಇದ್ದು ನೋಟೀಸು ಕೊಟ್ಟಿದ್ದು ಬಹಳೇ ಅನ್ಯಾಯ ಮತ್ತು ಕಲಿಯುಗದ ಮಹಿಮಾ ಯಾಕ್ಷ ಇಲ್ಲಾ ನಾನು ಏನೂ ತಂದಿಲ್ಲ ಮೊದಲೇ ನನ್ನ ಹೆಂಡತಿಯನ್ನು ಕಳಿಸಿದನಂತರ ತಿಂಗಳು ದೀಡ ತಿಂಗಳ ಮೇಲೆ ನಾನು ಈ ಊರಿಗೆ ಬಂದೇನಿ ಹೀಗಿದ್ದು ನಿಮ್ಮ ಹಿರಿಯರು ಕೂತು ನನೀಕೆ ದ ನೋಟೀಸು ಮಾಡಿದಿರಿ ನಾನು ಆವನಿಗೆ ಪಾಲುಗಾರನು ಹಕ್ಕುದಾರನೂ ಇರುತ್ತೇನೆ ನೀವು ಸುಳ್ಳೇ ಸಾಲವಾಗಿರುತ್ತೇನೆಂದು ಬರೆದಿದ್ದಿರಿ ನೀವು ಮನಿತನದೀದಾ ಪರಿಣಾಮಸ್ಥರೂ ಇದ್ದು ಹೀಗೆ ಬರಿಬಾರದು ಏಕಂದರೆ ನೀನು ೨-೩ ಹೊಲಗಳನ್ನು ಪತ್ತಿ ಕೊಂಡು ಇರುತ್ತೀದಿ ಮನಿಯಲ್ಲಿ ೩೦-೪೦ ಹೇರಿನ ಕಾಳಿನ ಸಂಗ್ರಹ ಮತ್ತು ಎಮ್ಮೆಗಳು (೪) ಕರಾ (೨) ಆಕಳು (೨) ಮರಿ ಎತ್ತುಗಳು (೨) ಸರಕಾರೀ ಹೊಲಾ ಮನಿಗಳು (೨) ಇದಲ್ಲದೆ ನನಗೆ ಗೊತ್ತು ಇದ್ದ ದಾಗೀನಗಳು ಅಂದರೆ-

೧ ಜತಿ ಬಂಗಾರದ ಬಳಿ ೨ ಟೀಕೆಗಳು ಬಂಗಾರದವು ೧ ಬಂಗಾರದ ಪದಕದ ಸರಾ ೩ ೪ ಬಂಗಾರದ ಹೂವುಗಳು ೧ ಬಂಗಾರದ ಸರಿಗಿ ೧ ಬಂಗಾರದ ವಾಲೀ ಜೋಡು ೬ ಬೆಳ್ಳಿವಾಲಿ ಜತಿ ೧ ನತ್ತು ಬೆಳ್ಳಿ ಸಾಮಾನುಗಳು- ೨ ಜತಿ ಬಂದಿ ೨ ಜತಿ ತೋಡೆವು ಬಿಲ್ವ ೩ ಉಡದಾರ ೨ ಜತಿ ಕಡೇವು ೨ ಪಟ್ಟಿ ಉಡದಾರ ಬಿದರಿ ಸಾಮಾನು ೨೦೦ ರೂಪಾಯಿದವು ನೀನು ಒಕ್ಕಲತನಕ್ಕೆ ತಂದದ್ದು ಆ ಕ್ಕಡಿ ೧ ಗಳೇದ ಸಾಮಾನ ಏಣಿ ವಗೈರೆ ಎಲ್ಲಾ ಮನೆತನದ ಸಾಮಾನಗಳು ಸಹ ನನಗೆ ಗೊತ್ತು ಇವೆ ಇಷ್ಟು ಸಾಮಾನುಗಳು ನನ್ನ ನಜರಿಗೆ ಗೊತ್ತಿದ್ದವು ಅವೆ ನಿಮಗೆ ಗೊತ್ತಿದ್ದವು ನಿಮ್ಮ ಸ್ವಾಧೀನದಲ್ಲಿರುತ್ತವೆ ನೆಲದಲ್ಲಿ ಇದ್ದ ಹಣಾ ಅದ ನನ್ನ ನಜರದಲ್ಲಿ ಗೊತ್ತು ಅದೆ ಇಷ್ಟು ಆಸ್ತಿ ಸ್ಥಾವರ ಜಂಗಮ ಆಸ್ತಿಗಳು ಇರುತ್ತವೆ ಇವೆಲ್ಲಕ್ಕೆ ನಾನೇ ಬಾಧ್ಯಸ್ಥನಿರುತ್ತೇನೆ. ನೀವು ಏನುಕಾರಣ ನನ್ನ ಮುಣಗಿಸುವ ದುಷ್ಟ ಜನರ ಚಿತಾವಣಿಯಿಂದ ಸಾಲ ವಗೈರೆ ಅಂತಾ ಸುಳ್ಳೇ ಬರಕೊಟ್ಟರೆ ನನ್ನ ಸಮ್ಮತಿ ಇಲ್ಲಾ ಅದು ನನಗೆ ಸಂಬಂಧಿಸಲಾರದು ನೀವು ಬೇರೆ ಮಾಡಬೇಕೆಂತಾ ಇಚ್ಛಾ ಇದ್ದರೆ ಬುದ್ಧಿವಂತರ ಸಮಕ್ಷಮ ಹಿಸೆಮಾಡಿಕೊಡಬೇಕು ಇಲ್ಲವಾದರೆ ಕಾಯದೇ ಪ್ರಕಾರ ಹಿಸೆ ತೆಗೆದುಕೊಳ್ಳುತ್ತೇನೆ ತಿಳಿಯುವದು ೨೦-೬-೨೮

ಈ ಎಡಗೈ ಹೆಬ್ಬಟ್ಟಿನ ಗುರ್ತ ಗೋಣೆಪ್ಪಾ ತಂದಿ ಯಲ್ಲಪ್ಪಾ ಕರಿಗಾರ ಸಾ|| ಕಬ್ಬೂರ ಹಾಲಿ ವಸ್ತಿ ದೇವಿಹೊಸೂರ ತಾ|| ಕಲಘಟಗಿ ಇತನದು ಇದೆ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅತ್ಯಾಕ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಹೋಗುವ ಸೆರಗು ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ಮಹಾತ್ಮರ ಅದ್ಭುತ ಪ್ರಕಾಶ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತು ನೋಡಿದ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು.

ನಿಮಗೆ ಉತ್ತಮವಾಗಿ ಉರಿಯುವ

ಒಣ ಕಟ್ಟಿಗೆ ಬೇಕೇ?

ನಮ್ಮ ಕಟ್ಟಿಗೆಯ ಅಡ್ಡೆಯಲ್ಲಿ ಉತ್ತಮ ತರದ ದಿಂಡಲ, ಮತ್ತಿ ಮುಂತಾದ ಕಾಡ ಕಟ್ಟಿಗೆಗಳು ಬಹು ಸೋವಿಯಿಂದ ಸಿಗುತ್ತವೆ. ಮಳೆಗಾಲದಲ್ಲಿ ಒಣಗಿದ ಕಟ್ಟಿಗೆಗಳು ನಮ್ಮಲ್ಲಿಯಂತೆ ಎರಡನೇ ಕಡೆಗೆ ಸಿಗುವದು ಕ್ವಚಿತವು. ಮಳೆಗಾಲ ದಿವಸದಲ್ಲಾಗುವ ಹಸೀ ಕಟ್ಟಿಗೆಯ ತಾಪವನ್ನು ಕಳೆಯಬೇಕೆಂದು, ನಾವು ಮುದ್ದಾಮ ಕಟ್ಟಿಗೆಯ ಅಡ್ಡೆಯನ್ನು ಜನರ ಸೋಯಿಗಾಗಿ ಇಟ್ಟಿರುತ್ತೇವೆ. ಗ್ರಾಹಕರು ಇದರ ಲಾಭವನ್ನು ತಕ್ಕೊಳ್ಳಬೇಕು.

ಅಡ್ಡೆಯ ಮಾಲಕ,
ಬಾಳಾಚಾರ್ಯ ರಾಂಚಾರ್ಯ
ಮುನವಳ್ಳಿ,
ಧಾರವಾಡ.
(ಸೆಂಟ್ರಲ ಬ್ಯಾಂಕಿನ ಗಡಿಯಾಳದ ಎದುರಿಗೆ)

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1445

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶುಕ್ರವಾರ ತಾರೀಖು ೨೬ ನೇ ಜುಲೈ ೧೯೨೮ (ಸಂಚಿಕೆ ೧೬೬

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯುತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪ್ರತ್ಯೇಕವಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಒಡ್ಡಿದರ ೧ರೂ. ೩॥ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಒಡ್ಡಿದರ ೩॥ ರೂ.

ಸೇವಿಂಗ್ಸ ಬ್ಯಾಂಕ:— ಒಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಒಡ್ಡಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಒಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡತಕ್ಕವರನ್ನು ಒಗ್ಗಿಸಿ ಕೊಡುವದರಲ್ಲಿ ಬರುವದು. ಒಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಕ್ಕದ ಉದರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಊರುಗಳಿಗೆ ಹಚ್ಚಿಸ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ ಮೊಕತ್ಯಾರ ಪತ್ರಗಳೂ ಸದರಿ ಬ್ಯಾಂಕದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ ತಾ॥ ೧೬ ೨-೨೮

ಡಿ. ಡೊನೆಲಿ,
ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಸ್ಥಳ- ಮಂಗಳವಾರಪೇಟಿ, ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ತಾಸು ಮತ್ತು ಚಹಾ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಒಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಒಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗಿಯ ಮೇಲೆ ಅತ್ಯಂತ ಕಡಿಮೆ ಬಡ್ಡಿ. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಲು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಗೀರದಾರ.
ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೨-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ ೬-೭-೨೮ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಟ್ಟೆಯು
ಶ್ರೀ ವಸುಮತಿಯು ನಲಿವಿನ ಸುಹಿತಶಕ್ತಿಗಳಿಂ ॥
ದೀ " ವಿಜಯಂ " ಶ್ರೀಕರರುಣ ।
ಜಾವಿಹಿತಂಗಳ ವಿವರಿಸನಲಿವುದು ಸಾಜಂ ॥೧॥

ಭೂಕಂದಾಯ ತಿದ್ದುಪಡೆಯು ಸಂಘಸ್ಥಾಪನೆ.

ಇಂಗ್ರೇಜಿ ಸರಕಾರದವರು ಜಮೀನ್ದಾರರ ಕಂದಾಯ ವಸೂಲಿಗಾಗಿ ಮಾಡಿದ ಕಾಯದೆಯು ನಿರಂಕುಶ ಪ್ರಭುತ್ವದಂತಾಗಿರುತ್ತದೆ. ಫೌಜದಾರಿ ದಿವಾಣಿ ಕಾಯದೆಗಳಲ್ಲಿ ಅಪೀಲು ಇದ್ದರೂ, ಈ ಲ್ಯಾಂಡ ರೆವಿನ್ಯೂ ಕೋಡಿನಲ್ಲಿ ಸರಕಾರದ ಅನ್ಯಾಯ ಆಕ್ರಮಣದ ವಿರುದ್ಧ ದಿವಾಣಿ ಕೋರ್ಟಿಗೆ ಹೋಗುವಂತಿರುವದಿಲ್ಲ. ಆದ್ದರಿಂದಲೇ ರೆವಿನ್ಯೂ ಜನವು ಈ ಪರ್ಯಂತರ ಯಥೇಚ್ಛವಾಗಿ ತಮ್ಮ ಜಲ್ಮಾಟ, ಕುಣಿದಾಟ, ಹಾರಾಟ ನಡೆಸಿತು. ಅತ್ತಿಗೊಂದು ಕಾಲವಾದರೆ ಸೊಸೆಗೊಂದು ಕಾಲವೆಂದು ಲೋಕಾರೂಢಿಯಾದಂಥ ಮಾತು. ಆ ಪ್ರಸಂಗವನ್ನು ಸರಕಾರದ ರೆವಿನ್ಯೂ ಖಾತೆ ಸಂಬಂಧವಾದ ಅತ್ಯಾಚಾರವು ಇಂದು ತಂದಿತು. ಬಾರಡೋಲಿಯಿಂದ ಸರಕಾರಕ್ಕೆ ತನ್ನ ಬೊಟ್ಟನ್ನು ತನ್ನ ಕಣ್ಣಿನೊಳಗೇ ಚುಚ್ಚಿಕೊಂಡಂತಾಗಿರುತ್ತದೆ. ಬೇರೆ ತಾಲೂಕುಗಳಲ್ಲಿ ಮಾಡಬೇಕೆಂದಿದ್ದ ಮತ್ತು ಮಾಡಿದ್ದ ರಿವಿಜನದ ವಿಚಾರವನ್ನು ತಡೆಹಿಡಿದಿಲ್ಲದೆ, ಈ ಕೌನ್ಸಿಲದಲ್ಲಿ ತರಬೇಕೆಂದಿದ್ದ ಲ್ಯಾಂಡ ರೆವಿನ್ಯೂ ಕೋಡಿನ ದುರುಸ್ತಿಯ ಬಿಲ್ಲನ್ನು ಮುಂದೆ ಹಾಕಿರುತ್ತದೆ. ಲೋಕಮತವು ತನಗೆ ಭಯಂಕರವಾಗಿ ಪ್ರತಿಕೂಲವಾಗಿರುವದನ್ನು ಕಂಡು ಸರಕಾರವು ಸಾವಧಾನಗೊಂಡಿತು.

ಸರಕಾರವು ಮುಂದೆ ತರಬೇಕಾಗಿದ್ದ ದುರಸ್ತಿಯ ಕೋಡಿನಲ್ಲಿ ಸರಕಾರದ ರಹಸ್ಯವೇನಿದ್ದರೂ ಇರಲಿ, ರೈತರು ಪುನಃ ಪಶ್ಚಾತ್ತಾಪಕ್ಕೆ ಗುರಿಯಾಗಬಾರದೆಂದು ರೈತರೂ ರೈತರಂತೆ ರೈತರ ಪಕ್ಷದ ಕೌನ್ಸಿಲದ ಮೆಂಬರರಾದವರೂ ಸೇರಿ, ಮುಂಬಯಿ ಇಲಾಖೆಯ ದೆಸೆಯಿಂದ ಲ್ಯಾಂಡ ಲೀಗವೆಂಬ ಸಂಸ್ಥೆಯನ್ನು ಸ್ಥಾಪಿಸುವ ಕೆಲಸವು ಕಳೆದ ಮಂಗಳವಾರ ದಿವಸ ಪುಣೆಯಲ್ಲಿ ನಡೆಯಿತು. ಈ ಸಭೆಗೆ ಶ್ರೀ. ಜೋಗ ಮೊದಲಾದ ಕೌನ್ಸಿಲ ಮೆಂಬರರಲ್ಲದೆ ಕರ್ನಾಟಕದ ಪಕ್ಷದಿಂದ ಶ್ರೀ. ಗಂಗಾಧರರಾವ ದೇಶಪಾಂಡೆ ಮೊದಲಾದವರೂ ಹೋಗಿದ್ದರು. ನರಹರಿ ಪಟೇಲರು ಲೀಗದ ಅಧ್ಯಕ್ಷರಾಗಿ ನೇಮಿಸಲ್ಪಟ್ಟರು. ಸದ್ಯ ಇದರ ಮುಖ್ಯ ಕಚೇರಿಯು ಬಾರಡೋಲಿಯಲ್ಲಿರುವದು. ಶ್ರೀ. ದಿವೇಕರ, ಚಿಕ್ಕೋಡಿ, ಜಯರಾಮದಾಸ ಮತ್ತು ಆನಂದಸ್ವಾಮಿಯವರು ಗೌರವ ಕಾರ್ಯದರ್ಶಿಯಾಗಿರುವರು. ಶ್ರೀ. ಕೇಳಕರ, ಭೋಪಟಕರ ಮತ್ತು ರಾವಸಾಹೇಬ ದಾದುಭಾಯಿಯವರು ಉಪಾಧ್ಯಕ್ಷರಾಗಿದ್ದಾರೆ.

ಲೀಗ ಸಭೆಯಲ್ಲಿ ಶ್ರೀ ಕೇಳಕರರ ಭಾಷಣವು.

—)(—)(೦)(—)(—

ಲ್ಯಾಂಡ ರೆವಿನ್ಯೂ ಮತ್ತು ರೆವಿನ್ಯೂ ಜನ ಸಂಬಂಧವಾಗಿ ನಾಮದಾರ ಗವ್ಹರ್ನರಸಾಹೇಬರು ಮಿ. ಕ್ರಾಫಾಗೆ ಬರೆದ ಪತ್ರದಿಂದ ನನ್ನ ಸಮಾಧಾನವಾಗಿಲ್ಲ. ಈಸಂತರದ ಭೂಕಂದಾಯ ವಸೂಲಿಯ ಕಾಯದೆಯು ನಿರ್ದೋಷ ಮತ್ತು ಪ್ರಗತಿಶೀಲವಾಗುವದೆಂದು ಗವ್ಹರ್ನರಸಾಹೇಬರು ಹೇಳುತ್ತಾರೆ. ಇದರ ಸರಿಯಾದ ಅರ್ಥ ಮಾಡುವದು ಕಠಿಣವಾಗುತ್ತದೆ. ಲ್ಯಾಂಡ ರೆವಿನ್ಯೂದ ತತ್ವಗಳು ನಿಶ್ಚಿತವಾಗಿಲ್ಲ. ಇವನ್ನು ಸ್ಥಿರಪಡಿಸುವದು ಕಾಯದೆಮಂಡಲದ ಕರ್ತವ್ಯವಾಗಿರುತ್ತದೆ.

ಬಾರಡೋಲಿಯಲ್ಲಾದ ತಪ್ಪು ಎಲ್ಲ ಕಡೆಯಲ್ಲಿಯೂ ಆಗಿರುತ್ತದೆ. ಎಲ್ಲಾ ರೆವಿನ್ಯೂ ಜನ ಸೆಟಲಮೆಂಟಗಳಲ್ಲಾಗಿರುತ್ತದೆ. ಅಂಡರಸನ್ನ ಸಾಹೇಬರು ಹೋದರೂ ಅವರ ತತ್ವವುಳಿದಿದೆ. ಹೋಳೀ ಹಬ್ಬ ಹೋದರೂ ದುಂದುಮೆಯು ಹೋಗುವದಿಲ್ಲ. ಆದ್ದರಿಂದ ಈ ಬಗ್ಗೆ ಒಂದು ಸಭೆ ಸ್ಥಾಪಿಸುವದು ಅವಶ್ಯ. ರೈತರಿಗೆ ಹೋಮರೂಲವೆಂದು ಹೇಳಿದರೆ ಅವರು ಗೊಂದಲದಲ್ಲಿ ಬೀಳುತ್ತಾರೆ. ಆದೇ ರೈತರ ಸಭೆ ಎಂದು ಹೇಳಿದರೆ ಅವರಿಗೆ ತಿಳಿಯುತ್ತದೆ. ರೈತರಿಗೆ ಸ್ವರಾಜ್ಯಕ್ಕಿಂತ ಭೂಮಿಯ ಮಹತ್ವವು ಹೆಚ್ಚಿರುತ್ತದೆ. ಕಂದಾಯದ ಕೂಡ ಇರಿಗೇಶನ ಮತ್ತು ಸಹಕಾರದ ವಿಷಯಗಳನ್ನೂ ಈ ಸಂಘವು ಕೈಕೊಳ್ಳಬೇಕೆಂದು ನನ್ನ ಮತವು. ನಮಗೆ ಈ ಕಾರ್ಯದಲ್ಲಿ ಬ್ರಾಹ್ಮಣೇತರರ ಪಕ್ಷವೂ ಅನುಕೂಲವಾಗಿರುತ್ತದೆ. ಶ್ರೀ. ಜಾಧವಕರರು ಈ ವಿಷಯವಾಗಿ ಸಹಾಯ ಮಾಡುವಂತೆ ನಂಬಿಗೆ ಕೊಟ್ಟಿದ್ದಾರೆ. ಆದರೆ ದಿವಾನ ಜಾಧವರಾಯರ ಉಪದೇಶದಿಂದ ಬ್ರಾಹ್ಮಣೇತರರಲ್ಲಿ ಕೆಲವರು ಇದರಲ್ಲಿ ಸೇರಲಿಚ್ಛಿಸುವದಿಲ್ಲ. ದಂಡು ಮತ್ತು ಹಣ ಪಡೆಯ ಕಸವು ಇದ್ದಂಥ ಸರಕಾರದ ಕೂಡ ಹೋರಾಡಬೇಕೆಂಬದನ್ನೂ ಆಯರ್ಲಂಡ [illegible] ದೃಷ್ಟಾಂತವನ್ನು ಮುಂದಿಟ್ಟುಕೊಳ್ಳಬೇಕಾಗಿರುತ್ತೆಂದೂ ಲಕ್ಷ್ಯದಲ್ಲಿಟ್ಟುಕೊಂಡು ಈ ಬಗ್ಗೆ ನಾವು ಕರ್ತವ್ಯತತ್ಪರರಾಗಬೇಕು.

ಸರದಾರ ಪಟೇಲರ ಭಾಷಣ.

—(೦)—

ಸರಕಾರದ ರಾಜನೀತಿಯ ಧೋರಣವು ಪ್ರಾಮಾಣಿಕತನದ್ದಿರಬೇಕು. ಈ ತತ್ವಪ್ರಕಾರ ಸರಕಾರವು ಎಲ್ಲ ಕುಂದುಕೊರತೆಗಳನ್ನು ಕೇಳಿಕೊಳ್ಳತಕ್ಕದ್ದು. ಬಾರಡೋಲಿಯ ಟೆಂಟವು ಗಟ್ಟಿಯಾಗಿತ್ತಂತಲೇ ಅದಕ್ಕೆ ಜಯ ದೊರೆಯಿತು. ಬಾರಡೋಲಿಯಲ್ಲಾದಂಥ ಅನ್ಯಾಯವು ಪನ್ನಾ, ಖೇಡಗಡ, ಅಲಿಬಾಗ ಮುಂತಾದ ಸ್ಥಳಗಳಲ್ಲಾಗಿರುತ್ತದೆ. ಸರಕಾರವು ಅಲ್ಲಿಯ ರೆವಿನ್ಯೂ ಜನವನ್ನೂ ಬಿಟ್ಟುಕೊಡತಕ್ಕದ್ದು. ಎಲ್ಲರಿಗೂ ಅನುಕೂಲವಾಗುವಂಥ ಒಂದು ಪ್ಲಾಟಫಾರ್ಮನ್ನು ನಾವು ನಿರ್ಮಾಣ ಮಾಡಬೇಕು. ಇದರಲ್ಲಿ ಬ್ರಾಹ್ಮಣೇತರ ವಾದವನ್ನೇಕೆ ಹೂಡಬೇಕು ? ನಾನು ಬ್ರಾಹ್ಮಣನಲ್ಲ. ರೈತನಿದ್ದೇನೆ ಒಕ್ಕಲಿಗನೆಂದೆನಿಸಿಕೊಳ್ಳಲಿಕ್ಕೆ ಅಭಿಮಾನಪಡುತ್ತೇನೆ ಹಿಂದುಸ್ಥಾನವು ಒಕ್ಕಲಿಗರ ಮತ್ತು ಕೂಲಿಕಾರರ ದೇಶವಾಗಿರುತ್ತದೆಂದು ಹೇಳುವದಕ್ಕೆ ನಾನು ಅಭಿಮಾನಪಡುತ್ತೇನೆ. ಅಂದಬಳಿಕ ದಿವಾನ ಜಾಧವರಾಯರಿಗೆ ಒಕ್ಕಲಿಗರ ಹೆದರಿಕೆ ಏಕೆ? ಸ್ವರಾಜ್ಯವಾಯಿತೆಂದರೆ ಬ್ರಾಹ್ಮಣೇತರರ ಹಿತವೇ ಆಗುವದು ಆದರೆ ಒಂದು ವಿಷಯದಲ್ಲಿ ಮಾತ್ರ ನಾವು ದಿವಾನ ಜಾಧವರಾಯರ ಮಾತು ಕೇಳುವದಿಲ್ಲ ಅಂತೇ ನಮ್ಮ ಹತ್ತರ ಬರುವದಕ್ಕೆ ಅವರು ಹೆದರುತ್ತಿರಬಹುದು ಸ್ವರಾಜ್ಯದಲ್ಲಿ ನಾವು ಜಾಧವರ ಸಂಬಳವನ್ನು ಕಡಿಮೆ ಮಾಡುವೆವು. ನಾವು ಯಾರಿಗೂ ಐವತ್ತು ಸಾವಿರ ರೂಪಾಯಿ ಸಂಬಳ ಕೊಡುವದಿಲ್ಲ. ಬಹಳವಾದರೆ ಒಂದು ಸಾವಿರ ರೂಪಾಯಿ ಕೊಡುವೆವು ಇದೇ ನಮ್ಮ ಕೊನೆಯ ದೊಡ್ಡ ಸಂಬಳ.

ಹಿಂದುಸ್ಥಾನದಲ್ಲಿ ಬಹಳ ಕಾಲದಿಂದ ರಾಜಕೀಯ ಕೈದಿಗಳನ್ನು ಹಿಂಸೆಯಿಂದ ನಡೆಸಿಕೊಳ್ಳುವದೂ ಸರ್ರಾಗಿ ನಡೆದಿರುವಾಗ ಮುಖ್ಯಮಂತ್ರಿ ಮ್ಯಾಕಡೋನಾಲ್ಡ ಸಾಹೇಬರನ್ನು ಕಾಂಗ್ರೆಸದ ಅಧ್ಯಕ್ಷಪದಕ್ಕೆ ಸೂಚಿಸಿದ್ದು ಅತ್ಯಂತ ವಿಷಾದದ ಕೃತ್ಯವಾಯಿತೆಂದು ಬಂಗಾಲದ ಕಾಂಗ್ರೆಸ ಕಮಿಟಿಯವರು ಠರಾವು ಮಾಡಿದ್ದಾರೆ.

ಜಾಧವರಾಯರೇ
ದಿವಾನಗಿರಿಯು ಮೂರು ದಿವಸದ್ದು.

——)(೦)(——

ಮುಂಬಯಿ ಕೌನ್ಸಿಲದಲ್ಲಿ ಅಬಕಾರಿ ಬಿಲ್ಲಿನ ಬಗ್ಗೆ ನಡೆದ ವಾದವಿವಾದದಲ್ಲಿ ಕೆಳಗಿನ ಪ್ರಶ್ನೋತ್ತರಗಳು ನಡೆದವು.

ನಾರಾಯಣರಾವ ಗುಂಜಾಳ-

ಕೆಲವು ದಿವಸಗಳ ಹಿಂದೆ ದಿವಾನ ಜಾಧವ ಭಾಸ್ಕರರಾಯರು ಕೆಲವು ದಿವಸಗಳ ಹಿಂದೆ ನಾಸಿಕದಲ್ಲಿ ಮಾತಾಡುವಾಗ ತಮಗೆ ಮದ್ಯಪಾನ ಪ್ರತಿಬಂಧದ ಧೋರಣವು ಮಾನ್ಯವಿದ್ದಂತೆ ಮಾತಾಡಿದ್ದಲ್ಲದೆ, ತಾವೆಂದೂ ಕುಡಿಯುವದಿಲ್ಲೆಂದು ಜಾಹೀರ ಮಾಡಿದ್ದಾರೆ ನೀವು ಕುಡಿಯದಬಳಿಕ ಅನ್ಯರಿಗೇಕೆ ಕುಡಿಯಲಿಕ್ಕೆ ಹಚ್ಚುತ್ತೀರೆಂದು ನಾನು ದಿವಾನರಿಗೆ ಪ್ರಶ್ನೆ ಮಾಡುತ್ತೇನೆ

ಜಾಧವರು ನನ್ನ ಮೇಲೆ ಬೇಕೆಂದು ಆಕ್ಷೇಪ ಹೊರಿಸುತ್ತಾರೆ.

ಅಧ್ಯಕ್ಷರು- ಹೀಗೆ ನಾನು ತಿಳಿಯುವದಿಲ್ಲ. ನೀವು ಕುಡಿಯದಬಳಿಕ ಬೇರೆಯವರನ್ನು ಏಕೆ ಬಿಡಿಸುವದಿಲ್ಲೆಂದು ಮಿ. ಗುಂಜಾಳರ ಮಾತಿನ ಮರ್ಮವಾಗುತ್ತದೆಂದು ನಾನು ಅರ್ಥಮಾಡುತ್ತೇನೆ.

ಗುಂಜಾಳ- ಸರಿ ಕುಡಿಯುವದನ್ನು ನಿಲ್ಲಿಸಿದರೆ- ಬಡವರು ನಿಮ್ಮನ್ನು ಹಾಡಿ ಹರಸುವರು. ಯಾವ ಬ್ರಾಹ್ಮಣೇತರರ ಮುಂದಾಳುವೆಂದು ನೀವು ಹೇಳಿಕೊಳ್ಳುತ್ತೀರಿ; ನೀವು ಆ ಬ್ರಾಹ್ಮಣೇತರರ ಹಿತ ಮಾಡಿದಂತೆಯೂ ಆಗುತ್ತದೆ. ಇಂಗ್ರೇಜ ಸರಕಾರದ ರಾಜ್ಯವು ಬಹಳ ವರ್ಷ ನಡೆದೀತು? ನಿಮ್ಮ ದಿವಾನಗಿರಿಯು ಮಾತ್ರ ಎರಡು ಮೂರು ವರ್ಷದ್ದಿರುತ್ತದೆ. ಅಂದಬಳಿಕ ಈ ಅವಧಿಯಲ್ಲಿ ಜನರ ಕಲ್ಯಾಣವೇಕೆ ಮಾಡಬಾರದು? ಅದರೆ- ನಿಮ್ಮ ಆಡಳಿತೆಯಲ್ಲಿ ಜನರ ಕಲ್ಯಾಣವಾಗುವದಿಲ್ಲೆಂದು ಎಲ್ಲರಿಗೂ ತಿಳಿದುಹೋಗಿದೆ. ನೀವು ನಿಮ್ಮ ದರಬಾರದಲ್ಲಿ ಜನರ ಹಿತ ಮಾಡದಿದ್ದರೆ- ಅದರ ಅನಿಷ್ಟ ಫಲಗಳನ್ನು ಇದೇ ಜನ್ಮದಲ್ಲಿ ಉಣ್ಣಬೇಕಾದೀತೆಂಬುದನ್ನು ಲಕ್ಷ್ಯದಲ್ಲಿಡಿರಿ

ಯಾವತ್ತು ಕನ್ನಡಿಗರಿಗೆ ಬಿನ್ನಹ.

(ಲೇಖಕ: ಅ. ಕೃ ದಿವಾಣ)

ಜಯ ಕರ್ನಾಟಕ

(ವಿದ್ಯಾರ್ಥಿಗಳ ಗುಂಪಿನಿಂದ)

ನಮ್ಮ ಕನ್ನಡ ನುಡಿಯನ್ನು ಉನ್ನತಿಯಿಂದ ನೋಡಿಸಬೇಕೆಂಬ ಇಚ್ಛೆಯ ಪ್ರೇರಣೆಯಿಂದ ಬೇಡಿಕೊಳ್ಳುವದೇನಂದರೆ-

ನಮ್ಮ ಯಾವತ್ತು ಕರ್ನಾಟಕಕ್ಕೆ ಒಳಗೊಂಡ ಸ್ಥಳಗಳಲ್ಲಿ ಅಲ್ಲದ ಸಲ್ಲದ ಅನೇಕ ಪದ್ಧತಿಗಳು ಪರಿಪಾಠಿಯಾಗಿ ಸೇರಿಕೊಂಡಿರುತ್ತವೆ ಅವೇನಂದರೆ-

ಕರ್ನಾಟಕದಲ್ಲಿ ಕನ್ನಡ ಶಾಲೆಗಳಲ್ಲಿ ಮರಾಠಿಯಿಂದ ಮೊಗ್ಗಿಗಳನ್ನು ಕಲಿಸಿ ಅನಿಸುವದೂ ಕನ್ನಡ ನಾಡುಗಳಲ್ಲಿ ಮರಾಠಿಯಿಂದ ಲೆಕ್ಕ ಪತ್ರಗಳನ್ನು ನಡೆಸುವದೂ ಮತ್ತು ಕರ್ನಾಟಕದ ಕನ್ನಡನಾಡಿನ ವರ್ತಕರು ತಮ್ಮ ಲೆಕ್ಕ ಪತ್ರಗಳಲ್ಲಿ ಇಂಗ್ಲೀಷ ಅಂಕೆಗಳನ್ನು ಬರೆದು ಲೆಕ್ಕ ಮಾಡುವದೂ ಕನ್ನಡ ಮಾಸ ಪತ್ರಿಕೆಯವರು ಮತ್ತು ವಾರಪತ್ರ, ಪತ್ರಿಕೆಯವರು ಪತ್ರಿಕೆಗಳಲ್ಲಿ ಇಂಗ್ಲಿಷ ಅಂಕೆಗಳನ್ನು ಹಾಕಿ ಪತ್ರದ ಹೆಸರನ್ನು ಕನ್ನಡದಲ್ಲಿ ಬರೆಯುವದಲ್ಲದೆ ಇಂಗ್ಲಿಷಿನಲ್ಲಿ ಬರೆಯುವದೂ ಕೆಲವು ಕನ್ನಡ ಪುಸ್ತಕ ಕಾದಂಬರಿಗಳಲ್ಲಿ ಇಂಗ್ಲಿಷ ಅಂಕೆಗಳನ್ನು ಹಾಕುವದೂ ಇದು ಯಾವ ಪದ್ಧತಿಯು ಗೋಚರವು?

ಈ ಪದ್ಧತಿಗಳು ಸೇರಿಕೊಂಡಿದ್ದು ಅರೆತುಕೊಳ್ಳುವದು ಅನಿಯಮಿತವಾದ ಕಷ್ಟದ ಮಾತೆ ಸರಿ ಅದಕೂ ತಿಳಿದುಕೊಳ್ಳಲಿಕ್ಕೇ ಬೇಕಲ್ಲವೆ? ! ಅದರಿಂದ ನಾವು ಆ ಪದ್ಧತಿಗಳನ್ನು ಪ್ರಚಾರದಲ್ಲಿ ಇಟ್ಟವರ ಕೆಲವರನ್ನು ಕೇಳುವ ಧೈರ್ಯ ಮಾಡಿವೆವು ಮತ್ತು ಆ ಪದ್ಧತಿಗಳನ್ನು ತೆಗೆದು ಹಾಕಬೇಕೆಂದು ಬಿನ್ನಹ ಮಾಡಿಕೊಂಡಿದ್ದೇವೆ. ಅದರಂತೆ ಕನ್ನಡಿಗ ಪತ್ರದವರು ಯತ್ನ ಮಾಡಿದ್ದು ಕಂಡು ಬಂತು. ಆದರೆ ಸದ್ಬೋಧ ಚಂದ್ರಿಕೆಯವರು ಹಿಯಾಳಿಸುವದಲ್ಲದೆ ನಮಗೆ ಅಂಥ ಸ್ವಲ್ಪ ವಿಚಾರದಲ್ಲಿ ಮನಸ್ಸು ಮಾಡುವದರಲ್ಲಿ ಏನಿದೆ? ಎಂದು ನಮಗೇ ತಿರುಗಿ ಕೇಳಿದರು. ಅದಕ್ಕೆ ನಾವು ಉತ್ತರ ಬರೆಯಲಾಗಿ ಒಪ್ಪಿಕೊಂಡಿರುವರು.

ಇನ್ನು ನಮಗೆ ಕನ್ನಡವೆಂದರೆ ನಮ್ಮ ತಾಯಿಯಂತಲ್ಲವೇ! ಅಂದಮೇಲೆ ಅವಳ ಸುಖಕ್ಕೆ ಸೇವೆಗೈವದಿರುವದು ಅಮರ್ಯಾದೆಯ ಸಂಗತಿಯಾಗಿದೆ. ಆದಕ್ಕೆ ನಮ್ಮ ಮಾತೆಯಂತಿದ್ದ ಕನ್ನಡ ನುಡಿಯನ್ನು ಉನ್ನತಿಯಾಗಲೆನಿಸಿದರೆ- ನಮ್ಮ ಯಾವತ್ತು ನಾಡಗಳಲ್ಲಿ ಎಲ್ಲರೂ ಯಾವತ್ತು ವಿಷಯದಲ್ಲಿ ಕನ್ನಡದ ಹೊರ್ತು ಯಾವ ಮಾತನ್ನೂ ಎತ್ತದಿರಬೇಕು. ಮತ್ತು ಪರರ ನುಡಿಯ ಭೋಗದಿಂದಲೂ ನೆರವಿನಿಂದಲೂ ನಮ್ಮ ನುಡಿಗೆ ಕಳಂಕವನ್ನು ಹಚ್ಚುವಂತೆ ಮಾಡಿದ ಮೇಲೆ ಹೇಳಿದ ಪದ್ಧತಿಗಳನ್ನು ಕಡವಿ ನಿರ್ಮೂಲ ಮಾಡಲಿಕ್ಕೆ ಪ್ರಯತ್ನ ಮಾಡುವದೆಂದರೆ ನಮ್ಮ ನುಡಿಯು ಎಳ್ಳಿಗೆ ಹುರುದುಂಬಿಸದಂತಾಗುದು. ಇನ್ನು ಹೆಚ್ಚಿಗೆ ಕೇಳಿಕೊಳ್ಳಬೇಕೆಂದರೆ, ನಮ್ಮ ನುಡಿಯ ಶ್ರೇಷ್ಠತ್ವಕ್ಕೆ ನೆರೆನಂಬಿ ಹರುಷದಿಂದ ಹೊರೆಯಾಗಿ ಹೋರೆ ನೈಸಬೇಕೆಂಬುವದೇ ನನ್ನ ಕರುಣೆಯಿಂದ ಕೂಡಿದ ಕೋರಿಕೆ

ಕಾಬೂಲದಲ್ಲಿ ನಡೆದ ಕೊಲೆಗಳೂ,
ಗುಪ್ತ ಕೃತ್ಯಗಳೂ.
ಅಲ್ಲಿಬಾನನನ್ನು ತೋಫಿನ ಬಾಯಿಗೆ ಕೊಟ್ಟು ಕೊಂದರು.

ಅಮೀರ ಹಬಿಬುಲ್ಲಾಖಾನನಿಗೆ ದುಡ್ಡಿನ ತುಟಾಗ್ರತೆಯಾದ್ದರಿಂದ, ಕಾಬೂಲದಲ್ಲಿದ್ದ ಶ್ರೀಮಂತರನ್ನು ಪೀಡಿಸಹತ್ತಿದ್ದಾನೆ. ದಂಡಿಗೆ ಎರಡು ತಿಂಗಳಾದರೂ ಸಂಬಳವಿಲ್ಲ. ಮತ್ತು ಅಲ್ಲಿ ಜಾನ ಮಹಮದನನ್ನು ತುರಂಗದಿಂದ ತರಿಸಿ, ತೋಫಿನ ಬಾಯಿಗೆ ಕೊಡಿಸಿ, ಕೊಲ್ಲಿಸಿದನು. ಈ ಕೃತ್ಯಗಳು ಪಟಣಿಯನ್ನು ಪ್ರಕ್ಷುಬ್ಧವನ್ನಾಗಿ ಮಾಡಿ ಜನ ಅವರು ಬಂಡಾಯವೆಬ್ಬಿಸುವರೆಂಬ ಭಯವುಳ್ಳದಾಗಿದೆ.

ಬಚ್ಚಾಸಾಕೆಯು ದೀರ್ಘ ಸೂತ್ರಧಾರಿಯು. ಅಮಾನುಲ್ಲನು ಇಟಲಿಗೆ ದೇಶಾಂತರಯಾ ಹೋದರೂ. ತಿರುಗಿ ರಾಜ್ಯವಾಳಲಿಕ್ಕೆ ಬಂದಾನೆಂಬ ಹೆದರಿಕೆಯಿಂದ ಆತನ ಚಲನವಲನವನ್ನು ಗುಪ್ತವಾಗಿ ನೋಡಲು ಒಬ್ಬನನ್ನು ಮುಂಬಯಿ ಮಾರ್ಗವಾಗಿ ಇಟಲಿಗೆ ಕಳಿಸಿದನು. ನೀನು ಇಟಲಿಗೆ ಹೋಗುವದೇಕೆಂದು ಮುಂಬಯಿಯಲ್ಲಿ ಪ್ರಶ್ನೆಮಾಡಲು ಈ ಗುಪ್ತ ನಗುಪಕನು ಉತ್ತರವನ್ನೇ ಕೊಡಲಿಲ್ಲ.

ನೋಟೀಸ

ಗೋಕಪ್ಪಾ ಬಸಲಿಂಗಪ್ಪಾ ಸಾವಳಗಿ ಮರುದ್ರಪ್ಪಾ ಸಿದ್ದಲಿಂಗಯ್ಯಾ ಮಠದ ಸಾ|| ಕೊಟಬಾಗಿ ತಾ|| ಬೈಲಹೊಂಗಲ ಇವರಿಗೆ-

ಈ ನೋಟೀಸಿನಿಂದ ತಿಳಿಸುವದೇನಂದರೆ- ಬೈಲಹೊಂಗಲ ತಾಲೂಕ ಪೈಕಿ ಕೊಟಬಾಗಿ ಗ್ರಾಮದಲ್ಲಿಯ ದಕ್ಷಿಣಾಭಿಮುಖವಾಗಿರುವ ಹಂಚಿನ ಮನೆ (ಪೂರ್ವ-ಪಶ್ಚಿಮ ೧೮, ದಕ್ಷಿಣ ಉತ್ತರ ೭೪ ಮ ಹಿತ್ತಲ) ಯ ಸಂಬಂಧಿ ಭೀಮರಾವ ದೇಶಪಾಂಡೆ ಕಲಭಾಂವಿ ಇವರ ಹೆಸರಲೆ ಬರೆದುಕೊಟ್ಟಿರುವಿರಿ ಎಂದು ತಿಳಿಯುತ್ತದೆ.

ಸದರೀ ಮನೆಯ ಸಂಬಂಧಿ ಬಾಡಿಗೆಪತ್ರ ವಗೈರೆ ಯಾವದೇ ತರಹದ ಕಾಗದಗಳನ್ನು ಯಾರಿಗೂ (ನನ್ನ ಹೊರತು) ಮಾಡಿಕೊಡಬಾರದೆಂದು ಈ ಮೊದಲೇ ೧೯೧೦ ಇಸ್ವಿಯಲ್ಲಿ ಕರ್ನಾಟಕ ವೃತ್ತದಲ್ಲಿ ನೋಟೀಸು ಕೊಟ್ಟು ನಿಮಗೆ ಅಗ್ಗೆ ನಮ್ಮ ಸಂ| ತಂದೆ ನರಸಿಂಹಾಚಾರ್ಯ ವೃಣೇಕರ ಇವರು ತಿಳಿಸಿದ್ದರು ಸದರಮನೆಗೆ (ಮ ಹಿತ್ತಲುಗಳಿಗೆ) ಕೆಳಗೆ ಸಹಿಮಾಡಿದವರು ಸಂಪೂರ್ಣ ಬಾಧ್ಯಸ್ಥರು ಇರುವದರಿಂದ ಈ ಲೇಖದಿಂದಾ ನೀವು ಬರೆಕೊಟ್ಟ ಬಾಡಿಗೇ ಪತ್ರವು ರದ್ದುಪಡಿಸಲ್ಪಟ್ಟಿದೆ ಎಂದು ತಿಳಿಯಬೇಕು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ನನಗೆ ಬಂದು ಭೆಟ್ಟಿಯಾಗಬೇಕು ಇಲ್ಲದಿದ್ದರೆ ನಿಮ್ಮ ಮೇಲೆ ಕಾಯದೇಶೀರ ಇಲಾಜ ಮಾಡುತ್ತೇನು. ತಿಳಿಯುವದು ತಾ|| ೨೭-೬-೨೯

ಸಹಿ- ಇಂದಿರಾಚರಣ ಶ್ರೀನಿವಾಸರಾವ ದೇಶಪಾಂಡೆ, ಕಿತ್ತೂರ

ಜಾಹೀರ ನೋಟೀಸು

...ರಪ್ಪಾ ತಂ ಶೇಖರಪ್ಪಾ ತಂದಿ ನೋಟ ...ಣನವರ ಸಾಕೀನ ಕಲೂಡಿ ತಾಲ್ಲೂಕ ...ಂದ ಇವರ ಪೈಕಿ ೨ ನೇ ಶೇಖರಪ್ಪಾ ...ದಾರ ೧ ನೇ ಈರಪ್ಪಾ ನೋಟಪ್ಪಾ ನಾ...ಣವರ ಸಾಕೀನ ಕಲೂಡಿ ಮುಕ್ಕಾಮು ಗದಗ ತಾ॥ ಗದಗ ಇವರು ಸಾರ್ವಜನಿಕ ನೋಟೀಸು ಕೊಡುವದೇನಂದರೆ ತಂ॥ ನೋಟಪ್ಪಾ ಖನ್ನ ಗಂಗಪ್ಪಾ ನಾಟಾಣವರ ಸಾಕೀನ ಕಲೂಡಿ ತಾಲ್ಲೂಕ ನವಲಗುಂದ ಇವನು ನಮ್ಮ ತಂದಿ ಇದ್ದು ಇವನು ಬಹು ದುರ್ವ್ಯಸನೀ ಮನುಷ್ಯನಿದ್ದದರಿಂದ ಅವನಿಗೆ ಬೇಸ ಹತ್ತಿರುವದು ನಾವು ಅವನ ನಿಂ...ಣೆ ಮಾಡಲಿಕ್ಕೆ ತಯಾರ ಇದ್ದರೂ ಅವನು ನಮ್ಮ ಹತ್ತರ ಇರಲಿಕ್ಕೆ ಬರುವಲ್ಲಾ ಮತ್ತು ಯಾವತರದ ಅಡಚಣೆ ವಗೈರೆ ಇಲ್ಲದೆ ನಮ್ಮ ಆಸ್ತಿಯನ್ನೆಲ್ಲ ವಿಲೇವಾಟ ಮಾಡುವ ಯತ್ನದಲ್ಲಿ ಇದ್ದಾನೆ ಕಾರಣ ಅವನ ಕಡಿಂದಾ ಯಾರಾದರೂ ನವಲಗುಂದ ತಾಲ್ಲೂಕ ಕಲೂಡಿ ಗ್ರಾಮದಲ್ಲಿದ್ದ ನಮ್ಮ ಮಾಲ್ಕಿ ವಹಿವಾಟಿಯಲ್ಲಿರುವ ಪಿತ್ರಾರ್ಜಿತ ಜಮೀನು ವ ಮನಿಯನ್ನು ಖರೀದಿ ವಗೈರೆ ತೆಗೆದುಕೊಳ್ಳಬಾರದು ಜಾ ತೆಗೆದುಕೊಂಡರೆ ನುಕ್ಸಾನಕ್ಕೆ ಪಾತ್ರರಾಗುವರು. ಅದಕ್ಕೆ ನಾವು ಪಾತ್ರರಲ್ಲಾ ಮತ್ತು ನಮ್ಮ ಯಾವ ತರದ ಜವಾಬದಾರಿ ಇರುವದಿಲ್ಲ ತಿಳಿಯುವದು

ತಾರೀಖು ೨೪-೭-೧೯೨೯ ನೇ ಇಸ್ವಿ

ಸಹಿ- ಈರಪ್ಪಾ ತಂದಿ ನೋಟಪ್ಪಾ ನಾಟಾಣವರ ಸಾಕೀನ ಕಲವಡಿ ತಾಲ್ಲೂಕ ನವಲಗುಂದ ಮುಕ್ಕಾಮು ಗದಗ ಮತ್ತು ಈ ಸಹಿಯು ೨. ಶೇಖರಪ್ಪಾ ಈತನ ದಸ್ತಿಂದಾ ಸಹಾ ಇರುತ್ತದೆ.

ನಿಮಗೆ ಉತ್ತಮವಾಗಿ ಉರಿಯುವ

ಒಣ ಕಟ್ಟಿಗೆ ಬೇಕೇ?

ನಮ್ಮ ಕಟ್ಟಿಗೆಯ ಅಡ್ಡೇದಲ್ಲಿ ಉತ್ತಮ ತರದ ಡಿಂಡಿ, ಮತ್ತಿ ಮುಂತಾದ ಕಾಡ ಕಟ್ಟಿಗೆಗಳು ಬಹು ಸೋಯೀಕರದಿಂದ ಸಿಗುತ್ತವೆ ಮಳೆಗಾಲದಲ್ಲಿ ಒಣಗಿದ ಕಟ್ಟಿಗೆಗಳು ನಮ್ಮಲ್ಲಿಯಂತೆ ಎಂದಿನಿ ಕಡೆಗೆ ಸಿಗುವದು ಕ್ವಚಿತ್ತು. ಮಳೆಗಾಲ ದಿವಸದಲ್ಲಾಗುವ ಹಸೀ ಕಟ್ಟಿಗೆಯ ತಾಪವನ್ನು ಳಿಸಬೇಕೆಂದು ನಾವು ಮುದ್ದಾಮು ಕಟ್ಟಿಗೆಯ ಅಡ್ಡೆಯನ್ನು ಜನರ ಸೋಯಿಗಾಗಿ ಇಟ್ಟಿರುತ್ತೇನೆ. ಗ್ರಾಹಕರು ಇದರ ಲಾಭವನ್ನು ತೆಗೆದುಕೊಳ್ಳಬೇಕು.

ಅಡ್ಡೆಯ ಮಾಲಕ,
ಜಾಳಾಚಾರ್ಯ ಗೋಪಾಲಾಚಾರ್ಯ
ಮುನವಳ್ಳಿ,
ಧಾರವಾಡ.
(ಸೆಂಟ್ರಲ ಬ್ಯಾಂಕಿನ ಗಡಿಯಾಳದ ಎದುರಿಗೆ)

ಅನೇಕ ವಿಷಯಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಹೋಗುವ ಸೆರಗು ರೋಗಗಳಿಗೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ದೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರಭಾವ! ನೈಸರ್ಗಿಕ ಅನೇಕ ವರ್ಷಗಳ ಅನುಭವ!! ದರ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

☞ ನೀವು ಔಷಧ ಬೇಡುವಾಗ ... ವರ್ತಮಾನಪತ್ರದ ಜಾಹೀರಾತ ನೋಡಿದ ಈ ವಿಷಯವನ್ನು ನಮೂದಿಸುವದನ್ನು ಮರೆಯದಿರಿ.

ನೋಟೀಸು

ಈ ನೋಟೀಸಿನ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನೆಂದರೆ ಬರತಕ್ಕದಲ್ಲಾ ಹುಬ್ಬಳ್ಳಿಯಲ್ಲಿ ಮಳಕಪ್ಪಾ ರಾಮಪ್ಪಾ ಕೊರ್ವಿಯವರ ದಲಾಲಿ ಅಂಗಡಿಯ ಬಗ್ಗೆ ಕೋರ್ಟಿನಿಂದ ನೇಮಿಸಲ್ಪಟ್ಟ ಮ್ಯಾನೇಜರ ಮಿ॥ ಈರಪ್ಪಾ ಗದಿಗೆಪ್ಪಾ ಜನ್ನೂರ ಇವರನ್ನು ಮ್ಯಾನೇಜರ ಕೆಲಸದಿಂದಾ ತೆಗೆದುಹಾಕಿರುತ್ತಾರೆಂತಲೂ ನಂಲ್ಲಿ ತಪ್ಪು ತಿಳುವಳಿಕೆಯಾಗಿ ಅವರ ಸಂಗಡ ವ್ಯವಹಾರ ಮಾಡುವದನ್ನು ಬಿಟ್ಟಿರುತ್ತಾರೆ ಮತ್ತು ಸದರೀ ಅಂಗಡಿಗೆ ಕೊಡತಕ್ಕ ಬಾಕಿ ರಕಮನ್ನು ಅವರು ಕಳಿಸಿಕೊಟ್ಟ ಕಾರಕೂನ ಅಗರ ನಾನುಸ್ವರ ಕೈಯಲ್ಲಿ ಕೊಡಲಿಕ್ಕೆ ತಪ್ಪಿಸಹತ್ತಿರುತ್ತಾರೆ. ಆದರೆ ಸದರೀ ಈರಪ್ಪಾ ಇವರನ್ನು ಕೆಲಸದಿಂದ ತೆಗೆದಿರುವದಿಲ್ಲ. ಅವರೇ ಮ್ಯಾನೇಜರ ಇದ್ದು ಯಾವತ್ತೂ ಕೆಲಸ ಮಾಡುತ್ತಾರೆ. ಅವರ ಸಂಗಡ ಯಾವತ್ತರೂ ಮೊದಲಿನಂತೆ ಯಾವತ್ತೂ ಕೊಡಕೊಗೊಂಬುವ ವ್ಯವಹಾರವನ್ನು ಮಾಡಬೇಕು. ಜನರಲ್ಲಿ ಹುಟ್ಟಿದ ಗೈರ ಸಮಜೂತಿಯನ್ನು ದೂರ ಮಾಡಲಿಕ್ಕಂತಾ ತಿಳಿದು ಈ ಜಾಹೀರ ನೋಟೀಸನ್ನು ಪ್ರಸಿದ್ಧ ಮಾಡಿದೆ.

ಡೆಪುಟಿ ನಾಝುರ್ಸ ಆಫೀಸ.
ಧಾರವಾಡ.
ತಾ॥ ೨೫-೭-೨೯

G. V. DESHPANDE,
ಡೆಪುಟಿ ನಾಝುರ.

ಶಿರಿಗನ್ನಡಂಗಲ್ಗೆ
ದಿ ಧಾರವಾಡ ಅಮೆಚೂರ್ಸ
ಸಂಘದವರು
ಸಾಗ್ರ ಸಂಗೀತ

ವರದಕ್ಷಿಣೆ

ಎಂಬ ಸಾಮಾಜಿಕ ನಾಟಕದನ್ನು ಧಾರವಾಡ ಅನ್ನಪೂರ್ಣಾ ಥಿಯೇಟರದಲ್ಲಿ ಮಂಗಳವಾರ ತಾ॥೩೦-೭-೨೯ ನೇದಿವಸ ಅಭಿನಯಿಸುವರು.

ಕಾರ್ಯದರ್ಶಿ.

ಸುಸಮಯ

ಎ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1445

ನಿತ್ಯ ಪತ್ರ — ವಿಜಯ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶನಿವಾರ ತಾರೀಖು ೨೭ ನೇ ಜುಲೈ ೧೯೩೯ (ಸಂಚಿಕೆ ೧೬೭

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯುವ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು:— ಒಂದು ವರ್ಷದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩॥ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩॥ ರೂ.

ಸೇವಿಂಗ್ಸ ಬ್ಯಾಂಕ:— ಒಂದು ರೂಪಾಯಿಯಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ಸಫೆ ವಗೈರೆ ಯಾವ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು, ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಖಡಾ ಉದರಿ ಕೊಡಲ್ಪಡುವವು.

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚೆಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಊರುಗಳಿಗೆ ಹಚ್ಚಿನ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು. ದರ ಹಾಗೂ ನಿಯಮಗಳ ಪ್ರತಿಗಳೂ ಮೊಕತ್ಯಾರ ಪತ್ರಗಳೂ ಸದರಿ ಬ್ಯಾಂಕಿನಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — ಡಿ. ಡೊನೆಲಿ,
ತಾ॥ ೧೭-೩-೩೮ — ಏಜಂಟರು

ದಿ ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ-

ಶಾಖೆ- ಮಂಗಳವಾರಪೇಟೆ, ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸಾಲ ... ರಿಂದ ... ಮುದ್ದತಿಯ ಕನಿಷ್ಠ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸಂಬಂಧ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯ ಒಳ್ಳೇ ಭದ್ರದ ಪೇಟೀ, ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಠೇವು ಮತ್ತು ಬೇರೆ ತರದ ಪಾಲಿಸಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಹಾಗಿ.
ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಝಿಟ ಇಟ್ಟುಕೊಳಲಾಗುವದು, ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ ೨೭-೭-೨೯ ನೇ ಇಸ್ವಿ.

ಶ್ರೀ.

ಜಯ ವಿಜಯಂ ಶ್ರೀಕರಪ್ರಿಯ
ನೀ ವಸುಮತಿಯ ವಲಿಸಿ ಸುಹಿತಚರಿತೆಗಳಂ ॥
ದೀ "ವಿಜಯಂ" ಶ್ರೀಕರುಣ ।
ನಾ ವಿಹಿತಂಗಳ ವಿವರಿಸಲಿತ್ರಸು ಸಾಜಂ ॥೧॥

ಮ್ಯುನಿಸಿಪಾಲಿಟಿ, ಲೋಕಲಬೋರ್ಡಿನ ಕಾಯಿದೆಯಲ್ಲಿ ಹೊಸ ತಿದ್ದುಪಡಿ

ಮುಂಬೈ ಕಾಯಿದೆ ಕೌನ್ಸಿಲ ಸಭೆಯಲ್ಲಿ ಈಚೆ ಗಟ್ಟಿನಲ್ಲಿ ಬರೆದ ಸ್ಥಾನಿಕ ಸ್ವರಾಜ್ಯದ ಕಾಯದೆಯಲ್ಲಿ ಮುಂದೆಕೊಟ್ಟಂತೆ ತಿದ್ದುಪಡಿ ಮಾಡುವ ಬಿಲ್ಲು ಬಂದಿರುತ್ತದೆ.

೧ ಜಾತ್ರೆ ಯಾತ್ರೆಗಳಲ್ಲಿ ಪರಸಿಯಿಂದ ಬಂದ ಕಲೆಪಟ್ಟಿಯನ್ನು ಪ್ರತ್ಯೇಕವಾಗಿಟ್ಟು ಅದನ್ನು ಯಾತ್ರಿಕರ ಸುಖಸೋಯಿಗಳ ಕಡೆಯಿಂದೇ ವಿನಿಯೋಗ ಮಾಡಬೇಕು.

೨ ಲೋಕಲ ಬೋರ್ಡಿನ ಹೊಸ ಚುನಾವಣೆ ನಡೆಯುವಾಗ, ಚುನಾವಣೆಯ ಮಟ್ಟಿಗೆ ಅಧ್ಯಕ್ಷನಾಗಿರತಕ್ಕವನಿಗೆ ನಿರ್ಣಯಾತ್ಮಕವೆಂದರೆ ಕಾಸ್ಟಿಂಗದ ವಿಶೇಷ ಮತವಿರಬಾರದು.

ಜಾತ್ರೆಯ ಸಂಬಂಧವಾಗಿ ಬರುವ ದ್ರವ್ಯವನ್ನು ಮ್ಯುನಿಸಿಪಾಲಟಿ, ಲೋಕಲ ಬೋರ್ಡುಗಳು ತಮ್ಮ ಹಿತಕ್ಕಾಗಿ ಉಪಯೋಗಿಸುವದುಂಟು. ಈ ತರದ ಉಪಯೋಗವನ್ನು ಬಾದರಾಯಣ ಸಂಬಂಧಕ್ಕೆ ಹೆಚ್ಚು ವಂಚಕಾಗುತ್ತದೆ. ನವದತ್ತಿಯಿಂದ ಯಲ್ಲಮನ ಗುಡ್ಡವು ನಾಲ್ಕು ಮೈಲುಗಳ ಮೇಲುಂಟು ಆದರೂ ನವದತ್ತಿಯು ಗುಡ್ಡದ ಕಲೆಪಟ್ಟಿ ತನ್ನದೇ ಎಂದು ಭಾವಿಸುವದು. ನವಲಗುಂದದಲ್ಲಿ ಯಮನೂರ ಮ್ಯುನಿಸಿಪಾಲಿಟಿಯವರು ತಾತ್ಕಾಲಿಕವಾಗಿ ನೇಮಿಸಲ್ಪಡುತ್ತದೆ. ಆದರೆ ಆದಾಯ ವೆಚ್ಚದ ಲೆಕ್ಕವು ನವಲಗುಂದದಲ್ಲಿರದು, ಯಮನೂರಿನಿಂದ ಆ ನವಲಗುಂದದ ಉಳಿಕೆ ಬಾಕಿಯಾಗುತ್ತ ಬಂತು ಈ ನಾಥೆ ಅದನ್ನು ಡಿಸ್ಟ್ರಿಕ್ಟ ಲೋಕಲಬೋರ್ಡಿಗೆ ಕೊಟ್ಟಿರುವದು ನಿಜ. ಬಟ್ಟಿನಿಂದ ಸೇರಿಸಲ್ಪಡುವ ಯಾತ್ರೆಕೃತ್ಯಗಳಿಗಾಗಿ. ಕೊಡುವ ಕಳೆಪಟ್ಟಿ, ದನಪಟ್ಟಿ, ಬಂಡಿಪಟ್ಟಿ ಮೊದಲಾದವುಗಳನ್ನು ಅಲ್ಲಿ ಕೊಡುವ ಪರಸಿಯ ಆರೋಗ್ಯ ಮತ್ತು ಆರಾಮಗಾಗೆಯೇ ಉಪಯೋಗಿಸುವದೇ ಉತ್ತಮ.

ಲೋಕಲಬೋರ್ಡಿನಲ್ಲಿ ಹೊಸದಾಗಿ ಅಧ್ಯಕ್ಷ ಉಪಾಧ್ಯಕ್ಷರನ್ನು ಆರಿಸುವಾಗ ಹಿಂದಿನ ಕಮಿಟಿಯ ಅಧ್ಯಕ್ಷನೇ ಆಗಿನ ಮಟ್ಟಿಗೆ ಅಧ್ಯಕ್ಷನಾಗುವನಷ್ಟೇ; ಆತನಿಗೆ ಕಾಸ್ಟಿಂಗ ವೋಟೂ ಉಂಟು. ಈ ವೋಟು ಇರಬಾರದೆಂದು ಎರಡನೇ ದುರಸ್ತಿಯುಂಟು, ಈ ಬಗ್ಗೆ ಕೌನ್ಸಿಲದಲ್ಲಿ ಬಲವಾದ ವಾದವಿವಾದ ನಡೆದದೆ. ಪಂಚಮಹಾಲದ ಶ್ರೀ. ಮುಕಾದಮರು ಇದರಲ್ಲಿ ಕಂಡುಬಂದ ಗುಡ್ಡದಂಥ ಹುಳುಕನ್ನು ಮುಂದೆ ಕೊಟ್ಟಂತೆ ವಿವರಿಸಿದ್ದಾರೆ.

ಈ ಬಿಲ್ಲು ಬೇರೆ ಬೇರೆ ಮಿಶ್ರಣಗಳ ಬಂಧು ಕೌತುಕಪಡುವಂಥ ೧೮ ಧಾನ್ಯಗಳ ಹುಗ್ಗಿಯಾಗಿರುತ್ತದೆ. ನಿರ್ಣಯಾತ್ಮಕ ಕಾಸ್ಟಿಂಗ ವೋಟನ್ನು ಕಸಕೊಳ್ಳುವ ಇಂಗಿತವೇ ಇದರಲ್ಲುಂಟು. ಕಾಸ್ಟಿಂಗ ವೋಟಿನಿಂದ ಚುನಾವಣೆಯಾಗದೆ ವ್ಯಥೆಗೊಂಡಂಥವರ ಪ್ರೇರಣೆಯಿಂದ ಈ ದುರಸ್ತಿಯುಂಟು. ಪಂಚಮಹಾಲದಲ್ಲಿ ಅಧ್ಯಕ್ಷರ ಚುನಾವಣೆಗಾಗಿ ಸ್ವಾನೊಬ್ಬ (ಸ್ವರಾಜ್ಯ) ಉಮೇದವಾರನಿದ್ದನು. ನನಗೆ ಪ್ರತಿಸ್ಪರ್ಧಿಯಾಗಿ ರಾಜನಿಷ್ಠನೋರ್ವನಿದ್ದನು ಇಬ್ಬರಿಗೂ ಸರಿಯಾಗಿ ಮತಗಳು ಬಿದ್ದವು ಹಳೇ ಅಧ್ಯಕ್ಷರು ನನಗೆ ನಿರ್ಣಯಾತ್ಮಕ ಮತ ಕೊಟ್ಟದ್ದರಿಂದ, ರಾಜನಿಷ್ಠನ ಮುಖಭಂಗವಾಯಿತು. ಕಾರಣ ಅಧ್ಯಕ್ಷನ ಕಾಸ್ಟಿಂಗ ವೋಟನ್ನೇ ಕಸಗೊಳ್ಳಬೇಕೆಂದು ಈ ತಂತ್ರವಿದ್ದು, ಇದಕ್ಕೆ ನನ್ನ ಪೂರ್ಣ ವಿರೋಧವುಂಟು ಈ ವಿಷಯವಾಗಿ ವಾದ ವಿವಾದ ಮುಗಿದಿಲ್ಲ ಪಂಚಮಹಾಲದಂತೆ ಧಾರವಾಡ ಜಿಲ್ಲೆಯಲ್ಲಿಯೂ ಕುಸು ಕಳೆಬಿದ್ದಿದದೆ ಸರ್ವಸಾಧಾರಣ ಜಾಹೀರ ಸಭೆಗಳಲ್ಲಿ ಕೂಡ ಅಧ್ಯಕ್ಷರಿಗೆ ಸ್ವಂತದ್ದಲ್ಲದೆ, ಕಾಸ್ಟಿಂಗ ವೋಟು ಇರುತ್ತದೆ ಅಂದಬಳಿಕ ಲೋಕಲಬೋರ್ಡದಂಥ ಮಹತ್ವದ ಖಾತೆಯಲ್ಲಿ ಅಧ್ಯಕ್ಷರ ಮಹತ್ವದ ಹಕ್ಕು ಕಸಗೊಂಡು, ಅವರನ್ನು ಕೇವಲ ಸೂತ್ರಗೊಂಬೆ ಮಾಡುವದು ಗರ್ಹಣೀಯಾಗೇ ಸರಿ.

ಲಾಹೋರದ ಆರೋಪಿಗಳ ಅಸಹಕಾರ

....೦....

ಬೇರೆ ಕಡೆಗೆ ಹೇಳಿದ ಆರೋಪಿಗಳ ಕೋರ್ಟು ಇನ್ನಿಟ್ಟು ಆರೋಪಿಗಳು ನಿರಾಹಾರದ ಮೂಲಕ ಬಹಳೇ ಹೈರಾಣಾದ್ದರಿಂದ, ಮರುದಿವಸ ಕೋರ್ಟಿಗೆ ಬರುವದು ಶಕ್ಯವಾಗಲಿಲ್ಲ. ಇವರನ್ನು ಬಿಟ್ಟೇ ಮ್ಯಾಜಿಸ್ಟ್ರೇಟರು ಸಾಕ್ಷಿಗಳನ್ನು ತೆಗೆದುಕೊಳ್ಳಲಾರಂಭಿಸಿದರು. ಆಗ ಭಗತಸಿಂಗನು ಈ ವಿಚಾರಣೆಯನ್ನು ವಿರೋಧಿಸಿದನು ಗಲ್ಲಿಗೆಹಾಕುವಂಥ ಶಿಕ್ಷೆ ಇರುವ ಅಪರಾಧದ ವಿಚಾರಣೆಯು ಆರೋಪಿಗಳ ಹಿಂದೆ ನಡೆಸಬಾರದೆಂದು ಅಂ ನೆಂದನು. ಮ್ಯಾಜಿಸ್ಟ್ರೇಟರು ಈ ಆಕ್ಷೇಪಣೆಯನ್ನು ಬರಕೊಂಡರು. ಆದರೆ ವಿಚಾರಣೆ ತಹಕೂಬ ಮಾಡಲಿಲ್ಲ ಆಗ ಎಲ್ಲ ಆರೋಪಿಗಳು ಕೋರ್ಟಿನಕೂಡ ಅಸಹಕಾರಮಾಡಿ, ವಿಚಾರಣೆಯಲ್ಲಿ ಭಾಗವಹಿಸುವದನ್ನೇ ಬಿಟ್ಟು ಬಿಟ್ಟರು.

ಬೆಳಗಾವಿಯ ಡಿಸ್ಟ್ರಿಕ್ಟ ಲೋಕಲಬೋರ್ಡ,

ಸ್ಕೂಲ ಕಮಿಟಿಯ ಚುನಾವಣೆಯು.

——(೦)——

ಈ ಕೆಳಗಿನವರು ಆಯಾ ವರ್ಗ ಮತ್ತು ಹಿತಸಂಬಂಧಗಳಿಂದ ಸ್ಕೂಲಬೋರ್ಡಿನ ಸಂಸ್ಥರಾಗಿ ಆರಿಸಲ್ಪಟ್ಟಿದ್ದಾರೆ.

೧ ಶಿಕ್ಷಣಾನುಭವಿಕ- ಶ್ರೀ. ರಾವಜಿ ಕುಲಕರ್ಣಿ.

೨ ಸ್ತ್ರೀಯರ ಪತಿಯಿಂದ- ಶ್ರೀ. ಬನುಬಾಯಿ ಆಹೋ.

೩ ಮುಸಲಮಾನ- ಮೆ. ಖತೀಬ.

೪ ಜೈನ- ಶ್ರೀ. ಅಣ್ಣಾಪ್ಪಾ ಫಡೆಪ್ಪಾ ಚೌಗುಲೆ.

೫ ಅಸ್ಪೃಶ್ಯ- ರಾವಸಾಹೇಬ ಪಾಪಣ್ಣಾ.

೬ ಹಿಂದುಳಿದವರು- ಪಿ. ಧಾರವಾಡ.

೭ ಬೆಳಗಾವಿ ಮ್ಯುನಿಸಿಪಾಲಿಟಿ- ಶ್ರೀ. ಭೀಮರಾವ ಪೋತದಾರ.

೮ ಬೈಲಹೊಂಗಲ- ಶ್ರೀ. ಭೋಮಪ್ಪಾ ವೀರಭದ್ರಪ್ಪಾ ಪಾಟೀಲ.

೯ ಜನರಲ- (೧) ಶ್ರೀ. ಉಪ್ಪಿನ, (೨) ಪಾಟೀಲ ಹತ್ತರವಾಡ (೩) ಮಜಲಿ (೪) ಹಾಕ್ಕರ ದಲಾಲ.

ಬೊಲ್ಸೆವಿಕರ ಶತಸಾಂವತ್ಸರೀಕೋತ್ಸವ

ಬೊಲ್ಸೆವಿಕ ರಾಜ್ಯಸ್ಥಾಪನೆಯು ೧೧ನೆಯ ಅಗಸ್ಟದ ದಿವಸವಾಯಿತು. ಅದು ಅವರ ಮನ್ವಾದಿ ಹಬ್ಬವು. ಪಾದಗುಡಿಯನ್ನೇರಿಸುವ ಅಷ್ಟಮಿಯ ದಿನವು. ಈ ದಿವಸದಲ್ಲಿ ಜಗತ್ತಿನ ತುಂಬ ಪಾಸವಾಗಿರುವ ಬೊಲ್ಸೆವಿಕ ಪಂಥದವರು ಹೇಗೆ ವರ್ತಿಸಬೇಕೆಂದು ಪ್ರಕಟನೆಯನ್ನು ಪ್ರಸಿದ್ಧ ಮಾಡಿದ್ದಾರೆ. ಅದರ ಸಾರಾಂಶವೇನೆಂದರೆ:-

ಜಗತ್ತಿನಲ್ಲಿ ಪ್ರತಿಯೊಂದು ದೇಶದಲ್ಲಿ ವಾಸವಾಗಿರುವಂಥ ಬೊಲ್ಸೆವಿಕರು ಅಲ್ಲಿಯ ಕೂಲಿಕಾರ ಮತ್ತು ರೈತರನ್ನು ಶಸ್ತ್ರಧಾರಿ ಮಾಡಬೇಕು. ಇಂಗ್ಲಂಡದ ಪ್ರಧಾನರಾದ ಮಿ. ಮ್ಯಾಕಡೋನಾಲ್ಡ

ಸಾಹೇಬರು ಹಿಂದೆ ನಿಂತು ಮುಚ್ಚುಮರೆಯಿಂದ ಯುದ್ಧದ ಸಿದ್ಧತೆಯನ್ನು ಮಾಡುತ್ತಿರುವದರಿಂದ, ಅವರ ಮೇಲೂ ಶಸ್ತ್ರ ಹಿಡಿಯುವ ಯೋಜನೆ ಮತ್ತು ವ್ಯವಸ್ಥೆ ಮಾಡಬೇಕು. ಮೆರವಣಿಗೆಯನ್ನು ಹೊರಡಿಸಿದಾಗ- ರಾಷ್ಟ್ರಸಂಘದ ವಿನಾಶವಾಗಲಿ, ಶಾಂತತಾವಾದಿಗಳ ಧ್ವಂಸವಾಗಲಿ ಎಂದೂ ರಾಜ್ಯಕ್ರಾಂತಿಯ ಜಯಜಯಕಾರವಾಗಲೆಂದೂ ಬೊಬ್ಬೆರೆಯಬೇಕು. ಮೆರವಣಿಗೆ ಅಥವಾ ಬೇರೆ ಒಂದು ರೀತಿಯಿಂದ ಉತ್ಸವ ಪ್ರಾರಂಭಿಸುವಂಥವರು ಗಿರಣಿ-ಕಾರಖಾನೆಗಳಲ್ಲಿ ಎರಡು ಮೂರು ದಿವಸ ಮುಂಚಿತವಾಗಿ ಸಂಪು ಸತ್ಯಾಗ್ರಹ ಪ್ರಾರಂಭಿಸಬಹುದು. ಉತ್ಪಾತಗಳಿಂದ ಉತ್ಸವಮಾಡುವದೊಂದು ಮಾದರಿಯು!!

ಲಾರ್ಡ ಲಾಯಿಡಸಾಹೇಬರ ರಾಜೀನಾಮೆ.

—(೦)—

ಮುಂಬಯಿಯ ಗವ್ಹರ್ನರರಾಗಿ ಈಗ ಇಜಿಪ್ತದಲ್ಲಿ ಹಾಯ ಕಮಿಶನರರಾಗಿ ಇರುವ ರಾಷ್ಟ್ರೀಯ ಮಹತ್ವಾಕಾಂಕ್ಷೆಗಳ ಮೇಲೆ ಸೀರೆರೆದ ಲಾರ್ಡ ಲಾಯಿಡಸಾಹೇಬರು ಹಾಯ ಕಮಿಶನರ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ರಾಜೀನಾಮೆ ಕೊಡದಿದ್ದರೆ ಈಗಿನ ಮಂತ್ರಿಗಳು ಇವರನ್ನು ಬರತರ್ಫ ಮಾಡುತ್ತಿದ್ದರು. ಈ ವಿಷಯವಾಗಿ ಪಾರ್ಲಮೆಂಟ ಸಭೆಯಲ್ಲಿ ಸೂಚಕ ಪ್ರಶ್ನೋತ್ತರಗಳು ನಡೆದವು. ಪರರಾಷ್ಟ್ರಗಳ ಮಂತ್ರಿಯಾದ ಮಿ. ಹೆಂಡರಸನ್ನಸಾಹೇಬರು ಈ ವಿಷಯವಾಗಿ ಒಂದೆರಡು ದಿವಸಗಳಲ್ಲಿ ಪಾರ್ಲಮೆಂಟ ಸಭೆಯಲ್ಲಿ ವಿಶದವಾಗಿ ಹೇಳತಕ್ಕವರಿದ್ದಾರೆ. ಕೂಲಿಕಾರ ಸರಕಾರದ ಕೂಡ ತಮ್ಮಿಂದ ನಡೆಯುವದಾಗದೆಂಬುದು ಲಾಯಿಡಸಾಹೇಬರು ರಾಜೀನಾಮೆ ಕೊಡಲುಂಟಾದ ಕಾರಣಗಳಲ್ಲಿ ದೊಡ್ಡ ಕಾರಣವಾಗಿರುತ್ತದೆ.

---

೧೬ ಬೊಲ್ಶೆವಿಕರಿಗೆ ಶಿಕ್ಷೆ.

—(೦)—

ಆಗಸ್ಟ ೧ನೆಯ ತಾರೀಖಿನೊಳಗಾಗಿ ಬೊಲ್ಶೆವಿಕ ತತ್ವಾನುಯಾಯಿಗಳ ಸಂಪು, ಸತ್ಯಾಗ್ರಹ ಮತ್ತು ಮೆರವಣಿಗೆಗೆ ಆಸ್ಪದ ಕೊಡಬಾರದೆಂದು ಫ್ರಾನ್ಸದಲ್ಲಿ ಆಳರಸರು ಪೂರ್ವಸಿದ್ಧತೆ ನಡೆಸಿದ್ದಾರೆ. ಇವರ ಕಚೇರಿ ಮತ್ತು ಬೇರೆ ಸ್ಥಳಗಳಿಗೆ ಹೋಗಿ, ಮಹತ್ವದ ಕಾಗದಪತ್ರಗಳನ್ನು ಜಪ್ತ ಮಾಡಿದರು. ಅನೇಕರನ್ನು ಹಸ್ತಗಿರ ಮಾಡಿದರು, ನ್ಯಾಯಖಾತೆಯ ಮಂತ್ರಿಯು ಎರಡು ತಾಸುಗಳವರೆಗೆ ಪೋಲಿಸ ಅಧಿಕಾರಿಗಳ ಕೂಡ ಚರ್ಚೆ ಮಾಡಿ, ಬೊಲ್ಶೆವಿಕರನ್ನು ತುರಂಗಕ್ಕೆ ಕಳಿಸಬೇಕೆಂದು ಗೊತ್ತು ಮಾಡಿದರು. ಕೂಡಲೆ ಏಳು ಜನ ಮ್ಯಾಜಿಸ್ಟ್ರೇಟರು ಚಾರ್ಜ ತಾಕೊಂಡು ವಿಚಾರಣೆಗೆ ಪ್ರಾರಂಭಿಸಿ, ೧೬ ಜನ ಬೊಲ್ಶೆವಿಕರನ್ನು ತುರಂಗಕ್ಕೆ ಕಳಿಸಿದರು.

ಧರ್ಮಕಾರ್ಯದಲ್ಲಿ ಬಾಹ್ಯಾಡಂಬರ ಬೇಡ

ನಿಜಾಮ ಸಾಹೇಬರ ಹುಕುಮು

—(೦)—

ಪೈಗಂಬರರ ಜನ್ಮೋತ್ಸವದ ದೆಸೆಯಿಂದ ನಿಜಾಮರಾಜ್ಯದಲ್ಲಿಯ ಮುಸಲಮಾನರು ವರ್ಗಣಿಯಿಂದ ಹಣ ಕೂಡಿಸಿ, ದೀಪೋತ್ಸವದಲ್ಲಿ ಹೇರಳವಾಗಿ ದ್ರವ್ಯವ್ಯಯಮಾಡುವರು. ಬೀದಿಗಳಲ್ಲಿಸಹ ದೀಪಾವಳಿಯಂತೆ ದೀಪ ಹಚ್ಚುವರು. ಈ ದುಂದಿನ ಹಣದಿಂದ ಅನಾಥ ಮತ್ತು ಅಂಗಹೀನರ ಹಿತವಾಗುವಂಥ ಕೃತ್ಯಮಾಡಿರಿ ಇದೇ ನಿಜವಾದ ಧರ್ಮವೆಂದು ನಿಜಾಮ ಸಾಹೇಬರು ಫರ್ಮಾನ ತೆಗೆದಿರುತ್ತಾರೆ.

ಜೈನರ ದೇವಾಲಯದಲ್ಲಿ

ಬಣ್ಣದ ಪಾರಿವಾಳಗಳು ಹಾರಾಡಿದವು.

—(೦)—

ಜಾಮನಗರದ ಮುನಿ ಸಗಿರನಂದಜಿ ಎಂಬವರು ಚಿಕ್ಕ ಹುಡುಗರಿಗೆ ದಿಗಂಬರದೀಕ್ಷೆ ಕೊಡುವದು ಸುಧಾರಣಾಪ್ರಿಯರಾದ ಜೈನರಿಗೆ ಅಸಹ್ಯವೆನಿಸಿ, ಅವರು ಸಭೆ ಮಾಡಿ, ಮುನಿಯ ಕೃತ್ಯವನ್ನು ನಿಷೇಧಿಸುತ್ತಾ ಬಂದರು. ಮುಂಬಯಿಯಲ್ಲಿ ಮಾಧವಬಾಗಿನಲ್ಲಿರುವ ಜೈನ ದೇವಾಲಯದಲ್ಲಿ ಪ್ರವಚನ ಮಾಡುತ್ತಿದ್ದ ಮುನಿ ರಾಮವಿಜಯಜಿಯವರು ಸುಧಾರಕರ ಮೇಲೆ ಟೀಕೆ ಮಾಡಲು- ಜಗಳವೆದ್ದಿತು. ಆಗ ಜನರು ಕೋಲು, ಬಡಿಗೆಗಳಿಂದ ಬಡಿದಾಡಿದರು. ಕಲ್ಲುಗುಂಡುಗಳಂತೂ ಬಣ್ಣದ ಪಾರಿವಾಳಗಳಂತೆ ಸಭೆಯ ತುಂಬ ಹಾರಾಡಿದವು. ಮುನಿಗಳ ಮೇಲಂತೂ ರಾಶಿ ಬಿತ್ತು. ಹೊಡೆದಾಟದಲ್ಲಿ ಮೂವರು ಭಯಂಕರವಾಗಿ ಗಾಯ ಹೊಂದಿದ್ದಾರೆ

ಸವದತ್ತಿ ಮ್ಯುನಿಸಿಪಾಲಿಟಿಯಲ್ಲಿ ಚುನಾವಣೆ ನಡೆದ ವೇಳೆಯಲ್ಲಿ ಸುಳ್ಳು ಅರ್ಜಿಯನ್ನು ಮಾಡಿದರೆಂದು ಮೂವರು ಮುಸಲಮಾನರ ಮೇಲೆ ಬೆಳಗಾವಿಯ ಆ|| ಜಡ್ಜಕೋರ್ಟಿನಲ್ಲಿ ಕೆಲಸ ನಡೆದು, ಮಹಮುದಗೌಸ ಮಾಸ್ತರರಿಗೆ ಒಂದು ತಿಂಗಳು ಸಕ್ತ ಶಿಕ್ಷೆಯಾಯಿತು. ಉಳಿದವರು ಬಂಧಮುಕ್ತರಾದರು.

ಬಚ್ಚಾಸಾಕುವಿನ ರಾಜ್ಯಸುಧಾರಣೆ.

—(೦)—

ದೇಶದಲ್ಲಿ ಶಾಂತತೆಯು ಸ್ಥಿರಗೊಂಡನಂತರ ತಾನು ಯಾವ ಯಾವ ರಾಜ್ಯಸುಧಾರಣೆ ಮಾಡಬಹುದೆಂಬದನ್ನು ಬಚ್ಚಾಸಾಕುವು ಒಂದು ಜಾಹೀರನಾಮೆಯನ್ನು ಪ್ರಸಿದ್ಧಮಾಡಿದ್ದಾನೆ-

೧ ದೇಶದಲ್ಲಿ ಪೋಲೀಸ ಮತ್ತು ಸೈನ್ಯದ ಸುವ್ಯವಸ್ಥೆ ಇಡುವೆನು.

೨ ದುಃಖತಾಪಗಳನ್ನು ಹೇಳಿಕೊಳ್ಳುವದಕ್ಕೆ ಬರುವಂಥ ಪ್ರಜರಿಗೆ ಅರಮನೆಯಲ್ಲಿ ಅನಿರ್ಬಂಧವಿರುವದು.

೩ ರಾಜಬೀದಿಗಳನ್ನು ಮಾಡಿಸಿ, ವ್ಯವಹಾರ ಉದ್ದಿಮೆಗೆ ಉತ್ತೇಜನ ಕೊಡುವೆನು. ಹಿಂದುಸ್ಥಾನದ ಕೂಡ ವಿಮಾನದ ಸಾರಿಗೆ ಇಟ್ಟು ಪ್ರವಾಸವನ್ನು ತೀವ್ರ ಮತ್ತು ಸುಲಭ ಮಾಡುವೆನು.

೪ ರಾಜ್ಯದ ತುಂಬ ಶಾಲೆಗಳನ್ನು ಸ್ಥಾಪಿಸುವೆನು. ಪರದೇಶಗಳಲ್ಲಿ ವಿದ್ಯಾಭ್ಯಾಸಕ್ಕಾಗಿ ಹೋಗುವ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿ ಕೊಡುವೆನು.

೫ ಕಾಳುಕಡಿಯು ಅಗ್ಗದಿಂದ ಮಾರುವಂತೆ ವ್ಯವಸ್ಥೆಗೊಳಿಸುವೆನು.

೬ ಯುದ್ಧ ಕಾಲದಲ್ಲಿ ಮಾಡಿದ ಶಸ್ತ್ರದ ಕಟ್ಟಳೆಯನ್ನು ರದ್ದುಮಾಡಿ, ಪ್ರಜರಿಗೆ ಮೊದಲಿನಂತೆ ಶಸ್ತ್ರಗಳನ್ನಿಡಲು ಅಪ್ಪಣೆ ಕೊಡುವೆನು.

ಉಗಿಬಂಡಿಯಲ್ಲಿ ಸಾಹೇಬನ ಕೊಲೆ.

—(೦)—

ಕಲಕತ್ತೆಯಿಂದ ಎಲ್ಡರಸೆಂಬ ಸಾಹೇಬನು ವಿಲಾಯತಿಯಿಂದ ಬರುವ ತನ್ನ ಹೆಂಡತಿಯನ್ನು ಬರಮಾಡಿಕೊಳ್ಳಲೋಸುಗ ಮುಂಬಯಿಗೆ ಬರುತ್ತಿದ್ದನು. ಆದರೆ ದಾರಿಯಲ್ಲಿ ಈತನನ್ನು ಭಯಂಕರವಾಗಿ ಗಾಯಪಡಿಸಿ, ಕೊಂದು ಹಾಕಿದಂತೆ ಬಿಲಾಸಪೂರ ಸ್ಟೇಶನದಲ್ಲಿ ಕಂಡು ಬಂತು.

---

೪೧ ದಿವಸಗಳ ನಿರಾಹಾರ.

ಲಾಹೋರಿನಲ್ಲಿ ನಡೆದ ಸ್ಯಾಂಡರ್ಸ ಸಾಹೇಬನ ಕೊಲೆಯಲ್ಲಿಯೂ ಆರೋಪಿಗಳಿರುವ ದತ್ತ ಮತ್ತು ಭಗತಸಿಂಗರು ಪ್ರಾರಂಭಿಸಿದ ನಿರಾಹಾರವು ಅವಿಚ್ಛಿನ್ನವಾಗಿದೆ. ಶಕ್ತಿಪಾತವಾಗಿದ್ದರೂ ಮುಖಕಾಂತಿಯು ಕುಂದಿಲ್ಲ. ಬಹಳ ಕ್ಷೀಣಗುಂದಿದ್ದರಿಂದ ಹೊರಸಿನ ಮೇಲೆ ಮಲಗಿಸಿಕೊಂಡು ಕೋರ್ಟಿಗೆ ತಂದರು. ಇವರಂತೆ ಉಳಿದವರು ಅನ್ನವರ್ಜಮಾಡಿ ಹತ್ತು ದಿವಸಗಳಾದವು. ದತ್ತ ಭಗತಸಿಂಗ ಮತ್ತು ಸುಖದೇವರು ಕೋರ್ಟಿನಲ್ಲಿ ನಡೆದ ವಿಚಾರಣೆಯನ್ನು ತಿಳಿಕೊಳ್ಳಲಿಕ್ಕೆ ಬಾರದಷ್ಟು ಅಶಕ್ತರಾಗಿದ್ದಾರೆಂದು ಅವರ ವಕೀಲರು ಹೇಳಿದ್ದನ್ನು ಕೋರ್ಟಿನವರು ಬರೆಕೊಂಡರು.

ಹೊಲ ಮನೆಗಳ ಮಾರಾಟ

ನಾದಾರ ಹಾಯಕೋರ್ಟ ಮದ್ರಾಸ
ಸಿವಿಲ್ ಸೂಟ ನಂಬರ
೮೮೩–೧೯೨೮

ಬಿ. ಎಮ್ ದಾಂಡೇಕರ–ವಾದಿ
ವಿರುದ್ಧ
ವಿ. ಕೆ.ಕೆ. ಆಪ್ಟೆ ಪ್ರತಿವಾದಿ

ಕೆಳಗೆ ಸಹಿ ಮಾಡಿದವರು ಕೆಳಗೆ ಬರೆದ ಸ್ಥಾವರ ಆಸ್ತಿಗಳನ್ನು ಸನ್ ೧೯೨೯ನೇ ಆಗಸ್ಟ ತಿಂಗಳ ೨ನೇ ತಾರೀಖಿನ ದಿವಸ ಮುಂಜಾನೆ ೮–೧೧ ಘಂಟೆಗೆ ಖಾಸಗಿ ರೀತಿಯಿಂದ ಒಂದೊಂದೇ ಮಾರಾಟ ಮಾಡ್ತುವರು ಇವನ್ನು ತೆಗೆದುಕೊಳ್ಳ ಲಿಚ್ಛಿಸುವರು ಕೆಳಗೆ ಸಹಿ ಮಾಡಿದವರ ಧಾರವಾಡ ಮೊತೀ ಚೌಕ್‌ದಲ್ಲಿರುವ ಆಫೀಸಿನಲ್ಲಿ ಮೇಲೆ ಹೇಳಿದ ದಿವಸ ಹಾಜರಾಗಬೇಕು.

ಆಸ್ತಿಯ ವರ್ಣನೆ.

ಮಂಗಳವಾರ ಪೇಟೆಯಲ್ಲಿ ಮನೆ ನಂ ೩೩೫೦ ಮುನಸಿಪಾಲಟಿ ನಂಬರ ೨೦೭೮–೧೦೭೯

ಇದರ ಚಕಬಂದಿ

ಪೂರ್ವ ಭಾಗೀರತಿಬಾಯಿಯ ಮನೆ, ಉತ್ತರ ಮತ್ತು ಪಶ್ಚಿಮ ಸಾರ್ವಜನಿಕ ರಸ್ತೆ, ದಕ್ಷಿಣ ವಿಠ್ಠಲ ಸಖಾರಾಮ ಸಾತೆಯವರ ಹಿತ್ತಲ ಸಂದಿಯು.

ಮನೆ ಮತ್ತು ಬೈಲ ಜಾಗಾ ಲೈಸಬರ್ಗಾರ.

ನಂಬರ ೧ ಮತ್ತು ೩ ಮು. ಪಾ ನಂಬರು ೭೭೫೧ರಿಂದ ೭೭೫೫ ಎರಡೂ ಸೇರಿ.

ಚಕಬಂದಿಯು

ಮುಂದೆ ಹತ್ತು ವರ್ಷಕ್ಕೆ ಆದರೆ ೧೦-೨೦ ಸಾವಿರ ಆದ ಕಾಣಿಕೆ ಹತ್ತಿತ? ಹೌದು ಆದೀತು ನೇಮ ಅಲ್ಲಾ

ಜನರು ಅಕ್ಕಿ ವಗೈರೆ ಕೊಡಲಿಕ್ಕಹತ್ತಿದರು? ಮುಂದೆ ತಂದು ಇಡತಿದ್ದರು

ಯಾಗ ಕಲ್ಲಿ ಒಂದಲಿಕ್ಕೆ ಆಗತಿದ್ದಿಲ್ಲಾ ಆವರು ಆಗ ಗಾಡಿ ಮೇಲಿಂದ ಕಳ್ಸಕೊಡುತ್ತಿದ್ದರು? ಕಳಿಸಿಕೊಡುತ್ತಿದ್ದರು

ಹತ್ತು ವರ್ಷದಮೇಲೆ ದಾಸೋಗ ಇಡಲಿಕ್ಕೆ ಹತ್ತಿದರು? ಹೌದು

ಭಾಂಡಿ ಎಷ್ಟು ತಿವ್ಹತೀವ್ರಿ? ಆದಾವ ಹೌದು ೫೦೦೦ ೬೦೦೦ ರೂ|| ಆದಾವು

ಅವನ್ನು ಯಾವಾಗ ಮಾಡಿಸಿದಿ? ೧೦-೧೪ ವರ್ಷ ದೊಳಗೆ ಆಗ್ಯಾವೆ

ಆ ಇವನ್ನಕ್ಕ ಅದಗೀವುಸೀದು ಯಾವಾಗ ಕಟ್ಟಿಸಿದಿ? ಈಗ ೧೦-೧೨ ವರ್ಷ ಆಯಿತು ಅದನ್ನ ಆಡಗೀ ಮೊದಲಿಂದಾ

ಜಾತ್ರಿ ವೇಳೆಗೆ ಎಷ್ಟು ಮಂದಿಗೆ ಹಾಕತೀರಿ? ಅನಾನುಕೂಲ ಇದ್ದವರಿಗೆ ಹಾಕತೇವೆ ೩೦೦-೪೦೦ ಇದೀತು

ಅಷ್ಟು ಒನರಿಗೆ ಅಡಿಗಿ ಮಾಡಲಿಕ್ಕೆ ಬೇಕಾದಷ್ಟು ಜಾಗಾ ಮತ್ತು ಭಾಂಡಿ ಅವೆ? ಅವೆ

ತೇರು ಮಾಡಿಸಲಿಕ್ಕೆ ಎಷ್ಟು ಖರ್ಚ ಹಿಡಿದಿತ್ತು? ಅಜಮಾಸು ೪೦೦೦ ರೂ|| ಆದೀತು ಲೆಕ್ಕ ಇಲ್ಲಾ ಹಾಜರೀ ಕೂಲಿಕಾರರದಷ್ಟು ಇಡತಿದ್ದೆ

ಆ ಹಾಜರೀ ಈಗ ಇಲ್ಲಾ? ಇಲ್ಲಾ

ಆ ಹಾಜರೀ ಯಾರು ಒಡತಿದ್ದರು? ಶರಣಪ್ಪ

ಆ ಕಟಗೀ ಎಲ್ಲಿಂದ ತಂದಿರಿ? ಹಳಬರಕಡಿಂದಾ ಖರೀದಿಸಿ

ಅದರದೂ ಲೆಕ್ಕ ಇಲ್ಲಾ? ಇಲ್ಲಾ

ಕಟಗೀ ತರಲಿಕ್ಕೆ ಯಾರನ ಕಳಸುತಿದ್ದಿರಿ. ವಿಶ್ವಾಸ ಇದ್ದವನ ಕಳಿಸುತ್ತಿದ್ದೆ

ಖಂಡಪ್ಪ ಬೇವುಕರ ಕಟಗೀ ಕೊಟ್ಟನೇನು? ಇಲ್ಲಾ

ಪಲ್ಲಕ್ಕಿ ಮಾಡಿಸಿ ಎಷ್ಟು ವರ್ಷ ಆಯಿತು? ೨೦ ವರ್ಷ ಆಯಿತು

ಅದನ ಭಕ್ತರು ಪ್ರೀತಿಯಿಂದ ಕೊಟ್ಟರು? ಅದೇನಿಲ್ಲಾ ಮಾಡಿಸೇದಿ

ನಿಮ್ಮ ಭಂಗಾರದ ಮತ್ತು ಬೆಳ್ಳಿಯ ಸಾಮಾನು ಯಾವಾಗ ಮಾಡಿಸಿದಿರಿ? ಈಗ ಮೂವತ್ತು ವರ್ಷದೊಳಗೆ ಮಾಡಿಸಿದ್ದೇನೆ

ಇವುಗಳಷ್ಟೆಕಿ ಭಕ್ತರು ಯಾವಾರೆ ಕೊಟ್ಟಾರೇನು? ಇಲ್ಲಾ

ಇವೆಲ್ಲಾ ಸಾಮಾನು ಶಿವರಾತ್ರಿಯಲ್ಲಿ ಉಪಯೋಗ ಆಗತಾವ? ಹೌದು

ಶಿವರಾತ್ರೀ ಜಾತ್ರಿಯವೇಳೆಗೆ ತಮ್ಮ ಪೂಜಾ ನಡೀತದಿ? ಹೌದು

ಆವಾಗ ಮಹಾದೇವರಂತ ಪೂಜಾಕಟ್ಟಿ ಪೂಜಾ ಮಾಡತಾರೆ ಅವರ ಭಾವನಾ ಇರತದೆ?

ತಮ್ಮ ಭಾವನಾದಂತೆ ಯಾರ ಸಾಧುಅಂತಾರೆ ಯಾರು ಮಹಾದೇವರು ಅಂತರೆ ಯಾರು ಸತ್ಪುರುಷ ಅಂತಾ ಮಾಡತಾರೆ

ಶಿವರಾತ್ರಿಯೊಳಗೆ ತಮಗೆ ಮಹಾದೇವರಂತೆ ವೇಷಹಾಕಿ ಪೂಜಾಮಾಡತಾರೆ? ಹೌದು

ಹಿಂಗ ಮಹಾದೇವರಂತ ಮಾಡರಿ ಅಂತಾ ತಾವು ಹೇಳಿ ? ಪೂಜಾ ಮಾಡೋಕ್ರವು ನಾಹೇಳೇನಿ ಮಹಾದೇವ ಅಂತಾ

ಬೆಳ್ಳಿ ಹೂವು ವಗೈರೆ ನನ್ನ ಮೇಲೆ ಹಾಕರಿ ಅಂತಾ ತಾವು ಹೇಳಿವಿರೇನು? ಪೂಜಾದಿಂದಾ ಮಾಡ್ಯನಹಾಕರಿ ಅಂದರೆ ಹಾಕತಾರೆ ಬ್ಯಾಡಾ ಅಂದರೆ ಬಿಡತಾರೆ

ತಾವು ತಮ್ಮ ಬಾಯಿಂದ ಮಹಾದೇವರು ಅಂತಾ ತಾವು ಹೇಳೀರೇನು? ನಾನು ತಿಳಕೊಂಡೇನಿ ನನ್ನ ಮನಸ್ಸಿನೊಳಗೆ ನನಿಷ್ಠಳಗೆ ಮತ್ತು ನನ್ನ ಮಹಾದೇವರೊಳಗೆ ಭೇದಇಲ್ಲಾ ಅಂತಾ ನನ್ನ ಶಿಷ್ಯರಿಗೆ

ಅಂದರೆ ತಮ್ಮ ಪೂಜಾ ಅಂದರೆ ಮಹಾದೇವರ ಪೂಜಾ ಅಂತಾ ತಿಳಕೊಂಡೀರಿ? ಹೌದು ನನ್ನ ತಿಳುವಳಕೆ

ಅಂದರೆ ತಮ್ಮ ರಥೋತ್ಸವ ತಮ್ಮಪೂಜಾ ಮಾಡೋದರಲ್ಲಿ ಮಹಾದೇವರ ಪೂಜಾ ಆಗತದೆ ಅಂತಾ ತಾವು ಹೇಳಕೋತೀರಿ? ಹೌದು ಅದು ನನ್ನ ಭಾವನಾ ಅದೆ

ತಾ| ೨೪—೭—೧೯೩೯

ತಾವು ಜಾತ್ರಿ ಮಾಡ್ರಿ ತೇರು ಮಾಡ್ರಿ ಅಂತಾ ಯಾರಿಗೆ ತಿಳಿಸಿದ್ರಿ? ಮುಖ್ಯ ಭಕ್ತರಿಗೆ- ಶರಣಪ್ಪನಿಗೆ ಹೇಳಿದೆ.

ಪೂಜಾ ಮಾಡರಿ ಅಂತಾ ಏನಂತಾ ಹೇಳಿದಿರಿ? ದೇವರಿಗೆ ತಮಗೆ ಅಭೇದ ಬುದ್ಧಿಯಿಂದ ಹೇಳಿದೆ.

ಶರಣಪ್ಪ ಈಗ ಎಷ್ಟು ವರ್ಷ ಆಯಿತು ಬಂದು? ೧೫ ೨೦ ವರ್ಷ ಆಯಿತು

ತಮ್ಮ ಸೇವಾಮಾಡಿಕೊಂತಾ ಇಲ್ಲೇ ಇದ್ದಾರೆ? ಇದ್ದಾರೆ.

ನಾಗಲಿಬಾಯಿ ಒಂದು ಭಂಗಾರದ ಕಿರೀಟ ಮಾಡಿಸಿಕೊಟ್ಟಾಳೆ? ಹೌದು ಕೊಟ್ಟಾಳೆ

ರಾಮಣ್ಣ ಮಹಿಷಿ? ನನಗೆ ಗೊತ್ತದೆ

ಅವಾ ತಮಗೆ ರಾಜಗೊಂಡೆ ಬೆಳ್ಳಿಗೊಂಡೆ ಮಾಡಿಸಿಕೊಟ್ಟಾನೆ? ಇಲ್ಲಾ

ಅವಾ ಬೆಳ್ಳಿ ಕೊಟ್ಟನೇನು? ಇಲ್ಲಾ

ತಾವು ಎಲ್ಲಿ ಮಾಡಿಸಿದಿರಿ? ಇಲ್ಲಾ

ಯಾರು ಅವರು ಅಕಸಾಲರು? ಇಬ್ಬರು ತೀರಿಕೊಂಡಾರೆ ಒಬ್ಬ ಇದ್ದಾನೆ

ಈಗ ಇದ್ದಾವಾ ಯಾರು? ಬಸವಂತಾ

ಈ ಬೆಳ್ಳಿ ಮತ್ತು ಭಂಗಾರ ಯಾರ ಅಂಗಡಿಯಲ್ಲಿ ಖರೀದಿಮಾಡಿದಿ? ನನಗೆ ಗೊತ್ತಿಲ್ಲಾ

ಇದಕ್ಕೆ ಎಷ್ಟು ಖರ್ಚ ಹಿಡೀತು ಅನ್ನುವದು ಲೆಕ್ಕ ಇಲ್ಲಾ? ಇಲ್ಲಾ ಅದೇನು ಲೆಕ್ಕ ಇಲ್ಲಾ

ಜಾತ್ರಿ ಆದನಂತರ ಈ ಸಾಮಾನು ಹುಬ್ಬಳ್ಳಿಯವಲ್ಲಿ ಇಡತೀರಿ? ಇಲ್ಲಾ ಉಜ್ಜಣ್ಣವರಲ್ಲಿ ಇಡತೇವೆ

ಈ ಭಾಂಡೇ ಸಾಮಾನು ಎಲ್ಲಾ ಮಾಡಿಸಿದಿರಿ? ಏನೂ ಲೆಕ್ಕ ಇಲ್ಲಾ ಬಂದ ರೊಕ್ಕಾ ಆಗಿಂದಾಗ್ಗೆ ಖರ್ಚ

ಆ ಭಾಂಡೇನೂ ಯಾರು ಮಾಡಿಸಿಕೊಂಡು ಬಂದರು? ಶರಣಪ್ಪ ಶಿದ್ದಪ್ಪ ಏನಕೀ ಜನಾ

ತೇರು ಮಾಡಿದ ಬಡಿಗಾರ ಯಾರು ಅವಾ? ಕಾಳಪ್ಪಾ ಅಂತಾ ಇದ್ದಾನೆ

ಶಿವರಾತ್ರಿ ಜಾತ್ರಿಯಲ್ಲಿ ಕಾಣಿಕೆ ತಗೊಳ್ಳಲಿಕ್ಕೆ ತಾವು ಏನು ಇಡತಿದ್ದಿರಿ? ಮುಗಿ ಇಡತಿತ್ತ ತಾಬಾಣ ಇಡತಿದ್ವಿ, ಇಲ್ಲಾ ಪೆಟ್ಟಿಗಿ ಇಡತಿದ್ವಿ

ಈ ಕಾಣಿಕೆ ಎಲ್ಲಿ ಇಡತಿದ್ದರು? ನೇಮುದ್ದಲ್ಲಾಕ್ಕೆ ಯಾಗೆ ಕೊಡೋದು, ಒಹಾಳ. ಮುಗ್ಯಾಗೂ ಹಾಕತಿದ್ದರು

ತಮಗೆ ಏನು ಬರತಿದ್ದವಲ್ಲಾ? ಪೆಟ್ಟಿಗ್ಯಾಗ ಮುಗಿಯೊಳಗೆ ಹಾಕತಿದ್ದೆ

ಈ ರಾಮಪ್ಪ ಮಹಿಷಿ ಜಾತ್ರಿಗೆ ಬರತಿದ್ದಾ? ಯಾವಾಗರ ಬಂದು ಕೂತು ಹೋಗತಿದ್ದಾ ನಿರಂತರ ಬರೋದಿಲ್ಲಾ

ಜಾತ್ರಿ ಮುಗಿದನಂತರ ಜಾತ್ರಿ ಮುಗಿದನಂತರ ಎಷ್ಟು ಆಯಿತು ಅಂತಾ ಯಾರು ನೋಡತಿದ್ದರು? ಶರಣಪ್ಪ ವಿಶ್ವಾಸದವ ಇದ್ದಾ ಅವಾ ಸಮಕ್ಷಮಾ ಎಣಿಸತಿದ್ದಾ

ಜಾತ್ರೀದು ಲೆಖ್ಖಾ ಇಡತಿದ್ದಿರೇನು? ಇಲ್ಲಾ

ಇದೇನು ಹಣಾ ಬರತಿತ್ತಲ್ಲಾ ಇದನ್ನು ಹುಬ್ಬಳ್ಳಿಯವರ ಮನಿಗೆ ಕಳಿಸಿಕೊಡತಿದ್ದರೇನು? ಇಲ್ಲಾ

ಇತ್ತಲಾಗ ಐದುಕಡಿಗೆ ೧೦ ವರ್ಷ ಜನಾ ಹೆಚ್ಚು ಬರಲಿಕ್ಕೆ ಹತ್ತಿತ? ಹೌದು ಜನಾ ಜಾಸ್ತಿ ಬರಲಿಕ್ಕೆ ಹತ್ತಿತು

ಎಲ್ಲಾ ದೇಶದ ಕಡಿ ಮುಂದೀನವೂ ಬರತದೆ ಮುಂಬಯಿ ಪುಣೆ ಮುಂತಾದ ಕಡೆ ಜನರೂ ಬರಲಿಕ್ಕೆ ಹತ್ತೀದೆ? ಈಗ ಜನಾ ಜಾಸ್ತ ಬರತದೆ

ಹೋದ ವರ್ಷ ಎಷ್ಟು ಬಂತು? ಹೋದ ವರ್ಷ ಕನಿಷ್ಠ ೧೨೦೦೦ ದ ಮೇಲೆ ಬಂತು

ಬೆಂಗಳೂರಲ್ಲಿ ಗೋಳೀಬಾರು.

ಪ್ರಮುಖರ ದಸ್ತಗಿರಿ.

೫೦ ಜನರು ಘಾಯವಾದರು
ಒಬ್ಬನು ಸತ್ತನು.

—(೦)—

ಬೆಂಗಳೂರ ಸುಲ್ತಾನ ಪೇಟೆಯಲ್ಲಿ ಹೋದ ವರ್ಷ ಆದಂಥ ಗಲಭೆಯ ಸ್ಮಾರಕವೆಂದು ಅಲ್ಲಿಯ ನಿವಾಸಿಗಳು ಮಂಗಳವಾರ ದಿವಸ ಹರತಾಳ ಮಾಡುವಂತೆ ಜಾಹೀರಾತುಗಳನ್ನು ಪ್ರಸಿದ್ಧ ಮಾಡಿದರು. ಆದರ ಮೇಲೆ ೫೦ ಜನ ಪ್ರಮುಖರ ಸಹಿಗಳಿರುವವು. ಜಾಹೀರಾತಿನ ಪ್ರಕಾರ ಹರತಾಳವಾಯಿತು. ಜನರು ತಂಡತಂಡಾಗಿ ಕೂಡಿದರು. ಸುಲ್ತಾನಪೇಟ ಮತ್ತು ಅಕ್ಕೀಪೇಟಿಯಲ್ಲಿ ಯಾರೂ ಹೋಗಬಾರದೆಂದು ಮ್ಯಾಜಿಸ್ಟ್ರೇಟರು ನೋಟೀಸು ಹಚ್ಚಿದರು. ಆದರೆ ಅಲ್ಲಿಯ ಸ್ಥಿತಿ ನೋಡಲು ಜನರು ನೇರಿದರು. ಸಾಯಂಕಾಲವಾಯಿತು. ಪೋಲಿಸರು ಗುಂಡು ಹಾರಿಸಿದರು. ಅರ್ಧ ತಾಸಿನವರೆಗೆ ಸತತವಾಗಿ ಗುಂಡು ಹಾರಿದವು. ೫೦ ಜನರು ಘಾಯವಾಗಿದ್ದಾರೆ. ಎದೆಗೆ ಗುಂಡು ಒಡೆದು ಒಬ್ಬ ಹುಡುಗನು ಆಸ್ಪತ್ರೆಯಲ್ಲಿ ಸತ್ತನು. ಪಟ್ಟಣದ ತುಂಬ ಪೋಲೀಸರು ಮತ್ತು ಶಸ್ತ್ರಧಾರಿಯಾದ ರಾಖುತರ ಕಾವಲಿದ್ದು, ಶ್ರೀ. ಜಮಖಿಂಡಿ ಬಿ.ಎ.ರವರನ್ನೂ ಸುಬ್ರಹ್ಮಣ್ಯರನ್ನೂ ದಸ್ತಗಿರ ಮಾಡಿದ್ದಾರೆ. ಇನ್ನೂ ಅನೇಕರನ್ನು ಹಿಡಿಯುತ್ತಿದ್ದಾರೆ

ಜಾಹೀರ ನೋಟೀಸು

ರುದ್ರಪ್ಪಾ ಮೇಟಿಯವರ ಸಾ| ಶಿಂಗಾರಕೊಪ್ಪ ತಾ| ಸವದತ್ತಿ ಇವರಿಗೆ–

ನಾನು ಕೆಳಗೆ ಗುರ್ತುಮಾಡುವ ಈರವ್ವಾ ಕೋಂ ರುದ್ರಪ್ಪಾ ಮೇಟಿಯವರ ಸಾಕೀನ ಗದಗ ಕಟ್ಟಿ ಈಕೆಯು ನಿನಗೆ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ– ನೀನು ನನ್ನ ಮದವಿ ಗಂಡನಾಗಬೇಕು. ನೀನು ನನ್ನ ಕೂಡ ಪ್ರಪಂಚ ಮಾಡದೆ ಕೆಟ್ಟ ರೀತಿಯಿಂದ ವ್ಯಸನಿಯಿಂದ ಉಟ್ಟ ಸೀರಿಯ ಮೇಲೆ ಮನೀಬಿಟ್ಟು ಹೊರಗೆ ಹಾಕಿದಿ. ಆಗ ನನ್ನ ಮೈಮೇಲಿದ್ದ ದಾಗಿನೆಗಳು ಅಂದರೆ–

೧ ಬಂಗಾರ ಬಳಿ ಜೋಡು ಒಂದು ಅಜಮಾಸ ೫|| ತೊಲಿ ಇವುಗಳ ಕಿಮ್ಮತ್ತು ರೂಪಾಯಿಗಳು ೧೧೦
೨ ಬಂಗಾರದ ಗುಂಡಿನ ಟೀಕಿ ಒಂದು ಇದರ ಅಜಮಾಸ ಕಿಮ್ಮತು ರೂಪಾಯಿಗಳು ೫೦
೩ ಬಂಗಾರದ ಸರಾ ಒಂದು ಇದರ ಅಜಮಾಸ ಕಿಮ್ಮತ್ತು ರೂಪಾಯಿಗಳು ೫೦
೪ ಹಿಂದಿನ ಸೀರಿ ಒಂದು ಇದರ ಕಿಮ್ಮತ್ತು ರೂಪಾಯಿಗಳು ೩೦

ಇವುಗಳ ಹೊರತು ಚಿಲ್ಲರ ದಾಗೀನೆಗಳನ್ನು ಸಹಿತಾ ಕಸಕೊಂಡು ಮನೆಬಿಟ್ಟು ಹೊರಗೆ ಹಾಕಿದಿ. ಆ ಮಾತಿಗೆ ಐದು ವರ್ಷ ಆಯಿತು. ಆಗಿನಿಂದ ನೀನು ಬುದ್ಧಿಬಂದವನಾಗಿ ಕರಕೊಂಡು ಹೋಗುವಿಯೆಂದು ತಿಳಿದು ನಾನು ಎರಡನೇ ಕಡೆಗೆ ಸಾಲಾ ಮಾಡಿ ಉಪಜೀವನ ಮಾಡಿಕೋತಾ ಬಂದಿರುತ್ತೇನೆ. ಈ ಬಾಬತು ರಕಮು ರೂಪಾಯಿ ೪೦೦ ಆಗಿರುತ್ತದೆ. ಈನಂತರಾ ಪುನಃ ನನಗೆ ಸಾಲ ಹುಟ್ಟುವ ರೀತಿ ಇಲ್ಲಾ. ಮತ್ತು ಈ ಸಾಲದ ದಸಿಂದ ಸದರ ಸಾಹುಕಾರರ ತಗಾದಿ ಬಹಳೇ ಆಗಿರುತ್ತದೆ. ಕಾರಣ ಈ ನೋಟೀಸು ಕೊಡುವ ಭಾಗಬಿತ್ತು. ನೀನು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ನನಗಾದ ಸಾಲದ ಬಾಬತು ೪೦೦ ರೂಪಾಯಿಗಳು ವ ಇವುಗಳ ಬಡ್ಡಿ ಹಣಾ ಸಹಿತ ತೀರಿಸಿ ಮತ್ತು ನನ್ನ ಮೈಮೇಲಿನ ದಾಗೀನೆಗಳನ್ನು ಸಹಾ ತೆಗೆದುಕೊಂಡದವು ನನಗೆ ತಿರಿಗಿ ಕೊಟ್ಟು ನನ್ನನ್ನು ಕರಕೊಂಡು ಹೋಗಿ ಚಲೋ ರೀತಿಯಿಂದ ನೀನು ನನ್ನ ಕೂಡಾ ಪ್ರಪಂಚ ಮಾಡತಕ್ಕದ್ದು. ಪಂಚರ ಸಮಕ್ಷಮಾ ಜಾಮೀನು ಕೊಟ್ಟು ಕರಕೊಂಡು ಹೋಗಿ ಚಲೋ ರೀತಿಯಿಂದ ಪ್ರಪಂಚ ಮಾಡಬೇಕು. ಇದರ ಈ ಪ್ರಕಾರ ಮಾಡದಿದ್ದರೆ ನಾನು ಯರಡನೇದವನನ್ನು ಉಡಿಕಿಮಾಡಿಕೊಂಡೇನು. ಆನಂತರ ನಿನ್ನ ಹಕ್ಕು ನನ್ನ ಮೇಲೂ ನನ್ನ ಉಡಿಕಿ ಮಾಡಿಕೊಂಡವನ ಮೇಲೂ ಸಹಾ ಬಿಲ್ಕುಲ ನಡಿಯಲಿಕ್ಕಿಲ್ಲಾ. ಈ ಬಗ್ಗೆ ನಿನಗೆ ನಾನು ಬಳಿದೆ ಅಂದರೆ ತಾ| ೧೯-೬-೧೯೨೮ ಇಸ್ವಿ ದಿವಸ ವಿಜಯ ವರ್ತಮಾನಪತ್ರದಲ್ಲಿ ಜಾಹೀರ ನೋಟೀಸು ಸಹಾ ಕೊಟ್ಟಿದ್ದೆ. ಅದಕ್ಕೆ ನೀನು ಏನೂ ಉತ್ತರ ಸಹಾ ಕೊಡಲಿಲ್ಲಾ. ಕಾರಣ ಈಗ ನಿನಗೆ ಪುನಃ ನೋಟೀಸು ಕೊಟ್ಟಿರುತ್ತೇನೆ. ಈ ನೋಟೀಸಿನ ಖರ್ಚ ಸಹಾ ನಿನ್ನ ತಲೆಯ ಮೇಲೆ ಅದೆ ತಿಳಿಯುವದು. ತಾ| ೩೦-೬-೧೯೨೮

ಈ ಎಡಗೈ ಹೆಬ್ಬಟ್ಟಿನ ಗುರ್ತ ಈರವ್ವಾ ಕೋಂ ರುದ್ರಪ್ಪಾ ಮೇಟಿಯವರ ಈಕಿದು ಅದೆ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಸೂಚನೆ:— ನಿಮ್ಮ ಔಷಧ ಬೇಡುವಾಗ ಯಾವ ವರ್ತಮಾನಪತ್ರದ ಜಾಹೀರಾತಿನ ಮೂಲಕ ಈ ಬೇಡಿಕೆಯನ್ನು ಮಾಡುವಿರೆಂಬುದನ್ನು ಬರೆಯಬೇಕು.

ನಿಮಗೆ ಉತ್ತಮವಾಗಿ ಉರಿಯುವ

ಒಣ ಕಟ್ಟಿಗೆ ಬೇಕೇ?

ನಮ್ಮ ಕಟ್ಟಿಗೆಯ ಅಡ್ಡೇದಲ್ಲಿ ಉತ್ತಮ ತರದ ದಿಂಡಲು, ಮತ್ತು ಮುಂತಾದ ಒಣ ಕಟ್ಟಿಗೆಗಳು ಬಹು ಸೋವಿಯ ದರದಿಂದ ಸಿಗುತ್ತವೆ. ಮಳೆಗಾಲದಲ್ಲಿ ಒಣಗಿದ ಕಟ್ಟಿಗೆಗಳು ನಮ್ಮಲ್ಲಿಯಂತೆ ಎರಡನೇ ಕಡೆಗೆ ಸಿಗುವದು ಕ್ವಚಿತವು. ಮಳೆಗಾಲ ದಿವಸದಲ್ಲಾಗುವ ಹಸೀ ಕಟ್ಟಿಗೆಯ ತಾಪವನ್ನು ತಪ್ಪಿಸಬೇಕೆಂದು ನಾವು ಮುದ್ದಾಮ ಕಟ್ಟಿಗೆಯ ಅಡ್ಡೆಯನ್ನು ಜನರ ಸೋಯಿಗಾಗಿ ಇಟ್ಟಿರುತ್ತೇವೆ. ಗ್ರಾಹಕರು ಇದರ ಲಾಭವನ್ನು ತಕ್ಕೊಳ್ಳಬೇಕು.

ಅಡ್ಡೆಯ ಮಾಲಕ,
ಬಾಳಾಚಾರ್ಯ ಕಾಂತಾಚಾರ್ಯ
ಮುನವಳ್ಳಿ.
ಧಾರವಾಡ.
(ಸೆಂಟ್ರಲ-ಬ್ಯಾಂಕಿನ ಗಡಿಯಾರದ ಎದುರಿಗೆ)

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ತ್ರೈ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶುಕ್ರವಾರ ತಾರೀಖು ೨ ನೇ ಅಗಸ್ಟ ೧೯೨೯ (ಸಂಚಿಕೆ ೧೭೨

ನೋಟೀಸು

ಈ ನೋಟೀಸಿನ ಮೂಲಕ [illegible]

[illegible]

[illegible] ಮಾಡಿದೆ.

ಡೆಪ್ಯುಟಿ ನಾಡಕರ್ಣಿ ಅಫೀಸ, ಧಾರವಾಡ. ತಾ। ೨೫-೭-೨೯

C. V. DESHPANDE, ಡೆಪ್ಯುಟಿ ನಾಡಕರ್ಣಿ.

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

೫೪- ಮಂಗಳವಾರಪೇಟೆ, [illegible] ಸಾಹುಕಾರ [illegible] ಕಟ್ಟಿ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸಾಲವು [illegible] ಮುದ್ದತಿಯ [illegible] ದರವಿನಿಂದ ಬೇಕಾದಷ್ಟು [illegible] ದರವಿನ [illegible] ಸಾಲ ಕೊಡಲಾಗುವದು. [illegible] ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರ [illegible] ನೋಟುಗಳು ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ [illegible] ತಿಂಗಳಿಗೆ [illegible] ಅವುಗಳ [illegible] ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಣಿ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ದರವಿನಿಂದ ದೊಡ್ಡ ದರವಿನ [illegible] ಕೊಡಲಾಗುವದು. [illegible] ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ [illegible] ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ- ಆಪರೇಟಿವ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹುಂಡಿಗಳು [illegible] ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಠೇವಣಿ ಮತ್ತು ಬೇರೆ ತರದ ಡಿಪಾಝಿಟುಗಳಿಗೆ [illegible] ದರ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಝಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳುವ ಭತ್ತಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರು. ೧೩-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೨-೭-೨೯ ನೇ ಇಸ್ವಿ

ಶ್ರೀ

ಆ ವಿಜಯಂ ಶ್ರೀಶಪ್ರಿಯ
ಶ್ರೀ ವಸುಮತಿಯ ನಗಿಸಿರೆ ಸುಹಿತಪಥಿಕೆಗಳಿಂ ॥
ದೀ " ವಿಜಯಂ " ಶ್ರೀಶಕರುಣ ।
ನಾ ವಿಹಿತಂಗಳ ವಿಸಂಸಿಸಲಿಪ್ಪುದು ಸಾಜಂ ॥೧॥

ಶ್ರೀ ಲಕ್ಷ್ಮೇಶ್ವರ ವಕೀಲರ ಸವಾಲಿಗೆ ಶ್ರೀಗಳವರ ಉತ್ತರ.

ಆವಾಗ ಏನಾದರೂ ಹಣಾ ಬರತದೇನು? ಇಲ್ಲಾ

ಪ್ರತಿ ಸೋಮವಾರ ಪೂಜಾ ಆಗತದೇನ? ಆಗತದೆ

ಶಿವಾನಂದ ಅನ್ನುವರದು ಗೊತ್ತದೇನು? ಗೊತ್ತದೆ

ಅವಾ ಕೆಲವು ದಿವ್ಸ ಪಾಠಶಾಳಾ ಇಟ್ಟಿದ್ದನೇನು? ಕೇಳಿದರು ನಾ ಹೇಳಿದೆ ಕೆಲವು ದಿವ್ಸ ಇಟ್ಟಿದ್ದಾ

ಎಲ್ಲಿ ಇಟ್ಟಿದ್ದಾ? ಉತ್ತರದ ದಿಕ್ಕದ ಆದಕ್ಕೆ ಆಗಿನಿಂದ ಪಾಠಶಾಳಾ ಅಂತಾ ಹೆಸರು ಬಿದ್ದದೆ? ಅದೇನಿಲ್ಲಾ

ತಾವೇನು ಹಣಾ ಕೊಟ್ಟಿರೇನು? ಇಲ್ಲಾ

ಅವಾ ಪಾಠಶಾಳಾದ ವಿಷಯಕ್ಕೆ ವರ್ಗಣಿ ಮಾಡಿದ್ದಾ ತಮಗೆ ಗೊತ್ತದಯೇನು? ಅಷೆಕೆ ಅವನೇನು ಮಾಡಿದ್ದನು ಏನು ನನಗೆ ಗೊತ್ತಿಲ್ಲಾ

ಆ ಮಂಡಪ್ಪ ಬೆಳಮಕರ ಇವರು ವರ್ಗಣಿ ಮಾಡಿದ್ದ? ಅಷ್ಟೆಕೇನು ಮಾಡಿದರೋ ನನಗೆ ಗೊತ್ತಿಲ್ಲ

ತಾವು ವೇದ ವೇದಾಂತಗಳನ್ನು ಸ್ವೀಕರಿಸಿಕೊಂಡೀರಿ? ಓದಿಕೊಂಡೇನೆ ಅವೇಅಂತಲ್ಲಾ ಮತ್ತೂ ಓದಿಕೊಂಡೇನೆ

ಸಂಶಯ ಬಂದರೆ ಕೇಳತಾರೆ? ಕೇಳತಾರೆ

ತಮಗೆ ಇಲ್ಲಿ ದ್ವೇಷದ ಶತ್ರುರು ಯಾರೂ ಇಲ್ಲಾ? ಇಲ್ಲಾ

ತಾವೇನೂ ಮಠ ಮಾಡಿಕೊಂಡ್ಡೀರಿ ಅವನ ಹೆಸರೇನು? ಗುರಪ್ಪಾ ಅವಾ ತಮ್ಮ ಮಠಸ್ತ್ಯರ ಅಂತಾ ಅಂತೀರಲ್ಲಾ? ಶಿದ್ದಪ್ಪನ ಮಗಾ? ಹೌದು

ಈಗ ಶಿದ್ದಪ್ಪ ಮುಖಸ್ತ್ಯರ ಇದ್ದು ಎಷ್ಟು ವರ್ಷ ಆಯಿತು? ೧೦-೧೨ ವರ್ಷ ಆಯಿತು

ಅವಾ ತಮ್ಮ ಸೇವಾನೂ ಮಾಡ್ತ್ಯಾರೆ? ಮಾಡ್ತ್ಯಾನೆ

ಅವರು ಬಹಳ ಸೇವಾನೂ ಮಾಡತ್ಯಾರೆ! ಮಾಡ್ತ್ಯಾರೆ

ಈ ಗುರಪ್ಪಗೆ ಸಂನ್ಯಾಸ ದೀಕ್ಷಾ ಕೊಟ್ಟೀರಿ ತಾವು? ಕೊಟ್ಟೇನಿ

ಮತ್ತು ಅವಗೂ ಶಾಸ್ತ್ರ ಕಲಿಸೀರಿ? ಹುಂ ಶಾಸ್ತ್ರ ಓದತಾನೆ

ತಾವು ದೇಹಬಿಟ್ಟನಂತ್ರ ದೇಹ ಇಡಲಿಕ್ಕೆ ಇಲ್ಲೆ ಒಂದು ಸಮಾಧಿ ಅದೆ? ಅದೆ

ತಮ್ಮ ದೇಹ ಅಲ್ಲೇ ಇಡತಕ್ಕದ್ದು ಅಂತಾ ನಿಮ್ಮ ಅಪೇಕ್ಷಾ ಅದೆ? ಅದೆ ಆದರೆ ಕಾಲಕ್ಕೇನಾಗತದೋ ಯಾರು ಹೇಳಬೇಕು

ಅದೇನು ಸಮಾಧಿ ಅದೆಅಲ್ಲಾ ಅದರಮೇಲೆ ಸಿದ್ಧಾಗಣೇಶ ಯತಿನಾಂ ಸಮಾಧಿಸ್ಥಾನಂ ಅಂತಾ ಬರೆದದೆ? ಹೌದು

ಈಗೂ ಅಲ್ಲೆ ಪೂಜಾಮಾಡತಾರೆ? ಇಲ್ಲಾ

ತಮ್ಮ ದೇಹ ಇಟ್ಟನಂತರ ಆ ಸಮಾಧಿ ಪೂಜಾ ಆಗಬೇಕು ಅಂತಾ ತಮ್ಮ ಅಪೇಕ್ಷಾ ಅದೆ? ಅಪೇಕ್ಷಾ ಅದೆ ಅಪೇಕ್ಷಾ ಇದ್ದಂತೆ ಸಿದ್ಧಿ ಆದನೋ ಇಲ್ಲೋ ಅನ್ನೋದು ಯಾರು ಹೇಳಬೇಕು

ಆ ಜಾಗಾ ಕಾಯಮ ಉಳಿಯೂವಹಾಗೆ ಬಾಜಾಪಿ ಕಲ್ಲಿನಿಂದ ಕಟ್ಟಿದ್ದ? ಬಾದಾಪಿ ಕಲ್ಲೂ ಅವೆ ಎರಡನೇ ಕಲ್ಲೂ ಅವೆ

ಅದಕ್ಕೆ ಖರ್ಚು ಎಷ್ಟು ಆಗಿದ್ದೀತು? ಅದು ೧೦ ವರ್ಷಗಟ್ಟಲೆ ಕಟ್ಟುತಿತ್ತು ೨೦೦೦೦ ರೂ॥ ಆಗಿದ್ದೀತು

ಆ ಇಮಾರತು ತಮ್ಮ ಆಜ್ಞಾಪ್ರಕಾರಾ ಕಟ್ಟಿತೀದೆ? ಆಟ್ಟಿತೇದೆ

ಅದಕ್ಕೇನು ತಾವು ಹೆಸರು ಕೊಟ್ಟೀರೇನು? ಕೊಟ್ಟಿಲ್ಲಾ

ಆ ಜಾಗಾದಮೇಲೆ " ಮಠ " ಅಂತಾ ಬರೆದದೆ? ಆ ಸಮಾಧಿ ಜಾಗಾದ ಮೇಲೆ " ಈ ಮಠ " ಅಂತಾ ಬರೆದದೆ

ಇವೆಲ್ಲ ಉತ್ತರಗಳು ನಿಮ್ಮ ಪಶ್ಚಾತ ನಡೀಬೇಕೆಂದು ನಿಮ್ಮ ಅಪೇಕ್ಷಾ ಆದೇನು? ಇಲ್ಲೊ? ಇವೆಲ್ಲ ಉತ್ತರಗಳು ನನ್ನ ಪಶ್ಚಾತ ನಡಿಯಬೇಕೆಂದು ನನ್ನ ಅಪೇಕ್ಷಾ ಅದೆ

ಇಲ್ಲಿ ತಾವೇನು ಇದ್ದರಿ ತಾವು ಹ್ಯಾಂಗೆ ಇದ್ದಿರಿ ಅದೇ ಜ್ಯಾಗಾಂದಮೇಲೆ ಬರಬೇಕೆಂದು, ನೀವು ಮಠ ಮಾಡಿಕೊಂಡೀರಿ? ಹೌದು

ತಾವು ಹ್ಯಾಂಗೆ ಉತ್ಸವಗಳನ್ನು ನಡಿಶೀರಿ ಅದರಂತ್ರೆ ಗುರಪ್ಪನವ ನಡಿಸಬೇಕು ಅಂತಾ ತಮ್ಮ ಇಚ್ಛಾ ಅದೆ? ಹೌದು

ತಮ್ಮ ಕಡಿಗೇನು ಕಾಣಿಕೆ ತಗೊಂಡ … ಅದರ ಆಸ್ತಿ ಉತ್ಸವ ಎಷ್ಟು ಬಾಕದೆ? ಒರತದೆ

ತಾ॥ ೨೫-೭-೨೯

ದೇವತಾಣೆ ಮಾಡಿ ಖರೇ ಹೇಳುತ್ತೇನೆ.

ಈ ದಿವಸ ಕೋರ್ಟು ಸ್ವಲ್ಪ ತಡವಾಗಿ ಸುರುವಾಯಿತು. ಇಲ್ಲಿ ಏ ಕೆ ಲಕ್ಷ್ಮೇಶ್ವರ ಇವರ ಕ್ರಾಸಿಗೆ ಶ್ರೀ ಸಿದ್ಧಾರೂಢಸ್ವಾಮಿ ಗಳು ಕೊಟ್ಟ ಉತ್ತರಗಳು ಮಾತ್ರ ಕೊಡಲ್ಪಟ್ಟಿವೆ.

ದೇವರ ಆಣೆ ಮಾಡಿ ಖರೇ ಹೇಳುತ್ತೇನೆ.

ಕನ್ನಡ ನನಗೆ ಓದಬರಿಯಲಿಕ್ಕೆ ಸ್ವಲ್ಪ ಬರತಿದೆ ಮೃತ್ಯುಪತ್ರ ಬರೆಯುವ ಮೊದಲು ಅದರ ನಕಲು ವಗೈರೆ ಮಾಡಲಿಲ್ಲಾ ಹಾಗೆಯೇ ಒಮ್ಮೆಗೆ ಬರಿಯಿತು ನನ್ನ ಮೃತ್ಯುಪತ್ರ ಮಠಸ್ತರನಿಗೆ ಮಾಡಿಸುವವರ ಸಂಬಂಧಿ ಹೆ … ಅವನೇ ಕಾಗದ ಬರಿಸಿಕೊಂಡು ಬಂದನು … ಗದಕ್ಕೆ ಯಾರೂ ಸಾಕ್ಷಿ ಹಾಕಿದರು … ತ್ತುಯಿಲ್ಲಾ. ಭಕ್ತೀನ ಪತ್ರ ಮಾಂದಿ ಪ … ಕಸ್ತ್ಯರ … ಡಿಗೆ ಇಟ್ಟವು ಮಠಾ … ರಕೊಟ್ಟೇನಿ ಅವು ಅವರ ಕಡಿಗೆ … ಪೂಜಾ ಆದ ನಂತರ ಕಾವಿ ವ … ಾಡತಾರೆ ಮೊದಲ ನಾನು ಕಾವಿ ಹೆಚ್ಚುತಿದ್ದೆ ಅದಕ್ಕೆ ಮರ್ಯಾದಿ ಕೊಡುವ ಬಗ್ಗೆ ಅದನ್ನು ಪೂಜಾ ಮಾಡತೇವೆ ಅದಕ್ಕೆ ಕಾವಿ ಪೂಜಾ ಮಣ್ಣಿನ ಮಗಿ ಪೂಜಾ ಅದೆ ಕಾವಿ ಹಾಗೇ ಇಟ್ಟಿರುತ್ತಾರೆ. ಈ ರಸ್ತೆ ದುರಸ್ತ ಮಾಡುವದು ಮ್ಯುನಿಸಿಪಾಲಿಟಿಯವರು ಮಾಡತಾರೆ ದೀವಗಿ ಮ್ಯುನಿಸಿಪಾಲಿಟಿಯವರು ಹಚ್ಚತಾರೆ ಇಲ್ಲೆ ಕಾಯಿ ಹುಣ್ಣು ಮಾರಲಿಕ್ಕೆ ಅಂಗಡಿ ಹಚ್ಚಿರುತ್ತಾರೆ. ಕರಿ ಬಾಂಧಣಿಗಿ ಕಟ್ಟಿಸಿದ್ದಕ್ಕೆ ೨೦೦೦-೩೦೦೦ ರೂಪಾಯಿ ಹಿಡಿದಿರಬೆಕು. ಜನರು ಇಲ್ಲಿಗೆ ಬಂದವರು ಕುಡಿಯೋದು ಸ್ನಾನಮಾಡುವದಿಲ್ಲಾ ಅದರಲ್ಲೇ ಮಾಡತಾರೆ ಕೆರೆಗೆ ನೀರು ಬರುವುದರ ದೆಶೆಯಿಂದಾ ಅರ್ಜಿ ವಗೈರೆ ಮಾಡಿಲ್ಲಾ ಯಾರಾದರೂ ಮಾಡಿದ್ದರೆ ನನಗೆ ಗೊತ್ತಿಲ್ಲಾ. ಕೆರೆಗೆ ಪಂಪು ಹಚ್ಚಿ ನೀರು ತಗೋತೇವಿ ನೀರು ಕಡಿಮೆ ಈಗ ಆಗುವದಿಲ್ಲಾ. ಕಟಿಗಿ ಇಡಲಿಕ್ಕೆ ಜಾಗಾ ಅದೆ ಆ ಕಟ್ಟಿಗಿ ಕೊಳ್ಳುತ್ತೇವೆ ಭಕ್ತರು ಕಳಿಸುವದಿಲ್ಲಾ. ಕರ್ಜಗಿ ಸ್ಟೇಶನದಿಂದ ಎಂದೂ ಕಟ್ಟಿಗಿ ಕಳಿಸಿಲ್ಲಾ ಈಗ ನಮ್ಮಲ್ಲೆ ೨೦೦-೩೦೦ ಗಾಡಿ ಕಟ್ಟಿಗೆ ಇರಬಹುದು. ಉತ್ತರ ದಿಶೆದ ಇಮಾರತಿಯಲ್ಲಿ ಇಳಕೊಳ್ಳಲಿಕ್ಕೆ ಜಾಗಾ ಇದೆ ನನ್ನ ಪರವಾನಗಿಯಿಂದಾ ಅಲ್ಲಿ ಇಳಕೊಳ್ಳತಾರೆ

ಅಡಗಿ ಮಾಡಿಕೊಳ್ಳುತ್ತಾರೆ. ಅದರ ಮೇಲೆ ಇಮಾಲಯ ಇದೆ ಅದರ ಕಿಮ್ಮತ್ತು ೧೦೦೦೦ ಆದೀತು. ಕೈಲಾಸ ಮಂಟಪಕ್ಕೆ ೭೫೦೦೦ ಆದೀತು. ಫೋಟೋಗ್ರಾಫ. ಲೋಕೋದ್ಧಾರಕ ಶಿವಯೋಗ ಮಂದಿರ ಇದರ ಮೇಲೆ ಉಪನಿಷತ್ತ ವಾಕ್ಯ ಬರೆದಿರುತ್ತದೆ. ಲಕ್ಷ್ಮಪ್ಪಾ ಕಮತಕರ ಕಲ್ಲುಪಾಸಿ ಮಾಡಿಕೊಟ್ಟಿಲ್ಲಾ ನಾನೇ ಇಲ್ಲೆ ಮಾಡಿಸಿದೆ. ಅವನು ಕಳಸಕ್ಕೆ ಭಂಗಾರ ಕೊಟ್ಟಿಲ್ಲಾ ಕೊಟ್ಟಿದ್ದರೆ ನನ್ನ ಕೈಗೆ ಬಂದಿಲ್ಲಾ. ಈ ಮಂಟಪ ಕಟ್ಟಿದ ನಂತರಾ ಸರಕಾರದವರು ದಂಡಾ ಕಟ್ಟಿದರು ನೂರು ರೂಪಾಯಿ ಕೊಟ್ಟಿರಬಹುದು. ಮೊದಲು ನಾನು ಈ ಮಠದೊಳಗೆ ಲಗ್ನ ಮುಂಜಿ ವಗೈರೆ ಮಾಡಿಸುತ್ತಿದೆ. ಹೊರಗಿನ ಜನರಿಗೆ ಮುಂಜಿ ಲಗ್ನ ವಗೈರೆ ಇಲ್ಲಿಗೆ ಬಂದು ಮಾಡಿಕೊಂಡು ಹೋಗಲಿಕ್ಕೆ ತಿಳಿಸಿದೆ. ನೋಟೀಸ ಕೊಟ್ಟಿಲ್ಲಾ ಶರಣಪ್ಪ ನೋಟೀಸ ಕೊಟ್ಟದ್ದು ನನಗೆ ತಿಳಿಸಿಲ್ಲಾ.

ಫರ್ಸ್ಟ ಕ್ಲಾಸ್ ಕೋರ್ಟಿನ ತಪಾಸಣೆ

ತಾ|| ೨೬, ೨೭ ಮತ್ತು ೨೮ ರಲ್ಲಿ ಕೋರ್ಟು ನಡೆಯಲಿಲ್ಲ. ತಾ|| ೨೬ ನೆಯ ಶುಕ್ರವಾರ ದಿವಸ ಸಾಯಂಕಾಲ ೪ ಘಂಟೆಗೆ ಧಾರವಾಡದಿಂದ ೧ನೇ ವರ್ಗ ಸ್ಪೆಷಲ್ ಜಜ್ಜರಾದ ಮಿ|| ಸಬನೀಸ ಇವರು ಇಲ್ಲಿಗೆ ಬಂದು ಶ್ರೀ ಸಿದ್ಧಾರೂಢ ಸ್ವಾಮಿಗಳ ಮಠವನ್ನೆಲ್ಲಾ ನೋಡಿಕೊಂಡು ಹೋದರು. ಶರಣಪ್ಪನ ಇನಾಂತಿಯು ಬಾಗಲ ಮೇಲೆ ಇರುವ "ಶ್ರೀ ಸಿದ್ಧಾರೂಢ ಸ್ವಾಮಿಮಠ" ಎಂದು ಬರೆದುದನ್ನೂ, ಕೋರಿನ ಗದ್ದಿಯ ಮೇಲೆ "ಶ್ರೀ ಸಿದ್ಧಾರೂಢ ಪ್ರಸನ್ನ" ಮತ್ತು ಉಪನಿಷತ್ ವಾಕ್ಯ ಮೊದಲಾದವುಗಳನ್ನೂ, ಶ್ರೀ ಸಿದ್ಧಾರೂಢ ಲೋಕೋದ್ಧಾರ ಶಿವಯೋಗಿ ಮಂಟಪದಲ್ಲಿ ಬರೆದ ವೇದೋಪನಿಷತ್ ವಾಕ್ಯಗಳನ್ನೂ, ಬಾದಾಮಿಕಲ್ಲಿನ ಮಠದಲ್ಲಿರುವ "ಶ್ರೀ ಸಿದ್ಧಾರೂಢಸ್ವಾಮಿಯವರ ವೃಕ್ಷ ೧೮೭೮ ನೇ ಶಕೆಯಲ್ಲಿ ಪ್ರಾರಂಭವಾಗಿ ೧೮೫೮ ನೇ ಶಕೆ ಮಾಘ ಶುದ್ಧ ೧೪ ಗೆ ಮುಗಿಯಿತು." ಎಂದು ಬರೆದದ್ದನ್ನೂ, ಶ್ರೀ ಚಿದ್ಘನಾನಂದಸ್ವಾಮಿ ಸಮಾಧಿ ಬ್ರಾಹ್ಮಣರ ಪಾಕಶಾಲೆ ಡೋಣಿ, ಮುಂತಾದವುಗಳನ್ನೂ, ಆ ಮೇಲೆ ಭಜನಾ ಮಂಟಪ, ದೊಡ್ಡ ಅಡಗಿ ಮನೆ. ಅಲ್ಲಿರುವ ಭಾಂಡೆ, ಒಲಿ ವಗೈರೆ ಮತ್ತು ಇತರ ಸಾಮಾನುಗಳನ್ನೂ, ಪಾಠಶಾಲೆ, ಉಪದೇಶಸ್ಥಾನ, ಶ್ರೀ ಸಿದ್ಧಾರೂಢಸ್ವಾಮಿಗಳ ಮತ್ತು ಅವರ ಅಗ್ರಗಣ್ಯ ಶಿಷ್ಯ ಕಬೀರದಾಸರವರ ತೈಲಚಿತ್ರಗಳನ್ನೂ, ಪಾಠಶಾಲೆಯ ಅಡಗಿಮನೆ, ಖೋಲಿಗಳನ್ನೆಲ್ಲ ನೋಡಿಕೊಂಡದ್ದಲ್ಲದೆ, ಕಟಗಿ ಪಖಾರ, ಕೆರೆ, ಕಾಲುವೆ, ಮ್ಯುನಿಸಿಪಾಲಿಟಿ ಕಂದೀಲುಗಳನ್ನು ನೋಡಿಕೊಂಡು ಇವುಗಳನ್ನೆಲ್ಲ ಟಿಪ್ಪಣಿ ಮಾಡಿಕೊಂಡು ಹೋದರು,

ತಾ|| ೨೯-೭-೨೯

ಪ್ರಶ್ನೆ- ಸಪಾರೇ ಚಿಕ್ಕಪ್ಪನ ಕೈಯಲ್ಲಿ ಎಂದಾದರೂ ಹಣ ಕೊಟ್ಟಿದ್ದಿರೇನು? ಉ ಎಂದೂಯಿಲ್ಲ

ಕೈಲಾಸ ಮಂಟಪದ ಜಾಗಾ ಅದ ಅಶ್ಟ ಅ ಖರೀದಿ ಜಾಗಾಕ್ಕೆ ರೂಪಾಯಿ ಯಾರು ಕೊಟ್ಟರು? ನಮ್ಮ ಪಕ್ಕ್ಯಾರ ಕೊಟ್ಟಿದ್ದಾ

ನೀವಿದ್ದಾಗ ಕೊಟ್ಟರೇನು? ಅವನೇನು ಕಚೇರಿಯಲ್ಲಿ ಕೊಟ್ಟನೋ ಏನೋ ನಮಗೆ ಗೊತ್ತಿಲ್ಲ

ತಾವು ಹೇಳಿದಿರಿ ಖರೀದಿ ತಗೊಂಡ ಹೊಲಾ ಮನಿ ಅವೆ ಅಂತ ಹೇಳಿದಿರಿ ಅದರ ಉತ್ಪನ್ನ ಎಷ್ಟು ಬರುತ್ತದೆ? ಅಜಮಾಸು ನಾಲ್ಕೈದು ಸಾವಿರ ಬರುತಿರಬಹುದು ನನ್ನ ಮುಕ್ತ್ಯಾರನಿಗೆ ಪಕ್ಕಾ ಗೊತ್ತದೆ

ತಾವು ಇನಕಂಟ್ಯಾಕ್ಸ ಕೊಡತೀರೇನ? ಕರಾರ ಇಲ್ಲ

ದೀವಟಿ ನಾಗಪ್ಪನವರು ಟಾಂಗಾ ಇಟ್ಟಾರ? ನಾನು ಅವರ ಟಾಂಗಾದಲ್ಲಿ ಹೋಗುತ್ತೇನೆ ಪೇಟೆ ಟಾರಗಲ್ಲಿ ಹೋಗುತ್ತೇನೆ ಇಂದಿದ್ದರೆ ನಾನು ಭಾಡಗಿ ಟಾಂಗಾದಲ್ಲಿ ಹೋಗತೇನೆ

ಅವರು ಟಾಂಗಾ ಇಟ್ಟು ೭-೮ ವರ್ಷ ಆಗಿದ್ದೀತು? ಆಗಿದ್ದೀತು

ಅವರ ಟಾಂಗಾ ಇಗಲ್ಲೂ ಬರತದೆ? ಬರತದೆ

ನಾಗಪ್ಪ ಭೀಮಪ್ಪನಿಗೆ ಏನು ಆಗತಾನೆ? ಅಣ್ಣಾ

ಅವನ ಮನಿಗೆ ಹೋಗಿ ಆರು ತಿಂಗಳಾಗಿದ್ದೀತು? ಆಗಿದ್ದೀತು

ಭೀಮಪ್ಪ ಸಾವಕಾರನಿದ್ದಾನೆ? ಅದನ್ನು ಹ್ಯಾಗೆ ಹೇಳಲಿ

ಭೀಮಪ್ಪಗ ಸಾಲಾ ಇದ್ದದ್ದು ತಮಗೆ ಗೊತ್ತದೆ ಏನು? ನನಗೇನೂ ಗೊತ್ತು ಇಲ್ಲ

ಅವಾ ಸಾಲಾ ಕೇಳಲಿಕ್ಕೆ ಬಂದಿದ್ದನಲ್ಲ! ಯಾವದರ ದೆಸೆಯಿಂದ? ಅದೇನು ದೀವಿಗಿ ಹಚ್ಚುತ್ತಾರಲ್ಲಾ ಅದರ ದೆಶೆಯಿಂದ

ಹಣಮಂತಪ್ಪ ಬೆಳಮಕರ ಮ ಪುಂಡಲೀಕಪ್ಪಾ ಸಪಾರೆ ಇವರ ಮನಿಗೆ ಯಾವಾಗಾದರೂ ಹೋಗತೀರೇನು? ಯಾವಾಗಾದ ಹೋಗತೇನಿ

ಎಷ್ಟು ದಿವಸ ಆಗಿದ್ದೀತು? ಆಗಿದ್ದೀತು ಮೂರು ನಾಲ್ಕು ತಿಂಗಳು ಆಯಿತು

ಮಹಿಮಿ ರಾಮಪ್ಪನ ಮನೆಗೆ ಹೋಗಿದ್ದೀರಿ ಎಷ್ಟು ವರ್ಷ ಆಯಿತು? ಹೋಗತೇನೆ ೩-೪ ತಿಂಗಳ ಆಗಿದ್ದೀತು

ದಾಬಳಕರ ಪಸಂಕರಾಯನ ಗುರ್ತು ಅದೆ? ಅವರು ಇರಲಿಕ್ಕೆ ಹತ್ತಿ ಎಷ್ಟು ತಿಂಗಳ ಆಯಿತು? ೧-೨ ತಿಂಗಳ ಆಗಿದ್ದೀತು

ಈ ಊರಾಗ ರುದ್ರಾಕ್ಷಿಮಠ ಅದೆ ಲಿಂಗಾಯತ ಜನರದು? ಹೂ.

ಪಾವಟೆ ವಕೀಲರದು ಗುರ್ತು ಅದೆ? ವಿಶೇಷ ಗುರ್ತು ಇಲ್ಲಾ

ಅವರು ಲಿಂಗಾಯತರು ಅಲ್ಲಾ! ಹೌದು

ತಾವು ಆ ರುದ್ರಾಕ್ಷಿಮಠಕ್ಕೆ ಹೋಗಬಾರದು ತಾವು ಲಿಂಗಾಯತರಲ್ಲಾ ಅಂತಾ ಅವರು ದಾವೆ ಮಾಡಿದ್ದರು? ಹೌದು

ಆ ದಾವೆ ಲಿಂಗಾಯತರ ತರ್ಫೆ ಆಯಿತು? ಅದೇನು ನನಗೆ ಗೊತ್ತಿಲ್ಲ

ವೀರಪ್ಪಾ ಕುಲಕರ್ಣಿ ತಿಲಾಪೂರದವರ ಗುರ್ತು ಅದೆ ಏನು? ಗುರ್ತು ಅದೆ

ಕಲ್ಮರದ್ದು ಯಾರ ಜಾಗಾದ ಮೇಲೆ ಅದೆ? ಶಾಂತಪ್ಪನ ಜಾಗಾದ ಮೇಲೆ ಅದೆ

ಈ ಇಮಾರತು ಯಾರ ಸ್ಥಳದ ಮೇಲೆ ಅದೆ? ಅದು ಶಾಂತಪ್ಪನ ಜಾಗಾದ ಮೇಲೆ

ಕಬೀರನ ಸಮಾಧಿ ವಗೈರೆ ಯಾವ ಜಾಗಾದ ಮೇಲೆ ಅವೆ? ಅವು ಶಾಂತಪ್ಪನ ಜಾಗಾದ ಮೇಲೆ ಅವೆ

ಆರೂಢರ ಲಕ್ಷಣವೇನು? (ತಕರಾರು)

ಸಚ್ಚಿದಾನಂದ ಪರಬ್ರಹ್ಮ ಪರಂಜ್ಯೋತಿ ಇವು ಪರಬ್ರಹ್ಮ ಲಕ್ಷಣಗಳೇನು? ಅವೆಲ್ಲ ಪರಬ್ರಹ್ಮ ಲಕ್ಷಣಗಳು

ಬಾದಾಮಿ ಕಲ್ಲಿನ ಮಠ ಕಟ್ಟಿದಾಗ ನಿಮಗೆ ಖರ್ಚ ಎಷ್ಟು ಬರತಿತ್ತು? ೪೦೦೦ ರೂಪಾಯಿ

ಕಲ್ಮರದ್ದು ಇರುವ ಜಾಗಾ ಶಾಂತಪ್ಪನದೇನು? ಅಲ್ಲ ಅದು ನನಗೆ ದಾನ ಕೊಟ್ಟದ್ದು

ಕೈಲಾಸವೆಂಬುದು ಶ್ರೀ ಸಿದ್ಧಾರೂಢ ಸ್ವಾಮಿಯವರ ಲೋಕೋದ್ಧಾರ ಶಿವಯೋಗ ಮಂಟಪಕ್ಕೆ

ಅದು ಹೆಸರು ಅರ್ಥವೇನು? ಅದು ಹೆಸರಿಟ್ಟದ ಕರೆಯೋದಕ್ಕೆ

ನಿಮ್ಮ ಪಸ್ತುತ ಪೂಜಾ ಮಾಡಬೇಕು ಅಂತಾ ಹೇಳಿರಿ ಯಾರ ಪೂಜಾ ಮಾಡಬೇಕಂತಾ ನಿಮ್ಮ ಇಚ್ಛಾ ಅದೆ? ಗುರುಪ್ಪಗ ಮಾಡಬೇಕಂತಾ ಇಚ್ಛಾ ಅದೆ

ಮುನಿಯಾರ್ಡರ ಬರತಾವೆ ಅಂತಾ ಹೇಳಿದಿರಿ ಅವು ಯಾರ ಹೆಸರಲೆ ಬರತಾವೆ? ಅವು ನನ್ನ ಹೆಸರಲೆ ಬರತಾವೆ

ಶಂಕರಶಾಸ್ತ್ರಿಗಳು ಭಾಗವತ ಪುರಾಣ ಹೇಳಲಿಕ್ಕೆ ಬರತಾರೆ ಅವರೇನು ತಮ್ಮ ಹಕ್ಕಿನಿಂದ ಬರತಾರೋ ಏನು ತಮ್ಮ ಪರವಾನಿಗಿಯಿಂದ ಬರತಾರೋ? ನನ್ನ ಆಜ್ಞಾದಿಂದ

ಮತ್ತು ತಾವು ಹೇಳಿದಿರಿ ಸಂಶಯ ನಿವಾರಣ ಮಾಡಲಿಕ್ಕೆ ಅಂತಾ ಹೇಳಿದಿರಿ ಅವರೇನು ತಮ್ಮ ಹಕ್ಕಿನಿಂದ ಬರತಾರೋ ತಾವು ಹೇಳಿದರ ಬರತಾರೋ? ಹೇಳಿ ಕಳಿಸತದೆ ಬಾ ಅಂದರೆ ಬರತಾರೆ

(ಮುಂದೆ ಸಾಗುವದು)

R N. B. 1443

ಸಾಪ್ತಾಹಿಕ ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಮಂಗಳವಾರ ತಾರೀಖು ೬ ನೇ ಅಗಸ್ಟ ೧೯೨೯ (ಸಂಚಿಕೆ ೩೦

ಶ್ರೀ ಲಕ್ಷ್ಮೇಶ್ವರ ವಕೀಲರ ಸವಾಲಿಗೆ ಶ್ರೀಗಳವರ ಉತ್ತರ.

ಪ್ರಶ್ನೆ ಮತ್ತು ಉತ್ತರ ತಿಳಿಯಬೇಕೆಂದು ಎರಡನ್ನೂ ವಿವರವಾಗಿ ಕೊಟ್ಟಿದ್ದೇವೆ.

ತಾ|| ೨೧-೭-೨೯

ತಾವು ಹುಬ್ಬಳ್ಳಿಗೆ ಬಂದು ಎಷ್ಟು ವರ್ಷ-ವರ್ಷ? ಶ್ರೀ ಗೌರೀಹುಣ್ಣಿವಿ ಜಾತ್ರೆ ಸುರು ಆಯಿತ? ೮ ೧೦ ವರ್ಷಕ್ಕ-ಆಯಿತು ವಿಶೇಷ ನೆಪ್ಪಿಲ್ಲ

ಆ ಗೌರೀಹುಣ್ಣಿವಿ ಜಾತ್ರೆ ಆಗುವವರೆಗೆ ವೃ ಭಕ್ತಾಳ್ಕೆ ಹೋಗತಿದ್ದಿರೋ? ಇಲ್ಲಿ ಒಂದೆರಡು ೨ ವರ್ಷ ಹೋದೆ ಅನಂತರ ಹೋಗುವ ಪ್ರಸಂಗ ಬರಲಿಲ್ಲಾ

ಆದರ ನಂತರ ಭಕ್ತ ಜನರು ತಂದು ಕೊಡುತ್ತಿದ್ದರ? ತಂದು ಕೊಡುತ್ತಿದ್ದರು ಕರಕೊಂಡು ಹೋಗುತ್ತಿದ್ದರು

ಈ ಗೌರೀಹುಣ್ಣಿವಿ ಜಾತ್ರೆ ಪ್ರಾರಂಭ ಆಗುವವರೆಗೆ ಬರೇ ನಮಸ್ಕಾರ ಮಾಡಿ ಹೋಗುತ್ತಿದ್ದರು ಪೂಜಾ ಮಾಡತಿದ್ದಿರಿ? ಒಬ್ಬಿಬ್ಬರು ಬಂದು ಮಾಡತಿದ್ದರು ನಮಸ್ಕಾರ ಮಾಡಿ ಹೋಗೋ ಮಂದೀನ ಬಹಳ

ಅವಾಗ ತಾವು ಇಲ್ಲೆ ಮಲಕೋತಿದ್ದಿರಿ? ಇಲ್ಲೇ ಮಲಕೋತಿದ್ದೆ

ಜನರು ಬರೋದು ಎಷ್ಟು? ೫೦ ಮಂದಿ ಒಮ್ಮೆ ದೊಡ್ಡತೇ ಬರತ್ತಿತ್ತು ನೇಮ ಇಲ್ಲಾ

ಅವಾಗ ಗೌರೀಹುಣ್ಣಿವಿ ಜಾತ್ರೆ ಪ್ರಾರಂಭವಾಗುವ ಕಾಲಕ್ಕೆ? ಒಂದು ಭಾವಿ ಮತ್ತು ಎರಡು ಚಪ್ಪರ ಇಷ್ಟೇ ಇತ್ತು

ಗೌರೀಹುಣ್ಣಿವಿ ಜಾತ್ರೆ ಮಾಡುವ ಕಾಲಕ್ಕೆ ತಮ್ಮ ಕಡೆಗೆ ಹಣಾ ಇತ್ತೇನು? ತಿಳ್ಳ ಏನು ಇದ್ದಿಲ್ಲ.

ಆ ಕಾಲಕ್ಕೆ ತಮ್ಮ ಸೇವಾ ಮಾಡಿಕೋತ ಎಷ್ಟು ಮಂದಿ ಇರತಿದ್ದರು? ಅವಾ ಗುರುಪಾದಯ್ಯಾ ಒಬ್ಬನೇ ಬ ಕಿಯವರು ಸಂಜೀತನಕ ಇದ್ದು ಅಲ್ಲಿಂದ ಹೋಗಬೇಕು

ಈ ಗೌರೀಹುಣ್ಣಿವಿ ಜಾತ್ರೆ ಭಕ್ತರು ತಮ್ಮ ಪ್ರೀತಿಯಿಂದ ಮಾಡಿದರ? ಅದೇನಿಲ್ಲಾ ಮಾಡು ಅಂತಾ ಹೇಳಿದೆ ಆದರಂತೆ ಮಾಡಲಿಕ್ಕೆ ಹತ್ತಿದರು

ಗೌರೀಹುಣ್ಣಿವಿ ಜಾತ್ರೆ ಉತ್ಸವ ಯಾಕೆ ಪ್ರಾರಂಭ ಮಾಡಿದಿರಿ? ನನ್ನ ಪ್ರೀತೀಸ ಅದಾ ಮುಖ್ಯ ಉದ್ದೇಶ ಜನರ ಧರ್ಮಜಾಗ್ರತಿ ಆಗಲಿ ಅಂತ ತಮ್ಮ ಉದ್ದೇಶ ಇತ್ತೇನ? ಅದೇನು ಇಲಾ

ಜನರು ತಮ್ಮ ಕಡಿಗೆ ಬರಲಿ ಬೋಧಾಮೃತ ಕೇಳಲಿ ಅಂತಾ ತಮ್ಮ ಉದ್ದೇಶ ಇತ್ತೇನ? ಇಲ್ಲ

ಇದೇನು ದೇವರ ಸೇವಾ ಅದ ಏನ? ಇಲಾ

ಇದೊಂದು ಪಾರಮಾರ್ಥದ ಸೇವಾ ಅಂತ? (ಹೌದು) ಹಾಂಗೇನೂ ಇಲ್ಲಾ

ಈ ಜಾತ್ರೆ ಒಂದೇ ದಿನ್ಸ ಆಗತಿತ್ತ? ಒಂದೇ ದಿನ್ಸ ಆಗತಿತ್ತು

ಈ ಜಾತ್ರೆಯೊಳಗೆ ಏನೇನು ಜಗತಿತ್ತ? ಸಂಜೆಕಡಿಗೆ ಪೂಜೆ ಮಾಡತಿತ್ತ ಅನಂತರ ತೇರು ಆಗತ್ತಿತ್ತು

ಈ ತೇರು ಮೊದಲನೇ ವರ್ಷದ ಕಟ್ಟಿಸರು ಆಯಿತೇನ? ಹೌದು ಮೊದಲನೇ ವರ್ಷದ ತಟ್ಟಿ

ಈ ತೇರು ಭಕ್ತಜನರೇ ಮಾಡಿದರ? ಅದೇನಿಲ್ಲಾ ನಾ ಕಟ್ಟಲಿಕ್ಕೆ ಹೇಳಿದೆ ಅವರು ಮಾಡಿದರು

ತೇರಿಗೆ ಎಷ್ಟು ಖರ್ಚು ಆಯಿತ? ೪-೮ ರೂಪಾಯಿ ಆಗುತ್ತಿತ್ತು

ಶಾಯಮ. ತೇರು ಯಾವಾಗ ಆಯಿತ? ಶಿವರಾತ್ರಿ ಉತ್ಸವ ಸುರು ಆದ ಕಾಲಕ್ಕೆ

ಭಕ್ತಜನರು ತಮಗೆ ಕೊಡಸತಿದ್ದರ? ನಾನು ಕೇಳ್ರತಿದ್ದೆ ಏಳಿ ಅಂತಾ ಅಂದರೆ ಎಳತಿದ್ದರು

ಗೌರೀಹುಣ್ಣಿವಿ ಎಷ್ಟು ವರ್ಷ ನಡೀತು? ಅಕುಮಂದು ೧೦ ವರ್ಷ ನಡೆದಿದ್ದೀತು

ದಿವಟಿ ಮಲ್ಲಪ್ಪನ ಗುರ್ತ ಇತ್ತು? ಇತ್ತು

ನೆರಸಪ್ಪ ದಿವಟಿಯವರ ಗುರ್ತ ಅ? ಅದೆ

ಗೌರೀಹುಣ್ಣಿವಿ ಜಾತ್ರೆಗೆ ಕಾಲಕ್ಕೆ ಅವರು ಬರತಿದ್ದರ? ಬರುತ್ತಿದ್ರು ಅನೇಕ ಜನಾ ಬರತಿದ್ರು

ಜಾತ್ರೆಯೊಳಗೆ ಖಟಪಟಿ ಯಾಕ ಮಾಡತಿದ್ದರು? ಇಲ್ಲೆ ಇರತಿದ್ದೆ ಅಳು ವಸ್ತ್ರೈರೆ ಹಚ್ಚತಿದ್ದೆ ಅವರ ಕಡಿಂದಾ ಮಾಡಸತಿದ್ದೆ

ಭಕ್ತರ ಪೈಕಿ ಯಾರಾರ ಖಟಪಟಿ ಮಾಡತಿದ್ದರೇನ? ಬಂದರೆ ಯಾರಾರ ಒಂದರಿ ಹೇಳತಿದ್ದೆ ಆಳಗಳಿಂದ ಮಾಡಸೋದೇ ಬಹಳ

ಜಾತ್ರಿ ಖರ್ಚ ಎಲ್ಲಿಂದ ಮಾಡತಿದ್ರಿ? ಯಾರು ಭಕ್ತರು ಬಿಕ್ಷಾ ಕೊಡತಿದ್ದರು ಅದರೊಳಗಿಂದ ಮಾಡತಿದ್ದೆ

ಜನರು ಜಾತ್ರಿ ಸಲುವಿಂದ ವರ್ಗಣಿ ಮಾಡಿದ್ದು ತಮಗೆ ಗೊತ್ತದೇನು? ಇಲ್ಲಾ

ನರಸಪ್ಪ ದಿವಟಿ ವರ್ಗಣಿ ಮಾಡಿದ್ದರೇನು? ಗೊತ್ತಿಲ್ಲಾ ಅದೇನಿಲ್ಲಾ ಅವರೇನು ವರ್ಗಣಿ ಮಾಡತಿದ್ದಿಲ್ಲಾ

ಜಾತ್ರಿಗೆ ಅಜಮಾಸು ಎಷ್ಟು ಜನ ಕೂಡತಿತ್ತು? ಇದ್ದಾರ ಜನ ಬಂದ ತೇರ ಎಳಿಯೋ ಕಾಲಕ್ಕೆ ಒಂದು ಸಾವಿರ ಜನಾ ಆಗತಿತ್ತು

ಹೊರಗಿನವರು ಬರತಿದ್ದರೇನ? ಆಕಸ್ಮಾತ ಸಕ್ಕೀ ಜನಾ ಬಂದರೆ ಹಾಂಗೆ ಹೋಗತ್ತಿದ್ದರು.

ಅಲ್ಲಿ ಊಟ ಹಾಕತಿದ್ದಿರೇನ? ಊಟ ... ಹಾಕತ್ತಿದ್ದಿಲ್ಲಾ ಸೇವಾ ಮಾಡುವವರಿಗೆ ಹಾಕತಿದ್ದೆ

ಜನರ ಕಡಿಂದ ಅಕ್ಕಿ ಬ ... ವಸ್ತ್ರೈರೆ ಬರತಿದ್ದವು? ಅವಾಗೇನೂ ಬರತಿದ್ದಿಲ್ಲ

ಆರಿ ಆಗ ಎಣ್ಣಿದ್ದು ಇತ್ತು? ಸಂತಾಲು ಇತ್ತು

ಮುಂದೆ ಗೌರೀಹುಣ್ಣಿವಿ ಜಾತ್ರಿ ಬಂದ ಮಾಡಿದಿರಿ? ಹೌದು

ಯಾಕ ಬಂದ ಮಾಡಿದಿ? ಸ್ಥಳ ಬಂದು

ಶಿವರಾತ್ರಿ ಜಾತ್ರೆ ಯಾವಾಗ ಸುರು ಆಯಿತು? ಗೌರೀಹುಣ್ಣಿವಿ ಬಂದು ಆದನಂತರ ಯಾವಾಗ ಶಿವರಾತ್ರಿ ಒಮ್ಮೆ ಆವಾಗ

ಆ ಗೌರೀಹುಣ್ಣಿವಿ ನಡಿಯುವ ಕಾಲಕ್ಕೆ ಅದು ಬಂದೇ ಉತ್ಸವ ಹೌದು

ಈ ಶಿವರಾತ್ರಿ ಜಾತ್ರೆ ಸುರು ಆದ ಕಾಲಕ್ಕೆ ಆ ... ವಿಚಾರದೂ ಕಟ್ಟಿ ಕೂಡತಿತ್ತು? ಇಲ್ಲ ... ಮಾಡತಿದ್ರು ನನ್ನ ಹೆಸರ ... ಸುಧಾರ ಮಾಡತಿದ್ರು ಹೇಳಿದರೆ ಕೃಪೆ ಇಲ್ಲಿ ಇತ್ತಿದ್ದ

ಈ ಶಿವರಾತ್ರಿ ಎಷ್ಟು ದಿನ್ಸ ನಡೆತಿತ್ತು ... ನಡಿಯುತ್ತಿತ್ತು

ಜನಾ ಎಷ್ಟು ಬರಲಿಕ್ಕೆ ಹತ್ತಿದರು? ಮೊದಲು ಸ್ವಲ್ಪ ಬರತಿದ್ದರು ಹಿಂದಿಗಡೆ ...

ಈ ಒಡಮಿ ಕಲ್ಲನ ಇಮಾರತಿ ... ಜಾತ್ರೆ ಪ್ರಾರಂಭ ಆದನಂತರ ಆಯಿ? ಹೌದು (ಕೃಪೆ ಮಾಡಿ ಗೊಂಡ) ಹೌದು

ಶಿವ ಪೂರ್ತಿಯಾದ ಮ್ಯಾಲೆ ಎಷ್ಟು ವರ್ಷ ... ಈಗ ೨೦ ವರ್ಷ ಆದೀತು ಅಬ್ಬ ... ಮಾಡಿತು

ಕಾಣಿಕೆ ಜಾತ್ರಿಯೊಳಗೆ ಎಷ್ಟು ಆಗುತ್ತಿತ್ತು? ಮೊದಲು ನಾಲ್ಕೈದು ನೂರು

ಮುಂದೆ ಹತ್ತು ವರ್ಷಕ್ಕೆ? ನಾಲ್ಕೈದು ಸಾವಿರ ಆಯಿತು

ಮುಂದೆ ಹತ್ತು ವರ್ಷಕ್ಕೆ ಅಂದರೆ ೧೦-೧೫ ಸಾವಿರ ಜನ ಕೂಡಲಿಕ್ಕೆ ಹತ್ತಿತ? ಹೌದು ಅದೇನೂ ನೇಮ ಇಲ್ಲಾ

ಜನರು ಅಕ್ಕಿ ವಸ್ತ್ರೈರೆ ಕೊಡಲಿಕ್ಕೆ ಹತ್ತಿದರು? ಮುಂದೆ ತಂದು ಇಡತಿದ್ದರು

ಈಗ ಇಲ್ಲೆ ಒಟ್ಟಿಗೆ ಆಗತಿದ್ದಿಲ್ಲಾ ಅವರು ಆಗ ಗಾಡಿ ಮೇಲಿಂದ ಕಳಿಸಿಕೊಡತ್ತಿದ್ದರು? ಕಳಿಸಿಕೊಡತ್ತಿದ್ದರು

ಹತ್ತು ವರ್ಷದಮೇಲೆ ದಾಸೋಗ ಇಡಲಿಕ್ಕೆ ಹತ್ತಿದರು? ಹೌದು

ಪಾಂಡಿ ಎಷ್ಟು ಕಿಮ್ಮತೀವು? ಅದಾವು ಹೌದು ೫೦೦೦ ೬೦೦೦ ರೂ|| ಆದಾವು

ಅವನ್ನು ಯಾವಾಗ ಮಾಡಿಸಿದಿ? ೧೦ ೧೪ ವರ್ಷ ದೊಳಗೆ ಆಗ್ಯಾವೆ

ಆ ಇಮಾರತಿ ಅದಗೀ ಮಸೀದು ಯಾವಾಗ ಕಟ್ಟಿಸಿದಿರಿ? ಈಗ ೧೦ ೧೨ ವರ್ಷ ಆಯಿತು ಅವನ್ನು ಆದಗೀ ಮನಿ ಅಂತಾ

ಜಾತ್ರಿ ವೇಳೆ ಎಷ್ಟು ಮಂದಿಗೆ ಹಾಕತೀರಿ? ಅನುಕೂಲ ಇದ್ದವರಿಗೆ ಹಾಂತೇವೆ ೬೦೦-೭೦೦ ಇದೀತು

ಅಷ್ಟು ಜನರಿಗೆ ಅಡಿಗಿ ಮಾಡಲಿಕ್ಕೆ ಬೇಕಾದಷ್ಟು ಜಾಗಾ ಮತ್ತು ಭಾಂಡಿ ಅವೆ? ಅವೆ

ಶೇರು ಮಾಡಿಸಲಿಕ್ಕೆ ಎಷ್ಟು ಖರ್ಚ ಹಿಡಿದೀತು? ಅಜಮಾಸು ೭೦೦೦ ರೂ|| ಆದೀತು ಲೆಕ್ಕ ಇಲ್ಲಾ ಹ ಒಟ್ಟಿ ಕೂಲಿಕಾರರದಷ್ಟು ಇಡತಿದ್ದೆ

ಆ ದಾಂಡೀ ಈಗ ಇದ್ದ? ಇಲ್ಲಾ

ಆ ಪಂಚಿಯಿ ... ಒಲೀತಿದ್ದರು ಶರಣಪ್ಪ

ಆ ಕಟಿಗೀ ಎಲ್ಲಿಂದ ತಂದಿರಿ? ಹಳಿಯರ ಕಡಿಂದಾ ...

ಅದರದೂ ಲೆಕ್ಕ ಇಲ್ಲ? ಇಲ್ಲಾ

ಆ ... ಇರಲಿಕ್ಕ ... ಕಳಿಸುತ್ತಿದ್ದಿರಿ ... ಕಳಿಸುತ್ತಿದ್ದೆ

... ಕೊಟ್ಟನೇನ?

... ಎಷ್ಟು ವರ್ಷ ಆಯಿತ? ೨೦ ವರ್ಷ ಆಯಿತು

ಅದನ ... ಕಡಿಂದ ಕೊಟ್ಟರು ... ಮಾಡಿದೆ

... ಭಂಗಾರದ ಮತ್ತು ಬೆಳ್ಳಿಯ ಸಾಮಾನು ಯಾವಾಗ ಮಾಡಿಸಿದಿ? ಈಗ ಮೂವತ್ತು ವರ್ಷದೊಳಗೆ ಮಾಡಿಸಿ

ಇವುಗಳ ಪೈಕಿ ಒಟ್ಟು ಯಾವರೆ ಕೊಟ್ಟಾರೇನ? ಇಲ್ಲಾ

ಇಲ್ಲಿ ... ಶಿವರಾತ್ರಿಯಲ್ಲಿ ಉಪಯೋಗ ಆಗತದ? ಹೌದು

... ತಮ್ಮ ಪೂಜಾ ನಡೀತದ? ಹೌದು

ಅವಾಗ ... ಪೂಜಾ ಕಟ್ಟಿ ಪೂಜಾ ಮಾಡತಿ? ... ಇರತದ?

... ದುಬಂಗಾರದ ಯಾರು ... ಅಂತಾ ...

... ಅಗಿ ... ಮಹಾದೇವರಂತೆ ಪೂಜಾ ಮಾಡತಾರ? ಹೌದು

... ಮಾಡಿರಿ ಅಂತಾ ತಾವು ...? ಪೂಜಾ ಮಾಡೋಕ್ರಮ ನಾವೇ ... ಮಹಾದೇವ ಅಂತಾ

ಬೆಳ್ಳಿ ವಸ್ತ್ರೆ ನನ್ನ ಮೇಲೆ ಹಾಕರಿ ಅಂತಾ ತಾವು ಹೇಳಿರಿ? ಪೂಜಾದಿಂದ ಮಹತ್ವ

ನಹಂಕರಿ ಅಂದರೆ ಹಾಕತಾರ ... ಅಂದರೆ ಬಿಡತಾರೆ

ತಾವು ತಮ್ಮ ಬಾಯಿಂದ ಮಹಾದೇವರು ಅಂತಾ ಹೇಳಿರೇನು? ನಾನ್ನು ತಿಳಕೊಂಡೇನಿ ನನ್ನ ಮನಸ್ಸಿನೊಳಗೆ ನನ್ನೊಳಗೆ ಮತ್ತು ನನ್ನ ಮಹಾದೇವರೊಳಗೆ ಬೇದಇಲ್ಲಾ ಅಂತಾ ನನ್ನ ಶಿಷ್ಯರ

ಅಂದರೆ ತಮ್ಮ ಪೂಜಾ ಅಂದರೆ ಮಹಾದೇವರ ಪೂಜಾ ಅಂತಾ ತಿಳಕೊಂಡೀರಿ? ಹೌದು ನನ್ನ ತಿಳುವಳಿಕೆ

ಅಂದರೆ ತಮ್ಮ ರಥೋತ್ಸವ ತಮ್ಮ ಪೂಜಾ ಮಾಡೋದರಲ್ಲಿ ಮಹಾದೇವರ ಪೂಜಾ ಆಗತದೆ ಅಂತಾ ತಾವು ಹೇಳಕೋತೀರಿ? ಹೌದು ಅದು ನನ್ನ ಭಾವನಾ ಅದೆ

ತಾ|| ೨೪-೭-೨೯

ತಾವು ಜಾತ್ರಿ ಮಾಡ್ರಿ ತೇರು ಮಾಡ್ರಿ ಅಂತಾ ಯಾರಿಗೆ ಹೇಳಿದ್ರಿ? ನುಬ್ಬ ಭ... ನಿಗೆ ಹೇಳಿದೆ.

ಪೂಜಾ ಮಾಡಿರಿ ಅಂತಾ ಏನಂತ ... ದೇವರಿಗೆ ತಮಗೆ ಅಬೇದ ಒದ್ದಿಯಿಂದ ಹೇಳಿದೆ.

ಶರಣಪ್ಪ ಈಗ ಎಷ್ಟು ವರ್ಷ ಆಯಿತು ಬಂದ? ೧೫ ೨೦ ವರ್ಷ ಆಯಿತು

ತಮ್ಮ ಸೇವಾ ಮಾಡಿಕೋತಾ ಇಲ್ಲೇ ಇದ್ದಾರೆ? ಇದ್ದಾರೆ.

ನಾಗಲಿಬಾಯಿ ಒಂದು ಬಂಗಾರದ ಕಿರೀಟ ಮಾಡಿಸಿಕೊಟ್ಟಾಳೆ? ಹೌದು ಕೊಟ್ಟಾಳೆ

ರಾವ ಹಣ್ಣಾ ವಕಿಸಿ? ನನಗೆ ಗೊತ್ತದೆ

ಅವಾ ತನ್ನ ರಾಜಗೊಂಡೆ ಬೆಳ್ಳಿಗೊಂಡೆ ಮಾಡಿಕೊಟ್ಟಾ? ಇಲ್ಲ

ಅವಾ ಬೆಳ್ಳಿ ಕೊಟ್ಟನೇನ? ಇಲ್ಲಾ

ತಾವು ಎಲ್ಲಿ ಮಾಡಿಸಿದಿರಿ? ಇಲ್ಲಾ

ಯಾರು ಅವರು ಅಕಸಾಲರ? ಇಬ್ಬರು ತೀರಿಕೊಂಡರೆ ಒಬ್ಬ ಇದ್ದಾನೆ

ಈಗ ಇದ್ದಾವಾ ಯಾರ? ಬಸವಂತಾ

ಈ ಬೆಳ್ಳಿ ಮತ್ತು ಭಂಗಾರ ಯಾವ ಅಂಗಡಿಯೊಳ್ಳಿ ಖರಿದಿ ಮಾಡಿದಿ? ನನಗೆ ಗೊತ್ತಿಲ್ಲಾ

ಇದಕ್ಕೆ ಎಷ್ಟು ಖರ್ಚ ಹಿಡಿಯಿತು ಅನ್ನವದು ಲೆಕ್ಕ ಇಲ್ಲ? ಇಲ್ಲಾ ಅದೇನು ಲೆಕ್ಕ ಇಲ್ಲಾ

ಜಾತ್ರಿ ಆದನಂತರ ಈ ಸಾಮಾನು ಯಾವ್ಯಾವಲ್ಲಿ ಇಡತೀರಿ? ಇಲ್ಲಾ ಉಗ್ರಾಣದಲ್ಲಿ ಇಡತೇವೆ

ಈ ಭಾಂಡೆ ಸಾಮಾನು ಎಲ್ಲಾ ಮಾಡಿಸಿದಿರಿ ... ಏನೂ ಲೆಕ್ಕ ಇಲ್ಲಾ ಒಂದ ರೊಕ್ಕಾ ಆಗಿಂದಾಗ್ಗೆ ಖರ್ಚ

ಆ ಭಾಂಡೇನೂ ಯಾರು ಮಾಡಿಸಿಕೊಂಡು ಒಂದರ ಶರಣಪ್ಪ ಶಿದ್ದಪ್ಪ ಏನತೀ ಜನಾ

ತೇರು ಮಾಡಿದ ಬಡಿಗಾರ ಯಾರು ಇವ್ವ? ಶಿವಪ್ಪ ಅಂತಾ ಇದ್ದಾನೆ

ಶಿವರಾತ್ರಿ ಜಾತ್ರಿಯಲ್ಲಿ ಕಾಣಿಕೆ ತಗೊಳ್ಳಲಿಕ್ಕೆ ತಾವು ಏನು ಇಡತಿದ್ದಿರಿ? ಮಗಿ ಇಡತಿದ್ವಿ ತಾಟಾ ಇಡತಿದ್ವಿ, ಇಲ್ಲಾ ಪೆಟ್ಟಿಗಿ ಇಡತಿದ್ವಿ

ಈ ಕಾಣಿಕಿ ಎಲ್ಲಿ ಇಡತಿದ್ದರ? ನೇಮದ್ದಲ್ಲಾ ಕೈಯಾಗೆ ಕೊಡೋದು. ಒಹಾಕ ಮಗ್ಯಾಗೂ ಹಾಕತಿದ್ದರು

ತಮಗೆ ಏನು ಬರತಿದ್ದವಲ್ಲ? ಪೆಟ್ಟಿಗ್ಯಾಗ ಮಗಿಯೊಳಗೆ ಹಾಕತಿದ್ದೆ

ಈ ರಾಮಪ್ಪ ವಕಿಲ ಜಾತ್ರಿಗೆ ಬರತಿದ್ದಾ? ಯಾವಾಗಲಿ ಬಂದು ಕೂತು ಹೋಗತಿದ್ದಾ ನಿರಂತರ ಬರೋದಿಲ್ಲಾ

ಜಾತ್ರಿ ಮುಗಿದನಂತರ ಜಾತ್ರಿ ಮುಗಿದನಂತರ ಎಷ್ಟು ಆಯಿತು ಅಂತಾ ಯಾರು ನೋಡತಿದ್ದರು? ಶರಣಪ್ಪ ವಿಶ್ವಾಸದವ ಇದ್ದಾ ಅವಾ ನವಲ್ಲ ಮಾಡಿಕೊಡುವಾ

ಶಾಸ್ತ್ರೀಯು ಲೆಕ್ಕ ಇಡುತ್ತಿದ್ದರೇನು? ಇಲ್ಲ. ಇಟ್ಟೇನು ಹಣಾ ಬರತಿತ್ತಲ್ಲಾ ಇದನ್ನು ಶಂಕ್ರ ಪುಟ್ಟಿಳ್ಳಿಯವರ ಮನಿಗೆ ಕಳಿಸಿಕೊಡತಿದ್ದರೇನು? ಇಲ್ಲಾ

ಇತ್ತಲೀಗ ಐದಿಳಿಗೆ ೧೦ ವರ್ಷ ಜನಾ ಪೆಟ್ಟು ಬರಲಿಕ್ಕ ಹತ್ಯಾರ? ಹೌದು ಜನಾ ಜಾಸ್ತಿ ಬರಲಿಕ್ಕ ಹತ್ಯಾರ

ಎಲ್ಲಾ ದೇಶದ ಕಡಿ ಮುಂದೀನೂ ಬರತದೆ ಮುಂಬಯಿ ಪುಣೆ ಮುಂತಾದ ಕಡೆ ಜನರೂ ಬರಲಿಕ್ಕ ಹತ್ತ್ಯಾರೆ? ಈಗ ಜನಾ ಜಾಸ್ತಿ ಬರತದೆ

ಹೋದ ವರ್ಷ ಎಷ್ಟು ಬಂತು? ಹೋದ ವರ್ಷ ಕನಿಷ್ಠ ೧೫೦೦೦ ದ ಮೇಲೆ ಬಂತು

ಜಾತ್ರೆ ಖರ್ಚು ಎಷ್ಟು ಆಯಿತು? ೪೦೦-೫೦೦ ಆಗಿದ್ದೀತು

ಈ ಶಿವರಾತ್ರಿಯ ಉತ್ಸವ ನಡೀಲಿಕ್ಕೆ ಹತ್ತಿತು ಅದೆಷ್ಟು ವರ್ಷ ಆಯಿತು? ಅದೂ ೨೦ ವರ್ಷ ನಡಿದಿದ್ದೀತು

ಅದೂ ಏಳು ದಿವಸ ನಡೀತದೆ? ಹೌದು

ಅವಾಗೂ ನಾಮಸಪ್ತಾಹ ನಡೀತದೆ? ಶ್ರಾವಣದೊಳಗೆ ಗಳಿಗೆ ಹೊತ್ತು ನಡಿಯೋದೇ ಮುಖ್ಯ

ಪಲ್ಲಕ್ಕಿ ಉತ್ಸವ ಆಗತದೆ? ಆಗತದೆ

ತಮ್ಮ ಪುರಾಣ ಆಗತದೆ? ಆಗತದೆ

ದಾಸೋಹ ಇಟ್ಟಿರತಾರೆ? ಇಟ್ಟಿರತಾರೆ

ಸಿದ್ಧಾರೂಢವಿಜಯ ಅಂತಾ ಒಂದು ಪುಸ್ತಕ ಇದೆ? ಅದೇನೂ ನನಗೆ ಗೊತ್ತಿಲ್ಲಾ

ಜಂಮರೇಕರ ಪರಶುರಾಮಪಂತರ ಗುರ್ತು ಅದೆ? ಗುರ್ತು ಅದೆ

[illegible] ರ್ಷದ ಲಾಗಾಯಿತು ಬರತಾರೆ? ಬ

ದಲ್ಲಿ ಬರತಾರೆ? ಬರತಾರೆ

ಅವರು ಪುರಾಣ ಹೇಳತಾರೆ? ಅವರ ಆಹೆಗೆ ನನಗೇನೂ ಗೊತ್ತಿಲ್ಲಾ.

ಶ್ರಾವಣದೊಳಗೆ ಎಷ್ಟು ಬರತದೆ? ಎರಡು ಸಾವಿರದೊಳಗೆ ಆದೀತು

ಅವಾಗ ಜಾತ್ರೆ ಖರ್ಚು ಇನ್ನೂರು ಮುನ್ನೂರು ಆಗಿದ್ದೀತು? ಇದ್ದೀತು

ಸಿದ್ಧಲೀಲಾಮೃತ ಗ್ರಂಥ ತಮಗೆ ಗೊತ್ತದೆ? ಗೊತ್ತದೆ

ಕಬೀರದಾಸ ಅಂತಾ ತಮ್ಮ ಶಿಷ್ಯರಿದ್ದರು? ಅತನು ಶರೀರ ಬಿಟ್ಟು ಎಷ್ಟು ವರ್ಷ ಆಗಿದ್ದೀತು

ಅವರ ಸಮಾಧಿ ಇಲ್ಲೆ ಅದೆ? ಅದೆ

ಅವರೂ ತಮ್ಮಲ್ಲೆ ಇದ್ದರು? ೨೦ ವರ್ಷ ನಮ್ಮಲ್ಲೆ ಇದ್ದರು

ಜಾತಿ ಯಾವದು? ಬಾಹ್ಯಾವರು ಚೌಕಶಿಮಾಡಲಿಲ್ಲಾ ಶ್ರವಣಮಾಡಿಕೊಳತಾ ಇದ್ದಾ

ಅವನು ಶಾಸ್ತ್ರ ವಗೈರೆ ಬೋಧಮಾಡತಿದ್ದಾ? ಒಹಾಳಾಗಿ ಹೇಳತಿದ್ದಿಲ್ಲಾ ಶ್ರವಣಮಾಡಿಕೊಳತಾ ಕೂಡ್ರತಿದ್ದಾ

ಅವಾ ತಮ್ಮದು ಚರಿತ್ರ ಬರೆದಾನೆ ಕನ್ನಡದೊಳಗೆ? ನನಗೇನು ಗೊತ್ತಿಲ್ಲಾ ಅದನೇನು ನನಗೆ ಹೇಳಲಿಲ್ಲಾ

ಇಲ್ಲಿ ಮ್ಯಾಲಿನ ಇಮಾರತು ಅವೆ? ಅಲ್ಲಿ ಅಂಗಡಿ ಅವೆ? ನನ್ನ ಪರವಾನಿಗಿಯಿಂದ ಅಲ್ಲಿ ಅಂಗಡಿ ಇಟ್ಯಾರೆ

ಅವರು ತಮ್ಮ ಫೋಟೋ ಮಾರತಾರೆ? ಮಾರತಾರೆ

ಮತ್ತು ತಮ್ಮ ಮಹಾತ್ಮ್ಯದ ಪುಸ್ತಕನೂ ಮಾರತಾರೆ? ಮಾರತಾರೆ

ತಮ್ಮ ಇತಿಹಾಸ ಅಥವಾ ಮಹಾತ್ಮ್ಯದ ಪುಸ್ತಕ ಯಾವನ್ನೂ ನೋಡಿಲ್ಲ? ಯಾವೂ ನೋಡಿಲ್ಲಾ

ತಮ್ಮ ಮಹಾತ್ಮ್ಯದ ಸಂಬಂಧ ಹಾಡು ವಗೈರೆ ಮಾಡ್ಯಾರೋ ಇಲ್ಲೋ? ಮಾಡಿದ್ದಾರು ಮಾಡಿರಬಹುದು ಆದರೆ ನನಗೇನೂ ಗೊತ್ತಿಲ್ಲಾ

ಮುಂಜಾನೆ ಜನರು ಬರತಾರೆ ಆಗ ಹಾಡ ಹೇಳತಾರೆ? ನಾಮಸ್ಮರಣ ಒಂದು ಮುಖ್ಯ ಅವೆ ಜನರೇ ಹಾಡೂ ಹಾಡತಿದ್ದಾರು

ಕಾರ್ತಿಕ ಮಾಸದಲ್ಲಿ ಭಾಗವತ ಸಪ್ತಾಹ ಹೇಳತಾರೆ? ಶಂಕರ ಶಾಸ್ತ್ರಿಗಳು ಹೇಳತಾರೆ

ಅವರು ಹೇಳಲಿಕ್ಕ ಹತ್ತಿ ಎಷ್ಟು ವರ್ಷ ಆಯಿತು ೫-೬ ವರ್ಷ ಆಯಿತು

ರಾಮನವಮಿ ಉತ್ಸವ ನಡೀತದೆ ೯ ದಿವಸ? ಹೌದು ನಡೀತದೆ

ಈಗ ಏನ ಆಗುತ್ತದೆ? ಅವಾಗ ಪೂಜಾ ಮುಷ್ಟಲ್ಲಾ ರಾತ್ರಿ ಹಗಲೂ ಭಜನಿ

ಅವಾಗ್ಯೆ ಎಷ್ಟು ಮಂದಿ ಕೂಡತದೆ? ಸಾವಿರ ಮಂದಿ

ರಾಮನವಮಿಯು ಕಡೀದಿವ್ಸ ನನ್ನ ಹುಟ್ಟಿದದಿವ್ಸ ಅಂತಾ ನನ್ನ ಪೂಜಾ ಮಾಡತಾರೆ? ಮಾಡತಾರೆ

ರಾಮನವಮಿ ಉತ್ಸವ ಪ್ರಾರಂಭವಾಗಿ ಎಷ್ಟು ವರ್ಷ ಆಯಿತು? ೧೦ ವರ್ಷದ ಒಳಗೇ ಆಯಿತು

ಅವಾಗ ಏನಾದರೂ ಹಣಾ ಬರತದೇನ? ಇಲ್ಲಾ

ಪ್ರತಿ ಸೋಮವಾರ ಪೂಜಾ ಆಗತದೇನ? ಆಗತದೆ

ಶಿವಾನಂದ ಅನ್ನುವರದು ಗೊತ್ತದೇನ? ಗೊತ್ತದೆ

ಅವಾ ಕೆಲವು ದಿವ್ಸ ಪಾಠಶಾಳಾ ಇಟ್ಟಿದ್ದನೇನ? ಕೇಳಿದರು ನಾ ಹೇಳಿದೆ ಕೆಲವು ದಿವ್ಸ ಇಟ್ಟಿದ್ದಾ

ಎಲ್ಲಿ ಇಟ್ಟಿದ್ದಾ? ಉತ್ತರದ ದಿಕ್ಕದ ಅದಕ್ಕೆ ಆಗಿನಿಂದ ಪಾಠಶಾಳಾ ಅಂತಾ ಹೆಸರು ಬಿದ್ದದೆ? ಅದೇನಿಲ್ಲಾ

ತಾವೇನು ಹಣಾ ಕೊಟ್ಟಿರೇನು? ಇಲ್ಲಾ

ಅವಾ ಪಾಠಶಾಳೆಯ ವಿಷಯಕ್ಕೆ ವರ್ಗಣಿ ಮಾಡಿದ್ದು ತಮಗೆ ಗೊತ್ತದೇನ? ಅವೆಕ ಏನೇನು ಮಾಡಿದ್ದನು ಏನು ನನಗೆ ಗೊತ್ತಿಲ್ಲಾ

ಆ ಬಿಂದಪ್ಪ ಬೆಳಗಾಂವಕರ ಇವರು ವರ್ಗಣಿ ಮಾಡಿದ್ದು? ಅವರೇನು ಮಾಡಿದರೋ ನನಗೆ ಗೊತ್ತಿಲ್ಲ

ತಾವು ವೇದ ವೇದಾಂತಗಳನ್ನು [illegible] ದೀರಿ? ಓದಿಕೊಂಡೇನೆ ಅವೇ ಅಂತಲ್ಲಾ ಮತ್ತು ಓದಿಕೊಂಡೇನೆ

ಸಂಶಯ ಬಂದರೆ ಕೇಳತಾರೆ? ಕೇಳತಾರೆ

ತಮಗೆ ಇಲ್ಲೆ ದೇಹದ ಆಪ್ತರು ಯಾರೂ ಇಲ್ಲ? ಇಲ್ಲಾ

ತಾವೇನೂ ಮಠ ಮಾಡಿಕೊಂಡೀರಿ ಅವನ ಹೆಸರೇನು? ಗುರಪ್ಪಾ ಅವಾ ತಮ್ಮ ಮಠದ್ಯಾರ ಅಂತಾ ಅಂತೀರಲ್ಲಾ? ಶಿದ್ದಪ್ಪನ ಮಗ? ಹೌದು

ಈಗ ಶಿದ್ದಪ್ಪ ಮಠಕ್ಯಾರ ಇದ್ದು ಎಷ್ಟು ವರ್ಷ ಆಯಿತು? ೧೦-೧೨ ವರ್ಷ ಆಯಿತು

ಅವಾ ತಮ್ಮ ಸೇವಾನೂ ಮಾಡ್ತ್ಯಾರೆ? ಮಾಡ್ತಾನೆ

ಅವರು ಬಹಳ ಸೇವಾನೂ ಮಾಡ್ತ್ಯಾರೆ? ಮಾಡ್ತ್ಯಾರೆ

ಈ ಗುರಪ್ಪಗೆ ಸಂನ್ಯಾಸ ದೀಕ್ಷಾ ಕೊಟ್ಟೀರಿ ತಾವು? ಕೊಟ್ಟೇನಿ

ಮತ್ತು ಅವಗೂ ಶಾಸ್ತ್ರ ಕಲಿಸೀರಿ? ಸ್ವಂತ ಶಾಸ್ತ್ರ ಓದತಾನೆ

ತಾವು ದೇಹಬಿಟ್ಟನಂತ್ರ ದೇಹ ಇಡಲಿಕ್ಕೆ ಇಲ್ಲೆ ಒಂದು ಸಮಾಧಿ ಅವೆ? ಅದೆ

ತಮ್ಮ ದೇಹ ಅಲ್ಲೇ ಇಡತಕ್ಕದ್ದು ಅಂತಾ ನಿಮ್ಮ ಅಪೇಕ್ಷಾ ಅದೆ? ಅದೆ ಆದರೆ ಕಾಲಕ್ಕೇನಾಗತದೋ ಯಾರು ಹೇಳಬೇಕು

ಅದೇನು ಸಮಾಧಿ ಅದೆಯಲ್ಲಾ ಅದರಮೇಲೆ ಸಿದ್ಧಾರೂಢ ಯತಿನಾಂ ಸಮಾಧಿಸ್ಥಾನಂ ಅಂತಾ ಬರೆದದೆ? ಹೌದು

ಈಗೂ ಅಲ್ಲೆ ಪೂಜಾ ಮಾಡತಾರೆ? ಇಲ್ಲಾ

ತಮ್ಮ ದೇಹ ಇಟ್ಟನಂತರ ಆ ಸಮಾಧಿ ಪೂಜಾ ಆಗಬೇಕು ಅಂತಾ ತಮ್ಮ ಅಪೇಕ್ಷಾ ಅದೆ? ಅಪೇಕ್ಷಾ ಅದೆ ಅಪೇಕ್ಷಾ ಇದ್ದಂತೆ ಸಿದ್ಧಿ ಆದನೋ ಇಲ್ಲೋ ಅನ್ನೋದು ಯಾರು ಹೇಳಬೇಕು

ಆ ಜಾಗಾ ಕಳಿಯುವ ಉಳಿಯುವ ಹಾಗೆ ಬಾದಾಮಿ ಕಲ್ಲಿನಿಂದ ಕಟ್ಟಿದ್ದು? ಬಾದಾಮಿ ಕಲ್ಲೂ ಅವೆ ಎರಡನೇ ಕಲ್ಲೂ ಅವೆ

ಅದಕ್ಕೆ ಖರ್ಚು ಎಷ್ಟು ಆಗಿದ್ದೀತು? ಅದು ೧೦ ವರ್ಷಗಟ್ಟಲೆ ಕಟ್ಟತಿತ್ತು ೨೦೦೦೦ ರೂ|| ಆಗಿದ್ದೀತು

ಆ ಇಮಾರತು ತಮ್ಮ ಆಜ್ಞಾಪ್ರಕಾರಾ ಕಟ್ಟಿತೇದೆ? ಕಟ್ಟೇತಿವೆ

ಅದಕ್ಕೇನು ತಾವು ಹೆಸರು ಕೊಟ್ಟೀರೇನು? ಕೊಟ್ಟಿಲ್ಲಾ

ಆ ಜಾಗಾದಮೇಲೆ "ಮಠ" ಅಂತಾ ಬರೆದದೆ? ಆ ಸಮಾಧಿ ಜಾಗಾದ ಮೇಲೆ "ಈ ಮಠ" ಅಂತಾ ಬರೆದದೆ

ಇವೆಲ್ಲಾ ಉತ್ತರಗಳು ನಿಮ್ಮ ಪಶ್ಚಾತ ನಡೀಬೇಕೆಂದು ನಿಮ್ಮ ಅಪೇಕ್ಷಾ ಅದೇನು? ಇಲ್ಲೋ? ಇವೆಲ್ಲಾ ಉತ್ಸವಗಳು ನನ್ನ ಪಶ್ಚಾತ ನಡಿಸಬೇಕೆಂದು ನನ್ನ ಅಪೇಕ್ಷಾ ಅದೆ

ಇಲ್ಲೆ ತಾವೇನು ಇದ್ದೀರಿ ತಾವು ಹ್ಯಾಂಗ ಇದ್ದೀರಿ ಅದೇ ಪ್ರಕಾರದಮೇಲೆ ಒಳಬೇಕೆಂದು ನೀವು ಮಠ ಮಾಡಿಕೊಂಡೀರಿ? ಹೌದು

ತಾವು ಹ್ಯಾಂಗ ಉತ್ಸವಗಳನ್ನು ನಡಿಸೀರಿ ಅದರಂತೆ ಗುರಪ್ಪನೂ ನಡಿಸಬೇಕು ಅಂತಾ ತಮ್ಮ ಇಚ್ಛಾ ಅದೆ? ಹೌದು

ತಮ್ಮ ಕಡಿಗೇನು ಕಾಣಿಕೆ ತಗೊಂಡೀರಿ ಅದರ ಆಸ್ತಿ ಉತ್ಪನ್ನ ಎಷ್ಟು ಬರತದೆ? ಬರತದೆ

ತಾ|| ೨೫-೭-೩೯

ದೇವರಾಣೆ ಮಾಡಿ ಖರೇ ಹೇಳುತ್ತೇನೆ.

ಈ ದಿವಸ ಕೋರ್ಟು ಸ್ವಲ್ಪ ತಡವಾಗಿ ಸುರುವಾಯಿತು. ಇಲ್ಲಿ ಪಿ|| ಲಕ್ಷ್ಮೇಶ್ವರ ಇವರ ಪ್ರಶ್ನೆಗೆ ಶ್ರೀ ಸಿದ್ಧಾರೂಢಸ್ವಾಮಿಗಳು ಕೊಟ್ಟ ಉತ್ತರಗಳು ಮಾತ್ರ ಕೊಡಲ್ಪಟ್ಟಿವೆ.

ದೇವರ ಆಣೆ ಮಾಡಿ ಖರೇ ಹೇಳುತ್ತೇನೆ

ಕನ್ನಡ ನನಗೆ ಓದಲಿಕ್ಕೆ ಸಲ್ಪ ಬರತದೆ ಮೃತ್ಯುಪತ್ರ ಬರೆಯುವ ರೂಢಿಲು ಅದರ ನಕಲು ವಗೈರೆ ಮಾಡಲಿಲ್ಲಾ ಹಾಗೆಯೇ ಒಪ್ಪಿಗೆ ಬರೆಯಿತು. ನನ್ನ ಮೃತ್ಯುಪತ್ರ ಮುಕ್ತ್ಯಾರನಿಗೆ ನಾಡಿಸುವದರ ಸಂಬಂಧಿ ಕೇಳಿದ್ದೆ ಅವನೇ ಕಾಗದ ಬರಿಸಿಕೊಂಡು ಒಂದು ಕಾಗದಕ್ಕೆ ಯಾರೂ ಸಾಕ್ಷಿ ಹಾಕಿದರು ನನಗೆ ಗೊತ್ತಿಲ್ಲಾ [illegible] ಮೃತ್ಯುಪತ್ರ [illegible] ಪತ್ರಗಳು ಮುಕ್ತ್ಯಾರ ಕಡಿಗೆ ಇದವೆ ಮುಕ್ತ್ಯಾರಪತ್ರಾ [illegible] ಅವು ಅದು ಕಡಿಗೆ ಅವೆ ಶಿವರಾತ್ರಿ ಪೂಜಾ ಆದನಂತರ ಕೌದಿ ಪೂಜಾ ಅಂತಾ ಮಾಡತಾರೆ ಮೊದಲು ನಾನು ಕೌದಿ ಹೊತಗೋತಿದ್ದೆ ಅದಕ್ಕೆ ಮಹರ್ಾದಿ ಕೊಡುವ ಬಗ್ಗೆ ಅದನ್ನು ಪೂಜಾ ಮಾಡತೀವಿ ಅದಕ್ಕೆ ಕೌದಿ ಪೂಜಾ ಮುಗ್ನಿನ ದಿನ ಪೂಜಾ ಆದೆ ಕೌದಿ ಹಾಗೇ ಇಟ್ಟಿರತ್ತಾರೆ ರಸ್ತೆ ದುರಸ್ತ ಮಾಡುವದು ಮ್ಯುನಿಸಿಪಾಲಿಟಿಯವರು ಮಾಡತಾರೆ ದೀವಗಿ ಮ್ಯುನಿಸಿಪಾಲಿಟಿಯವರು ಹಚ್ಚತಾರೆ ಇಲ್ಲೆ ಕಾಯಿ ಹಣ್ಣು ಮಾರಲಿಕ್ಕೆ ಅಂಗಡಿ ಹಚ್ಚಿರುತ್ತಾರೆ. ಕೆರಿ ಹಾಂಪಟಿಣಿಗೆ ಕಟ್ಟಿಸಿಸಿದ್ದಕ್ಕೆ ೭೦೦೦ ೮೦೦೦ ರೂಪಾಯಿ ಹಿಡಿದಿರಬೇಕು. ಜನರು ಇಲ್ಲಿಗೆ ಒಂದವರು ಕುಡಿಯೋದು ಸ್ನಾನ ಮಾಡುವದೆಲ್ಲಾ ಅದರಲ್ಲೇ ಮಾಡತಾರೆ ಕೆರೆಗೆ ನೀರು ಬರುವುದರ ಗೆರೆಯಿಂದಾ ಅರ್ಜಿ ವಗೈರೆ ಮಾಡಿಲ್ಲಾ ಯಾರಾದರೂ ಮಾಡಿದ್ದರೆ ನನಗೆ ಗೊತ್ತಿಲ್ಲಾ. ಕೆರೆಗೆ ಸಂವು ಹಚ್ಚಿ ನೀರು ತಗೋತೀವಿ ನೀರು ಕಡಿಮೆ ಈಗ ಆಗುವದಿಲ್ಲಾ. ಕಟ್ಟಿಗಿ ಇಡಲಿಕ್ಕೆ ಜಾಗಾ ಅದೆ ಆ ಕಟ್ಟಿಗಿ ಕೊಳ್ಳುತ್ತೀವೆ ಭಕ್ತರು ಕಳಿಸುವದಿಲ್ಲ. ಕಟ್ಟಿಗಿ ಸೋವಿ ಇತ್ತು ಎಂದರೆ ಕಟ್ಟಿಗಿ ಕಳಿಸಿಲ್ಲಾ ಈಗ ನಮ್ಮಲ್ಲಿ ೩೦೦ ೪೦೦ ಗಾಡಿ ಕಟ್ಟಿಗೆ ಇರಬಹುದು ಉತ್ತರ ದಿಕೆದ ಇಮಾರತಿಯಲ್ಲಿ ಇಳಕೊಳ್ಳಲಿಕ್ಕೆ ಜಾಗಾ ಅದೆ ನನ್ನ ಪರವಾನಗಿಯಿಂದಾ ಅಲ್ಲಿ ಇಳಕೋತಾರೆ ಅಡಗಿ ಮಾಡಿಕೋತಾರೆ ಅದರ ಮೇಲೆ ಇದು ಇಾ ಅದೆ ಅದರ ಕಿಮ್ಮತ್ತು ೧೦೦೦೦ ಆದೀತು ಕೈಲಾಸ ಮಂಟಪಕ್ಕೆ ೭೫೦೦೦ ಆದೀತು. ಪ್ರೋ [illegible], ಲೋಕೋದ್ಧಾರಕ ಶಿವಯೋಗ ಮಂದಿರ ಇವರ ಮೇಲೆ ಉಪನಿಷತ್ತ ವಾಕ್ಯ ಬರೆದಿರುತ್ತದೆ. ಬಕ್ಕಪ್ಪಾ ಕವಿಶರ ಕಲ್ಲುಪಾಸಿ ಮಾಡಿಕೊಟ್ಟಿಲ್ಲಾ ನಾನೇ ಇಲ್ಲೆ ಮಾಡಿಸಿದೆ. ಅವನು ಕೆಲಸಕ್ಕೆ ಬಂಗಾರ ಕೊಟ್ಟಿಲ್ಲಾ ಕೊಟ್ಟಿದ್ದರೆ ನನ್ನ ಕೈಗೆ ಬಂದಿಲ್ಲಾ. ಈ ಮಂಟಪ ಕಟ್ಟಿದ ನಂತರಾ ಸರಕಾರದವರು ದಂಡಾ ಕಟ್ಟಿದರು ನನಗಾ ರೂಪಾಯಿ ಕೊಟ್ಟಿರಬಹುದು. ಮೊದಲು ನಾನು ಈ ಮಠದೊಳಗೆ ಲಗ್ನ ಮುಂಜಿ ವಗೈರೆ ಮಾಡಿಸುತ್ತಿದೆ ವಳಗಡೆ ಜನರಿಗೆ ಮುಂಜಿ ಲಗ್ನ ವಗೈರೆ ಇಲ್ಲಿಗೆ ಬಂದು ಮಾಡಿಕೊಂಡು ಹೋಗಲಿಕ್ಕೆ ತಿಳಿಸಿದೆ ನೋಟೀಸ ಕೊಟ್ಟಿಲ್ಲಾ ಕರಣಪ್ಪ ನೋಟೀಸ ಕೊಟ್ಟದ್ದು ನನಗೆ ತಿಳಿಸಿಲ್ಲಾ.

ಫರ್ಸ್ಟ ಕ್ಲಾಸ ಕೋರ್ಟಿನ ಕಲಾಪಗಳು.

ತಾ|| ೨೬, ೨೭ ಮತ್ತು ೨೮ ರಲ್ಲಿ ಕೋರ್ಟು ನಡೆಯಲಿಲ್ಲ. ತಾ|| ೨೯ ನೇಯ ಶುಕ್ರವಾರ ದಿವಸ ಮ್ಯಾಜಿಸ್ಟ್ರೇಟರು ೯ ಘಂಟೆಗೆ ಧಾರವಾಡದಿಂದ ೧ನೇ ವರ್ಗ ಸಬ್ ಜಡ್ಜರಾದ ವಿ|| ಸಬನೀಸ ಇವರು ಇಲ್ಲಿಗೆ ಒಂದು ಶ್ರೀ ಸಿದ್ಧಾರೂಢ ಸ್ವಾಮಿಗಳ ಮಠವನ್ನೆಲ್ಲಾ ನೋಡಿಕೊಂಡರು. ಕರಣಪ್ಪನ ಇಮಾರತಿಯ ಬಾಗಿಲ ಮೇಲಿರುವ "ಶ್ರೀ ಸಿದ್ಧಾರೂಢ ಸ್ವಾಮಿಮಠ" ಎಂ ಬರೆದುದನ್ನು, ಕೆಂಪಿನ ಗದ್ದೆಯ ಮೇಲೆ "ಶ್ರೀ ಸಿದ್ಧಾರೂಢ ಪ್ರಸನ್ನ" ಮತ್ತು ಉಪನಿಷತ್ ವಾಕ್ಯ ಮೊದಲಾದವುಗಳನ್ನು, ಶ್ರೀ ಸಿದ್ಧಾರೂಢ ಲೋಕೋದ್ಧಾರ ಶಿವಯೋಗಿ ಮಂಟಪದಲ್ಲಿ ಬರೆದ ಉಪನಿಷತ್ ವಾಕ್ಯಗಳನ್ನು, ಬಾದಾಮಿ ಕಲ್ಲಿನ ಮಠದಲ್ಲಿರುವ "ಶ್ರೀ ಸಿದ್ಧಾರೂಢಸ್ವಾಮಿಯವರ ದ ೧೮೧೦ ನೇ ಶಕೆಯಲ್ಲಿ ಪ್ರಾರಂಭವಾಗಿ ೧೮ ನೇ ಶಕ ವ[illegible] ಶುದ್ಧ ೧೪ ಗೆ ಮುಗಿದಿದೆ" ಎಂದು ಬರೆದದನ್ನು, ಶ್ರೀ ಚಿದ್ಯಾನಂದ [illegible] ಸಮಾಧಿ ಬ್ರಾಹ್ಮಣ ಪಾಕಶಾಲೆ ದೇವಳಿ, ಮುಂತಾದವುಗಳನ್ನು, ಆ ಮೇಲೆ ಭಜನಾ ಮಂಟಪ, ದೊಡ್ಡ ಅಡಗಿ ಮನೆ. ಅಲ್ಲಿರುವ ಭಾಂಡ್ಯಾ ಸಾ[illegible] ವಗೈರೆ ಮತ್ತು ಇತರ ಸಾಮಾನುಗಳನ್ನು, ಶಾಲೆ, ಉಗ್ರಾಣಸ್ಥಾನ, ಶ್ರೀ ಸಿದ್ಧಾರೂಢರ ಗಳ ಮತ್ತು ಅವರ ಅಗ್ರಗಣ್ಯ ಶಿಷ್ಯ ಕಬೀರದಾಸ ಇವರ ತೈಲಚಿತ್ರಗಳನ್ನು, ಪಾಠಶಾಲೆಯ ಅಡಗಿ ನೆ, ಒಳಗಳನ್ನೆಲ್ಲಾ ನೋಡಿಕೊಂಡದ್ದಲ್ಲದೆ, ಕಟ್ಟೆ ಮಿಾರ, ಕೆರೆ, ಕಾಲುವೆ, ಮ್ಯುನಿಸಿಪಾಲಿಟಿ ಕಂಬಗಳನ್ನು ನೋಡಿಕೊಂಡು ಇವುಗಳನ್ನೆಲ್ಲ [illegible] ನೆ ಮಾಡಿಕೊಂಡು ಹೋದರು

ತಾ|| ೨೯-೭-೩೯

ಪ್ರಶ್ನೆ ಸವಾಲೇ ಶುಕ್ಕಪ್ಪನ ಕೈಯಲ್ಲಿ ಎಂದಾದರೂ ಹಣ ಕೊಟ್ಟಿದ್ದಿರೇನು? ಉ ಎಂದೂಯಿಲ್ಲ

ಕೈಲಾಸ ಮಂಟಪದ ಜಾಗಾ ಅದ ಅಲ್ಲಾ ಆ ಖರೀದಿ ಜಾಗಾಕ್ಕೆ ರೂಪಾಯಿ ಯಾರು ಕೊಟ್ಟರು? ನಮ್ಮ ಮಠಸ್ಥ್ಯಾರ ಕೊಟ್ಟಿದ್ದಾ

ಹೀಗಿದ್ದಾಗ ಕೊಟ್ಟನೇನ? ಅವನೇನು ಕಚೇರಿಯಲ್ಲಿ ಕೊಟ್ಟನೋ ಏನೋ ನನಗೆ ಗೊತ್ತಿಲ್ಲ

ತಾವು ಹೇಳಿದಿರಿ ಖರೀದಿ ತಗೊಂಡ ಹೊಲಾ ಮನಿ ಅವೆ ಅಂತ ಹೇಳಿದಿರಿ ಅದರ ಉತ್ಪನ್ನ ಎಷ್ಟು ಬರುತ್ತದೆ? ಅಜಮಾಸು ನಾಲ್ಕೈದು ಸಾವಿರ ಬರುತಿರಬಹುದು ನನ್ನ ಮುಕ್ತ್ಯಾರನಿಗೆ ಸರ್ವಾ ಗೊತ್ತದೆ

ತಾವು ಇನಕಂಟ್ಯಾಕ್ಸ ಕೊಡತೀರೇನ? ಕರಾನ ಇಲ್ಲಾ

ದೀವಟಿ ನಾಗಪ್ಪನವರು ಟಾಂಗಾ ಇಟ್ಟಾ? ನಾನ ಅವರ ಟಾಂಗಾದಲ್ಲಿ ಹೋಗುತ್ತೇನೆ ಟಾಂಗಾದಲ್ಲಿ ಹೋಗಬೇಕೆ ಇಂದಿದ್ದರೆ ನಾನು ಭಾಡಗಿ ಟಾಂಗಾದಲ್ಲಿ ಹೋಗತೀನಿ

ಅವರು ಟಾಂಗಾ ಇಟ್ಟು ೩-೪ ವರ್ಷ ಆಗಿದ್ದೀತ? ಆಗಿದ್ದೀತು

ಅವರ ಟಾಂಗಾ ಇಲ್ಲಿಗ್ಯೆ ಬರತದೆ? ಬರತದೆ

ನಾಗಪ್ಪ ಧೀವಟ್ಟನಿಗೆ ಏನು ಆಗತಾನ? ಅಲ್ಲಾ

ಅವನ ಮನಿಗೆ ಹೋಗಿ ಆರು ತಿಂಗಳಾಗಿದ್ದೀತ? ಆಗಿದ್ದೀತು

ಧೀವಟ್ಟ ನಾಮದಾರನಿದ್ದಾನೆ? ಅದನ್ನು ಪ್ಯಾಗೆ ಹೇಳಲಿ

ಧೀವಟ್ಟನಿಗೆ ನಾಲಾ ಇದ್ದದ್ದು ತಮಗೆ ಗೊತ್ತದೆ ಏನ? ನನಗೇನೂ ಗೊತ್ತು ಇಲ್ಲಾ

ಅವಾ ನಾಲಾ ಕೇಳಲಿಕ್ಕೆ ಬಂದಿದ್ದನಲ್ಲ? ಯಾವದರ ಮೇಲಿಂದ? ಅದೇನು ದೀವಗಿ ಹಚ್ಚುತ್ತಾರಲ್ಲಾ ಅದರ ಮೇಲಿಂದ

ಹಣಮಂತಪ್ಪ ಬೆಳಮಕರ ವ ಪುಂಡಲೀಕನವ್ವಾ ಸವರೆ ಇವರ ಮನಿಗೆ ಯಾವಾಗಾದರೂ ಹೋಗತೀರೇನ? ಯಾವಾಗಾದ ಹೋಗತೇನಿ

ಎಷ್ಟು ದಿವಸ ಆಗಿದ್ದೀತ? ಆಗಿದ್ದೀತು ಮೂರು ನಾಲ್ಕು ತಿಂಗಳು ಆಯಿತು

ವ.ಹಿ. ರಾಮಪ್ಪನ ಮನೆಗೆ ಹೋಗಿದ್ದೀರಿ ಎಷ್ಟು ವರ್ಷ ಆಯಿತು? ಹೋಗತೇನೆ ೬-೭ ತಿಂಗಳ ಆಗಿದ್ದೀತು

ದಾಬಳಕರ ಮನಿಂಚದಾಯರ ಗುರ್ತು ಅದೆ? ಅವರು ಇರಲಿಕ್ಕೆ ಹತ್ತಿ ಎಷ್ಟು ತಿಂಗಳ ಆಯಿತು? ೧-೨ ತಿಂಗಳ ಆಗಿದ್ದೀತು

ಈ ಊರಾಗ ರುದ್ರಾಕ್ಷಿಮಠ ಅದೆ ಲಿಂಗಾಯಿತ ಜನರದ? ಹೂ.

ಪಾವಟೆ ವಕೀಲರದು ಗುರ್ತು ಅದೆ? ವಿಶೇಷ ಗುರ್ತು ಇಲ್ಲಾ

ಅವರು ಲಿಂಗಾಯತರು ಅಲ್ಲಾ? ಹೌದು

ತಾವು ಆ ರುದ್ರಾಕ್ಷಿಮಠಕ್ಕ ಹೋಗಬಾರದು ತಾವು ಲಿಂಗಾಯತರಲ್ಲಾ ಅಂತಾ ಅವರು ದಾವೆ ಮಾಡಿದ್ದರು? ಹೌದು

ಆದರೆ ಲಿಂಗಾಯತರ ತರ್ಕ ಆಯಿತು? ಅದೇ ನನಗೆ ಗೊತ್ತಿಲ್ಲ

ವೀರಪ್ಪಾ ಕುಲಕರ್ಣಿ ತಿರುಪೂರದವರ ಗುರ್ತು ದೆ ಏನು? ಗುರ್ತು ಅದೆ

ಕಲ್ಮಠವು ಯಾರ ಜಾಗಾದ ಮೇಲೆ ಅದೆ? ನಾಗಪ್ಪನ ಜಾಗಾದ ಮೇಲೆ ಅದೆ

ಈ ಇಮಾರತು ಯಾರ ಸೆಂದ ಮೇಲೆ ಅದೆ? ಅದು ಪಾಂಡಪ್ಪನ ಜಾಗಾದ ಮೇಲೆ

ಕಡೇಯನ ಸಮಾಧಿ ವಗೈರೆ ಯಾವ ಜಾಗಾದ ಮೇಲೆ ಅವೆ? ಅವು ಪಾಂಡಪ್ಪನ ಜಾಗಾದ ಮೇಲೆ ಅವೆ

ಬ್ರಹ್ಮಧರ ಲಕ್ಷಣವೇನು? (ತಕರಾರು)

ಬ್ರಹ್ಮಾನಂದ ಪರಬ್ರಹ್ಮ ವಲೋಪೇತಿ ಇವು ಪರಬ್ರಹ್ಮ ಲಕ್ಷಣಗಳೇನು? ಅವೆಲ್ಲ ಪರಬ್ರಹ್ಮ ಲಕ್ಷಣಗಳು

ಚನಬಸಯ್ಯ ಕಲ್ಲಿನ ಮಠ ಕಟ್ಟಿದಾಗ ನಿಮಗೆ ಪಗಾರ ಎಷ್ಟು ಬರುತಿತ್ತು? ೪೦೦೦ ರೂಪಾಯಿ

ಕಲ್ಮಠವು ಇರುವ ಜಾಗಾ ಪಾಂಡಪ್ಪನದೇನ? ಅಲ್ಲ ಅದು ನನಗೆ ದಾನಕೊಟ್ಟದ್ದು

ಕೈಲಾಸವ ಆರಿದ್ದು? ಶ್ರೀ ಸಿದ್ಧಾರೂಢ ಸ್ವಾಮಿಯವರ ಲೋಕೋದ್ಧಾರ ಕಾರ್ಯಕ್ಕೆ ಮೊದಲನೆ

ಅದು ಹೆಸರು ಉಪಕಾರ್ಥನೇನ? ಅದು ಹೆಸರಿಟ್ಟ ಕರೆಯೋದಕ್ಕೆ

ನಿಮ್ಮ ಪರ್ಮಕ ಪೂಜಾ ಮಾಡಬೇಕು ಆ ಹಾ ಹೇಳಿ ಮಾತ್ರ ಪೂಜಾ ಮಾಡಬೇಕಂತ ನಿಮ್ಮ ಇಚ್ಛಾ ಅದೆ! ಗುರಪ್ಪಗ ಮಾಡಬೇಕಂತಾ ಇಚ್ಛಾ ಅದೆ

ಮುನಿಯಾರ್ತರ ಬರತಾವೆ ಅ ತಾ ಹೇಳಿದರಿ ಅವು ಯಾರ ಹೆಸರಲೆ ಬರತಾವೆ? ಅವು ನನ್ನ ಹೆಸರಲೆ ಬರತಾವೆ

ಶಂಕರಶಾಸ್ತ್ರಿಗಳು ಭಾಗವತ ಪುರಾಣ ಹೇಳಲಿಕ್ಕೆ ಬರತಾರೆ ಅವರೇನು ತಮ್ಮ ಶಕ್ತಿಯಿಂದ ಬರತಾರೋ ಅಥವಾ ತಮ್ಮ ಪ ವಾಸನೆಯಿಂದ ಬರತಾರೋ? ನನ್ನ ಆಜ್ಞೆಯಿಂದ

ಮುಕ್ತ ನೀವು ಹೇಳಿದರಿ ನೀರಯು ನಿವಾರಣ ಮಾಡಲಿಕ್ಕೆ ಅಂತಾ ಹೇಳಿದರಿ ಅವರೇನು ತಮ್ಮ ಶಕ್ತಿಯಿಂದ ಬರತಾರೋ ನೀವು ಹೇಳಿದರೆ ಬರತಾರೋ? ಹೇಳಿ ಕಳಿಸಿದರೆ ಬಾ ಅಂದರೆ ಬರತಾರೆ

ಇಲ್ಲಿ ೧೦ ವರ್ಷದೊಳಗೆ ರಾಮನವಮಿ ಉತ್ಸವ ಹುಟ್ಟಿಸಿದೆ ಅದನ್ನು ಶಕ್ತಿಯಿಂದ ಯಾರಾದರ ಮಾಡಿರೋ? ಇಲ್ಲ ಹೇಳಿಕೆ

ನಾಗಲಿಂಗಾಯಿ ಕಿರೀಟ ಕೊಟ್ಟಳು ಅಂತಾ ಹೇಳಿದಿರಲ್ಲಾ ಅದನ್ನು ಹ್ಯಾಗೆ ಕೊಟ್ಟಳು? ಅವರ ತಿರುಗಿ ಬರದೇಕಂತ ಕೊಟ್ಟಿಲ್ಲ

ಭಾಂಡೇ ಸಾಮಾನ ಚಿತ್ರಶಾಲೆಯ ವು ತಾವ್ಯಾದವು ಮಾಡಿಸೀ ಲ್ಯ ಅವನ್ನು ರೊಕ್ಕ ಕೊಟ್ಟು ಮಾಡಿಸಿದರೇನ ಹಾಗೆ ಮಾಡಿಸಿದರೋ? ನಾನೇ ರೊಕ್ಕ ಕೊಟ್ಟು ಮಾಡಿಸಿದೆ

ಶಿವರಾತ್ರಿ ಜಾತ್ರಿ ಯಾರು ಸುರು ಮಾಡಿದರು? ನಾನೇ ಸುರು ಮಾಡೇನಿ

ಈ ಭೀಮರಡ್ಡಿ ಯಲ್ಲಪ್ಪಗೌಡಾ ಬಾಳಪ್ಪ ಇವರು ಭಕ್ತಿಪತ್ರ ಮೃತ್ಯುಪತ್ರ ತಮ್ಮ ಎದುರಿಗೆ ಬರೆದಾರೇನ? ಇಲ್ಲ

ಅಥವಾ ಹಿಂಗೆ ಬರೆದಿ ಅಂತ ಹೇಳಿದಿರೇನ? ಇಲ್ಲ

ಈ ಗೌರಿ ಹುಣ್ಣಿವಿ ಜಾತ್ರಿ ನಡಿಯುತ್ತಿತ್ತಲ್ಲಾ ಎಲ್ಲಕ್ಕೂ ಮೊದಲು ಎಷ್ಟು ಖರ್ಚು ಆಗುತ್ತಿತ್ತು? ೫೦ ರೂಪಾಯಿ

ಈ ಜಾತ್ರಿಯೊಳಗೆ ತಮಗೆ ಆದಾಯ ಬರುತ್ತಿತ್ತು ಖರ್ಚು ಮಾಡುತ್ತಿದ್ದಿರಲ್ಲ? ತಮಗಾ ಕಟ್ಟಿ ಸಲಿಕ್ಕೆ ಅಂಗಡಿ ಹಾಕೊಳ್ಳಲಿಕ್ಕೆ ಖರ್ಚಾಗುತಿತ್ತು

ದಂಡದ ಪ್ರಕರಣ ಅಂದರೆ ಏನು ನಡೀತಿತ್ತು? ಇಲ್ಲಿ ಬಂದರು ಆಳಕೊಂಡು ಹೋದರು ಶಾನಭೋಗ ಬಂದ ದಂಡದ ಹಣ ತಗೊಂಡು ಹೋದಾ ಇದಕ್ಕೆ ನಾನು ಪ್ರಕರಣ ಅಂತಾ ಅಂತೇನಿ

ಹುಬ್ಬಳ್ಳಿಯಿಂದಾ ಇಲ್ಲಿ ಹೋಗಬೇಕಾದರೆ ಚಟಗಪ್ಪಿಯವರ ಹೊಲದೊಳಗಿಂದ ಬರತಾರೆ? ಸಾರ್ವರ ರಸ್ತೆಯಿಂದ ಚಟಗುಪ್ಪಿಯ ಹೊಲ ದಾಟಿ ಬರುತ್ತದೆ

ಕೈಯಲ್ಲಿ ಕೊಡೋದು ಹೆಚ್ಚೋ ಇಡೋದು ಹೆಚ್ಚೋ? ಕೊಡೋದು ಹೆಚ್ಚು

ನಾಗಪ್ಪ ವ ಭೀಮಪ್ಪ ಇವರು ಅವಿಭಕ್ತರೋ, ವಿಭಕ್ತರೋ? ವಿಭಕ್ತರು

ಒಮ್ಮೆ ಹೇಳಿದರಿ ನನ್ನ ಪೂಜಾ ಆಗಬೇಕು ಅಂತಾ ರಥದಲ್ಲಿ ನನ್ನ ಕೂಡ್ರಿಸುತ್ತಾರಂತಾ ಹೇಳಿದರಿ ನನ್ನ ಮರಣದ ನಂತರ ಉತ್ಸವಗಳು ನಡೆಯಬೇಕಂತಾ ನನ್ನ ಇಚ್ಛಾ ಅದೆ ಅಂತಾ ಅಂದಿರಿ? ನಾನು ಜೀವಂತ ಇರುವ ವರೆಗೆ ನಾನು ರಥದಲ್ಲಿ ಕೂಡ್ರುತೇನೆ ನನ್ನ ಪೂಜಾ ಆಗಬೇಕು ನನ್ನ ಮರಣದ ಮೇಲೆ ನನ್ನ ದೇಹ ಇಲ್ಲದಾಗ್ಯೆ ಆಗ ಇಂಥ ಉತ್ಸವ ಆಗೋದಿಲ್ಲ

ನೀವು ಮೃತ್ಯುಪತ್ರದೊಳಗೆ ನಾಮಸ್ಮರಣ ಮಾಡಿರಿ ಅಂತ ಹೇಳಿದರಿ ನಿಮ್ಮ ನಂತರ ಉತ್ಸವ ನಡೆಯತಕ್ಕದ್ದು ಅಂತ ಅಷ್ಟು ಮಾಡೇನಿ ಅಂತ ಹೇಳಿರಿ? ನಾಮಸ್ಮರಣ ಉತ್ಸವವೇ ಖರೆ ಶರೀರ ಇಲ್ಲದಿದ್ದರೆ ನಾಮಸ್ಮರಣವೇ ಖರೆ

ಇದು ನೋಡಿರಿ ಹೇಳು ವ್ಯಕ್ತಿ ಅದು ಒಂದು ಕಲಂಗೆ ಅದ ಇಲ್ಲ ಪೂರ್ವದ ಕಾಲದ ಕಿರೀಟ ಬೆಳ್ಳಿ ಭಂಗಾರದ ಸಾಮಾನ? ಅವನ್ನು ಹಾಗೇ ಉಪಯೋಗ ಮಾಡತೇನೆ

ಇಲ್ಲಿ ಉಪನಿಷದ ವಾಕ್ಯ ವೇದವಾಕ್ಯ ಬರೆದಿರಿ ಅಂತ ಹೇಳಿದರಿ ಅವು ಯಾತರ ದೆಸೆಯಿಂದ ಬರೆಸಿದಿರಿ? ಅವನ್ನು ನನ್ನ ಪ್ರೀತಿ ದೆಸೆಯಿಂದ ಬರೆಸಿದೆ

ಪಿ|| ಜೋಶಿ ಸರಿಯಿದು ತಮ್ಮ ಕ್ಯಾಸಿನಲ್ಲಿ ಒಂದು ಕಬುಲಾಯತಿ ಪತ್ರ ಮತ್ತು ಖರೀದಿ ಪತ್ರಗಳನ್ನು ಓದಿ ಹೇಳಿರಿ ಸ್ವಾಮಿಗಳಿಗೆ ಸಾಕ್ಷಿ ಮಾಡಿದ್ದರು ಅನೆ ಸು ಪತ್ರಗಳ ನಕಲು ಇಲ್ಲಿ ಕೊಟ್ಟರು

ಕಬುಲಾಯತಿ ಪತ್ರ.

ರಾ|| ರಾ|| ಉಪ್ಪರಯ್ಯಾ ಬಿನ್ ಬಸಲಿಂಗಯ್ಯಾ ಪುರಾಣಿಕ ವ ರಾಚಪ್ಪಾ ಬಿನ್ ಚನವೀರಪ್ಪ ನಾಲಿನ ಹೊಂಬಳಪ್ಪಾ ಬಿನ್ ಶೇಷಪ್ಪಾ ತಿಗಡಿ ವ ಹೊಂಡಪ್ಪಾ ಬಿನ್ ಬಸಪ್ಪಾ ಹೊಸಕೆಂಗಣವರ ವ ಸಂಗಪ್ಪಾ ಬಿನ್ ಚನಬಸಪ್ಪ ಕಂಬಳಿ ವ ವೀರಭದ್ರಪ್ಪ ಬಿನ್ ಶಿವಪ್ಪಗೌಡಾ ವ ಪರಪ್ಪಾ ಬಿನ್ ವೀರಭದ್ರಪ್ಪ ಲಕ್ಕೀಮರದ ವ ಸಾತಪ್ಪಾ ಬಿನ್ ಶಿವನಪ್ಪಾ ಮಜಲಗತ್ತಿ ಸಾ|| ಹುಬ್ಬಳ್ಳಿ ಇವರಿಗೆ—

ಕಬುಲಾಯತಿ ಪತ್ರ ಬರೆ|| ಗುರುನಾಥ ತಿಪ್ಪಣ್ಣಾ ವುರ್ಫ ಬಾಂಡರಂಗಪ್ಪಾ ತವಿ ಸಂನ್ಯಾಸಾ ಸಿಂದಸ್ಥಾ ಗಾದಿಯ ಖಾಸನಿ ಶ್ರೀ ಮಹಾಭಾಗವತ ಚೋಪ್ತಣಳಿ ವರ್ಗ ಕಿಣಿಕ್ರಾಂತಿ ವುರ್ಫ ಬಾಂಡುರಂಗಪ್ಪಾ ಸಿದ್ಧಾರೂಢರ ಸಾ|| ಹಾವೇರಿ ಹಾಲಿವಸ್ತಿ ಹುಬ್ಬಳ್ಳಿ ನಾನು ಬರೆಕೊಟ್ಟ ಕಬುಲಾಯತಿ ಪತ್ರ ಏನಂದರೆ ಆಕಾರ ರೂಪಾಯಿ (೫೦೦) ಐದುನೂರು ನನ್ನ ಮಗ ಅಲ್ಪವಯಿ ನದರಿ ಗುರುನಾಥಗೆ ಇಪ್ಪತ್ತೆಂಟು ವರ್ಷ ವಯಾ ನಡೆಯುತ್ತದೆ ಅವನ ಲಗ್ನ ಆಗಿಲ್ಲಾ ಈಗ ಅವನ ಮದುವೆ ಮಾಡುವದು ಇರುವದು ಈ ಸಂಬಂಧ ನಿಮ್ಮಲ್ಲಿ ರೂಪಾಯಿ ೫೦೦ ಐದು ನೂರು ಪಟ್ಟದೇವರ ಸಮಕ್ಷಮ ತೆಗೆದುಕೊಳ್ಳುವದು ನಿಶ್ಚಯಿಸಿ ನಮಗೆ ವತ್ತಿ ಕೊಟ್ಟು ಆಸ್ತಿ ವಿವರ ಕೆಳಗೆ ಬರೆದ ಪ್ರಕಾರ—

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲ್ಲೂಕ ಸಬ್ ರಜಿಸ್ಟರ ಹದ್ದಿನ ಪೈಕಿ ಮೌಜೆ ಕೃಷ್ಣಾಪುರ ಗ್ರಾಮದ ರಿ|| ಸರ್ವೆ ನಂಬರ ೧೫ ಮೊತ್ತ ೬.೬ ತ ರಮು ರೂಪಾಯಿ ೬-೦ ೦ ಪೈಕಿ ಕೆಳಗೆ ಕಾಣಿಸುವ ಈ ಅಳತೆ ವಳಗಿನ ಇಮಾರತ ಗೋಡಿ ವಗೈರೆ ಹೊರತು ಉಳಿದ ಒಟ್ಟು ಬಾಕಿ ಬಾ..ಕೆಗೆ ಹದಿನಾರು ರೂಪಾಯಿ ೧೬-೦-೦ ಬರುತ್ತದೆ ಈ ಹೊಲವನ್ನು ನಿಮಗೆ ಐದು ನೂರು ರೂಪಾಯಿಗೆ ಕಬ್ಜೆವತ್ತಿ ಕೊಟ್ಟಿದ್ದೇನೆ ಸದ್ರಿ ಹಣಕ್ಕೆ ಮಾಸ ಒಂದಕ್ಕೆ ನಿಶ್ಚಯಿಸಿದ ಶೇಕಡಾ ದರಸಾಲು ಆರು ರೂಪಾಯಿ ಪ್ರಕಾರ ಬಡ್ಡಿ ಕೊಡುವದು ಗೊತ್ತು ಮಾಡಿದೆ ಈ ಬಡ್ಡಿ ಪೈಕಿ ಸದರಿ ಹೊಲದ ಉತ್ಪನ್ನದಲ್ಲಿ ಜಮೀನ ಸಂಬಂಧಿ ತಿರುವೆ ವ ಲೋಕಲ್ ಫಂಡ ಕಳೆದು ಬಾಕಿ ಉಳಿದ ಉತ್ಪನ್ನ ರೂಪಾಯಿ ೯-೧೦-೦ ಪಾಳುಕಟ್ಟಿ ಹತ್ತು ಆಣೆ ನೀವು ಬಡ್ಡಿಯಲ್ಲಿ ವಜಾ ಮಾಡಿಕೊಳ್ಳಬೇಕು. ಬಾಕಿ ಬಡ್ಡಿ ರೂಪಾಯಿ ೨೦-೬-೦ ಇಪ್ಪತ್ತು ಆರು ಆಣೆ ಪ್ರತಿ ವರುಷ ನಿಮಗೆ ಕೊಡುತ್ತಾ ಇವತ್ತಿನಿಂದಾ ಎಂಟು ವರ್ಷದಲ್ಲಿ ಅಸಲು ರೂಪಾಯಿ ೫೦೦ ಐದುನೂರು ಮತ್ತು ಬಾಕಿ ಉಳಿದ ಬಡ್ಡಿ ಸಹಾ ನಿಮಗೆ ಕೊಟ್ಟು ಜಮೀನು ವತ್ತಿಯಿಂದಾ ನಾನು ಅಥವಾ ನನ್ನ ಮಗಾ ಗುರುನಾಥನು ಬಿಡಿಸಿಕೊಳ್ಳತ್ತೇನೆ ಈ ಪ್ರಕಾರ ನಿಮಗೆ ಅಸಲು ವ ಬಡ್ಡಿ (ಮುಟ್ಟಿದ) ಹಣ ನಮ್ಮಿಂದಾ ಮುಟ್ಟದೆ ಇದ್ದರೆ ಸದ್ರಿ ಹೊಲವನ್ನು ನೀವು ಮಾರಾಟ ಮಾಡ್ರಿ ಅಸಲು ಬಡ್ಡಿ ಹಣಾ ವಸೂಲ ಮಾಡಿಕೊಳ್ಳಲಿಕ್ಕೆ ನಮ್ಮ ಅಡ್ಡಿಯಿಲ್ಲಾ ಕಂಪ ಆದರೆ ನೀವು ಕೊಡಲಿಕ್ಕೆ ಇಲ್ಲಾ ಈ ಜಮೀನಿನಲ್ಲಿ ಪೂರ್ವ ದಕ್ಷಿಣ ಜಾಗಾದಲ್ಲಿ ಕೋಣೆಯಲ್ಲಿ ಅಜಮಾಸ ನೂರು ವರುಷದ ಹಿಂದೆ ನಮ್ಮ ಹಿರೀರು ಒಬ್ಬ ಬ್ರಾಹ್ಮಣ ಸನ್ಯಾಸಿಗಳ ಸಮಾಧಿ ಮಾಡಿ ಕಲ್ಲಿನಿಂದಾ ಧರ್ಮದ ಗುಡಿ ಕಟ್ಟಿರುತ್ತಾರೆ. ಆ ಗುಡಿಯು ಜಮೀನ ಮಳಾ ೧೧ ಹನ್ನೊಂದು ಇದ್ದು ಆ ಸಮಾಧಿ ಪೂಜಾ ವ ದರ್ಶನವಗೈರೆ ಹೋಗಿ ಬರಲಿಕ್ಕೆ ಈ ವರೆಗೆ ಯಾರಿಗೂ ನೀವು ಪ್ರತಿಬಂಧಕ ಮಾಡತಕ್ಕದ್ದು ಮತ್ತು ಈ ಗುಡಿಯು ಅಜುಬಾಜೂ ಜಾಗಾದಲ್ಲಿ ಅಂದರೆ ಅದೇ ಪೂರ್ವ ದಕ್ಷಿಣ ಭಾಗದಲ್ಲಿ ಈಗಾ ಇಪ್ಪತ್ತು ವರುಷಗಳ ಹಿಂದಿನಿಂದಾ ಆರೋಢ ಸಾಧುಗಳ ವಾಸ್ತವ್ಯ ಇದ್ದು ಅವರ ದರ್ಶನ ಉತ್ಸವ ಕಾಲದಲ್ಲಿ ವಗೈರೆ ಪುಷ್ಕಳ ಜನರ ಸಮೂಹವು ಕೂಡುವದರಿಂದಾ ಆ ಉಪಯೋಗಕ್ಕಾಗಿ ಕೆಲವು ಇಮಾರತುಗಳನ್ನು ಭಾವಿ ಕಟ್ಟಿ ಆವಾರ ಗೋಡೆ ಹಾಕಿ ಇರುತ್ತದೆ ಇವೆಲ್ಲಾ ನಮ್ಮ ಹಿರ್ಯಾರು ಸದರ ಪಾಂಡುರಂಗಪ್ಪನ ಸಮ್ಮತಿಯಿಂದಾ ಹುಬ್ಬಳ್ಳಿ ವಗೈರೆ ಊರ ಜನರು ವರ್ಗಣಿಯಿಂದಾ ಪುಷ್ಕಳ ಖರ್ಚು ಮಾಡಿ ಸಾರ್ವಜನಿಕರ ಕ್ಕಾಗಿ ಮಾಡಿದ್ದ ಕಲ್ಲವಾಗಿರುವದರಿಂದಾ ಮೇಲೆ ಕಾಣಿಸಿದ ಗುಡಿ ಇಮಾರತ ಭಾವಿ ವಗೈರೆ ಆವಾರಗೋಡಿ ವಳಗಿನ ಅಜಮಾಸು ಮೂರು ಎಕರೆ ೧ ಗುಂಟೆ ಅಳತೆ ಇದ್ದು ಅದರ ಚಕ್ಕೆ ಪೂರ್ವ ದಿಕ್ಕಿನ ಮಳಾ ೧೦೬ ನೂರಾರು ಆರು ಪಶ್ಚಿಮ ದಿಕ್ಕಿನ ಮಳಾ ೧೦೪ ಒಂದು ನೂರಾ ನಾಲ್ಕು ದಕ್ಷಿಣ ದಿಕ್ಕಿನ ಮಳಾ ೫೩ ಐವತ್ತೆರಡು ಉತ್ತರ ದಿಕ್ಕಿನ ಮಳಾ ೩೫ ಮೂವತ್ತೈದು ಈ ಪ್ರಕಾರ ಇದ್ದು ಅಗಲ ಜಾಗಾ ವ ಇಮಾರತ ವಗೈರೆ ನಮ್ಮ ಹಕ್ಕಿನವಲ್ಲಾ ಅದರಿಂದಾ ಅದೆಲ್ಲಾ ಬಾಕಿ ಉಳಿದ ಮಾಲ್ಲಾ ಜಮೀನು ವ ಈ ಜಮೀನಿನಲ್ಲಿ ಇರುವ ಯಾವತ್ತು ಮಾವಿನ ಗಿಡಗಳ ಪೈಕಿ ಉತ್ತರ ದಿಕ್ಕಿಗೆ ಕೆರೆಯ ಕಡಿಗೆ ಮೂರು ಮಾವಿನ ಗಿಡಗಳ ಪೈಕಿ ಉತ್ತರ ದಿಕ್ಕಿಗೆ. ಮೂಲಿ ಕಡಿಗೆ ಮೂರು ಮಾವಿನ ಗಿಡಗಳು ಕೃಷ್ಣಾಪುರದಲ್ಲಿ ಇರುವ ಕೃಷ್ಣಪ್ಪಾ ವ ನಾರಾಯಣಪ್ಪಾ ವ ನಿಂಗೋಜಿ ತಮ್ಮಾಜಿ ಪಾಟೀಲ ಕುಲಕರ್ಣಿ ಇವರ ಪಾಲ್ಕಿ ಇರುತ್ತವೆ. ಈ ಮೂರು ಮಾವಿನಗಿಡಾ ಬಿಟ್ಟು ಬಾಕಿ ಯಾವತ್ತು ಮಾವಿನಗಿಡಗಳು ವ ಜಮೀನು ಸಹಾ ನಿಮ್ಮ ತಾಬೇಕ್ಕೆ ಕೊಟ್ಟಿರುತ್ತದೆ ಸದರ ಐದು ನೂರು ರೂಪಾಯಿಗಳು ಸದರ ಸಾಧುಗಳವರ ಜಾತ್ರೆ ವ ಉತ್ಸವದಗೋಸ್ಕರ ನೀವು ವಗೈರೆ ಭಕ್ತ ಜನರ ಕಡಿಂದ ವರ್ಗಣಿ ಮಾಡಿ ವಸೂಲ ಮಾಡಿದ ಹಣವಾದದ್ದರಿಂದ ಮತ್ತು ಆ ಹಣಾ ವ ಇದರ ಉತ್ಪನ್ನ ಸಹಾ ಅದೇ ಉಪಯೋಗಕ್ಕೆ ಖರ್ಚು ಆ ತಕ್ಕದ್ದು ಆದ್ದರಿಂದ ಯಾವತ್ತು ವರ್ಗಣಿದಾರರ ಸಮ್ಮತಿ ಮೇಲೆ ನಿಮಗೆ ಈ ದಸ್ತಯಿವು ಬರೆಸಿಕೊಟ್ಟಿದ್ದೇನೆ ಸದರ ಜಮೀನಿನಲ್ಲಿ ಇರುವ ಗಿಡಗಳು ಒಣಗಿದ್ದು ಆ ಗಿಡಗಳ ಕಟ್ಟಿಗೆ ನೀವೇ ತೆಗೆದುಕೊಳ್ಳಬೇಕು ಅಂತಾ ನಾನು ನನ್ನ ರಾಜಿಖುಷಿಯಿಂದ ಬರೆಕೊಟ್ಟ ಕಬ್ಜೆವತ್ತಿ ಕಾಗದಾ ಸಹಿ ತಾರೀಖು ನೇ ಅಗಸ್ಟ ಸನ್ನ ೧೯೧೫ ನೇ ಇಸ್ವಿ

ಖರೀದಿಪತ್ರ.

ರಾ|| ರಾ|| ಉಪ್ಪರಯ್ಯಾ ಬಿನ್ನ ಬಸಲಿಂಗಯ್ಯಾ ಪುರಾಣಿಕ ವ ರಾಚಪ್ಪಾ ಬಿನ್ನ ಚನವೀರಪ್ಪಾ ನಾಲಿ ವ ಹೊಂಬಳಪ್ಪಾ ಬಿನ್ನ ಶೇಷಪ್ಪಾ ತಿಗಡಿ ವ ಹೊಂಡಪ್ಪಾ ಬಿನ್ನ ಬಸಪ್ಪಾ ಹೊಸಕೆಂಗಣವರ ವ ಸಂಗಪ್ಪಾ ಬಿನ್ನ ಚನಬಸಪ್ಪಾ ಕಂಬಳಿ ವ ವೀರಭದ್ರಪ್ಪಾ ಬಿನ್ನ ಬಸಪ್ಪಗೌಡ್ರ ವ ಸಾತಪ್ಪಾ ಬಿನ್ನ ಶಿವನಪ್ಪಾ ಮಜಲಗತ್ತಿ ಸಾ|| ಹೊಸ ಹುಬ್ಬಳ್ಳಿ ವ ಹಳೇಹುಬ್ಬಳ್ಳಿ ತಾಲ್ಲೂಕ ಹುಬ್ಬಳ್ಳಿ ಇವರಿಗೆ—

ಖರೀದಿ ಪತ್ರ ಬರೆ|| ಗುರುನಾಥ ತಿಪ್ಪಣ್ಣಾ ವುರ್ಫ ಪಾಂಡುರಂಗಪ್ಪಾ ಹುಬ್ಬಣ್ಣವರ ಸಾ|| ಹಾವೇರಿ ತಾಲ್ಲೂಕ ಕರ್ಜಗಿ ಹಾ|| ವಸ್ತಿ ಹುಬ್ಬಳ್ಳಿ ನಾನು ಬರೆಕೊಟ್ಟ ಖರೀದಿಪತ್ರ ಏನಂದರೆ ರೂಪಾಯಿ ೫೦೦ ಐದು ನೂರು ನಾನು ಅಜ್ಞಾನ ದೆಸೆದಲ್ಲಿ ಇದ್ದಾಗ್ಗೆ ನನ್ನ ಲಗ್ನದ ದೆಸೆಯಿಂದ ನಮ್ಮ ತಾಯಿ ಚನ್ನಬಸವ್ವಾ ನಿಮ್ಮಲ್ಲಿ ರೂಪಾಯಿ ೫೦೦ ತೆಗೆದುಕೊಂಡು ನಿಮಗೆ ಕಬ್ಜೆವತ್ತಿ ಕೊಟ್ಟ ಆಸ್ತಿ ವಿವರಾ ಕೆಳಗೆ ಬರೆದ ಪ್ರಕಾರ—

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲ್ಲೂಕ ಸಬ್ ರಜಿಸ್ಟರ ಹದ್ದಿನ ಪೈಕಿ ಮೌಜೆ ಕೃಷ್ಣಾಪುರ ಗ್ರಾಮದ ರಿ|| ಸರ್ವೆ ನಂಬರು ೧೫ ಮೊತ್ತ ೬.೬ ತರಂ ರೂಪಾಯಿ ೬ ಇದರ ಪೈಕಿ ಕೆಳಗೆ ಕಾಣಿಸುವ ಅಳತೆ ವಳಗಿನ ಇಮಾರತು ವ ಗೋಡಿ ವಗೈರೆ ಹೊರತು ಉಳಿದ ಜಮೀನು ವಾರ್ಷಿಕ ಆಕಾರಕ್ಕೆ ಹದಿನಾರು ೧೬ ಬರತದೆ ಈ ಹೊಲವನ್ನು ನಿಮಗೆ ೫೦೦ ರೂಪಾಯಿಗಳಿಗೆ ನಮ್ಮ ತಾಯಿ ಕಬಜಾವತ್ತಿ ಕೊಟ್ಟಿದ್ದಳು ಸದರಿ ಹಣಕ್ಕೆ ವರುಷ ಒಂದಕ್ಕೆ ನಿಶ್ಚಯಿಸಿದ ಬಡ್ಡಿ ರೂಪಾಯಿ ೬ ಪ್ರಕಾರ ಬಡ್ಡಿ ಕೊಡುವದು ಗೊತ್ತು ಮಾಡಿದಳು. ಈ ಬಡ್ಡಿ ಪೈಕಿ ಸದರ ಹೊಲದ ಉತ್ಪನ್ನದಲ್ಲಿ ಜಮೀನ ಸಂಬಂಧ ತೀರ್ವೆ ವ ಲೋಕಲ್ ಫಂಡು ಕಳೆದು ಬಾಕಿ ಉತ್ಪನ್ನ ರೂಪಾಯಿ ೯-೧೦-೦ ಪ್ರತಿ ವರ್ಷ ನಿಮಗೆ ಕೊಡತಕ್ಕ ಇವತ್ತಿನಿಂದಾ ಎಂಟು ವರ್ಷದಲ್ಲಿ ಐದುನೂರು ರೂಪಾಯಿ ೫೦೦ ವ ಮತ್ತು ಬಾಕಿ ಉಳಿದ ಬಡ್ಡಿ ಸಹಾ ನಿಮಗೆ ಕೊಟ್ಟು ಜಮೀನು ವತ್ತಿಯಿಂದಾ ನಮ್ಮ ತಾಯಿ ಚೆನ್ನಬಸವ್ವಾ ಅಥವಾ ನಾನು ಬಿಡಿಸಿಕೊಳ್ಳಬೇಕು. ಆ ಪ್ರಕಾರ ನಿಮಗೆ ಅಸಲು ವ ಬಡ್ಡಿ ನಮ್ಮಿಂದಾ ಮುಟ್ಟದಿದ್ದರೆ ಸದರ ಹೊಲವನ್ನು ನೀವು ಮಾರಾಟ ಮಾಡ್ರಿ ಅಸಲು ವ ಬಡ್ಡಿ ಹಣಾ ಮುಟ್ಟಿಸಕೊಳ್ಳಬೇಕು. ಈ ಜಮೀನಿನಲ್ಲಿ ಪೂರ್ವ ದಕ್ಷಿಣ ಜಾಗಾದ ಕೋಣೆಯಲ್ಲಿ ಅಜಮಾಸು ನೂರು ವರುಷದ ಹಿಂದೆ ನಮ್ಮ ಹಿರೀರು ಒಬ್ಬ ಬ್ರಾಹ್ಮಣ ಸನ್ಯಾಸಿಗಳ ಸಮಾಧಿ ಮಾಡಿ ಕಲ್ಲಿನಿಂದ ಧರ್ಮದ ಗುಡಿ ಕಟ್ಟಿಸಿರುತ್ತಾರೆ ಆ ಗುಡಿಯು ಅವರ ಜಮೀನ ಮಳಾ ೧೧ ಹನ್ನೊಂದು ಇದ್ದು ಆ ಸಮಾಧಿ ಪೂಜಾ ವ ದರ್ಶನ ವಗೈರೆಕ್ಕೆ ಹೋಗಿಬರಲಿಕ್ಕೆ ಈ ವರೆಗೆ ಯಾರಿಗೂ ನೀವು ಪ್ರತಿಬಂಧಕ ಮಾಡಬಾರದು. ಗುಡಿಯು ಅಜುಬಾಜು ಜಾಗಾದಲ್ಲಿ ಪೂರ್ವದ ದಕ್ಷಿಣದ ಭಾಗದಲ್ಲಿ ಈ ವರುಷ ಹಿಂದಿನಿಂದಾ ಆರೂಢ ಸಾಧುಗಳ ವಾಸ್ತವ್ಯ ಇದ್ದು ಅವರ ದರ್ಶನ ವ ಉತ್ಸವ ವಗೈರೆ ಕಾಲದಲ್ಲಿ ಪುಷ್ಕಳ ಜನರ ಸಮೂಹ ಕೂಡುವದರಿಂದಾ ಆ ಉಪಯೋಗಕ್ಕಾಗಿ ಕೆಲವು ಇಮಾರತುಗಳು ವ ಭಾವಿ ಕಟ್ಟಿ ಆವಾರ ಗೋಡಿ ಹಾಕಿ ಇರುತ್ತದೆ ಇವೆಲ್ಲಾ ನಮ್ಮ ಹಿರೇರು ಸದರ ಪಾಂಡುರಂಗಪ್ಪನ ಸಮ್ಮತಿಯಿಂದಾ ಹುಬ್ಬಳ್ಳಿ ವಗೈರೆ ಪುರ ಜನರು ವರ್ಗಣಿಯಿಂದಾ ಪುಷ್ಕಳ ಖರ್ಚು ಮಾಡಿ ಸಾರ್ವಜನಿಕರಕ್ಕಾಗಿ ಧರ್ಮದ ಕೆಲಸದಿಂದಾ ಮೇಲೆ ಕಾಣಿಸಿದ ಗುಡಿ ಇಮಾರತ ಭಾವಿ ವಗೈರೆ ಆವಾರ ಗೋಡಿ ವಳಗಿನ ಅಜಮಾಸ ಮೂರು ಎಕರೆ ೧ ಗುಂಟೆ ಅಳತೆಯಿದ್ದು ಅಗಲಕೆ ಇದ್ದು ಪೂರ್ವ ದಿಕ್ಕಿನ ಮಳಾ ೧೦೬ ನೂರಾ ಆರು ಪಶ್ಚಿಮ ದಿಕ್ಕಿನ ಮಳಾ ೧೦೪ ನೂರಾ ನಾಲ್ಕು ದಕ್ಷಿಣ ದಿಕ್ಕಿನ ಮಳಾ ೫೨ ಐವತ್ತೆರಡು ಉತ್ತರ ದಿಕ್ಕಿನ ಮಳಾ ೩೫ ಮೂವತ್ತೈದು ಈ ಪ್ರಕಾರ ಇದ್ದು ಅಗಲ ಜಾಗಾ ವ ಇಮಾರತ ವಗೈರೆ ನಮ್ಮ ಹಕ್ಕಿನವಲ್ಲ ಅದ್ದರಿಂದಾ ಅದೆಲ್ಲಾ ಬಿಟ್ಟು ಬಾಕಿ ಉಳಿದ ಖುಲ್ಲಾ ಜಮೀನ ಗಿಡಗಳ ಪೈಕಿ ಉತ್ತರದಿಕ್ಕಿಗೆ ಕರಿಮೂಲಿ ಕಡಿಗೆ ಮೂರು ಮಾವಿನ ಗಿಡಗಳ ಕೃಷ್ಣಾಪುರದಲ್ಲಿ ಇರುವ ಕೃಷ್ಣಪ್ಪ ವ ನಾರಾಯಣಪ್ಪ ವ ಲಿಂಗಪ್ಪಾ ವ ನಿಂಗೋಜಿ ತಮ್ಮಾಜಿ ಪಾಟೀಲ ಕುಲಕರ್ಣಿ ಇವರ ಪಾಲ್ಕಿ ಇರುತ್ತವೆ ಈ ಮೂರು ಮಾವಿನ ಗಿಡಗಳು ಬಿಟ್ಟು ಬಾಕಿ ಯಾವತ್ತು ಮಾವಿನ ಗಿಡಗಳು ವ ಜಮೀನು ಸಹ ಈ ಪ್ರಕಾರ ಮೇಲೆ ಕಾಣಿಸುವ ಆಸ್ತಿಯು ನಾನು ಅಜ್ಞಾನ ದೆಸೆಯಲ್ಲಿ ಇದ್ದಾಗ್ಯೆ ನಮ್ಮ ತಾಯಿ ಚನ್ನಬಸವ್ವಾ ಕೋಂ ತಿಪ್ಪಣ್ಣಾ ವುರ್ಫ ಪಾಂಡುರಂಗಪ್ಪ ಹುಬ್ಬಣ್ಣವರ ಸಾ|| ಹಾವೇರಿ ಇವಳು ನಿಮಗೆ ತಾರೀಖು ೬ ಮಾಹೆ ಅಗಸ್ಟ ಸನ್ ೧೯೧೫ ಇಸ್ವಿಗೆ ರೂಪಾಯಿ ೫೦೦ ಐದುನೂರಕ್ಕೆ ಕಬಜಾ ವತ್ತೀ ಕೊಟ್ಟು ಈ ಹಣಕ್ಕೆ ಬಡ್ಡೀ ದರ ಶೇಕಡಾ ದರವೊಂದು ವರುಷಕ್ಕೆ ಒಪ್ಪಿಕೊಂಡು ಶರ್ತಿನಿಂದಾ ಕಾಗದಾ ಬರೆಸಿಟ್ಟ ನಂಬರ ೧೩೪೫ಕ್ಕೆ ರಜಿಸ್ಟರ ಮಾಡ್ಸಿ ಕೊಟ್ಟಿದ್ದಳು ಸದರ ಆಸ್ತಿಯನ್ನು ನಿಮ್ಮ ಉಪಭೋಗದಲ್ಲಿ ಕೊಟ್ಟಿರುತ್ತಾಳೆ ಆದರೆ ಈ ಹಣಾ ವ ಬಡ್ಡಿ ನಮ್ಮಿಂದಾ ಕೊಟ್ಟು ಸದರ ಆಸ್ತಿಯನ್ನು ಬಿಡಿಸಿಕೊಳ್ಳುವದು ಆಗದ್ದರಿಂದಾ ನಿಮಗೆ ಒಡಂಬಡಿಕೆ ಪ್ರಕಾರ ಮಾರಿಕೊಂಡು ಅದರ ಹಕ್ಕೆ ಇವತ್ತಿನತನಕಾ ಆದ ಬಡ್ಡಿಯನ್ನು ನಿಮ್ಮಿಂದಾ ಸೂಟ ಬಿಡಿಸಿಕೊಂಡು ಸದರ ಐದುನೂರು ರೂಪಾಯಿ ೫೦೦ಕ್ಕೆ ನನ್ನ ಸಮ್ಮೋದಿತವಾದ ಆಸ್ತಿಯು

[illegible]

ರಾ. ಬ. [illegible] ನವರಿಗೆ ಕೇಳಿದ [illegible] ಪ್ರಶ್ನೆಗಳು.

[illegible]

ಬೆಂಗಳೂರಲ್ಲಿ ಗೋಳೀಬಾರು.

ಪ್ರಮುಖರ ದಸ್ತಗಿರಿ

[illegible]

— (೧) —

ಬೆಂಗಳೂರ [illegible]

[illegible]

ಬೆಂಗಳೂರಲ್ಲಿ ಗುಂಡು ಹಾರಿಸಿದ್ದರ [illegible]

[illegible]

[illegible] ಗುಂಡು [illegible] ಕೊಂಡು [illegible] ಪಡೆದರೆಂಬುದು ಸೀಸ ದೇಶವಾದದ್ದು.

ಕಾಟೂಲದ ಮಹತ್ವದ ಸುದ್ದಿಗಳು.

[illegible]

— (೦) —

[illegible]

ಧಾರವಾಡ [illegible] ಬ್ಯಾಂಕ ಲಿಮಿಟೆಡ

[illegible] ಧಾರವಾಡ.

[illegible] ಸ್ವೀಕರಿಸಲಾಗುತ್ತದೆ [illegible]

[illegible] ಕೆಳಗೆ ಸಹೀ ಮಾಡಿದವ [illegible]

[illegible]
ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡ ಬ್ಯಾಂಕ ಲಿಮಿಟೆಡ್ [illegible]

ಈ ಬ್ಯಾಂಕಿನಲ್ಲಿ ನೂರು ನಾಲ್ಕು ಆರು ತಿಂಗಳ [illegible]

[illegible]

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಸುಸಮಯ.

[illegible] ಶ್ರೀನಿವಾಸಯ್ಯಂಗಾರ, [illegible] [ಕೊಲ್ಹಾಪುರ [illegible]] [illegible] ಇವರಿಗೆ ಬರೆದು ತಿಳಿಸಬೇಕು.

ಕೇಸರಿ ಪತ್ರದ ಬಗ್ಗೆ ಸ್ಪಷ್ಟ ಹೇಳಿಕೆ.

ಮುಂದಿನ ವಾರದಿಂದ ಕೇಸರಿ ಪತ್ರವು ವಾರದಲ್ಲಿ ಎರಡು ಸಾರೆ ಹೊರಡುವದು. ಆ ಸಮಯವನ್ನು ಅನುಕೂಲಿಸಿ, ಅದರ ಸಂಪಾದಕ ವರ್ಗದ ಶ್ರೇಷ್ಠ ಶ್ರೀ. ಮಾಧವರಾವ ಬೋಡಸ ಇವರು ಈ ಪತ್ರ ಮತ್ತು ಇದರ ಪ್ರಸ್ತುತದ ಸಂಪಾದಕರಾದವು ಕೇಳಕರರ ಬಗ್ಗೆ ಮುಂದೆ ಕೊಟ್ಟಂತೆ ಹೇಳುತ್ತಾರೆ. ಅದು ಪ್ರಶ್ನೋತ್ತರ ರೂಪದಿಂದ ಕೆಳಗೆ ಕೊಟ್ಟಿಂತಿರುತ್ತದೆ.

ಪ್ರ|| ಕೇಸರೀ ಪತ್ರಿಕೆಯು ಅರ್ಧಸಾಪ್ತಾಹಿಕವಾಗುವದಿದ್ದು ಈ ಕುರಿತು ಹೋದ ಮಂಗಳವಾರ ಕೇಸರಿಯಲ್ಲಿ ಒಂದು ಜಾಹೀರಾತು ಸಹ ಬಂದಿದೆ. ಇದಕ್ಕೆ ನಿಮ್ಮ ಮತವೇನಿದೆ

ಉ - ಕಳೆದ ಮೂವತ್ತೆಂಟು ವರ್ಷಗಳಿಂದ ನಾನು ಕೇಸರಿಯ ವರ್ಗಣಿದಾರನಿದ್ದೇನು. ಆದರೆ ಈಗ ಬಿಟ್ಟು ಬಿಟ್ಟಿದ್ದೇನೆ. ಯಾಕೆಂದರೆ ಹಣ ಕೊಟ್ಟು ಕೊಂಡುಕೊಂಡು ಓದುವಷ್ಟು ಅಂಥದೇನು ಅದರಲ್ಲಿ ಮಹತ್ವವಿರುವದಿಲ್ಲೆಂದು ನನಗೆ ಅನಿಸುತ್ತದೆ

ಪ್ರ|| ಲೋಕಮಾನ್ಯರಾದರೂ ಈ ಪತ್ರಿಕೆಯನ್ನು ಅರ್ಧಸಾಪ್ತಾಹಿಕವನ್ನಾಗಿ ಮಾಡಬೇಕೆಂದಿದ್ದರೆಂಬುದು ನಿಜವೇ?

ಉ - ಇದು ತೀರ ನಿಜವು. ಈ ಕುರಿತು ಕತ್ತ ಹಾಗೂ ಲೋಕಮಾನ್ಯರ ವಿಚಾರವಿನಿಮಯವಾಗಿತ್ತು. ತಾಯೀ ಮಹಾರಾಜರ ಖಟ್ಲೆ ತೀರಿದ ಮೇಲೆ ಎಲ್ಲವನ್ನೂ ಮಾಡಬೇಕೆಂದು ಅವರು ನಿಶ್ಚಯಿಸಿದ್ದರು. ಇದಕ್ಕಾಗಿ ಹೊಸ ಬಂಡಗಾರರನ್ನು ಬಳ್ಳಿಗೆ ಸಂಪಾದಿಸಬೇಕೆಂದು ಕೂಡ ಅವರು ವಿಚಾರ ಮಾಡುತ್ತಿದ್ದರು. ಲೋಕಮಾನ್ಯರು ರಾ|| ಕೇಳಕರರಿಗೆ ಮುಂಗಡ ನೋಟೀಸ ಕೊಟ್ಟು ತಮ್ಮಲ್ಲಿಂದ ತೆಗೆದುಹಾಕಬೇಕೆಂದು ಮಾಡಿದ್ದರು. ಆದರೆ ಕೇಳಕರರಿಗೆ ನಮ್ಮ ಯಾವತ್ತೂ ಗುಪ್ತ ಸಂಗತಿಗಳು ಗೊತ್ತಿದ್ದರಿಂದ ಒಮ್ಮೆಲೆ ತೆಗೆದು ಹಾಕುವದು ಯೋಗ್ಯವಾಗುವದಿಲ್ಲೆಂದು ನಾನು ಹೇಳಿದೆನು. ಮತ್ತು ಮುಂದೆ ಎಲ್ಲ ವ್ಯವಸ್ಥೆಯಾದ ಮೇಲೆ ಕೇಳಕರರು ತಾವಾಗಿಯೇ ಬಿಟ್ಟು ಹೋಗುವರೆಂದು ನನಗೆ ಅನಿಸಿತ್ತು. ಆದರೆ ಮುಂದೆ ಲೋಕಮಾನ್ಯರೇ ನಮ್ಮ ಕೈಬಿಟ್ಟ ಮೇಲೆ ಎಲ್ಲವೂ ವ್ಯರ್ಥವಾಗಿ ಹೋಯಿತು.

ಪ್ರ - ಜ್ಞಾನಪ್ರಕಾಶ ಮತ್ತು ನವಾಕಾಳ ಇವೆರಡು ಪತ್ರಿಕೆಗಳ ಪೈಪೋಟಿಯಿಂದ ಕೇಸರಿಯ ಖಪತು ಕಡಿಮೆಯಾಗಹತ್ತಿದ್ದರಿಂದ ಅದನ್ನು ಅರ್ಧಸಾಪ್ತಾಹಿಕ ಮಾಡಬೇಕಿನ್ನುವದೋ?

ಉ - ಹಾಗೇನು ಇಲ್ಲಿಕ್ಕಿಲ್ಲ. ಲೋಕಮಾನ್ಯರ ಕೇಸರಿಯು ಕೈಹಿಡಿಯುವವರು ಯಾರೂ ಇಲ್ಲ. ಆದರೆ ಈಗ್ಗೆ ಕೇಸರಿಯು ನಿಕೃಷ್ಟ ಅವನತಿಯನ್ನು ಹೊಂದುತ್ತ ನಡೆದಿದೆ. ಇದಕ್ಕೆ ಇತರ ವೃತ್ತಪತ್ರಿಕೆಗಳ ಪೈಪೋಟಿಯಲ್ಲ. ಆದರೆ ಕೇಸರಿಯಲ್ಲಿ ಏನೂ ಅರ್ಥವಿಲ್ಲ. ಒಳಗಿನ ಮದ್ದೆಲ್ಲವೂ ಹಾರಿಹೋಗಿ ಕೇವಲ ಕಳಿಯಷ್ಟೇ ಉಳಿದಿದೆ. ಇಂಥ ಕೇಸರಿಯು ವಾರಕ್ಕೆ ಎರಡು ಸಾರೆ ಹೊರಡುವದನ್ನು ಬಿಟ್ಟು ಏಳು ಸಾರೆ ಹೊರಟರೂ ನಿರರ್ಥಕವೇ. ಕೇಳಕರರು ತಮ್ಮ ಮಗ್ಗಿನಂತಿದ್ದು, ಉಪಸಂಪಾದಕ ವರ್ಗವೆಲ್ಲವೂ ಕಂಗಟದ ಗುಂಡುಗಳಂತಿರುವರು. ಇಂಥ ಬಂದೂಕಿನಿಂದ ಹಾರುವದೇನು? ಬಡುವದೇನು? ಮೋಲ್ತರದ ಕಾಗದ ಅಂದವಾದ ಟಾಯಿಪುಗಳು ಇವುಗಳ ಮೇಲೆ ವೃತ್ತಪತ್ರದ ಬೆಳೆಯು ಅವಲಂಬಿಸಿರುವದಿಲ್ಲ. ಅರ್ಜೆಂಟಿಕನ್ನು ಸದೇವಂತನ್ನಾಗಿ ಮಾಡುವ ಶಕ್ತಿಯುದ್ದರೆ ಅದಕ್ಕೆ ವೃತ್ತಪತ್ರವೆನ್ನಬೇಕು. ಅಂಥ ಚೈತನ್ಯವು ಈಗ ಗಾಯಕವಾದ ವಾಡೆಯಲ್ಲಿಲ್ಲ. ತಾಂತ್ರಿಕ ಹಾಗೂ ಹೊಟ್ಟೆ ಹೊರಕೊಳ್ಳುವವರ ಸಾಮ್ರಾಜ್ಯವು ಅಲ್ಲಿ ನೆಲೆಗೊಂಡಿದೆ.

ಶ್ರೀ ಮಾಧವರಾವ ಬೋಡಸ ಇವರು ಮುಂಬಯಿಯಲ್ಲಿ ಸುಪ್ರಸಿದ್ಧ ಗೃಹಸ್ಥರೂ, ಹಾಯಕೋರ್ಟಿನ ವಕೀಲರೂ, ಮರಾಟೆ ಭಾಷಾಕೋವಿದರೂ ಆಗಿದ್ದಾರೆ. ಆದ್ದರಿಂದ ಇವರ ಮತವು ಸರ್ವತೋಪರಿಗ್ರಾಹ್ಯವಾದುದೆಂದು ನಂಬಲಿಕ್ಕೆ ಅಡ್ಡಿ ಇರುವದಿಲ್ಲ.

ಆಲ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಿ ಕಾಶೋಜಿಕರ ಕಾಂಗ್ರೆಸ ಸಭೆಯಾಗುವವರೆಗೆ ಅಸೆಂಬ್ಲಿ ಮತ್ತು ಕೌನ್ಸಿಲುಗಳಿಗೆ ಬಹಿಷ್ಕಾರ ಹಾಕಬಾರ... ...ನಿಶ್ಚಯವಾಯಿತು.

ಸಾಬರಮತಿಗೆ ಮಹಾಪೂರ.

—(೦)—

ಕುಟುಂಬಗಳೇ ಕೊಚ್ಚಿಹೋದವು

—(೦)—

ಅಬೂ ಪರ್ವತದಲ್ಲಿ ಒಂದೇ ದಿವಸದಲ್ಲಿ ೧೬ ಇಂಚು ಮಳೆಯಾಯಿತು. ಕೂಡಲೆ ಸಾಬರಮತಿಗೆ ಮಹಾಪೂರ ಬಂತು. ನೀರು ವಿದ್ಯುದ್ವೇಗದಿಂದ ಹರಿಯುತ್ತಾ ಬಂತು. ಅಹಮದಾಬಾದಿನಲ್ಲಿ ನೆರೆಬರುವವರೆಗೆ ನದಿಯಲ್ಲಿ ನೀರು ಸೇರಿದ್ದಿಲ್ಲ. ಒಮ್ಮೆಯಲೆ ಭಯಂಕರ ಸಪ್ಪಳವಾಗುತ್ತಾ ನದಿಯ ತುಂಬ ಬರುವ ನೀರನ್ನು ಕಂಡು, ದಟ್ಟಿಗಳನ್ನು ಒಗೆಯುತ್ತಿದ್ದ ಅಗಸರು ಗಾಬರಿಯಾದರು ದಂಡೆಗೆ ಬರದೇ ಕನ್ನು ನಷ್ಟರಲ್ಲಿ ಪರ್ವತಪ್ರಾಯವಾಗಿ ಬರುತ್ತಿದ್ದ ನೀರು ಇವರನ್ನು ಮುಣುಗಿಸಿಕೊಂಡು ಹೋಯಿತು. ಆ ಜನರು ಹೀಗೆ ಕ್ಷಣಾರ್ಧದಲ್ಲಿ ಜಲಸಮಾಧಿ ಹೊಂದಿದರು. ಕೆಲವರ ಮನೆತನಗಳೇ ಲಯವಾದವು. ಸೃಷ್ಟಿ ಕೋಪವು ವಿಚಿತ್ರವಾದದ್ದೇ ಸರಿ.

ವಿಮಾನದಿಂದ ಸಿಮಲಾಕ್ಕೆ ಔಷಧ

—(೦)—

ಸಿಮಲಾದ ಯುವರಾಜರಿಗ ಬೇರಾಗಿದೆ ಇಲ್ಲಿ ಬೇನೆಗೆ ತಕ್ಕ ಮದ್ದಿಲ್ಲ ಹಿಂದುಸ್ಥಾನದಿಂದ ವಿಮಾನದಿಂದ ಕಳಿಸಿದ ಆಸ್ಥಾನ ಮಂತ್ರಿಯು ಸಿಮಲದ ಪರರಾಷ್ಟ್ರಗಳ ಮಂತ್ರಿಗೆ ತಾರು ಮಾಡಿದನು ಅವರಿಗೆ ಬೇಕಾದ ಔಷಧವು ಕಲಕತ್ತೆಯ ಒಂದು ಯುರೋಪಿಯನ್ನ ಕಂಪನಿಯಲ್ಲಿ ಸಿಕ್ಕಿತು ಒಂದು ವಿಮಾನಕ್ಕೆ ಅಪಘಾತವಾದರೂ ಮತ್ತೊಂದರಿಂದ ಔಷಧ ಮುಟ್ಟಿತೆಂದು ಎರಡು ವಿಮಾನಗಳನ್ನು ಬಿಟ್ಟರು ಇವು ಅರ್ಧ ದಾರಿಯೊಳಗೆ ಔಷಧ ಸಿಕ್ಕಿತೆಂದು ತಾರುಬಂತು ವಿದ್ಯುಕ್ಸಂದೇಶದಿಂದ ಇವು ಅಲ್ಲಿಂದ ಕಲಕತ್ತೆಗೆ ತಿರುಗಿದವು ರಾಜಪುತ್ರನ ಬದ್ದು ಹೇಗಿರುತ್ತದೆಂಬುದು ಮಾತ್ರ ತಿಳಿಯುವದಿಲ್ಲ.

ನೀಲಗಿರಿ ಸಂಜೀವಯ್ಯನವರ ಮೇಲೆ ಕೇಸು.

—)(೦)(—

ಮೈಸೂರಲ್ಲಿ ಬ್ರಾಹ್ಮಣೇತರ ಪಕ್ಷದ ಪ್ರಬಲ ಗೃಹಸ್ಥರಾದ ನೀಲಗಿರಿ ಸಂಜೀವಯ್ಯನವರು ಮೋಟಾರ ಸರ್ವೀಸು ಇಟ್ಟಿದ್ದಾರೆ. ಇವರು ಒಂದು ಯುರೋಪಿಯನ್ನ ಕಂಪನಿಗೆ ಕೊಡಬೇಕಾದ ದ್ರವ್ಯವಿಚಾರದಲ್ಲಿ ಸುಳ್ಳು ಚೆಕ್ಕ ಕೊಟ್ಟರು. ಕಂಪನಿಯವರು ಆ ಚಕ್ಕಿನ ದೆಸೆಯಿಂದ ಇವರ ಮೇಲೆ ಫೌಜದಾರಿಯಲ್ಲಿ ಫಿರ್ಯಾದಿ ಮಾಡಿದ್ದಲ್ಲದೆ, ಇವರ ಎಲ್ಲ ಮೋಟಾರಗಳನ್ನು ಜಪ್ತ ಮಾಡಿಸಿದ್ದಾರೆ

ಇಜಿಪ್ತಕ್ಕೆ ಸ್ವರಾಜ್ಯ ಸ್ವಾತಂತ್ರ್ಯ

—(೦)—

ಲಾರ್ಡ ಲಾಯಿಡರ ಹೇಳಿಕೆ ಕೂಡ, ಇಜಿಪ್ತದ ಈಗಿನ ಮುಖ್ಯಮಂತ್ರಿಗಳೂ ರಾಜನಿಷ್ಠರಾದವರು ಪಾರ್ಲಮೆಂಟದ ಚುನಾವಣೆಯಾಗಿ, ರಾಷ್ಟ್ರೀಯ ಪಕ್ಷದವರು ಸ್ವರಾಜ್ಯ ಸ್ವಾತಂತ್ರ್ಯವನ್ನು ಪಡೆಯುವರು. ಹಾಯ ಕಮಿಶನರ ಬದಲಾಗಿ ಇಂಗ್ಲೀಷರ ರಾಯಭಾರಿ ಇರುವನು. ಇಜಿಪ್ತವು ಇಂಗ್ಲಂಡದಲ್ಲಿ ತನ್ನ ರಾಯಭಾರಿ ಇಡುವದು ಮತ್ತು ರಾಷ್ಟ್ರಸಂಘದ ಮೆಂಬರವಾಗಿ ಬೇರೆ ರಾಜ್ಯಗಳಂತೆ ಸರಿಸಮಾನ ದರ್ಜೆಪಡೆಯುವದು

ಮಾಜೀ ಕೌನ್ಸಿಲ ಮೆಂಬರರ ಮೇಲೆ ಭಯಂಕರ ಆರೋಪ.

—(೦)—

ಸಿಂಧದ ಶಿಕಾರಪುರದ ಕೌನ್ಸಿಲ ಮೆಂಬರರಾಗಿದ್ದ ಕಲಂದರಬಕ್ಷಸಾಹೇಬರು ಒಬ್ಬನನ್ನು ಹೊಡೆದು, ಅವನಿಗೆ ಕೊಲ್ಲುವ ಧಮಕಾವಿಸಿದರೆಂಬ ಆರೋಪದಿಂದ ದಸ್ತಗಿರ ಮಾಡಲ್ಪಟ್ಟು, ಜಾಮೀನು ಮುಚ್ಚಳಿಕೆಯ ಮೇಲಿದ್ದಾರೆ. ವಿಚಾರಣೆಯು ಬೇರೊಂದು ಕೋರ್ಟಿಗೆ ವರ್ಗವಾಗಬೇಕೆಂದು ಮಾಡಿದ ಅರ್ಜಿಯನ್ನು ಮ್ಯಾಜಿಸ್ಟ್ರೇಟರು ಕಿತ್ತಿಹಾಕಿದರು.

ಹಿಮಾಲಯದಲ್ಲಿ ಕಾಂಚನಗಂಗಾದ ಶಿಖರವೇರುವದಕ್ಕೆ ಕೆಲ ಜರ್ಮನ ಪ್ರವಾಸಿಕರು ಸಾಹಸ ಪಡುವರು. ಈಗ ಇವರು ಕಲಕತ್ತೆಯಿಂದ ಹಿಮಾಲಯಕ್ಕೆ ಹೊರಟಿರುತ್ತಾರೆ.

ತ್ವರೆಮಾಡಿರಿ!   ಅರ್ಧ ಕಿಮ್ಮತ್ತು!!   ಬರೀರಿ!!

ಈ ಪತ್ರದ ವರ್ಗಣಿದಾರರಿಗೆ ಮಾತ್ರ.

ಮೂರು ತಿಂಗಳವರೆಗೆ ಅರ್ಧ ಕಿಮ್ಮತ್ತು.

ಲಿವ್ಹರ ರಿಷ್ಟವಾಚ್- (ಗಡಿಯಾರ.)

ಮೊದಲನೇದು
೧ ನೇದು ೧೪—೦—೦
೨ ನೇದು ೧೫—೦—೦



ಎರಡನೇದು
೧ ನೇದು ೬—೦—೦
೨ ನೇದು ೬—೮—೦

೧ ಕೈಗೆ ಕಟ್ಟುವ ರಿಷ್ಟವಾಚ್. ರೇಡಿಯಂ ಮುಳ್ಳು ಇದ್ದು ಮಜಬೂತ ವ ಸುಂದರ ಇರುವದು. ಕಿಮ್ಮತ್ತು ೧ ಕ್ಕೆ ೧೪-೦-೦

೨ ಡಿಟೋ ಮೇಲಿನಂತೆ ಇದ್ದು ರೇಡಿಯಂ (ಕತ್ತಲಲ್ಲಿ ಕಾಣುವಂತೆ) ಇರುವ ವಾಚ್ ೧ ಕ್ಕೆ ರೂ ೧೫-೮-೨

ಇವುಗಳಿಗೆ ಗ್ಯಾರಂಟಿ ೫ ವರ್ಷ. ಕಿಮ್ಮತ್ತಿನ ಶಿವಾಯ ಟಿ ಪಿ. ಬೇರೆ. ಇವತ್ತೆ ತರಿಸಿಕೊಳ್ಳಿರಿ ಮುಂದಿನಂತೆ ಸಿಗಲಿಕ್ಕಿಲ್ಲ.

ವಿಳಾಸ:- ಸುಪೀರಿಯರ ವಾಚ ಕಂಪನಿ.
ಪೋಸ್ಟ ಬಾಕ್ಸ (ಉತ್ತರ ಕಾನಡಾ.

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಪೆಠ- ಮಂಗಳವಾರಪೇಟೆ, ಜಕವಲ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೂಯ ದರದಿಂದ ತಾಸು ಮತ್ತು ಒಮ್ಮೆ ಮುದ್ದತಿಯ ಕರ್ಜ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ಕರ್ಜ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ... ಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ... ಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕೂ

ಕೃಷ್ಣರಾವ ವೆಂಕಟರಾವ ಧಂಡಿವಾಡ.
ಮ್ಯಾನೇಜಿಂಗ ಏಜಂಟ.

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದೆ ಮಧ್ಯಾಹ್ನದ ೩-೩೦ ರಿಂದ ೪ರ ವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಕೃಕ್ಷಬಯಾಗಿ ತೆಗೆಯಲ್ಪಡುವವು

ಮುದತಿ ಠೇವುಗಳು — ಒಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩|| ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು ಬಡ್ಡಿದರ ೩|| ರೂ.

ಸೇವ್ಹಿಂಗ್ಸ ಬ್ಯಾಂಕ.— ಬಡ್ಡೀದರಗಳಿಂದ ತೆಗೆದುಕೊಳ್ಳಲ್ಪಡುವವು ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡಿದರ ೬ ರೂ. ಸುಲಕ್ಷಣ ಸಲುವಾಗಿ ತೆಗೆದುಕೊಳ್ಳಲ್ಪಡುವವು ಕೊಡತಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲ ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು ಸಾಲ ಹಾಗೂ ರಿಪೋರ್ಟು ಉಪಯೋಗ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮಿಶನದಿಂದ ತೆಗೆದುಕೊಳ್ಳಲ್ಪಡುವವು ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಶಾಖೆಗಳಿಗೆ ಪಟ್ಟಿನ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು. ದರ ಹಾಗೂ ನಿಯಮಗಳ ಪ್ರತಿಗಳೂ ಪೊಕತ್ಯಾರ ಪತ್ರಗಳೂ ಸದರಿ ಬ್ರ್ಯಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ
ತಾ|| ೧೬-೨-೨೮

ಡಿ. ಡೊನೆಲಿ,
ಏಜಂಟರು

ಜಾಹೀರಾತು.

ನಮ್ಮಲ್ಲಿ ಮೋಟಾರ ಸಂಬಂಧಿ ಯಾವತ್ತು ಕೆಲಸಗಳು ಅಂದರೆ ರಿಪೇರಿ, ಮಾಡುವದು. ಮತ್ತು ಉತ್ತಮ ರೀತಿಯಿಂದ ನಡೆಸಲಿಕ್ಕೆ ಕಲಿಸುವದು ವಗೈರೆ ಕೆಲಸಗಳು ಉತ್ತಮ ರೀತಿಯಿಂದ ನಡೆಯುವವು. ಇದರ ಬಗ್ಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಿ ತರಿಸಿಕೊಳ್ಳಬೇಕು

ಕೇಶವ ಮೆಕ್ಯಾನಿಕಲ್ ವರ್ಕ್ಸ-

ದಾಸಗಲ್ಲಿ ಶಹಾಪೂರ (ಬೆಳಗಾವಿ.)

THE ANKALIGI BANK LTD.

Head Office–
Kamankatti, Dharwar
Branches
Ranebennur & Hirekerur

5%
Interest allowed on
ANNA SAVINGS BANK
DEPOSIT.

Dharwar } K. B. ANKALIGI
3-1-1927 } Managing Directors

ಚಂದಾದಾರರಿಗೆ ಸೂಚನೆ

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ಸ್ವ. ಪ. ಯನ್ನು ಕಳಿಸುವೆವು. ಚಂದಾದಾರರು ಸ್ವ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಸುವೆವು.

ವ್ಯಾನೇಜರ ವಿಜಯ ಛಾಪಖಾನೆ.

ಜಾಹೀರ ವಿನಂತಿ.

। ಸಂಘೇ ಶಕ್ತಿಃ ಕಲೌಯುಗೇ ॥

ಪ್ರಿಯ ಒಕ್ಕಲಿಗ ಬಾಂಧವರೇ !

ಶ್ರೀ ಜೋಗ ವಕೀಲರು ಮುಂಬಯಿ ಕೌನ್ಸಿಲದಲ್ಲಿ ಕರ್ನಾಟಕ ಏಕೀಕರಣದ ಠರಾವನ್ನು ಎರಡು ವರ್ಷಗಳ ಹಿಂದೆ ತಂದಿದ್ದರು. ಅದರ ಮುಂದೆ ಪದೇ ಕೊಡುತ್ತಾ ಬಂದಿದ್ದರ ಬಳಿಕ ಸೋಮವಾರ ದಿವಸ ಈ ವಿಷಯವು ಚರ್ಚೆಯಾಗಬೇಕೆಂದು ಹೊರಟಿತು. ಮದ್ರಾಸದ ಕೌನ್ಸಿಲದಲ್ಲಿ ಹೋದ ವಾರದಲ್ಲಿ ಈ ಠರಾವು ಪಾಸಾಗಿ ಕನ್ನಡಿಗರೆಲ್ಲರಿಗೆ ಆನಂದವಾಗಿತ್ತು. ಆ ಆನಂದವು ರಾವ ಏಕೆ ಉಗವುದ ಇಲಾಖೆಯಲ್ಲಾಗಲಿಲ್ಲೆಂಬುದು ದುಃಖದ ಸಂಗತಿಯು. ಸರ ರೀ ಮೊಂಬರಂತೂ ಸರಿಯೇ ಎಂಥವು ಸ್ವತಂತ್ರ ವಿಚಾರವನ್ನುಳ್ಳ ಮುಸಲಮಾನರು ಇದನ್ನು ವಿರೋಧಿಸಿದರು. ಇದೇ ಪ್ರಕಾರ ದಿವಾನ ಜಾಧವರಾಯರ ಪಂಗಡದ ಬ್ರಾಹ್ಮಣೇತರರೂ ವಿರೋಧಿಸಿದರು. ಕನ್ನಡನಾಡಿನ ಮೇಲಿರುವ ಮಹಾರಾಷ್ಟ್ರದ ವರ್ಚಸ್ಸು ಹೋಗಬೇಕೆಂದು ಕರಾವಿನ ಆಶಯ ವಿರುತ್ತದೆಂದು ಮರಾಠರ ಗ್ರಹಿಕೆಯಾಗಿದ್ದರೂ ಸೂಜ್ಞರಾದ ಮರಾಠರು ಠರಾವಿಗೆ ಅನುಕೂಲವಾಗಿ ಭಾಷಣ ಮಾಡಿ ... ಕೊಟ್ಟರು. ಬಹು ಜನ ಗುಜ್ಜರರೂ ... ಸಹಾನುಭೂತಿ ತೋರಿಸಿದರು. ಸಿಂಧದ ವಿಷಯಕ್ಕೆ ... ಅವರು ಸಂಪೂರ್ಣ ಸ್ವತಂತ್ರ ಸ್ವರಾಜ್ಯವಂದಿಯಾಗಿದ್ದಾರೆ. ಕರ್ನಾಟಕಕ್ಕೆ ... ಸ್ವತಂತ್ರದ ಅಧಿಕಾರವಾದರೆ ತಮ್ಮ ಸಿಂಧಕ್ಕೂ ಅದೇ ಭೋಗ ಬಂದು ಮುಸಲಮಾನರ ಬಹುಮತವಾಗುವದೆಂಬ ಸ್ವಾರ್ಥದಿಂದ ಈ ಬೇಡಿಕೆಯ ಠರಾವನ್ನು ವಿರೋಧಿಸಿದರು. ಠರಾವು ಬಿದ್ದು ನಪಾಸಾದರೂ, ಅದು ಸರ್ವರಿಂದ ತಿರಸ್ಕೃತವಲ್ಲ. ಪುನಃ ಪ್ರಯತ್ನ ಮಾಡಿ ನೋಡಬೇಕಾಗಿರುತ್ತದೆ. ಹಿಂದುಸ್ಥಾನದಲ್ಲಿ ಎಲ್ಲ ಕಾಲಕ್ಕೆ ಪ್ರಾಂತವ್ಯವಸ್ಥೆ ಆಗಬೇಕೆಂದರೆ ಭಾಷೆಯೇ ಮುಖ್ಯ ಸಾಧನವಾಗಿರುತ್ತದೆಂದು ರಾಜಕಾರಣ ಪಟುಗಳು ಒಪ್ಪಿದ್ದಾರೆ. ಇದೇ ತತ್ವವನ್ನು ಸರ ರಹಿಮತುಲ್ಲಾನಂಥವರು ಪ್ರತಿಪಾದಿಸುತ್ತಲಿದ್ದಾರೆ. ಮುಂಬಯಿ ನ್ಯಾಯಮನ್ನ ಸಪ್ತಕ ಲೋಕಪ್ರಿಯರಾದ ಸರದಾರ ಮುಜುಮದಾರರು ತಮ್ಮ ರಿಪೋರ್ಟಿನಲ್ಲಿ ಈ ಅಭಿಪ್ರಾಯವನ್ನು ಸ್ಪಷ್ಟವಾಗಿ ಜಾಹೀರ ಮಾಡಿದ್ದಾರೆ. ಆದ್ದರಿಂದ ಕಾಲಾಂತರದಲ್ಲಿಯಾದರೂ, ಕರ್ನಾಟಕವು ಒಂದು ನಾಡಾಗುವ ಶುಭಚಿಹ್ನಗಳು ಬಲವಾಗಿ ಕಾಣಿಸುತ್ತಿರುವವೆಂದು ಹೇಳಬೇಕಾಗಿರುತ್ತದೆ. ಸದ್ಯ ನಿರಾಶೆಯಾಗಿದ್ದರೂ ಕಳಕೊಂಡಲ್ಲಿಯೇ ಹುಡುಕಬೇಕೆಂದು ಪ್ರಾಜ್ಞರು ಹೇಳುವ ಪ್ರಕಾರವಾಗಿ ಮತ್ತೆ ಮತ್ತೆ ಈ ವಿಷಯವಾಗಿ ಪ್ರಯತ್ನ ಮಾಡುವದೇ ನಮ್ಮ ಕರ್ತವ್ಯವಾಗುತ್ತದೆ.

ತಾ|| ೧೯-೮-೨೭ ದಿನ ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಶ್ರೀ ಹುಕ್ಕೇರಿ ರಾಮರಾಯರ ನೇತೃತ್ವದಲ್ಲಿ ಸಭೆ ಸೇರಿ ಮದ್ರಾಸ ನ್ಯಾಯವಿಧಾಯಕ ಮಂಡಳದಲ್ಲಿ ಬ್ರಿಟಿಶ ಕರ್ನಾಟಕ ಏಕೀಕರಣದ ಗೊತ್ತನ್ನು ಮಂಡಿಸಿ ಯಶಸ್ವಿಯಾಗಿದ್ದಕ್ಕೆ ಶ್ರೀ ಪಿ. ಶಿವರಾಯರನ್ನೂ ಅವರಿಗೆ ಬೆಂಬಲವಿತ್ತ ಎಲ್ಲ ಸದಸ್ಯರನ್ನೂ ಹಾಗೂ ಮುಂಬೈ ಕಾಯ್ದೆ ಕೌನ್ಸಿಲ್ಲದಲ್ಲಿ ಗೊತ್ತನ್ನು ಮುಂದಿಟ್ಟು ಹೋರಾಡಿದ್ದಕ್ಕಾಗಿ ಶ್ರೀ ಜೋಗಳೇಕರರನ್ನೂ ಅಭಿನಂದಿಸಲಾಯಿತು.

ಕೌನ್ಸಿಲದಲ್ಲಾದ ಭಾಷಣಗಳು.

ಸೋಮವಾರ ಸಾಯಂಕಾಲದಲ್ಲಿ ಶ್ರೀ ಜೋಗರು ಬ್ರಿಟಿಶ ಕರ್ನಾಟಕದ ಎಲ್ಲ ಭಾಗಗಳನ್ನು ಕೂಡಿಸಿ ಒಂದು ಪ್ರಾಂತವಾಗಿ ಮಾಡಬೇಕೆಂಬ ಠರಾವು ತಂದು ಆ ಬಗ್ಗೆ ಸಾಧಕ ಬಾಧಕ ವಿಚಾರಗಳನ್ನು ಹೇಳಿ, ಸರಕಾರದಿಂದ ಬಧವಾಗಿ ಬಂದಿರುವ ವಿಚಾರಗಳ ಖಂಡನ ಮಾಡಿದರು. ಹೊತ್ತು ಆದ್ದರಿಂದ ಮರುದಿವಸ ಪುನಃ ಈ ವಿಷಯದ ವಾದವಿವಾದ ನಡೆಯಿತು. ಶಾರವಾರದ ಶ್ರೀ ಕರ್ಕಿಯವರು-

ಶ್ರೀ ಜೋಗರಿಗೆ ಅನುಮೋದನ ಕೊಟ್ಟರು. ಕೌನ್ಸಿಲ ಆಫ ಸ್ಟೇಟದಲ್ಲಿ ಡಾಕ್ಟರ ರಾಮರಾಯರು ಇದೇ ಠರಾವು ತಂದಾಗ, ಇದಕ್ಕೆ ಕನ್ನಡಿಗರಲ್ಲಿ ಬಲವಾದ ಜಾಗೃತಿ ಮತ್ತು ಚಳವಳಿ ಇರುವದಿಲ್ಲೆಂಬ ನೆವ ಹೇಳಿ ಸರಕಾರದವರು ಇದನ್ನು ವಿರೋಧಿಸಿದರು. ಮತ್ತು ಸರಕಾರದಂಥ ಮಿಕ್ಕ ಮೆಂಬರರ ಕೃತ್ರಿಮತನದ ಗೋಣು ಹಾಕಿ, ಕನ್ನಡಿಗರ ಆಶೆಯನ್ನು ನಿರಾಶೆಗೊಳಿಸಿದರು. ಕನ್ನಡಿಗರಲ್ಲಿ ಈ ಬಗ್ಗೆ ಮೂರು ಸಾರ್ವಜನಿಕ ಸಂಸ್ಥೆಗಳು ಸ್ಥಾಪನೆಯಾಗಿದ್ದು ... ಇದನ್ನು ಪ್ರಯೋಗದ ... ಸರ್ವಾಂಗೀಣವಲ್ಲಿ ಹಾದಿ ತೋರಿಸುವರು. ಕನ್ನಡಿಗರಲ್ಲಿ ಏಕೀಕರಣದ ಭಾವನೆಯುಂಟಾಗಿರುತ್ತದೆಂಬುದಕ್ಕೆ ಇದು ಪ್ರತ್ಯಕ್ಷ ಪ್ರಮಾಣವೆಂದು ಶ್ರೀ ಕರ್ಕಿಯವರು ಮಾತಾಡಿದನಂತರ-

ರಾ. ಬ. ಅಂಗಡಿಯವರು

ಈ ಠರಾವಿಗೆ ಬಲವಾಗಿ ಅನುಕೂಲ ಭಾಷಣ ಮಾಡುವಾಗ ಇಂಥ ಸಾದಾ ಮತ್ತು ಸರಳ ಪ್ರಶ್ನದ ವಿಷಯವಾಗಿ ಮೆಂಬರರು ಸಂಶಯವೃತ್ತಿಯವರಾಗುವದು ಆಶ್ಚರ್ಯಜನಕವು. ಮುಂಬಯಿ ಮತ್ತು ಮದ್ರಾಸ ಇಲಾಖೆಯಿಂದ ಕರ್ನಾಟಕವು ಅಗಲುವದು ಕನ್ನಡಿಗರ ದೃಷ್ಟಿಯಿಂದ ಹಿತಾವಹವಾದದ್ದು. ಡಾಕ್ಟರ, ಇಂಜನಿಯರಿಂಗ ಮುಂತಾದ ಯಾವದೇ ಶಿಕ್ಷಣ ಕೊಡಬೇಕಾದರೂ, ಕನ್ನಡಿಗರು ತಮ್ಮ ಹುಡುಗರನ್ನು ಪುಣೆ ಮುಂಬಯಿಗೆ ಕಳಿಸಬೇಕಾಗುತ್ತದೆ. ಇದಕ್ಕಾಗಿ ಪ್ರತಿವರ್ಷ ಎರಡು ಲಕ್ಷದ ವೆಚ್ಚ ಬರುತ್ತದೆ. ಈ ತೊಂದರೆ ತಾಪ ಮತ್ತು ವೆಚ್ಚವು ಕರ್ನಾಟಕವು ಸ್ವತಂತ್ರ ಪ್ರಾಂತವಾದರೆ ದೂರಾಗುವವೆಂದರು. ಆಗ ಹಿಂದಕ್ಕೆ ಮಾತ್ರ ಇದ್ದ

ಶ್ರೀ ಹರಿಲಾಲ ದೇಸಾಯರು-

ಕರ್ನಾಟಕದಲ್ಲಿ ನಾಲ್ಕು ಜಿಲ್ಹೆಗಳುಂಟು. ಅಲ್ಲಿ ಮರಾಠಿ ಶಿಕ್ಷಣ ಕೊಡುವ ಎಷ್ಟು ಶಾಲೆಗಳುಂಟು? ಅವುಗಳ ವಿವರ ಹೇಳಿರೆಂದು ಶ್ರೀ ಅಂಗಡಿಯವರಿಗೆ ಪ್ರಶ್ನೆ ಮಾಡಿದರು. ಆಗ ರಾ. ಬ. ಅಂಗಡಿಯವರು

ಹಳೇ ದಿವಾನರಾದ ಶ್ರೀ ದೇಸಾಯಿಯವರು ಈ ಮಾಹಿತಿಯನ್ನು ಕೇಳುವದು ಆಶ್ಚರ್ಯವನ್ನುಂಟು ಮಾಡುವದಾಗಿದೆ. ಕನ್ನಡಿಗರ ಮೇಲೆ ಮಹಾರಾಷ್ಟ್ರದ ವರ್ಚಸ್ಸುಂಟೆಂಬದು ನಿರ್ವಿವಾದವಾದದ್ದು.

ಶ್ರೀ ದೇಸಾಯರು-

ಇದು ನನ್ನ ಪ್ರಶ್ನಕ್ಕೆ ಉತ್ತರವಲ್ಲ

ರಾ. ಬ. ಅಂಗಡಿ-

ನನ್ನ ಉತ್ತರದಿಂದ ನಿಮಗೆ ಬೇಕಾದ ಮಾಹಿತಿಯು ಸ್ಪಷ್ಟವಾಗುತ್ತದೆ. ಕರ್ನಾಟಕದಲ್ಲಿ ಮರಾಠಿಯ ಅನೇಕ ಶಾಲೆಗಳುಂಟು. ಸರಕಾರವು ಕನ್ನಡನಾಡಿನಲ್ಲಿ ಕನ್ನಡ ಶಾಲೆಗಳ ಬದಲಾಗಿ ಮರಾಠಿ ಶಾಲೆಗಳನ್ನು ಸ್ಥಾಪಿಸುತ್ತದೆ. ಕೌನ್ಸಿಲದಲ್ಲಿ ಸಿಂಧಕ್ಕೆ ೧೯ ಮತ್ತು ಗುಜರಾಥಕ್ಕೆ ೧೬ ಸ್ಥಳಗಳನ್ನು ಕೊಟ್ಟಾಗ ಕರ್ನಾಟಕಕ್ಕೆ ಒಂಬತ್ತೇ ಸ್ಥಳಗಳನ್ನು ಕೊಟ್ಟಿರುತ್ತದೆ. ಈ ಪ್ರಕಾರ ಇವರಿಬ್ಬರ ನಡುವೆ ತುಸು ಚಕಮಕಿಯಾದನಂತರ ಗುಜರಾಥದ ಮೆಂಬರರಾದ ರಾವಸಾಹೇಬ ದಾದುಭಾಯಿ ದೇಸಾಯಿಯವರು-

ನಾವು ಕನ್ನಡಿಗರ ಠರಾವಿಗೆ ಬೆಂಬಲಕೊಡುತ್ತೇವೆ. ಏಕಂದರೆ ಗುಜರಾಥವನ್ನೂ ಮುಂಬಯಿ ಇಲಾಖೆಯಿಂದ ಸ್ವತಂತ್ರವಾಗಬೇಕೆಂದು ನಮ್ಮ ಅಪೇಕ್ಷೆಯದೆ. ಗುಜರಾಥವು ಸ್ವತಂತ್ರವಾಗಿ ತನ್ನ ವೆಚ್ಚ ನೋಡಿಕೊಂಡು ಪೃಥಕ್ಕವಾಗಿ ಸುಧಾರಣೆ ಮಾಡಿಕೊಳ್ಳಬಹುದು. ಮುಂಬಯಿ ಇಲಾಖೆಯಲ್ಲಿ ಗುಜರಾಥವು ಯಾವಾಗಲು ಸತದ್ರಷ್ಟವಾಗಿ ನೋಡಲ್ಪಡುತ್ತದೆ. ಇತ್ತ ಕಡೆಗೆ ಸರಕಾರದ ಲಕ್ಷ್ಯವೇ ಹೋಗುವದಿಲ್ಲ.

ಒಬ್ಬ ಸಭಾಸದ

ಹರಿಲಾಲ ದೇಸಾಯರು ದಿವಾಣರಿದ್ದಾರೆ

ದಾದಾಭಾಯಿ-

ದಿವಾಣರಿರಬಹುದು ಅವರಿಂದಾಗುವದೇನ? ಇದು ಮಾತ್ರವಲ್ಲದೆ ಅವರು ಮುಂಬಯಿಯವರಿದ್ದಾರೆ. ಮುಂಬಯಿಯು ಗುಜರಾಥದ ಭಾಗವಲ್ಲ. ಬೇಕಾದರೆ ಜರ್ಮನಿಯ ಹ್ಯಾಂಬರ್ಗಕ್ಕೆ ಇರುವಂತೆ ಮುಂಬಯಿಗೆ ಸ್ವತಂತ್ರಾಧಿಕಾರ ಕೊಡಿರಿ

ರಾ. ಬ. ಕಂಬಳಿ-

ರಾ. ಬ. ರವರು ಸಂಪೂರ್ಣ ಆವೇಶದ ಭಾಷಣಮಾಡಿದರು. ಸಾಯಮನ್ನ ಕಮಿಶನಕ್ಕೆ ಅಸಹಕಾರ ಹಾಕುವಾಗ ತೋರಿಸಿದ ಗಟ್ಟಿಗತನಕ್ಕಿಂತ ಹೆಚ್ಚಿನ ಗಟ್ಟಿಗತನ ತೋರಿಸಿದರು. ಸರಕಾರದ ಕೂಡ ಅಸಹಕಾರ ಮಾಡುವಂತೆ ಸಡ್ಡು ಹೊಡೆದರು. ಇವರು ಅಂದದ್ದೇನಂದರೆ

ಸರಕಾರವು ನಮ್ಮ ಬೇಡಿಕೆಗೆ ಒಪ್ಪಿಗೆಯನ್ನು ಕೊಡಬೇಕೆಂದು ನಮ್ಮ ಕೋರಿಕೆಯುಂಟು. ಸರಕಾರವು ಈ ಠರಾವನ್ನು ಒಪ್ಪಿಕೊಳ್ಳದಿದ್ದರೆ ಕರ್ನಾಟಕವು ಸುಮ್ಮನೆ ಕೂಡ್ರಲಾರದು. ಸಮಯ ಬಿದ್ದರೆ ಕರ್ನಾಟಕವು ಅಸಹಕಾರದ ಚಳವಳಿ ಮಾಡುವದು. ಆಗ ಸರಕಾರವು ಬಾಗಿ ನಡೆಯಬೇಕಾಗುವದೆಂಬದನ್ನು ಲಕ್ಷ್ಯದಲ್ಲಿಡಬೇಕು. ಆದ್ದರಿಂದ ಸರಕಾರವು ಯೋಗ್ಯ ಸಮಯದಲ್ಲಿ ಸೌಜನ್ಯವನ್ನು ತೋರಿಸಬೇಕು.

ಸರದಾರ ಮುಜುಮದಾರ-

ಇವರು ಠರಾವಿಗೆ ಅನುಕೂಲವಾಗಿ ಭಾಷಣ ಮಾಡಿ, ತಾವು ಕನ್ನಡಿಗರ ಬೇಡಿಕೆಯನ್ನು ಪೂರ್ಣ ಮಾಡಬೇಕೆಂದು ಸಾಯಮನ್ನ ರಿಪೋರ್ಟಿನಲ್ಲಿ ಬರೆದ ವಾಕ್ಯಗಳನ್ನು ಓದಿ ತೋರಿಸಿದರು. ಬಳಿಕ

ಶ್ರೀ ಚಿಕ್ಕೋಡಿಯವರು

ನಮ್ಮ ಬೇಡಿಕೆಯಲ್ಲಿ ಕಸುವು ಇಲ್ಲೆಂದು ಸರಕಾರವು ಯಾವ ನಾಲಿಗೆಯಿಂದ ಅನ್ನುವದು? ಕರ್ನಾಟಕದಲ್ಲಿಯ ಎಲ್ಲ ರಾಜಕೀಯ ಪಕ್ಷ, ಬ್ರಾಹ್ಮಣ-ಬ್ರಾಹ್ಮಣೇತರ, ಲಿಂಗಾಯತ, ಮುಸಲಮಾನ ಮೊದಲಾದ ಎಲ್ಲ ಜನರೂ ಈ ಬೇಡಿಕೆಗೆ ಬೆಂಬಲವಿತ್ತಿದ್ದಾರೆ. ಕರ್ನಾಟಕದಲ್ಲಿ ಒಂದು ಸಂಸ್ಥೆ ಸಹ ಈ ಬಗ್ಗೆ ನಿಷೇಧವನ್ನು ವ್ಯಕ್ತಪಡಿಸಿಲ್ಲ. ಸರಕಾರವು ಈ ಠರಾವನ್ನು ಚಿವುಟಿಹಾಕಿದರೆ ಕರ್ನಾಟಕವು ಅಸಹಕಾರ ಸಾರುವದೆಂದು ರಾ. ಬ. ಕಂಬಳಿಯವರು ಸಾರಿ ಹೇಳಿದ್ದಾರೆ. ಸರಕಾರವು ಕನ್ನಡಿಗರ ಸಹನಶೀಲತೆಯ ಕೊನೆಯ ಪರೀಕ್ಷೆ ಮಾಡಬಾರದು. ಸಾತಾರಾ ಜಿಲ್ಹೆಯ ಜನಸಂಖ್ಯೆಯು ಧಾರವಾಡ ಜಿಲ್ಹೆಗಿಂತ ಕಡಿಮೆ ಇದ್ದರೂ, ಅದಕ್ಕೆ ಕೌನ್ಸಿಲದಲ್ಲಿ ಮೂರು ಸ್ಥಳ ಕೊಡಬೇಕು ಮತ್ತು ಧಾರವಾಡಕ್ಕೆ ಎರಡು ಸ್ಥಳಗಳಿರಬೇಕೆಂಬದು ಅನ್ಯಾಯವಲ್ಲವೇ?

ಈ ಪ್ರಕಾರ ಮಿ. ಚಿಕ್ಕೋಡಿಯವರು ಭಾಷಣ ಮಾಡಿದನಂತರ ಠರಾವಿಗೆ ವಿರೋಧನಾಗಿ ದಿವಾನ ಜಾಧವರಾಯರು ಅಂದದ್ದೇನಂದರೆ-

ಭಾಷೆಯ ಪ್ರಕಾರ ಪ್ರಾಂತರಚನೆಯಾಗಬೇಕೆಂಬ ತತ್ವವು ನನ್ನ ತಲೆಯಲ್ಲಿ ೧೯೧೮ರಿಂದ ಸುಮದುಮಿಸುತ್ತಿತ್ತು. ಆಗ ನಾನು ಇದರ ಒಳ್ಳೇ ಅಭಿಮಾನಿಯಾಗಿದ್ದೆನು. ಆದರೆ ಈಗ ನನ್ನ ಮತದಲ್ಲಿ ಬದಲಾಗಿರುತ್ತದೆ. ಕರ್ನಾಟಕ ಮತ್ತು ಗುಜರಾಥದ ಮೆಂಬರರ ಭಾಷಣ ಕೇಳಿ ... ರಾಷ್ಟ್ರವು ಕರ್ನಾಟಕ ಮತ್ತು ಗುಜರಾಥ ... ಯ ಮೇಲೆ ಮೇಣಸು ಅರೆಯುತ್ತದೆಂಬ ... ಯಾಗುವ ಸಂಭವವುಂಟು. ಆದರೆ ವಸ್ತು ... ಹೀಗಿರುವದಿಲ್ಲ. ಮುಂಬಯಿ ಇಲಾ... ರ್ನಾಟಕದ ದುರ್ವಿಪಾಕವ... ಟಕದಲ್ಲಿ ಅನೇಕ ಜನ ಕನ್ನ... ಳದಲ್ಲಿರುತ್ತಾರೆ

ಮಿ. ಚಿಕ್ಕೋಡಿಯವರ ಪ್ರಶ್ನೆ

ಕರ್ನಾಟಕದಲ್ಲಿ ಮಹಾರಾಷ್ಟ್ರ... ಅಧಿಕಾರಿಗಳಿರುತ್ತಾರೆ.

ಪುನಃ ಜಾಧವರಾಯರು-

ಭಾಷಾವಾರ ಪ್ರಾಂತರಚನೆಯ ತ... ಮಹಾರಾಷ್ಟ್ರವು ಅಂಗೀಕರಿಸಬಹುದು... ದ ಇದರ ಕೆಲವು ಜಿಲ್ಹೆಗಳು ... ಹೊಸದಾಗಿ ಕೆಲವು ಜಿಲ್ಹೆಗಳು ಬ... ದೃಷ್ಟಿಯಿಂದ ಮಹಾರಾಷ್ಟ್ರಕ್ಕೆ ಬಾಧಕ... ರುತ್ತದೆ. ಆದರೆ ಈ ತರದ ಪ್ರಾಂತರಚನೆಗೆ ... ಬಿದ್ದರೆ ಹಾನಿಯಾಗುವದುಂಟು. ಮುಂದೈ ... ಬೆಯಲ್ಲಿ ನಾಲ್ಕು ತುಂಡಾದರೆ- ಮಧ್ಯವರ್ತಿ ಸ... ಕಾರದ ಈಗಿನ ವರ್ಚಸ್ಸು ಉಳಿಯುವದೇನು? ... ಳೆದ ೪೦ ವರ್ಷಗಳಿಂದ ನಾವು ರಾಷ್ಟ್ರೀ... ಕ್ಯದ ಧ್ಯೇಯವಿಟ್ಟುಕೊಂಡು ಚಳವಳಿ ನಡ... ಸುತ್ತಿದ್ದೇವೆ. ಯಾವನೊಬ್ಬನು ತನ್ನ ಪ್ರಾಂ... ನ್ನ ಭಾಷೆ ಎಂದು ಚಳವಳಿ ಮಾಡುವನು... ಆ ಪ್ರಕಾರದ ಮುಖ್ಯಧ್ಯೇಯವಿಟ್ಟುಕೊಳ್ಳುವನೋ ... ರಾಷ್ಟ್ರೀಯ ದೃಷ್ಟಿಯಿಂದ ಹಿಂದುಸ್ಥಾನದ ಹಾನಿಯಾಗುವದುಂಟು. ಐಕ್ಯದಲ್ಲಿಯೇ ಶಕ್ತಿಯುಂಟೆಂಬ ತತ್ವವನ್ನು ನಾವೆಲ್ಲರೂ ಲಕ್ಷ್ಯದಲ್ಲಿ ಇಡಬೇಕು.

ರಾ. ಬ. ಕಾಳೆ-

ಸಾತಾರೆಯ ರಾ. ಬ. ಕಾಳೆಯವರು ಶ್ರೀ ಜೋಗರಿಗೆ ಅನುಕೂಲವಾಗಿ ಭಾಷಣ ... ಇವರು ಅಂದದ್ದು-

ಯುರೋಪದ ಚಿಕ್ಕ ಚಿಕ್ಕ ... ದಾಹರಣೆಯನ್ನು ಲಕ್ಷ್ಯದಲ್ಲಿಟ್ಟು ... ಷ್ಟು ಸ್ವತಂತ್ರ ರಾಜ್ಯಗಳಿರುತ್ತವೆ ... ಪದ ಸಾಮರ್ಥ್ಯವು ಕಡಿಮೆಯಾಗಿಲ್ಲ. ... ಲದ ಮಾಜೀ ಅಧ್ಯಕ್ಷರಾಗಿದ್ದ ... ನವರು ಒಂದು ಲೇಖವನ್ನು ಪ್ರಸಿ... ಅದರಲ್ಲಿ ವಿವಿಧತೆಯಲ್ಲಿಯೇ ಏ... ಟಾಗುವದೆಂದು ಪ್ರತಿಪಾದನೆ ... ದನ್ನೋದಬೇಕೆಂದು ಹೇಳುತ್ತೇನೆ.

ಶ್ರೀ ಗುಂಜಾಳ (ಪುಣೆ)

ಮಹಾರಾಷ್ಟ್ರವು ಕರ್ನಾಟಕದ ... ದ್ಧ ಬರುವದಿಲ್ಲೆಂದು ತೋರಿಸುವದಕ್ಕೆ ... ಉತ್ಕೃಷ್ಟ ಸುಸಂಧಿಯನ್ನು ... ಗೊಡಲಾರರೆಂದು ತಿಳಿಸುತ್ತೇನೆ. ... ಮಹಾರಾಷ್ಟ್ರಕ್ಕೆ ... ಯ ಮಾಡುತ್ತಾ ಬಂದಿರುತ್ತದೆ. ... ಏಕೀಕರಣದ ... ಶ್ರೀ ... ರು ಕರ್ನಾಟಕದಲ್ಲಿ ... ಗರಾಗಿದ್ದಾರೆ. ... ಪರಿಣಾಮ ...

ಈ ಪ್ರಶ್ನೆಯ ಬಗ್ಗೆ ಭಾಷಣ ಮಾಡಿದ ಬಳಿಕ ಸಿಂಧದ ಮಿ. ಜೇಠಾ ಮಲ್ಲ ಪರಸರಾಮ್ ಮಿ. ಲಿಗಾಡೆಯವರು ಪ್ರತಿಕೂಲ ಭಾಷಣ ಮಾಡಿದರು. ... ತಕರಾರದವನ್ನು ಈ ಪ್ರಕಾರ ಒಡೆಯುತ್ತ ಹೋದರೆ ಬೆಟ್ಟ ಬೆಳೆದು, ದೊರಕಿನವು ಕಲಿಭಿನ್ನರಾಗುವವು. ಕರ್ನಾಟಕದಲ್ಲಿ ಮರಾಟಿ ಮಾತಾಡುವಂಥ ಜನ ಸಂಖ್ಯೆಯು ದೊಡ್ಡದಿರುವದೆಂದು ದಕ್ಷಿಣ ಭಾಗದ ಕಮೀಶನರಸಾಹೇಬರು ಹೇಳುತ್ತಾರೆ. ಈ ಸಂಗತಿಯನ್ನು ಲಕ್ಷ್ಯದಲ್ಲಿಡಬೇಕೆಂದು ಮಿ. ಲಿಗಾಡೆಯವರು ಠರಾವಿನ ಮೇಲೆ "ಲಿಗಾಡ" ತಿದ್ದುಪಡಿ ಸೂಚಿಸಿದರು.

ಕರ್ನಾಟಕ ಏಕೀಕರಣ ಬಹಳ ಸುಲಭ ಪ್ರಶ್ನವು ... ಮಂಡಿಸಿದರು

ಪ್ರಶ್ನೆ- ಪ್ರಮಾಣಸಿದ್ಧವಾಗಿ ಹೇಳುತ್ತೀರಾ-

... ನೋಡಿರಿ

ಅದೊಂದು ಜಮಖಂಡಿ ಎಂಬ ಸಂಸ್ಥಾನವು ಇದ ಕ್ಕೂ ದೊಡ್ಡದೂ ಅಲ್ಲ ಸಣ್ಣದೂ ಅಲ್ಲ. ಆದರೂ ಅಲ್ಲಿ ಸ್ವತಂತ್ರ ಸರಕಾರವುಂಟು. ಈ ಏಕೀಕರಣದ ಪ್ರಶ್ನೆಯ ವಿಷಯದಲ್ಲಿ ನಾನು ದೂರವಾದ ಜನರ ಅಭಿಪ್ರಾಯ ... ಅವರು ಬುದ್ಧಿ ... ನಿರೋಧದ ವಿಷಯದಲ್ಲಿ ... ಕಷ್ಟವಿರುವದಿಲ್ಲ

... ಸರಕಾರದ ಪಕ್ಷದಿಂದ ... ರಾವಸಾಹೇಬರು

... ತಾತ್ವಿಕ ಕಲ್ಪನೆಗಳ ಮೇಲೆ ವಿಶೇಷ ... ಕರ್ನಾಟಕವು ಮುಂಬಯಿ ಇಲಾಖೆಯಿಂದ ಹೊರದೇಳುವದು ಕೂಡ ಅಪಾಯಕಾರಕವಾಗಲಾರದೆಂದು ... ಠರಾವನ್ನು ವಿರೋಧಿಸಿದರು. ಕೂಡ ಜೋಗರು ಪ್ರತಿಕೂಲ ಭಾಷಣ ಮಾಡಿದವರಿಗೆಲ್ಲ ಉತ್ತರ ಕೊಟ್ಟರು. ಓಟಿಗೆ ಹಾಕಿದಾಗ, ಮೆಂಬರರ ಬಾಯಿ ಮಾತಿನಿಂದಲೇ ಠರಾವಿಗೆ ಪ್ರತಿಕೂಲರಾದಂಥವರ ಸಂಖ್ಯೆಯೇ ದೊಡ್ಡದಾಗಿದ್ದಂತೆ ಕಂಡಿತು. ಓಟಿಗೆ ಹಾಕಿದ ಬಳಿಕ ಅಧ್ಯಕ್ಷರು ಠರಾವು ನಾಪಾಸಾಯಿತೆಂದರು.

ಕರ್ನಾಟಕ ಏಕೀಕರಣದ ಠರಾವಿನ ಬಗ್ಗೆ ಜ್ಞಾನಪ್ರಕಾಶದ ಸ್ಪಷ್ಟ ಮತವು.

ಕರ್ನಾಟಕದ ಒಂದು ಸ್ವತಂತ್ರ ಪ್ರಾಂತ ಮಾಡಬೇಕೆಂದು ಕೌನ್ಸಿಲದಲ್ಲಿ ಶ್ರೀ ಜೋಗರು ತಂದ ಠರಾವನ್ನು ಬಹು ಮತದಿಂದ ತಿರಸ್ಕರಿಸಿ ನಾಪಾಸು ಮಾಡಿದ್ದು ಕರ್ನಾಟಕದ ಲೋಕಮತವನ್ನು ... ಜನಾಭಿಪ್ರಾಯಹೀನವಾದ ರೀತಿಯಿಂದ ಅಪಮಾನಪಡಿಸಿದ ... ಸ್ವಲ್ಪ ಕಷ್ಟ ... ಕಟ್ಟಿಕೊಂಡಿತು. ಮುಂಬಯಿ ಕೌನ್ಸಿಲದೊಳಗಿನ ಬಹುಜನ ಸರಕಾರ ಪಕ್ಷದ ವ್ಯಕ್ತಿ ಮತ್ತು ... ಆಕಾಂಕ್ಷೆಗೆ ವಿರೋಧವಾಗುವ ಪ್ರವೃತ್ತಿಯನ್ನು ಯಾವುದರಿಂದ ಹೇಳಿಕೊಳ್ಳುವ ಧೋರಣವನ್ನು ಲಕ್ಷ್ಯಕ್ಕೆ ತಂದರೆ- ಶ್ರೀ ಜೋಗರ ಠರಾವು ಹೀಗೇ ರೀತಿಯಾಗುವದೆಂದು ಯಾವನೊಬ್ಬನು ಸಹಜವಾಗಿ ಭವಿಷ್ಯಮಾಡಬಹುದಾಗಿತ್ತು. ... ಮದ್ರಾಸ ಕೌನ್ಸಿಲದಲ್ಲಿ ಏಕೀಕರಣದ ಠರಾವಿಗೆ ಒಪ್ಪಿಗೆಯನ್ನು ಕೊಟ್ಟನಂತರ ಮುಂಬಯಿ ಕೌನ್ಸಿಲದವರು ಈ ವಿಚಾರವನ್ನು ಶಾಂತ ಮತ್ತು ದೂರದೃಷ್ಟಿಯಿಂದ ವಿಮರ್ಶಾಪೂರ್ವಕವಾಗಿ ವಿಚಾರಿಸಬಹುದೆಂದು ಅನೇಕರು ಆಶಿಸಿದ್ದರು. ಆದರೆ ಕೇವಲ ಕಾಲ್ಪನಿಕ ಭಯಭೀತಿಯನ್ನು ಮುಂದೆ ಮಾಡಿ, ಸರಕಾರವು ಈ ಠರಾವಿನ ವಿರೋಧ ಬೆಳೆಸಿತು ಮತ್ತು ಸರಕಾರದ ಬಾಲ ಹಿಡಿಯುವ ಬ್ರಾಹ್ಮಣೇತರ ಮತ್ತು ಬೇರೆ ಮೆಂಬರರ ಸಹಾಯದಿಂದ ಠರಾವನ್ನು ಬಿದ್ದುಗೊಳಿಸಿತು. ವಿಲಾಯಿತಿಯಲ್ಲಿ ಹಿಂದುಸ್ಥಾನದ ರಾಜ್ಯಘಟನೆಯ ಬಗ್ಗೆ ಚರ್ಚೆ ನಡೆಯುವ ಕಾಲದಲ್ಲಾದರೂ, ಈ ಠರಾವಿಗೆ ಹೀಗೆ ಸೋಲುಂಟು ಮಾಡಬಾರದಾಗಿತ್ತು. ಕರ್ನಾಟಕದ ತಲೆಗೆ ಇರುವಂಥ ದಿವಾನ ಭಾಸ್ಕರರಾವ ಜಾಧವರಂಥವರು, ಕರ್ನಾಟಕ ಏಕೀಕರಣದ ಪ್ರಶ್ನವು ಕರ್ನಾಟಕದ ಲೋಕಮತಾನುಸಾರವಾಗಿ ನಡೆಯಲಿ- ಸಿಂಧವು ಸ್ವತಂತ್ರ ಪ್ರಾಂತವಾಗುವದೆಂದು ಹೇಳುವ ಶ್ರೀ ದೇಶಮುಖರು ... ಮತದಂತೆ ... ಯೇ ಇದು ಪರ್ವತಪ್ರಾಯವಾದ ತಪ್ಪಾಗುತ್ತದೆ. ಮಿ. ಹಾಸ್ಟ್ವಿಕ, ರಾವ ಬಹಾದ್ದೂರ, ಶ್ರೀ ನರದಾರ ಮಜುಮದಾರ, ಶ್ರೀ ನಾರಾಯಣರಾವ ಗುಂಜಾಳ ಮೊದಲಾದ ಮೆಂಬರರ ಧೈರ್ಯದಿಂದ ಈ ಠರಾವಿಗೆ ಬೆಂಬಲವಿತ್ತು, ಕರ್ನಾಟಕದ ಲೋಕಮತಕ್ಕೆ ಮಾನ ಕೊಡಲು ಮುಂದೆ ಬಂದದ್ದು ಅಭಿನಂದನೀಯವಾಗಿರುತ್ತದೆ. ದಿವಾನ ಭಾಸ್ಕರರಾವ ಜಾಧವ ಅಥವಾ ಕಮೀಶನರ ಮಿ. ಮ್ಯಾಕಗ್ರೇಗರಸಾಹೇಬರು ಏಕೀಕರಣದವರು ಪ್ರಸಿದ್ಧಮಾಡಿದ ಪತ್ರಿಕೆ ಪುಸ್ತಕಗಳನ್ನು ನೋಡದೆ, ಕೇವಲ ಸರಕಾರದ ಧೋರಣ ಪ್ರಕಾರ ವರ್ತಿಸಿ, ಠರಾವಿಗೆ ವಿರೋಧ ಮಾಡಿದರು. ಈ ಸ್ಥಿತಿಯಲ್ಲಿ ಕೌನ್ಸಿಲದಲ್ಲಿ ಠರಾವು ನಾಪಾಸಾದರೂ, ಬ್ರಿಟಿಶ ಪಾರ್ಲಮೆಂಟವು ನಿಜ ಸಂಗತಿಗೇ ಮಾನ ಕೊಡಬೇಕೆಂದು ನಾವು ಸೂಚಿಸುತ್ತೇವೆ. ಈ ಠರಾವಿನಿಂದ ಕರ್ನಾಟಕದ ಲೋಕಮತವು ಅಸಂತುಷ್ಟವಾಗುವದೆಂಬುದು ಸ್ಪಷ್ಟವಾದದ್ದು. ಇದರ ಜವಾಬದಾರಿಯು ಮುಖ್ಯವಾಗಿ ಸರಕಾರ ... ಮೇಲಿರತಕ್ಕದೆಂಬುದನ್ನು ಮರೆಯಕೂಡದು.

ಹಿಂದುಸ್ಥಾನದ ಭಾವೀ ಸ್ವರಾಜ್ಯ.

ಹಿಂದುಸ್ಥಾನಕ್ಕೆ ಕೊಡಬಹುದಾದ ಸ್ವರಾಜ್ಯವು ವಸಾಹತಿ ಸ್ವರಾಜ್ಯವಾಗಲಾರದೆಂದು ಈಗ ಬಹ್ವಂಶವಾಗಿ ಖಂಡಿತವಾಯಿತು. ಸರ ಸಾಯಮನ್ನಸಾಹೇಬರಿಗೆ ಅನುಕೂಲವಾಗಿ ಕೂಡ ಈ ದೇಶದ ಇಲಾಖೆಯ ಕಮೀಟಿಗಳು ಅಲ್ಪಪ್ರಮಾಣದಿಂದ ಪ್ರಾಂತಿಕ ಸ್ವಾತಂತ್ರ್ಯ ಬೇಡಿದ್ದು, ಬಹು ಪ್ರಮಾಣದಿಂದ ಪೋಲಿಸ ಮತ್ತು ನ್ಯಾಯಖಾತೆಯ ಖಾತೆಗಳನ್ನು ಹೊರ್ತು ಪಡಿಸಿ, ಮಿಕ್ಕ ಖಾತೆಗಳ ಸ್ವಾತಂತ್ರ್ಯ ಬೇಡಿತು. ಮುದ್ರಾಸದ ಕೌನ್ಸಿಲದಲ್ಲಿ ಈ ಕಮೀಟಿಯ ಜೀವಮಾನ್ಯರಾದ ಸರ ಪಟ್ರೋಸಾಹೇಬರು ಪ್ರಾಂತಿಕ ಸ್ವಾತಂತ್ರ್ಯ ಬೇಡಿದಂಥವರಾಗಿದ್ದು, ಹಿಂದುಸ್ಥಾನ ಸರಕಾರದ ಅಡಳಿತೆಯಲ್ಲಿ ದಂಡು, ಪರರಾಷ್ಟ್ರಗಳ ಕಾರಭಾರ ಮತ್ತು ದೇಶೀ ಸಂಸ್ಥಾನಿಕರ ಹೊರ್ತು ಮಿಕ್ಕ ಖಾತೆಗಳನ್ನು ಲೆಜಿಸ್ಲೆಟಿವ್ಹ ಅಸೆಂಬ್ಲಿಗೆ ಒಪ್ಪಿಸಬೇಕೆಂಬ ವಿಚಾರದ ಠರಾವನ್ನು ತಮ್ಮ ಕೌನ್ಸಿಲದಲ್ಲಿ ತಂದಿದ್ದು, ಅದು ಪಾಸಾಗುವ ಸಂಭವವುಂಟು. ಈ ಠರಾವಿನ ಕೂಡ ವಸಾಹತಿನ ಸ್ವರಾಜ್ಯವನ್ನು ಇಂತಿಷ್ಟು ವರ್ಷಗಳಲ್ಲಿ ಪೂರ್ಣ ಮಾಡುತ್ತೇವೆಂದು ವಚನಬದ್ಧರಾಗಿರೆಂದು ಸರಕಾರವನ್ನು ಕೇಳುತ್ತಾರೆ. ಈಜಿಪ್ತ ಮತ್ತು ಇಂಗ್ಲಂಡದ ನಡುವೆ ಈಗ ನಡೆದಿರುವ ಒಪ್ಪಂದದ ಶರತ್ತುಗಳು ೨೫ ವರ್ಷಗಳವರೆಗೆ ಇರಬೇಕೆಂದು ಇಂಗ್ಲಿಷ ಸರಕಾರದವರು ಒಂದು ಶರ್ತ ಹಾಕಿದ್ದಾರೆ. ಪ್ರತ್ಯಕ್ಷವಾಗಿ ಸ್ವಾತಂತ್ರ್ಯ ಅನುಭವಿಸುವ ... ನೇರಳಿಕೆಗೆ ಅವಕಾಶ ದೊರೆತು, ಕೋರಿಕೆಯಲ್ಲಿ ಸ್ವದೇಶದ ಆಡಳಿತೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸುವ ದೇಶದ ಕೂಡ ೨೫ ವರ್ಷಗಳ ಕರಾರುಮಾಡುವಾಗ, ಕೇವಲ ದಾಸ್ಯವೃತ್ತಿಯಲ್ಲಿರುವ ಹಿಂದುಸ್ಥಾನದ ವಸಾಹತಿನ ಸ್ವರಾಜ್ಯದ ಬೇಡಿಕೆಯನ್ನು ಪೂರ್ಣ ಮಾಡುವದಕ್ಕೆ ಬ್ರಿಟಿಶ ಸರಕಾರದವರು ಇಜಿಪ್ತದ ಇಮ್ಮಡಿಯಷ್ಟು ವರ್ಷಗಳನ್ನಾದರೂ ಕೇಳಲಾರರೆಂದು ಏಕೆ ಅನ್ನಬಾರದು? ಮಂತ್ರಿಗಳ ಮನಸ್ಸಿನಲ್ಲಿ ಹಿಂದುಸ್ಥಾನಕ್ಕೆ ಬಹುವಾಗಿ ಹಿತ ಮಾಡುವದುಂಟು. ಅವರು ವೇಳೆ ಟೀಕೆ ಮಾಡಬೇಡಿರೆಂದು ಈಗ ತಾನೇ ವಿಲಾಯತಿಯಿಂದ ಬಂದ ಶ್ರೀ ಷಣ್ಮುಖಚೆಟ್ಟಿಯವರು ಹೇಳುತ್ತಾರೆ. ಇವರ ಹೇಳಿಕೆಯನ್ನು ನಂಬಬೇಕಿರುವಷ್ಟು ಖಂಡಿತವಾದ ಸೂಚನೆಯನ್ನು ಸರಕಾರದ ಮಂತ್ರಿಯಾಗಿದ್ದ ನಪ್ಪು ಸಾಹೇಬರು ದೂರ ಹೇಳಿ, ಸ್ಟೇಟ ಸೇಕ್ರೆಟರಿಯಾದ ಮಿ. ಬೆನ್ನ ವೆಜವುಡ್ ಸಾಹೇಬರು ಹಿಂದುಸ್ಥಾನಕ್ಕೆ ಬಂದು, ಅಲ್ಲಿಯ ವರ್ತಮಾನ ಪರಿಸ್ಥಿತಿಯನ್ನು ಕಣ್ಣಾರೆ ನೋಡಬೇಕೆಂದು ಅಂದಿದ್ದಾರೆ. ಆದರೆ ಇವರು ಹಿಂದುಸ್ಥಾನಕ್ಕೆ ಬರುವರೆಂಬ ಕಲ್ಪನೆ ಮಾಡಕೂಡದು. ಮದ್ರಾಸದ ಬ್ರಾಹ್ಮಣೇತರ, ಉತ್ತರ ಹಿಂದುಸ್ಥಾನದ ಲಿಬರಲ್ಲರೊಳಗಿನವರು, ಪ್ರತಿಯೋಗಿ ಸಹಕಾರಿಯಾದ ಮೊದಲಾದ ಜಯಕರ ಕೇಳಕರ ವಿಚಾರದೃಷ್ಟಿಯಿಂದ ಸ್ವರಾಜ್ಯದ ಅಂದರೆ ರಾಜ್ಯಕಾರಭಾರದಲ್ಲಿ ಕ್ರಮೇಣ ತಿದ್ದುಪಡೆ ಮಾಡುತ್ತ ಹೋಗುವ ಒಂದು ಶಾಸನವನ್ನು ಸಿದ್ಧಪಡಿಸುವದಾಗಿ ತೋರುತ್ತದೆ. ಮೇಲಿನ ಗೋಷ್ಟಿ ಬಂಗಾಲದವರು ಸಂಪೂರ್ಣ ಸ್ವಾತಂತ್ರ್ಯವಾದಿಯಾದ ಶ್ರೀ ಶ್ರೀನಿವಾಸ ಅಯ್ಯಂಗಾರರು-

ನಾನು ಲಂಡನದಲ್ಲಿದ್ದಾಗ ಮಿ. ... ಸಾಹೇಬರು ಕೊಟ್ಟ ವಚನವನ್ನು ಪೂರ್ಣ ಮಾಡುವ ಲಕ್ಷಣವಿಲ್ಲ. ಸ್ಪಷ್ಟವಾದ ಶಬ್ದಗಳಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಜಾಹೀರಮಾಡಿ, ಆ ಸ್ವಾತಂತ್ರ್ಯದ ದಿಸೆಯಿಂದ ನಿಮ್ಮ ಒದಗಬಹುದಾದಂಥ ಕಷ್ಟಗಳನ್ನು ಅನುಭವಿಸಲಿಕ್ಕೆ ಸಿದ್ಧರಾದರೇ ಆದರ ಪ್ರಶ್ನೆ ಮತ್ತು ಪರಿಣಾಮಕಾರಕವಾದ ಚಳವಳಿಯಿಂದ ಸರಕಾರದ ಪಕ್ಷದ ಮೇಲೆ ಇಷ್ಟಪರಿಣಾಮವನ್ನುಂಟು ಮಾಡುವದು, ಅದ್ದರಿಂದ ಸಂಪೂರ್ಣ ಸ್ವಾತಂತ್ರ್ಯದ ಠರಾವನ್ನು ಜಾಹೀರಮಾಡಿ, ಅದೇ ಹಿಂದುಸ್ಥಾನದ ಧ್ಯೇಯವಾಗಿಟ್ಟುಕೊಳ್ಳಬೇಕೆಂದು

ತಮಿಳ ನಾಡಿನ ಪ್ರಾಂತಿಕ ಸಭೆಯಲ್ಲಿ ಮಾತಾಡಿದ್ದಾರೆ. ಅದರ ಉಹಾಪೋಹವೇ ಲಂಪಾಲಿನ ಕಾಂಗ್ರೆಸದಲ್ಲಾಗುವದೆಂದು ತೋರುತ್ತದೆ.

ಹಿಂದೂ ಮುಸಲಮಾನರ ಸ್ವರಾಜ್ಯ.

ಗಂಧಿ ಜಿನ್ನಾ ಸಂಭಾಷಣೆ

—(?)—

ವಿಲಾಯತಿಗೆ ... ರಾಜಕೀಯ ಮುಖ್ಯಗಳ ... ಸಲಮಾನ ಮುಂದಾಳ್ಗಳಲ್ಲಿ ... ಕ್ಲಿಗೆ ಹೋದ ಮುಸಲ್ಮಾನ ... ರಿಯ ಮರ ಪಕ್ಷದವರಾಗಿದೆ, ... ರಿಪೋರ್ಟ ... ... ಕೆಗಳೆಂದು ... ಪತ್ರಿಕೆಯನ್ನು ಈ ಮುಂದಾಗಿ ಪ್ರಸಿದ್ಧಮಾಡಿದ್ದಾರೆ. ಇವೆಲ್ಲಕ್ಕೂ ನೆಹರು ರಿಪೋರ್ಟಿನಲ್ಲಿ ಸಮಾಧಾನ ಹೇಳಿದ್ದರೂ, ಅದಕ್ಕೆ ಇವರ ಒಪ್ಪಿಗೆಯಿಲ್ಲ. ಸಿಂಧವನ್ನು ಸ್ವತಂತ್ರಮಾಡಬೇಕೆಂದು ಹಿಂದೂ ಮಹಾಸಭೆಯವರ ತಕರಾರು. ಮುಂಬಯಿ ಸಾಯ ... ಕಮೀಟಿಯ ಮಾತು! ಆದರೂ ಇವರಿಗೆ ಸಿಂಧವು ಸ್ವತಂತ್ರ ಪ್ರಾಂತವಾಗಬೇಕಾಗಿದೆ ... ಮುಸಲಮಾನರ ... ಮುಸಲಮಾನರ ಮೇಲ್ಗೈಯಾಗಬೇಕು. ಅದು ಅಷ್ಟೆ ಮಾತ್ರವಲ್ಲ; ಅವರದೇ ಪ್ರಸ್ತ ಬೆಳೆಯಬೇಕೆಂದು ... ಟ್ಟಿನಿಂದ ಇವರ ಬೇಡಿಕೆಯು ಅಂತ್ಯರ್ಯವು ಮುಸಲ್ಮಾನರ ಬೇಡಿಕೆಯನ್ನು ಪೂರ್ಣಮಾಡದರೆ ಸಾಯ ನನ್ನ ... ಈ ರಾಜಕೀಯ ... ಲ್ಲದೆ ... ದ ರಾಜಕೀಯ ಪ್ರಗತಿಯು ಹಿಡಿದಿದ್ದರೆ- ಅದಕ್ಕೆ ... ದ ... ನೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅವರಿಗೆ ಪ್ರತಿಧ್ವನಿ ಕೊಡಲು ಮುಂಬಯಿಯಲ್ಲಿ ಮುಸಲಮಾನರು ಒಂದು ಜಾಹೀರ ಸಭೆಯನ್ನು ಕೂಡಿಸಿದ್ದರು. ಇದರಲ್ಲಿ ಕಾಂಗ್ರೆಸ ಪಕ್ಷದ ಮುಸಲಮಾನರು ಸೇರಿದ್ದಿಲ್ಲವೆಂದು ಹೇಳತಕ್ಕ ಅವಶ್ಯಕತೆ ಇಲ್ಲ. ಈ ಸಭೆಯಲ್ಲಿ ನ್ಯಾಲಾನಾ ಮಹಮದಲ್ಲಿಯವರು ಕೆಳಗೆ ಕೊಟ್ಟಂತೆ ಭಾಷಣಮಾಡಿದ್ದಾರೆ-

'ನಾವು ನೆಹರು ರಿಪೋರ್ಟನ್ನು ಅಂಗೀಕರಿಸಿದರೆ ಹಿಂದುಸ್ಥಾನದಲ್ಲಿ ಹಿಂದೂ ಜನರ ರಾಜ್ಯವಾಗುವದು. ಅದರಲ್ಲಿ ಮುಸಲಮಾನರ ಹಿತಕ್ಕೆ ಬಾಧೆ ಬರುವಂಥ ಅನೇಕ ವಿಷಯಗಳಿವೆ. ಅದ್ದರಿಂದ ನಾವು ಅವರ ಗೋಜಿಗೆ ಹೋಗತಕ್ಕದ್ದಿಲ್ಲ. ಪಂಡಿತ ನೆಹರು ಇವರ ಸವಿ ಮಾತುಗಳಿಗೆ ಮರುಳಾದರೆ ಜೇಡಿಮಳೆದ ಪಂಜರದಲ್ಲಿ ಸಿಕ್ಕ ನೊಣದಂತಾಗುವಿರಿ. ಮುಂಬಯಿ ದಂಗೆಯನ್ನೇ ನೋಡಿರಿ. ಪಠಾಣರ ಕೊಲೆಯಾಗುವಾಗ ಹಿಂದೂ ಒಬ್ಬರು ಅತ್ತಕಡೆಗೆ ಲಕ್ಷ್ಯವೇ ಕೊಡಲಿಲ್ಲ. ಹಿಂದೂ ಜನರು ಮುಸಲಮಾನರ ಮೇಲೆ ಹಾಕಿದ ಆರೋಪಗಳನ್ನು ನೋಡಲಾಗಿ ಅವರ ಕೂಡ ನಾವು ಸ್ನೇಹವಾಗಿರುವದು ಶಕ್ಯವೆಂದೇ ತೋರುವದಿಲ್ಲ. ಹಿಂದೂ ಜನರಿಂದ ನಾವೇನೂ ಕಲಿಯತಕ್ಕದ್ದಿರುವದಿಲ್ಲ. ಏಕೆಂದರೆ ಅವರಲ್ಲಿ ಅನೇಕ ಕುಂದುಕೊರತೆಗಳುಂಟು. ಬೇರೆ ದೇಶಗಳಲ್ಲಿ ಹಿಂದುಸ್ಥಾನದಂತೆ ಧರ್ಮಭೇದವಿರುವದಿಲ್ಲ. ಇಲ್ಲಿಯ ಧರ್ಮಭೇದವೇ ಜಗಳದ ಮೂಲ ಕಾರಣವಾಗಿರುತ್ತದೆ.'

ಮೌಲಾನಾ ಮಹಮ್ಮದ ಅಲ್ಲಿಯವರ ಹೀಗಿನ ಮುಸಲ ... ನ ... ಗೊಂದಲವೆಬ್ಬಿಸಿದಾಗ ಮೇಲೇ ಸರಿ. ನಿಯಮವು ಹಿಂದೂ ಮುಸಲಮಾನ ಐಕ್ಯಸಂಬಂಧವಾಗಿ ಪ್ರಯತ್ನಿಸುತ್ತಿರುವದು ಸ್ತುತ್ಯವು. ಇವರ ಶಿಷ್ಯಾಯಿ ದಸೆಯಿಂದ ಮಹಾತ್ಮರು ಹೋದ ರವಿವಾರ ದಿವಸ ಅಹಮದಾಬಾದಿನಿಂದ ಮುಂಬಯಿಗೆ ಬಂದ, ಮುಸಲಮಾನ ಮುಂದಾಳುವಾದ ಬ್ಯಾರಿಸ್ಟರ ಜಿನ್ನಾಸಾಹೇಬರ ಕೂಡ ಸಂಭಾಷಣೆ ಮಾಡಿ, ಮರಳಿ ಅಹಮದಾಬಾದಿಗೆ ಹೋದರು. ಈ ಸಂಭಾಷಣೆಯು ಸ್ನೇಹಾನುರಾಗದಿಂದ ನಡೆಯಿತೆಂದು ಮಹಾತ್ಮರು ಹೇಳುತ್ತಾರೆ. ಇದರ ಪರಿಣಾಮವು ಹಿಂದೂ ಮುಸಲಮಾನ ಐಕ್ಯವನ್ನುಂಟು ಮಾಡುವದೆಂದು ಕಾಂಗ್ರೆಸ ಸಂಕಲ್ಪನವರ ತಿಳುವಳಿಕೆಯಾಗಿರುತ್ತದೆ.

ಮುಸಲಮಾನ ಮಂತ್ರಿಯ ಕುಲಾಭಿಮಾನ.

—(೦)—

ದಿವಾನ ಬಾಂಧವಣಕರರು ಶಿಕ್ಷಣಖಾತೆಯ ಮಂತ್ರಿಯಾಗಿದ್ದಾಗ, ಹಿಂದುಳಿದವರೆಂದು ತಮ್ಮವರಿಗೆ ... ಯಲ್ಲಿ ಬಡತಿ ಕೊಟ್ಟ ಉದಾಹರಣೆಯು ... ಈ ಬಗ್ಗೆ ಟೀಕೆ ... ಗಿನ ಮಂತ್ರಿಯಾದ ಮಿ. ರಫಿಯುದ್ದೀನ ಭೋಪಾಳದ ಒಬ್ಬ ಮುಸಲಮಾನ ಗೃಹಸ್ಥರು. ಒಬ್ಬ ಈ ಖಾತೆಗೆ ಯಾವ ಸಂಬಂಧವಿಲ್ಲದ, ಅನೇಕ ಹಕ್ಕುಗಳನ್ನು ಮುಣುಗಿಸಿ, ಒಬ್ಬ ಯಲೆ ಮಿ ನದೀಕ ಜಿಲ್ಹೆಗೆ ಸೇರಿದ ಜಳಗಾವಿಯ ... ದ ಹೆಡಮಾಸ್ತರರಾಗಿ ನೇಮಿಸಿದ್ದಾರೆ. ... ಕುಲಾಭಿಮಾನವಾದದಿರುವದ? ರಾಜ್ಯಕರ್ತರಿಂದಂಥವರು ಹೀಗೆ ಪಕ್ಷಪಾತ ಮಾಡಬಹುದೇ?

ಶಿಕ್ಷಕರ ಸಂಬಳದ ದೆಸೆಯಿಂದ ಸರಕಾರದ ಮೇಲೆ ಪುಣೆ ಡಿಸ್ಟ್ರಿಕ್ಟ ಲೋಕಲಬೋರ್ಡಿನ ದಾವೆಯು.

—)(—)(೦)(|)(—

ಪುಣೆ ಜಿಲ್ಹೆಯಲ್ಲಿ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಿರುವದು. ... ದು ರಲ್ಲಿನ ... ಹುಡುಗರಾದರೆ- ... ಒಬ್ಬ ಸ್ವತಂತ್ರ ಶಿಕ್ಷಕನಿಡಬೇಕೆಂದು ಸರಕಾರ ನಿಯಮವು. ಆ ಪ್ರಕಾರ ಈ ಜಿಲ್ಹೆಯಲ್ಲಿ ಈ ವರ್ಷ ೩೭ ವರ್ಗಗಳಾಗಿರುತ್ತವೆ. ಇವುಗಳ ಶಿಕ್ಷಕರ ಸಂಬಳದಲ್ಲಿ ಮೂರರಲ್ಲಿ ಎರಡು ಭಾಗವನ್ನು ಸರಕಾರವು ಕೊಡತಕ್ಕದ್ದು. ಮೂರು ವರ್ಷ ಸಂಬಳ ಕೊಡಬೇಕೆಂದು ಸರಕಾರಕ್ಕೆ ಎಷ್ಟು ಸಾರೆ ಬರೆದರೂ ಸರಕಾರವು ಗ್ರ್ಯಾಂಟ ಕೊಡಲೊಪ್ಪಲೇ ಇಲ್ಲ. ಅದ್ದರಿಂದ ಬೋರ್ಡಿನವರು ಈ ಬಗ್ಗೆ ಸರಕಾರದ ಮೇಲೆ ದಾವೆ ಮಾಡಬೇಕೆಂದು ಠರಾವು ಮಾಡಿ, ಆ ಪ್ರಕಾರ ಕೆಲಸ ನಡೆಸಲು ಇಬ್ಬರು ವಕೀಲರನ್ನು ನೇಮಿಸಿದ್ದಾರೆ.

ಪ್ರೊಫೇಸರ ಪ್ರೊಫೇಸರರಿಗೆ ಶಿಕ್ಷೆ.

—(೦)—

ಕಲಕತ್ತೆಯಲ್ಲಿರುವ ರಾಧಾಕೃಷ್ಣರೆಂಬ ಪ್ರೊಫೇಸರರ ಕೆಳಗೆ ಮಿರತ ಕಾಲೇಜದ ಪ್ರೊಫೇಸರರಾದ ಜದುನಾಥಸಿಂಹರು ಒಂದು ನಿಬಂಧವನ್ನು ಬರೆಸಿದ್ದರು. ಈ ನಿಬಂಧವು ಕಲಕತ್ತೆಯ ಯುನಿವ್ಹರ್ಸಿಟಿಯು ಒಂದು ಇನಾಮಿನ ದೆಸೆಯಿಂದಿತ್ತು. ರಾಧಾಕೃಷ್ಣರು ಈ ನಿಬಂಧವನ್ನು ತಮ್ಮ ಹಸ್ತಕ ಇಟ್ಟುಕೊಂಡು, ಇದರ ಕೆಲವು ಅವತರಣಗಳನ್ನು ಮಿರತ ಕಾಲೇಜದ ಮಾಸಿಕ ಪುಸ್ತಕದಲ್ಲಿ ತಮ್ಮ ಹೆಸರಿನಿಂದ ಮುದ್ರಿಸಿದರು. ಅದೇ ಪ್ರಕಾರ ಶಂಕರ ಮತ್ತು ರಾಮಾನುಜರೆಂಬ ಪುಸ್ತಕ ಮುದ್ರಿಸಿ, ತಮ್ಮ ನಿಬಂಧದ ಅವತರಣಗಳನ್ನು ತಕ್ಕೊಂಡರು. ಇದು ಗ್ರಂಥಚೌರ್ಯವಾಗಿದ್ದು, ಈ ಬಗ್ಗೆ ತಮಗೆ ೨೦ ಸಾವಿರದ ನಷ್ಟಭರ್ತಿ ಕೊಡಿಸಬೇಕೆಂದು ಜದುನಾಥರು ಕಲಕತ್ತೆಯ ಹಾಯಕೋರ್ಟಿನಲ್ಲಿ ಫಿರ್ಯಾದಿ ಮಾಡಿದ್ದಾರೆ.

ಪಾಶ್ಚಿಮಾತ್ಯರಾದ ಇಬ್ಬರು ಜಗತ್ಪ್ರಸಿದ್ಧ ವಿದ್ವಾಂಸರು ಮಿರತ ... ಹಿಂದಕ್ಕೆ ... ಕೆಕ್ಕೊಳ್ಳಿರೆಂದು ಮಿ. ಮ್ಯಾಕಡೊನಾಲ್ಡ ಸಾಹೇಬರಿಗೆ ಸೂಚನೆ ಮಾಡಿದ್ದಾರೆ.

ಶ್ರೀಮದ್ಜಗದ್ಗುರು ಶಂಕರಾಚಾರ್ಯರ ಸಂಸ್ಕೃತ ಪಾಠಶಾಲಾ, ಧಾರವಾಡ

—(೦)—

ಪಾಠಶಾಲಾ ಪದ್ಧತಿ ಪ್ರಕಾರ ಇಲ್ಲಿಯ ಶ್ರೀ ಜಗದ್ಗುರು ಶಂಕರಾಚಾರ್ಯರ ಸಂಸ್ಕೃತ ಪಾಠಶಾಲೆಯ ವಾರ್ಷಿಕೋತ್ಸವ ಸಮಾರಂಭವು ನಾಗಪಂಚಮಿಯ ದಿವಸವಾಯಿತು. ಶ್ರೀ [illegible] ಅಧ್ಯಕ್ಷರಾಗಿದ್ದರು. [illegible] ಶ್ರೀ [illegible] ಮೊದಲಾದ ಪಂಡಿತರು [illegible] ಪಾಠಶಾಲೆಯಲ್ಲಿ ಶಾಸ್ತ್ರ ಮತ್ತು ವೇದವೇದಾಂತಗಳನ್ನು ಕಲಿಸುವರು. [illegible]

[illegible]

ಹುಬ್ಬಳ್ಳಿ ಬೆಂಗಳೂರ ರೇಲ್ವೆ.

ಹುಬ್ಬಳ್ಳಿಯಿಂದ ಕಾರವಾರ [illegible] ಮಾರ್ಗವಾಗಿ ಬೆಂಗಳೂರ ರೇಲ್ವೆ [illegible] ಮಂಗಳೂರು [illegible] ಕರ್ನಾಟಕ ಏಕೀಕರಣವನ್ನು ಸುಲಭಸಾಧ್ಯ ಮಾಡಬೇಕೆಂದಿರುತ್ತದೆ.

—

[illegible] ತೋಫುಗಳ ಕೊರತೆ.

[illegible]

ಪ್ರತಿಬಂಧಕದ ಸುಧಾರಣೆ.

ಕೌನ್ಸಿಲದಲ್ಲಾದ ಮನೋಜ್ಞ ಭಾಷಣಗಳು

—(೦)—

ಮುಂಬಯಿಯಲ್ಲಿ ಒಕ್ಕಲಿಗರ ಸುಧಾರಣೆಗಾಗಿ [illegible]

[illegible]

ಸಿಪಾಯಿಗೆ ಶಿಕ್ಷೆ.

[illegible]

ಬೆಂಗಳೂರಲ್ಲಿ ದಬ್ಬಾಳಿಕೆ.

ವಕೀಲ, ವರ್ತಮಾನಪತ್ರಕಾರ ಮತ್ತು ಸಾಹುಕಾರರ ಮೇಲೆ ಏಟು.

ಹೋದ ತಿಂಗಳ ೩೦ ನೆಯ ತಾರೀಖಿನ ದಿವಸ ಬೆಂಗಳೂರಲ್ಲಾದಂಥ ಹರತಾಳದ ಗಲಭೆಯು [illegible] ಮೇಲೆ ಏಟು ಹಾಕಿದ್ದಾರೆ. ಇವರಲ್ಲಿ ಗಣಪತಿಯು [illegible] ಶ್ರೀ ವೆಂಕಟಪ್ಪಯ್ಯಾ, ವಿಶ್ವಕರ್ನಾಟಕದ ಸಂಪಾದಕರಾದ ಶ್ರೀ ತಾತಾಚಾರ್ಯ ಶರ್ಮಾ, [illegible] ಮೊದಲಾದವರು [illegible] ಆರೋಪಿ [illegible].

—

ಅನ್ನತ್ಯಾಗಿಗಳ ಅಂತ್ಯಾವಸ್ಥೆ.

—(೦)—

[illegible]

ಅನ್ನತ್ಯಾಗಿಗಳ ಅಂತ್ಯಕಾಲ.

[illegible]

ಶಿಕ್ಷೆಯಾದ ಬೆಂಗಳೂರಿನ ಪತ್ರಕಾರರ ಅನ್ನವರ್ಜ.

—(೦)—

ಬೆಂಗಳೂರಲ್ಲಿ ರಾಜದ್ರೋಹದ ಆರೋಪದ [illegible] ಶ್ರೀ [illegible] ಶಿಕ್ಷೆಯಾಯಿತು. [illegible]

—

ಶಿಕ್ಷೆ ಕೊಡುವ ಹೊಸ ನ್ಯಾಯ

—(೦)—

[illegible]

—

ಆಕಾಂಡ ತುಂಡವನ ಪುಸ್ತಕದ ಜಪ್ತಿಯು.

—(೦)—

[illegible]

—

ಬಂಧಿಸಲ್ಪಟ್ಟ ಹೊಸ ಅರಸನು.

—(೦)—

[illegible]

—

[illegible]

ಅಹಮದಾಬಾದ ಮ್ಯುನಿಸಿಪಲ್ ಆಟ

—(೦)—

ಇಂಜನಿಯರ ಮತ್ತು ಕಮಿಟಿಯ ನಡುವೆ ನಡೆದ ಜಗಳ

—(೦)—

[illegible]

ಪ್ರೊ ಲಿನ ಮತ್ತು ಸ್ವರಾಜ್ಯವಾದಿಗಳ ಗಲಾ

—(೦)—

[illegible]

ಪಾರ್ಲಮೆಂಟ ಸಭೆಯಲ್ಲಿ ಹಿಂದೀ ಮೆಂಬರರು

—(೦)—

[illegible]

ನಿಜವಿದ್ದರೆ ಆಶ್ಚರ್ಯವೆ

—(೦)—

ಖ್ರಿಸ್ತಿ ಸ್ತ್ರೀಯು ಮತಾಂತರ [illegible]

—(೦)—

[illegible]

ಬಂಧರದಲ್ಲಿ ಅತಿವೃಷ್ಟಿ

—(೦)—

[illegible]

ಅಪಮಾನ ಆತ್ಮಹನನ [illegible]

—(೦)—

[illegible]

ವಾಗಲಣ ಹಾಲುಕಿನ ಕೋಟಿಗರ ಅನ್ಯಾಯ ಮತ್ತು ಅತ್ಯಾಗ್ರಹ

[illegible]

ಬಂಡಿಯವನಿಗೆ ಪಾರದರ್ಶಿಯ ಪ್ರಯೋಗ

—)(o(—

ಒಂದಿಬ್ಬರ ಅಂಶು

—(೦)—

[illegible]

ಅಂತ್ಯಜರಿಗೆ ದೇವಾಲಯ ಪ್ರವೇಶ

[illegible]

ವೀರಶೈವ ವಿದ್ಯಾವರ್ಧಕ ಸಂಘ

ಧಾರವಾಡ

(ಬರಹ)

[illegible]

ಧಾರವಾಡ

ವಿಪಾನ ನಾಸವೇಕರ ಮೃತ್ಯುವಿನಿಂದ ತೆರವಾದ ಕೌನ್ಸಿಲ ಮೆಂಬರ ಸ್ಥಳದಲ್ಲಿ ಇಲ್ಲಿಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ [illegible] ಆರಿಸಲ್ಪಟ್ಟರು

THE ANKALIGI BANK LTD

Head Office–

Kamanlatta Dharwar

Branches

Ranebennur & Hirekerur

5%

Interest allowed on

ANNA SAVINGS *BANK*

DEPOSIT-

Dharwar } K B ANKALIGI
3 4-1927 } Managing Director

ಶ್ರೀದತ್ತ ವೀವ್ಹಿಂಗ್ ಹುಬ್ಬಳ್ಳಿ

ಕರ್ನಾಟಕದಲ್ಲಿ ಇದೇ ಮೊದಲನೆಯ [illegible]

ಇದೇ ವಿಲ್ಲಿನಲ್ಲಿ ಪತ್ತಕ್ಕ ಒಣ್ಣಾದ ಸರ್ವಾಂಗ ಸುಂದರ ಶೀರಿಗಳು ಹಾಗೂ [illegible] ಗುತ್ತವೆ [illegible] ಮಾಲು ಖರೀದಿ ಮಾಡಿಕೊಳ್ಳಿರಿ.

ಒಣ್ಣಾ ಪಕ್ಕಾ ಬಣ್ಣಾ ಹೋದರೆ ಮಾಲು ತಿರುಗಿ ತಕ್ಕೊಳ್ಳುವೆವು

ಮಾಲಕ — ಬಿ ಜಿ [illegible] ಬ್ರದರ್ಸ

ಕೊಪ್ಪೀಕರ ರೋಡ ಹುಬ್ಬಳ್ಳಿ

ಜಾಹೀರಾತು.

ಸ್ಕೂಲ ಆಫ್ [illegible] ಮೋಟಾರಿಂಗ್

ಮೋಟಾರ ಉತ್ತಮ ರೀತಿಯಿಂದ [illegible] ಅಕ್ಕೆ ಮತ್ತು [illegible] ಮಾಡಲಿಕ್ಕೆ ಕಲಿ[illegible] ವರು ಒಂದೇ [illegible] ಹತ್ತು ವರ್ಷಗಳಿಂದ [illegible] ತಕ್ಕೊಂಡ ಮಾಲಕರು [illegible] ಪತ್ರಿಕೆ [illegible]

ಕೇಶವ ಮೆಕ್ಯಾನಿಕಲ್ ವರ್ಕ್ಸ

ದಾಣೆಗಲ್ಲಿ ಶಹಾಪೂರ (ಬೆಳಗಾಂವಿ)

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

[illegible]

ಮುಖ್ಯರಾವ ಬಿ. [illegible]

ಮ್ಯಾನೇಜಿಂಗ ಡಾಯರೆಕ್ಟ

ಶ್ರೀ ಧಾರವಾಡ [illegible]

ಧಾರವಾಡ.

[illegible]

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ ॥

ಪ್ರಿಯ ಒಕ್ಕಲಿಗ ಬಾಂಧವರೇ!

ತಮ್ಮಲ್ಲಿ ವ್ಯಾಪಾರ, ಉದ್ಯೋಗಿಕ ಪ್ರಗತಿಯನ್ನುಂಟು ಮಾಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ, ಆಂಧ್ರ ದೇಶದ ಸುಪ್ರಸಿದ್ಧ ಕಪಿ[illegible] ಸಮರ್ಥರೂ ಆದಂಥ, ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದ "ಮಹಾತ್ಮಾ ವೇಮಣ್ಣ" ನೆಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

ದಿ ವೇಮರೆಡ್ಡಿ ಕಂಪನಿ ಲಿಮಿಟೆಡ್.

ಎಂಬ ನಾಮದ ಹಲಾಲಿ ಅಂಗಡಿಯನ್ನು ಗದಗ ಶಹರದಲ್ಲಿ [illegible] ನಿಯಮದ ಪ್ರಕಾರ ರಜಿಸ್ಟರ ಮಾಡಿಸಿ ಸ್ಥಾಪಿಸಿರುವದು ತಮ್ಮೆಲ್ಲರಿಗೂ ಗೊತ್ತಿರಬಹುದು. [illegible] ದೊಡ್ಡ ಜವಾಬದಾರ ಮತ್ತು ವ್ಯವಹಾರಜ್ಞ [illegible] ರಿಂದಲೇ ನಡೆಯುವದು.

ಆದರೆ ಈ ಕಂಪನಿಯು ಕೇವಲ ಲಾಭದ [illegible] ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿಗರಲ್ಲಿ ವ್ಯಾಪಾರ, ಕೈಗಾರಿಕೆ ಮೊದಲಾದ ಉದ್ಯೋಗಗಳ ಅಭಿರುಚಿಯನ್ನು [illegible] ಮತ್ತು ನೈತಿಕ ಉನ್ನತಿಯನ್ನು [illegible] ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ [illegible].

[illegible] ತಮ್ಮೆಲ್ಲರೂ ತಮಗೆ ಬೇಕಾಗುವ ಬಾಂದಾ, [illegible], [illegible] ಮುಂತಾದ ಸಾಮಾನುಗಳನ್ನು ನಮ್ಮ ಮುಖಾಂತರವಾಗಿ [illegible] ಕೊಳ್ಳಬೇಕಾಗಿ ವಿನಂತಿ. [illegible] ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತಿ [illegible] ಮುಂತಾದ ಮಾಲನ್ನು ಸಂಗ್ರಹ ಮಾಡುವದು ಹೆಚ್ಚು ಲಾಭದಾಯಕ. ಕಾರಣ ತಮಗೆ [illegible] ಮಾಲಿನ [illegible] ಮುಂಗಡವಾಗಿ ತಿಳಿಸಿ ಬಿಟ್ಟ ಲೇಖಿಯಿಂದ ಖರೇದಿ ಮಾಡಲಿಕ್ಕೆ [illegible] ಅನುಕೂಲವಾಗುವದರಿಂದ ಖರೀದಿಸಾ[illegible] ಇರುವದರಲ್ಲಿ ಬರುವದು ಈ ಸುಸಂಧಿಯನ್ನು [illegible] ವಿನಂತಿ. ನಮ್ಮ [illegible] ತಮ್ಮ ಹಾಗೂ ತಮ್ಮ ಮಿತ್ರಮಂಡಳಿಯ ಹತ್ತಿ, ಅರಳೆ, ಜೋಳ, [illegible] ಕರಹತ ಮಾಲನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ [illegible] ಕೊಡಬೇಕೆಂದೂ ಮತ್ತು ತಾವೂ ಲಾಭಹೊಂದಬೇಕೆಂದೂ ಬಯಸುತ್ತೇವೆ.

ತಮ್ಮ

ತಾರೀಖು ೧೭-೭-೩೮

ರಾವಸಾಹೇಬ ಲಿಂಗನಗೌಡಾ ಗೌಡಪ್ಪಗೌಡಾ ಪಾಟೀಲ,

[illegible] ರೋಡ

ಚೇರಮನ್ನ

ಸೂಚನೆ:— ಮಿಲ್ ಕಳಿಸುವಲ್ಲಿ ಮಾಲಿನ ಮೇಲೆ [illegible] ಬರುವದರಲ್ಲಿ ಒರುವುದು. ಹೀಗೆ ಒಪ್ಪು ಹಣಕ್ಕೆ ೧೦೦ಕ್ಕೆ ೧ ತಿಂಗಳಿಗೆ [illegible] ಕೊಡಬೇಕಾಗುವದು. ಕಂಪನಿಯವರು [illegible] ಪ್ರಕಾರ, [illegible] ಗದಗ ಕಾಟನ್ ಮಾರ್ಕೆಟ ಅಸೋಸಿಯೇಶನ್ನದ [illegible] ದ ಮಾರುವ ವ್ಯವಸ್ಥೆಯನ್ನು ಮಾಡುವರು. [illegible] ಕಂಪನಿ [illegible] ಹುದ.

ಸರ್ವ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳು [illegible] ಪರಿಸ್ಥಿತಿ [illegible] ಹಿಂದುಳಿದ ಮತ್ತು ಅಲ್ಪ ಸಂಖ್ಯಾಕ, ಕುರುಬ, [illegible] ಕ್ಷತ್ರಿಯ, [illegible] ಕ್ಷತ್ರಿಯ, ಸಮಗಾರ, ಶಿಂಪಿ, ನೈಕ್ಯ, ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ [illegible] ಒಡ್ಡರ, ಗೊಲ್ಲರ, ಈಳಿಗೇರ, ಕೊರವಾ ಸಮಾಜಗಳ ಮತ್ತು ಅಸ್ಪೃಶ್ಯ [illegible] ಮೊದಲಾದ [illegible] ವರ್ಗಗಳ ಸರ್ವತ್ರೀಕ ಉನ್ನತಿಯು ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ [illegible], ಸಾಮಾಜಿಕ, ನೈತಿಕ, ರಾಜಕೀಯ [illegible] ಈ ಸಂಘದ ಉದ್ದೇಶವು. ಸರ್ವ ಸುಧಾರಣೆಗೆ ಮೂಲಾಧಾರವಾದ ಶಿಕ್ಷಣ ಪ್ರಸಾರ ಮಾಡಿ, [illegible] ಸಮಾಜಗಳನ್ನು ಮುಂದಕ್ಕೆ ಎಳೆಯುವದು ಈ ಸಂಘದ ಧ್ಯೇಯವು. ಸರಕಾರದ ಮತ್ತು ಮುಂದೆ ಹೋದ [illegible] ಸಮಾಜಗಳ ಸಹ ಸಹಾನುಭೂತಿ ಸಹಾಯಗಳಿಂದ ಹಿಂದುಳಿದ ಸಮಾಜಗಳ [illegible], ಅಡಚಣೆ, ಅನಾನುಕೂಲತೆ, ಕುಂದುಕೊರತೆಗಳನ್ನು ಹೋಗಲಾಡಿಸುವದು ಈ ಸಂಘದ ಧೋರಣವು ಮೊದಲಾದವು.

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ ಧಾರವಾಡ, ವಿಜಾಪೂರ, ಬೆಳಗಾವಿ [illegible] ಮೊದಲಾದ ಬ್ರಿಟಿಶ ಜಿಲ್ಲೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ, ಅಲ್ಪ ಸಂಖ್ಯಾಕ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಕಡಿಮೆಯಲ್ಲದ ವಯಸ್ಸಿನ ಸ್ತ್ರೀಪುರುಷರು ಕೆಳಗೆ ಕಾಣಿಸಿದಂತೆ ಆಯಾ ತರಗತಿಯ ದೇಣಿಗೆ ಅಥವಾ ವರ್ಗಣಿಯನ್ನು ಕೊಟ್ಟು ಆಯಾ ತರಗತಿಯ ಸಭಾಸದರು ಆಗಬಹುದು.

ಆಶ್ರಯದಾತರು:— ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ದೇಣಿಗೆಯನ್ನು ಕೊಡುವಂಥವರು.

ದಾತೃಗಳು.— ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಟ್ಟಿಲೆ ಕೊಡುವವರು.

ಆಜೀವ ಸಭಾಸದರು:— ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆ ಕೊಡುವವರು.

ಸಾಧಾರಣ ಸಭಾಸದರು:—
- ೧ ನೇ ತರಗತಿ:— ಕನಿಷ್ಟ ೫ ರೂ. ವಾರ್ಷಿಕ ವರ್ಗಣಿ ಕೊಡುವವರು.
- ೨ ನೇ ತರಗತಿ:— ಕನಿಷ್ಟ ೨ ರೂ. ವಾರ್ಷಿಕ ವರ್ಗಣಿ ಕೊಡುವವರು.
- ೩ ನೇ ತರಗತಿ:— ಕನಿಷ್ಟ ೧ ರೂ. ವಾರ್ಷಿಕ ವರ್ಗಣಿ ಕೊಡುವವರು.
- ೪ ನೇ ತರಗತಿ:— ಕನಿಷ್ಟ ೪ ಆಣೆ ವಾರ್ಷಿಕ ವರ್ಗಣಿ ಕೊಡುವವರು.

ಯಾವತ್ತೂ ಬಂಧುಭಗಿನಿಯರು ಆದಷ್ಟು ತೀವ್ರ ಸಂಘದ ಮೆಂಬರರಾಗಬೇಕೆಂದು ಒಕ್ಕೊರಲಿನ ವಿನಂತಿಯುದೆ.

ದೇವನಗೌಡ ಲಿಂಗನಗೌಡ ಪಾಟೀಲ,
ಬಿ. ಎ. ಎಲ್‌ಎಲ್. ಬಿ. [illegible]
ಸೆಕ್ರೆಟರಿ

॥ಶ್ರೀ ಮಹಾದೇವ ಪ್ರಸನ್ನ॥

ತಾಜಾ ಪೌಷ್ಟಿಕ ವನಸ್ಪತಿಗಳಿಂದ

ಸ್ತ್ರೀ ಪುರುಷ ಆಬಾಲವೃದ್ಧರಿಗೆ ತಪ್ಪದೆ ಗುಣಕೊಡುವ

ಧಾತುಪೌಷ್ಟಿಕ **ಅನಂಗಾನಂದಾವಲೇಹ** ಶಕ್ತಿವರ್ಧಕ

ಇದರ ಸೇವನೆಯಿಂದ ಸ್ವಪ್ನಜನ್ಯ ಧಾತುಪಾತ ನಪುಂಸಕತ್ವ ಗರ್ಮಿಯ ಸಂಬಂಧವಾಗಿರುವ ಎಲ್ಲ ವಿಕಾರ, ಕವಕ, ಜೀರ್ಣಜ್ವರ, ಸ್ತ್ರೀಯರ ಶ್ವೇತ ಪ್ರದರ ಪ್ರದರ ನಾಶವಾಗುತ್ತದೆ. ಸ್ತ್ರೀಯರು ಗೂ ಸಣ್ಣ ಹುಡುಗರಿಗೂ ಈ ಔಷಧವು ಉತ್ತಮವಾದ ಗುಣದಾಯಕವು ಇರುತ್ತದೆ. ಈ ಔಷಧದ ನಾಲ್ಕು ಬಾಟಲಿಗಳನ್ನು ಸೇವನಮಾಡುವವರಿಂದ ಪೂರ್ಣ ಗುಣವಾಗುತ್ತದೆ. ಮೊದಲನೇ ಸಪ್ತಕದಲ್ಲಿಯೇ ಗುಣಕಾಣುವದು. ಒಂದು ಬಾಟಲಿಗೆ ಬೆಲೆ ೧॥ ರೂಪಾಯಿ. ನಾಲ್ಕು ಬಾಟಲಿಗೆ ೬ ರೂಪಾಯಿ. ಒಂದು ಡಝನ ಬಾಟ್ಲಿಗಳ ಬೆಲೆ ೧೭ ರೂ. ಪೋಸ್ಟೇಜ ೧ ಬಾಟ್ಲಿ ಆರು ಆಣೆ. ಟಪಾಲ ಖರ್ಚು ಬೇರೆ ಬೀಳುವದು. ಆನುಪಾನ ಬಾಟ್ಲಿ ಸಂಗಡ ಬರೆಯುವದು. ಆರ್ಡರ ಕೊಟ್ಟರೆ ಮಾಲು ವ್ಹಿ. ಪಿ. ಯಿಂದ ಕಳಿಸುವೆವು.

ಎಲ್ಲ ಕಡೆಗೆ ಏಜಂಟರು ಬೇಕು

ಮ್ಯಾನೇಜರ — **ಆರ್. ವ್ಹಿ. ಬ್ರದರ್ಸ,**

ಮು. ಪೋ.— ನಿಪ್ಪಾಣಿ (ಬೆಳಗಾಂವ)

ಅಂದವಾದ ಮುದ್ರಣ. ಶ್ರೀ ವಿದ್ಯಾರಣ್ಯ ಪುಸ್ತಕಮಾಲೆಯ ಕುಸುಮ ೬. ೭. ಅಪೂರ್ವ ಭಾವಚಿತ್ರಗಳು

ಕನ್ನಡ ನಾಡಿನ ಇತಿಹಾಸವು ಸ್ವಾತಂತ್ರ್ಯದಾಯಕ! ಸಿದ್ಧವಾಗುತ್ತಲಿದೆ!!

ಕರ್ನಾಟಕ ಸಾಮ್ರಾಜ್ಯ. ಸಂ. ೨.

ಲೇಖಕರು:— ರಾ. ಹ. ದೇಶಪಾಂಡೆ ಎಂ. ಎ.

ಈ ಗ್ರಂಥವು ಕ್ರಿ. ಶ. ೭೫೭ ರಿಂದ ೧೧೮೯ ರ ವರೆಗಿನ ಇತಿಹಾಸವನ್ನೊಳಗೊಂಡಿದ್ದು ಈಗ ಬೆಂಗಳೂರು ಮುದ್ರಾಲಯದಲ್ಲಿ ಅಚ್ಚಾಗುತ್ತಲಿದೆ. ಇದು ೧ನೆಯ ಸಂಪುಟಕ್ಕಿಂತ ಸುಮಾರು ೧೦೦ ಪುಟ ಹೆಚ್ಚು ದೊಡ್ಡದಾಗಬಹುದು. ಇದರ ೧ ನೆಯ ಭಾಗದಲ್ಲಿ ರಾಷ್ಟ್ರಕೂಟರ ಅಥವಾ ರಾಯರುಗಳ [illegible] ವರ್ಣನೆಯೂ ೨ ನೆಯ ಭಾಗದಲ್ಲಿ ಕಲ್ಯಾಣದ ಚಾಲುಕ್ಯರ ವರ್ಣನೆಯೂ ಸ್ವಯಂಸ್ಫೂರ್ತಿದಾಯಕವಾಗಿದ್ದರೂ ಬರೆದಾದರೆ ಕನ್ನಡ ನುಡಿನಾಡಿನ ಅಭಿಮಾನದಿಂದ ತಮ್ಮಗಿ ಮಹತ್ವವನ್ನು ಹೊಂದಿರುವದು. ಇದು ಕನ್ನಡ ನಾಡಿನ ವಿಷಯವಾಗಿ ಇದ ವರೆಗೂ ತಿಳಿದುಬಂದಿರುವ ವಿಷಯಗಳನ್ನೆಲ್ಲ ಒಳಗೊಂಡು ಅತಿ ಸಂಕ್ಷೇಪವಾಗಿಯಾಗಲಿ ಅತಿ ದೀರ್ಘವಾಗಿಯಾಗಲಿ ಇರದೆ ಮೃದುಮಧುರವಾಗಿಯೂ ಹೃದಯಂಗಮವಾಗಿಯೂ ಇರುವ ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿದೆ.

ಈ ಗ್ರಂಥವನ್ನು ಬಯಸುವವರು ೧ ರೂ. ಪ್ರವೇಶ ಫೀಯನ್ನು ಕೊಟ್ಟು ಮಾಲೆಯ ಚಂದಾದಾರರಾದರೆ ಅವರಿಗೆ ಈ ಸಂಪುಟವನ್ನು ೧ ರೂ. ೧೨ ಆ. ಗೆ ಕೊಡುವೆವು. ಅಂಚೆ ವೆಚ್ಚ ಬೇರೆ. ನವಂಬರ ತಿಂಗಳ ಕೊನೆಯವರೆಗೆ ಮುಂಗಡ ೨ ರೂ ೪ ಆ. ಕಳಿಸುವವರಿಗೆ ಟಪಾಲು ಹಾಸಲು ಬಿದ್ದಿಲ್ಲ. ಸ್ವಲ್ಪೇ ಪ್ರತಿಗಳನ್ನು ತೆಗೆಸುವದರಿಂದ ಗ್ರಾಹಕರು ತ್ವರೆಮಾಡತಕ್ಕದ್ದು.

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರದಲ್ಲಿ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯದೆ ಸಹ) ಸರಕಾರ ಪತ್ರಗಳೂ ಬರವಣ ಸಾಮಾನುಗಳೂ ಅಗ್ಗವಾಗಿ ದೊರೆಯುವವು. ಬೆಲೆಯುಳ್ಳ ಪೇರಾಪದವು ೪ ಆಣೆ ಅಂಚೆ ಟಿಕೇಟುಗಳನ್ನು ಕಳಿಸತಕ್ಕದ್ದು.

ವ್ಯವಸ್ಥಾಪಕರು,
ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ.
ಮಾಳಮಡ್ಡಿ, ಧಾರವಾಡ.

ಸಕಲ್ಲಿ ಮಾಲಿನ ಒಗ್ಗೆ ಎಷ್ಟರಂಗಿರಿ
ನಮ್ಮ ಉಂಚೇ ಪವಿತ್ರ ಕಾಬೂಲಿ

ಹಿರಾ ಇಂಗು

ಅವಶ್ಯ ಬೇಡಿರಿ.

ಇದು ಮಸಾಲಿ ಮನೆಯಲ್ಲಿ ಉಪಯೋಗವಾದದ್ದು ಅಡಿಗೆಯು ಇದರಿಂದ ರುಚಿಯೂ ಸ್ವಾದಿಷ್ಟವಾಗುವದು ಎಂಬುವದು ಎಲ್ಲರಿಗೂ ಖಾತ್ರಿಯಾಗಿರುವದು. ನಾವು ನಮ್ಮ ಗುಮಾಸ್ತನನ್ನು ಕಾಬೂಲಕ್ಕೆ ಕಳುಹಿಸಿ ಉಂಚೇ ಮಾಲನ್ನು ರೋಕ ಹಣ ತೆಗೆದುಕೊಳ್ಳುವದರಿಂದ ನಮ್ಮ ಗಿರಾಕಿಗಳಿಗೆ [illegible] ಬೀಳುವದಲ್ಲದೆ ಖಾತ್ರಿ ಮಾಲು ಸಿಗುವದು. ಈ ಇಂಗು ಬಾಜಾರಿ ಇಂಗಿಗಿಂತ ಒಮ್ಮೆ ತೀಕ್ಷ್ಣವಿದ್ದು ಸುವಾಸಿಕವಾಗಿರುವದರಿಂದ ನಮ್ಮ ಒಂದು ತೊಲಿ ಇಂಗು ಇತರ ಹತ್ತು [illegible] ಇಂಗಿಗಿಂತಲೂ ಮೇಲಾಗಿರುವದು. ಇದು ಔಷಧಿ ವಸ್ತುವಾಗಿರುವದರಿಂದ ಅಜೀರ್ಣ [illegible] ರ ಹೊಟ್ಟೆ ಕಟ್ಟುವದು ಇಷ್ಟನಕಾಯಿಯಲ್ಲಿ ಉಪಯೋಗಿಸಿದರೆ ಕ್ರಿಮಿಗಳಾಗುವ ಸಂಭವವಿಲ್ಲ. [illegible] ಗನ್ನು ಬೇಕಾದಷ್ಟು ಮುಚ್ಚಿಟ್ಟರೂ ವಾಸನೆಯು ಪಸರಿಸದೆ ಇರದು. ಸಂಗ್ರಹಿಸುವದು ಯೋಗ್ಯವಿದೆ.

ಅರ್ಧಾ ಔಂಸಿನ ಕಿರುಕೋಳ ಎತ್ತಿಗೆ ಸೋಯಿಸ್ಕರ ಫ್ಯಾನ್ಸಿ ಡಬ್ಬಿಗಳು.
ಎರಡಾಣೆ ಮಾಟ್ಲೆ ಇಂಗು.
ಡಜನ ಒಂದಕ್ಕೆ ನಾಲ್ಕು ರೂಪಾಯಿ.

ಡಬ್ಬಿಯು ಒಂದು ಡಜನಕ್ಕಿಂತಲೂ ಕಡಿಮೆ ಕೊಡಲಾಗುವದಿಲ್ಲ. ಎಲ್ಲರಿಗೂ ವ್ಯಾಕೆಂಡ ಫೋಸ್ಟ [illegible] ವಾಧ ಹೆಚ್ಚು ಮಾಲು ಬೇಡಿಕೊಳ್ಳುವವರು ಪತ್ರವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ಜೋಡ ಘರಾಟ ಸಿಗುವದು.

ಮೆಸರ್ಸ ಕುಲಗೋಡ ಬ್ರದರ್ಸ ತಾಲೂಕ ಗೋಕಾಕ.

[illegible] ಧಾರ್ಮಿಕ [illegible] ಶಕ್ತಿಗಳೂ ಆಗ [illegible] ಮನಸ್ಸಿಗೆ [illegible] ದೊರೆಯುವ [illegible] ಇಂಥ ಮನಸ್ಸಿನ [illegible] ಪೂರ್ಣ ಫಲ [illegible] ವೈದ್ಯರಾಜ ಶ್ರೀ. ಕೇಶವ ಶಾಸ್ತ್ರೀ [illegible] ಇವರ,

ಶಕ್ತಿ ಕಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ತಯಾರಾಗಿದೆ. ಇದರ ಉಪಯೋಗದಿಂದ ಸಶಕ್ತ ಜಠರ, ನಿರ್ಮಲ ಶರೀರ, ನಿರುತ್ಸಾಹ ಮನಸ್ಸು [illegible] ರ ಶಕ್ತಿಹೀನ ದೇಹ, ಅನಿಶ್ಚಿತ ಸ್ವಭಾವ, ನಿಸ್ತೇಜತನವನ್ನು ಹೇಡಿತನವನ್ನು, ಆಯುಷ್ಯಾಂತರ, ಅಕಾಲಮೃತ್ಯು, ವೃದ್ಧಾವಸ್ಥೆ, ವೀರ್ಯದ ನೀರು, ಆಲಸ್ಯ, ಕಣ್ಣು ಕೈಕಾಲುಗಳುರಿಯೋಣ, ಉರಿಮೂತ್ರ, ಇಂದ್ರಿಯದ ಉರಿ, ಪಿತ್ತವಿಕಾರ, ಅಗ್ನಿಮಾಂದ್ಯ ನಿದ್ರಾನಾಶ, ಮಲಾವರೋಧ, ಬೆನ್ನು ನೋವು ಸೊಂಟ, ಬೊಂಕಳಿ, ಎಲ್ಲ ತರದ ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ನಾಶವಾಗಿ, ರಸ, ರಕ್ತ, ಅಸ್ತಿ, ಮಜ್ಜಾ ಮೊದಲಾದ ಏಳು ಧಾತುಗಳು ವೃದ್ಧಿಯಾಗಿ ಇಂದ್ರಿಯ ಜನ್ಯ [illegible] ನಷ್ಟವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟು ಕಟ್ಟುವಲೆ, ಕೆಂಪು, [illegible] ಬಿಳಿಸೆರಗು ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಬೇಗ ಪ್ರಕೃತಿಯನ್ನು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧ ತೊಲೆ ಮತ್ತು ಸಂಜೆಗೆ ಅರ್ಧ ತೊಲೆ ತೆಗೆದುಕೊಂಡು ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯವರೆಗೆ ಕುಡಿಯಬೇಕು. ಹತ್ತುದಿನಗಳವರೆಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ. ಹಾಗು ಒಂದು ಬಾಟಲಿ ಪುಕ್ಕಟೆ. ಅಂಚೆ ಹಾಗು ಕಟ್ಟುಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ
(ನಿಪ್ಪಾಣಿ ಜಿ. ಬೆಳಗಾಂವಿ.)

ಧಾರವಾಡ ಮಹಾನವಮಿ ಉತ್ಸವ ಮಂಡಲ

ಪೂರ್ವಸಿದ್ಧತೆ

(ಪ್ರಕಟನ ಕಮಿಟಿಯಿಂದ ೩)

ತಾರೀಖು ೯ನೇ ಅಗಸ್ಟ ೧೯೨೯ ಶುಕ್ರವಾರ ದಿನ ಮಹಾನವಮಿ ಉತ್ಸವ ಮಂಡಲದ ಏಳನೇ ಕಾರ್ಯಕಾರೀ ಸಭೆಯಾದನಂತರ ಇದೂವರೆಗೆ ನಡೆದ ವೃತ್ತಾಂತವನ್ನು ಎಲ್ಲರ ತಿಳುವಳಿಕೆಗಾಗಿ ಈ ಕೆಳಗೆ ಸಂಕ್ಷಿಪ್ತವಾಗಿ ಕೊಟ್ಟಿದೆ

ಉತ್ಸವದ ಕಾರ್ಯಗಳು ಸುಯಂತ್ರಿತವಾಗಿ ನಾಗುವದಕ್ಕಾಗಿ ಖಾದಿ ಹಾಗೂ ಔದ್ಯೋಗಿಕ ಪ್ರದರ್ಶನ ಕವಿಸಮ್ಮೇಲನ, ಲಲಿತಕಲಾಪ್ರದರ್ಶನ, ಸಂಗೀತ ರಾತ್ರಿ, ಶರೀರವ್ಯಾಯಾಮ, ವ್ಯಾಖ್ಯಾತರನ್ನು ಕರೆಸುವ ಮಂತ್ರ, ವಂತಿಗೆಯನ್ನು ಕೂಡಿಸುವ ವರ್ತಕ, ಪ್ರಕಟನಾಶಖೆ ಮ್ಯಾಜಿಕ್ ಲ್ಯಾಂಟರ್ನದ್ವಾರಾ ವಿಶೇಷಾತಿಕ ವ್ಯಾಖ್ಯಾನ ವ್ಯವಸ್ಥೆ ಇವುಗಳಿಗೆ ಬೇರೆ ಬೇರೆ ಉಪಸ್ಥ ವಿಭಾಗಗಳನ್ನಾಗಿ ಏಂಗಡಿಸಿದೆ

೧ ಪ್ರಸ್ತು ಒಳವದಿಯಿಂದ ಹದಿನಾರು ಜನ ಪುರಪ್ರಮುಖರ ಅಂಕಿತದಿಂದ ಒಂದು ಸಾವಿರ [illegible] ಪತ್ರಿಕೆಗಳನ್ನು ಮುದ್ರಿಸಿ ಪ್ರಸಿದ್ಧಿಸಲಾಗಿದೆ

೨ ಕರ್ನಾಟಕದ ಎಲ್ಲ ಪ್ರಮುಖರಲ್ಲಿಯೂ ಈ ನಾಡಹಬ್ಬವು ಜರುಗಿಸುವದು ಅವಶ್ಯವಿದ್ದಕಾರಣ ಅಲ್ಲಲ್ಲಿಯ ಮಹಾಜನರು ಈ ಉತ್ಸವವನ್ನು ಆಚರಿಸಬೇಕೆಂದು ವಿನ್ನಹ ಮಾಡಿಕೊಂಡಿದೆ ಇದುವರೆಗೂ [illegible], ಗದಗ, [illegible]ರಿ, ಚಿಕನಗಲ್ಲ, ತಿಗ್ಗಿ, ಹಿರೇಕೆರೂರ, [illegible], ಬೆಳಗಾವಿ, ಬೈಲಹೊಂಗಲ, ನಾರಗುಂದ, ವಿಜಾಪೂರ, ಬಾಗಲಕೋಟಿ, ಗುಳೇದಗುಡ್ಡ, ಗಲಗಲಿ, ತಿರುಮಕೂಡಲು, ಸೊಲ್ಲಾಪೂರ, ಬಳ್ಳಾರಿ, ಹೊಸಪೇಟಿ, ಕೊಪ್ಪಳ, ಕಲಬುರ್ಗಿ, ರಾಯಚೂರು, ಹೈದರಾಬಾದ, ಮಂಗಳೂರು, ಮಂಗಳೂರ, ಮಡಿಕೇರಿ ಮೊದಲಾದ ಊರುಗಳಿಗೆ ಓಲೆಗಳನ್ನು ಬರೆದಿದೆ. ಇನ್ನೂ ಅನೇಕ ಕಡೆಗೆ ಬರೆಯುತ್ತಿದ್ದೇವೆ. ಮೈಸೂರ-ಪ್ರಾಂತದಲ್ಲಿ ಈ ಹಬ್ಬವು ಆಗೇ ಜರುಗುವದಾದ್ದರಿಂದ ಅತ್ತ ಕಡೆಗೆ ಬರೆದಿರುವದಿಲ್ಲ.

೩ ಖಾದಿ ಹಾಗೂ ಔದ್ಯೋಗಿಕ ಪ್ರದರ್ಶನದ ಕಾರ್ಯಕರ್ತರು ಅಲ್ಲಲ್ಲಿ ಸಿದ್ಧವಾಗುವ ವಸ್ತುಗಳನ್ನು ಕಳಿಸಿಕೊಡಲು ಹನ್ನೆರಡು ಬೇರೆ ಬೇರೆ ಕಡೆಯ ಪತ್ರಿಕೆಗಳಲ್ಲಿ ಪ್ರಸಿದ್ಧಿಸುವದಕ್ಕಾಗಿ ಪ್ರಕಟನೆಗಳನ್ನು ಕಳಿಸುವರು

೪ ಲಲಿತಕಲಾಪ್ರದರ್ಶನದವರು ಏರಪಟ್ಟು, ಬೆಂಗಳೂರು ದಿಲ್ಲಿ, ಪುಣೆ [illegible] ಮುಂತಾದ ಕಡೆಗಳಲ್ಲಿರುವ ಕನ್ನಡಿಗರಿಗೆ ಅವರು ಸಿದ್ಧ ಪಡಿಸುವ ಸುಂದರ ವಸ್ತುಗಳನ್ನು ಕಳಿಸಿಕೊಡಲು ವಿನ್ನಹ ಮಾಡಿಕೊಂಡಿದ್ದಾರೆ

೫ ವ್ಯಾಖ್ಯಾತರನ್ನು ಕರೆಸುವ ವಿಭಾಗದವರು ಕಾವು ಕರೆಸಬಹುದಾದ ಐವತ್ತು ಜನ ವ್ಯಾಖ್ಯಾತರ ಒಂದು ಪಟ್ಟಿಯನ್ನು ಸಿದ್ಧಪಡಿಸಿದ್ದು ಅದನ್ನು ಬಾಗಲಕೋಟಿ, ವಿಜಾಪೂರ, ಬೆಳಗಾವಿ ಹಾವೇರಿ, ಹುಬ್ಬಳ್ಳಿಯ ಮಹಾಜನರ ಕಡೆಗೆ ಕಳಿಸಿದ್ದು, ಅದಕ್ಕೆ ಅವರೂ ಒಪ್ಪಿದಲ್ಲಿ ಒಟ್ಟಾರೆ ಎಲ್ಲರೂ ಕೂಡಿ ಅವರನ್ನು ಕರೆಯಿಸಬೇಕೆಂದು ಗೊತ್ತುಮಾಡಿದ್ದಾರೆ

೬ ವಂತಿಗೆಯನ್ನು ಕೂಡಿಸುವ ಏಳು ಜನ ವರ್ತಕರದವರೂ ತಮ್ಮ ಕಾರ್ಯವನ್ನು ಪ್ರಾರಂಭ ಮಾಡಿರುವರು, ಈಗಾಗಲೇ ಶ್ರೀ ಕುಲಕರ್ಣಿ ಗುರುರಾಯರು ೩ ರೂಪಾಯಿಗಳನ್ನು ಶ್ರೀ ದಿಕ್ಷಿತ ರಂಗರಾಯರು ೩೪ ರೂ ಗಳನ್ನು ಕೂಡಿಸಿರುವರು.

೭ ಪ್ರಕಟನಾಶಖೆಯವರು "ನವರಾತ್ರಿ ಹಬ್ಬದ ಮಹತ್ವ ಹಾಗೂ ಅದರ ಅವಶ್ಯಕತೆ" ಯನ್ನು ಕುರಿತು ಒಂದು ಹಸ್ತಪತ್ರಿಕೆಯನ್ನು ತೆಗೆದಿದ್ದು ಅದನ್ನು ಪ್ರಸಿದ್ಧಿಸವದಕ್ಕಾಗಿ ಇಂದು ನಾಳೆ ಇಷ್ಟರಲ್ಲಿ ಎಲ್ಲ ವೃತ್ತಪತ್ರಿಕೆಗಳಿಗೆ ಕಳಿಸತಕ್ಕವರಿದ್ದಾರೆ

ಹೀಗೆ ಇದುವರೆಗೂ ಮೇಲೆ ವಿವರಿಸಿದಂತೆ ಉತ್ಸವಮಂಡಲದ ಕಾರ್ಯಕಲಾಪಗಳು ನಡೆದಿದ್ದು ಇನ್ನುಳಿದ ಮಂಡಳಿದವರೂ ಬೇರೆ ಕೆಲಸಗಾರರೂ ಬೇಗನೇ ತಮ್ಮ ತಮ್ಮ ಕೆಲಸಗಳನ್ನು ಪ್ರಾರಂಭಿಸುವರೆಂದು ನಮಗೆ ಪೂರ್ಣ ನಂಬಿಗೆಯಿದೆ

ತಾ ೧೭ ೮ ೨೯ ಕಾರ್ಯಾಲಯ

ತಮ್ಮ
ಗಂಜಿ ಕೃಷ್ಣರಾಯ
ಅಧ್ಯಕ್ಷ, ಮ. ನ. ಮ. ಉ.

೧೯೨೩ ರಲ್ಲಿ ಹೊರಬಿದ್ದ ೨ನೆಯ ವರ್ಷದ ಟ್ರೇಂಡರ ದುರ್ದೈವ.

೧೯೨೩ರ ಜುಲೈ ತಿಂಗಳಲ್ಲಿ ಸರಕಾರದವರು ವಿದ್ಯಾಖಾತೆಯ ಸಂಪೂರ್ಣ ಅಧಿಕಾರವನ್ನು ಜನರಿಗೆ ಒಪ್ಪಿಸಿಕೊಟ್ಟರೆಂದು ಪ್ರಸಿದ್ಧಿಸಿದ್ದರೂ ನಿಜವಾಗಿ ಸ್ಥಾನಿಕ ಅಧಿಕಾರಿಗಳು ಈ ಜರಿಯಾಕನವನ್ನು ೧೯೨೬ನೆಯ ಇಸವಿಯಿಂದಲೇ ಮಾಡುತ್ತಿರುವರು ಹೀಗಿದ್ದರೂ ೧೯೨೩ನೆಯ ಇಸ್ವಿಯಿಂದ ಇತ್ತಲಾಗಿನ ಶಿಕ್ಷಕರೆಲ್ಲರೂ, ಸಂಪೂರ್ಣ ಬೋರ್ಡಿನ ನೌಕರರೆಂದೇ ತಿಳಿದು ಅವರ ಎಲ್ಲ ವಿಷಯದ ವಿಚಾರಣೆಯೂ ಸ್ಥಾನಿಕ ಅಧಿಕಾರಿಗಳಿಂದಲೇ ಆಗುವದು ೧೯೨೩ನೇ ಇಸವಿಯಂತ ಮೊದಲು ಕಕ್ಷಯಲು ನೌಕರಿ ಇದ್ದು ೧೯೨೩ರಲ್ಲಿ ಟ್ರೇನಿಂಗ ಹೊಂದಲಿಕ್ಕೆ ಹೋದರೂ ಅವರೂ ಸಹ ಬೋರ್ಡಿನ ನೌಕರರೆಂದೇ ಹೇಳುವರು ಹೀಗಾಗಿ ಬೋರ್ಡಿನ ಶಿಕ್ಷಕರೆಂದೂ ಬಳಿಯ ಶಿಕ್ಷಕರೆಂದೂ ಶಿಕ್ಷಣಖಾತೆಯಲ್ಲಿ ಎರಡು ತರದ ಶಿಕ್ಷಕರಿರುವರು

ಇನ್ನು ಈ ಸಂದಿ ಕಾಲದಲ್ಲಿ ಸಿಕ್ಕ ಎಲ್ಲ ಶಿಕ್ಷಕರ ಹಾನಿಯೂ ಆಗಿರುವದು. ಅದರಲ್ಲಿಯೂ ೨ನೆಯ, ೩ನೆಯ ವರ್ಷಗಳ ಟ್ರೇಂಡರ ಹಾನಿಯಂತೂ ಬಹಳೇ ಆಗಿರುವದೆಂಬುದು ಕೆಳಗಿನ ಮಾತುಗಳಿಂದ ಸ್ಪಷ್ಟವಾಗಿ ತಿಳಿಯುವದು

೧೯೨೩ನೆಯ ಇಸವಿಯಲ್ಲಿ ೨ನೆಯ ವರ್ಷದ ವರ್ಗದಲ್ಲಿದ್ದವರು ಅದಕ್ಕೂ ಹಿಂದಿನ ವರ್ಷದಲ್ಲಿ ತೇರ್ಗಡೆ ಹೊಂದಿದವರಲ್ಲಿ ಮೇಲು ಸಂಖ್ಯೆಯವರು ಇರಕಕ್ಕಾಗಿ ಅವರು ಹಗಲುರಾತ್ರಿಗಳೆನ್ನದೆ ಓದಿ ಕಷ್ಟಪಟ್ಟುದರಿಂದ ಎಲ್ಲ ರೀತಿಯಿಂದಲೂ ತಮ್ಮ ಹಿತವಾದೀತೆಂದು ನಂಬಿದ್ದರು. ಆದರೆ ಇದಕ್ಕೆ ವಿರುದ್ಧವಾಗಿ ಪಗಾರದ ಸ್ಥಿತಿಯಾಗಿರುವದರಿಂದ ನಮ್ಮ ದುರ್ದೈವವನ್ನು ಹಳಿದುಕೊಳ್ಳಬೇಕಾಗಿದೆ ಹೇಗೆಂದರೆ- ೧೯೨೩ನೇ ಇಸವಿಯಲ್ಲಿ ಮೇಲಿನ ತರಗತಿಗೆ ಉಳಿಯದೆ ಕೆಳತರಗತಿಯ ಸರ್ಟಿಫಿಕೇಟಿನಿಂದಲೇ ಹೊರಬಿದ್ದಿದ್ದರೆ ಆರಂಭಕ್ಕೆ ೩೦ ರೂಪಾಯಿ ಪಗಾರ ದೊರೆಯುತ್ತಿತ್ತಲ್ಲದೆ ೧೯೨೬ನೆಯ ಮಾರ್ಚ ತಿಂಗಳಿಗೆ ೩೧ ರೂಪಾಯಿ ಪಗಾರಕ್ಕೆ ೧ನೆಯ ವರ್ಷದವರಂತೆ ೨ನೆಯ ವರ್ಷದವರಾದ ನಾವೂ ತಕ್ಕವರಾಗುತ್ತಿದ್ದೆವು. ಆದರೆ ೨ನೆಯ ವರ್ಷಕ್ಕೆ ಉಳಿದದ್ದರಿಂದಲೇ ೧೯೨೬ನೆಯ ಮಾರ್ಚಿಗೆ ೩೧ ರೂಪಾಯಿ ಪಗಾರಕ್ಕೆ ಸಂದೇಹವಾಗಿ ತಕ್ಕವರಾಗಿರುವೆವು ಈ ೩೧ ರೂಪಾಯಿ ಪಗಾರವೂ ನಿಶ್ಚಿತವಾದದ್ದಲ್ಲವಂತೆ ಅಂದರೆ ಸಂಶೋಧಿಸಲ್ಲಿ ಕಲಿತ ೧ನೆಯ ವರ್ಷದವರಿಗಿಂತ [illegible] ವರ್ಷದವರ ಬಡತಿಯಾಗುವದು ೧ ವರ್ಷ ಮುಂದೆ ಬಿತ್ತು.

ಮತ್ತು ೧೯೨೨ ರಲ್ಲಿ ಹೊರಬಿದ್ದ ೧ನೆಯ ವರ್ಷದವರು ೮ ಮಾ ರಿದ್ದು ಅಂದಲ್ಲಿ ೧೯೨೩ ರಲ್ಲಿ ಹೊರಬಿದ್ದ ೨ನೆಯ ವರ್ಷದವರು ೬ ಮಾ ರಿರುವರೆಂದು ತಿಳಿದರೆ ೧೯೨೬ನೇ ಮಾರ್ಚಿಗೆ ೮ ಮಾ ರಿದ್ದ ೧ನೆಯ ವರ್ಷದ ಶಿಕ್ಷಕರ ಪಗಾರವು ೩೧ ರೂಪಾಯಿಯಾದರೂ ೬ ಮಾ ರ ಪಗಾರವು ೩೦ ರೂಪಾಯಿ ಇರುವದರಿಂದ ೬ ಮಾ ರು ಅಸಿಸ್ಟಂಟರಾಗಬೇಕಾಗುವದು ಈ ಇಬ್ಬರೂ ಶಿಕ್ಷಕರು ೧ನೆಯ ವರ್ಷದಲ್ಲಿ ಕೂಡಿ ಕಲಿತವರು ಹೀಗಿದ್ದು ೨ನೆಯ ವರ್ಷದವರು ಅಸಿಸ್ಟಂಟ ಮಾ ರಾಗುವದು ಈಗಿನ ವ್ಯವಸ್ಥೆಯಿಂದ ಆಗುವದಿದ್ದು ನಗೆಗೇಡಲ್ಲವೇ? ಇಂಥ ಪ್ರಸಂಗವು ರೆವೆನ್ಯೂರ ಕಾಲೂಕಿನ ಒಂದು ಶಾಲೆಯಲ್ಲಿ ಸದಾಘಟಿಸಿತು ೨ನೆಯ ವರ್ಷದವರಿಗೂ ಇಲಗಿಯೆಂಬ ೧ನೆಯ ವರ್ಷದವರಿಗೂ ಆಗುವದಿತ್ತು ಆದರೆ ಸದೈವ ಇವರ ಸುದೈವದಿಂದ ಅಂಥ ಪ್ರಸಂಗ ಒರುವ ಮೊದಲೇ ಬೇರೆ ಕಡೆಗೆ ವರ್ಗವಾದದ್ದರಿಂದ ಈ ಪ್ರಸಂಗವು ತಪ್ಪಿತು

೧೯೨೨ ರಲ್ಲಿ ೧ನೆಯ ವರ್ಷದಿಂದ ಹೊರಬಿದ್ದವರು ೫ ಮಾ ರಿದ್ದರೆ ೧೯೨೬ನೆಯ ಮಾರ್ಚಿಗೆ ಅಲಾವನ್ಸ ಸಹಿತ ಅವರ ಪಗಾರವು ೩೭ ರೂಪಾಯಿ ಆಗುವದು. ಇವರ ಕೂಡ ೧ನೆಯ ವರ್ಷ ಕಲಿತು ೨ನೆಯ ವರ್ಷಕ್ಕೆ ಉಳಿದು ಅವರು ೬ ಮಾ, ರಿದ್ದರೂ ಕೂಡ ಅವರಿಗೆ ೧೯೨೬ನೆಯ ಮಾರ್ಚಿಗೆ ೩೨ ರೂಪಾಯಿ ಪಗಾರ ದೊರೆಯುವದು. ಇವರು ೨ನೆಯ ವರ್ಷದವರಾದರೂ ಆರಂಭದ ಹೆಚ್ಚಿನ ಪಗಾರವೂ ಇಲ್ಲ ಸ್ಕೇಲೂ ಇಲ್ಲ ಅಲಾವನ್ಸೂ ಇಲ್ಲ ಅಂತೂ ಇವರ ಪಾಲಿಗೆ ಯಾವದೂ ಇಲ್ಲ. ಇದರಿಂದ ಹೆಸರಿನ ಕ್ಷೀರಸಾಗರ ಬಟ್ಟರೆಂದು ಮಾತಿಗೆ ತಕ್ಕವರಾಗುವ ಪ್ರಸಂಗ ಬಂದದ್ದಕ್ಕೆ ದುಃಖವಾಗುವದಲ್ಲದೆ ಈ ವಿಷಯದಲ್ಲಿ ಅಧಿಕಾರಿಗಳು ೬ ವರ್ಷವಾಗುತ್ತ ಬಂದರೂ ಉದಾಸೀನಭಾವ ತಾಳಿದ್ದು ನೋಡಿದರೆ ಈ ಬಗ್ಗೆ ಮತ್ತಷ್ಟು ದುಃಖವಾಗುವದು. ಯಾಕೆಂದರೆ ಅಧಿಕಾರಿಗಳು ನಮ್ಮವರಿದ್ದೂ ನಮ್ಮವರ ಹಿತವನ್ನು ೬ ವರ್ಷಗಳಿಂದ ದುರ್ಲಕ್ಷ್ಯ ಕ್ಕೆ ತಂದದ್ದರಿಂದ ಬೋರ್ಡಿನವರು ಸದಯಾಂತಃಕರಣೆಯಾಗಿ ತೀರ ತಾಸು ಜನರ ವಿಷಯದಲ್ಲಿ ದೊಡ್ಡ ಮನಸ್ಸು ಮಾಡಿ ಒಡವರಾದ ಈ ಶಿಕ್ಷಕರ ಹಿತದ ಬಗ್ಗೆ ವಿಚಾರಿಸಿ ಹಿತ ಮಾಡಬೇಕೆಂದು ಬೇಡಿಕೊಳ್ಳುವ,

ಈ ಹಾನಿಯಲ್ಲಿ ಸಿಕ್ಕ ದುರ್ದೈವಿ ಶಿಕ್ಷಕ

ತ್ವರೆಮಾಡಿರಿ! ಅರ್ಧ ಕಿಮ್ಮತ್ತು ಬರೀರಿ!

ಈ ಪತ್ರದ ವರ್ಗಣಿದಾರರಿಗೆ ಮಾತ್ರ
ಮೂರು ತಿಂಗಳವರೆಗೆ ಅರ್ಧ ಕಿಮ್ಮತ್ತು.

ಲಿವ್ಹರ ರಿಸ್ಟವಾಚ್- (ಗಡಿಯಾರ)



ಮೊದಲನೇದು	ಎರಡನೇದು
೧ ನೇದು ೧೪—೦—೦	೧ ನೇದು ೭—೦—೦
೨ ನೇದು ೧೫—೦—೦	೨ ನೇದು ೭—೮—೦

೧ ಕೈಗೆ ಕಟ್ಟುವ ರಿಸ್ಟವಾಚ್. ರೇಡಿಯಂ ಮುಳ್ಳು ಇದ್ದು ಮಜಬೂತ ಪಟ್ಟಿ ಇರುವದು. ಕಿಮ್ಮತ್ತು ೧ ಕ್ಕೆ ೧೪-೦-೦

೨ ಡಿಟೋ ಮೇಲಿನಂತೆ ಇದ್ದು ರೇಡಿಯಂ (ಕತ್ತಲಲ್ಲಿ ಕಾಣುವಂತೆ) ಇರುವ ವಾಚ್ ೧ ಕ್ಕೆ ರೂ ೧೫ ೦-೦

ಇವುಗಳಿಗೆ ಗ್ಯಾರಂಟಿ ೫ ವರ್ಷ. ಕಿಮ್ಮತ್ತಿನ ಶಿವಾಯ ಟಪಾಲ ಬೇರೆ. ಇವತ್ತೇ ತರಿಸಿಕೊಳ್ಳಿರಿ. ಖರ್ಚಾದನಂತರ ತಿಗಲಿಕ್ಕಿಲ್ಲಾ.

ವಿಳಾಸ:- ಸುಪೀರಿಯರ ವಾಚ ಕಂಪನಿ.
ಪೋಸ್ಟ ಬನಾನಸ (ಉತ್ತರ ಕಾನಡಾ)

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಶಖೆ- ಮಂಗಳವಾರಪೇಟೆ, ಆಶವಲಿ ವಕೀಲ ಪಾಂಡುರಂಗರಾಯರ [illegible]

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ತಾಸು ಮತ್ತು [illegible] ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ [illegible] ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ [illegible] ಗಳ ಮಂಜಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ [illegible]ಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂ[illegible]

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆ[illegible] ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂ[illegible]

ಕೃಷ್ಣರಾವ ವೆಂಕಟರಾವ ಧಂ[illegible]
ಮ್ಯಾನೇಜಿಂಗ ಏಜಂಟ.

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೨ ರವರೆಗೆ ಶನಿವಾರ ಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ನಡೆಯಿಸಲ್ಪಡುವವು

ಮುದತಿ ಠೇವುಗಳು — ಒಡ್ಡೀದರದಿಂದ ತೆಗದು ಕೊಳ್ಳಲ್ಪಡುವವು- ಒಡ್ಡಿದರ ೧೦. ೩½ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಒಡ್ಡಿದರ ೩½ ರೂ.

ಸೇವ್ಹಿಂಗ್ಸ ಬ್ಯಾಂಕ — ಒಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು- ಒಡ್ಡಿದರ ೩ ರೂ. ಸರಕಾರಿ ಹಾಗು ಇತರ ಕಾಗದಗಳು

ಬಂಗಾರದ ದಾಗೀನಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಒಡ್ಡಿದರ ೬ ರೂ. ಸುಲಭ ಕಂತಿಯ ಸಲುವಾಗಿ ತೆಗದುಕೊಳ್ಳಲ್ಪಡುವವು ಕೊಡಕೊಳ್ಳುವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಒಡ್ಡಿ ಹಾಗೂ ನಫೆ ವಸೂಲ ಮಾಡಿ ಅವರವರ ಖಾತೆಗಳಿಗೆ ಜಮ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು ಸಾಲ ಹಾಗೂ ರೊಖಡಾ ಉದಾರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಹಳ್ಳಿ ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಶಾಖೆಗಳಿಗೆ ಹಚ್ಚುವ ಸವಲತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ ಮೊಕತ್ಯಾರ ಪತ್ರಗಳೂ ಸದರಿ ಬ್ಯಾಂಕದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ
ತಾ|| ೧೭-೨-೨೮

ಡಿ. ಜೋಶಿ,
ಏಜಂಟರು

ಸುಸಮಯ-

ಎ ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

WANTED

Wanted Candidates for Telegraph and Station Master's Classes Full particulars and Railway Fare Certificate on 2 annas stamp. Apply to = Imperial Telegraph College Nal Sarak, Delhi.

ಚಂದಾದಾರರಿಗೆ ಸೂಚನೆ

ಅಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿಗೆ ೨ನೇ ಯಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು [illegible] ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಗಳನ್ನು ಒರೆದು, ಮಾತೃಭಾಷಾಸೇವೆಯನ್ನು ಮಾಡಿದ್ದಾರೆ. ಇಂಥ ಅದರ್ಶಭೂತವಾದಂಥವರ ಅಕಾಲಿಕ ಮರಣದಿಂದ ಕನ್ನಡಿಗರಿಗೆ ಕೊರತೆಯು ಉಂಟಾಗಿರುವದರಲ್ಲಿ ಸಂದೇಹವಿಲ್ಲ.

೧೭-೮-೨೮ ಆರ್ ಎಸ್ ದೀಕ್ಷಿತ,

ಸ್ಕೂಲ ಮಾಸ್ತರ, ಹಿರೇಕೇರೂರ.

ಸಾಂಗಲಿಯಲ್ಲಿ ಲೋಕಮಾನ್ಯರ ಸ್ಮಾರಕವಾಗಿ ಟಿಳಕರ ಮೂರ್ತಿಯನ್ನು ತೆರೆಯುವ ಸಮಾರಂಭವು ಶ್ರೀ ಮಾಧವರಾವ ಅಣೆಯವರಿಂದ ನೆರವೇರಿಸಲ್ಪಡುವದು.

ಬಿರೂರ ಶಿವಮೊಗ್ಗೆಯ ನಡುವೆ ಆದ ರೇಲ್ವೆಯ ಮೇಲದರೋಡೆಯ ಅರೋಪದಿಂದ ಗಾರ್ಡ ನಾಗಿದ್ದ ಒಬ್ಬನನ್ನು ಹಿಡಿದರು. ಈತನ ಹತ್ತಿರ ಎಂಟು ಸಾವಿರ ನೋಟಗಳು ದೊರೆತವು.

ಜಾಹೀರ ನೋಟೀಸು.

ರಾ| ರಾ|| ಕಲ್ಯಾಣಜಿ ವ್ಯವಹಾರಿ ಈ ಅಂಗಡಿ ಮಹಿಮಾಬದಾಂ ಮಾಧವರಾಜ ಕಲ್ಯಾಣಜಿ ಸಾ|| ಧಾರವಾಡ ಇವರಿಗೆ-

ನಾನು ತ್ರಿಭುವನ ಅನೂಪಚಂದ ಶೇಠಜಿ ಸಾ| ಧಾರವಾಡ ಈ ಮೂಲಕ ನೋಟೀಸಿಗೆ ಕೊಟ್ಟಿರುತ್ತೇನೆ-

ನೀನು ತಾರೀಖು ೧೭-೮-೧೯೨೮ ಇಸ್ವಿ ದಿವಸ ಕೊಟ್ಟ ನೋಟೀಸು ಮುಟ್ಟಿತು. ಈ ನೋಟೀಸಿನಲ್ಲಿಯ ಮಜಕೂರನ್ನು ಒದ್ದಾಗಿ ಬರೆದಿರುವಿ. ನಿನ್ನ ಕಡೆಯಿಂದಾನೇ ನನಗೆ ಐದು ನೂರು ರೂಪಾಯಿ ಬರತಕ್ಕದ್ದಿದ್ದು ಅವನ್ನು ಕೊಡುವದಕ್ಕೆ ನಾನು ನಿನಗೆ ತಗಾದಿಮಾಡಲು ನೀನು ನನ್ನ ಲೆಕ್ಕಾ ನೋಡಿ ಮಾತ್ರ ಕೊಡುತ್ತೇನೆಂದು ರೂಪಾಯಿ ಕೊಡುತ್ತೇನೆಂತಾ ಹೇಳಿ ನನಗೆ ಉಪದ್ರವ ಮಾಡಬೇಕೆಂತಾ ಸುಳ್ಳು ನೋಟೀಸು ಕೊಟ್ಟಿರುತ್ತೀ. ಇದರಿಂದ ನೀನು ನಿನ್ನ ಲೆಕ್ಕವನ್ನು ಮುಟ್ಟಿ ಒರೆದಿರುತ್ತೀಯಂತಾ ನನಗೆ ಸಂಶಯ ಒಂದಿರುತ್ತದೆ. ನೀನು ನಿನ್ನ ಲೆಕ್ಕವನ್ನು ಕೋರ್ಟಿನಲ್ಲಿ ಹಾಜರ ಮಾಡಿದಲ್ಲಿ ನೀನು ದಾವೆದಾರನಾಗಿ ಬೀಳ ಬೇಕಾಗುವದು. ದಾವೆ ಮಾಡಿದ್ದಲ್ಲಿ ನಿನ್ನ ಕಡೆಯಿಂದಾ ನಾನು ಸುಳ್ಳು ಸಾಕ್ಷೀ ಹೇಳಿಸಿಕೊಳ್ಳುವದಿಲ್ಲ. ಅದರಿಂದ ನನಗೆ ಉಪದ್ರವ ಮಾಡಬೇಕೆಂಬ ಉದ್ದೇಶದಿಂದ ನೀನು ಸುಳ್ಳು ಲೆಕ್ಕಾ ಒರೆದು ನನ್ನ ಕಡೆಯಿಂದಾನೇ ಹಣ ಬರತಕ್ಕದ್ದೆಂತಾ ಸುಳ್ಳು ನೋಟೀಸು ಕೊಟ್ಟಂತೆ ನನಗೆ ಸಂಶಯ ಒಂದಿರುತ್ತದೆ. ನಾನು ನಿನಗೆ ಏನೂ ಕೊಡತಕ್ಕದ್ದಿಲ್ಲ. ನಿನ್ನ ಕಡೆಯಿಂದಾನೇ ನನಗೆ ೫೦೦ ರೂಪಾಯಿ ಬರತಕ್ಕದ್ದಿದೆ. ಈ ರೂಪಾಯಿಗಳನ್ನು ನೀನು ಈ ನೋಟೀಸು ಮುಟ್ಟಿದ ಕೂಡಲೆ ಕೊಟ್ಟು ಕಳಿಸಬೇಕು. ಹೀಗಿದ್ದು ನೀನು ನನ್ನ ಮೇಲೆ ದಾವೆ ಮಾಡಿದಲ್ಲಿ ಅದು ಎಲ್ಲಾ ಖರ್ಚಕ್ಕೆ ನೀನೇ ಜವಾಬದಾರನಾಗಿ ನನ್ನ ರೂಪಾಯಿಗಳನ್ನು ನೀನು ಈ ನೋಟೀಸು ಮುಟ್ಟಿದ ಮರೂದಿವಸದಲ್ಲಿ ಕೊಡದ್ದರೆ- ನಿನ್ನ ಮೇಲೆ ರೀತಿ ಪ್ರಕಾರ ಇಲಾಜು ಮಾಡುವದರಲ್ಲಿ ಒದಗುವ ಈ ಬಂಚಿಕೆ ಖರ್ಚ ನಿನ್ನ ತಲೆಯ ಮೇಲೆ ಬೀಳುವದು. ತಾ| ೨೦-೮-೧೯೨೮

ಸಹಿ ಮಾರವಾಡಿ, ತ್ರಿಭುವನ ಅನೂಪಚಂದ ಶೇಠಜಿ ಸಾ| ಧಾರವಾಡ

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯಾಷಧವು ಈ ಔಷಧದಿಂದ ಬೆನೆಯು ಮೂರೆ ದಿನಗಳಲ್ಲಿ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಸತ್ವ. ... ಬೆಲೆ ಎರಡು ರೂಪಾಯಿ, ... ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟು ರೂಪದಿಂದಾಗಲಿ ಮುಂಗಡ ಕಳಿಸತಕ್ಕದ್ದು.

ವಿಳಾಸ — ಶ್ರೀ. ಜಾನಕೀಬಾಯಿ ದೀಕ್ಷಿತ

C/o ಮುದ್ರಣಾಲಯ ಧಾರವಾಡ

...

ಪ್ರತಿಯೊಂದು ತಾಲೂಕಿನಲ್ಲಿ

ಸಬ್ ಏಜಂಟರು ಬೇಕು.

ನೀಲಗಿರಿ ಹಾಗು ಅನಂತ ಕಂಪನಿಯವರಿಂದ ತಯಾರಾದ ಚಹಾವನ್ನು ಧಾರವಾಡ ಜಿಲ್ಹೆಯ ಎಲ್ಲ ಭಾಗಗಳಲ್ಲಿ ಪ್ರಚಾರ ಪಡಿಸುವದಕ್ಕೆ ಸಬ್ ಏಜಂಟರು ಬೇಕು. ಉಮೇದವಾರರು ಕೆಳಗಿನ ವಿಳಾಸಕ್ಕೆ ಪತ್ರದ್ವಾರ ಮಾಹಿತಿಯನ್ನು ಇದೇ ತಿಂಗಳ ೩೦ ನೇ ತಾರೀಖಿನ ಒಳಗಾಗಿ ತರಿಸಿಕೊಳ್ಳಬಹುದು. ಮಾಹಿತಿಯ ಬಗ್ಗೆ ೨ ಆಣೆ ಸ್ಟಾಂಪು ಕಳಿಸಬೇಕು. ಪೂರ್ಣಾನುಭವವಿದ್ದವರಿಗೆ ಹೆಚ್ಚಿನ ಸವಲತ್ತು.

ಬಿ. ಏಮ ನಾಯಿಕರ,

ಧಾರವಾಡ ಜಿಲ್ಹೆಗಾಗಿ ಸೋಲ ಏಜಂಟರು

ರಾಣೇಬೆನ್ನೂರ.

ಜಾಹೀರಾತು.

ಯಾವತ್ತು ಜನರಿಗ ತಿಳಿಸುವದೇನಂದರೆ ಕೆಳಗೆ ಒರೆದ ಕಂಪನಿಯವರು ೫೦ ರೂಪಾಯಿದಿಂದ ೫೦೦೦ ರೂಪಾಯಿ ವರಿಗೆ ಸಾಲಾ ಕೊಡತಕ್ಕ ಸೋಯೀ ಮಾಡಿರತಾರೆ. ವ್ಯಾಜದರ ಸಾಲದರ ಶೇಕಡಾ ೧ ರೂಪಾಯಿದಂತೆ ಠರಾವ ಮಾಡಿರತಾರೆ ಅದರೆ ಬೇಕಾದವರು ಕೆಳಗೆ ಒರೆದ ಪತ್ತೇದವರ ಕಡೆ ಸಮಕ್ಷಮ ಭೆಟ್ಟಿ ಆಗಬಹುದು ಅಥವಾ ಪತ್ರವ್ಯವಹಾರ ಮಾಡಬಹುದು. ಏಜಂಟ ಪಗಾರ ಮತ್ತು ಕಮಿಶನದ ಮೇಲೆ ಬೇಕಾಗಿರತಾರೆ

ಆರ್ಗನಾಯಿಜಿಂಗ ಸೆಕ್ರೆಟರಿ,

ಆಫೀಸ ಹುಬ್ಬಳ್ಳಿ.

ಅಥವಾ

ಕೆ. ಜಿ. ಜೋಗಳೇಕರ,

ಮಾಳಮಡ್ಡಿ, ಧಾರವಾಡ.

ಸೂಚನೆ

———(೦)———

ವಿ ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಆನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ — ವಿಜಯ — ಬೆಲೆ [illegible]

[illegible] — [illegible]

ವರ್ಷ (೦) ಧಾರವಾಡ ಬುಧವಾರ ತಾರೀಖು ೨೧ ನೇ ಅಗಸ್ಟ ೧೯[illegible] (ಸಂಚಿಕೆ ೧[illegible])

[illegible] ಹುಬ್ಬಳ್ಳಿ

ಸ್ಥಳಾಂತರದ ವೇಳೆ- [illegible] ೮-೩೦ ರಿಂದ ೧೦ ವರೆಗೆ [illegible] ಗ ವರೆಗೆ.

ಬ್ಯಾಂಕಿನಲ್ಲಿ ನಡೆಯುವ ವ್ಯವಹಾರಗಳು.

[illegible]— [illegible]

[illegible]— [illegible] [illegible]. [illegible]

[illegible]— [illegible]

[illegible]

[illegible] [illegible] [illegible].

[illegible] [illegible]. [illegible]

ಹುಬ್ಬಳ್ಳಿ
ತಾ|| ೧೭-೨-೨೮

[illegible],
ಮ್ಯಾನೇಜರು

ದಿ [illegible] [illegible], ಧಾರವಾಡ.

[illegible] [illegible] [illegible].

೧ ಈ ಬ್ಯಾಂಕಿನಲ್ಲಿ [illegible] [illegible]. [illegible]

೨ [illegible] [illegible].

೩ [illegible] [illegible].

೪ ಈ ಬ್ಯಾಂಕಿನ [illegible].

೫ ಬ್ಯಾಂಕಿನ [illegible]. ವಿಶೇಷ [illegible]

ಕೃಷ್ಣರಾವ ವೆಂಕಟರಾವ [illegible].
ಮ್ಯಾನೇಜಿಂಗ [illegible],

[illegible]

[illegible] [illegible] [illegible]

ಕ್ರೆಡಿಟ [illegible].

[illegible] ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಬ್ಯಾಂಕಿನ [illegible].

ವಿಶೇಷ [illegible].

[illegible]
ಮ್ಯಾನೇಜಿಂಗ [illegible].

ದಿ ಧಾರವಾಡ ಬ್ಯಾಂಕ [illegible]

[illegible]

ಈ ಬ್ಯಾಂಕಿನಲ್ಲಿ [illegible] [illegible]. [illegible] ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ [illegible] [illegible].

ಎ. [illegible].
ಮ್ಯಾನೇಜಿಂಗ [illegible].

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ [illegible] ಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೩೧-೮-೩೮ ನೇ ಇಸ್ವಿ.

ಶ್ರೀ

ಈ ವಿಜಯೋ ತ್ರಿಕಪ್ರಸು
ಶ್ರೀ ವಧುನಾಥಯು ವನಿತೆ ಸುಗಂಧ ಕಲಿಕೆಗಳಂ ನಿ
ದೀ "ವಿಜಯೋ" ಕ್ರಿಕೇಸರೀ ।
ನಾ ವಿಹಂಗಕ ವಿನಾಯಕವಿಭ್ರಮ ಸಾಜಂ ॥೧॥

ಕರ್ನಾಟಕದ ರಾಜಧಾನಿ- ಯಾವ ಊರು?

ಮುಂಬಯಿ ಕೌನ್ಸಿಲ ಸಭೆಯಲ್ಲಿ ಕರ್ನಾಟಕ ಏಕೀಕರಣದ ಪ್ರಶ್ನೆ ಹೊರಟಾಗ- ದಕ್ಷಿಣ ಭಾಗದ ಕವಿ ಕಾರಸಾಹೇಬರು ತಮ್ಮ ಭಾಷಣದಲ್ಲಿ ಕರ್ನಾಟಕವು ಒಂದು ಸಂಸ್ಥಾನವಾದರೆ- ಬಾಗಲಕೋಟೆಯನ್ನು ಮುಖ್ಯ ಪಟ್ಟಣ ಮಾಡಬೇಕಾದೀತು. ಆಗ ಲಕ್ಷ ಲಕ್ಷ ರೂಪಾಯಿ ವೆಚ್ಚ ಬರುವದೆಂದು, ಅಂದಿದ್ದರೆಂದು ಪ್ರಸಿದ್ಧವಾಗಿದೆ. ಯಾವ ಊರು ರಾಜಧಾನಿಯಾಗಬೇಕೆಂಬುದನ್ನು ಗೊತ್ತು ಪಡಿಸುವದು ಕನ್ನಡಿಗರ ಕೆಲಸವು. ಮೊದಲಿನಂತೆ ಅರಸು ನಿಂತಲ್ಲಿ ಪಟ್ಟಣವೆಂಬವಾಗಿ ಈಗ ಒಬ್ಬ ವ್ಯಕ್ತಿಯ ವಿಚಾರ ನಡೆಯಲಾರದು. ಬಾಗಲಕೋಟೆಯಾಗಲಿ, ಅಥವಾ ತೀರ ದಕ್ಷಿಣದ ಕುಂದಾಪೂರವಾಗಲಿ, ರಾಜಧಾನಿಯಾಗುವದಕ್ಕೆ ಮೂಲ ವಿಷಯವಾದ ಏಕೀಕರಣದ ಪ್ರಶ್ನೆಗೆ ಸಾಹೇಬರು ಸಮ್ಮತಿಯನ್ನು ಕೊಡಲಿಲ್ಲ. ಮದಗೂಳೆ ವಿಚಾರವಿಲ್ಲದೆ, ಮದುವೆಯ ಆಹೇರ ಹೂಡುವಂಥ ವಿಚಾರವು!!! ಬಾಗಲಕೋಟೆಯು ರಾಜಧಾನಿಯಾದರೆ- ಲಕ್ಷ ಲಕ್ಷ ರೂಪಾಯಿ ವೆಚ್ಚ ಬರುವದೆಂದು ಸಾಹೇಬರು ಅಂದು, ಇಷ್ಟು ಖರ್ಚು ಕರ್ನಾಟಕಕ್ಕೆ ನೀಗಲಾರದೆಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ. ಬಾಗಲಕೋಟೆಯು ಬದಲಾಗಿ ದಿಲ್ಲಿಯನ್ನು ಧ್ಯಾನಕ್ಕೆ ತಂದರೆ- ಲಕ್ಷ ಲಕ್ಷವೆಂದರೆ ದೊಡ್ಡ ಭಾರವಲ್ಲೆಂದು ಸಾಹೇಬರಿಗೆ ಅನಿಸುತ್ತಿತ್ತು. ಕಲಕತ್ತೆಯನ್ನು ತೆಗೆದು ದಿಲ್ಲಿಗೆ ರಾಜಧಾನಿ ಸ್ಥಾಪಿಸಿ ಈ ಸರಕಾರ ಕೋಟ್ಯನುಕೋಟಿ ರೂಪಾಯಿ ವೆಚ್ಚ ಮಾಡಿದೆ. ಇನ್ನು ಆ ಸಂಬಂಧವಾಗಿ ವೆಚ್ಚವು ನಡೆದೇ ಇದೆ. ಬಾಗಲಕೋಟೆಯನ್ನು ಮುಖ್ಯ ಪಟ್ಟಣ ಮಾಡಿದರೆ ಸಾಕ್ಷಾತ್ ಮಡಿವೆ ಜಟ್ಟಿ ಜನಿಸಿದಂದಿನ ನ್ಯಾ ರಂಭವಾದ ಮಂತ್ರ ಅಲ್ಲಿ ಕಚೇರಿಗಳನ್ನು ಕಟ್ಟಬೇಕಾಗುತ್ತದೆ. ಆದರೆ ಅನವಶ್ಯಕ ವೆಚ್ಚಗಳನ್ನುಳಿಸುವ ಅನೇಕ ಪಟ್ಟಣಗಳಿರುತ್ತವೆ. ರಾ. ಬ. ಕಂಬಳಿಯವರ ಹುಬ್ಬಳ್ಳಿಯು ಜಿಲ್ಲೆಯ ಸ್ಥಳವಾಗಬೇಕೆಂದು ಆತುರವು. ಇವರು ಧಾರವಾಡ ಹುಬ್ಬಳ್ಳಿಯು ನಡುವಿನ ವಿಸ್ತಾರವಾದ ಪ್ರದೇಶವನ್ನು ವೀಕ್ಷಿಸಿ, ಹೊಸ ರೀತಿ ಮುಂತಾದ ವಿಶಿಷ್ಟ ವಿಚಾರಗಳಿಂದ ರಾಜಧಾನಿಯ ಸ್ಥಳವಾಗಬೇಕೆಂದು ಈ ಎರಡೂ ಊರುಗಳು ಒಂದಾಗಬೇಕೆಂದು ಪ್ರಯತ್ನಿಸುವರು. ಇದೇ ಪ್ರಕಾರ ಬೇರೆ ಪಟ್ಟಣದವರು ತಂತಮ್ಮ ಹಕ್ಕನ್ನು ಹೇಳಬಹುದು. ಏಕೀಕರಣದ ಚಳವಳಿಯು ಎತ್ತರಿಸಿದ, ಧಾರವಾಡವು ಕರ್ನಾಟಕದ ಭಾವೀ ರಾಜಧಾನಿ ಎಂದು ವರ್ತಮಾನಪತ್ರಗಳಲ್ಲಿ ಲೇಖಕರು ಬಂದರೆ ಜನರು ವ್ಯಾಪಾರಗಳಲ್ಲಿ ಹೇಳಿದ್ದಾರೆ. ಕಾರದ ಸಾಹೇಬರ ಅಭಿಪ್ರಾಯದಂತೆ ಬಾಗಲಕೋಟೆಯು ರಾಜಧಾನಿಯಾಗುವದು ಶಕ್ಯವಾಗಲಾರದು. ಆ ಊರಿನವರು ಸಾಹೇಬರ ಮಾತಿನ ನೆಪ್ಪಿಗೆ ಬಿದ್ದು, ತಮ್ಮೂರು ರಾಜಧಾನಿಯಾಗಬೇಕೆಂದು ಕಂದರ್ಪ ಕೀಷಣ ಮಾಡಿಕೊಳ್ಳಬಾರದು.

—

ಬೆಳಗಾವಿನ ಡಿ ಮ್ಯಾಜಿಸ್ಟ್ರೇಟರ ಮೇಲೆ ಮಾನಹಾನಿಯ ಫಿರ್ಯಾದಿಯು.

—)(|)(೦)(|)(—

ಮಿ. ತಿಂಜಪಿನವರು ಬೆಳಗಾವಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿದ್ದಾರೆ. ಇಂದಿನ ಕಾರಂಭದ ಗಂಭೀರ ಸ್ಥಿತಿಯಲ್ಲಿ, ಹಿರೇ ಬಾಗೇವಾಡಿ ಪೋಲೀಸ ಗೋಳಿಬಾರಿನ ಚೌಕಶಿಗೆ ದಂಡಧಾರಿಯಾಗಿ ಮುಂದಾಗಿ ಹೋಗಿ, ಶ್ರೀ ವಾಸುದೇವ ವೆಂಕಟೇಶ ಮತ್ತು ಬಿ ಆರ್ ಶ್ರೀನಿವಾಸರಾವ ಇವರನ್ನು ಬೆಕ್ಕಿನಂತೆ ಹೊಡೆದ, ಅಧಿಕಾರದ ದುರುಪಯೋಗ ಮಾಡಿ, ಸದ್ಗೃಹಸ್ಥರಾದ ಇವರ ಅಪಮಾನ ಮಾಡಿದರು. ಕಾರಣ ಇವರ ಕ್ಷಮೆ ಬೇಡಿಕೊಳ್ಳಬೇಕು. ಇಲ್ಲವಾದರೆ- ಇವರ ಪರವಾಗಿ ನಿಮ್ಮ ಮೇಲೆ ಮಾನಹಾನಿಯ ಫಿರ್ಯಾದಿ ಮಾಡಲಾದೀತೆಂದು ಇವರ ವಕೀಲರು ನೋಟೀಸು ಕೊಟ್ಟಿದ್ದಾರೆ.

ಅಮಲಾಪುರದಲ್ಲಿ ಕಾಂಗ್ರೆಸ ಸ್ವಾಗತ ಮಂಡಳದ ಜನರು ಕಮಿಟಿ ಕೂಡಿ ಮಹಾತ್ಮಾ ಗಾಂಧಿಯವರು ಕಾಂಗ್ರೆಸದ ಅಧ್ಯಕ್ಷರಾಗಬೇಕು, ಡಾ. ರಾಜೇಂದ್ರಬಾಬುರವರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಬೇಕು ಅಂದಿದ್ದಾರೆ. ಅಧ್ಯಕ್ಷರ ಕಾರ್ಯಗಳಲ್ಲಿ ಪ್ರತಿಯೊಬ್ಬರು ಸಹಕಾರ ಮಾಡ ಬೇಕೆಂದು ವಿ ಕೇಳಿಕೊಂಡರು. ಹಾ! ಇವರಿಗೆ ಭಾಷೆ ಹೇಳಿತು ಸಿಕ್ಕಿತು.

ಪಂಚಾಯತ ಪ್ರಭೆಯ ಮೇಲೆ ಮಾನಹಾನಿಯ ಫಿರ್ಯಾದಿಯು.

ಗದಗಿನವರಾದ ಶ್ರೀ ಬಳ್ಳಾರಿ ಬಸಪ್ಪನವರು ಪಂಚಾಯತ ಪ್ರಭೆಯಲ್ಲಿ ತಮಗೆ ಅಗೌರವವೂ ಅಪಮಾನಕರವೂ ಆದಂಥ ಲೇಖ ಬರೆದರೆಂಬ ಆರೋಪ ಹೊರಿಸಿ, ಗದಗಿನ ಫಸ್ಟ ಕ್ಲಾಸ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಸಂಪಾದಕರಾದ ಶ್ರೀ ಗುರುಶಾಂತ ಶಾಸ್ತ್ರಿ ಮತ್ತು ಕಾಶೀನಾಥ ಶಾಸ್ತ್ರಿ ಇವರ ಮೇಲೆ ಮಾನಹಾನಿಯ ಫಿರ್ಯಾದಿ ಮಾಡಿದ್ದಾರೆ. ಕಾಶೀನಾಥಶಾಸ್ತ್ರಿಯವರು ಗದಗಿನ ಕೋರ್ಟಿನಲ್ಲಿ ಹಾಜರಾಗಿದ್ದಾರೆ. ವಿಚಾರಣೆಯು ನಡೆದಿದೆ.

—

ನಾಗಾಯಿ ರಾಜಧಾನಿಯ ಶೋಧ

—(೧)—

ನಿಜಾಮರಾಜ್ಯದಲ್ಲಿ ಚಿತಾಪೂರದ ಹತ್ತರ ನಾಗಾಯಿ ಎಂಬ ಹಳೆಯ ಊರು ಇರುತ್ತದೆ. ಅದು ಚಾಲುಕ್ಯರ ಕಾಲದಲ್ಲಿ ರಾಜಧಾನಿ ಪಟ್ಟಣವಾಗಿತ್ತೆಂದು ಇತಿಹಾಸ ಸಂಶೋಧಕರಾದ ಶ್ರೀ. ಕೃಷ್ಣಮಾಚಾರ್ಯರು ಕಂಡುಹಿಡಿದಿದ್ದಾರೆ. ಇಲ್ಲಿ ದೊಡ್ಡ ವಿದ್ಯಾಪೀಠವಿತ್ತು. ಸಾವಿರ ವಿದ್ಯಾರ್ಥಿಗಳು ಓದುತ್ತಿದ್ದರು. ಇವರ ಊಟ ಉಡಿಗೆ ಅಕ್ಷರಶಃ ವ್ಯವಸ್ಥೆಯು ರಾಜರಿಂದಲೇ ನಡೆಯುತ್ತಿತ್ತೆಂದು ಅಲ್ಲಿ ದೊರೆತ ಲೇಖಗಳಿಂದ ಕಂಡುಬಂದಿದೆ.

—

ಇನಾಮದಾರರ ಗ್ರಾಮದಲ್ಲಿ ದರೋಡೆ

—೦—

ಅಥಣೀ ತಾಲೂಕಿನಲ್ಲಿ ಶಿವನೂರ ಎಂಬುದು ಇನಾಮದಾರರ ಗ್ರಾಮವುಂಟು. ಇನಾಮದಾರರು ಊರೊಳಗಿನ ಸಂಧಿಯನ್ನು ಸಾಧಿಸಿ ಜನರು ದರೋಡೆಯ ಕೊಂಡರು. ದರೋಡೆಗೆ ಮೂರು ದಿವಸ ಮುಂಚಿತವಾಗಿ ದಿನ ಕಲ್ಲು ಬೀಳಲಾರಂಭಿಸಿದರು. ಕಾರಭಾರಿಯು ಹೆದರಿಕೊಂಡ, ಕಾಳಿಗೆ ಬಟ್ಟೆ ಹೋಗಬೇಕೆಂದನು. ಆದರೆ ಅವನಿಗೆ ದಾರಿಯು ಇರಲಿಲ್ಲ. ಕಡೆಯ ದಿವಸ ಹೋಗಿ ಕೃಷ್ಣನ ಮರೆಹೊಕ್ಕನು. ಇದನ್ನರಿತು ದರೋಡೆಗಾರರು ಇನಾಮದಾರರ ಮನೆ ಹೊಕ್ಕು, ಸ್ವಾಮಿ ಸಿಕ್ಕಂಥ ಪ್ರತಿಮೆಯು ಬೆಳ್ಳಿಯು ಒಡವೆ ತೆಗೆದುಕೊಂಡು ಸಾವಿರಾರು ರೂಪಾಯಿ ಸುಲಿಗೆ ಮಾಡಿದ್ದಾರೆ.

ಆ ಪಠಾಣನ ಹತ್ತಿರ ರೈಲಿನ ನಡುವೆ ಒಂದು. ಮೋಟ ರೂಲು ಬಿತ್ತು, ಪವನು ಸಿಕ್ಕಿತು.

ಹಬಿಬುಲ್ಲಾನು ಕಾಫೀರನಾದನು.

ಹಬಿಬುಲ್ಲಾನ, ಅಮಾನುಲ್ಲಾನ ಮಾತನ್ನು ಮತ್ತು ಆತನ ಇಬ್ಬರು ಮಕ್ಕಳನ್ನು ಗುಂಡಿನ ಬಾಯಿಗೆ ಕೊಟ್ಟು ಕೊಲ್ಲಿಸಿದನು. ಈ ರಾಕ್ಷಸೀ ಕೃತ್ಯ ಕೇಳಿ, ಮೋಹಮಂಡಲದ ಮುಸಲಮಾನರು ಸಂತಾಪಗೊಂಡಿದ್ದಾರೆ. ಹಬಿಬುಲ್ಲಾನ, ಕಾಫೀರನಾಗಿದ್ದಾನೆಂದು ಫತ್ವಾ ಹೊರಡಿಸಿದ್ದಲ್ಲದೆ, ಆತನ ವಿರುದ್ಧ ಒಳರಲ ನಾದಿರಖಾನನಿಗೆ ತಮ್ಮಿಂದ ಸಹಾಯ ಮಾಡುವ ಕುರಿತು ವಿಚಾರಮಾಡಲು ತಮ್ಮ ಕುಲದ ಸಭೆ ಕೂಡಿಸತಕ್ಕವರಿದ್ದಾರೆ.

ಬ್ಯಾಡಗಿಯ ಪತ್ರ

ಪ್ರತಿವರ್ಷದ ಪದ್ಧತಿಯಂತೆ ಕಳೆದ ಶುಕ್ರವಾರ ತಾ|| ೯ ಲ ೨೯ ರ ದಿವಸ ಶ್ರೀ ಲಿಂಗರಾಜ ಆಯುರ್ವೇದ ೫ ನೆಯ ವರ್ಷದ ಉತ್ಸವವೂ ಅದರ ಮರುದಿವಸ ಶ್ರೀ ಬೋರ್ಡಿಂಗಿನ ನಾಲ್ಕನೆಯ ವರ್ಷದ ಉತ್ಸವವೂ ಬಹುವಿಜೃಂಭಣೆಯಿಂದ ನೆರವೇರಿದವು.

ತಾ|| ೯ ನೇ ಶುಕ್ರವಾರ ೪|| ಘಂಟೆಗೆ ಶ್ರೀ ಶಿವಯೋಗಿಗಳವರ ಹಾಗೂ ಶ್ರೀ ಲಿಂಗರಾಜರವರ ಭಾವಚಿತ್ರಗಳ ಮೆರವಣಿಗೆಯು ಭಜನೆ, ಬ್ಯಾಂಡು ಮೊದಲಾದವುಗಳೊಡನೆ ಪುರಪ್ರದಕ್ಷಿಣೆ ಮಾಡಿಕೊಂಡು ಸಾಯಂಕಾಲ ೬ ಕ್ಕೆ ಶ್ರೀಗಳವರ ಮಠವನ್ನು ಸೇರಿತು. ಕೂಡಲೆ ಆಯುರ್ವೇದಿಯ ಸಭೆಯು ಪ್ರಾರಂಭವಾಯಿತು. ಮೊದಲೇ ಗೊತ್ತುಮಾಡಿಕೊಂಡಿದ್ದ ಮೇರೆಗೆ ತಿಮ್ಮಾಪುರದ ಸುಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀಯುತ ಡಿ. ಎಸ್. ಮಲ್ಲಪ್ಪ ರಿಪ್ರಿಜೆಂಟೆಟಿವ್ಹ್ ಕೌನ್ಸಿಲರ ಮತ್ತು ಅಸೆಂಬ್ಲಿ ಮೆಂಬರ ವೈಸ್ರಾಯ ಈ ಮಹನೀಯರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಬಳಿಕ ಮಿ. ಮುರಿಗೆಪ್ಪ ಕಳ್ಳಟ್ಟಿ ಇವರು ೮ ನೇ ವರ್ಷದ ರಿಪೋರ್ಟ ಓದಿದರು. ಅದು ಸರ್ವಾನುಮತದಿಂದ ಪಾಸಾಯಿತು. ತರುವಾಯ ವೇ. ಇಂಡೀಮಠ, ಮಿ. ಚನ್ನಮಲ್ಲಪ್ಪ ಹೆಡ್ಮಾಸ್ತರ ತಿರಾಳಕೊಪ್ಪ ಮಿ. ಕ್ಯಾತನಿ ಇವರ ಭಾಷಣಗಳಾದವು. ನಂತರ ಮುಂದಿನ ವರ್ಷದ ಕಾರ್ಯಕಾರೀ ಮಂಡಳಿಯ ಚುನಾವಣೆಯು ಈ ಪ್ರಕಾರ ಜರುಗಿತು.

ಪ್ರೆಸಿಡೆಂಟ.- ಶ್ರೀ ಮುರಿಗೆಪ್ಪನವರು ಶೆಟ್ರ
ಚೇರಮನ್ ಮಿ. ಮಂಗಿನಪ್ಪ ತೆಂಬೂರ.
ಸೆಕ್ರೆಟರಿ - ,, ರುದ್ರಪ್ಪ ಫಕೀರಪ್ಪ ಸಂಶಣ್ಣನವರ
ಜಾ. ಸೆಕ್ರೆಟರಿ:- ,, ರುದ್ರಪ್ಪ ವೀ ಮಾಲಿಕೆಟ್ಟರ
ಟ್ರೆಝರರ - ,, ಸಂಗಪ್ಪ ಉಪಾಸಿ.
ಆಡಿಟರ ,, ಎಸ್. ಡಿ ಕಳಸದ

ಈ ಪ್ರಕಾರ ಅಧಿಕಾರಿಗಳು ನಿರ್ಣಯಿಸಲ್ಪಟ್ಟರು.

ಆ ವೇಳೆ ವೇ. ಇಂಡೀಮಠ. ೬ ರೂ. ಮಿ. ನಾಗಪ್ಪನವರು ಪೋಲೀಸ ಜಮಾದಾರ. ೧೨ ರೂ ಮಿ. ಮುರಿಗೆಪ್ಪನವರು ಯಾದವಾಡ. ೬ ರೂ ಮಿ. ಮಹಾದೇವಪ್ಪ ಸಂಶಣ್ಣನವರ. ೬ ರೂ ಮಿ. ಬಸಪ್ಪ ಕೂಲಿ ೩ ರೂ. ಮಿ. ಚೆನ್ನಬಸಪ್ಪ ಉಪ್ಪಿನ ೩ ರೂ. ಮಿ. ಚನವೀರಪ್ಪ ಗೋಕಾವಿ ೩ ರೂ. ಮಿ. ಚನ್ನಪ್ಪ ಬೆಳ್ಳಿವಿ. ೩ ರೂ. ಮಿ. ತಿಕಳಂಡಪ್ಪ ಕೊಳಸದ. ೩ ರೂ.

ಈ ಪ್ರಕಾರ ಪ್ರತಿವರ್ಷ ಕೊಡಲು ವಾಗ್ದಾನ ಮಾಡಿದರು.

ಬಳಿಕ ಅಧ್ಯಕ್ಷರ ಮುಕ್ತದ ಭಾಷಣವಾಯಿತು ಇವರು ತಮ್ಮ ಭಾಷಣದ ಕೊನೆಯಲ್ಲಿ, ಸ್ವಾರ್ಥವನ್ನು ಬದಿಗೊತ್ತಿ ಸಮಾಜದ ಕಾರ್ಯಗಳಲ್ಲಿ ವಿಶೇಷ ಮನಸ್ಸು ಹಾಕಿ ದುಡಿಯುತ್ತಿರುವ ಶ್ರೀ. ಬಸವನಾಳ ಎಮ್ ಎ, ಶ್ರೀ. ಎಚ್ ಎಫ ಕಟ್ಟೀಮನಿ ಬಿ ಎ. ಮತ್ತು ಶ್ರೀ ಜಿ ಕೆ ಮಲ್ಲಪ್ಪ ಪ್ರೆಸಿಡೆಂಟ ಮ್ಯುನಿಸಿಪಲಿಟಿ ತಿಮ್ಮಾಪುರ ಇವರೆಲ್ಲರನ್ನು ಬಹಳವಾಗಿ ಕೊಂಡಾಡಿದರು. ಶ್ರೀಯುತ ಕಟ್ಟೀಮನಿಯವರು ಅಧ್ಯಕ್ಷರ ಹಾಗು ಅವರ ಯೋಗ್ಯತೆ ಸದ್ಗುಣಗಳನ್ನು ವಿಶೇಷವಾಗಿ ವರ್ಣಿಸಿದರು. ಕೊನೆಗೆ ಅಧ್ಯಕ್ಷರಿಗೆ ಹಾರ- ತುರಾಯಿ ಮುಂಗಳಗಳೊಡನೆ ಸಭಾವಿಸರ್ಜನೆಯಾಯಿತು.

ಮರುದಿವಸ ರಾತ್ರಿ ೭ ಕ್ಕೆ ಬೋರ್ಡಿಂಗಿನ ಸಭೆಯು ಸುಪ್ರಸಿದ್ಧ (ಬಿ ಎ ಎಲ್ ಎಲ್ ಬಿ) ವಕೀಲರಾದ ಹುಬ್ಬಳ್ಳಿಯ ಶ್ರೀಯುತ ಪಾವಟೆ ಸಿದ್ಧರಾಮಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಮಿ ಆರ್ ವ್ಹಿ. ವಾಲೀಕಾರ ಇವರು ವಾರ್ಷಿಕ ರಿಪೋರ್ಟ ಓದಿದರು. ಅದು ಸರ್ವಾನುಮತದಿಂದ ಪಾಸಾಯಿತು. ಬಳಿಕ ಬೋರ್ಡಿಂಗಿನ ಮುಂದಿನ ವರ್ಷದ ಚುನಾವಣೆಯು ಈ ಪ್ರಕಾರ ಜರುಗಿತು.

ಪ್ರೆಸಿಡೆಂಟ ಶ್ರೀ ದಾನಪ್ಪನವರು ಕಬ್ಬೂರ
ಚೇರಮನ್ ,, ಕುಬಸದಪ್ಪ ಶೆಟ್ರ
ಸೆಕ್ರೆಟರಿ - ಮಿ. ಸಿದ್ದಪ್ಪ ಹು. ಬಿ
ಜಾ. ಸೆಕ್ರೆಟರಿ.- ,, ಫಕೀರಪ್ಪ ದುಂದೂರ
ಟ್ರೆಝರರ- ,, ಪುಟ್ಟಪ್ಪ ಹುಬ್ಬಿ
ಆಡಿಟರ - ,, ಫಕೀರಪ್ಪ ಕಳ್ಳಟ್ಟಿ

ಈ ಪ್ರಕಾರ ನಿರ್ಣಯವಾಯಿತು

ಬೋರ್ಡಿಂಗ ಸಂಸ್ಥೆಯ ಕೆಲಸವನ್ನು ಉತ್ತಮ ರೀತಿಯಿಂದ ಮಾಡಿದ ಬಗ್ಗೆ ವಿದ್ಯಾರ್ಥಿಯಾದ ರುದ್ರಪ್ಪ ಅಂಗಡಿ ಈತನಿಗೆ ೧ ಕ್ಕೂಲಿ ಬಂಗಾರದ ಪದಕವು ಪಾರಿತೋಷಕವಾಗಿ ಕೊಡಲ್ಪಟ್ಟಿತು.

ಬಳಿಕ ವೇ ಇಂಡೀಮಠ ಮಿ. ಚೆನ್ನಮಲ್ಲಪ್ಪ ಹೆಡ್ಮಾಸ್ತರ ತಿರಾಳಕೊಪ್ಪ ಮಿ. ಕಟ್ಟೀಮನಿ ಶ್ರೀ. ಬಸವನಾಳ ಎಮ್ ಎ. ಇವರ ಭಾಷಣಗಳಾದವು. ಕೂಡಲೆ ಮಿ ಮಾ ತ್ರಿ ಕುಲಕರ್ಣಿ. ೧ ರೂ ಶ್ರೀ. ನಾಗಪ್ಪನವರು ಸವಣೂರ ೨ ರೂ. ಸಂಸ್ಥೆಗೆ ದಾನ ಮಾಡಿದರು. ಹಾಗೂ ಮಿ ಕುಲಕರ್ಣಿ ಇವರು ಪ್ರತಿವರ್ಷ ಇದರಂತೆ ದಾನ ಮಾಡುವದಾಗಿ ಒಪ್ಪಿಕೊಂಡರು. ಅಲ್ಲದೆ

ಮಿ ವೀರಪ್ಪ ನುಸ್ಸಂಗಿ ಹಾವೇರಿ ೨ ರೂ. ಮಿ ಸೋಮಪ್ಪ ವಾಲಿ ೨ ರೂ ಅಮರಪ್ಪ ಬಳ್ಳಿಳ್ಳಿ ೨ ರೂ. ಮಿ. ರುದ್ರಪ್ಪ ಹಮಾಡೆಪ್ಪ ವಾಲಿ. ೫ ರೂ ಮಿ. ಹನುಮಂತಪ್ಪ ಕ್ಯಾತನಿ.

ಈ ಪ್ರಕಾರ ಪ್ರತಿವರ್ಷ ಕೊಡಲು ವಾಗ್ದಾನ ಮಾಡಿದರು.

ತರವಾಯ ಅಧ್ಯಕ್ಷ ಮಹಾಶಯರು ತಮ್ಮ ಸರಸವಾದ ಭಾಷಣದಿಂದ ಸಭಿಕರನ್ನು ಸಂತೋಷಗೊಳಿಸಿ ೫ ರೂ ದಾನ ಕೊಟ್ಟರು. ಇದು ಅವರಿಗೆ ಭೂಷಣವು

ಕೊನೆಗೆ ಅಧ್ಯಕ್ಷರ ಹಾಗೂ ಸಭಿಕರ ಆಭಾರವನ್ನು ಕೈಕೊಂಡು ಪುಷ್ಪಹಾರ- ತಾಂಬೂಲ- ಮಂಗಳಗಳೊಡನೆ ಸಭಾವಿಸರ್ಜನೆಯಾಯಿತು. ಬೇರೆ ಬೇರೆ ಕಡೆಯಿಂದ ಸದ್ಗೃಹಸ್ಥರು ಆಗಮಿಸಿದ್ದರಿಂದ ಎರಡೂ ಸಭೆಗಳೂ ಚೆನ್ನಾಗಿ ಶೋಭಿಸಿದವು.

ಬ್ಯಾಡಗಿ ರು. ಫ ಸಂಶಣ್ಣನವರ
ತಾ|| ೧೪ ೮-೨೯ ಸೆಕ್ರೆಟರಿ
ಶ್ರೀ. ಲಿಂಗರಾಜ ಆಯುರ್ವೇದ.

ಮೃತ್ಯು-

ಹಿರೇಕೆರೂರ ತಾಲೂಕ ಮಾಸೂರದಲ್ಲಿರುವ ಶ್ರೀ|| ಕಬ್ಬಿಗೆ ಬಸವಂತಪ್ಪನವರ ಜ್ಯೇಷ್ಠ ಪುತ್ರಿ ಶ್ರೀ|| ಸೌ|| ಪಾರ್ವತೀಬಾಯಿಯವರು ಈ ದಿವಸ ಮಧ್ಯಾಹ್ನ ೧೧ ಗಂಟೆಗೆ ಮರಣಹೊಂದಿದರೆಂದು ತಿಳಿಸಲು ಬಹಳ ವಿಷಾದವೆನಿಸುತ್ತದೆ. ಇವರು ಗಂಡು ಕೂಸನ್ನು ಜನನವಾಗಿ ಈ ಮೊತ್ತಿಗೆ ೧೧ ದಿವಸಗಳಾದವು. ಇವರು ಮುಂಬೈ ವಿಶ್ವವಿದ್ಯಾಲಯದ ಮ್ಯಾಟ್ರಿಕ ಹಾಗೂ ಸ್ಕೂಲ ಫಾಯನಲ್ ಪರೀಕ್ಷೆಯನ್ನು ತೇರ್ಗಡೆ ಹೊಂದಿದ್ದರು. ಇವರ ಧರ್ಮ ಹಾಗೂ ಸ್ವಭಾವ ವಿಚಾರಗಳು ಅತ್ಯಂತ ಪ್ರಶಂಸನೀಯವಾಗಿದ್ದವು. ೨೨ ವರ್ಷದ ಚಿಕ್ಕ ವಯಸ್ಸಿನವರಾಗಿದ್ದರೂ ಸ್ತ್ರೀ ಸಮಾಜ ಹಾಗೂ ಧರ್ಮೋನ್ನತಿಯ ಕುರಿತು ಗ್ರಂಥ

ಆದರೆ ತಾಲೂಕ ಶಿಗ್ಗಾಂವಿಯಲ್ಲಿ ನಮ್ಮ ಹಿಸ್ಸೆಕ್ಕೆ ಬಂದ ಪಾನಿ ಇದರ ಪೂರ್ವಕ್ಕೆ ಕಟಿಗಿ ಶಿದ್ದಪ್ಪನ ಪಾನಿ ದಕ್ಷಿಣಕ್ಕೆ ವೀರಪ್ಪನ ಪಾನಿ ಉತ್ತರಕ್ಕೆ [illegible] ಪಶ್ಚಿಮಕ್ಕೆ ಇಂಗಳಾರ ಯಲ್ಲವ್ವನ ಪಾನಿ ಈ ಮಧ್ಯದಲ್ಲಿರೋ ಪಾನಿಯನ್ನು ನನ್ನ ಮಲತಾಯಿ ಯಲ್ಲವ್ವಾ ಇವಳಿಗೆ ಇರಲಿಕ್ಕೆ ಕೊಟ್ಟು ನಮ್ಮ ನಮ್ಮ ಗಂಡರ ಮನೆಗೆ ಹೋದೆವು ಈಗ ನಿನ್ನ ಚಾಳಿ ತಿಳಿದಿರುತ್ತದಲ್ಲಾ ಸದರ ಯಲ್ಲವ್ವಾ ಕೋಂ ಭರಮಗಾಡ ಇವಳಿಯು ನಮ್ಮ ಹಿಸ್ಸೆಕ್ಕೆ ಬಂದ ಪಾನಿ ಅಡಹಾಕಿ ಮಾರಬೇಕೆಂಬ ಇರಾದೆಯಿಂದಾ ಎರಡನೇ ರೀತಿ ವ್ಯವಸ್ಥಾ ಅಂದರೆ ಖರೀದಿ ವಗೈರೆ ಮಾಡೊ ಖಟಪಟೀನಲ್ಲಿದ್ದಾಳೆ ಅಂತಾ ತಿಳಿದದ್ದರಿಂದಾ ಈ ನೋಟೀಸು ಮಾಡಿರುತ್ತೇನೆ ಇದನ್ನು ಯಾರೂ ವತ್ತಿ ಅಗರ ಖರೀದಿ ಹಿಡಿಯಬಾರದು ಒಂದು ವೇಳೆ ಹಿಡಿದರೆ ಹಿಡಿದವರು ಲುಕ್ಸಾನಕ್ಕೆ ಪಾತ್ರರಾಗುವಿರಿ ಸದರಿಯವಳ ಮೇಲೆ ಕಾಯದೇಶೀರ ಇಲಾಜ ನಡಿಸಿ ಮನಿ ನಮ್ಮ ತಾಬೇಕ್ಕೆ ತಗೆದುಕೋಳ್ಳುವೆ ಸದರ ನೋಟೀಸಿನ ಪ್ರತಿ ಯಲ್ಲವ್ವಾ ಕೋಂ ಭರಮಗೌಡ ಕಟಿಗಿ ಇವಳಿಗೆ ಒಂದು ಪ್ರತಿ ಮುಟ್ಟಿಸತಕ್ಕದ್ದು ಅಂತಾ ಬರಕೊಟ್ಟ ನೋಟೀಸು

ತಾ॥ ೧೭ ೮-೧೯೨೯

ಈ ಎಡಗೈ ಹೆಬ್ಬಟ್ಟಿನ ಗುರ್ತ ಕರೆವ್ವಾ ಕೋಂ ಗುಡ್ಡಪ್ಪಾ ಹೊಸೂರ ಸಾ॥ [illegible] ತಾ॥ ಹಾವೇರಿ ಈಕಿ ಮಾಡಿದ್ದು ಅದೆ

ಜಾಹೀರ ನೋಟೀಸು

——(೦)——

ಈ ಕೆಳಗೆ ಸಹಿ ಮಾಡಿದವನು ಈ ನೋಟೀಸಿನ ಮೂಲಕಾ ತಿಳಿಸುವದೇನಂದರೆ- ನಾನು ಚಿಟಗೇರಿಯಲ್ಲಿರುವ ಶಿವರುದ್ರಪ್ಪಾ ಕಡದ ಇವನ ಮೇಲೆ ಧಾರವಾಡ ಕೋರ್ಟಿನಲ್ಲಿ ಸ್ಯಾಂ ಲ ನಂ. ೫೩೧/೨೮ ನೇ ದಾವೆ ಮಾಡಿರತೇನೆ ಆದರೆ ನಾನು ದಾವೆ ಮಾಡಿದ್ದು ನೋಡಿ ಸದ್ರಿಯವನು ಮನಿಯನ್ನು ವ ತನ್ನ ಇತರ ಆಸ್ತಿಯನ್ನು ಮಾರತಾರೆಂತಾ ತಿಳಿಯುತದೆ ಸದ್ರಿಯವನು ಸಾಲಾ ಕೊಟ್ಟ ಜನರನ್ನು ಮುಳಗಿಸುವ ಇರಾದೆಯಿಂದ ಈ ಪ್ರಕಾರ ಮಾಡತಾರೆ ಕಾರಣ ಯಾರಾದರೂ ಅವನು ಮಾರತಕ್ಕ ಆಸ್ತಿಯನ್ನು ಖರೀದಿ ಅಗರ ವತ್ತಿ ವಗೈರೆ ಹಿಡಿದರೆ ನಮ್ಮ ಜವಾಬದಾರಿ ಇಲ್ಲಾ ಕಾರಣಾ ಯಾರು ಅವನ ಆಸ್ತಿಯನ್ನು ಖರೀದಿ ವತ್ತಿ ವಗೈರೆ ಹಿಡಿಯಬಾರದು ತಿಳಿಯುವದು

ತಾ॥ ೨೧-೮-೨೯

ಸಹಿ- ವೀರಪಯ್ಯಾ ಸಾಲಿಮಠ

ನೋಟೀಸು

ಪುಟ್ಟಿ ಕೋಂ ಭರಮಣ್ಣಾ ಕಲಾಲ ಸಾಕೀನ ದುರ್ಗದ ಓಣಿ ತಾಲೂಕ ಶಿಗ್ಗಾಂವಿ ಪೋ. ಬಂಕಾಪೂರ ಇವಳಿಗೆ-

ಕೆಳಗೆ ಸಹಿ ಮಾಡಿದವರು ಈ ನೋಟಿಸಿನ ಮೂಲಕ ತಿಳಿಸುವದೇನಂದರೆ-

ನೀನು ನನ್ನ ಲಗ್ನದ ಹೆಂಡತಿ ಇದ್ದಿ ಅಜಮಾಸ ಈಗ ಎಂದು ವರ್ಷದ ಪೂರ್ವದ ತನಕಾ ನನ್ನ ಕೂಡ ಸುಖದಿಂದ ಬಾಳುವೆ ಮಾಡಿದಿ ವರ್ಷದ ಕೆಳಗೆ ಒಂದು ದಿವಸ ನನಗೆ ಹೇಳದೆ ಕೇಳದೆ ಅವಿಚಾರದಿಂದ ಓಡಿಹೋದಿ ಹೋಗವಾಗ್ಗೆ ಬಂಗಾರದ ಒಳೇ ಜೋಡು ೧ ಇದರ ಕಿಮ್ಮತ್ತು ಅಜಮಾಸ ೧೦೦ ರೂಪಾಯಿ ಸುಳ್ಳೇಟಿಕೆ ೧ ಇದರ ಕಿಮ್ಮತ್ತು ಅಜಮಾಸ ೩೨ ರೂಪಾಯಿ ತೋಳಬಂದಿ ೧ ಜೋಡು ಇದರ ಕ್ರಿಯಾ ಅಜಮಾಸ ೨೪ ರೂಪಾಯಿ ಭಂಗಾರದ ನತ್ತು ೧ ಇದರ ಕ್ರಿಯಾ ಅಜಮಾಸ ೩೨ ರೂಪಾಯಿ ಕರ್ಣಫೂಲು ಭಂಗಾರದ್ದು ಇದರ ಕ್ರಿಯಾ ಅಜಮಾಸ ೫ ರೂಪಾಯಿ ಭಂಗಾರದ ಪದಕದಸರಾ ೧ ಇದರ ಕ್ರಿಯಾ ಅಜಮಾಸ ೧೯ ರೂಪಾಯಿ ಬೆಳ್ಳಿಯ ಕಡಗ ೧ ಇದರ ಕ್ರಿಯಾ ಅಜಮಾಸ ೪ ರೂಪಾಯಿ ಗಂಟಿನೋಳಗಿನ ಮದುವೆಯ ಶೀರಿ ೧ ಇದರ ಕ್ರಿಯಾ ೨೦ ರೂಪಾಯಿ ಹೊಸ ಖಣಗಳು ೩ ಇದರ ಕ್ರಿಯಾ ಅಜಮಾಸ ೭ ರೂಪಾಯಿ ಈ ಪ್ರಕಾರ ೨೪೦ ರೂಪಾಯಿಗಳ ಅಜಮಾಸ ಕಿಮ್ಮತ್ತಿನ ಸಾಮಾನ ಒಯ್ದದ್ದಲ್ಲದೆ ನಾನು ಭತ್ತಾ ಮಾರಿ ಇಟ್ಟ ರೂಪಾಯಿ ೧೦೦ ಒಯ್ದಿರುತ್ತಿ ನೀನು ಓಡಿಹೋದನಂತರ ನಾನು ನಿನ್ನ ತಪಾಸ ಮಾಡಲಾಗಿ ನೀನು ಮುಗಳೀಕಟ್ಟಿಯಲ್ಲಿ ನಿನ್ನ ತಾಯಿಯ ಮನೆಯಲ್ಲಿ ಇದ್ದದ್ದು ತಿಳಿಯಿತು ಆಮೇಲೆ ನಿನ್ನ ಕರೆಯಲಿಕ್ಕೆ ಬಂದರೆ ನೀನು ಬರಲಿಲ್ಲ ಬುದ್ಧಿವಂತರನ್ನು ಕೂಡಿಸಿ ಪಂಚಾಯತಿ ಹಾಕಲಾಗಿ ನನ್ನ ರೂಪಾಯಿಯನ್ನೂ ಕೊಡುವದಿಲ್ಲ ಬಾಳವೆ ಮಾಡಲಿಕ್ಕೆ ಬರುವದಿಲ್ಲ ಅಂತಾ ಅಂದಿ. ಹಿಂದಿನಿಂದ ಚೌಕಶೀ ಮಾಡಲಾಗಿ ನಿನ್ನ ನಡತೆಯು ಕೆಟ್ಟದ್ದಾಗಿದ್ದು ನಿನ್ನ ತಾಯಿಯು ಫೂಸಲಾಯಿಸಿಯಿಂದ ಉಡಕೀ ಮಾಡಿಕೊಂಡು ಹೋಗುವ ನಿನ್ನ ಇರಾದೆ ಇದ್ದಂತೆ ಕಂಡುಬರುತ್ತದೆ ಸದ್ಯಕ್ಕೆ ನಿನ್ನ ಲಕ್ಷಣದ ಮೇಲಿಂದ ನೀನು ಬಸರಿದ್ದಂತೆ ತೋರುತ್ತದೆ ಇದು ವ್ಯಭಿಚಾರದಿಂದ ಆದದ್ದು ನಿನ್ನ ಹೊಟ್ಟೆಯಲಿ ಏನಾದರೂ ಹುಟ್ಟಿದರೆ ಅದರಸಲ್ಕು ನನ್ನ ಮನೆಯ ನನ್ನ ಇಸ್ಟೇಟಿನ ಮೇಲೆಯೂ ಜಮೀನಿನ ಮೇಲೆಯೂ ಏನೂ ಹಕ್ಕು ಬರುವದಿಲ್ಲ ಜನನ ಮರಣಕ್ಕೆ ನನ್ನ ಹೆಸರು ದಾಖಲ ಮಾಡಬಾರದು ಮಾಡಿದರೆ ಅದು ರದ್ದು ಇರುತ್ತದೆ ನನ್ನ ನಿನ್ನ ಗಂಡಹೆಂಡರ ಸಂಬಂಧವು ಉಳಿಯುವದಿಲ್ಲ ಈಗ ನಿಂಗೆ ಸ್ಪಷ್ಟವಾಗಿ ತಿಳಿಸುವದೇನಂದರೆ ಈ ನೋಟೀಸು ಮುಟ್ಟಿದ ೮ ದಿನಗಳೊಳಗಾಗಿ ಮೇಲೆ ಬರೆದಂತೆ ದಾಗೀನೆ ಅರಿವೆಗಳನ್ನು ರೋಖ ಒಟ್ಟು ನೂರು ರೂಪಾಯಿಗಳನ್ನು ನನಗೆ ತಂದುಕೊಟ್ಟು ಪಾವತೀ ಪಡೆಕೊಂಡು ನೋಡಬೇಕು ಒಯ್ಯಬೇಕು ಇಲ್ಲದಿದ್ದರೆ ನಿನ್ನ ಮೇಲೂ ನಿನ್ನ ತಾಯಿ [illegible] ಉಡಕೀ ಮಾಡಿಕೊಂಡರೆ ಅವನ ಮೇಲೆ [illegible] ರೀತಿಪ್ರಕಾರ ದಾವೇ ಮಾಡಿ ಈ ೩೪೦ ರೂಪಾಯಿಗಳಲ್ಲದೆ ಲಗ್ನದ ಖರ್ಚು ೩೦೦ ರೂಪಾಯಿ [illegible] ವಸೂಲ ಮಾಡುವದರಲ್ಲಿ ಬರುವದು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ ತಿಳಿಯುವದು

ತಾರೀಖು. ೧೮ - - ೨೯ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಭರಮಣ್ಣಾ ತಂದಿ ಹಣಮಪ್ಪಾ [illegible] ನಿಡತಿಂಗಿ ಸಾ॥ ಬಿನ್ನೀಹಳ್ಳಿ

ಪೀಪಲ್ಸ ಇಂಟರನ್ಯಾಶನಲ್ [illegible] ವ್ಯೆಕ್ಟೀಸನ ವ ಕಾಮನ್ಸ ಲಿ [illegible] ಪುಣೆ.

ಜಾಹೀರಾತು.

ಯಾವತ್ತು ಜನರಿಗೆ [illegible] ಕೆಳಗೆ ಬರೆದ ಕಂಪನಿಯವರು [illegible] ರೂಪಾಯಿದಿಂದ ೫೦೦೦ ರೂಪಾಯಿ [illegible] ಸಾಲಾ ಕೊಡತಕ್ಕ ಸೋಯಿ ಮಾಡಿದ್ದಾರೆ ವ್ಯಾಜದರ ಸಾಲದರ ಶೇಕಡಾ ೧ ರೂಪಾಯಿ ಬೀಳುವಂತೆ ಠರಾವ ಮಾಡಿರತಾರೆ ಆದಕೆ ಬೇಕಾದವರು ಕೆಳಗೆ ಬರೆದ ಪತ್ತೇದವರ ಕಡೆ ಸಮಕ್ಷಮ ಭೆಟ್ಟಿ ಆಗಬಹುದು ಅಥವಾ ಪತ್ರವ್ಯವಹಾರ ಮಾಡಬಹುದು. ಏಜಂಟ ಪಗಾರ ಮತ್ತು ಕಮಿಶನ್ನದ ಮೇಲೆ ಬೇಕಾಗಿರತಾರೆ.

ಆರ್ಗೆನಾಯಿಝಿಂಗ ಸೆಕ್ರೆಟರಿ,
ಆಫೀಸ ಹುಬ್ಬಳ್ಳಿ,
ಅಥವಾ
ಕೆ. ಜಿ. ಜೋಗಳೆಕರ,
ಮಾಳಮಡ್ಡಿ, ಧಾರವಾಡ.

ಕರ್ನಾಟಕದ ದೇಶಿಯ ಸೆಂಟ್ರಲ ಆರ್ಗನಾಯಿಜಿಂಗ ಏಜನ್ಸಿ- ದತ್ತ ಬಿಲ್ಡಿಂಗ ಮಿಲ ಹುಬ್ಬಳ್ಳಿ ಹಾಸ್ಪಿಟಲ ರೋಡ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

[illegible]

ವರ್ಷ ೧೮) ಧಾರವಾಡ ಗುರುವಾರ ತಾರೀಖು ೨೩ ನೇ ಅಗಸ್ಟ ೧೯೨೮ (ಸಂಚಿಕೆ ೧೪೭

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

[illegible]

ಬ್ಯಾಂಕಿನಲ್ಲಿ ನಡೆಯುವ ವ್ಯವಹಾರಗಳು

[illegible]

ಹುಬ್ಬಳ್ಳಿ
ತಾ|| ೧೭-೮-೨೮

ವ್ಯವಸ್ಥಾಪಕರು

ದಿ ಭಾಗ್ಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ.

[illegible]

೧ [illegible]

೨ [illegible]

೩ [illegible]

೪ [illegible]

೫ [illegible]

ವ್ಯವಸ್ಥಾಪಕರು

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

[illegible]

ವ್ಯವಸ್ಥಾಪಕರು

[illegible]

ವ್ಯವಸ್ಥಾಪಕರು

ವಿಜಯದ ಚಂದಾದ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರು. ೧೨-೮-೦
೬ „	೭-೦-೦
೪ „	೪-೦-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

[illegible]

ವ್ಯವಸ್ಥಾಪಕರು ವಿಜಯ ಧಾರವಾಡ.

ವಿಜಯ.

ಧಾರವಾಡ ತಾ. ೨೭-೮-೨೯ ನೇ ಇಸ್ವಿ.

ಶ್ರೀ.

ವಿಜಯಾ ಶ್ರೀಕೃಷ್ಣರು
ಶ್ರೀ ಪಾಂಡುರಂಗರು ವಿಠ್ಠಲರು ಕೃಪಾಕರರೀಶರ
ದೀ "ವಿಜಯಾ" ಶ್ರೀಕರನಾ ।
ನಾ ವಿಜಯಾಗಲಿ ವಿನಾಯಕನ ಕೃಪೆಯು ನಿಜ ॥೧॥

ಶ್ರೀ. ಸಿದ್ಧಾರೂಢ ಸ್ವಾಮಿಗಳ ನಿಧನ.

ಶ್ರೀ. ಸಿದ್ಧಾರೂಢಸ್ವಾಮಿಗಳು ದಿವಂಗತರಾದರೆಂಬ ವರ್ತಮಾನ ಕೇಳಿ, ದೂರ ದೂರಿನ ವಾಚಕರು ಆಶ್ಚರ್ಯಚಕಿತರಾಗಬಹುದು. ಆದರೆ ಸ್ವಾಮಿಗಳಿಗೆ ಅಂತ ಕಾಲ ಬಂತೆಂದು ಒಂದು ತಿಂಗಳ ಹಿಂದೆಯೇ ದೃಷ್ಟಿಗೆ ತೋರಿತು. ಶ್ರೀಗಳವರು ಊರ್ಧ್ವ ಶ್ವಾಸದಿಂದ ಸತ್ತರೆಂದು ಊರು ತುಂಬ ಸುದ್ದಿಯಾಗಿ ಅನೇಕ ಜನರು ಅವರನ್ನು ನೋಡಲಿಕ್ಕೆ ಹೋದರು. ಸುದ್ದಿಯು ಸುಳ್ಳೆಂಬ ವರ್ತಮಾನ ಕೇಳಿ, ಅರ್ಧ ದಾರಿಯಿಂದ ತಿರುಗಿದರು. ಇಂಥ ಸುದ್ದಿಯು ನಿಜವೆಂದು ತೋರುವಂತೆ ಅವರು ಕೋರ್ಟಿನಲ್ಲಿ ಜವಾಬು ಕೊಟ್ಟಿದ್ದೇ ನಿಮಿತ್ತವಾಯಿತು. ವೃದ್ಧಪ್ಲಿ ಕೋರ್ಟಿಗೆ ಹೋಗಿದರೂ, ಜವಾಬು ತುಂಬಿರುವಾಗ ಮತ್ತು ಕೋರ್ಟಿನ ಸ್ವಜವಾಬು ಪ್ರತಿಪಾದನೆಗಳಿಂದ ನಿಜವೆಂದೆನಿಸು ಮಾತುಗಳಿಲ್ಲೆಂದು ಸಾಮಾನ್ಯವಾಗಿ ಜನರ ತಿಳುವಳಿಕೆ. ಆ ತಿಳುವಳಿಕೆಯ ಪ್ರಕಾರ ಸ್ವಾಮಿಗಳು ಪಶ್ಚಾತ್ತಾಪಗೊಂಡು, ಹೃದ್ರೋಗ ಹೆಚ್ಚಾಗಿ ದೇಹಬಿಟ್ಟರೆಂದು ಅನೇಕ ನಿರಿಕ್ಷಕರ ಅಭಿಪ್ರಾಯವು. ಒಂದೇ ತಿಂಗಳಲ್ಲಿ ಕಾಲವಶರಾದವರೂ ಸಹ ಇದ್ದದ್ದು ಬಿಚ್ಚಿಟ್ಟಿತು.

ಶ್ರೀ ಸ್ವಾಮಿಗಳ ವಿಷಯ ವಾಗಿ ಇಂದೇನನೂ ಬರೆಯುತ್ತಿರುವುದಿಲ್ಲ. ಏಕೆಂದರೆ ಅವರು ತಮ್ಮ ಜವಾಬಿನಲ್ಲಿ ತಮ್ಮ ಚರಿತ್ರದ ಎಲ್ಲ ಸಂಗತಿಗಳನ್ನು ಬಹಳ ವಿಶದವಾಗಿ ಹೇಳಿದ್ದಾರೆ. ಮತ್ತು ವಾದಿಯ ವಕೀಲರು ಅವರ ಮಠದ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ. ವಾದೀ ಪ್ರತಿವಾದಿಯರ ಸಾಕ್ಷಿ ಪುರಾವೆಗಳು ಮುಗಿದು ಪ್ರಸ್ತುತ ದಿವಸವೇ ಇಲ್ಲಿಯ ಫಸ್ಟ್‌ಕ್ಲಾಸ ಕೋರ್ಟಿನಲ್ಲಿ ಉಭಯ ಪಕ್ಷಗಳ ವಕೀಲರ ಸ್ವಪಕ್ಷಸಮರ್ಥನ, ಪರಪಕ್ಷದ ಖಂಡಣದ ಭಾಷಣಗಳು ನಡೆಯುತ್ತಿದ್ದವು. ಇಂದು ವಕೀಲರಿಗೆ ವಿಶ್ರಾಂತಿ ದೊರೆಯಿತೆಂದು ಸ್ವಾಮಿಗಳು ದೇಹಬಿಟ್ಟರು. ಮುಂದೆ ವ್ಯಕ್ತಿ ಪತ್ರ ನಡೆಸುವಂಥವರ ಪರವಾಗಿ ಇದರ ಕೊನೆಯು ಅಗ್ಯ್ರಮೆಂಟ ಆಗಬಹುದು.

ಸ್ವಾಮಿಗಳು ತಮ್ಮ ಜವಾಬಿನಲ್ಲಿ ಹೇಳಿದ ಕೆಲವು ಮಾತುಗಳ ನೆನಪಿನಿಂದ ಲೋಕಾದರವೂ ಪೂಜ್ಯಭಾವವೂ ಬಹುಮಟ್ಟಿಗೆ ಕಡಿಮೆಯಾಗಿತ್ತು. ಅವರ ಮರಣ ವರ್ತಮಾನ ಕೇಳಿ, ಸ್ಥಳ ದರ್ಶನದವರು ತಂಡತಂಡವಾಗಿ ಅವರ ಅಂತ್ಯದರ್ಶನಕ್ಕೆ ಹೋಗಿ ಬಂದರು. ಹುಬ್ಬಳ್ಳಿಯ ಜನಸಮುದಾಯವಾಗ ನೋಡುವವರಿಗಂತ ಅದು ಸತ್ತುಬಿದ್ದ ವರ್ತಮಾನ ಕೇಳಿದ ಕೂಡಲೆ ಅವನ್ನು ನೋಡುವ ಕುತೂಹಲವು ಜನರಲ್ಲಿ ಹುಟ್ಟುವದು ಸ್ವಾಭಾವಿಕವಾಗಿರುತ್ತದೆ. ಯಾವದೇ ಆಶೆ, ನಿರಾಶೆ, ಚಿಂತೆ, ಅಥವಾ ದುಃಖದಿಂದ ದೇಹಬಿಟ್ಟರೂ, ಅವರ ಸಮಾಧಿ ಮಾಡುವದು ಭಾವಿಕ ಜನರು ಅದಕ್ಕೆ ನಡಕೊಳ್ಳುವರು. ಅದೇ ಅವರು ದಯೆಯನ್ನು ಗಿಟ್ಟಿಸಿ ನಂತರ ದೇಹಬಿಟ್ಟವರೆಂದೂ ತಿಳಿದ ಪ್ರೊ ವ್ಯಕ್ತಿಯು ಬರೆದಿತ್ತು. ಆದ ವ್ಯಕ್ತಿಗಳೂ, ನಿಃಸ್ವಾರ್ಥದ ಭಕ್ತರೂ ಕೂಡ ಬಂದಿದ್ದು ನಿರ್ವಿವಾದವಾಗಿ ಹೇಳಬಹುದು.

ಸ್ವಾಮಿಗಳು ತಮ್ಮ ಜವಾಬಿನಲ್ಲಿ ಒಂದೆರಡು ಪ್ರಶ್ನೆಗಳಿಗೆ ಮನಸ್ಸು ಖಿನ್ನವಾಗುವಂಥ ಉತ್ತರ ಕೊಟ್ಟಿದ್ದಾರೆ. ಅವರಿಗೆ ತಂದೆಯ ಹೆಸರು ನೆನಪಿರುವದು; ಆದರೆ ತಾಯಿಯ ಹೆಸರು ನೆನಪಿಲ್ಲ. ಜಗತ್ತಿನಲ್ಲಿ ಕುಲೀನ ಮನೆತನದವರು ತಾಯಿಯ ಹೆಸರು ಗೊತ್ತಿಲ್ಲೆಂದು ಹೀಗೆ ಯಾರೂ ಕೋರ್ಟ ಸಾಕ್ಷಿದಾರರಲ್ಲಿ ಜವಾಬು ಕೊಟ್ಟಿರಲಿಕ್ಕಿಲ್ಲ. ಮುಂದಿನ ಸೂರ್ಯಚಂದ್ರರಿರುವ ತನಕ ಕೇಳಲಾರರು. ಇವರದು ಕೆಲವು ವರ್ಷಗಳ ಹಿಂದೆ ಸಂಸ್ಥಾನದ ಒಂದು ಕೋರ್ಟಿನಲ್ಲಿ ಜವಾಬಾಗಿದೆ. ಅಲ್ಲಿ ತಮ್ಮ ವಯಸ್ಸು ೯೦ ಮತ್ತು ತಮಗೆ ತಂದೆ ತಾಯಿಗಳಿರಲಿಲ್ಲೆಂದು ಗೊತ್ತಿಲ್ಲೆಂದು ಜವಾಬು ಕೊಟ್ಟಿದ್ದಾರೆ. ತಮ್ಮ ದೊಡ್ಡಸ್ತನಕ್ಕೆ ಕುಂದು ಬರುವಂಥ ಜವಾಬು ಕೊಡಲು ಪರಮೇಶ್ವರನು ಏಕೆ ಪ್ರೇರಣೆ ಮಾಡಿದನೆಂಬುದನ್ನು ಯಾರು ಹೇಳಬಲ್ಲರು? ಅಂಥ ಪ್ರಸಂಗದಲ್ಲಿ ಒಂದು ಕೊನೆಯಲ್ಲಿ ಸಮಾಧಿ ಹಚ್ಚಿಕೊಳ್ಳುವ ಕಾಲಕ್ಕೆ ಅವರಿಗೆ ಅಲ್ಲಿಂದ ಹೊರಗೆ ಬಂದ ಕೂಡಲೆ ಪ್ರಪಂಚದಿಂದ ಹೊರಬಿದ್ದ ಲಕ್ಷಾವಧಿ ಕಾಲದಂಥ ಪ್ರಪಂಚವೆಂದು ಜವಾಬಿನಲ್ಲಿ ಬೆಳಕಿಗೆ ಬಂದ ಇವರ ಗುರುತ್ವಕ್ಕೆ ದೇವಾಂಶ ಸಂಭೂತತ್ವಕ್ಕೆ ಹಾನಿತಂದಂತಾಗಿರುತ್ತದೆ.

ಸ್ವಾಮಿಗಳು ಹುಬ್ಬಳ್ಳಿಗೆ ಬಂದಾಗ ಸರಳ ಲಂಗೋಟಿ ಒಂದೇ ಮಡಿಕೆ ಮತ್ತು ಕಪನಿ ಇದ್ದರು. ಆದರೆ ಅಂತ್ಯಕಾಲದಲ್ಲಿ ಲಕ್ಷಾಧೀಶರಾದರು. ಈ ವೃದ್ಧಾಪ್ಯದಲ್ಲಿ ಮತ್ತು ಅನ್ಯರ ಮೇಲೆ ವಿಶ್ವಾಸವು ಇವರ ಲೌಕಿಕದ ನಾಶಕ್ಕೆ ಕಾರಣವಾಯಿತೆಂದು ಜನಜನಿತವಾದ ಸಂಗತಿಯು. ತಮ್ಮ ಮೇಲೆ ದಾವೆಯಾದ ಕೂಡಲೆ ಸ್ವಾಮಿಗಳು ಲಂಗೋಟಿ ಸಹ ಬಿಟ್ಟು, ದಿಗಂಬರರಾಗಿ, ಮರದಿಂದ ಹೊರಬಿದ್ದು, ಧಾರವಾಡದ ಸೋಮೇಶ್ವರ ಅಥವಾ ಇತರ ಏಕಾಂತದೇ ಒಂದು ಕ್ಷೇತ್ರದಲ್ಲಿ ನಿಂತಿದ್ದರೆ- ಇವರ ಕೀರ್ತಿಯು ಅಗ್ರಗಣ್ಯವಾಗಿ ಹಬ್ಬಿ, ಇವರ ನಿಂತಲ್ಲಿ ಇಂದ್ರಭವನದಂಥ ಮಠ ಕಟ್ಟುತ್ತಿತ್ತು. ಭಕ್ತರು ಶಿವ ನಿಮ್ಮಶರಣರೆನ್ನುತ್ತಿದ್ದರು. ಜಾತ್ರೆಯಾಗುತ್ತಿತ್ತು. ತೇರು ಎಳೆಯುತ್ತಿತ್ತು. ಸ್ವಾಮಿಗಳ ದೆಸೆಯಿಂದ ಪರವಾದಿ ಮತದ ನಿಂದೆ ಬ್ರಾಹ್ಮಣರಲ್ಲಿಯೂ ಸಮಸಾಮಾನ್ಯವಾದ ತತ್ವವಿಚಾರವು ಸ್ವತಃ ಸ್ವಾಮಿಗಳಿಗೂ ಹುಟ್ಟಲಿಲ್ಲ. ಅವರಿಗೆ ಶಾಸ್ತ್ರಲೇಖನ ಹೇಳುವಂಥ ಸಂಸ್ಕೃತ ಪಾಂಡಿತ್ಯ ಬುದ್ಧಿಗೂ ಹರಿಯಲಿಲ್ಲ. ಇವರು ಮರದಿಂದ ಒಂದು ಲಂಗೋಟಿಯಿಂದ ಹೊರಬಿದ್ದಿದ್ದರೆ- ಮರವು ನಿರ್ಜನವಾಗಿ ಹಾಳು ಸುರಿದು, ಹಳೇ ದೇವಾಲಯವಾಗುತ್ತಿತ್ತು. ಸ್ವಾಮಿಗಳಿಂದ ಮರವೋ? ಮರದ ಸಂಪತ್ತಿಗಾಗಿ ಆ ಊರೋ ಎಂಬುದು ಸಹಜವಾಗಿ ನಿಶ್ಚಯವಾಗುತ್ತಿತ್ತು. ಅಕ್ಕಲಕೋಟೆಯ ಮಹಾರಾಜರಂತೆ ಇವರು ಸರ್ವಸಂಗ ಪರಿತ್ಯಾಗಿಗಳಿದ್ದರೆ, ರಾಮಕೃಷ್ಣ ಪರಮಹಂಸರಂತೆ ದೇಹತ್ಯಾಗ ಮಾಡದೆ, ಪ್ರಪಂಚದ ಲೋಪದಲ್ಲಿ ಕೋರ್ಟು, ಬಂಗಲೆ, ನಿಧನ ಹೊಂದಿದ್ದು, ಇಂಥ ಆಯುಷ್ಯದಲ್ಲಿ ಪೂಜೆಯು ಮಾಡಿದ್ದು ಅದು ಬ್ರಹ್ಮತ್ವದ ಅಧಃಪತನವೇ ಸರಿ.

ಬ್ರಾಹ್ಮಣೇತರ ಸಭೆಗೆ.

—(೦)—

ಶ್ರೀ. ಕೌಜಲಗಿಯವರ ಮೇಲೆ
ಅವಿಶ್ವಾಸದ ಠರಾವು.

—(೦)—

ಕರ್ನಾಟಕ ಬ್ರಾಹ್ಮಣೇತರರಾದ ಶ್ರೀ ಕೌಜಲಗಿ ಶ್ರೀನಿವಾಸರಾಯರು ಬೆಳಗಾವಿ ಮ್ಯುನಿಸಿಪಾಲಿಟಿ ಯ ಅಧ್ಯಕ್ಷರಾಗಿದ್ದಾರೆ. ಮ್ಯುನಿಸಿಪಾಲಿಟಿಯ ಹನ್ನೊಂದು ಜನ ಲಿಂಗಾಯತರು ಮತ್ತು ಇತರ ಗಳ ಜನರು ಸೇರಿ, ಈಗಿನ ಮ್ಯುನಿಸಿಪಾಲಿಟಿಯ ಅಧ್ಯಕ್ಷರಲ್ಲಿ ತಮ್ಮ ವಿಶ್ವಾಸವಿಲ್ಲ. ಅವರನ್ನು ಅಧ್ಯಕ್ಷಸ್ಥಾನದಿಂದ ಪದಚ್ಯುತ ಮಾಡಬೇಕೆಂಬ ಅರ್ಜಿಯನ್ನು ಕಳಿಸಿದ್ದು, ಅದರ ಚರ್ಚೆಯು ಇದೇ ತಿಂಗಳ ೩೦ನೆಯ ತಾರೀಖಿನ ದಿವಸ ಸಾಯಂಕಾಲದ ೪ ಗಂಟೆಗೆ ನಡೆಯುವದು.

ಕನ್ನಡಿಗರ ಸಂಘ ಧಾರವಾಡ

——)(o`(——

೧೯ನೆಯ ತಾರೀಖಿನ ದಿನ ಆಲೂರು ವೆಂಕಟರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮುಂದಿನ ಗೊತ್ತುವಳಿಗಳು ಸ್ವೀಕರಿಸಲ್ಪಟ್ಟವು.

೧ ಕನ್ನಡಿಗರ ಸಂಘಕ್ಕೆ ಇನ್ನು ಮುಂದೆ ಚಿರಸ್ಥಾಯಿ ರೂಪವನ್ನು ಕೊಡಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ. ಮತ್ತು ಅದರ ಘಟನೆಯ ಬಗ್ಗೆ ಕೆಲವು ಸಾಮಾನ್ಯ ನಿಯಮಗಳನ್ನು ಮಾಡುವದಕ್ಕೆ ಶ್ರೀ. ದಿವಾಕರ ರಂಗರಾಯರನ್ನು ನಿಯಮಿಸುತ್ತದೆ

೨ ಕನ್ನಡಿಗರ ಸಂಘವು ಮುಂದೆ ಕರ್ನಾಟಕದಲ್ಲಿರುವ ವಾಚನಾಲಯಗಳ ಮತ್ತು ಗ್ರಂಥಾಲಯಗಳ ಮಾಹಿತಿಯನ್ನು ಕಲಿಸಿಕೊಂಡು ಅವುಗಳ ಸಂಘಟನೆ ಮಾಡುವ ಕಾರ್ಯವನ್ನು ಕೈಕೊಳ್ಳುವದಲ್ಲದೆ ಈ ವರ್ಷ ಧಾರವಾಡ ಜಿಲ್ಲೆಯಲ್ಲಿ ಕನಿಷ್ಠ ೫೦ ಹೊಸ ವಾಚನಾಲಯಗಳನ್ನು ತೆರೆಯಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ. ಸಂಘಟನದ ಬಗ್ಗೆ ಕೆಲವು ಸಾಮಾನ್ಯ ನಿರ್ಣಯಗಳನ್ನು ಮಾಡುವದಕ್ಕೋಸ್ಕರ ಕೆಳಗಿನ ಉಪಮಂಡಲವನ್ನು ನಿಯಮಿಸುತ್ತದೆ

೩ ಕರ್ನಾಟಕದೊಳಗಿನ ಲೋಕಲ್‌ಬೋರ್ಡ, ಮ್ಯುನಿಸಿಪಾಲಿಟಿ, ವಿದ್ಯಾಖಾತೆ ಇವು ಕರ್ನಾಟಕದಲ್ಲಿ ಲೋಕಶಿಕ್ಷಣಾರ್ಥವಾಗಿ ವಾಚನಾಲಯ, ಗ್ರಂಥಾಲಯಗಳನ್ನು ಸ್ಥಾಪಿಸುವದು ಅವರ ಕರ್ತವ್ಯವೆಂಬುದನ್ನು ಲಕ್ಷ್ಯಕ್ಕೆ ತಂದು ಆ ದಿಶೆಯಿಂದ ಅವರು ತೀವ್ರವೇ ಪ್ರಯತ್ನ ಮಾಡಬೇಕೆಂದು ಅವರಿಗೆ ವಿಜ್ಞಾಪನೆಯನ್ನು ಮಾಡಿಕೊಳ್ಳತಕ್ಕದ್ದು

೪ ವಾಚನಾಲಯ ಗ್ರಂಥಾಲಯಗಳಲ್ಲಿ ಇರತಕ್ಕಂಥ ಪುಸ್ತಕಗಳ ಮೂರು ನಾಲ್ಕು ತರದ ಪಟ್ಟಿಗಳನ್ನು ತಯಾರಿಸುವದನ್ನು ಶ್ರೀ ಬೇಂದ್ರೆಯವರು ಮಾಡತಕ್ಕದ್ದು.

೫ ಕೆಳಗೆ ಕಾಣಿಸಿದ ಉತ್ಸವಗಳನ್ನು ಪ್ರತಿ ವರುಷ ಊರವರು ಮತ್ತು ಸಂಸ್ಥೆಯವರು ಕಾರ್ಯಕ್ರಮಿಕ ರಾಷ್ಟ್ರೀಯ ಉತ್ಸವಗಳೆಂದು ತಿಳಿದು ಮಾಡಬೇಕೆಂದು ಸೂಚಿಸುತ್ತದೆ. ಈ ಉತ್ಸವಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ಉತ್ಸವಗಳ ಜ್ಞಾನವುಳ್ಳಂಥ ಚಿಕ್ಕ ಪುಸ್ತಕಗಳನ್ನು ತಯಾರಿಸಬೇಕು.

೧ ವಿಜಯನಗರ ಸ್ಥಾಪನೆಯೋತ್ಸವ.
೨ ನವರಾತ್ರಿಯ ನಾಡಹಬ್ಬ.

——

ಜಾಹೀರಾತು.

ಎಲ್ಲ ಜನರಿಗೆ ತಿಳಿಸುವದೇನಂದರೆ— ಮೃತ ಶೇಟ ಮೋಘಾಜಿ ಧೀವಜಿ ಗವಗ
ಇವರ ಜಾಗವು ಮೂರು ಅಂದರೆ ತಿಜೋರಿ, ಫರ್ನಿಚರ ಕಪಾಟ, ಖುರ್ಚಿ
ಟೇಬಲ, ವಗೈರೆ ವ ಇತರ ಚಿಲ್ಲರ ಸಾಮಾನುಗಳು ಇದೇ ತಿಂಗಳ

೨೬—೮—೨೯ ನೇ ಮಧ್ಯಾಹ್ನ ೩ ಘಂಟೆಗೆ

ಗುಜ್ಜರ ಪೇಟೆಯಲ್ಲಿ ಮೃತ ಮೋಘಾಜಿಶೇಟರ ಮನೆಯಲ್ಲಿಯೇ

ಲಿಲಾವ ಆಗುವವು.

ಲಿಲಾವಿನಲ್ಲಿ ತೆಗೆದುಕೊಳ್ಳಬಯಸುವವರು ಬಾಬೇತಾಗಿ ವಿನಂತಿ ಅರೆ ಮಾಲು
ಉತ್ತಮವುಳ್ಳಿದ್ದು ಇರವದರಿಂದ ಈ ಸಂಧಿಯನ್ನು ಕಳೆದುಕೊಳ್ಳಬಾರದು.
ಲಿಲಾವಿನ ಶರ್ತುಗಳು ಸಮಕ್ಷಮ ಲಿಲಾವಿನ ಸ್ಥಳದಲ್ಲಿ ತಿಳಿಸಲಾಗುವವು

ಗದಗ } ನಾರಾಯಣರಾವ ಡಂಬಳ, ವಕೀಲ
೧೯-೮-೧೯೨೯ } ರಿಸೀವ್ಹರ.

ಶ್ರೀ ದಮಾನಂದ ಅರಳೀಕಟ್ಟಿ ಬೆಳಗಾವಿ ಮತ್ತು ಶ್ರೀ ಮರಿಗೆಪ್ಪನವರು ಬಂಗಿ ಬಾಗಲಕೋಟಿ ಇವರು ಗುಳೇದಗುಡ್ಡಕ್ಕೆ ಬಂದು ೧೦೫ ಜನನ್ನು ಕಾಂಗ್ರೆಸ ಮೆಂಬರ ಮಾಡಿದರೆಂದೂ ಖಾದಿಯ ಭಕ್ತರೂ ದೇಶಭಕ್ತರೂ ಆದಂಥ ಸಾಬಣ್ಣ ಪಕೀರಪ್ಪ ಸಿಂಗದ ಇವರು ಜನರಲ್ಲಿ ಹುರುಪು ತಂದಿ ಕಾಂಗ್ರೆಸ ಸಭಾಸದರನ್ನು ಮಾಡಿಕೊಟ್ಟರೆಂದೂ ಒಬ್ಬ ಪ್ರತ್ಯಕ್ಷದರ್ಶಿಯು ತಿಳಿಸುತ್ತಾರೆ

——

ಬಾಗಲಕೋಟೆಯಲ್ಲಿ ಒಂದು ಜಿಮ್ನೇಶಿಕ ಶಾಲೆಯನ್ನು ಸ್ಥಾಪಿಸುವದಕ್ಕೆ ಶ್ರೀ ವೀರಶೆಟ್ಟಿ ಗುರಸಾಂತಪ್ಪನವರ ಹತ್ತು ಸಾವಿರ ರೂಪಾಯಿ ಕೊಡಲೊಪ್ಪಿದ್ದಾರೆ.

ಮಾನವಿಯ ದಾಸರೆಂದು ಪ್ರಸಿದ್ಧರಾಗಿದ್ದ ದೇಶಾಯಿ ಕೃಷ್ಣರಾಯರು ವೈಕುಂಠವಾಸಿಗಳಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ

THE MADRAS AND SOUTHERN MAHRATTA RY, CO LTD.
(Incorporated in England)

NOTICE

Shravana Festval of
Sri Siddharudhaswami Feast.

The above feast will be held at Hubli from 25-8-1929 to 27-8-1929. Special trains will be run between Hubli and Dharwar if sufficient passengers offer.

H. FRASER,
District Trans Superintendent Traffic)

ನೋಟೀಸು

ಯಾವತ್ತು ಜನರಿಗೆ ಹಾಗೂ ಯಲ್ಲವ್ವಾ ಕೋಂ ಭರಮಣ್ಣಾ ಕಟಿಗಿ ಸಾ|| ಹೂವಿನಹಿಪ್ಪರಗಿ ತಾಲ್ಲೂಕ ಬಂಕಾಪೂರ ಇವಳಿಗೆ-

ಕೆಳಗೆ ಹೆಬ್ಬೆಟ್ಟಿನ ಗುರ್ತ ಮಾಡಿದ ಶರೆವ್ವಾ ಕೋಂ ಗುಡ್ಡಪ್ಪಾ ಕೆಸರಳ್ಳಿ ಸಾ|| ಬ್ಯಾರಾಪುರ ತಾಲ್ಲೂಕ ಹಾನಗಲ್ಲ ಇವರು ಈ ನೋಟೀಸಿನ ದ್ವಾರಾ ತಿಳಿಸುವದೇನಂದರೆ-

ಮೇಲೆ ನಮೂದಿಸಿದ ಯಲ್ಲವ್ವಾ ಕೋಂ ಭರಮಣ್ಣಾ ಈಕೆಯು ನನಗೆ ಮಗಳಾಗುತ್ತಾಳೆ. ಆಗಬೇಕು ನನ್ನ ಕಂದಿಗೆ ನನ್ನ ತಾಯಿ ಮರಣ ಸವರ ಎಲ್ಲವ್ವಾ ಉಕಿಕಿ ಹೊಂದಿತಿ ಈ ಪ್ರಕಾರ ಇದ್ದು ನನ್ನ ತಾಯಿಗೆ ನಾನು ಮತ್ತು ಸಿಂಗವ್ವಾ ಇಬ್ಬರೂ ಹೆಣ್ಣುಮಕ್ಕಳು ನನ್ನ ಮಲತಾಯಿ ಎಲ್ಲವ್ವ ಈಕೆಗೆ ಸಂಗವ್ವಾ ವ ದೊಡ್ಡಬಸವ್ವಾ ಅಂತಾ ಇಬ್ಬರು ಹೆಣ್ಣುಮಕ್ಕಳಿದ್ದು, ಅವರಿಬ್ಬರಲ್ಲಿ ದೊಡ್ಡಬಸವ್ವಾ ಪೋತಿ ಆಗಿರುತ್ತಾಳೆ ನನ್ನ ತಾಯಿ ಮೃತಪಟ್ಟಿರುತ್ತಾಳೆ ನನ್ನ ತಂದೆಗೆ ನನ್ನ ಹೊರತು ಸಿಂಗವ್ವಾ ಅಂತಾ ಇದ್ದ ಆಕೆಯು ಮೃತಪಟ್ಟ ಮೇಲೆ ನನ್ನ ತಂದೆಗೆ ಗಂಡುಸಂತಾನವಿಲ್ಲದ್ದರಿಂದ ನಾನೇ ಒಕ್ಕಲ ಹೆಣ್ಣುಮಕ್ಕಳು ವಾರಸದಾರಳಾಗಿದ್ದರಿಂದ ನನ್ನ ಮಲತಾಯಿಯು ನನ್ನ ತಂದೆಯ ಬಾಬತ ಜಮೀನುಗಳನ್ನು ನನ್ನ ಉಭಯತರಿಗೆ ಅರ್ಧಾರ್ಧ ಹಂಚಿಕೊಂಡು ಹೆಣ್ಣುಮಕ್ಕಳಿಗೆ ಅರ್ಧ ಈ ಪ್ರಕಾರ ಬಿಟ್ಟು ಕೊಟ್ಟು ಕಾಗದ ಪತ್ರ ಮಾಡಿ ನೋಂದಾಯಿಸಿಕೊಟ್ಟಿರುತ್ತಾಳೆ ಆ ಪ್ರಕಾರ ನನಗೆ ಬಂದ ಆಸ್ತಿಗಳನ್ನು ನಾನೇ ವಹಿವಾಟ ಮಾಡುತ್ತೇವೆ

ಎರಡೂ ಕಡೆಯಿಂದ ಪೆಟ್ಟು.

ಹಿಂದುಸ್ಥಾನ "ಸೇವಾದಲವು ಹಿಂದು ಜನರ ಸಲುವಾಗಿ ಇರುವದು; ಅದರಲ್ಲಿ ಮುಸಲ್ಮಾನರಿಗೆ ಅಸ್ಪದವಿಲ್ಲ" ಎಂದು ಕೆಲವು ಮುಸಲ್ಮಾನರು ಹೇಳುವದುಂಟು. ಆದರೆ ಮುಸಲ್ಮಾನರನ್ನು ಸೇರಿಸಿಕೊಳ್ಳಲು ನಾವು ಅನೇಕ ಪ್ರಯತ್ನಗಳನ್ನು ಮಾಡಿದ್ದೇವೆ. ಇದೇನು ಜನರಿಗೆ ತಿಳಿಯದ ಮಾತಲ್ಲ. ಆದರೂ ಕೆಲವು ಮುಸಲ್ಮಾನರು ವ್ಯರ್ಥವಾಗಿ ಈ ಆರೋಪವನ್ನು ಸೇವಾದಲದ ಮೇಲೆ ಹೊರಿಸುತ್ತಿದ್ದಾರೆ. ಇತ್ತ ಕೆಲವು ಹಿಂದೂ ಜನರು "ನೀವು ಮುಸಲ್ಮಾನರಿಗೆ" ಎಂದು ನಮ್ಮನ್ನು ಕರೆದು ನಮ್ಮ ಮೇಲೆ ಇಲ್ಲದ ಆರೋಪವನ್ನು ಹೊರಿಸುತ್ತಾರೆ ಮತ್ತು ನಮ್ಮ ಕೂಡ ಅಸಹಕಾರವನ್ನು ಮಾಡುತ್ತಾರೆ. ಈ ಪ್ರಕಾರ ಎರಡೂ ಕಡೆಯಿಂದಲೂ ಪೆಟ್ಟು ತಟ್ಟುತ್ತಿವೆ. ಇಂಥ ಸಮಯದಲ್ಲಿ ನಾವು ಏನು ಮಾಡಬೇಕು?

ಹಿಂದುಸ್ಥಾನವೇ ನಮ್ಮ ಧ್ಯೇಯ.

ವಸ್ತು ಸ್ಥಿತಿಯು ಹೀಗಿದ್ದಾಗ್ಯೂ ನಾವು ನಮ್ಮ ಧ್ಯೇಯವನ್ನೇ ಮುಂದಿಟ್ಟುಕೊಂಡು ದಲದ ಕೆಲಸವನ್ನು ಸಾಗಿಸುವೆವು. ದಲಕ್ಕೆ ಜಾತಿ ಧರ್ಮ ಅಥವಾ ಪಂಥಗಳಿಲ್ಲ. ಅದು ಕೇವಲ ಹಿಂದುಸ್ಥಾನದ ಸ್ವಾತಂತ್ರ್ಯವನ್ನೇ ತನ್ನ ಧ್ಯೇಯವನ್ನಾಗಿಟ್ಟುಕೊಂಡಿದೆ. ಅದರ ಹೊರತು ಇನ್ನಾವದೂ ಅದಕ್ಕೆ ಕಾಣಿಸುವದಿಲ್ಲ. ಅದೇ ಪ್ರಕಾರ ದಲವು ಪ್ರಾಂತಿಕ ಅಭಿಮಾನವನ್ನು ಹಿಡಿಯುವದಿಲ್ಲ. ಭಾಷಾವಿಷಯವಾಗಿ ನಡೆಯುವ ಚಟುವಟಿಕೆಗಳಲ್ಲಿಯೂ ಅದು ಕೈಹಾಕುವದಿಲ್ಲ. ಭಾರತಾಂಬೆಯ ಜಯಜಯಕಾರವೇ ದಲದ ಭಾಷೆಯು. ಕನ್ಯಾಕುಮಾರಿಯಿಂದ ಕೈಲಾಸದ ವರೆಗೆ ಹಬ್ಬಿರುವ ಪ್ರದೇಶವೇ ದಲದ ಕ್ಷೇತ್ರವು. ಬೇಕಾದಂಥ ಎಡರುಗಳುಂಟಾದರೂ ಅಥವಾ ಬೇಕಾದವರು ಬೇಕಾದ್ದು ಅಂದರೂ ತನ್ನ ಧ್ಯೇಯದಲ್ಲಿ ಬದಲಾವಣೆಯನ್ನು ಮಾಡದೇ ಸೇವಾದಲವು ತನ್ನ ಕಾರ್ಯವನ್ನು ಎಂದಿನಂತೆ ಮುಂದೆ ಸಾಗಿಸುವದೆಂಬುದನ್ನು ಯಾರೂ ಮರೆಯಕೂಡದು.

ಕೆಲಸವನ್ನು ಮುಂದೆ ಸಾಗಿಸಲಿಕ್ಕಿಲ್ಲ.

ಹೀಗೆ ನಾವು ಮೇಲಿನ ಹೊಡೆದಾಟದ ವಿಷಯವನ್ನು ಅಲ್ಲಿಯೇ ಮುಚ್ಚಬೇಕೆಂದು ಪ್ರಯತ್ನಿಸಿದರೂ ಪೋಲೀಸರು ಸೇವಾದಲದ ಸ್ವಯಂಸೇವಕರ ಸಾಕ್ಷಿಗಳನ್ನು ತೆಗೆದುಕೊಂಡು ಇಲ್ಲದ ಜಗಳವನ್ನು ಪುನಃ ಎಬ್ಬಿಸಲು ಪ್ರಯತ್ನಿಸತ್ತಿರುವರೆಂದು ತಿಳಿದು ಬಂದು ಕಾರಣ ಮತ್ತು ಹೊರತಾಗಿ ನಮ್ಮವರ ಆರೋಗ್ಯದ ವಿಷಯವಾಗಿ ಅನೇಕರು ವಿಚಾರಿಸುತ್ತಿರುವದರಿಂದ ಈ ಲೇಖವನ್ನು ಬರೆಯುವ ಪ್ರಸಂಗ ಬಂದಿತು. ವಿಜಾಪುರ ಜಿಲ್ಲೆಯ ಹಾಗೂ ಬಾಗಲಕೋಟೆಯ ತಾಲೂಕಿನ ವರಿಷ್ಠ ಪೋಲೀಸ ಅಧಿಕಾರಿಗಳು ಸಾಕ್ಷಿ ಕೊಡಲು ದಲದ ಸ್ವಯಂಸೇವಕರಿಗೆ ತೊಂದರೆ ಪಡಿಸಲಿಕ್ಕಿಲ್ಲವೆಂದು ನಮಗೆ ಪೂರ್ಣ ವಿಶ್ವಾಸವಿದೆ. ಯಾರಾದರೂ ತೊಂದರೆ ಕೊಡುತ್ತಿದ್ದಲ್ಲಿ ಅವರು ಹೊಣೆಗಾರರಲ್ಲದ (ಜವಾಬದಾರ) ಪೋಲೀಸರಿರಬೇಕು. ಸೇವಾದಲವು ಸಾಕ್ಷಿ ಕೊಡುವದಕ್ಕೆ ಒಪ್ಪಬಹುದಾದದ್ದಲ್ಲ; ಇಷ್ಟೇ ಅಲ್ಲದೆ, ತನ್ನ ಕೆಲಸಗಾರರಿಗೆ ಹಾಗೆ ಮಾಡಲು ಇದುವರೆಗೆ ಅಪ್ಪಣೆಯನ್ನಿತ್ತಿಲ್ಲ. ಮತ್ತು ಇನ್ನು ಮುಂದೆಯಾದರೂ ಕೊಡಲು ಸಿದ್ಧವಿಲ್ಲ. ಆದ್ದರಿಂದ ಇನ್ನು ಮುಂದೆ ಸೇವಾದಲದ ಸದಸ್ಯರಲ್ಲಿ ಯಾರಾದರೂ ಪೋಲೀಸರಿಗೆ ಸಾಕ್ಷಿ ಕೊಟ್ಟಲ್ಲಿ ಅಥವಾ ಈ ಹೊಡೆದಾಟದ ವಿಷಯವಾಗಿ ಯಾವದೇ ರೀತಿಯಿಂದ ಪೋಲೀಸರಿಗೆ ಸಹಾಯ ಮಾಡಿದಲ್ಲಿ ಅದಕ್ಕೆ ಸೇವಾದಲವು ಎಳ್ಳಷ್ಟಾದರೂ ಹೊಣೆಯಾಗಿರುವದಿಲ್ಲವೆಂದೂ ಮತ್ತು ಅದು ಆಯಾ ವ್ಯಕ್ತಿಯ ಕಾರ್ಯವೆಂದು ತಿಳಿಯಕೊಳ್ಳಬೇಕಾದುದೆಂದೂ ನಾವು ಈ ಮೂಲಕವಾಗಿ ಸರ್ವರಿಗೂ ಸೇವಾದಲದ ಪರವಾಗಿ ಜಾಹೀರ ಪಡಿಸುತ್ತೇವೆ.

ಸ್ವಯಂಸೇವಕರು ಚನ್ನಾಗಿರುವರು.

ಬಾಗಲಕೋಟೆಯಲ್ಲಿ ಹೊಡೆಯಿಸಿಕೊಂಡ ಸ್ವಯಂಸೇವಕರು ೩-೪ ದಿವಸಗಳ ವರೆಗೆ ಹಾಸಿಗೆ ಹಿಡಿದಿದ್ದರು. ಅವರ ಪ್ರಕೃತಿಯನ್ನು ಸುಧಾರಿಸುವ ಕಾರ್ಯದಲ್ಲಿ ಬಾಗಲಕೋಟೆಯ ಡಾಕ್ಟರರು ಸಹಾಯ ಮಾಡಿದರು. ಸದ್ಯಕ್ಕೆ ಆ ಎಲ್ಲ ಸ್ವಯಂಸೇವಕರು ಪೂರ್ಣ ಗುಣಹೊಂದಿ ತಮ್ಮ ತಮ್ಮ ಕಾರ್ಯಗಳನ್ನು ಕೈಯಲ್ಲಿ ತೆಗೆದುಕೊಂಡು ಇಮ್ಮಡಿ ಉತ್ಸಾಹದಿಂದ ಮುಂದೆ ಸಾಗಿಸಿದ್ದಾರೆ. ಅವರ ಸಲುವಾಗಿ ಯಾರೂ ಚಿಂತೆ ಮಾಡಬಾರದು.

ಹುಬ್ಬಳ್ಳಿ	ನಾ. ಸು. ಹರ್ಡೀಕರ
೧೭-೮-೨೯	ಸೇವಾದಲದ ಕಾರ್ಯದರ್ಶಿ.

ಚೀನ ರಶಿಯಾ ಯುದ್ಧ.

—(೦)—

ಚೀನ ರಶಿಯಾದ ನಡುವೆ ಸೈಬೇರಿಯಾದ ಸರಹದ್ದಿನಲ್ಲಿ ಆಗಾಗ್ಗೆ ಚಕಮಕಿಗಳಾಗುತ್ತಿದ್ದು, ಉಭಯ ಪಕ್ಷಗಳ ಸೈನಿಕರು ಘಾಸಿಯಾಗುತ್ತಿದ್ದಾರೆ. ಅಲ್ಲಿಯ ಸ್ಥಿತಿಯು ದಿನವೊಂದಕ್ಕೂ ಭಯಾನಕವಾಗುತ್ತಿರುವದರಿಂದ, ಚೀನ ಸರಕಾರದವರು ಅನಿಟ್ಟಿನಲ್ಲಿ ಯುದ್ಧದ ಕಾನೂನುಗಳನ್ನು ಜಾಹೀರ ಮಾಡಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯ ಸೇವಕರ ಅಲ್ಪ ಪರಿಚಯ.

(ಕನ್ನಡಿಗರ ಕೊಟದ ಸಾಹಿತ್ಯ ಶಾಖೆಯಿಂದ)

ಚನ್ನಪ್ಪ ಉತ್ತಂಗಿ–

ಶ್ರೀಯುತರು ೧೮೮೧ ನೇ ಇಸವಿಯ ಅಕ್ಟೋಬರ ೨೮ ನೇಯ ದಿನ ಧಾರವಾಡದಲ್ಲಿ ಜನಿಸಿದರು ಈಗ ಹಾವೇರಿಯಲ್ಲಿದ್ದಾರೆ. ಧರ್ಮೋಪದೇಶಕರು ಕರ್ನಾಟಕಾಭಿಮಾನದಿಂದ ಕರ್ನಾಟಕ ಭಾಷಾ ಸೇವೆಯನ್ನು ಮನಮುಟ್ಟಿ ಮಾಡುವವರೆಂದರೆ ಈ ಉತ್ತರ ಕರ್ನಾಟಕದ ಕ್ರೈಸ್ತರಲ್ಲಿ ಇವರೊಬ್ಬರೇ ಎಂದು ಹೇಳಬಹುದು. ಇವರು ಆಯ್ದು ಪ್ರಕಟಿಸಿದ "ಸರ್ವಜ್ಞ ವಚನಗಳು" ಪ್ರಸಿದ್ಧವೇ ಇವೆ. ಅಲ್ಲದೆ ಹಿಂದಿನ ಸಮಾಜ ಪರಿಚಾರಕ "ತಿಲಕರ ಚರಿತ್ರೆ" ಎಂಬುವೂ ಅಲ್ಲದೆ "ಲಿಂಗಾಯತ ವಚನ ಶಾಸ್ತ್ರ" "ಬಸವೇಶ್ವರ ಚರಿತ್ರೆ" "ಮಂಗಳಾಂತ ಮನಸ್ಸು" "ಗೀತಾಕೋಶ" ಮೊದಲಾದುವನ್ನು ಬರೆದದ್ದು ಅಚ್ಚಾಗಿಲ್ಲ. ಇವರು ಮ್ಯಾಟ್ರಿಕನವರೆಗೆ ಕಲಿತವರಾಗಿದ್ದರೂ ಕನ್ನಡ ಸಾಹಿತ್ಯಲೋಕದಲ್ಲಿ ಪ್ರಾಜ್ಞತೆಯು ವಿಶೇಷವಾಗಿದೆ ಸಂಸ್ಕೃತ ಗ್ರೀಕ ಭಾಷೆಗಳನ್ನು ಬಲ್ಲವರು.

ಹೊಸಕೇರಿ ಅಣ್ಣಾಚಾರ್ಯರು.–

ಧಾರವಾಡ ವೈಷ್ಣವ ವೈದಿಕ ಬ್ರಾಹ್ಮಣರು ಕನ್ನಡ, ತೆಲುಗು, ಮರಾಠಿ, ಇಂಗ್ಲಿಷ, ಭಾಷಾಭಿಜ್ಞರು. ೫೫ ವರುಷ ವಯಸ್ಸಿನ ಹಳೆಯ ದೇಶಸೇವಕರು ೧೮೯೦ ರಿಂದ ೧೯೧೩ ರವರೆಗೆ ಕರ್ನಾಟಕವೃತ್ತ ಮತ್ತು ಧನಂಜಯವೆಂಬ ವಾರಪತ್ರಿಕನ್ನು ೧೯೧೪ರಿಂದ ೧೯೧೯ರವರೆಗೆ ರಾಜಹಂಸವನ್ನೂ ಸಂಪಾದಕರಾಗಿ ನಡೆಸಿದರು, ೧೯೨೧ ರಿಂದ ತಮ್ಮ ಸಂಪಾದಕತ್ವದಲ್ಲಿಯೇ ವಿಜಯವನ್ನು ವಾರಪತ್ರಿಕೆಯನ್ನಾಗಿಯೂ ದಿನ ಪತ್ರಿಕೆಯನ್ನಾಗಿಯೂ ಹೊರಡಿಸಿದರು. ಪತ್ರಿಕಾಲೇಖನದಲ್ಲಿ ನುರಿತವರು. ಸುದ್ದಿಗಳನ್ನು ಮನೋಹರವಾಗಿಯೂ ಸೊಗಸಾಗಿಯೂ ಬರೆಯುವದರಲ್ಲಿ ಹೆಸರಾದವರು.

ಬೇಂಗೇರಿ ಹುಚ್ಚರಾಯರು –

ಇವರ ಹುಟ್ಟೂರು ಬೇಂಗೇರಿ ಈಗ ಹುಬ್ಬಳ್ಳಿಯ ಮುನಸಿಪಲ್ ಹಾಯಸ್ಕೂಲಿನ ಹೆಡ್‌ಮಾಸ್ತರರಾಗಿದ್ದಾರೆ ಬಿ ಎ (ಆನರ್ಸ) ಪದವೀಧರರು ಇಂಗ್ಲಿಷ, ಮರಾಠಿ, ಸಂಸ್ಕೃತಗಳಲ್ಲಿ ಬಲ್ಲವರಾದ ವೈಷ್ಣವ ಬ್ರಾಹ್ಮಣರು ದಾಸಕೂಟದ ಸಂಕ್ಷಿಪ್ತ ಇತಿಹಾಸವನ್ನು ಬರೆದಿದ್ದಾರೆ ಜಯಕರ್ನಾಟಕದಲ್ಲಿಯೂ ಕರ್ನಾಟಕ ಕಾಲೇಜ ಮಿಸ್ಸೆಲನಿಯಲ್ಲಿಯೂ ಲೇಖಗಳು ಬಂದಿರುತ್ತವೆ ೩೩-೧೧ ೧೮೯೮ರಲ್ಲಿ ಇವರು ಹುಟ್ಟಿದ್ದು.

ಪಂ. ಪಿಸ್. ಶಿವಲಿಂಗಶಾಸ್ತ್ರಿಗಳು–

ಇವರು ಹುಬ್ಬಳ್ಳಿಯಲ್ಲಿ ಹುಟ್ಟಿದರು. ವೀರಶೈವರು. ಧಾರವಾಡದಲ್ಲಿ ಹೊರಡುತ್ತಿರುವ ವೀರಶೈವ ರಕ್ಷಕ ಪತ್ರಿಕಾ ದಕರ್ನಾಟಕ ಟಾಮ್ಸ ಪತ್ರಿಕೆಯ ಸಂಪಾದಕರು. ಸಂಸ್ಕೃತವನ್ನು ಬಲ್ಲವರು. ಹಿಂದಕ್ಕೆ ಇವರ ಸಂಪಾದಕತ್ವದಲ್ಲಿ "ವೀರಶೈವ ಧರ್ಮತರಂಗಿಣಿ" ಎಂಬ ಮಾಸಪತ್ರಿಕೆಯು ಹೊರಡುತ್ತಿತ್ತು. ಸಂಪಾದಕತ್ವವೂ ದಲ್ಲಾಲಿತನವೂ ಇವರ ಉದ್ಯೋಗ. ಇವರಿಗೀಗ ೫೭ ವರುಷ ವಯಸ್ಸು.

ಹಾಸನೂರ ಅಯ್ಯಪ್ಪನವರು–

ಹಾಸನೂರರವರು ೧-೪-೧೯೦೮ ರಲ್ಲಿ ಹುಟ್ಟಿದರು. ಕ್ಷತ್ರಿಯರು. ಇವರಿಗೆ ಮರಾಠಿ, ಬಂಗಾಳಿ, ಹಿಂದಿ, ಇಂಗ್ಲಿಷ ಭಾಷೆಗಳು ಅವಗತವಿವೆ ಸಾಹಿತ್ಯಲೋಕದಲ್ಲಿ ಬಸವದೇವನೆಂದು ಇವರ ಹೆಸರು ಅರ್ಪಣದಲ್ಲಿ ಕೆಲವು ಕವಿತೆಗಳೂ ಕರ್ನಾಟಕ ಕಾಲೇಜ ಪತ್ರಿಕೆಯಲ್ಲಿ ಕೆಲವು ಲೇಖಗಳೂ ಪ್ರಕಟವಾಗಿವೆ ಕವಿಗಳೂ ಲೇಖಕರೂ ಆಗಿರುವಂತೆ ವಾಙ್ಮಯವಿಮರ್ಶಕರೂ ಅಹುದು. "ಎ ಕಾಂಪ್ರಿಹೆನ್ಸಿವ್ಹ ಸ್ಟಡಿ ಆಫ್ ಕನ್ನಡ ಲಿಟ್ರೇಚರ" ಎಂಬ ಹೊತ್ತಿಗೆಯನ್ನು ಬರೆಯುವವರಿದ್ದಾರೆ.

ಕುಲಕರ್ಣಿ ಕೃಷ್ಣರಾಯರು–

ಕನವಳ್ಳಿಯವರು. ಹೊನ್ನತ್ತಿಯಲ್ಲಿ ೨೩-೧೧-೧೯೧೦ ನೆಯ ದಿನ ಹುಟ್ಟಿದರು. ಬ್ರಾಹ್ಮಣರು. ಸಂಸ್ಕೃತ, ಹಿಂದಿ, ಮರಾಠಿ, ಇಂಗ್ಲೀಷು ಗಳನ್ನು ಬಲ್ಲರು. ಕನ್ನಡ ಮುಲಕೀ ಪರೀಕ್ಷೆಯಾಗಿದೆ, ಮ್ಯಾಟ್ರಿಕ್ ಕ್ಲಾಸಿನಲ್ಲಿ ಓದುತ್ತಿದ್ದಾರೆ. ಶಾಬನೆಂದಿನಿ ಎಂಬ ಸಾಮಾಜಿಕ ಕಾದಂಬರಿಯು ಮುದ್ರಿತವಾಗಿದೆ. ಸತ್ಯಪ್ರಭಾವ, ಪ್ರೇಮಮುಖದ ಕಾದಂಬರಿಗಳೂ ಭಗ್ನಮನೋರಥ, ದುಡ್ಡು ಸಂಪಾದಿಸುವ ಹಂಚಿಕೆ ನಾಟಕಗಳೂ ಅಮುದ್ರಿತಗಳು. ಹಳ್ಳಿಗಳ ಉದ್ಧಾರವೆಂಬ ಪ್ರಬಂಧವನ್ನು ಬರೆಯುತಿರುವರು. ಸದ್ಬೋಧಚಂದ್ರಿಕೆ, ಬಸವರಾಜ, ಲೋಕಮತ, ಕೈಬರಹದ ಕರ್ನಾಟಕದೇವಿ ಮೊದಲಾದವುಗಳಲ್ಲಿ ಇವರ ಲೇಖಗಳು ಬಂದಿವೆ.

ಜಾಲಿಹಾಳ ಲಕ್ಷ್ಮಣರಾಯರು–

ಹುಟ್ಟೂರು ವಾಣಿ ಇವ್ದೂರು ಧಾರವಾಡ ಇದ್ದಾರು, ಹುಟ್ಟಿದ್ದು ೧೮೮೮ ನೇ ವರ್ಷದ ಟ್ರೇಂಡರು. ಮೊದಲು ಶಿಕ್ಷಕರಾಗಿದ್ದು ಸರಕಾರ ನೌಕರಿಗೆ ದೇಕಿಸ್ತುಕೊಂಡು ಮುದ್ರಣಕೆಲಸವನ್ನು ಕೈಕೊಂಡು ಸ್ವತಂತ್ರರಾಗಿದ್ದಾರೆ. ಒಂದಾನೊಂದು ಕಾಲದಲ್ಲಿ ಉತ್ತರಕರ್ನಾಟಕದಲ್ಲಿ ಶಿಕ್ಷಕರಲ್ಲಿ ಒ-ತ್ತೀ ಜಾಗ್ರತಿಯನ್ನುಂಟುಮಾಡಿದ ಪ್ರಾಥಮಿಕ ಶಿಕ್ಷಕದ ಸಂಪಾದಕರಿವರು. ಲೋಕಬಂಧುವೆಂಬ ಸಾಪ್ತಾಹಿಕವನ್ನು ಎಷ್ಟೋ ದಿನ ನಡೆಸಿದ್ದರು. ಇನ್ನಾದರೂ ಲೋಕಾಶ್ರಯದ ಬೆಂಬಲವು ಸಿಕ್ಕದ್ದಾದರೆ ಮತ್ತೆ ಲೋಕಬಂಧುವನ್ನು ಹೊರಡಿಸಬೇಕೆಂದು ಹಂಬಲಿಸುತ್ತಿರುವರು.

ಶ್ರೀ॥ ಮಾ॥ ಸಿದ್ಧಲಿಂಗಾರ್ಯ, ಸಾಲಿಮಠ–

ರೋಣ, ಇವರು ವಿಶೇಷ ವೀರಶೈವರು ಶ್ರೀಶಕ ೧೭೯೦ ಶುಕ್ಲನಾಮ ಸಂವತ್ಸರ ಫಾಲ್ಗುಣ ಬ| ಸೋಮವಾರ ಬನಹಟ್ಟಿ ಗ್ರಾಮದಲ್ಲಿ ಜನಿಸಿರುವರು. ಇವರೀಗ ಸದ್ಯಕ್ಕೆ "ದೇವಭೂಜ" ಮಾಸಪತ್ರಿಕೆಯ ಸಂಪಾದಕರಿದ್ದು, ೧ ಮುರಘೇಂದ್ರ ವಿಜಯ, ೨ ಇಷ್ಟಲಿಂಗ ತ್ರಿವಿಧಿ, ೩ ಕರ್ಮಜ್ಞಾನಗಳ ವಿಚಾರ, ೪ ಮಂಗಳಾರತಿ, ಮತ್ತು ೫ ಬೋಧ ಮೊದಲಾದ ಪದ್ಯಗ್ರಂಥಗಳನ್ನೂ ೬ ಷಡುಷಷ್ಟಿ ಪುರಾತನರ ಪುರಾಣ, ೭ ಗರ್ಭರಕ್ಷಾವಳಿ, ೮ ಶಿಶುಸಂಜೀವನಿ, ೯ ಹೊಸ ಮನೆ ಕಟ್ಟುವಕ್ರಮ, ೧೦ ಪಾದೋದಕ ವಿಚಾರ, ೧೧ ಶಿವಲಿಂಗಪೂಜಾಕ್ರಮ, ೧೨ ಸಾಮಾವಳಿತ್ರಯ, ೧೩ ಗುರುಬೋಧೆ, ೧೪ ವೈದ್ಯಶಿಕ್ಷಕ, ೧೫ ವೀರಶೈವ ಸದಾಚಾರ, ೧೬ ಪಶುಸಂಜೀವನಿ ೧೭ ಚತುರ್ವೇದಾಗಮಸಾರ, ೧೮ ನಿಗಮಾಗಮಸಾರದ್ವಯ ಇತ್ಯಾದಿ ಕೃತಿಗಳನ್ನು ಬರೆದಿರುವರು. ಇನ್ನೂ ಕನ್ನಡ ಭಾಷಾಮಾತೆಯ ಸೇವೆಯನ್ನು ಮಾಡುತ್ತಲಿರುವರು. ಮೇಲೆ ಬರೆದ ಗ್ರಂಥಗಳಲ್ಲಿ ೧೦ ಗ್ರಂಥಗಳು ಈಗಾಗಲೇ ಅಚ್ಚಾಗಿ ಪ್ರಸಿದ್ಧಪಟ್ಟಿರುವವು ಇವರು ಕವಿಗಳಿದ್ದು ಕನ್ನಡದಲ್ಲಿ ಹೆಚ್ಚು ಜ್ಞಾನ ಸಂಪಾದಿಸಿ, ಶಿವಾನುಭವ ಸಂಪನ್ನರಾಗಿರುವರು.

ಅಸ್ಟ್ರಿಯಾದಲ್ಲಿ ಬಂಡಾಯ.

—(೦)—

ಅಸ್ಟ್ರಿಯಾ ದೇಶವು ಮಹಾಯುದ್ಧದ ಉರವಣಿಗೆಯ ಉಗಮಸ್ಥಾನವು. ಅರಸೊತ್ತಿಗೆಯು ಅಳಿದ ಬಳಿಕ, ಪ್ರಜಾಸತ್ತಾತ್ಮಕ ರಾಜ್ಯವಾಯಿತು. ಆದರೆ ಫಾಸಿಸ್ಟ ಮತ್ತು ಸೋಸಿಯಾಲಿಸ್ಟ ವೆಂಬಿಬ್ಬರು ಪಂಥ ಳಾಗಿ, ಉಭಯತರ ನಡುವೆ ಭಯಂಕರ ದ್ವೇಷ ಬೆಳೆದಿದೆ. ಹೋದ ವಾರದಲ್ಲಿ ಭಯಂಕರ ಹೊಡದಾಟವಾಯಿತು. ಉಭಯತರ ನಡುವೆ ಯಾದವರಂತೆ ಯುದ್ಧವಾಗಿ, ವ್ಯರ್ಥ ಜನಲಯವಾಗುವ ಹೊತ್ತು ಬಂದಿದೆ. ಫಾಸಿಸ್ಟರ ಹತ್ತಿರ ಮದ್ದುಗುಂಡಿನ ಸಂಗ್ರಹವುಂಟು. ಯುದ್ಧ ಹತ್ತಿಗೊಡಬಾರದೆಂದು ಸರಕಾರದವರು ಸೇನೆಯನ್ನು ಸಜ್ಜುಮಾಡಿಟ್ಟಿದ್ದಾರೆ.

ಟಿಕೀಟಿಲ್ಲದೆ, ಉಗಿಬಂಡಿ ಹತ್ತಬಹುದೇ?

—(೦)—

ಅಲ್ಲಾಹಾಬಾದಿನಲ್ಲಿ ಒಬ್ಬನು ಬಂಡಿಯು ಹೊರಡುವಾಗ ಬಂದನು. ಟಿಕೀಟು ತಕ್ಕೊಳ್ಳಲಿಕ್ಕೆ ಅವಕಾಶವಿಲ್ಲದ್ದರಿಂದ, ಹಾಗೇ ಬಂಡೀ ಹತ್ತಿದನು. ಹೀಗೆ ಈತನು ಟಿಕೀಟಿನ ರೂಪದಿಂದ ದುಡ್ಡು ಕೊಡದೆ, ಬಂಡೀ ಹತ್ತಿದ್ದು ಅಪರಾಧವಾಯಿತೆಂದು ಕಂಪನಿಯವರು ಈತನ ಮೇಲೆ ಫೌಜದಾರಿಯಲ್ಲಿ ಫಿರ್ಯಾದಿಮಾಡಿದರು. ಆರೋಪಿಯ ಉದ್ದೇಶವು ಕೆಟ್ಟದ್ದಿರಲಿಲ್ಲ. ಸಮಯವಿರದ್ದಕ್ಕೆ ಟಿಕೀಟು ಕೊಳ್ಳಲಿಲ್ಲ. ಇಳಿಯುವ ಸ್ಟೇಶನದಲ್ಲಿ ಹಾಸಲು ಕೊಡುತ್ತಿದ್ದನು. ಆದ್ದರಿಂದ ತಪ್ಪಗಾರನೆನಿಸುವದಿಲ್ಲೆಂದು ಮ್ಯಾಜಿಸ್ಟ್ರೇಟರು ತೀರ್ಪು ಬರೆದರು ಮ್ಯಾಜಿಸ್ಟ್ರೇಟರ ತೀರ್ಪಿನಿಂದ ಬೇಕಾದವರು ಇಳಿಯುವ ಸ್ಟೇಶನದಲ್ಲಿ ಹಾಸಲು ಕೊಡುತ್ತೇವೆಂದು ಹೇಳಿ, ಬಂಡಿ ಹತ್ತಬಹುದು. ಕಂಪನಿಯ ಟಿಕೀಟ ಕಲೆಕ್ಟರ ಮೊದಲಾದವರಂತೂ ಬಲಾತ್ಕಾರದಿಂದ ಇಳಿಸಲಾರರು. ಆದ್ದರಿಂದ ಈ ಬಗ್ಗೆ ಕೊನೆಯ ನಿರ್ಣಯ ಹೇಳಬೇಕೆಂದು ಅಲ್ಲಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ರೇಲ್ವೆಯ ಬೋರ್ಡಿಗೆ ಬರೆದಿರುತ್ತಾರೆ.

ನಿಜಾಮರ ಹಿರಿಯ ಮಗನಿಗೆ

ದಿವಾನಗಿರಿಯು.

—(೦)—

ಹೈದರಾಬಾದಿನ ದಿವಾನರಾಗಿರುವ ಮಹಾರಾಜಾ ಸರ ಕಿಶನಪ್ರಸಾದರು ಬೇಗನೆ ಕೆಲಸದಿಂದ ನಿವೃತ್ತರಾಗುವರು. ಇವರ ಸ್ಥಳದಲ್ಲಿ ನಿಜಾಮ ಸಾಹೇಬರು ತಮ್ಮ ಸಾಹೇಬ ಜಾದಾರನ್ನೇ ಮುಖ್ಯ ಮಂತ್ರಿಯಾಗಿ ನೇಮಿಸುವರೆಂದು ಹೈದರಾಬಾದಿನಲ್ಲಿ ದಟ್ಟ ವರ್ತಮಾನವಾಗಿದೆ

ಕಲಕತ್ತೆಯಲ್ಲಿ ಬರ್ಮಾಕಂಪನಿಯ ಕಲ್ಲೆಣ್ಣೆಯ ವಖಾರದಲ್ಲಿ ಕೆಲಸಮಾಡುವಂಥ ೧೫೦೦೦ ಕೂಲಿಕಾರರು ಸಂಪು ಮಾಡಿ ಕೆಲಸ ಬಿಟ್ಟಿದ್ದಾರೆ.

ಸಿಂಧಪ್ರಾಂತವನ್ನು ಸ್ವತಂತ್ರ ಮಾಡಬಾರದೆಂದು ಡಾಕ್ಟರ ಮುಂಜೆಯವರು ಲಂಡನದಲ್ಲಿರುವ ಹಿಂದೀ ಸಾಯಮನ್ ಕಮೀಟಿಗೆ ತಾರುಮಾಡಿದ್ದಾರೆ ಡಾಕ್ಟರ ಮುಂಜೆಯವರ ವಿರುದ್ಧವಾಗಿ ಮುಸಲಮಾನರು ತಮ್ಮ ಮುಂಬರರಿಗೆ ತಾರಿನಿಂದ ತಿಳಿಸಿದ್ದಾರೆ.

ಮುಂಬಯಿಯಲ್ಲಿಯ ಅಸ್ಪೃಶ್ಯರು ಶ್ರಾವಣಿ ಮಾಡಿ, ಜನಿವಾರ ಹಾಕಿಕೊಂಡರು. ಡಾಕ್ಟರ ಪಿ ಪ್ರಿ ಸಾಯಿಕರೆಂಬುವರು ಉಪಾಧ್ಯಾಯರಾಗಿದ್ದರು.

ವಿವಿಧ ವರ್ತಮಾನಗಳು.

ಶಿಕಾರಿ ಬಾಜಾರಕ್ಕೆ ಸೇರಿದ ಬೇದರ ಪಟ್ಟಣದಲ್ಲಿ ಮದಿವೆಯ ಮೆರವಣಿಗೆಯಲ್ಲಿ ಮದ್ದು ಹಾರಿ, ಮೂವರು ಸತ್ತರು.

ಮುಂಬಯಿಯಲ್ಲಿ ಒಂದು ಪ್ರಕಾರದ ಜ್ವರೋತ್ಪನ್ನವಾಗಿದ್ದು, ಇದು ಸ್ಪರ್ಶಜನ್ಯವಾಗಿದೆ. ಇದರ ಲಕ್ಷಣಗಳು ಬೇರೆ ಜ್ವರಗಳಿಗಿಂತ ತೀರ ಭಿನ್ನವಾಗಿರುತ್ತವೆ. ಇದರ ಚರ್ಚೆಯು ಸಾಮಾಜಿಕ ಡಾಕ್ಟರರಿಗೆ ತಿಳಿಯದಾಗಿದೆ.

ಜಾಹೀರ ನೋಟೀಸು

—(೦)—

ರಾ| ರಾ| ಫಕೀರಪ್ಪ ಅಂಣಿಗೇರಿ ಸಾ| ಇಂಗಳಳ್ಳಿ ತಾಲೂಕ ನವಲಗುಂದ ಜಿಲ್ಲಾ ಧಾರವಾಡ ಇವರಿಗೆ-

ಕೆಳಗೆ ಸಹೀ ಮಾಡಿದವಳು ಈ ನೋಟೀಸಿನಿಂದಾ ತಿಳಿಸುವದೇನಂದರೆ- ನೀನು ನನ್ನ ಮದವಿ ಗಂಡನಿದ್ದು ೨-೩ ವರ್ಷ ಬಾಳ್ವೆ ಮಾಡಿ ಒಂದು ಹೆಂಣು ಮಗಳನ್ನು ಪಡೆದನು ತರುವಾಯ ನೀನು ಯಾರದನೇದವರ ಮಾತು ಕೇಳಿ ನನಗೆ ತ್ರಾಸ ಕೊಟ್ಟು ಹೊರಗೆ ಹಾಕಿದಿ ನನ್ನ ತವರು ಮನೆಯವರು ಬಡವರಿದ್ದ ಮೂಲಕ ನಾನೇನು ನನ್ನ ಮಗಳನ್ನು ಹಿಡಿಯುವದಾಗಲಿಲ್ಲ. ನೀನು ಬಿಟ್ಟಲಾಗಾಯಿತು ಇವತ್ತಿನವರಿಗೆ ಅಂದರೆ ೪-೫|| ವರ್ಷದವರೆಗೂ ಸಾವಕಾರ ಕಡೆಗೆ ನಾಲ್ಕುನೂರು ರೂಪಾಯಿ ದೇಣೆ ಆಗಿದೆ ಸಾವಕಾರರ ದೇಣೆದ ತ್ರಾಸಿನ ಮೂಲಕಾ ನೀನು ಈ ನೋಟೀಸು ಮುಟ್ಟಿದ ೮-೧೦ ದಿವಸದಲ್ಲಿ ದೇಣೆ ಫೇಡಮಾಡಿ ಕರಕೊಂಡು ಹೋಗದಿದ್ರೆ ಇದೇ ಸೋಡಪತ್ರ ಅಂತಾ ತಿಳಿದುಕೊಳ್ಳಬೇಕು ನಾನು ಆಗುವ ಗಂಡನ ಮೇಲೂ ಮಗಳ ಮೇಲೂ ನಿನ್ನ ಯಾವತರದ ಸಮ್ಮಂಧ ಉಳಿಯಲಿಕ್ಕಿಲ್ಲ. ಈ ನೋಟೀಸಿನ ಖರ್ಚು ನಿನ್ನ ಮೇಲೆ ಅದೆ ಅಂತಾ ಕೊಟ್ಟ ಜಾಹೀರ ನೋಟೀಸು

ತಾ|| ೨೪—೮—೧೯೨೯ನೇ ಇಸ್ವಿ

ಸಹಿ- ನಿಂಗವ್ವಾ ಕೋಂ ಫಕೀರಪ್ಪ ಅಂಣಿಗೇರಿ ಸಾ| ಕಿತ್ತೂರ.

ಸುಸಮಯ.

ಪಿ. ಕೆ. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಅನೇಕ ಔಷಧಗಳನ್ನು ಸೇವಿಸಿ ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನ ಮೂಲಕ ಈ ಜಾಹಿರಾತಿಯನ್ನು ನೋಡಿದಿರೆಂಬವನ್ನು ಬರೆಯಬೇಕು.

THE MADRAS AND SOUTHERN MAHRATTA RY, CO. LTD.
(Incorporated in England.)

NOTICE

Shravana Festval of Sri Siddharudhaswami Feast.

The above feast will be held at Hubli from 25-8-1929 to 27-8-1929. Special trains will be run between Hubli and Dharwar if sufficient passengers offer.

H. FRASER,
Districct Trans Superintendent Traffic)

ಪ್ರತಿಯೊಂದು ತಾಲೂಕಿನಲ್ಲಿ

ಸಬ್ ಏಜಂಟರು ಬೇಕು.

ನೀಲಗಿರಿ ಚಾಯ ಲ್ಯಾಂಡ ಕಂಪನಿಯವರಿಂದ ತಯಾರಿಸಿದ ಚಹಾವನ್ನು ಧಾರವಾಡ ಜಿಲ್ಲೆಯ ಎಲ್ಲ ಭಾಗಗಳಲ್ಲಿ ಪ್ರಚಾರ ಪಡಿಸುವದಕ್ಕೆ ಸಬ್ ಏಜಂಟರು ಬೇಕು. ಉಮೇದವಾರರು ಕೆಳಗಿನ ವಿಳಾಸಕ್ಕೆ ಪತ್ರದ್ವಾರ ಮಾಹಿತಿಯನ್ನು ಇದೇ ತಿಂಗಳ ೩೦ ನೇ ತಾರೀಖಿನ ಒಳಗಾಗಿ ತರಿಸಿಕೊಳ್ಳಬಹುದು. ಮಾಹಿತಿಯ ಬಗ್ಗೆ ೨ ಆಣೆ ಸ್ಟಾಂಪು ಕಳಿಸಬೇಕು. ಪೂರ್ಣಾನುಭವವಿದ್ದವರಿಗೆ ಹೆಚ್ಚಿನ ಸವಲತ್ತು.

ಬಿ. ಎಮ್. ನಾಯಕರ.
ಧಾರವಾಡ ಜಿಲ್ಲೆಗಾಗಿ ಸೋಲ ಏಜಂಟರು
ರಾಣೇಬೆನ್ನೂರ.

ಪೀಪಲ್ಸ ಇಂಟರನ್ಯಾಶನಲ ಎಜ್ಯುಕೇಶನ ಕಾಮರ್ಸ ಲಿಮಿಟೆಡ ಪುಣೆ.

ಜಾಹೀರಾತು.

ಯಾವತ್ತು ಜನರಿಗೆ ತಿಳಿಸುವದೇನಂದರೆ ಕೆಳಗೆ ಬರೆದಿದ್ದ ಕಂಪನಿಯವರು ೫೦ ರೂಪಾಯಿದಿಂದ ೫೦೦೦ ರೂಪಾಯಿ ತನಕಾ ಸಾಲಾ ಕೊಡತಕ್ಕ ಸೋಯಿ ಮಾಡಿರತಾರೆ. ವ್ಯಾಜದರ ಸಾಲ ದರ ಶೇಕಡಾ ೧ ರೂಪಾಯಿದಂತೆ ಠರಾವ ಮಾಡಿರತಾರೆ ಆದರೆ ಬೇಕಾದವರು ಕೆಳಗೆ ಬರೆದ ಪತ್ತೇದವರ ಕಡೆ ಸಮಕ್ಷಮ ಭೆಟ್ಟಿ ಆಗಬಹುದು. ಅಥವಾ ಪತ್ರವ್ಯವಹಾರ ಮಾಡಬಹುದು. ಏಜಂಟ ಪಗಾರ ಮತ್ತು ಕಮಿಶನ್ನದ ಮೇಲೆ ಬೇಕಾಗಿರತಾರೆ.

ಆರ್ಗನಾಯಿಜಿಂಗ ಸೆಕ್ರೆಟರಿ,
ಆಫೀಸ ಹುಬ್ಬಳ್ಳಿ.
ಅಥವಾ
ಕೆ. ಜಿ. ಜೋಗಳೇಕರ,
ಮಾಳಮಡ್ಡಿ, ಧಾರವಾಡ.

ಕರ್ನಾಟಕದ ದೆಸೆಯಿಂದ ಸೆಂಟ್ರಲ ಆರ್ಗನಾಯಿಜಿಂಗ ಏಜನ್ಸಿ- ದತ್ತ ವಿಲ್ಡಿಂಗ ನಿಲ ಹುಬ್ಬಳ್ಳಿ ಹಾಸ್ಪಿಟಲ ರೋಡ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಒಂದು ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶನಿವಾರ ತಾರೀಖು ೨೪ ನೇ ಅಗಸ್ಟ ೧೯೨೯ (ಸಂಚಿಕೆ ೧೪೮

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನ ೩-೩೦ ರವರೆಗೆ ಶನಿವಾರ ಮಧ್ಯಾಹ್ನ ೧ ರವರೆಗೆ

ಬ್ಯಾಂಕಿನಲ್ಲಿ ನಡೆಯುತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪ್ರತ್ಯೇಕವಾಗಿ ತೆರೆಯಲ್ಪಡುವವು.

ಮುದತಿ ಠೇವುಗಳು— ಒಪ್ಪಂದದ ಮೇರೆ ಸ್ವೀಕರಿಸಲ್ಪಡುವವು- ಬಡ್ಡಿದರ ರೂ. ೩|| ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩|| ರೂ.

ಸೇವಿಂಗ್ಸ ಬ್ಯಾಂಕ.— ಒಪ್ಪಂದದ ಮೇರೆ ತೆರೆಯಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಕಾಗದಗಳು.

[illegible] ಕೊಡಲ್ಪಡುವದು. ಬಡ್ಡಿದರ ೬ ರೂ. [illegible] ಕೊಡಲ್ಪಡುವವು. [illegible] ಕೊಳ್ಳುವದರಲ್ಲಿ [illegible] [illegible] ಹಾಗೂ [illegible] ಉದಾರಿ ಕೊಡಲ್ಪಡುವವು

[illegible] ತೆಗೆದುಕೊಳ್ಳಲ್ಪಡುವವು. [illegible] ಕೊಡುವದರಲ್ಲಿ [illegible] ಹಾಗೂ [illegible] ಬ್ಯಾಂಕಿನಲ್ಲಿ [illegible] ಕೊಡುವವು.

ಹುಬ್ಬಳ್ಳಿ
ತಾ|| ೧೭-೨-೨೮

ಡಿ. ಜೋಸೆಫ,
ಏಜಂಟರು

ದಿ ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ.

[illegible] ಮಂಗಳವಾರಪೇಟೆ, [illegible]

೧ ಈ ಬ್ಯಾಂಕಿನಲ್ಲಿ ದಾಗಿನೆಗಳ ಮೇಲೆ [illegible] ಮತ್ತು [illegible] ಕರಾರಿನಿಂದ ಬೇಕಾದಷ್ಟು [illegible] ಕರಾರಿನ ತನಕ ಸಾಲ ದೊರೆಯುವದು. ಬಡ್ಡಿಯ ದರ [illegible] ತಿಳಕೊಳ್ಳಬೇಕು.

೨ ಸರಕಾರಿ ಪತ್ರಗಳ [illegible] ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ [illegible] ಮತ್ತು [illegible] ಅವುಗಳ [illegible] ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ಕರಾರಿನಿಂದ ದೊಡ್ಡ ಕರಾರಿನ ತನಕ [illegible]. ಬಡ್ಡಿಯ ದರವನ್ನು [illegible] ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ [illegible] ವ್ಯವಹಾರ [illegible] ಎಲ್ಲ [illegible] ನಡೆಯುವವು. ವಿಶೇಷ [illegible] ಆಫೀಸಿನ್ನ ವೇಳೆಯಲ್ಲಿ [illegible] ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

[illegible]
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು [illegible]

[illegible] ರಿಂದ ತಿಳಕೊಳ್ಳಬೇಕು.

[illegible]
ಮ್ಯಾನೇಜಿಂಗ ಡಾಯರೆಕ್ಟರ,

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವು ಇಟ್ಟುಕೊಳ್ಳಲಾಗುವದು. ದರವನ್ನು [illegible] ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗಿನೆಗಳನ್ನು [illegible] ಇಟ್ಟುಕೊಳ್ಳುವ [illegible] ದರವು ನೂರಕ್ಕೆ [illegible] ಕಡಿಮೆಯಾಗಿರುತ್ತದೆ.

ವಿ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೮-೦
೪ ,,	೪-೦-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

[illegible] ಹಿಂದೂಸ್ಥಾನ ಸರಕಾರದ [illegible] ದರು [illegible]

[illegible] ಅವರ [illegible] ಭಂತಪೂರಕ್ಕೆ ತಂದು ಅಲ್ಲಿ [illegible] ಸತ್ಕಾರ ಮಾಡಿದರು.

ವೈಸೂರಲ್ಲಿ ಒಂದು ಮನೆಯು ಪಾಳು ತೋಡುತ್ತಿದ್ದಾಗ ಹತ್ತಿರದ ಗೋಡೆಯು ಕುಸಿಬಿದ್ದು [illegible] ರು ಸತ್ತರು.

ಕೊಡೈಕೆನಾಲದಲ್ಲಿ ಗಡಿಪಾರಿನ ಕಷ್ಟ ಅನುಭವಿಸುತ್ತಿರುವ ನಾ [illegible] ಹಾರಾಜರು ದ [illegible] ನ ವಿಕಾ [illegible] ತ್ತಾರೆ.

ಶಾಸ್ತ್ರಿಮ [illegible] ಅಭ್ಯಾಸ ಮಾ ಡಲೋಸುಗ ಶ್ರೀ. ಬ [illegible] ಟ್ಟೋಪಾಧ್ಯಾಯರು ಅಮೇರಿಕೆಗೆ [illegible]

ನೋಟೀಸ

[illegible] ಘಟಿಗೆಪ್ಪ ಕಡೆಸ ಸಾಕೀ [illegible] ತಾ|| ಕಲಘಟಗಿ ಇವರಿಗೆ-

[illegible] ಳಗೆ ಸಹಿಮಾಡಿದವನ ಕಡೆಯಿಂದ ನೋಟೀಸ ಕೊಡುವದೇನಂದರೆ- ನೀನು ತಾ|| ೧೦-೪-೧೯೩೭ನೇ ದಿವಸದ ದಾಜ [illegible] ದ ಪತ್ರದಲ್ಲಿ ಕೊಟ್ಟ ನೋಟೀಸಿನ ಪ್ರಕಾರ [illegible] ದರ ಸ್ಥಿತಿ ನೀನು ನನ್ನ ಲಗ್ನದ ಹೆಂಡತಿ [illegible] ವ ಘಾತಿನ ಮಟ್ಟಿಗೆ ಖರೇ ಇದ್ದು ಬಾಕೀ [illegible] ವಿಕ್ರ [illegible] ಅಭಿಳ್ತ ಸುಳ್ಳು ಲಬಾ [illegible] ಇದ್ದು ನನ್ನ ಬಾಬತ್ತ ನಿನ್ನ ಮೈಮೇಲೆ ಇ [illegible] ಗೀನೆ ವ ನನ್ನ ಬಾಬತ್ತ ಜವೀನು ನಿ [illegible] ಕಂದಿಯವರ ಕಡೆಗೆ ಇದ್ದದ್ದು ಎತ್ತಿ ಹಾಕುವದಂ [illegible] ಂದ ನೋಟೀಸ ಕೊಡಿಸಿರುತ್ತದೆ ಅದಕ್ಕೆ ನೀ [illegible] ನೋಟೀಸಿನಿಂದ ಲಗ್ನದ ಹಕ್ಕು ನಷ್ಟ [illegible] ದು ನೀನು ನನ್ನ ಪರವಾನಿಗಿ ವ ಖು [illegible] ಯಿಂದ ಮಾಡಿಕೊಟ್ಟ ಲೇಖದ ಶಿವಾಯ ಯ [illegible] ರನೇಕರಿಗೆ ವ್ಯಾಜಕೀ ಪಸ್ಕಿರೆ ಮಾಡಿಕೊಂಡಲ್ಲಿ ನಿ [illegible] ಮೇಲೆ ವ ನಿನ್ನ ವ್ಯಾಜಕೀ ಮಾಡಿ ಕೊಂಡವನ ಮೇಲೆ ವ ಮಾಡಿ ಕೊಟ್ಟವರ ಮೇಲೆ ಸಹಾ ಕ್ರಿ [illegible] ನಲ್ಲ ಕೇಸ ಮಾಡಲಾದೀತು ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲೆ ಅದೆ,

ತಾರೀಖು ೨೩-೪-೧೯೩೭ನೇ ಇಸ್ವಿ

ಸಹಿ -ಘಟಿಗೆಪ್ಪಾ ಬಸಪ್ಪಾ ಕಡಸದ.

ಅನೇಕ ಔಷಧಗಳನ್ನು ಸೇವಿಸಿ ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ.

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ನೂರಾರು ಜನರ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆ ಖರ್ಚು ಬೇರೆ ಇಲ್ಲ ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ —ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಸೂಚನೆ— ನಿಮ್ಮ ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನಿಂದ ಈ ಔಷಧವನ್ನು ತರಿಸುವಿರಿ ಅದನ್ನು ಬರೆಯಬೇಕು

ನೋಟೀಸು

—(೦)—

ಹಂಪವ್ವಾ ಕೋಂ ಬಸಪ್ಪಾ ಅಬಲೂರವರ ಸಾ|| ಚನ್ನಹಳ್ಳಿ ತಾಲ್ಕು ಕೋಡ ಇವರಿಗೆ-

ಕೆಳಗೆ ಸಹಿಮಾಡಿದವನ ಕಡಿಂದ ತಿಳಿಸುವದೇನಂದರೆ- ನೀನು ನನ್ನ ಮದುವಿ ಹೆಂಡತಿ ಇದ್ದು ನನಗೆ ತಾ|| ೩-೪-೩೭ನೇ ದಿವಸ ಮತ್ತು ೩೧-೭-೩೭ನೇ ದಿವಸ ಕೊಟ್ಟ ನೋಟೀಸಗಳು ಮುಟ್ಟಿದವು ನಿನ್ನ ತಂದಿತಾಯಿ ನನಗೆ ಖರ್ಚ ಹಾಕಿ ಲಗ್ನ ಮಾಡಿಲ್ಲ ನಿನ್ನ ತಂದಿ ನಿನ್ನ ಮೈಮೇಲೆ ೪೦೦ ನಾಲ್ಕುನೂರು ರೂಪಾಯಿ ದಾಗೀನೆಗಳನ್ನು ಇಟ್ಟು ಲಗ್ನ ಮಾಡಿಕೊಡಲಿಕ್ಕೆ ಸಾಮರ್ಥ್ಯವುಳ್ಳವನಲ್ಲ ಅದನ್ನು ಇದ್ದಾಗ್ಯೆಂತಾ ನೀನೇ ಅನ್ಯತ್ರ ಶರಣು ಮನಿಯಲ್ಲಿ ಇರಬೇಕೆಂಬ ಕಾರಣದಿಂದ ನಾನು ಲಗ್ನ ಆಗಿಲ್ಲ ಅಥುಕ್ತ ಖೊಟ್ಟಿ ನೋಟೀಸಗಳು ಕೊಟ್ಟಿರುತ್ತಿ ನಾನು ಇಟ್ಟ ದಾಗೀನೆಗಳು ೩೦೦ ಮೂರುನೂರು ರೂಪಾಯಿದವು ಮತ್ತು ತಿಂದ ರೂಪಾಯಿಗಳು ೩೦೦ ಮೂರುನೂರು ಲಗ್ನದ ಖರ್ಚ ಮೂರುನೂರು ರೂಪಾಯಿ ಈ ಪ್ರಕಾರ ೯೦೦ ಒಂಭತ್ತು ನೂರು ರೂಪಾಯಿ ಖರ್ಚ ಮಾಡಿ ಲಗ್ನ ಮಾಡಿಕೊಂಡಿರುತ್ತೇನೆ ನಿನ್ನ ತಂದಿ ತಾಯಿ ಹೇಳ್ಕಿ ಪ್ರಕಾರ ದುರ್ನಡತೆಗೆ ಬಿದ್ದು ಈ ಪ್ರಕಾರ ನೋಟೀಸ ಕೊಟ್ಟರೆ ಬಿಡುಗಡೆ ಆಗಿ ಹೋಗುತ್ತದೆ ತೆರೆದ ದುಡ್ಡು ವ ದಾಗೀನೆ ದುಡ್ಡು ವ ಲಗ್ನದ ಖರ್ಚ ಮುಳುಗಿ ಸ್ವತಂತ್ರ ಆಗಬೇಕೆಂತಾ ತಿಳಿದು ಇರುತ್ತಿ ನಾನು ಲಗ್ನದ ಗಂಡನಿದ್ದದರಿಂದ ನಿನ್ನನ್ನು ಕೃಷ್ಣ ಹಿಡಿದು ಕರಕೊಂಡು ಹೋಗಲಿಕ್ಕೆ ಹಕ್ಕು ವುಂಟು ಈ ನೋಟೀಸು ಮುಟ್ಟಿದ ೮ ದಿವಸದಲ್ಲಿ ಕೂಸಿನ್ನೆ ಸಹಿತ ಕರಕೊಂಡು ದಾಗೀನೆಗಳನ್ನು ತಗೊಂಡು ಒಳ್ಳೇ ರೀತಿಯಿಂದ ನನ್ನ ಹತ್ತರ ಇದ್ದು ಬಾಳ್ವೆ ಮಾಡಬೇಕು ತಪ್ಪಿದರೆ ನಿನ್ನ ಮೇಲೆ ಯಾವ ಪ್ರಕಾರದ ಹಕ್ಕು ನನಗೆ ಇರುತ್ತದೆ ಆ ಪ್ರಕಾರ ನಿನ್ನ ಮೇಲೆ ನಡಸತೇನೆ ತಿಳಿಯಿರಿ

ತಾ|| ೨೯-೮-೩೭

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಬಸಪ್ಪಾ ತಂದಿ ಕಾಶಪ್ಪ ಅಬಲೂರವರ ಸಾ|| ಕಡೆನಂದಿಹಳ್ಳಿ ತಾಲ್ಕು ಶಿಕಾರಿಪೂರ ಈತನು ಮಾಡಿದ್ದು ಇರುತ್ತದೆ

ಸೂಚನೆಯು

—೦—

ಎ ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ರವಿವಾರ ತಾರೀಖು ೨೫ ನೇ ಅಗಸ್ಟ ೧೯೨೯

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- [illegible] ೧೦-೩೦ [illegible]

[illegible] ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು— [illegible]

[illegible]— [illegible] ರೂ. ೩|| [illegible]

[illegible] ರೂ. ೩|| ರೂ.

[illegible]— [illegible] ೩ ರೂ.

[illegible]

[illegible]

ಹುಬ್ಬಳ್ಳಿ
ತಾ| ೧೬-೨-೨೮

ಡಿ. ಡೊನೆಲಿ,
ಏಜಂಟರು

ದಿ ಭಾಗ್ಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

[illegible] ಮಂಗಳವಾರ ಪೇಟೆ, [illegible]

೧ ಈ ಬ್ಯಾಂಕಿನಲ್ಲಿ [illegible]

೨ [illegible]

೩ [illegible]

೪ ಬ್ಯಾಂಕಿನ [illegible]

೫ [illegible]

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

[illegible] ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

[illegible] ಶ್ರೀ [illegible]

[illegible]

ಮಧ್ವರಾವ ಜಿ. [illegible]
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ

ಈ ಬ್ಯಾಂಕಿನಲ್ಲಿ [illegible]

ಈ ಬ್ಯಾಂಕಿನಲ್ಲಿ [illegible]

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೫-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

[illegible]

ಮ್ಯಾನೇಜರ ವಿಜಯ

...ಗಲಕೋಟೆಯಲ್ಲಿ ಕಟ್ಟಿ
...ಪೀಠದ ಪ್ರಥಮ ವಾರ್ಷಿ
...ಗಿ ಧಳದ ಬಹುಕರ ಎಲ್ಲ
...ೋಟೆಯಲ್ಲಿ ಕೂತಿರಲು ದು
...-೭-೩೯ನೆಯ ದಿವಸ ಕೆಲ
...ಗಳು ದಳದ ಸ್ವಯಂಸೇ
ವಕರನ್ನು ಹೊಡೆದರು. ಈ ವಿಷಯವಾಗಿ ಹಲ ಕೆಲವು ಸಂಗತಿಗಳನ್ನು ವರ್ತಮಾನ ಪತ್ರಿಕೆಗಳ ಸಂಪಾದಕರೇ ಸಂಗ್ರಹಿಸಿಕೊಂಡು ತಮ್ಮ ಪತ್ರಗಳಲ್ಲಿ ಮುದ್ರಿಸಿರುವರೇ ಹೊರತು ನಾವು ಮಾತ್ರ ಅದರ ಸಂಬಂಧವಲ್ಲಿ ಯಾವ ಸಂಗತಿಯನ್ನೂ ಪ್ರಸಿದ್ಧಿಸಿಲ್ಲ. ಆದರೆ ನಮ್ಮ ಪ್ರಾಂತದೊಳಗಿನವರಷ್ಟೇ ಅಲ್ಲದೆ ಹಿಂದುಸ್ಥಾನದ ಬೇರೆ ಬೇರೆ ಭಾಗಗಳಲ್ಲಿರುವ ಸೇವಾದಲದ ಮಿತ್ರರು ಇದರ ವಿಷಯವಾಗಿ ಸಂಪೂರ್ಣ ತಿಳಿದುಕೊಳ್ಳುವ ಇಚ್ಛೆಯನ್ನು ಪ್ರಕಟಮಾಡು ಹತ್ತಿರುವ ಕಾರಣ ಮತ್ತು ಬಾಗಲಕೋಟೆಯೊಳಗಿನ ಕೆಲವು ಹೋಣೆಗಾರರಲ್ಲದ (ಬೇಜವಾಬದಾರ) ಶಿಪಾಯಿಗಳು ಹೊಡೆದಾಟವಾದ ಸ್ಥಳದಲ್ಲಿದ್ದ ಸೇವಾದಲದ ಕೆಲಸಗಾರರಲ್ಲಿ ಎಷ್ಟೋ ಜನರಿಗೆ ಸಾಕ್ಷಿಗಳನ್ನು ಹೇಳಬೇಕೆಂದು ಪೀಡಿಸುತ್ತಿರುವರೆಂದು ನಮ್ಮ ಕಿವಿಯವರೆಗೆ ಬಂದ ಮೂಲಕ ನಮಗೆ ಈ ಕೆಳಗಿನ ವಿಷಯವನ್ನು ಜನರ ಮುಂದಿಡುವ ಅವಶ್ಯಕತೆಯುಂಟಾಗಿದೆ.

ನಡೆದ ನಿಜ ಸಂಗತಿಗಳು.

ತಾ ೩೧-೭-೩೯ನೆಯ ದಿವಸ ವ್ಯಾಯಾಮ ವಿದ್ಯಾಪೀಠದ ಸ್ವಯಂಸೇವಕರು ಬಾಗಲಕೋಟೆಯಲ್ಲಿ ಸೇವಾದಲದ ಬ್ಯಾಂಡಿನೊಂದಿಗೆ ಹಸ್ತಪತ್ರಿಕೆಗಳನ್ನು ಹಂಚುವದಕ್ಕಾಗಿ ಊರೊಳಗೆ ಹೊರಟರು. ಅದರೊಳಗೆ ಭಾಗತೆಗೆದುಕೊಂಡವರೆಲ್ಲರೂ ಪರಸ್ಥಳದಿಂದ ಬಂದವರಿದ್ದರು. ಸ್ವಯಂಸೇವಕರು ಅಂಜನೇಯನ ಗುಡಿಯ ಮುಂದೆ ಹಾಯ್ದು ಹೋಗುತ್ತಿದ್ದಾಗ್ಗೆ ಕಪ್ತಾನರು "ಪರಿತಾ" ಮಸೀದೆಯನ್ನು ಕಂಡರು. ಕೂಡಲೇ ಅವರು ಬ್ಯಾಂಡು ಬಾರಿಸುವದನ್ನು ನಿಲ್ಲಿಸಿದರು. ಮುಂದೆ ಇವರೆಲ್ಲರೂ ಬಾಹೀರಾತುಗಳನ್ನು ಹಂಚುತ್ತ "ಹಿರೇ" ಮಸೀದೆಯ ಮುಂದೆ ಹಾಯ್ದರು. ಈ ಮಸೀದೆಯು ತಗ್ಗಿನಲ್ಲಿದ್ದುದರಿಂದ ಹೊಸಬರಿಗೆ ಥಟ್ಟನೇ ಗೊತ್ತಾಗುವ ಹಾಗಿಲ್ಲ. ಆದ್ದರಿಂದ ಸೇವಾದಲದ ಸ್ವಯಂಸೇವಕರು ತಮ್ಮ ಕೆಲಸವನ್ನು ಮುಂದುವರಿಸುತ್ತ ಕೆಲಕ್ಷಣದ ಹಾಗೇ ಬಾರಿಸುತ್ತ ಮುಂದೆ ಸಾಗಿದರು. ಕೂಡಲೇ ಮಸೀದೆಯೊಳಗಿನ ಮತ್ತು ಸು...

...ಗಿನ ಮುಸಲ್ಮಾನರು ಬಂದು ಸ್ವಯಂಸೇವಕರಿಗೆ, ಏಕೋಪಕಕ ಬಾರಿಸಿದವರಿಗೆ. ಕಲ್ಲು, ಡೆಕ್ಕೆ, ಗುದ್ದಿ, ಕಲಕಿ ಮುಂತಾದ ಆಯುಧಗಳಿಂದ ಹೊಡೆಯಲಾರಂಭಿಸಿದರು. ಬ್ಯಾಂಡಿನ ಧ್ರಮ್ಮು (ಡೊಳ್ಳು) ಗಳನ್ನು ತುಳಿದು ಹರಿದು ಒಗೆದರು ಇದು ಸುಮಾರು ಮೂರೂಸಂಜೆಯ ಮುಂಚೆ ನಾಲ್ಕು ಘಂಟೆ ಆಗಿರಬಹುದು. ದಳದ ಚಾಲಕರಿಗೆ ಕುಮಾರರಿಗೆ ಹೊಡೆತ ಬೀಳಬಾರದೆಂಬ ಬುದ್ಧಿಯಿಂದ ಅವರೊಳಗಿನ ಕೆಲವು ಹೊಣೆಗಾರರಾದ ಸ್ವಯಂಸೇವಕರು ಅವರನ್ನು ಕರೆದುಕೊಂಡು ದೂರ ಹೋದರು. ಉಳಿದವರೆಲ್ಲರೂ ಹೊಡತಗಳನ್ನು ತಿನ್ನುತ್ತಲೇ "ನಮ್ಮ ಕಡೆಯಿಂದ ಈ ಕಾರ್ಯವು ಬುದ್ಧಿಪುರಸ್ಸರವಾಗಿ ಆಗಿರುವದಿಲ್ಲ ನಾವು ಕ್ಷಮೆ ಬೇಡುತ್ತೇವೆ ಹೊಡೆಯಬೇಡಿರಿ" ಎಂದವರಲ್ಲದೆ ಕೆಲವರು ಮುಸಲ್ಮಾನರ ಕಾಲುಗಳ ಮೇಲೆ ಬಿದ್ದು ಹೇಳಿಕೊಂಡರು. ಮತ್ತು ಮುಖ್ಯಸ್ಥರಾದ ಶ್ರೀ ಕಮಾರ ಇವರು ತಮ್ಮ ಕಡೆಯ ಜನರು ಮುಸಲ್ಮಾನರಿಗೆ ಹೊಡೆದಾರೆಂಬ ಭಯದಿಂದ "ಯಾರೂ ತಿರುಗಿ ಕೈ ಮಾಡಬೇಕರಿ, ನಮ್ಮದು ಶಾಂತಿಯ ಯುದ್ಧವಾಗಿರಬೇಕು" ಎಂದು ಎಲ್ಲರಿಗೂ ಅಪ್ಪಣೆಯನ್ನು ಮಾಡಿದರು. ಮುಸಲ್ಮಾನರು ಇಷ್ಟಾದರೂ ಹೊಡೆಯುವದನ್ನು ನಿಲ್ಲಿಸಲಿಲ್ಲ ಅಷ್ಟರಲ್ಲಿಯೇ ಅಲ್ಲಿ ಹೊತ್ತ ಜನರ ಗುಂಪಾಯಿತು ಕೂಡಿತು ಹೊಡೆದವರು ತಾವೇ ಹಿಂಜರಿಯುತ್ತಿದರು. ಹತ್ತಿರದ್ದ ಮುಸಲ್ಮಾನ ವೃದ್ಧ ಸ್ತ್ರೀಯರು "ಕ್ಷಮಾಪಣೆಯನ್ನು ಬೇಡುವವರನ್ನು ಹೊಡೆಯ ಬಾರದು" ಎಂದು ಹೇಳಿ ಅವರನ್ನು ತಡೆದರು. ಅನಂತರ ಸ್ವಯಂಸೇವಕರು ಘನ ಶಿಸ್ತಿನಿಂದ ಮುಂದೆ ಸಾಗಿದರು ಅವರ ಬ್ಯಾಂಡಿನ ಸಾಮಾನುಗಳು ಹೊಡೆದಾಟದಲ್ಲಿ ನುಗ್ಗಾದ್ದರಿಂದ ಬಾರಿಸುವ ಕಾರ್ಯವು ಮಾತ್ರ ಅಲ್ಲಿಗೇ ನಿಂತಿತು ಇಷ್ಟರಲ್ಲಿ ಈ ಹೊಡೆದಾಟದ ವರ್ತಮಾನವು ನಮಗೆ ತಿಳಿದದ್ದರಿಂದ ನಾವು ಭರದಿಂದ ಹೊಡೆದಾಟದ ಸ್ಥಳಕ್ಕೆ ಸಾಗಿದೆವು ಮಾರ್ಗದಲ್ಲಿ ಬರುತ್ತಿದ್ದ ಸ್ವಯಂಸೇವಕರ ಹತ್ತಿರ ಹೋಗಿ ಎಲ್ಲ ಸಂಗತಿಗಳನ್ನು ಅರಿತುಕೊಂಡೆವು. ಮತ್ತು ಎಲ್ಲರನ್ನು ಕರಕೊಂಡು ಪೋಲೀಸ ಅಧಿಕಾರಸ್ಥರ ಮನೆಗೆ ಹೋಗಿ "ನಿಮ್ಮ ಕಡೆಗೆ ಫಿರ್ಯಾದಿ [ದೂರು] ಹೇಳಲು ಬಂದಿರದೆ ನಡೆದ ಸಂಗತಿಯನ್ನು ನಿಮಗೆ ತಿಳುಹಿಸಿ ಹೋಗಲು ಬಂದಿರುವೆವೆಂದು ಹೇಳಿದೆವು. ಸಾಯಂಕಾಲಕ್ಕೆ ವ್ಯಾಯಾಮ ವಿದ್ಯಾಪೀಠದಲ್ಲಿ ಸಭೆ ಕರೆದು ನಿಜ ಸಂಗತಿಯನ್ನು ಜನರ ಮುಂದಿಟ್ಟೆವು.

ನಮ್ಮ ಶಕ್ತಿಯ ಪರೀಕ್ಷೆ ಮಾಡಬಹುದು.

ಇದು ಆ ಪ್ರಸಂಗದ ನಿಜವಾದ ಚಿತ್ರವು. ಇದರ ಮೇಲಿಂದ ಸೇವಾದಲದ ಸ್ವಯಂಸೇವಕರು ತ ಮುಸಲ್ಮಾನರನ್ನು ತಿರುಗಿ ಹೊಡೆಯಲು ಸಮರ್ಥರಾಗಿದ್ದರೆಂದು ಯಾರಿಗೂ ತಿಳಿಯುತ್ತದೆ. ಒಂದು ವೇಳೆ ತಿರುಗಿಹೊಡೆಯಲು ಸ್ವಯಂಸೇವಕರಿಗೆ ಅಪ್ಪಣೆ ದೊರೆತಿದ್ದರೆ ಆ ದಿವಸ ಎಷ್ಟೋ ದುರ್ಧರ ಪ್ರಸಂಗಗಳಾಗುತ್ತಿದ್ದವೆಂದು ನಾವು ನಿಃಸಂಶಯವಾಗಿ ಹೇಳಬಲ್ಲೆವು ನಮ್ಮ ಶಕ್ತಿಯ ಪರೀಕ್ಷೆ ಯನ್ನಾದರೂ ಕೊಡಲು ನಾವು ಸಿದ್ಧರಿರುವೆವು ಇಚ್ಛೆ ಇದ್ದವರು ತೆಗೆದುಕೊಳ್ಳಬಹುದು. ಆದರೆ ನಾವು ಕಾಂಗ್ರೆಸದ ಅನುಯಾಯಿಗಳಾದ್ದರಿಂದ ಶಾಂತತಾ ಪಾಲನೆ ಮಾಡುವ ಉದ್ದೇಶದಿಂದಲೇ ನಮ್ಮ ಸ್ವಯಂಸೇವಕರು ಬಡಿಸಿಕೊಂಡರು ಅವರಲ್ಲಿ ಶಕ್ತಿಯಿದ್ದಿಲ್ಲವೆಂತಲ್ಲ. ಪೋಲೀಸರ ಕಡೆಗೆ ದೂರು ಹೇಳುವದನ್ನು ಬಿಟ್ಟದ್ದರಲ್ಲಿಯೂ ನಮ್ಮ ಉದ್ದೇಶವು ಅದೇ ಪ್ರಕಾರದ್ದಿರುವದು. ಮುಸಲಮಾನರೂ ನಮ್ಮ ಬಾಂಧವರೇ ಆದ್ದರಿಂದ ಅವರು ಒಂದು ವೇಳೆ ಅವಿಚಾರದ ಕೃತ್ಯವನ್ನು ಮಾಡಿದರೂ ಪುನಃ ನಾವೂ ಸಹ ಅದೇ ತಪ್ಪನ್ನು ಮಾಡಬಾರದೆಂತಲೂ ಮತ್ತು ಹಾಗೆ ಮಾಡುವದರಿಂದ ಹಿಂದೂ ಮುಸಲಮಾನರಲ್ಲಿ ಬ್ರಾತೃಭಾವವುಂಟಾಗುವದರ ಬದಲಾಗಿ ದ್ವೇಷವೇ ಹೆಚ್ಚಾಗುವದೆಂದು ಆ ವಿಷಯವನ್ನು ಪೋಲೀಸರ ಕಡೆಗೆ ಕೊಡದೆ ಮುಚ್ಚಿಬಿಟ್ಟೆವು ನಮ್ಮ ಕರುಣಾರು ಕ್ಷಮೆ ಬೇಡಿಕೊಂಡ ಮೇಲೆಯೂ ಹೊಡೆದದ್ದನ್ನು ನೋಡಿದ ಮುಸಲಮಾನರ ಅವಿಚಾರದ ವರ್ತನವು ಸಣ್ಣ ಹುಡುಗನಿಗೂ ಕೂಡ ಹೇಳಿಯುವದು ಅದರೂ ಕೂಡ ನಾವು ಅದೇ ದಿವಸ ಸಾಯಂಕಾಲದಲ್ಲಿ ಕೂಡಿದ ಸಭೆಯಲ್ಲಿ ಅವರನ್ನು ಎಲ್ಲರ ಮುಂದೆ ಕ್ಷಮಿಸಿದೆವು ಮುಸಲಮಾನರು ತಮ್ಮ ಅವಿಚಾರದ ಕೃತ್ಯಕ್ಕಾಗಿ ಕ್ಷಮೆ ಬೇಡಬೇಕೆಂದು ಸೇವಾದಲವು ಇಚ್ಛಿಸುವದಿಲ್ಲ. ಯಾಕೆಂದರೆ ಅವರಿಂದಾಗುವದೇನು? ಆ ಕಾರ್ಯವನ್ನು ಮಾಡುವದಕ್ಕೆ ಪರಮಾತ್ಮನು ಸಮರ್ಥನಿರುವನು.

ಸಿಂಧ ಗುಜರಾಥ ರೇಲ್ವೆ.

—(೦)—

ಮುಂಬಯಿಯಿಂದ ಸಿಂಧ ಪ್ರಾಂತಕ್ಕೆ ಬಿಕಾನೇರ ಮಾರ್ಗವಾಗಿ ಹೋಗಬೇಕಾಗುತ್ತದೆ ಇದು ಕೊಂಕಣ ಸುತ್ತಿ ಮೈಲಾರಕ್ಕೆ ಹೋಗ ವಂತಿದೆ. ಆದ್ದರಿಂದ ವಿರಮಗಾಮಿನಿಂದ ಬಾಡಿನಕ್ಕೆ ೩೫೦ ಮೈಲುಗಳ ರೇಲ್ವೆ ಹಾಕಿಸಿ, ಸಿಂಧವನ್ನು ಸನಿಯಮಾಡಬೇಕೆಂದು ರೇಲ್ವೆ ಬೋರ್ಡಿನವರು ನಿಶ್ಚಯಿಸಿದ್ದಾರೆ. ಮುಂದಿನ ವರ್ಷದಲ್ಲಿ ಕಾಮಗಾರಿ ಪ್ರಾರಂಭವಾಗಿ ಮೂರೇ ವರ್ಷಗಳಲ್ಲಿ ಬಂಧಿಗಳ ಪ್ರಯಾಣಕ್ಕೆ ತೆರವು ಸರಕಾರದವರು ಈ ರೀತಿಯಾಗಿ ಸಿಂಧವನ್ನು ಸನಿಯಮಾಡಿಕೊಳ್ಳುವಾಗ ಮಂಗಳೂರ ಕಾರವಾರವನ್ನು ಧಾರವಾಡ ಬೆಳಗಾವಿಗೆ ಸನಿಯಮಾಡುವದು ಇಷ್ಟವಾಗಿರುತ್ತದೆ.

ಸರಧಾರ ಶಿವಲಿಂಗಪ್ಪನವರಿಗೆ ಸಸ್ಪಂಡು.

——(೦)——

ಸರದಾರ ಶಿವಲಿಂಗಪ್ಪನವರು ಹೋದ ವರ್ಷ ಒಂದು ಕುಸ್ತಿಯಿಂದ ಪಾರಾದರು. ಆದರೆ ಸ್ವಲ್ಪ ದಿವಸಗಳಲ್ಲಿಯೇ ಮತ್ತೊಂದು ಪ್ರಕರಣವೆದ್ದಿತು. ಇದರ ವಿಚಾರಣೆಯು ಸಬ್ಬಾರು ತಿಂಗಳಿಂದ ಗುಪ್ತ ರೀತಿಯಿಂದ ಮತ್ತು ಸರಕಾರೀ ರೀತಿಯಿಂದ ನಡೆಯಿತು. ಇವರ ಮೇಲೆ ಕೇಸ ನಡಿಸಲು ಸಾಕಷ್ಟು ಪುರಾವೆಯುಂಟೆಂದು ಕಂಡುಬಂದದ್ದರಿಂದ, ಈಗ ಇವರ ಮೇಲೆ ಇಲ್ಲಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಮುಂದೆ ಫಿರ್ಯಾದಿ ದಾಖಲ್ಲಾಗಿದೆ. ಈ ಫಿರ್ಯಾದಿ ಪ್ರಕಾರ ಶಿವಲಿಂಗಪ್ಪನವರಿಗೆ ಸಸ್ಪಂಡಿಸ ಹುಕುಮು ಹೋಗಿರುವದೆಂದು ತಿಳಿಯುತ್ತದೆ. ಆರೋಪವು ಮುಬಯಿಯಲ್ಲಿ ಲಂಚ ತಕ್ಕೊಂಡರೆಂದಿರುತ್ತದೆ.

——

ಬ್ರಾಹ್ಮಣ ಮುಸಲಮಾನ ಪೈಲವಾನರಿಗೆ ಜಂಗೀ ಕುಸ್ತಿಯು.

—(೦)—

ನೆ ಬ್ಲಾಪೂ ದಲ್ಲಿ ಅಕ್ಕಲಕೋಟೆಯ ಬ್ರಾಹ್ಮಣ ಜಟ್ಟಿ ನರಸಿಂಹ ಕುಲಕರ್ಣಿ ಎಂಬವನಿಗೂ, ದಿಲ್ಲಿಯ ಒಬ್ಬ ಮುಸಲಮಾನ ಪೈಲವಾನನಿಗೂ ಜರುಗಿದ ಕುಸ್ತಿಯಾಯಿತು. ಕುಸ್ತಿಯನ್ನು ನೋಡಲಿಕ್ಕೆ ಕಲೆಕ್ಟರ, ಜಡ್ಜ ಮೊದಲಾದ ಅಮಲದಾರರೂ ಊರೊಳಗಿನ ಪ್ರಮುಖರೆಲ್ಲರೂ ಹೋಗಿದ್ದರು. ಟಿಕೀಟು ಇಟ್ಟು ಕುಸ್ತಿಯಾಯಿತು. ಟಿಕೀಟು ಇಲ್ಲದೆ ಸಾವಿರಾರು ಜನರು ಕಣದ ಹೊರಗೆ ನಿಂತರು. ಕುಸ್ತಿಯು ೩೦ ಮಿನಿಟುಗಳಲ್ಲಿ ಮುಗಿಯಿತು. ಮುಸಲಮಾನ ಪೈಲವಾನನು ಅಲ್ಲಾ ಹೋ ಅಕಬರನೆಂದು ಗರ್ಜನೆಮಾಡುತ್ತ ಬಂದನು. ಆಗ ನೆರೆದ ಹಿಂದೂ ಜನರು ಬಜರಂಗಕಿ (ಹನುಮಂತದೇವರು) ಜಯವೆಂದು ಜಯ ಘೋಷಮಾಡಿದರು. ನರಸಿಂಹನು ಏಳು ನಿಮಿಷಗಳಲ್ಲಿ ಪ್ರತಿಪಕ್ಷಿಯನ್ನು ಕೆಡವಿದನು. ಕೆಡವಿದ್ದು ಕಾಲು ಗೆರೆಯ ಹೊರಗೆ ಆಯಿತು. ಆದ್ದರಿಂದ ಪುನಃ ಕುಸ್ತಿ ಹಿಡಿಸಿದರು. ಈ ಸಾರೆಯೂ ನರಸಿಂಹನೇ ಗೆದ್ದನು. ಇದೂ ಸಹ ಕಣದ ಹೊರಗೇ ಆಯಿತು. ಹೀಗೆ ಸೋಲು ಗೆಲುವಿನ ದೆಸೆಯಿಂದ ಮತಭೇದವಾಯಿತು. ಕುಸ್ತಿಗೆ ನಾಯ ಕರಾಗಿ ಇದ್ದವರು ಇತ್ತ ಪಂಚರು ನರಸಿಂಹ ಕುಲಕರ್ಣಿಯು ಗೆದ್ದನೆಂದು ಅಭಿಪ್ರಾಯಪಟ್ಟು ಈತನಿಗೆ ೬೦ ರೂಪಾಯಿ ಮತ್ತು ದಿಲ್ಲಿಯ ಪೈಲವಾನನಿಗೆ ಪೂರಾ ಸೋಲಲಿಲ್ಲೆಂದು ೪೦ ರೂಪಾಯಿ ಕೊಟ್ಟರು. ಹಿಂದೂ ಜನರು ನರಸಿಂಹನ ಜಯ ಜಯಕಾರ ಮಾಡಿ, ಆತನ ಮೆರವಣಿಗೆ ತೆಗೆದರು. ಮುಸಲಮಾನರು ಅಲ್ಲಾಹೋಅಕಬರನೆನ್ನಲಿಲ್ಲ. ಮತ್ತು ಮೆರವಣಿಗೆ ಯನ್ನೂ ತೆಗೆಯಲಿಲ್ಲ. ಈ ರೀತಿಯಿಂದ ಅವರು ಸೋಲು ಒಪ್ಪಿದಂತಾಯಿತು.

——

ತುಮಕೂರಲ್ಲಿ ಡಾಕ್ಟರ ಹರ್ಡೀಕರರ ಬಾಯಿ ಬಂದು ಮಾಡಿದ್ದರ ವಿಚಾರಣೆ ಮತ್ತು ತೀರ್ಪು

—(೦)—

ತುಮಕೂರಲ್ಲಿ ಹಿಂದುಸ್ಥಾನೀ ಸೇವಾದಲದ ಸಮಾರ ಭವಾಗುವಾಗ ಅಲ್ಲಿಯ ಪೋಲೀಸರ ರಿಪೋರ್ಟಿನ ಮೇರೆಗೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಡಾಕ್ಟರ ಹರ್ಡೀಕರರಿಗೆ ಗಳಗನೇ ಕಳುಹಿಸ ಹುಕುಮು ಮಾಡಿ ಸಭೆಯಲ್ಲಿ ಮಾತಾಡಬಾರದೆಂಬ ಹುಕುಮು ಮಾಡಿದರು. ಇದರ ಮೇಲೆ ಮೈಸೂರಿನ ಚೀಫ ಕೋರ್ಟಿಗೆ ಅಪೀಲು ಮಾಡಲ್ಪಟ್ಟಿತು. ಚೀಫ ಕೋರ್ಟಿನವರು ಡಾಕ್ಟರರಿಗೆ ಅನುಕೂಲವಾಗಿ ತೀರ್ಪು ಹೇಳಿದ್ದಾರೆ. ಅದರ ಸಾರಾಂಶವು ಕೆಳಗಿನಂತೆ ಕಾಣುತ್ತಿರುತ್ತದೆ.

ಒರೇ ಪೋಲೀಸರ ರಿಪೋರ್ಟಿನಿಂದ ಏಕಪಕ್ಷೀಯವಾಗಿ ಒಬ್ಬರ ಮೇಲೆ ಹುಕುಮ ನಡಿಸುವದು ಸರಿಯಲ್ಲ. ಹುಕುಮು ಕೊಡುವ ಪೂರ್ವದಲ್ಲಿ ನಿಜವಾಗಿ ಶಾಂತತಾಭಂಗವಾಗುವದೇ ಎಂಬ ವಿಷಯವಾಗಿ ಮ್ಯಾಜಿಸ್ಟ್ರೇಟರು ಸ್ವತಃ ವಿಚಾರಮಾಡಿ ತಿಳಕೊಳ್ಳತಕ್ಕದ್ದು. ಎರಡನೇ ಪಕ್ಷದ ಹೇಳಿಕೆಯನ್ನು ಕೇಳಿಕೊಂಡು, ಆ ಹೇಳಿಕೆಯನ್ನು ನಿರಾಕರಿಸಲಿಕ್ಕೆ ಉಂಟಾದ ಕಾರಣಗಳನ್ನು ಬರೆದಿಡತಕ್ಕದ್ದು. ಡಾಕ್ಟರ ಹರ್ಡೀಕರರ ಭಾಷಣದಿಂದ ಸಾರ್ವಜನಿಕ ಶಾಂತತೆಯು ಭಂಗವಾಗುತ್ತದೆಂದು ಬರೇ ಅಂಜಿಕೊಳ್ಳುವದು, ವ್ಯಾಖ್ಯಾನ ಬಂದಿಗೆ ಹುಕುಮು ಕೊಡಲು ಕಾರಣವಾಗುವದಿಲ್ಲ.

——

ನಾಗಪೂರದ ಮಂತ್ರಿಗಳಲ್ಲಿ ಅವಿಶ್ವಾಸ.

——(೦)——

ಬಟಲಪೂರದ ರಾಯ ಬಹಾದ್ದೂರ, ಪಂಡಿತ ಜ್ವಾಲಾಪ್ರಸಾದ ದೀಕ್ಷಿತರು ನಾಗಪೂರ ಇಲಾಖೆಯ ಮಂತ್ರಿಯಾಗಿದ್ದಾರಷ್ಟೇ, ಇವರಲ್ಲಿ ವಿಶ್ವಾಸವಿಲ್ಲೆಂಬ ಠರಾವು ತರಬೇಕೆಂಬ ವಿಷಯವಾಗಿ ವಿಚಾರ ಮಾಡಲು ಡಾಕ್ಟರ ಮುಂಜೆಯವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ, ಅಧ್ಯಕ್ಷರ ಕಾಸ್ಟಿಂಗ ವೋಟಿನಿಂದ ಈ ಠರಾವು ಪಾಸಾಯಿತು. ಈ ಸಭೆಯು ಅಕ್ರಮವಾದದ್ದು. ಸಾಕಷ್ಟು ಅವಕಾಶ ಕೊಟ್ಟು ನೋಟೀಸು ಕೊಟ್ಟಿದ್ದಿಲ್ಲೆಂದು ಕೆಲ ಮೆಂಬರರು ತಕರಾರು ತೆಗೆದರು. ಪುನಃ ಸಭೆ ಕೂಡಿಸಿದರು. ಇದರಲ್ಲಿ ವಿಶ್ವಾಸವಿಲ್ಲೆಂಬ ಠರಾವಿಗೆ ಅನುಕೂಲ ಮತ ಕೊಡಬೇಕೆಂಬುದು ಬಹುಮತದಿಂದ ನಾಪಾಸಾಯಿತು ಮತ್ತು ಮಂತ್ರಿಗಳ ಗದ್ದಿಗೆಯು ಗಟ್ಟಿಯಾಯಿತು.

ಹೆಂಗಸರ ವೇಷ ಹಾಕಿ ದರೋಡೆಗಾರರನ್ನು ಹಿಡಿದ ಪೋಲೀಸರು.

—(೦)—

ಕೊಯಮತ್ತೂರ ಜಿಲ್ಲೆಗೆ ಸೇರಿದ ಮಲ್ಲೂರ ಹತ್ತರ ಅದರ ನೆರೆಯ ಗ್ರಾಮಗಳಲ್ಲಿ ಕೊರವರು ವೈಶ್ಯರಂತೆ ನಟಿಸಿ, ಹಗಲು ವ್ಯಾಪಾರ ಮಾಡಿ, ರಾತ್ರಿಯಲ್ಲಿ ದರೋಡೆ ಹಾಕುತ್ತಿದ್ದರು. ಇವರನ್ನು ಹಿಡಿಯಲು ಪೋಲೀಸರು ಮಾಡಿದ ತರತರದ ಪ್ರಯತ್ನಗಳೆಲ್ಲ ವ್ಯರ್ಥವಾದವು. ಕೊನೆಯಲ್ಲಿ ಆ ವರು ಯುಕ್ತಿಮಾಡಿದರು. ೨೦ ಜನ ಸಿಪಾಯರು ಹೆಂಗಸರಂತೆ ಉಡಿಗೆ ತೊಡಿಗೆ ಮಾಡಿ ಮೈತುಂಬ ಒಡವೆ ಇಟ್ಟುಕೊಂಡು, ಆಡವಿ ಉಸುವಲ ಆರಿಸಲಿಕ್ಕೆ ಹೋದರು. ಅಲ್ಲಿ ಅಡಗಿಕೊಂಡಿದ್ದ ದರೋಡೆಗಾರರು ಇವರೆಲ್ಲರೂ ಹೆಂಗಸರು, ಸಂಗಡ ಯಾರೂ ಗಂಡಸರಿಲ್ಲ. ಇವರನ್ನು ಸುಲಿಯಬೇಕೆಂದು ಹೊಂಚು ಹಾಕಿದರು. ದರೋಡೆಗಾರರನ್ನು ಕಂಡು, ಅವರ ಸ್ವಭಾವಕ್ಕೆ ಸಿಗುವಂತೆ ಪೋಲೀಸರು ಮುಂದೆ ಸಾಗಿದರು. ದರೋಡೆಗಾರರು ಹುಲಿಯಂತೆ ಹತ್ತರ ಬಂದ ಕೂಡಲೆ ಪೋಲೀಸರು ತಮ್ಮ ಮೂಲರೂಪ ಪ್ರಕಟಿಸಿ ದಿಮಸಕ್ಕನೆ ಅವರನ್ನು ಹಿಡಿಯುವಂತೆ ಹಿಡಿದರು. ದರೋಡೆಗಾರರ ಹತ್ತರ ಆಯುಧಗಳಿದ್ದರೂ ಆವರೆ ಪೋಲೀಸರ ಕಲ್ಪನೆ ಪೂರ್ಣ ಹೊಳೆದ್ದರಿಂದ, ಅಬಲರಾಗಿ, ಕೈಸೆರೆಯಾಗಿ ಸಿಕ್ಕಿಕೊಳ್ಳುತ್ತಿದ್ದಾರೆ.

——

ಆಸಿಬಿಸ್ಸೂಲಿಟನ್ನನವರ ದಾನಾಪಾತು.

—)(|)'೦)(|)(—

ಆಸಿಬಿಸ್ಸೂಲಿಟನ್ನನವರು ಆಸ್ಟ್ರೇಲಿಯಾ ದೇಶದಲ್ಲಿ ಕೆಂಪುಬಣ್ಣದ ಜನರ ದೆಸೆಯಿಂದಲೇ ಒಂದು ಮಠ ಸ್ಥಾಪಿಸಿದರು. ಇಲ್ಲಿ ಕೆಂಬಣ್ಣದವರಲ್ಲದ ಯಾವ ಪ್ರವಾಸಿಕರಿಗೆ ಆಶ್ರಯ ಕೊಡುವದಿಲ್ಲ. ಉಷ್ಣ ಪ್ರದೇಶದವರಿಗೆ ಮಾತ್ರ ಸ್ಥಳ ಕೊಡುವರು. ಮುಖ್ಯವಾಗಿ ಹಣ್ಣು ಹಂಪಲ ಬೆಳೆದು, ಅವರನ್ನು ಉತ್ತಮ ವರ್ಗದ ತೋಟಿಗರಾಗಿ ಮಾಡುವರು.

——

ವಿವಿಧ ವರ್ತಮಾನಗಳು.

ಮುಂಬಯಿಯಲ್ಲಿ ಫೆಡರಲ್ ಕಂಪನಿಯು ಅದಕೆಯ ವ್ಯಾಪಾರಕ್ಕೆ ಬೆಂಕಿ ಹತ್ತಿ, ಎರಡು ಲಕ್ಷದ ಹಾನಿಯಾಯಿತು.

——

ಇಂಗ್ರೇಜಿ ಸರಕಾರದವರು ಕಾಬೂಲ ಯುದ್ಧದಲ್ಲಿ ನಾದಿರಖಾನನಿಗೆ ಸಹಾಯಮಾಡುತ್ತಾರೆಂಬ ಸುದ್ದಿಯು ನಿರಾಧಾರವಾದದ್ದು. ಸರಕಾರವು

ವಿಜಯ

ಕನ್ನಡ ದಿನ ಪತ್ರಿಕೆ

ಧಾರವಾಡ.	ರವಿವಾರ ತಾರೀಖು	೧ನೇ	ಸಪ್ಟೆಂಬರ	೧೯೧೮	ಇದೆ
	ಸೋಮವಾರ	೨ನೇ	"	"	"
	ಮಂಗಳವಾರ	೩ನೇ	"	"	ಇಲ್ಲ
	ಬುಧವಾರ	೪ನೇ	"	"	ಇದೆ
	ಗುರುವಾರ	೫ನೇ	"	"	"
	ಶುಕ್ರವಾರ	೬ನೇ	"	"	"
	ಶನಿವಾರ	೭ನೇ	"	"	"
	ರವಿವಾರ	೮ನೇ	"	"	ಇಲ್ಲ
	ಸೋಮವಾರ	೯ನೇ	"	"	ಇದೆ
	ಮಂಗಳವಾರ	೧೦ನೇ	"	"	ಇಲ್ಲ
	ಬುಧವಾರ	೧೧ನೇ	"	"	ಇದೆ
	ಗುರುವಾರ	೧೨ನೇ	"	"	"
	ಶುಕ್ರವಾರ	೧೩ನೇ	"	"	"
	ಶನಿವಾರ	೧೪ನೇ	"	"	"
	ರವಿವಾರ	೧೫ನೇ	"	"	"
	ಸೋಮವಾರ	೧೬ನೇ	"	"	"
	ಮಂಗಳವಾರ	೧೭ನೇ	"	"	ಇಲ್ಲ
	ಬುಧವಾರ	೧೮ನೇ	"	"	"
	ಗುರುವಾರ	೧೯ನೇ	"	"	ಇದೆ
	ಶುಕ್ರವಾರ	೨೦ನೇ	"	"	"
	ಶನಿವಾರ	೨೧ನೇ	"	"	"
	ರವಿವಾರ	೨೨ನೇ	"	"	"
	ಸೋಮವಾರ	೨೩ನೇ	"	"	"
	ಮಂಗಳವಾರ	೨೪ನೇ	"	"	ಇಲ್ಲ
	ಬುಧವಾರ	೨೫ನೇ	"	"	ಇಲ್ಲ
	ಗುರುವಾರ	೨೬ನೇ	"	"	"
	ಶುಕ್ರವಾರ	೨೭ನೇ	"	"	ಇಲ್ಲ
	ಶನಿವಾರ	೨೮ನೇ	"	"	"
	ರವಿವಾರ	೨೯ನೇ	"	"	ಇದೆ
	ಸೋಮವಾರ	೩೦ನೇ	"	"	✓

WANTED

An experienced qualified Midwife on a salary of Rs. 30-2-50 p. m. Candidates should apply to the undersigned on or before the 30th September 1929, with copies of testimonials. Preference will be given to Kanarese knowing candidates.

M. C. SHETTAR.
president, Byadgi Municipality.
Municipal Office Byadgi
Dated 26th, August 1929.

ನೋಟೀಸು

ರಾ| ಹಣಮಂತಪ್ಪಾ ತಂದಿ ರಾಮಪ್ಪಾ ಭೂಮಣ್ಣವರ ಸಾ|| ಬಲ್ಲರವಾಡ ಹಾಲಿ ವಸ್ತಿ ಹುಬ್ಬಳ್ಳಿ ಪೈಕಿ ಹಳೇಹುಬ್ಬಳ್ಳಿ ನಾರಾಯಣ ರಾವ ಗಿರಣಿ ಇವರ ತೋಟದಲ್ಲಿ ತಾಲ್ಲೂಕ ಹುಬ್ಬಳ್ಳಿ ಇವನಿಗೆ-

ಯಲ್ಲಪ್ಪಾ ತಂದಿ ಯಲ್ಲಪ್ಪಾ ಭೂಮಣ್ಣವರ ಸಾ|| ಬಲ್ಲರವಾಡ ತಾಲ್ಲೂಕ ನವಲಗುಂದ ಹಾಲಿ ಮುಕ್ಕಾಂ ಹೊಸಹುಬ್ಬಳ್ಳಿ ಪೈಕಿ ಯಲ್ಲಾಪೂರ ನಾನು ಕೊಡುವ ನೋಟೀಸು ಏನಂದರೆ-

ನಿನ್ನ ಹೆಸರಿನ ಆಜಮಾಸ ೮೧೦ ವರ್ಷದ ಕೆಳಗೆ ಒಂದು ವೃತ್ತಿ ಪತ್ರ ನನ್ನ ಪಶ್ಚಾತ್ತ ನವಲಗುಂದ ತಾಲೂಕ ಪೈಕಿ ಬಲ್ಲರವಾಡ ಗ್ರಾಮದಲ್ಲಿರುವ ಸರಕಾರಿ ಜಮೀನುಗಳು ವ ಸದರ ಗ್ರಾಮದಲ್ಲಿರುವ ಮಾಳಗಿ ಮನಿ ವ ಟಿಕ್ಕಲಾ ವಗೈರೆಕ್ಕೆ ನೀನು ಮಾಲೀಕಳು ಅಂತಾ ಬರಕೊಟ್ಟು ಸದರ ವೃತ್ತಿ ಲೇಖವನ್ನು ನವಲಗುಂದ ತಾಲೂಕ ಸಬ್ಬರಜಿಸ್ಟ್ರಾರ ಕಚೇರಿಯಲ್ಲಿ ನೋಂದಣಿ ಸಹಾ ಮಾಡಿಸಿ ಕೊಟ್ಟಿರುತ್ತೇನೆ ಅಷ್ಟೇ

ಆದರೆ ನೀನು ನನ್ನ ಸಂರಕ್ಷಣೆ ಮಾಡದ ಕಾರಣ ನಾನು ನನ್ನ ಮಗಳ ಗಂಡನ ಮನೆಯಲ್ಲಿ ನನ್ನ ಮಗಳಿಂದ ರಕ್ಷಣೆ ಆಗುತ್ತಾ ಇರುತ್ತೇನೆ. ಆದರೆ ನಾನು ನನ್ನ ಮಗಳಾದ ಆಡಿವೆವ್ವನ ಹೆಸರಿಗೆ ಒಂದು ವೃತ್ತಿ ಪತ್ರ ಇವತ್ತಿನ ದಿವಸ ನನ್ನ ಪ... ನನ್ನ ಮಾ... ...ಟಿವುಳ್ಳ ಸರಕಾರಿ ...ಯುವ ಮಾಳಗಿ ...ನಿಗೆ ನನ್ನ ಪ... ...ಅಂತಾ ಒಂದು ...ಕೊಡುತ್ತೇನೆ ಆದರೆ ...ಪತ್ರ ಇವತ್ತಿನ ದಿವಸ ರಜಿಸ್ಟರ ಮಾಡಿಸುತ್ತೇನೆ ಅಂತ ನಾನು ನನ್ನ ರಾಜಿಯಿಂದ ವ ಹುಷಾರಿಯಿಂದ ಬರಕೊಟ್ಟ ನೋಟೀಸ ಸಹಿ ತಾರೀಖು ೩೯ನೇ ಅಗಷ್ಟ ೧೯೨೯ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಯಲ್ಲಪ್ಪಾ ತಂದಿ ಯಲ್ಲಪ್ಪಾ ಭೂಮಣ್ಣವರ ಈತಂದು ಆದೆ

ನೋಟೀಸು

ರಾ|| ಬಸಪ್ಪಾ ಮಾರಪ್ಪಾ ಮಾಯಣ್ಣನವರ ಸಾ|| ಸವದತ್ತಿ ತಾ|| ಪರಸಗಡ ಇವನಿಗೆ-

ಕೆಳಗೆ ಗುರ್ತು ಮಾಡಿದವಳಿಂದ ತಿಳಿಸೋದೇನಂದರೆ- ನನ್ನ ತಾಯಿಗೆ ಗಂಡುಮಕ್ಕಳು ಇಲ್ಲದ್ದರಿಂದ ನೀನು ಆಕೆ ಮನಿಯಲ್ಲಿ ಇದ್ದು ಮನಿತನ ನಡಿಸಬೇಕು ತನ್ನ ಖರ್ಚಿನಿಂದ ನನ್ನನ್ನು ನಿನಗೆ ಲಗ್ನ ಮಾಡಬೇಕು ಎಂಬಂತೆ ನಾಲ್ಕು ಜನರ ಸಮಕ್ಷಮ ಕರಾರ ಆಯಿತು ಆದಕ್ಕೆ ನೀನು ಒಪ್ಪಿಕೊಂಡಿ ೨ ವರ್ಷದ ಹಿಂದೆ ಲಗ್ನಕ್ಕೆ ತನ್ನ ಜೋಳ ೪೦೦ ರೂಪಾಯಿಗೆ ಮಾರಿ ಖರೀದಿ ಕೊಟ್ಟು ನನ್ನನ್ನು ನಿನಗೆ ಲಗ್ನ ಮಾಡಿದಳು ನೀನು ಮನಿಯಲ್ಲಿ ಇದ್ದಿ ನನ್ನ ತಾಯಿ ತನ್ನ ದಾಗೀನೆಗಳು-

೧ ಭಂಗಾರದ ಬಳಿ ಜೋಡ ೧ ತೊಲಿ ೪ ೨ ಭಂಗಾರದ ಗುಂಡಿನ ಟೀಕಿ ೧ ತೊಲಿ ೧|| ೩ ಮೂಗುತಿ ೧|| ತೊಲಿ ೪ ಬೆಳ್ಳಿ ತೋಳಬಂದಿ ಜೋಡ ೧ ತೊಲಿ ೨೪ ೫ ಬೆಳ್ಳಿ ಪಟ್ಟಿ ಒಂದು ತೊಲಿ ೧೨ ಈ ಪ್ರಕಾರ ಇಡಿಸಿದ್ದಳು ನೀನು ಕರಾರ ಪ್ರಕಾರ ನಡೆದು ಚನ್ನಾಗಿ ಬಾಳ್ವೆ ಮಾಡಲಿಲ್ಲ ನೀನು ದುರ್ವ್ಯಸನಕ್ಕೆ ಬಿದ್ದು ಘಟಿಂಗತನ ಮಾಡಹತ್ತಿದಿ ಈಗ ೩ ತಿಂಗಳ ಹಿಂದೆ ೧ ಸಣ್ಣ ಫಕೀರಾ ದ್ಯಾಮಣ್ಣಾ ಕಾಳಗಿ ದೊಡ್ಡ ಫಕೀರಾ ಲೋಕಪ್ಪಾ ಕಾಳಗಿ ೩ ಮಾಯಪ್ಪಾ ಮಾಯಣ್ಣವರ ೪ ಗಡಿಗೆಪ್ಪಾ ಹೊಸಮನಿ ೫ ಉಟ್ಟಪ್ಪಾ ಸಣ್ಣಪ್ಪಾ ಉಟ್ಟಣವರ ೬ ಬಾಳಪ್ಪಾ ಆರ್ಯಪ್ಪ ತಂಗಡಗಿ ವಗೈರೆ ಇವರ ಶಿಫಾರಸಿ ಮೇಲಿಂದ ನನಗೆ ನನ್ನ ತಾಯಿಗೆ ವೈಮನಸ ಬರದಿ ಆಗ್ಯೆ ನನ್ನ ಕಡೆ ಇದ್ರೆ ನಮ್ಮ ಗತಿ ಏನಾಗತಿತ್ತೋ ತಿಳಿಯದು ನೀನು ದಾಂಡಗಾಯಿಯಿಂದಾ ನನ್ನ ಮೈ ಮೇಲಿನ ಮೇಲೆ ಬರೆದ ದಾಗೀನೆಗಳನ್ನು ಕಸಗೊಂಡು ಹೋದಿ ಈಗ ಎಂಟನೇದಿನದಲ್ಲಿ ಇದ್ದು ಹಾಳ ಮಾಡಲಿಕ್ಕೆ ಹತ್ತಿರುತ್ತಿ ಮನಿಗೆ ಬರಲಿಕ್ಕೆ ಕರೆದರೆ ಬರಲಿಲ್ಲ ಇದರ ಮೇಲಿಂದ ನಿನಗೆ ಬಾಳ್ವೆ ಮಾಡೋದು ಬ್ಯಾಡಾ ಹೀಗೆ ಕಂಡದ್ದರಿಂದ ಈ ನೋಟೀಸು ಕೊಟ್ಟಿರುತ್ತೇನೆ ಈ ನೋಟೀಸು ಮುಟ್ಟಿದ ೭ ದಿವಸದಲ್ಲಿ ನನ್ನ ತಾಯಿ ದಾಗೀನೆ ಕೊಟ್ಟು ಚನ್ನಾಗಿ ಬಾಳ್ವೆ ಮಾಡತಕ್ಕಂಥ ಯೋಗ್ಯ ಎರಡು ಜಾಮೀನು ಕೊಟ್ಟು ಮನಿಗೆ ಬಂದು ಇರಬೇಕು ಹಾಗೆ ಮಾಡದೆ ಇದ್ರೆ ಇದೇ ನೋಟಿಸಪತ್ರ ಅಂತ ತಿಳಿದು ನೀನು ಎರಡನೇದವನನ್ನು ಉಡಿಕಿ ಆಗುತೇನೆ ನನ್ನ ಮೇಲೆ ನಿನ್ನದು ಯಾವ ಪ್ರಕಾರದ ಮಾಲಕಿ ಹಕ್ಕು ಇಲ್ಲಾ ದಾಗೀನೆಗಳ ಬಗ್ಗೆ ಲಗ್ನದ ಖರ್ಚಿನ ೪೦೦ ರೂಪಾಯಿಗಳ ಬಗ್ಗೆ ನಿನ್ನ ಮೇಲೆ ದಾವೆ ವ ಖರ್ಚ ಸಹ ವಸೂಲ ಮಾಡತಕ್ಕದ್ದು ನೀನು ಮನಿಗೆ ಬಂದು ತಂಟೆ ಮಾಡಿದರೆ ದಾಂಡಗಾಯಿ ಮಾಡಿದರೆ ನಿನ್ನ ಮೇಲೆ ಫೌಜದಾರಿಯಲ್ಲಿ ಫಿರ್ಯಾದ ಮಾಡಲಾಗುವದು ಈ ನೋಟೀಸಿನ ಖರ್ಚ ನಿನ್ನ ಮೇಲೆ ಆದೆ ತಿಳಿಯೋದು

ತಾ|| ೨೮ ೮ ೧೯೨೯

ಈ ಎಡಗೈ ಹೆಬ್ಬಟ್ಟಿನ ಗುರ್ತ ಆಡಿವೆವ್ವಾ ಕೋಮ ಬಸಪ್ಪಾ ಮಾಯಣ್ಣವರ ಈಕಿ ಕೈದು ಆದೆ

ಪೀಪಲ್ಸ ಇಂಟರನ್ಯಾಶನಲ ಎಂಟ್ಯುಕೇಶನ ಕಾಮರ್ಸ ಲಿಮಿಟೆಡ ಪುಣೆ.

ಜಾಹೀರಾತು.

ಯಾವತ್ತು ಜನರಿಗೆ ತಿಳಿಸುವದೇನಂದರೆ ಕೆಳಗೆ ಬರೆದ ಕಂಪನಿಯವರು ೫೦ ರೂಪಾಯಿದಿಂದ ೫೦೦೦ ರೂಪಾಯಿ ವರೆಗೆ ಸಾಲಾ ಕೊಡತಕ್ಕ ಸೋಯಿ ಮಾಡಿರತಾರೆ. ವ್ಯಾಜದರ ಸಾಲು ದರ ಶೇಕಡಾ ೧ ರೂಪಾಯಿದಂತೆ ಠರಾವ ಮಾಡಿರತಾರೆ ಆದರೆ ಬೇಕಾದವರು ಕೆಳಗೆ ಬರೆದ ಪತ್ತೇದವರ ಕಡೆ ಸಮಕ್ಷಮ ಭೆಟ್ಟಿ ಆಗಬಹುದು. ಅಥವಾ ಪತ್ರವ್ಯವಹಾರ ಮಾಡಬಹುದು. ಏಜಂಟರ ಪಗಾರ ಮತ್ತು ಕಮಿಶನದ ಮೇಲೆ ಬೇಕಾಗಿರತಾರೆ.

ಆರ್ಗನಾಯಿಜಿಂಗ ಸೆಕ್ರೆಟರಿ,
ಆಫೀಸ ಹುಬ್ಬಳ್ಳಿ.
ಅಥವಾ
ಕೆ. ಜಿ. ಜೋಗಳೇಕರ,
ಮಾಳಮಡ್ಡಿ, ಧಾರವಾಡ.

ಕರ್ನಾಟಕದ ದೆಸೆಯಿಂದ ಸೆಂಟ್ರಲ ಆರ್ಗನಾಯಿಜಿಂಗ ಏಜನ್ಸಿ- ದತ್ತವಿಲ್ಡಿಂಗ ಮಿಲ ಹುಬ್ಬಳ್ಳಿ ಹಾಸ್ಪಿಟಲ ರೋಡ.

ಚಂದಾದಾರರಿಗೆ ಸೂಚನೆ

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಪತ್ರದ ಚಂದಾದಾರರ ಕಡೆಯಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

A3

R. N. B. 1443

ವಿಜಯ

ದೈನಿಕ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅನಂತ ಆಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಬುಧವಾರ ತಾರೀಖು ೧ ನೇ ಸಪ್ಟಂಬರ ೧೯೩೯ (ಸಂಚಿಕೆ ೧೯೪

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರಿಂದ ೧೦ ರವರೆಗೆ ಶನಿವಾರ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯುತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪುಕ್ಕಟೆಯಾಗಿ ತೆರೆಯಲ್ಪಡುವವು

ಮುದತಿ ಠೇವುಗಳು:— ಒಪ್ಪಂದದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩|| ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩|| ರೂ.

ಸೇವಿಂಗ್ಸ ಬ್ಯಾಂಕ:— ಒಪ್ಪಂದದಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ ಸಾಲಗಳು.

ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡಿದರ ೬ ರೂ. ಸುಲಭ ಕಿಸ್ತಿಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡತಕ್ಕವದನ್ನು ಒದಗಿಸಿ ಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲು ಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೊಖಡಾ ಉದರಿ ಕೊಡಲ್ಪಡುವವು

ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಜಕ್ಕ ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಇವರಿಗೆ ಹೆಚ್ಚಿನ ಸವಲತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ ಮೊಕದ್ದಮಾ ಪತ್ರಗಳೂ ಸದರಿ ಬ್ಯಾಂಕದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ ತಾ|| ೧೭-೩-೩೮ — ಡಿ. ಡೊನೆಲಿ, ಏಜಂಟರು

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ- ಮಂಗಳವಾರಪೇಟೆ, ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿದರದಿಂದ ತ್ವರಿತ ಮತ್ತು ಬಹಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸಂಬಂಧ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಛಂಡಿವಾಡ.
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ ಬ್ಯಾಂಕ ಲಿಮಿಟೆಡ

ಸ್ಥಳ ಗುಳ್ಳಪ್ಪನ ಓಣಿ ಧಾರವಾಡ

ಕೋ ಆಪರೇಟಿವ್ ಕ್ರೆಡಿಟ್ ಸೊಸಾಯಿಟಿಯು ೧೯ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹಣದ ಕೆಲಸಗಳಲ್ಲಿ ಬ್ಯಾಂಕಿನ ವ್ಯವಹಾರಗಳಲ್ಲಿ ಶ್ರೇಷ್ಠವಾದ ಸ್ಥಾನ.

ಬೇರೆ ಬೇರೆ ಪ್ರಕಾರದ ಠೇವುಗಳು, ಬೇರೆ ಬೇರೆ ಬ್ಯಾಂಕಿನಲ್ಲಿ ನಡೆಯುವ ವ್ಯವಹಾರವು ನಡೆಯುವದು. ಸಾಲವು ಮತ್ತು ಬೇರೆ ದರದ ಪ್ರಕಾರ ಸಭಾಸದರಿಗೆ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕಛೇರಿಯಲ್ಲಿ ವಿಚಾರಿಸಿದರೆ ತಿಳಕೊಳಬೇಕು.

ಮಧ್ವರಾವ ಬಿ. ಕಾತಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಸಾವಿರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಿಟ್ಟು ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಒಡೆಯರು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೧-೯-೨೧ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಪ್ರಿಯ
ಶ್ರೀ ವಸುಮತಿಯ ವರಿಸಿ ಸುಹಿತಾಕರಿತೆಗಳಂ ತ
ದೀ "ವಿಜಯಂ" ಶ್ರೀಕರೆರುಣಾ
ನಾ ವಿಹಿತಂಗಳ ನಿವರಿಸಲಿಪ್ಪುದು ಸಾಜಂ. ॥೧॥

ಬೆಂಗಳೂರಿನ ಗಲಭೆಯ ಸಂಬಂಧವಾಗಿ
ಶ್ರೀಮನ್ಮಹಾರಾಜರ ಕರ್ತವ್ಯಕರ್ಮ.

ಬೆಂಗಳೂರಿನ ಗಲಭೆಯ ದ್ವಿತೀಯ ಪ್ರಕರಣದಲ್ಲಿ ಆರೋಪಿಗಳಾದವರ ಸಪ್ಪೆಯು ಇನ್ನೂ ರಕ್ಷೆ ಸಸಿಯುವಾಗಿದೆ. ಇವರ ಮೇಲಿನ ವಿಚಾರಣೆಗೆ ಪ್ರಾರಂಭವಾಗಿದ್ದು, ವಿಚಾರಣೆಯ ಕಾಲದಲ್ಲಿ ಪಿ.ರಕ ಅಥವಾ ಲಾಹೋರಿನಲ್ಲಿ ನಡೆಯುವಂಥ ಘೋಲಿಸರ ಅಧಿಕಪ್ರಸಂಗವೇ ನಡೆಯುತ್ತಿದೆ. ಇವರು ಪ್ರತಿಯೊಬ್ಬ ಆರೋಪಿ. ಪ್ಯಕಪಾಸ ಮಾಡಿ ಒಳಗೆ ಬರುವರು. ಅಗ ಆಗುವ ಆರೋಪಿಗಳ ಅಪಮಾನಕ್ಕೆ ಯಾರು ಹೊಣೆ ಸ್ಮ್ಮ!! ಘುಂಟಿತಾಕಿಯೇ.

ಆರೋಪಿಗಳಲ್ಲಿ ಬಹುತೇಕ ಜನರು ಅಲ್ಲಿಯ ಮುಂದಾಳುಗಳಾಗಿದ್ದಾರೆ. ಧಾರವಾಡದಲ್ಲಿ ಗುಂಡು ಹಾರಿದ ಪ್ರಕರಣದ ತಕ್ರಾರವೆಂದು ಆ ವಿಷಯವನ್ನು ನಾವು ಬರೆದಿರುವದು ವಾಚಕರ ಸ್ಮರಣದಲ್ಲಿರಬಹುದು. ಅದೇ ಪ್ರಕಾರ ಅಲ್ಲಿಯ ವಿದ್ಯಮಾನ ಸ್ಥಿತಿಯಾಗಿರುತ್ತದೆ. ದೇಶ ಹಿತ್ಯೈಷಿಗಳಾದಂಥ ಚಳವಳಿಗಾರರಲ್ಲಿ ಒಬ್ಬನನ್ನು ಬಿಡದೆ, ಹಿಡಿದು ಹಾಕಿದರೆ- ಚಳವಳಿಯು ಸತ್ತು ಹೋಗುವದೆಂದು ಪೋಲೀಸರೂ ಅಳಿಕರೂ ತಿಳಕೊಂಡಿದ್ದಾರೆ. ಅಳಿಕರಿಂದ- ಗೌರವಾಯಸ್ಥೆಂದೇ ತಿಳಿಯ ಕೂಡದು. ಅವರು ಕರೇ ಮೋರೆಯವರಿರಲಿ; ಕೆಂಪು ಮೋರೆಯವರಿರಲಿ; ಸಾದಗೆಂಪು ಮೋರೆಯವರಿರಲಿ; ಎಲ್ಲರೂ ಒಂದೇ ಸಂದೆಗಳಿಗ್ಗಿನ ಮಣಿಯು. ಸದ್ಯ ಬೆಂಗಳೂರಿನ ಸ್ತ್ರೀಪುರುಷರು ಮಧ್ಯವರ್ತಿಯಾಗಿ ನಿಲ್ಲುತ್ತಲಿದ್ದಾರೆ.

ಹಿಂದುಸ್ಥಾನದಲ್ಲಿಯ ಅಸಹಕಾರ ಚಳವಳಿಯನ್ನು ನಡಿಸುವವರು ಮಹಾತ್ಮರು. ಅದರ ಕೀರ್ತಿಯು, ಬಿಡುಗಡೆಯ ಹಾಗೆ ಒಂತೆಂದು ಕಷ್ಟ ಬೆನ್ನು ಕಾವೇ ಚಪ್ಪರಿಸಿಕೊಳ್ಳುವವರು ಅಲ್ಲದಿಸರ!! ಅಸಹಕಾರ ಮುಂದಿಧರೇನಾಯಿತು? ಸಂಪೂರ್ಣ ಸ್ವರಾಜ್ಯ ಸ್ವಾತಂತ್ರ್ಯದ ಚಳವಳಿಯು ತಲೆ ಹಾಕಿದೆ. ಕಳೆಕಳ್ಳಿಯು ಬದಲಾಗಿ ಅರೆತಲೆಕೂಳ್ಳಿ ಎದ್ದಂಥ ರೋಗ. ಹಿಂದುಸ್ಥಾನಕ್ಕೆ ಸ್ವರಾಜ್ಯ ಸಾಮ್ಯ ದೊರೆಯುವತನಕ, ಈ ಚಳವಳಿಯು ನಿಂದೂ ನಿಲ್ಲಲಾರದು. ದೇವರ ದಶಾವತಾರಗಳು ಬೇರೆ ಬೇರೆ ಸ್ವರೂಪಧಾರಣ ಮಾಡಿದಂತೆ ಸ್ವರಾಜ್ಯ ಚಳವಳಿಯು ವಿವಿಧ ರೂಪಧಾರಣ ಮಾಡುವದು. ಒಂದು ಅವತಾರ ಮುಗಿದು ಎರಡನೆಯ ಅವತಾರದ ಮಧ್ಯಕಾಲದಲ್ಲಿ ಮೊದಲನೇ ಅವತಾರವು ಪೂರ್ಣಲಯವಾಯಿತೆಂದು ತಿಳಿಯುವದು ಸಂಪೂರ್ಣ ಹುಚ್ಚತನವು.

ಹಿಂದುಸ್ಥಾನಕ್ಕೆ ಸಂಪೂರ್ಣ ಅಥವಾ ಸದ್ಯದಲ್ಲಿ ವಸಾಹತಿನ ಸ್ವರಾಜ್ಯ ದೊರೆಯುವತನಕ ಸ್ವರಾಜ್ಯವಿಷಯಕವಾದ ಚಳವಳಿಯು ಒಂದಿಲ್ಲೊಂದು ಪ್ರಕಾರದಿಂದ ನಡೆಯುವದು ಶತಸಿದ್ಧವಾದ ಮಾತು. ಈ ಸ್ವರಾಜ್ಯದ ಆಂದೋಲನದಲ್ಲಿ ಮೈಸೂರು, ಹೈದರಾಬಾದ ಮೊದಲಾದ ಸಂಸ್ಥಾನಗಳು ಬೇರೆಯಾಗಿರುವೆಂದು ಸರನಾ ಭಾವಿಸತಕ್ಕದ್ದಲ್ಲ. ಪರಿಕ್ಷಂದನು ವಿಶ್ವಾಮಿತ್ರನಿಗೆ ದಾನ ಕೊಡುವಾಗ- ಅಯೋಧ್ಯೆಯು ಸ್ವತಂತ್ರವಾಗಿರುತ್ತದೆಂದು ಹೇಳಿದಂತೆ ಮೈಸೂರು ಸ್ವರಾಜ್ಯದಿಂದ ಸ್ವತಂತ್ರವಾಗಿರಲಾರದು. ಈ ಸಂಗತಿಯು ಮೈಸೂರಿನ ಆಳರಸರಿಗೆ ಮನವರಿಕೆಯಾಗಿಲ್ಲವೆಂಟು. ಇಂದಿರಾ, ದಬ್ಬಾಳಿಕೆಯ ವಿರಾಟಸ್ವರೂಪ ಮಾಡಿ, ರಾಷ್ಟ್ರೀಯ ಮಹತ್ವಾಕಾಂಕ್ಷೆಯನ್ನು ದತ್ತೆತ್ತಬೇಕೆಂದಿದ್ದಾರೆ.

ಬೆಂಗಳೂರ ದಂಗೆಯ ವಿಚಾರಣೆಯು ಹೇಗೇ ಆಗಲಿ; ಮುಂದೆ ಸ್ವರಾಜ್ಯದ ವಿಚಾರವು ಹೇಗೇ ಇರಲಿ; ಪ್ರಸ್ತುತದಲ್ಲಿ ಮಹಾರಾಜರು ಈ ದಂಗೆಯನ್ನು ಹುಟ್ಟಗೊಡಿಸತಕ್ಕದ್ದಲ್ಲ. ಅವರು ಸಂಪೂರ್ಣ ಪ್ರಜಾ ವಾತ್ಸಲ್ಯವುಳ್ಳವರಾಗಿ, ಇದನ್ನು ಅಲ್ಲಿಂದಲ್ಲೇ ಸಮಾಧಿಸತಕ್ಕದ್ದು. ಕಾನಪೂರದ ಮಸೀದಿ ದಂಗೆಯ ವೇಳೆಯಲ್ಲಿ ಲಾರ್ಡ ಹಾರ್ಡಿಂಜಸಾಹೇಬರು ಸ್ವತಃ ಕಾನಪೂರಕ್ಕೆ ಹೋಗಿ ಮುಸಲ್ಮಾನರ ಮನೋಭಿಲಾಷೆಯನ್ನು ಪೂರ್ಣ ಮಾಡಿ, ದಂಗೆಯಲ್ಲಿ ಹಿಡಿದಂಥ ಮುಸಲಮಾನರನ್ನು ಮರ್ಯಾದೆಪೂರ್ವಕವಾಗಿ ಮನೆಗೆ ಕಳಿಸಿದರು. ಇದಕ್ಕೂ ಹೆಚ್ಚಿನದೆಂದರೆ ಕಲಕತ್ತೆಯ ಬಾಂಬಿನ ಪ್ರಕರಣಗಳಲ್ಲಿ ಲಾರ್ಡ ಚೆಂಸಫರ್ಡ ಸಾಹೇಬರು ವಿಶಾಲ ತಿಯೊಡ ಮುದ್ದಾಮು ಮುಮ್ಮಿಜಿಲ್ಲಾದಿಂದ ಕಲಕತ್ತೆಗೆ ಬಂದು, ತೀರ್ಪು ಕಹಕಾಲದಲ್ಲಿಟ್ಟು, ಆರೋಪಿಗಳನ್ನು ಮನೆಗೆ ಕಳಿಸಿದರು. ಸದ್ಯ ಶ್ರೀಮನ್ಮಹಾರಾಜರು ಸ್ವತಃ ಬೆಂಗಳೂರಿಗೆ ಹೋಗಿ, ಲಾರ್ಡ ಹಾರ್ಡಿಂಜಸಾಹೇಬರಂತೆ ಗಲಭೆಯ ವಿಚಾರಣೆಯನ್ನು ನಿಲ್ಲಿಸಿಟ್ಟರೆ- ರಾಮರಾಜ್ಯವೆಂದು ಹೇಳಿಸಿಕೊಳ್ಳುವದರ ಸಾರ್ಥಕವಾಗುವದು. ನಿಜವಾಗಿ ರಾಮರಾಜ್ಯವೆಂದು ಪ್ರಜರ ನಿದರ್ಶನಕ್ಕೆ ಬರುವದು. ಸಂಪೂರ್ಣ ಕ್ಷಮಾದಾನ ಮಾಡುವ ಪ್ರಭುತ್ವವು ಮಹಾರಾಜರಿಗುಂಟು. ಆರೋಪಿಗಳು ಅಪರಾಧಿಗಳಿರಲಿ; ಇಲ್ಲದಿರಲಿ; ಅವರ ವಿಚಾರವನ್ನು ಅಥವಾ ಅನ್ಯರು ಕೆಲಿಯಲ್ಲಿ ಊರಿದ್ದನ್ನು ಗಣನೆಗೆ ತಾರದೆ, ಮಹಾರಾಜರು ಲಾರ್ಡ ಹಾರ್ಡಿಂಜರಂತೆ ವರ್ತಿಸಿ, ಜಗತ್ತಿನಿಂದ ಶ್ಲಾಘನೆ ಮಾಡಿಸಿಕೊಳ್ಳುವದು ಅವಶ್ಯವಾದ ಕರ್ತವ್ಯಕರ್ಮವು. ಇಂಥ ಸಮಯವು ಸ್ವಚಿತವಾಗಿ ಬರುವದು. ಶ್ರೀಮನ್ಮಹಾರಾಜರು ಈ ವೇಳೆಯನ್ನು ಹೋಗಗೊಡಲಾರರೆಂದು ಪೂರ್ಣವಾಗಿ ಆಶಿಸುತ್ತೇವೆ.

ವೈಷ್ಣವ ಹರದಾಸ ನೆಂಬಹಿಂಸುವರು
ಶ್ರೀ ಕೃಷ್ಣ ಪರಮಾತ್ಮನನ್ನು ಕುರಿತು
ರಚಿಸಿದ ಉತ್ತಮ ಪದ್ಯಗಳು.

— (೦) —

ಮೈಸೂರಿನಾ ಹರದಾಸ ಮೋಹಿಸಿಯವರ ಹೆಸರು ಕೇಳದಂಥ ಹಿಂದೂ ಮುಸಲಮಾನನಿರುವದೇ ಇಲ್ಲ. ಸ್ವರಾಜ್ಯ ಸ್ವಾತಂತ್ರ್ಯಪ್ರಿಯರಾ, ಹಿಂದೂ ಮುಸಲಮಾನ ಐಕ್ಯಾಭಿಮಾನಿಗಳೂ ಆದಂಥ ಈ ಸುಪ್ರಸಿದ್ಧ ಹರದಾಸರು ಶ್ರೀಕೃಷ್ಣ ಭಕ್ತರಾಗಿದ್ದು, ಅವನ ಮಹಿಮೆಯನ್ನು ಕೆಲವು ಶ್ಲೋಕಗಳಿಂದ ವರ್ಣಿಸಿದ್ದಾರೆ. ಮಾದರಿಗಾಗಿ ಕೆಲವನ್ನು ಇದರಡಿ ಕೊಡುತ್ತೇವೆ.

೧ ಶ್ರೀ ಪಿ.ಯಮನೆಸರ ಜಲ್ವ ಎ ನೆತ್ಯೆಕೋ ಕಮ ಪೈ ಖ.ಸ

ಅರ್ಥ- ಎಂದು ನನ್ನ ಮೇಲೆ ಶ್ರೀಕೃಷ್ಣನ ಕೃಪಾದೃಷ್ಟಿ ಯಾಯಿತು. ಅಂದಿನಿಂದ ನನ್ನ ದೃಷ್ಟಿಯಲ್ಲಿ ಒಂದು ಪ್ರಕಾರದ ಅಪ್ರತಿಮ ತೇಜವುಂಟಾಗಿರುತ್ತದೆ.

೨ ಗ.ಛ ಕಮಕೋ ಛೀ ಅತಾಹೋ ಕಿ ಚೊ ಹಜರತೆ ಕೃಷ್ಣಾ, ಇಸಲಿಸೆ ಇಸ್ಸ ಅಪನೆ ಚೆರಿ ಕದಮ ಹ್ಯಖಾಸ॥

ಶ್ರೀಕೃಷ್ಣನೇ, ನೀನು ದಾನಕರ್ತವನ್ನು ಪ್ರಾರಂಭಿಸಿರುತ್ತೀ. ಅದರಲ್ಲಿ ವಿಸಾದರೂ ನನ್ನ ಭಾಗಕ್ಕೆ ಬರಲಿ. ಏಕೆಂದರೆ- ಪ್ರೇಮದೃಷ್ಟಿಯು ನಿಜವಾಗಿ ನಿನ್ನ ಅಡಿಯಲ್ಲಿರುವದು.

೩ ಹದವತ ಶಿಛಿ ಕಬಾಲ್ಲಾ ಹೋವಾ ಥುಠಿಮೆ ಹಾಬರ! ಸುನತೆ ಹೈ ಅಶಿಕೋ ಪೆ ತು ನಾರಾ ಕರಮ ಹೈ ಖಾಸ.

ಅರ್ಥ- ಕಸರತನು ಮಥುರೆಯಲ್ಲಿ ನಿನ್ನ ಕೊಲೆಗಾಗಿ ಸಿದ್ಧನಾಗಿದ್ದನೆ. ಅವನ ಕಾಗದವನ್ನು ನನ್ನ ಮಾಡು. ಏಕೆಂದರೆ- ನಿನ್ನನ್ನು ಪ್ರೀತಿಸುವಂಥ

ವರ ಮೇಲೆ ನಿನ್ನ ಕರುಣಾ ದೃಷ್ಟಿಯು ಕುಂದು ನಿನ್ನ ಪ್ರಾಕೃತವನ್ನು ಕೇಳಿಯೇ ನಾನು ನಿನ್ನಲ್ಲಿಗೆ ಬಂದಿದ್ದೇನೆ.

ಹಜರತ ಮೋಹಿನಿಯವರಂತೆ ಲಾಹೋರಿನ ಶೇರ ಮಹಮ್ಮದ ಇಕಬಾಲರವರು ಶ್ರೀ ರಾಮಚಂದ್ರನ ವಿಷಯವಾಗಿ ಇದೇ ಪ್ರಕಾರ ಅತ್ಯಂತ ಭಕ್ತಿಪೂರ್ವಕವಾದ ದಿವ್ಯ ಪದ್ಯಗಳನ್ನು ರಚಿಸಿದ್ದಾರೆ.

ಧಾರವಾಡ ಮ್ಯುನಿಸಿಪಾಲಿಟಿ

—(೦)—

ಹುಲಿಯ ಬದಲಾಗಿ ಕುರಿಯ ಆಹುತಿ.

—(೦)—

ಮಂಗಳವಾರ ಅನಂತಚತುರ್ದಶಿ ಇದ್ದದರಿಂದ ಧಾರವಾಡದ ನಿಮ್ಮದ ಪತ್ರವು ಪ್ರಕಟಿಸಲ್ಪಡಲಾರದು.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದಾಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ. ಸರಕಾರಿ, ಮ್ಯುನಿಸಿಪಾಲಿಟಿ ಲೋಕಲ್ ಬೋರ್ಡ, ರೇಲ್ವೆ, ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ. ಡಬಲ್ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಆಗುವದು. ಜಾಹೀರಾತುಗಳನ್ನು ಹಾಕುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬೇಕು.

ಮ್ಯಾನೇಜರ, ಧಾರವಾಡ

ನೋಟೀಸು

ರಾ|| ರಾ|| ರಾಮಪ್ಪಾ ಸವದತ್ತಿಯವರ ಸಾ|| ಕಲಘಟಗಿ ತಾಲ್ಲೂಕ ಧಾರವಾಡ ಇವನಿಗೆ-

ಕೆಳಗೆ ಸಹಿ ಮಾಡುವವರ ಕಡೆಯಿಂದ ಈ ನೋಟೀಸಿನಿಂದ ತಿಳಿಸೋದೇನಂದರೆ- ನೀನು ನನ್ನ ಅಳಿಯನಿದ್ದು ನನ್ನ ಮಗಳಾದ ಕಲ್ಲವ್ವಾ ಇವಳ ಲಗ್ನ ಆದ ಲಾಗಾಯತ ಬಹಳ ದಿವಸ ನನ್ನಲ್ಲಿಯೇ ಬಿಟ್ಟು ಈಗ ೪ ವರ್ಷಗಳ ಕೆಳಗೆ ಸದರ ನಿನ್ನ ಹೆಂಡತಿಯನ್ನು ಕರಕೊಂಡು ಹೋಗಿ ಅಜಮಾಸ ೧ ವರ್ಷ ಇಟ್ಟುಕೊಂಡು ಜಾಸ್ತಿ ಮಾಡುವಷ್ಟರಲ್ಲಿ ನೀನು ಯೇನೂ ಕಾರಣ ಇಲ್ಲದೆ ಕ್ರೂರತನದಿಂದ ನನ್ನ ಹುಡುಗಿಗೆ ಹೊಡೆದು ಬಡಿದು ಮಾಡಿ ಬಹಳ ತ್ರಾಸ ಮಾಡಿದ್ದರಿಂದ ಸದರಿ ಕಲ್ಲವ್ವನು ತನ್ನ ಜೀವಕ್ಕೆ ಯಾವದೇ ತರದ ಅಪಾಯ ಸಂಭವಿಸೀತೆಂದು ಹೆದರಿ ನನ್ನಲ್ಲಿಗೆ ಬಂದಿದ್ದಾಳೆ ಆದರೆ ನಾನು ಬಹಳ ಸಾರೆ ನಿನಗೆ ಹೇಳಿದ ಅಲ್ಲದೇ ನಮ್ಮ ಊರ ಸಂಭಾವಿತ ಜನರಿಂದ ಸಹಾ ಹೇಳಿಸಿದ ಆದರೂ ನೀನು ಇವರೆಗೆ ಬಂದು ನಿನ್ನ ಹೆಂಡತಿಯನ್ನು ಕರಕೊಂಡು ಹೋಗಲಿಲ್ಲಾ ಇವತ್ತಿನವರೆಗೆ ನಾನು ಎರಡನೇ ಲಗ್ನ ಮಾಡಿ ಅವಳ ಉಪಜೀವನ ಸಾಗಿಸಿದೆ ಆದರೆ ನನಗೆ ಈಗ ಮುಪ್ಪಿನಕಾಲವಿದ್ದು ಇನ್ನು ನನ್ನಿಂದ ಅವಳ ಸಂರಕ್ಷಣೆಯು ಯೋಗ್ಯ ರೀತಿಯಿಂದ ಆಗಲು ಸಾಧ್ಯವಿಲ್ಲಾ ಕಾರಣ ನೀನು ಈ ನೋಟೀಸ ಮುಟ್ಟಿದ ೧೫ ದಿವಸಗಳಲ್ಲಿ ನಮ್ಮಲ್ಲಿಗೆ ಬಂದು ನಿನ್ನ ಕ್ರೂರತನದ ವರ್ತನೂಕ ಬಿಟ್ಟು ಚಲೋ ರೀತಿಯಿಂದ ಬಳ್ವೆ ಮಾಡುವ ಬಗ್ಗೆ ನಿಮ್ಮಲ್ಲಿಯ ನಾಲ್ಕು ಜನ ಸಂಭಾವಿತರ ಜಾಮೀನ ಕೊಟ್ಟು ಮತ್ತು ಇವತ್ತಿನವರೆಗೆ ಸಾಲಾ ಮಾಡಿ ಸದರ ಕಲ್ಲವ್ವನ ಉಪಜೀವನ ಸಾಗಿಸಿದ ಬಗ್ಗೆ ಸದರ ಹಣ ಕೊಟ್ಟು ನಿನ್ನ ಹೆಂಡತಿಯನ್ನು ಕರಕೊಂಡು ಹೋಗಿ ಚಲೋ ರೀತಿಯಿಂದ ಬಾಳ್ವೆ ಮಾಡಬೇಕು ಮತ್ತು ನೀನು ಏನು ಕಾರಣ ನಿನ್ನ ಜೊತೆಗಾರರಾದ ದುಷ್ಟ ಜನರ ಚಿತಾವಣಿಯಿಂದ ಸದರ ಹುಡಿಗಿಯನ್ನು ಸತಿಹೋಗಿ ಹೋದಲ್ಲಿ ದಾಂಡಗಿರಿಯಿಂದ ಎಳಕೊಂಡು ಹೋಗಿ ಕ್ರೂರತನದಿಂದ ಅವಳ ಜೀವಕ್ಕೆ ಅಪಾಯ ಮಾಡುವ ಪ್ರಯತ್ನ ನಡಿಸಿದಿ ಒಂದು ವೇಳೆ ನೀನು ಆ ಪ್ರಕಾರ ಏನಾದರೂ ದಾಂಡಗಾಯಿ ಮಾಡಿ ನನ್ನ ಮಗಳ ಜೀವಕ್ಕೆ ಅಪಾಯ ಸಂಭವಿಸಿದಲ್ಲಿ ಆ ಬಗ್ಗೆ ಎಕದಂ ನಿನ್ನ ಮೇಲೆ ಮತ್ತು ನಿನ್ನ ಜೊತೆಗಾರರ ಮೇಲೆ ಸಹಾ ಕೋರ್ಟದಲ್ಲಿ ಫೌಜದಾರಿ ಫಿರ್ಯಾದಿ ಮಾಡುವ ಪ್ರಸಂಗ ಬರುವದು ಕಾರಣ ನೀನು ವಿಚಾರ ಮಾಡಿ ನಿನ್ನ ಕ್ರೂರತನವನ್ನು ಬಿಟ್ಟು ಮೇಲೆ ಬರೆದಂತೆ ನಾಲ್ಕು ಜನ ಸಂಭಾವಿತರನ್ನು ಕರಕೊಂಡು ಬಂದು ಚಲೋ ರೀತಿಯಿಂದ ನಿನ್ನ ಹೆಂಡತಿಯನ್ನು ಕರಕೊಂಡು ಹೋಗತಕ್ಕದ್ದು. ಹಾಗೆ ಮಾಡದಿದ್ದರೆ ಇನ್ನು ೧೫ ದಿವಸ ನಿನ್ನ ದಾರಿ ನೋಡಿ ಆ ಮೇಲೆ ನಾನು ಸದರ ನನ್ನ ಮಗಳನ್ನು ಎರಡನೇ ಲಗ್ನ ಕಾರ್ಯ ಮಾಡಿಕೊಡುವೆನು. ಆ ಮೇಲೆ ನಿನ್ನದು ನನ್ನ ಮೇಲೆ ಮತ್ತು ನನ್ನ ಮಗಳ ಮೇಲೆ ಹಾಗು ಅವಳು ಮಾಡಿಕೊಂಡವನ ಮೇಲೆ ಏನೂ ಹಕ್ಕು ಮತ್ತು ಅಧಿಕಾರ ನಡಿಯಲಿಕ್ಕಿಲ್ಲಾ ತಿಳಿಯೋದು. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಇದೆ.

ತಾ|| ೧೪-೯-೨೯

ಈ ಎಡಗೈ ಹೆಬ್ಬಟ್ಟಿನ ಗುರ್ತು ಸಿಂಗವ್ವನ ತಂದಿ ನಿಂಗಪ್ಪಾ ತಿರ್ಲಾಪುರ ಸಾ|| ಮಲ್ಲಾಪುರ ತಾಲ್ಲೂಕ ಧಾರವಾಡ ಇವನು ಮಾಡಿದ್ದು ಇದೆ.

ಶ್ರೀ|| ಪತ್ರ|| ಶಿರ||

ಶ್ರೀದತ್ತ ವೀವ್ಹಿಂಗ್ ಮಿಲ್ಸ್

ಹುಬ್ಬಳ್ಳಿ

ಕರ್ನಾಟಕದಲ್ಲಿ ಇದೇ ಮೊದಲನೆಯ ಶೀರಿಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ನವರಂಗ ಸುಂದರ ಶೀರೆಗಳು ಹಾಗೂ ವಸ್ತ್ರಗಳು ತಯಾರಾಗುತ್ತವೆ. ವಸ್ತ್ರ ಯೋಗ್ಯ ದರದಿಂದ ಸಿಗುತ್ತವೆ. ಅವಶ್ಯ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಒಣ್ಣ ಪಕ್ಕಾ, ಬಣ್ಣ ಹೊಂದಿಕೆ- ಮಾಲು ತೆಗೆಸಿಕೊಳ್ಳುವೆವು.

ಮಾಲಕ:— ದಿ ಜೆ. ಕಾಳೆ ಬ್ರದರ್ಸ್

ಕೊಪ್ಪಿಕರ ರೋಡ ಹುಬ್ಬಳ್ಳಿ

ಸೂಚನೆ

ಎಮ್. ಆರ್. ಶ್ರೀನಿವಾಸಯ್ಯಂಗಾರ್, ಬೆಂಗ್ಳೂರ ನ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ವರ್ಗಣಿದಾರರಿಗೆ ಸೂಚನೆ

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಪತ್ರದ ವರ್ಗಣೀದಾರರ ಹೆಸರಿನಿಂದ ಕ್ರ. ೩. ರ ವ್ಹಿ. ಪಿ. ಯನ್ನು ಕಳಿಸುವೆವು. ವರ್ಗಣಿದಾರರು ವ್ಹಿ. ಪಿ. ಸ್ವೀಕರಿಸಿ ಪತ್ರವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

~ ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R N. ೨

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ, ಸೋಮವಾರ ತಾರೀಖು ೧೮ ನೇ ಸಪ್ಟಂಬರ ೧೯೩೯ (ಸಂಚಿಕೆ ೨೦೭

ಶ್ರೀಮಂತ ಸರಕಾರ ಸಯಾಜಿರಾವ ಗಾಯಕವಾಡ
ಖಾಸ ಆಶ್ರಯದಲ್ಲಿದ್ದಂಥ

ಗಂಧರ್ವ ನಾಟಕ ಮಂಡಳಿಯವರು

ಹುಬ್ಬಳ್ಳಿ ಮಲ್ಲಿಕಾರ್ಜುನ ಥಿಯೇಟರದಲ್ಲಿ ಬೇಗನೆ ಬಂದು
ತಮ್ಮ ಲೋಕಪ್ರಿಯ ಆಟಗಳನ್ನಾಡುವರು.
ಮೊದಲನೆಯ ಆಟ.
ತಾ॥ ೨೩-೯-೧೯೩೯ ಶನಿವಾರ ರಾತ್ರಿ

ಮಾನಾಪಮಾನ

ತಾ॥ ೨೪-೯-೧೯೩೯ ರವಿವಾರ ಹಗಲು

ಏಕಚ ಪ್ಯಾಲಾ

ಟಿಕೀಟಿನ ದರಗಳು:-
ರೂ. ೫, ೪, ೩, ೨॥, ೨, ೧॥, ೧, ೧೨ ಆಣೆ
ವೇಶ್ಯಾಸ್ತ್ರೀಯರಿಗೆ ೨ ರೂಪಾಯಿ

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

[illegible] ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ [illegible] ಮತ್ತು [illegible] ಮುದ್ದತಿಯ ಕರಾರ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ [illegible] ತಿಳಕೊಳ್ಳಬೇಕು.

೨ ಸರಕಾರ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. [illegible] ಮೇಲೆ ದೊರೆಯುವದು. ಮತ್ತು ಯೋಗ್ಯ [illegible] ಗ್ರಾಹಕರಿಗೆ [illegible] ಮಾಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ [illegible] ಬಡ್ಡಿಯ ದರವನ್ನು [illegible] ವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ [illegible]ಯುವವು.

೫ ಬ್ಯಾಂಕಿಗೆ ಸಂಬಂಧಿಸಿದ [illegible] ಎಲ್ಲ [illegible] ಸಂಗತಿಗಳನ್ನು [illegible] ವೇಳೆಯಲ್ಲಿ [illegible]

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.
ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಬಂದಿಗಾಯಿ ಎಂಟು ಲಕ್ಷದ ಮೇಲೆ [illegible] ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಸೇವಿಂಗ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರದಾರ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು [illegible] ಇಟ್ಟುಕೊಳ್ಳಲಾಗುವದು. [illegible] ತಿಳಕೊಳ್ಳಬೇಕು.

ಧಾರವಾಡದಲ್ಲಿ

ಸರದಾರ ವಲ್ಲಭಭಾಯಿ ಪಟೇಲರು

ನಾಗರಿಕರ ಮಾನಪತ್ರಾರ್ಪಣೆ ಪ್ರಚಂಡ ಸಭೆ.

ಕರ್ನಾಟಕದಲ್ಲಿ ಬಾರಡೋಲಿ

ಶ್ರೀ. ವಲ್ಲಭಭಾಯಿಯವರನ್ನು ಹುಬ್ಬಳ್ಳಿಯವರು ಇಳಿಸಿಕೊಂಡಿದ್ದರಿಂದ ಅವರು ಅಲ್ಲಿ ೧|| ಗಂಟೆಗೆ ಕರ್ನಾಟಕ ಪ್ರೆಸಿನಲ್ಲಿ ಭಾಷಣಮಾಡಿದರು. ಆಗ ಹುಬ್ಬಳ್ಳಿಯ ನಾಗರಿಕರು ಮಾನಪತ್ರವನ್ನು ಅರ್ಪಣೆ ಮಾಡಿದರು. ಅಲ್ಲಿಂದ ಮೋಟಾರಿನ ಮೇಲೆ ಧಾರವಾಡಕ್ಕೆ ಬಂದರು. ಅವರೊಡನೆ ಮಹಾದೇವ ದೇಸಾಯರೂ ಶ್ರೀ|| ಸಿ. ರಾಜಗೋಪಾಲಾಚಾರ್ಯರೂ, ದೇಶಪಾಂಡೆ ಗಂಗಾಧರರಾಯರೂ ಬಂದರು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯಲ್ಲಿ "ಪ್ಲ್ಯಾಂಡ ಲೀಗ" ಗಳನ್ನು ಸ್ಥಾಪಿಸುವ ಕುರಿತು ಪ್ರಸ್ತಾಪಮಾಡಿದೊಡನೆ ವಿಚಾರವಿನಿಮಯವನ್ನಾಗಿ ತಮ್ಮ ಸಲಹೆಗಳನ್ನು ಇತ್ತರು. ... ಪಕ್ಷದ ಪ್ರಮುಖರೆಂದೆನಿಸಿಕೊಳ್ಳುವರಾರೂ ಬಂದಿರಲಿಲ್ಲ. ಶ್ರೀ ಜೋಗ, ದಿವಾಕರ, ಪಟವರ್ಧನ ಮುಂತಾದ ಬ್ರಾಹ್ಮಣರೇ ಕಂಡುಬರುತ್ತಿದ್ದು, ಯಾರೂ ಇಲ್ಲವೆಂಬವನ್ನ ಬಾರದೆಂಬಂತೆ ಶ್ರೀ|| ವ... ಮರ, ಶ್ರೀ ಶಿವಲಿಂಗಶಾಸ್ತ್ರಿ, ಹುಂಡೇಕಾರ ವಕೀ... ಈ ಮೂವರು ಮಾತ್ರ ಬಂದಿದ್ದರು.

... ತನ್ನರು ಭಾರತೀಯ ತರು
ಸಂಸ್ಥೆ ... ಕೃಷ್ಣ
... ನನ್ನ
... ಬಸ್ಸ
... ರ

ನಗರ ಸಭೆಗಳಲ್ಲಿ ಅವರ ದೆಸೆಯಿಂದ ಏರ್ಪಡಿಸಿದ್ದ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಕಡಪಾ ಪ್ಯಾಡಾಕ್ಕೆ ಬಂದರು. ಇವರು ಬರುವದಕ್ಕಿಂತ ಮೊದಲಿಯೇ, ಶ್ರೀ. ದಿವಾಕರ ರಂಗರಾಯರು, ಜನರನ್ನು ಸಮ್ಮತಿ ಕುಳ್ಳಿರಿಸಲಿಕ್ಕಾಗಿ ವಲ್ಲಭಭಾಯಿಯವರ ಚರಿತ್ರೆಯನ್ನು ಸ್ವಲ್ಪದರಲ್ಲಿ ಹೇಳಿದರು. ಸರದಾರರು ಬಂದನಂತರ ಶ್ರೀ|| ಗಂಗಾಧರರಾಯರು ಕನ್ನಡದಲ್ಲಿ ವಲ್ಲಭಭಾಯಿಯವರು ನಿಜವಾದ ಶೂರರೆಂದೂ, ಬ್ರಿಟಿಶರ ತುಪಾಕಿ ಮದ್ದುಗುಂಡುಗಳಿಗೆ ಬೆದರದ ವೀರರೆಂದೂ, ಅವರ ಗುಣಗಳನ್ನು ವರ್ಣಿಸಿದರು.

ಶ್ರೀ ಜೋಗರಾಯರು ಆ ಮೇಲೆ ನಾಗರಿಕರು ಅರ್ಪಿಸತಕ್ಕ ಮಾನಪತ್ರವನ್ನು ಇಂಗ್ಲೀಷಿನಲ್ಲಿ ಓದಿದರು. ಶ್ರೀ|| ಸಾಡೆಯವರು ಹಿಂದಿಯಲ್ಲಿಯೂ ಶ್ರೀ ಮುದವೀಡು ಕೃಷ್ಣರಾಯರು ಕನ್ನಡದಲ್ಲಿಯೂ ಓದಿದರು. ತಾರು ಹಾರಯೊಗಳೊಡನೆ ಮಾನಪತ್ರವನ್ನು ಸುಂದರವಾದ ಬೆಳ್ಳಿಯ ಕರಂಡಿಗೆಯಲ್ಲಿ ಹಾಕಿ ವಲ್ಲಭಭಾಯಿಯವರಿಗೆ ಅರ್ಪಿಸಿದರು.

ಶ್ರೀ|| ವಲ್ಲಭಭಾಯಿಯವರು ಇಂಗ್ಲೀಷಿನಲ್ಲಿ ಭಾಷಣ ಮಾಡಿದರು. ಇಂಗ್ಲೀಷ ಬಾರದವರಿಗಾಗಿ ಶ್ರೀ. ಮುದವೀಡು ಕೃಷ್ಣರಾಯರು ಅವರ ಭಾಷಣವನ್ನು ಕನ್ನಡಿಸಿದರು. ಭಾಷಣ ಪ್ರಾರಂಭಿಸುವ ಮೊದಲು ಸಭಿಕರಿಗೊಂದು ವಿನೋದ ಕೊಟ್ಟರು.

"ನಿಮ್ಮ ಪ್ರಾಂತವು ರಾಷ್ಟ್ರಸೇವಕರನ್ನು ನಿರ್ಮಿಸಿದ ನಾಡು. ಹರ್ಡೀಕರ ನಾರಾಯಣರಾಯರಂತಹ ಅಭ್ಯುದಯಶೀಲರಾದ ದಂಡಾಳು ಅವರ ನೇತೃತ್ವ ಇಂತಹ ನಾಡಿನವರಾದ ನಿಮಗೆ ಸಾರ್ವಜನಿಕ ಸಭೆಗಳನ್ನು ಹೇಗೆ ನಡೆಸಬೇಕೆಂಬುದು ಗೊತ್ತಿಲ್ಲವೆಂಬುದು ಆಶ್ಚರ್ಯವು."

... ದುಃಖಾಗಿ ನಿಂತಿದ್ದ ಜನ ... ನ್ನ

ಲ್ಲೂ ನಾನು ಚಿಂತಿಸುವುದೇನನ್ನೂ ಮಾಡಿಲ್ಲ. ಬಾರಡೋಲಿಯ ಬಗ್ಗೆ ಸ್ವಾರ್ಥತ್ಯಾಗ ಮಾಡಿದ್ದೇನೆಂದು ಹೇಳುವರು. ಆದರೆ ನನ್ನ ಜನರಿಗೆ ನಾನು ಮಾಡಬೇಕಾದದ್ದನ್ನು ಮಾಡಿದ್ದೇನೆ. ಬಾರಡೋಲಿ ತಾಲೂಕಿನ ಹೋರಾಟದಲ್ಲಿ, ಈಗ ಹತ್ತು ವರ್ಷಗಳ ಹಿಂದೆ ಬೋರಸದ ತಾಲೂಕಿನಲ್ಲಿ ಈ ಬಗೆಯ ಕಾರ್ಯ ತಿಯೊಂದನ್ನು ಮಾಡಿದ್ದೆವು. ಅದು ಚಿಕ್ಕದು, ಬಹಳ ದಿನಗಳಲ್ಲಿ ಮುಗಿದದ್ದರಿಂದ ಜನರ ಲಕ್ಷ್ಯವು ಅತ್ತಕಡೆಗೆ ವಿಶೇಷವಾಗಿ ಹೋಗಲಿಲ್ಲ.

ಮುಂಬೈ ಸರಕಾರದವರು ತಮ್ಮ ಕಂದಾಯ ವಸೂಲಿ ಪದ್ಧತಿಯು ಅತಿ ಸುಧಾರಿಸಿದ್ದೆಂದು ತಿಳಿದಿದ್ದರು. ಈಗ ಹತ್ತು ವರ್ಷಗಳ ಹಿಂದೆ ಪಾರ್ಲಮೆಂಟಿನ ಕಮೀಟಿಯವರು ನಮ್ಮ ಪದ್ಧತಿಯಲ್ಲಿ ದೋಷವಿದೆ, ಅದಕ್ಕೆ ಕಾಯಿದೆಯ ಸ್ವರೂಪ ಕೊಡಬೇಕೆಂದು ಸೂಚಿಸಿದ್ದರು. ಆ ಸೂಚನೆಯ ಮೇರೆಗೆ ಬಂದ ಕಾಯಿದೆ ... ನಮ್ಮ ಪ್ರತಿನಿಧಿಗಳಿಗೆ ಅದರ ... ಆ ವಿಷಯದ ಬಗ್ಗೆ ಅವರಿಗೆ ಪ್ರಶ್ನೆ ಕೇಳಲು ಇದು ... ಕೌನ್ಸಿಲಿನಲ್ಲಿ ಈ ಬಗ್ಗೆ ... ಕಾಯಿದೆಯನ್ನು ಪಾಸು ಮಾಡಿದರು. ಆದರೆ ಸರಕಾರವು ಇದನ್ನು ಕೆಳದ ಬುಟ್ಟಿಗೆ ಚೆಲ್ಲಿತು. ಹೀಗೇಕೆ ಮಾಡಿದಿರೆಂದು ಕೇಳಿದರೆ ಮೇಲೆ ... ದ್ದರು. ಭಾರತೀಯರಿಗೆ ಸ್ವಾಭಿಮಾನವೇ ಇಲ್ಲ ... ಹತ್ತು ಚಳವಳಿಯು ಅಡಗಿ ಹೋದ ಮೇಲೆ ನಮ್ಮ ... ಗೆ ... ಸ್ವರಾಜ್ಯ ... ಕೌನ್ಸಿಲ ಮುಂತಾದ ... ವೆಂದರು. ... ಅಸ್ತಿತ್ವವು ಎಲ್ಲಿಯೂ ಕಂಡುಬರುತ್ತಿಲ್ಲ. ಈಗ ... ಗಟ್ಟಿಗರಾದ ... ಹಿಂದೆಂದೂ ಇದ್ದಿಲ್ಲ. ಪಂಡಿತ ಮೋತಿಲಾಲರಂತಹ ವಿರೋಧ ಪಕ್ಷದ ಮುಖ್ಯರು ಬಲು ಗಟ್ಟಿಗರಾಗಿದ್ದಾರೆ. ಸರಕಾರೀ ಪಕ್ಷದ ಅಧಿಕಾರಸ್ಥರೆಲ್ಲ ಬಹು ಅಯೋಗ್ಯರಿದ್ದಾರೆ. ಹೀಗಿದ್ದರೂ ಸರಕಾರವನ್ನು ತತ್ತರಗೊಳಿಸುವರು ... ಆ ಸಂಖ್ಯೆಯು ಹೆಚ್ಚಿಗೆ ಆಸೆ ... ತಿಳಿಯಬೇಕು. ಸರಕಾರವನ್ನು ... ಸರಕಾರವು ನಮ್ಮ ಮಾತು ಕೇಳುವಂತಾಗಬೇಕಾದರೆ ಬಾರಡೋಲಿಯಲ್ಲಿ ಮಾಡಿದಂತೆ ಮಾಡಬೇಕು ... ನೀವು ... ಬೇಕು. ಬಾರಡೋಲಿಯು ಸರಕಾರದ ತಲೆಯನ್ನು ... ಅ ... ಕಷ್ಟಪಡಬೇಕಾಗಲಿಲ್ಲ.

... ಬಾರಡೋಲಿಯಂತೆ ಮಾಡಬೇಕಾದರೆ ... ತರ ... ಮಾಡಿ ... ದೈನ್ಯ ... ಕೃತಿ ... ಈ ಜಾತ್ರೆಯಲ್ಲಿ ... ಇವನ್ನ ... ನಿಮ್ಮ

54
23

ಶಂಸೆ ಮಾಡಬೇಕು. ಅಂದರೆ ಬೇಕಾದದ್ದು ಮಾಡಲು ಬರುವದು. ಬಾರ್ಡೋಲಿಯ ರೈತರಿಗಿಂತಲೂ, ನೀವು ಸಶಕ್ತರೂ ಬುದ್ಧಿವಂತರೂ ಇದ್ದೀರಿ. ದ್ರವ್ಯ, ಹೊಲಮನೆಗಳು ಹೋಗುವವೆಂದು ಅಂಜುವಿರಾ- ನೀವು ಒಪ್ಪಿಸುತ್ತಿರುವದು ಸತ್ಯಕ್ಕಾಗಿಯೂ, ನ್ಯಾಯಕ್ಕಾಗಿಯೂ ಆದರೆ- ಬರಿಯ ದ್ರವ್ಯಕ್ಕೇಕೆ ನೀವು ಜೀವ ಕೊಡಬೇಕು. ಬ್ರಿಟಿಶರ ಗುಂಡಿಗೆ ಸಿಕ್ಕ ನೀವು ಸಾಯಬೇಕೆಂದು ದೇವರ ಮನದಲ್ಲಿದ್ದರೆ ಬ್ರಹ್ಮನು ಕೂಡ ನಿಮ್ಮನ್ನು ಬಿಡಿಸಲಾರನು. ಸಾವಿರ ಬಂದೂಕುಗಳು ಕೂಡ ನಿಮ್ಮ ಆಯುಷ್ಯವು ಇನ್ನು ಒಂದು ನಿಮಿಷದಲ್ಲಿ ಮುಗಿಯುತ್ತಿದ್ದರೂ ಕೂಡ ನಿಮ್ಮನ್ನು ಕೊಲ್ಲಲಾರವು. ಜಗತ್ತಿನೊಳಗಿನ ಎಲ್ಲ ಸೈನ್ಯವೂ, ಒಂದಾದ ರೈತರನ್ನು ನಾಶಗೊಳಿಸಲಾರದು.

ಸ್ವಾತಂತ್ರ್ಯದ ಉದಯವಾಗಹತ್ತಿದೆ- ಅದು ಜನತೆಯ ಸ್ವಾತಂತ್ರ್ಯ- ಇನಾಮದಾರ ದೇಸಾಯಿ ದೇಶಪಾಂಡೆಗಳದಲ್ಲ. ತಮ್ಮ ಭೂಮಿ ಸ್ವತ್ತುಗಳು ಕಾಣೆಯಾಗಿ ಹೋಗುವವೆಂದು ಇವರು ಅಂಜುವರು. ಆದರೆ ಇವು ಹೋಗಿವೆ. ನಮ್ಮ ಈ ದೇಶದ ಪ್ರಗತಿಗೆ ಅಡ್ಡಿ ಮಾಡುವರು. ಇವರು ರೈತರನ್ನು ಅಜ್ಞಾನದಲ್ಲಿಡಲು ಪ್ರಯತ್ನಿಸಿದರೆ ಅದಾಗದು.

ಇನ್ನೊಂದು ಸಂಗತಿಯ ಬಗ್ಗೆ ನನ್ನ ವಿಚಾರಗಳನ್ನು ತಿಳಿದುಕೊಳ್ಳಲು ನೀವು ಬಯಸುತ್ತಿರಬಹುದು. ಅದು ಪಕ್ಷದ ರಾಜಕಾರಣ. ನನಗೆ ಈಗಿನ ರಾಜಕಾರಣವು ಎಳ್ಳಷ್ಟು ತಿಳಿಯುವದಿಲ್ಲ. ಸಮಸ್ಯೆಗಳಿಂದ ನನಗೆ ಇದು ತಿಳಿಯುವದುಂಟು? [illegible] ರಲ್ಲಿ ಸ್ತಂಭ ರಾಜಕೀಯ ಕಾರಣವು ಮಾತ್ರ ನನಗೆ ಗೊತ್ತುಂಟು.

ಇನ್ನು ನನ್ನ ಕಡೆಯಾಗಿ ಮಾತು ಹೇಳುವೆ. ನೀವು ನನ್ನ ಮಾತುಗಳಿಗೆ ನಗಬಹುದು. ಏಕೆಂದರೆ ಈಗ ರಾಜ್ಯಕ್ರಾಂತಿ ಬಂದು ಹೋದಬಳಿಕದ ಮಾತುಗಳನ್ನು ತರುತ್ತಿರುವೆನು. ಪಿಸ್ತೂಲ ಬಂದೂಕಿನಿಂದ ಬಂದು ಹೋಗುವದಾಗದು. ಹಿಂಸೆ ಬಂಡು ಮಾಡುವವರಿದ್ದರೆ ಕಾಂಗ್ರೆಸ್ ನಿಶ್ಶಸ್ತ್ರ ಬಂಡು ಮಾಡುವದಾದರೆ ಹಳ್ಳಿಗೆ ಹಳ್ಳಿಯು ಅಲ್ಲಿ ನಿಮ್ಮ ಅಜ್ಞಾನಿ ಬಂಧುಗಳಲ್ಲಿ ಕಾರ್ಯ ಮಾಡಿರಿ ಬಾರ್ಡೋಲಿಯ ಕ್ರಾಂತಿಯು ಅದರಿಂದ ಹುಟ್ಟಿ ಬಂದಿಲ್ಲವೇನು. ಗ್ರಾಮಸ್ಥರು ನಿಮಗಿಂತಲೂ ಶೂರರು, ವೀರರಾಗಿರುವರು. ಅವರನ್ನು ನೀವು ಯುದ್ಧದಲ್ಲಿ ಸೋಲಿಸಲಾರಿರಿ. ಅವರನ್ನು ಹೊರಗೆ ಹಾಕಬೇಕಾದರೆ- ಅವರಿಗೆ ದುಃಖ ಸಿಕ್ಕದಂತೆ ಮಾಡಬೇಕು. ದೇಶದಲ್ಲಿ ಹಂಚಿಹೋಗಿದ್ದ ಹಿರಿಯರ ಮಾತುಗಳು ನಿಮ್ಮ ಮನಸ್ಸಿಗೆ ಬಾರದಿದ್ದರೂ ಅವಕ್ಕೆ ಮನ್ನಣೆ ಯುಕ್ತ ಕಾರ್ಯ ಮಾಡಿರಿ. ಅಂದರೆ ದೇವರು ನಿಮಗೆ ಯಶವೀಯುವನು.

ಸರಕಾರವು ಕರದ ಬಗ್ಗೆ ಒಂದು ಕಾನೂನು ಮಾಡುವೆವೆಂದು ಹೇಳಿದರು. ಅದು ಆಗದಂತೆ ತೋರುತ್ತದೆ. ಈ ಸಾರೆ ಕರ ವಸೂಲಿಯು ಹೊತ್ತಿಗಿಂತಲೂ ಮೊದಲೆ ನೀವು ಸರಕಾರವನ್ನು ವಿರೋಧಿಸಲು ಸಿದ್ಧರಾಗಿರಿ.

ಎಂದು ತಮ್ಮ ಭಾಷಣವನ್ನು ಪೂರ್ತಿಗೊಳಿಸಿದರು. ವಂದೇ ಮಾತರಂ ಕರ್ನಾಟಕ ಮಾತಾಕೀ ಜಯ ಮುಂತಾದ ಜಯ ಘೋಷಗಳಲ್ಲಿ ಸಭೆಯು ಮುಕ್ತಾಯವಾಯಿತು.

ಧಾರವಾಡದ ನಾಗರಿಕರು

ಅರ್ಪಿಸಿದ

ಮಾನಪತ್ರ

ಶ್ರೀಯುತ ಸರದಾರ ವಲ್ಲಭಭಾಯಿಯವರೇ,

ಇಂದಿನ ಸುಪ್ರಸಂಗದಲ್ಲಿ ಧಾರವಾಡದ ನಾಗರಿಕರಾದ ನಾವು ನಿಮಗೆ ಸುಸ್ವಾಗತವನ್ನೀಯುತ್ತೇವೆ. ನಿಮಗಾಗತಕ್ಕ ಇದಕ್ಕೂ ವೈಭವದ ಸ್ವಾಗತವನ್ನು ನೀಡಲು ಅಭಾವದಿಂದ ನಮಗೆ ಸಾಧ್ಯವಾಗಲಿಲ್ಲ. ನಿಮ್ಮ ಉದಾರವಾದ ಅಂತಃಕರಣದಿಂದಲೂ, ನಮ್ಮಲ್ಲಿ ವಿಷಯವಾಗಿ ನಮಗಿರುವ ಪ್ರೇಮದಿಂದಲೂ ಈ ಕೊರತೆಯನ್ನು ನೀವು ಕ್ಷಮಿಸುವಿರೆಂದು ನಾವು ನಂಬಿದ್ದೇವೆ.

ಈಗ ದೈನ್ಯಾವಸ್ಥೆಯಲ್ಲಿದ್ದ ನಮ್ಮ ದೇಶಕ್ಕೆ ನೀವು ಮಾಡಿರುವ ಶ್ರೇಷ್ಠವಾದ ಸೇವೆಯನ್ನು ನೆನಸಿದರೆ ನಮ್ಮ ಹೃದಯವು ಪ್ರಫುಲ್ಲಿತವಾಗುತ್ತದೆ. ದೇಶದ ಇತಿಹಾಸದ ರಾಷ್ಟ್ರೀಯ ಹೋರಾಟಗಳಲ್ಲಿ ನಿಮ್ಮ ಕಾರ್ಯವು ಅಜರಾಮರವಾಗಿದೆ. ನೀವು ದೇಶದ ಸಲುವಾಗಿ ಮಾಡಿರುವ ಹೆಚ್ಚಿನ ಸ್ವಾರ್ಥತ್ಯಾಗ, ಮುಂಬೈ ಹಾಗೂ ಅಹಮದಾಬಾದದ ಬಡ ಕಾರ್ಮಿಕರ ವಿಷಯದಲ್ಲಿ ನೀವು ವಹಿಸಿದ ಪರಿಶ್ರಮಗಳು ಅತ್ಯಂತ ಶ್ರೇಷ್ಠ ತರಗತಿಯವು. ಅಹಮದಾಬಾದ ನಗರಸಭೆಯ ಅಧ್ಯಕ್ಷಸ್ಥಾನದಲ್ಲಿರುವಾಗ, ನೀವು ಇಟ್ಟುಕೊಂಡ ಉದಾತ್ತವಾದ ಧ್ಯೇಯ ಮತ್ತು ನೀವು ಮಾಡಿದ ಶ್ರೇಯಸ್ಕರವಾದ ಕಾರ್ಯ ಇವು ಎಲ್ಲರಿಗೂ ಸಾಧ್ಯವಾಗತಕ್ಕವುಗಳಲ್ಲ. ಆದರೆ ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ಸ್ವಾತಂತ್ರ್ಯದ ಅಹಿಂಸಾತ್ಮಕ ಚಳವಳಿಯಲ್ಲಿ ನಿಮ್ಮ ಶ್ರೇಷ್ಠ ದೇಶಸೇವೆಯೂ ಯಶಸ್ವಿ ತ್ಯಾಗವೂ ಉಜ್ವಲವಾಗಿ ಪ್ರಕಟಗೊಂಡವು.

ತಮ್ಮ ನ್ಯಾಯವಾದ ಹಕ್ಕುಗಳ ನಿವಾರಣೆಗಾಗಿ, ಬಾರ್ಡೋಲಿಯ ರೈತರು ಅವಲಂಬಿಸಿದ ಸತ್ಯಾಗ್ರಹವು, ನಿಮ್ಮನ್ನು ಸ್ಮರಿಸಿದಾಗೆಲ್ಲ, ನಮ್ಮ ಕಣ್ಣು ಮುಂದೆ ನಿಲ್ಲುತ್ತದೆ. ಆ ರೈತರ ಬೇಡಿಕೆಯನ್ನು ಮೊದಲು ಎಷ್ಟು ನಮ್ರತೆಯಿಂದ ಸರಕಾರಕ್ಕೆ ತಿಳಿಸಿದಿರಿ! ಮುಂದೆ ಆ ಕಠಿಣ ಯುದ್ಧವನ್ನು ನೀವು ಎಷ್ಟು ಧೈರ್ಯ ಸ್ಥೈರ್ಯಗಳಿಂದ ಸಾಗಿಸಿದಿರಿ! ಅಲ್ಲಿಯ ರೈತರಲ್ಲಿ ನೀವು ಅಸಾಧಾರಣವಾದ ಸ್ಫೂರ್ತಿಯನ್ನುಂಟು ಮಾಡಿದ್ದು, ಅಜ್ಞರೆಂದು ಹೇಳಿಸಿಕೊಳ್ಳುವ ಅವರ ತೋರಿಸಿದ ಮಹತ್ವದ ಸಹನಶೀಲತೆ ಹಾಗೂ ಸ್ವಾರ್ಥತ್ಯಾಗಗಳು ಇದಲ್ಲದೆ, ನಿಮ್ಮ ನಾಯಕತ್ವದ ಕೆಳಗೆ ಕಾದುತ್ತಿದ್ದ ರೈತರ ನ್ಯಾಯ್ಯವಾದ ಬೇಡಿಕೆಯ ಸತ್ಯಾಂಶವನ್ನು ಸರಕಾರವು ಬಾಗಿ ಮನ್ನಿಸಬೇಕಾದದ್ದು, ಇವೆಲ್ಲವೂ ಭಾರತೀಯ ಸ್ವಾತಂತ್ರ್ಯ ಯುದ್ಧದಲ್ಲಿ ಸ್ಮರಣೀಯ ಸಂಗತಿಗಳಾಗಿ ಉಳಿಯುವವು. ದೇಶದ ಎಲ್ಲ ರಾಜಕೀಯ ಪಕ್ಷದವರೂ ನೀವು ನಡೆಸಿದ ನ್ಯಾಯದ ಯುದ್ಧಕ್ಕೆ ಸಹಾಯ ಮಾಡುತ್ತಿದ್ದದ್ದು ಒಂದು ಅಲೌಕಿಕವಾದ ನೋಟವಾಗಿತ್ತು. ಮತಭೇದವಿಲ್ಲದೆ ಹೀಗೆ ಎಲ್ಲರೂ ಸಹಾಯ ಮಾಡುತ್ತಿರುವದು ನಿಮ್ಮಲ್ಲಿರುವ ನಾಯಕತ್ವದ ಗುಣಗಳನ್ನೇ ತೋರಿಸುತ್ತದೆ. ಸರದಾರರೇ ಆ ಯುದ್ಧದಲ್ಲಿ ನಾಯಕರಾದ ನಿಮ್ಮ ಯಶಸ್ಸನ್ನು ಪಡೆದ ನಿಮ್ಮ ವೀರ ಅನುಯಾಯಿಗಳನ್ನೂ ಈ ಹೊತ್ತು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ.

ನಿಮ್ಮನ್ನು ಸ್ಮರಿಸಿದಾಗ ನಮ್ಮ ಕಣ್ಣು ಮುಂದೆ ಒಡ್ಡರಿಸಿ ಬರುವ ಇನ್ನೊಂದು ಸಂಗತಿಯೆಂದರೆ, ನೀವು ಬಾಯಿಯ ಬಂಟರಲ್ಲ ಆದರೆ ಕೆ[illegible]ದುವ ಕಸುಗಳಿಗರು. ಈ ಸಂಗತಿಯೇ ನಿಮ್ಮ ಕರ್ತೃತ್ವಶಕ್ತಿಯ ತಿರುಳು; ಹಾಗೂ ನಿಮ್ಮ ಯಶಸ್ಸಿನ ಗುಟ್ಟು. ಆದಕಾರಣವೇ ಹಿಂದುಸ್ಥಾನದ ಜನತೆಯು ವೇಳೆ ನಿಮ್ಮ ಮನಸ್ಸು ಸೆಳೆಸಿದೆ. ನಿಮ್ಮಂತೆ ಆಡುವ ಮೊದಲು ಮಾಡುವವರೂ, ಮಾಡುವ ಮೊದಲು ವಿಚಾರ ಮಾಡುವವರೂ ನಮ್ಮಲ್ಲಿ ಹೆಚ್ಚಾಗಬೇಕೆಂದು ನಾವು ಹಾರೈಸುತ್ತೇವೆ. ಇವೆಲ್ಲವನ್ನು ಕೇವಲ ಆತ್ಮಾರ್ಪಣ ಬುದ್ಧಿಯಿಂದಲೂ, ನಿಸ್ವಾರ್ಥದಿಂದಲೂ, ಶ್ರದ್ಧೆ ಕರ್ತವ್ಯಗಳಿಂದಲೂ ಮಾಡುವವರೇ ನಮ್ಮ ದೇಶಕ್ಕೆ ಬೇಕು.

ಹಿಂದುಸ್ಥಾನದ ಸ್ವಾತಂತ್ರ್ಯ ಯುದ್ಧವು ಇನ್ನೂ ಮುಗಿದಿಲ್ಲ. ಅದು ದಿನದಿನಕ್ಕೆ ಹೆಚ್ಚು ತೀವ್ರವಾಗಹತ್ತಿದೆ. ಈ ಯುದ್ಧದಲ್ಲಿ ನೀವು ನಿಸ್ಸಂಶಯ ಮುಖ್ಯ ನಾಯಕರೂ ಜಯ ನಮ್ಮ ದೇ[illegible]ಪಕ್ಷಕ್ಕೆ [illegible]ಎಂದು ಅಖಿಲ ಹಿಂದುಸ್ಥಾನವು ನಿರೀಕ್ಷಿಸುತ್ತಲಿದೆ.

ಸರದಾರರೇ, ಕೇವಲ ಸ್ವಾರ್ಥತ್ಯಾಗ ಮಾತ್ರದಿಂದಾಗಲಿ, ಶಾಂತಬುದ್ಧಿಯಿಂದ ಮಾತ್ರ ಆಗಲಿ,

ನೋಟೀಸು

—(೦)—

ಗೌರಿ ಕೋಂ ಚನಬಸಪ್ಪ ಹುಚ್ಚಗೌಡರ ಸಾಕೀನ ಹಂಸಭಾವಿ ಹಾಲಿವಸ್ತಿ ಭೋಗಾಂವಿ ತಾಲೂಕ ಕೋಡ ಜಿಲ್ಹಾ ಧಾರವಾಡ ಇವಳಿಗೆ-

ಚನಬಸಪ್ಪ ಬಸಲಿಂಗಪ್ಪ ಹುಚ್ಚಗೌಡರ ಸಾಕೀನ ಹಂಸಭಾವಿ ನಾನು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ-

ನೀನು ನನ್ನ ಉಡಕಿ ಲಗ್ನದ ಹೆಂಡತಿ ಇದ್ದು ನನ್ನ ಸಂಗಡ ನೀನು ಕೆಲವು ದಿವಸ ಸುಸೂತ್ರ ಬಾಳುವೆ ಮಾಡಿದಿ ಈಗ ಅಜಮಾಸು ೩ ವರ್ಷಗಳ ಹಿಂದೆ ಪಂಚಮಿ ಹಬ್ಬದ ದೆಶೆಯಿಂದ ತವರುಮನೆಗೆ ಹೋಗಿ ಬರುತ್ತೇನಂತಾ ಹೇಳಿದಿ ಆ ಪ್ರಕಾರ ನಾನು ನಿನ್ನ ತವರುಮನೆಯಾದ ಭೋಗಾಂವಿಗೆ ಭಂಗಾರದ ಸರಗಿ ೧ ತೊಲಿ ೮ ಅ॥ ಕಿ॥ ೧೬೦ ರೂಪಾಯಿ ಭಂಗಾರದ ಗೀರಬಳಿ ಜತಿ ಎರಡು ತೊಲಿ ೬ ಅ॥ ಕಿ॥ ೧೧೦ ರೂಪಾಯಿ ಗೆಜ್ಜೆಟೀಕಿ ೧ ಅ॥ ಕಿ॥ ೧೦೦ ರೂಪಾಯಿ ಸಂವಜೋಡಿನ ಸರ ಒಂದು ಅ॥ ಕಿ॥ ೬೦ ರೂಪಾಯಿ ಒಂದು ಬೆಳ್ಳಿ ಚೌಕ ಬೆಳ್ಳಿ ಪಟ್ಟಿ ೧ ಕಿವಿಯೊಳಗಿನ ಬುಗಡಿ ಜತಿ ೩ ಒಂದು ಇಳಕಲ್ಲ ರೇಶಮಿ ಶೀರಿ ಪಟ್ಟಹುಣ್ಣಿಮಿಯದು ಕಿ॥ ೬೦ ರೂಪಾಯಿಗಳು ಅಂತು ಒಟ್ಟು ಕಿ॥ ನಾಲ್ಕುನೂರಾತೆಂಬತ್ತು ರೂಪಾಯಿಗಳ ದಾಗೀನೆ ಸಹಿತ ನಿನ್ನನ್ನು ಕಳಿಸಿಕೊಟ್ಟೆ ಅಂದಿನಿಂದ ನೀನು ಈ ವರೆಗೂ ತಿರುಗಿ ಬರಲಿಲ್ಲ ನಿನ್ನ ತಂದೆಯೂ ಕಳಿಸಿಕೊಡಲೊಲ್ಲ ನಾನು ವ ನನ್ನ ಸಂಬಂಧಿಕರೂ ೭-೮ ಸಲ ಕರಿಯಲಿಕ್ಕೆ ಬಂದರೂ ನೀನು ಬರಲಿಲ್ಲ ಈಗ ನೀನು ಬೇರೆ ಕಡೆಗೆ ಪುನಃ ಉಡಕಿ ಮಾಡಿಕೊಂಡು ಹೋಗುವ ತಯಾರಿಯಲ್ಲಿರುವದಾಗಿ ನನಗೆ ತಿಳಿಯುತ್ತದೆ ಕಾರಣ ಈ ನೋಟೀಸ ಕೊಡುವ ಪ್ರಸಂಗ ಬಂತು ಈ ನೋಟೀಸ ಮುಟ್ಟಿದ ೮ ದಿವಸಗಳಲ್ಲಿ ನೀನು ಮೇಲೆ ವಿವರಿಸಿದ ಯಾವತ್ತೂ ದಾಗೀನೆ ವ ಸಾಮಾನು ಸಹಿತ ತೆಗೆದುಕೊಂಡು ಬಂದು ನನ್ನ ಸಂಗಡ ಸಸೂತ್ರ ಬಾಳುವೆ ಮಾಡಿಕೊಂತ ಹೋಗಬೇಕು ಜರ ಇದಕ್ಕೆ ತಪ್ಪಿದರೆ ನಿನ್ನ ಮೇಲೂ ನಿನ್ನನ್ನು ಉಡಕಿ ಮಾಡಿಕೊಂಡವನ ಮೇಲೂ ಯೋಗ್ಯ ಇಲಾಜ ನಡಿಸುವದಲ್ಲದೆ ಮೇಲೆ ಕಾಣಿಸಿದ ದಾಗೀನೆಗಳ ಸಂಬಂಧದಿಂದ ಕೋರ್ಟಿನಲ್ಲಿ ಕೆಲಸ ನಡಿಸುವದರಲ್ಲಿ ಬರುವದು ಈ ನೋಟೀಸಿನ ಖರ್ಚು ಸಹ ನಿನ್ನ ತಲೆಯ ಮೇಲೆ ಇರುವದು ತಿಳಿಯುವದು ತಾ॥ ೧೨-೯-೨೮

ಸಹಿ- ಚನಬಸಪ್ಪ ಬಸಲಿಂಗಪ್ಪ ಹುಚ್ಚಗೌಡ್ರ ಹಂಸಭಾವಿ

ನೋಟೀಸು.

(೦)—

ರಾ॥ ರಾ॥ ಕಲ್ಲಪ್ಪಾ ಸಂಗನಬಸಪ್ಪನವರ ಸಾಕೀನ ಧಾರವಾಡ ಶಹರ ಪೈಕಿ ಮೇಣಸಿನಕಾಯಿ ಗಲ್ಲಿ ಇವನಿಗೆ-

ಕೆಳಗೆ ಸಹಿ ಮಾಡಿದ ಫಕೀರಪ್ಪಾ ಮಲ್ಲಪ್ಪಾ ಮಟಿಗಾರ ಸಾ॥ ಧಾರವಾಡ ಶಹರ ಪೈಕಿ ಘಾಳಿಗಲ್ಲಿ ನಾನು ಮಾಡುವ ನೋಟೀಸು ಏನಂದರೆ- ನಾನ ನಿನಗೆ ಧಾರವಾಡ ಶಹರ ಘಾಳಿಗಲ್ಲಿಯಲ್ಲಿರುವಂಥ ನನ್ನ ಮಾಲ್ಕಿ ಮನಿಯನ್ನು ೭೦೦ ರೂಪಾಯಿಕ್ಕೆ ಖರೀದಿಗೆ ಕೊಟ್ಟಿದ್ದು ಸದರ ಮನಿಯು ಮುಂದಿನ ಕಟ್ಟಿಯನ್ನು ನನ್ನ ಹಯಾತಿವರೆಗೆ ಮಂದು ಮೊಲಿ ಕಟ್ಟಿ ಇರಬೇಕು. ಅಂತಾ ಕರಾರಿನಿಂದಾ ಕೊಟ್ಟಿರುತ್ತೇನೆ ನನಗೆ ಖರೀದಿ ಪತ್ರ ಮಾಡಿಕೊಟ್ಟ ನಂತರ ನಾನು ಬೋಲಿ ಕಟ್ಟಿಸಿಕೊಂಡಿರುತ್ತೇನೆ ಸದರ ಮನಿಯು ಕಿಮ್ಮತ್ತು ೧೦೦೦ ರೂಪಾಯಿ ಇದ್ದು ನಿನಗೆ ೭೦೦ ರೂಪಾಯಿಗೆ ಖರೀದಿಗೆ ಕೊಡಲಿಕ್ಕೆ ಸದರ ಮನಿಯ ಮುಂದಿನ ಜಾಗಾ ನನ್ನ ಹಯಾತಿ ವರೆಗೆ ಇರಬೇಕು ಅಂತಾ ಕಾರಣ ದೆಸೆಯಿಂದ ಇರುತ್ತದೆ ನೀನು ನನ್ನ ಕೂಡ ಸುರಳೀತವಾಗಿ ನಡಿಯಲಿಕ್ಕೆ ಇಚ್ಛಿಸದಿದ್ದರೆ ನಿನ್ನ ೭೦೦ ರೂಪಾಯಿ ತೆಗೆದುಕೊಂಡು ನನ್ನ ಮನಿ ನನ್ನ ಕಬಜಾಕ್ಕೆ ಕೊಡಬೇಕು ಅಥವಾ ಸದರ ಮನಿಯ ಬಾಬತ್ತ ಹೆಚ್ಚಿನ ಕಿಮ್ಮತ್ತು ೩೦೦ ರೂಪಾಯಿಗಳನ್ನು ನನಗೆ ಕೊಟ್ಟರೆ ಸದರ ನಾನು ವಹಿವಾಟ ಮಾಡುವ ಕಟ್ಟಿಯ ಜಾಗಾ ನಿನಗೆ ಬಿಟ್ಟುಕೊಡುತ್ತೇನೆ ಈ ಎರಡು ಶರ್ತಗಳ ಪ್ರಕಾರಾ ಯಾವದಾದರೊಂದು ಶರ್ತಿನ ಪ್ರಕಾರಾ ನೀನು ನಡಿಯದಿದ್ದರೆ ಈ ವ್ಯವಹಾರದಲ್ಲಿ ನನಗೆ ಆಗೋ ಲುಕ್ಸಾನಕ್ಕೆ ನೀನು ಪಾತ್ರನಿರುತ್ತೀ ಮತ್ತು ನಾನು ಕಟ್ಟಿಸಿದ ಬೋಲಿಯ ಬಾಬತ್ತ ೩೫ ರೂಪಾಯಿ ವ ಮನಿಯ ಬಾಬತ ಹೆಚ್ಚಿನ ೩೦೦ ರೂಪಾಯಿ ಅಂತು ೩೩೫ ರೂಪಾಯಿಗಳನ್ನು ನನಗೆ ಕೊಟ್ಟು ನನ್ನ ಕಡೆಂದಾ ನೀನು ಪಾವತಿ ತೆಗೆದುಕೋಬೇಕು ಅಂದರೆ ನನ್ನ ಕಬಜಾದಲ್ಲಿ ಇದ್ದ ಜಾಗಾ ನಿನ್ನ ಕಬಜಾಕ್ಕೆ ಕೊಡುತ್ತೇನೆ ಈ ನೋಟೀಸಿನ ಖರ್ಚು ನಿನ್ನ ತಲಿಯ ಮೇಲೆ ಅದೆ ತಿಳಿಯೋದು

ತಾರೀಖು ೧೯—೯—೨೮ ನೇ ಇಸ್ವಿ

ಸಹಿ- ಫಕೀರಪ್ಪಾ ಮಲ್ಲಪ್ಪಾ ಮಟಿಗಾರ

ಸುಸಮಯ

ವಿ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ನೋಟೀಸು

—(೦)—

ಹುಬ್ಬಳ್ಳಿ ತಾಲೂಕ್ಕೈಕಿ ಗಣೇಶ ಪೇಟೆ ಗಲ್ಲಿ ರುಪಂಧಾ ನೀಲಪ್ಪಾ ಕಾಳಮ್ಮನವರ ಇವರಿಗೆ—

ಕೆಳಗೆ ಸಹಿ ಮಾಡುವವಳ ಕಡಿಯಿಂದಾ ಈ ನೋಟೀಸಿನ ಮೂಲಕಾ ತಿಳಿಸುವದೇನಂದರೆ. ನೀನು ನನ್ನ ಲಗ್ನದ ಗಂಡನಿದ್ದು ನನ ಕೂಡಾ ಬಹಳ ಮಾಸ ೭-೮ ವರ್ಷ ಸುರಳಿತ ಪ್ರಪಂಚ ನಡಿಸಿದಿ ಆದರೆ ಇತ್ತೀಚಿಗೆ ನೀನು ಮಬ್ಬ ರಂಡಿಯನಿಟ್ಟುಕೊಂಡು ಅವಳ ಮಾತಿನಸಡಿಗೆ ಲಕ್ಷ್ಯಕೊಟ್ಟು ನನ್ನನ್ನು ಹೊಡದು ಬಡದು ಮಾಡಿ ಮನಿಬಿಟ್ಟು ಹೊರಗೆ ಹಾಕಿ ಅಜಮಾಸು ೩ ವರ್ಷ ಆಯಿತು ಈ ವರೆಗೂ ನನ್ನನ್ನು ಕರಿಯಲಿಕ್ಕೆ ಬರಲಿಲ್ಲಾ ಕಾರಣಾ ನೀನು ಈ ನೋಟೀಸು ಮುಟ್ಟಿದ ೮ ದಿವ್ಸದೊಳಗಾಗಿ ನನಗೆ ಹತ್ತಿದ ಹೊಟ್ಟಿಯ ಖರ್ಚ ವ ಅರಿವೆಯ ಖರ್ಚ ಮಟ್ಟು ಯರಡು ನೂರು (೨೦೦) ಸಾಲ ಆಗಿರುತ್ತದೆ ಆ ಸಾಲ ಫೆಡ ಮಾಡಿ ಕರಕೊಂಡು ಹೋಗಬೇಕು ಇಲ್ಲದ್ದರೆ ಇದೇ ನೋಡ ಚೀಟಿ ಅಂತಾ ತಿಳಿಯತಕ್ಕದ್ದು ಮುಂದೆ ನನ್ನ ಮೇಲೆ ನಿನ್ನದು ಯಾವತರದ್ದು ಹಕ್ಕು ನನ್ನ ಮೇಲೆ ನಡಿಯಲಿಕ್ಕಿಲ್ಲಾ ಅಂತಾ ನಾನು ಕೊಟ್ಟ ನೋಟೀಸು ತಾ॥ ೧೫-೯-೨೮

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಬಸಪ್ಪಾ ಕೋಂ ನೀಲಪ್ಪಾ ಕಾಳಮ್ಮನವರ ಇವರದು ಅದೆ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ನಾಲಿಗೆ ಮೂರಾಣೆ— ಇಂಗ್ಲಿಷನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾ. ವಿಜಯ ಧಾರವಾಡ

ಈ ಪತ್ರವನ್ನು ಅನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 144

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಗ್ನಿಹೋತ್ರಿ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಗುರುವಾರ ತಾರೀಖು ೧೯ ನೇ ಸಪ್ಟಂಬರ ೧೯೩೯ (ಸಂಚಿಕೆ ೨೦೪

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಮುಂಜಾನೆ ೧೦ ರಿಂದ ಮಧ್ಯಾಹ್ನ ೧-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧೨ ರ ವರೆಗೆ.

ಚಾಲೂ ಖಾತೆಗಳು:— ಫಕ್ತ ಠೇವಾಗಿ ತೆರೆಯಲ್ಪಡುವವು.

ಸೇವಿಂಗ್ಸ ಬ್ಯಾಂಕು:— ಬಡ್ಡೀ ದರದಿಂದ ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೩ ರೂ.

ಮುದತಿ ಠೇವುಗಳು:— ಒಂದು ವರ್ಷದ ಮುದ್ದತಿಸಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೩॥ ರೂ.

ದೇಣೆ:— ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡೀದರ ೬ ರೂ. ಹತ್ತಿ ಮತ್ತು ಧಾನ್ಯಗಳ ಆಡವಿನ ಮೇಲೂ ಸರಕಾರೀ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ಮ ನಿಯಮಿತ ಕಂಪನಿಯ ಶೇರುಗಳ ನಫೆ ವಸೂಲ ಮಾಡಿ ಆಯಾ ಖಾತೆಗೆ ಜಮೆ ಹಿಡಿಯುವದರಲ್ಲಿಯೂ ಅಥವಾ ಕಳಿಸಿಕೊಡುವದರಲ್ಲಿಯೂ ಮತ್ತು ಯೋಗ್ಯ ಕಮಿಶನ್ ತಕ್ಕೊಂಡು ಗಿರಾಕಿಗಳಿಗೆ ಅವುಗಳ ಖರೀದಿ ವ ವಿಕ್ರಿ ಮಾಡುವದರಲ್ಲಿಯೂ ಒದಗುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವದರಲ್ಲಿಯೂ ಮತ್ತು ಚಕ್ಕು ಹುಂಡಿಗಳನ್ನು ಪಾಸು ಮಾಡುವದರಲ್ಲಿಯೂ ಬರುವದು.

ಬ್ಯಾಂಕಿಗೆ ಮೇಲ್ಕಾಣಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲ ಕಾಲದ ಅಧಿಕಾರವಿರುವದು.

ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಒಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್. ರಿಕಾರ್ಡ್.
ಏಜಂಟರು.

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಶಾಖೆ— ಮಂಗಳವಾರಪೇಟೆ, ಜಕಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯ ದರದಿಂದ ಅಸು ಮತ್ತು ಒಹಳ ಮುದ್ದತಿಯ ಕನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ಕನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ಕನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಹಕೀಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋ ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಲ್ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ ಲಾಗುವು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಮತ್ತೀ ಇಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೨-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ಜತಿನದಾಸರ ಪ್ರೇತಯಾತ್ರೆ

ಮೆರವಣಿಗೆಯಲ್ಲಿ ೧೫೦೦೦೦ ಜನರು.

ಜತಿನ ದಾಸನು ಕೊನೆಯಲ್ಲಿ ೬೩ ದಿವಸಗಳ ಉಪವಾಸದ ನಂತರ ಪರಲೋಕವಾಸಿಯಾದನೆಂದು ಬರೆಯುವದಕ್ಕೆ ವಿಷಾದಪಡುತ್ತೇವೆ. ಇಂಥ ಅದ್ವಿತೀಯ ದೇಶಭಕ್ತನ ಜೀವ ಉಳಿಸಿಕೊಳ್ಳಬೇಕೆಂದು ಮಹಾತ್ಮರು ಸಹ ಅಭಿಪ್ರಾಯ ಪಟ್ಟಿದ್ದರು. ಮ್ಯಾಕಸ್ವಿನಿ ಸಾಹೇಬನಂತೆ ಜತಿನದಾಸರ ಕೀರ್ತಿಯು ಹಿಂದುಸ್ಥಾನದ ಸ್ವರಾಜ್ಯದ ಇತಿಹಾಸದಲ್ಲಿ ಸೂರ್ಯಚಂದ್ರರಿರುವತನಕ ಉಳಿಯತಕ್ಕದ್ದಾಗಬೇಕೆಂದು ದೇವತಾ ಸಂಕಲ್ಪವಾದ್ದರಿಂದ, ಜತಿನದಾಸನು, ತನ್ನ ಹೆಸರು ಸಂಸ್ಮರಣೀಯವಾಗುವಂತೆ ವರ್ತಿಸಿ, ಪರಲೋಕವಾಸಿಯಾದನು. ಈ ಬಗ್ಗೆ ಈತನ ಜಯ ಜಯಕಾರವನ್ನೇ ಮಾಡತಕ್ಕದ್ದು.

ಲಾಹೋರಿನಲ್ಲಿ ಈತನ ಮರಣ ವರ್ತಮಾನ ಕೇಳಿದ ಕೂಡಲೆ ಸಾವಿರಾರು ಜನರು ತುರಂಗದ ಮುಂಬಾಗಿಲಲ್ಲಿ ಸೇರಿದರು. ಪ್ರಚಂಡ ಮೆರವಣಿಗೆ ಹೊರಟಿತು. ಜತಿನನ ಹಾಗೂ ರಾಜ್ಯಕ್ರಾಂತಿಯ ಜಯ ಜಯಕಾರವಾಯಿತು. ಮೆರವಣಿಗೆಯಲ್ಲಿ ಸಾವಿರಾರು ಜನ ಸ್ತ್ರೀಯರು ಕೂಡಿದ್ದರು. ಈತನ ಮೇಲೆ ತೂರಿದ ಹಣಗಳ, ಹಾಕಿದ ಮಾಲೆಗಳ ಗಣತಿಯೇ ಇಲ್ಲ. ಜತಿನನ ದೇಹವು ಕೃಶವಾಗಿದೆ. ಕಣ್ಣು ಒಳಸಟ್ಟಿವೆ. ಮೋರೆಯ ಮೇಲೆ ಕುರುಹಾದರೂ ಕಳೆಯುಳಿದಿಲ್ಲ. ನೋಡುವದಕ್ಕೆ ಅಸಹ್ಯವಾಗಿದೆ. ಜನರು ಸ್ವದೇಶ ಹಿತಕ್ಕಾಗಿ ದೇಹತ್ಯಾಗ ಮಾಡಿದ ತೇಜವು ಹೊಳೆಯುತ್ತಿತ್ತು.

ಒಬ್ಬ ದೇಶಭಕ್ತನ ಪ್ರಾಣತ್ಯಾಗಕ್ಕೆ ಸರಕಾರವನ್ನು ಪ್ರತಿಯೊಬ್ಬರು ಹಳಿಯುತ್ತಿದ್ದರೆ ಆಶ್ಚರ್ಯವಲ್ಲ.

ಜತೀಂದ್ರನು ಬಂಗವಾಸಿ ಕಾಲೇಜದ ವಿದ್ಯಾರ್ಥಿಯು. ತಮ್ಮ ಶಿಷ್ಯನಾದ ಈತನ ಸತ್ಯಾಗ್ರಹ ನೋಡಿ, ತಮಗೆ ಅಭಿಮಾನವಾಗಿರುತ್ತದೆಂದು ಪ್ರೊಫೆಸರ ಸ್ಯಾನ್ಯಾಲರು ಉದ್ಗಾರ ತೆಗೆದಿದ್ದಾರೆ.

ಪ್ರೇತಯಾತ್ರೆ.

ಹೌರಾ ಸ್ಟೇಶನದಲ್ಲಿ ಜತಿನದಾಸರ ಕಳೇಬರವು ಇಳಿಸಲ್ಪಡುವದೆಂದು ಕಲಕತ್ತೆಯಲ್ಲಿ ಗೊತ್ತಾದ ಕೂಡಲೆ ಲಕ್ಷಗಟ್ಟಲೆ ಜನರು ಹೌರಾ ಸ್ಟೇಶನವನ್ನು ಮುತ್ತಿದರು. ಸುಮಾರು ನಾಲ್ಕು ಮೈಲುಗಳವರೆಗೆ ಅದು ಜನಸಮುದ್ರದಂತೆ ಕಂಡಿತು. ಸ್ಟೇಶನ್ನಿಗೆ ಶ್ರೀಮತಿ ವಾಸಂತಿದೇವಿದಾಸ ಶ್ರೀ ಸೇನಗುಪ್ತ, ಶ್ರೀ ಸುಭಾಷಚಂದ್ರಬೋಸ ಮೊದಲಾದವರು ಬಂದಿದ್ದರು.

ಬಂಡಿಯು ಸ್ಟೇಶನ್ನಿಗೆ ಬಂದ ಕೂಡಲೆ ವಂದೇ ಮಾತರಂ ಪ್ರಚಂಡ ಜಯ ಘೋಷದಲ್ಲಿ ಕಳೇಬರವನ್ನು ಕೆಳಗಿಳಿಸಿ, ಕಟ್ಟಿಗೆಯ ಒಂದು ಪೆಟ್ಟಿಗೆಯಲ್ಲಿರಿಸಿದರು. ಆಗ ಪುಷ್ಪಮಾಲೆಗಳ ಸುರಿಮಳೆಯಾಯಿತು. ಹೌರಾ ನಗರಸಭೆಯವರು ಮೊದಲು ಪುಷ್ಪಮಾಲೆ ಹಾಕುವ ಸನ್ಮಾನ ಹೊಂದಿದರು.

ಕಲಕತ್ತಾ ಕಾಂಗ್ರೆಸ ಸಮಿತಿಯವರು ಶ್ರೀ॥ ಸುಭಾಷಚಂದ್ರರ ನೇತೃತ್ವದಲ್ಲಿ ಮೆರವಣಿಗೆಯ ವ್ಯವಸ್ಥೆಯನ್ನು ಚನ್ನಾಗಿ ಇಟ್ಟಿದ್ದರು. ಕಲಕತ್ತಾ ಟೌನಹಾಲಿನಿಂದ ಮೆರವಣಿಗೆ ಹೊರಟಿತು. ಒಂದೂವರೆ ಲಕ್ಷ ಜನರು ಮೆರವಣಿಗೆಯಲ್ಲಿದ್ದರು. ಸ್ವ. ದಾ. ಚಿತ್ತರಂಜನದಾಸರನ್ನು ಸುಟ್ಟ ಸ್ಥಳದಲ್ಲಿಯೇ ಪ್ರೇತಕ್ಕೆ ಅಗ್ನಿಸಂಸ್ಕಾರ ಮಾಡಿದರು.

"ನಾನು ಬಂಗಾಲಿಯಲ್ಲ ಹಿಂದಿ ಮನುಷ್ಯ"

ಇವೇ ಜತಿನದಾಸರ ಕಡೆಯ ಶಬ್ದಗಳು. ತಮ್ಮ ಪ್ರೇತಸಂಸ್ಕಾರವು ಬಂಗಾಲದ ಧಾರ್ಮಿಕ ರೀತಿಯಿಂದಾಗಕೂಡದೆಂದು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು.

ಲಾಹೋರದ ಸಭೆ.

ಜತಿನದಾಸರ ಮರಣದ ಬಗ್ಗೆ ದುಃಖಪ್ರದರ್ಶನ ಮಾಡಲು ಸಭೆಗೂಡಿತ್ತು. ಸುಪ್ರಸಿದ್ಧ ಮುಸಲ್ಮೀಯರೂ ರಾಷ್ಟ್ರೀಯರೂ ಆದ ಡಾ॥ ಆಲಮರು ಜತಿನರ ಪ್ರೇತಯಾತ್ರೆಯಲ್ಲಿ ಭಾಗ ತೆಗೆದುಕೊಂಡಿದ್ದು ತಮ್ಮ ತೋಳು ಪುನೀತವಾಯಿತೆಂದರು. ಡಾಕ್ಟರ ಗೋಪಿಚಂದರು, ಮಾಕ್ಸ್ವಿನಿಯು ಐರ್ಲಂಡಕ್ಕೆ ಸ್ವಾತಂತ್ರ್ಯ ಕೊಟ್ಟಂತೆ ಜತಿನರು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ತರುವರೆಂದು ಅಂದರು.

ಇದೇ ಸಭೆಯಲ್ಲಿ, ಡಾಕ್ಟರ ದ್ವಯರಾದ ಆಲಮರೂ ಗೋಪಿಚಂದರೂ ತಾವು ಪಂಜಾಬ ಕೌನ್ಸಿಲಿನ ಸದಸ್ಯತ್ವಕ್ಕೆ ರಾಜೀನಾಮೆಯಿತ್ತಂತೆ ಹೇಳಿದರು.

ಕಲಕತ್ತೆಯಲ್ಲಿ ಸಭೆಗಳು.

ಕಲಕತ್ತೆಯಲ್ಲಿ ಒಂದೇ ಸಮಯಕ್ಕೆ ನೂರು ಸಭೆ ಸೇರಿದ್ದವು. ಶ್ರೀ ಸೇನಗುಪ್ತ, ಸುಭಾಷಚಂದ್ರರು ಒಂದೆಡೆಯಲ್ಲಿ ಭಾಷಣ ಮಾಡಿದರು. ಸರ್ ನೀಲರತ್ನ ಸರ್ಕಾರ, ರಮಾನಂದ ಚಟರ್ಜಿ ಮುಂತಾದವರು ಬೇರೆ ಕಡೆಗಳಲ್ಲಿ ಭಾಷಣ ಮಾಡಿದರು.

ಧಾರವಾಡದಲ್ಲಿ ಸಭೆ.

ಸೋಮವಾರ ಸಾಯಂಕಾಲದಲ್ಲಿ ಕಡಪಾ ಮೈದಾನದಲ್ಲಿ ಸಭೆ ಸೇರಿತು. ಶ್ರೀ ಹೊನ್ನಾಪುರ ಮಠದ ಗದಿಗೆಯ್ಯನವರು ಅಧ್ಯಕ್ಷರಾಗಿದ್ದರು. ಶ್ರೀ ದಿವಾಕರ ಕರಮರಕರರ ಭಾಷಣಗಳಾಗಿ ದುಃಖಪ್ರದರ್ಶಕ ಗೊತ್ತು ಪಾಸಾಯಿತು.

ಸಂಯುಕ್ತ ಪ್ರಾಂತದ ತರುಣರ ದುಃಖ ಪ್ರದರ್ಶನ.

ಲಖನೌದಲ್ಲಿ ಸಂಯುಕ್ತ ಪ್ರಾಂತದ ತರುಣರ ಪ್ರಥಮ ಸಭೆಯು ಶ್ರೀ ಸರೋಜಿನಿನಾಯ್ಡುರವರ ಅಧ್ಯಕ್ಷತೆಯಲ್ಲಿ ನಡೆದಿದೆ. ಶ್ರೀಮತಿಯವರು ಜತಿನರ ಮರಣದ ಬಗ್ಗೆ ಹೇಳುತ್ತ "ಜತಿನದಾಸರು ತಮ್ಮ ಜೀವನವನ್ನು ತತ್ವಕ್ಕೋಸ್ಕರ ಬಲಿಕೊಟ್ಟರು. ತತ್ವಕ್ಕೆ ಬಲಿಕೊಡುವದು ಜೀವನದ ನಿಜ ಸೌಂದರ್ಯ. ಸ್ವಯಂ ಸೌಂದರ್ಯವಾಗಿದ್ದ, ಜತಿನರನ್ನು ಎಂದೂ ಮರೆಯುವಂತಿಲ್ಲ." ಎಂದು ಹೇಳಿದರು. ಮುಂದೆ ದುಃಖಪ್ರದರ್ಶನದ ಒಂದು ಗೊತ್ತುವಳಿಯು ಸ್ವೀಕರಿಸಲ್ಪಟ್ಟಿತು.

ಮುಂಬೈ, ಪುಣೆ, ದಿಲ್ಲಿ, ಲಖನೌ, ಅಲಹಾಬಾದ, ಸಿಮ್ಲಾ, ಮೀರತ ಮೊದಲಾದ ಪಟ್ಟಣಗಳಲ್ಲಿ ಸಭೆಸೇರಿ ದುಃಖಪ್ರದರ್ಶಕ ಗೊತ್ತುಗಳು ಸ್ವೀಕರಿಸಲ್ಪಟ್ಟವು.

ದಿಲ್ಲಿ, ಪುಣೆ, ಮೀರತ, ಲಾಹೋರಗಳಲ್ಲಿ ಹರತಾಳವು ಪಾಳಿಸಲ್ಪಟ್ಟಿತು. ಮುಂಬೈಯ ಸರಾಫರು ತಮ್ಮ ವ್ಯವಹಾರ ಬಂದಿಟ್ಟರು. ಸೊಲ್ಲಾಪುರದ ಪೇಟೆಯು ಬಂದಾಯಿತು.

ಮುಂಬೈ ಮ್ಯುನಿಸಿಪಾಲಿಟಿಯ ಸಭೆಯು ಸೋಮವಾರ ಸೇರಿತ್ತು. ಮಿ॥ ಕೆ. ಎಫ್. ನರೀಮನ್‌ರು ಶ್ರೀ॥ ಜತಿನರ ಮರಣದ ಬಗ್ಗೆ ದುಃಖಪ್ರದರ್ಶನ ಮಾಡುವ ಗೊತ್ತು ತಂದರು. ಶ್ರೀ॥ ನೇಲವಾಡರು ಅನುಮೋದಿಸಿದ ನಂತರ ಗೊತ್ತು ಸ್ವೀಕರಿಸಲ್ಪಟ್ಟು, ಸಭೆಯ ಮುಂದಿನ ಕೆಲಸವು ನಿಲ್ಲಿಸಲ್ಪಟ್ಟಿತು.

ಮತ್ತೊಬ್ಬ ಅನ್ನತ್ಯಾಗಿಯ ಅಂತ್ಯಾವಸ್ಥೆ

ಶ್ರೀ ಯತೀಂದ್ರನಾಥರಂತೆ ಇನ್ನೊಬ್ಬ ಅನ್ನತ್ಯಾಗಿಗಳ ಅವಸ್ಥೆಯು ಚಿಂತಾಜನಕವಾಗಿದೆ. ಮೇ ೧೪ರಿಂದ ಇವರು ಅನ್ನತ್ಯಾಗ ಮಾಡಿದ್ದಾರೆ. ಪಂಡಿತ ಮದನ ಮೋಹನ ಮಾಲವೀಯವರು ಈ ವಿಷಯವಾಗಿ ಚರ್ಚಿಸಲೋಸುಗ ಅಸೆಂಬ್ಲಿಯ ಕೆಲಸವನ್ನು ನಿಲ್ಲಿಸಲು ನೋಟೀಸು ಕೊಟ್ಟಿದ್ದಾರೆ.

ಅಸ್ಪೃಶ್ಯರಿಗಾಗಿ ಬಿಲ್ಲು.

ಅಸೆಂಬ್ಲಿಯಲ್ಲಿ ಮಿ ಜೈಕರ ಸಾಹೇಬರು ಈ ಬಿಲ್ಲನ್ನು ದೇಶದ ಅಭಿಪ್ರಾಯಕ್ಕೋಸ್ಕರ ಕಳಿಸಲು ಒಪ್ಪಿದರು. ಅಸೆಂಬ್ಲಿಯಲ್ಲಿ ಈ ವಿಷಯವಾಗಿ ನಡೆದ ವಾದ ವಿವಾದವನ್ನು ನಾಳಿನ ಸಂಚಿಕೆಯಲ್ಲಿ ಕೊಡುವೆವು.

ಜತಿನರ ಮರಣ ವಾರ್ತೆಯನ್ನು ಕೇಳಿ, ಲಖನೌ ದಿಲ್ಲಿ, ಮುಂಬೈ ಕಲಕತ್ತಾ ಮೊದಲಾದ ಪಟ್ಟಣಗಳ ನಗರ ಸಭೆಗಳು ಕಾರ್ಯ ನಿಲ್ಲಿಸಿ ದುಃಖ ಪ್ರದರ್ಶಕ ಗೊತ್ತುಗಳನ್ನು ಪಾಸಮಾಡಿದವು. ಅಹ್ಮದಾಬಾದದಲ್ಲಿಯು ಆಲ್ ಇಂಡಿಯಾ ಕಾಂಗ್ರೆಸ ಕಮೀಟಿಯು ಬಂದಿಡಲ್ಪಟ್ಟಿತು.

ಬೆಳಗಾವಿಯಲ್ಲಿ ಶ್ರೀಯುತ ವಲ್ಲಭಭಾಯಿಯವರು

೧೬ ನೆಯ ತಾರೀಖಿನ ದಿನ ಶ್ರೀ ವಲ್ಲಭಭಾಯಿಯವರು ಬೆಳಗಾವಿಗೆ ಬಂದರು. ಮುಂಜಾನೆ ನಗರ ಸಭೆಯು ಅವರಿಗೆ ಮಾನಪತ್ರಾರ್ಪಣೆ ಮಾಡಿ ಬಾರಡೋಲಿಯ ಬಗ್ಗೆ ಅವರು ಮಾಡಿದ ಸ್ವಾರ್ಥತ್ಯಾಗವನ್ನು ವರ್ಣಿಸಿ ಗುಣವರ್ಣನೆ ಮಾಡಿತು. ಮಾನಪತ್ರಕ್ಕೆ ಉತ್ತರ ಕೊಡುವಾಗ್ಗೆ ಶ್ರೀ ಪಟೇಲರು "ಮ್ಯುನಿಸಿಪಾಲಿಟಿಯನ್ನು ಸುಧಾರಿಸಲು ಅನೇಕ ಅಡಚಣೆಗಳು ಬಂದೊದಗುತ್ತವೆ. ಸರಕಾರದವರು ಮತ್ತು ಲೋಕಲಬೋರ್ಡ ಮೊದಲಾದವುಗಳ ತೆರಿಗೆಯಿಂದ ಪಟ್ಟಣಕ್ಕೆ ಹಾನಿಯಾಗುತ್ತದೆ. ಮ್ಯುನಿಸಿಪಾಲಿಟಿಗಳು ಬ್ರಾಹ್ಮಣ ಬ್ರಾಹ್ಮಣೇತರದ ಹೋರಾಟಕ್ಕೆ ಸಿಕ್ಕು ಬಡವಾಗುತ್ತವೆ. ಬಾರಡೋಲಿಯಂತೆ ಶಿಸ್ತು ಕಲಿಯಿರಿ ಎಂದು ಹೇಳಿದರು.

ಶಹಾಪುರದಲ್ಲಿ ಶ್ರೀ|| ವಲ್ಲಭಭಾಯಿಯವರು ಒಂದು ಭಾಷಣ ಮಾಡಿದರು. ಗಂಗಾಧರರಾಯರು ಅಧ್ಯಕ್ಷರಾಗಿದ್ದರು. ಶ್ರೀ|| ಪಟೇಲರು, ದೇವರಲ್ಲಿ ವಿಶ್ವಾಸವಿಟ್ಟು, ದೇವರಿಗೆ ಅಂಜಿ, ಕಾರ್ಯ ಮಾಡಿರಿ. ಎಂದು ಹೇಳಿದರು. ಜಾತಿ ವೈಮನಸ್ಸಿನ ಬಗ್ಗೆ ಹೇಳುವಾಗ, ಹೊರಗೆ ತೋರಿಸುವ ಧರ್ಮದ ಡಂಭ ಕೊಟ್ಟು ತಮ್ಮ ದೇವರು ಹೆಚ್ಚು ಎಂಬುದನ್ನು ಬಿಡಿರಿ, ಯಾಕೆಂದರೆ ದೇವರು ಒಬ್ಬನೇ ಇದ್ದಾನೆ ಎಂದು ಉಪದೇಶಿಸಿ, ಕಟ್ಟಕಡೆಗೆ ಸ್ವದೇಶಿ ವಸ್ತುಗಳನ್ನೇ ಉಪಯೋಗಿಸಿ ಬಡ ರೈತರಿಗೆ ಅನ್ನ ಕೊಡಿರೆಂದು ಹೇಳಿದರು.

ಕರ್ನಾಟಕದಲ್ಲಿಯೂ, ತಮಿಳು ನಾಡಿನಲ್ಲಿಯೂ ಹಿಂ ಸೇ. ದಲದವರು ಕಾಂಗ್ರೆಸ ಸದಸ್ಯರನ್ನು ಮಾಡತೊಡಗಿದ್ದಾರೆ.

ಸೈಮನ್ ಕಮೀಶನ್‌ದ ರಿಪೋರ್ಟ.

ಒಮ್ಮೆಲೆ ವಸಾಹಾತಿನ ಸ್ವರಾಜ್ಯ ಸಿಕ್ಕಲಾರದು.

—)(o)(—

ಸಾಯಮನ್ ಕಮೀಶನ್‌ವು ಇದೇ ತಿಂಗಳ ೨೪ ಕ್ಕೆ ರಿಪೋರ್ಟ ಬರೆಯಲು ಪ್ರಾರಂಭಿಸುವದು. ಆಗ ಒಮ್ಮೆಲೆ ವಸಾಹಾತಿನ ಸ್ವರಾಜ್ಯ ಸಿಗಲಾರದೆಂದು ಇಂಗ್ಲಂಡದ ಪತ್ರಗಳು ಅನ್ನುತ್ತವೆ. ರಿಪೋರ್ಟು ೧೯೩೦ ನೆಯ ಫೆಬ್ರುವರಿಯಲ್ಲಿ ಸೇರುವ ಪಾರ್ಲಮೆಂಟಿನ ಮುಂದೆ ಬಿಲ್ಲಿನ ಸ್ವರೂಪದಿಂದಲ್ಲದು ಬರುವದೆಂದು ಹೇಳುತ್ತಾರೆ.

ಸರಕಾರಕ್ಕೆ ಸೋಲು.

—(o)—

ಸಿಂಧದಲ್ಲಿ ಖಾನಬಹಾದ್ದೂರ ಭೂತೋಜಾ ಜೇಲಿನ ಮೇಲೆ ಖೂನಿಯ ಆರೋಪವಿಟ್ಟು ಬಿಟ್ಟು ಹಾಕಿದ್ದನ್ನು ಸರಕಾರದವರು ತಿರುಗಿ ತೆಗೆದುಕೊಂಡಿದ್ದರು. ಆದರೆ ನ್ಯಾಯಾಧೀಶರು ಸರಕಾರಕ್ಕೆ ಆ ತರಹದ ಆಸ್ಪದ ಕೊಡಲಿಲ್ಲ.

ವಿವಿಧ ವರ್ತಮಾನಗಳು

ಮುಂಬಯಿ ಸರಕಾರದ ಹಿಂದೂ ಮುಸಲ್ಮಾನ ದಂಗೆಯ ವಿಚಾರಣೆಗೋಸ್ಕರ ಒಂದು ಕಮೀಟಿ ನಿಯಮಿಸಿದ್ದರಷ್ಟೇ; ಇವರು ಹಿಂದೂ ಮುಸಲ್ಮಾನರ ನಡುವಿನ ಜಗಳವನ್ನು ನಿಂದಿಸಲು ಉಪಾಯಗಳನ್ನು ಹೇಳುವಾಗ ಅನ್ಯೋನ್ಯ ಪ್ರೀತಿಯ ಹೊರತಾಗಿ ಮತ್ತಾವ ಉಪಾಯವೂ ಇಲ್ಲವೆಂದಿದ್ದಾರೆ.

ಮದ್ರಾಸ ಕೌನ್ಸಿಲ್ಲಿನಲ್ಲಿ ಲೋಕಲ್‌ಬೋರ್ಡ, ಮುನಿಸಿಪಾಲ್ಟಿಗಳಿಗೆ ನಾಮಿನೇಶನ್ ಮಾಡಬಾರದೆಂಬ ಠರಾವು ಬಂದಿದೆ.

ಲಾಹೋರದಲ್ಲಿ ಕೂಡುವ ಕಾಂಗ್ರೆಸ್ಸಿಗೋಸ್ಕರ ೯೦ ಎಕರೆಯಷ್ಟು ವಿಶಾಲವಾದ ಸ್ಥಳವನ್ನು ಉಪಯೋಗಿಸಬೇಕೆಂದು ನಿರ್ಣಯಿಸಿದ್ದಾರೆ.

ಶ್ರೀ. ಸಿ. ರಾಜಗೋಪಾಲಾಚಾರ್ಯರು ಹುಬ್ಬಳ್ಳಿಯ ರೇಲ್ವೆ ಯೂನಿಯನ್ನಿನ ಕಟ್ಟಡದಲ್ಲಿ ಭಾಷಣ ಮಾಡಿದರು.

ಬ್ಯಾಡಗಿಯಲ್ಲಿಯೂ, ಹಿರೇಕೇರೂರಿನಲ್ಲಿಯೂ, ಪರದೇಶದಿಂದ ತಿರುಗಿಬಂದ ಶ್ರೀ ಆರ್ ಎಸ್. ಪಾಟೀಲರ ಅಭಿನಂದನೆ ಮಾಡಲ್ಪಟ್ಟಿತು.

ಗುತ್ತಲದಲ್ಲಿ ಕಲಾ ಪ್ರದರ್ಶನವಾಗಲಿದೆ. ವಸ್ತುಗಳನ್ನು ಕಳುಹಿಸುವವರು ಇದೇ ತಿಂಗಳ ಕಡೆಯವಾರದಲ್ಲಿ ಕಳುಹಿಸಬೇಕು.

ಹಿಂದೀ ವೈಮಾನಿಕನಾದ ಕಾಬೂಲಿಯು ವೈದ್ಯರ ಹೇಳಿಕೆಯ ಮೇರೆಗೆ ಹಿಂದುಸ್ಥಾನಕ್ಕೆ ತನ್ನ ವಿಮಾನದ ಮೇಲಿಂದ ಬರುವದನ್ನು ಬಂದು ಮಾಡಿದ್ದಾನೆ.

ಧಾರವಾಡ—

ಮಂಗಳವಾರ ದಿನ, ಕರ್ನಾಟಕ ಕಾಲೇಜಿನ ನಟರು ವೈ ವಾ. ಶ್ರೀ ಲೊದ್ದಾರಾಯರ ಸ್ಮರಣೆಯನ್ನು ಕರ್ನಾಟಕ ಕಾಲೇಜದಲ್ಲಿ ಶಾಶ್ವತವಾಗಿಡಲು, "ಪತಿತಪಾವನ" ವೆಂಬ ನಾಟಕವನ್ನಾಡಿದರು ೯೦೦ ಕ್ಕಿಂತಲೂ ಹೆಚ್ಚು ರೂಪಾಯಿ ಪ್ರಾಪ್ತಿಯಾಯಿತು.

ಈಗಿರಡು ದಿನಗಳಿಂದ ಮೋಡವಾಕುತ್ತಲಿದ್ದು ದಿನಾಲು ಒಂದೆರಡು ಒಳ್ಳೆಯ ಸರವುಗಳಾಗುತ್ತಲಿವೆ

ನೋಟೀಸು.

ಸವದತ್ತಿ ಮ್ಯುನಿಸಿಪಾಲಿಟಿ ಕಮೀಟಿಯಿಂದಾ ಯಾವತ್ತು ಜನರಿಗೆ ತಿಳಿಸುವದೇನಂದರೆ— ಶ್ರೀ ಯಲ್ಲಮ್ಮನ ಗುಡ್ಡಕ್ಕೆ ಬರುವ ಯಾತ್ರಿಕರ ಮೇಲೆ ವಸೂಲ ಮಾಡುವ ತಲೆಪಟ್ಟಿ, ಗಾಡಿ, ಮೋಟರ ಮತ್ತು ಜನಾವರಗಳ ಮೇಲೆ ವಸೂಲ ಮಾಡುವ ಕರಗಳ ಮತ್ತು ಭಾದ್ರಪದ ಕೃಷ್ಣ ಅಮಾವಾಸ್ಯೆದ (ತಾ|| ೩-೧೦-೧೯೨೮) ಮಧ್ಯರಾತ್ರಿಯಿಂದಾ ಮಾರ್ಗಶೀರ್ಷ ಕೃಷ್ಣ ಅಮಾವಾಸ್ಯೆ ಮಧ್ಯರಾತ್ರಿವರೆಗಿನ (ತಾ|| ೩೦-೧೨-೧೯೨೮) ಮುದ್ದತಿಯ ಬಗ್ಗೆ ಕೊಡತಕ್ಕದ್ದು ಇದ್ದು ಆ ಬಾಬತ ಲಿಲಾವ ತಾ|| ೨೬-೯-೧೯೨೮ ಇಸ್ವಿ ದಿವಸ ಮಧ್ಯಾಹ್ನ ೪ ಘಂಟೆಕ್ಕೆ ಮ್ಯುನಿಸಿಪಾಲಿಟಿ ಕಚೇರಿಯಲ್ಲಿ ಮಾಡಿಕೊಡುವದರಲ್ಲಿ ಬರುವದು. ಸವಾಲಿನಲ್ಲಿ ಬೋಲಿಬೋಲುವವರು ತಾಲೂಕ ಅಮಲದಾರರಿಂದಾ ಲಾಯಖಿ ಸರ್ಟಿಫಿಕೇಟ ತಕ್ಕೊಂಡು ಹಾಜರ ಇರಬೇಕು ಮತ್ತು ಅದನ್ನು ಕಮೀಟಿ ಸಮಕ್ಷಮ ಹಾಜರ ಮಾಡಬೇಕು. ಲಾಯಖಿ ಸರ್ಟಿಫಿಕೇಟ ಇಲ್ಲದಂಥವರ ಸವಾಲು ತೆಗೆದುಕೊಳ್ಳುವದು ಕಮೀಟಿಯ ಮರ್ಜಿ ಮೇಲೆ ಇರುತ್ತದೆ ಸವಾಲ ಮಂಜೂರಾದ ಕೂಡಲೇ ಲಿಲಾವಿನ ಯಾವತ್ತು ರಕಂ ಜಮಾ ಮಾಡಬೇಕು. ಮತ್ತೆದ ಬಾಬತ್ತು ಶರ್ತು ಲಿಲಾವಿನ ಕಾಲಕ್ಕೆ ಪ್ರೋದ ಹೇಳುವದರಲ್ಲಿ ಬರುವದು. ತಿಳಿಯಬೇಕು.

ತಾ|| ೧೪-೯-೧೯೨೮

B. S. HAMPANNAVAR,
President, S. Y. M.

R. G. Nargund,
Secretary.

ಜಾಹೀರ ನೋಟೀಸು

—(೦)—

ನಾನು ಯಲ್ಲಪ್ಪಾ ಚನ್ನ ತಿಪ್ಪಣ್ಣಾ ಹರಪನಹಳ್ಳಿ, ಸಾ|| ಧಾರವಾಡ ಈ ಜಾಹೀರ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಸುವದರಲ್ಲಿ ಬರುತ್ತದಲ್ಲಾ-

ನನ್ನ ಅಂಣನ ಹೆಂಡತಿಯಾದ ಮಲ್ಲವ್ವಾ ಕೋಂ ಯಂಕಪ್ಪಾ ಹರಪನಹಳ್ಳಿ ಸಾ|| ಧಾರವಾಡ ಹಾಲಿವಸ್ತಿ ಗದಗ ಈಕಿಗೆ- ಆಕಿಯ ಜೀವಮಾನ ಇರುವ ತನಕ ನಮ್ಮ ಪಿತ್ರಾರ್ಜಿತ ಆಸ್ತಿ ಅಂದರೆ ಉಪ್ಪಾಗಡ್ಡಿ ಓಣಿಯಲ್ಲಿರುವ ಮನಿಯ ಪೈಕಿ ಅರ್ಧಾ ಮನಿ ಪಶ್ಚಿಮ ಕಡೇದು ಮತ್ತು ಅದರ ಹೊಂದಿಗೆ ಇರುವ ಪಡಭಾಗಾ ಹಿತ್ತಲಾ ಉಪಭೋಗ ಮಾಡಿಕೋಬೇಕು ಮತ್ತು ತಾನು ಅದರಲ್ಲಿ ಇರಬೇಕು ಅಂತಾ ನನ್ನ ವ ಆಕಿಯ ನಡುವೆ ಉತ್ಪನ್ನವಾದ ತಂಟೆಯನ್ನು ನಾಲ್ಕು ಮಂದಿ ಪಂಚಜನರ ಸಮಕ್ಷಮ ನಿಕಾಲಿ ಮಾಡಿಕೊಂಡು ಆ ಬಗ್ಗೆ ಆಕಿಯ ಖಾತ್ರಿ ದಶೆಯಿಂದ ಒಂದು ಕಾಗದ ಸಹ ಬರಕೊಟ್ಟಿದೆ ತಾ|| ೧೧-೭-೧೯೩೪ ನೇ ಇಸ್ವಿ ಆದರೆ ಸದರ ನನ್ನ ಅತ್ತಿಗೆಯಾದ ಮಲ್ಲವ್ವಾ ಕೋಂ ಯಂಕಪ್ಪಾ ಹರಪನಹಳ್ಳಿ ಈಕಿಯು ಸದರ ಆಸ್ತಿಯನ್ನು ಮಾರಾಟ ಮಾಡಿ ವಿಲೇವಾಟ ಮಾಡುವ ಪ್ರಯತ್ನ ನಡಿಸಿದಂತೆ ನನಗೆ ಈಗ ತಿಳಿಯಬಂದಿರುತ್ತದೆ ಕಾರಣ ಯಾರಾದರೂ ನನ್ನ ಸಮ್ಮತಿ ಇಲ್ಲದೆ ಸದರೀ ಆಕಿಯ ಕಡೀಂದಾ ಯಾವದೇ ರೀತಿಯಿಂದಾ ಆಗಲಿ ಆಸ್ತಿ ತಕ್ಕೊಂಡರೆ ಅದು ಗೈರ ಕಾಯದೇಶೀರ ಇದ್ದು ಆ ವ್ಯವಹಾರದಿಂದ ನಾನು ಯಾವ ತರದಿಂದಾನು ಬಾಂಧಯಿಸುವದಿಲ್ಲಾ ವ ಅದು ನನ್ನ ಮೇಲೆ ಬಾಂಧಾಯಿಸಲಿಕ್ಕೆ ಕಾರಣ ಸಹಾ ಇಲ್ಲದ್ದರಿಂದಾ ಸದರೀ ಆಕಿಯ ಕಡಿಂದಾ ತಕ್ಕೊಂಡ ವ್ಯವಹಾರ ಸಂಬಂಧ ಅವರೇ ಲುಕ್ಸಾನಕ್ಕೆ ಜವಾಬದಾರರು ಇರುತ್ತಾರೆ ಅದಕ್ಕೆ ನನ್ನ ಸಮ್ಮಂಧ ಏನೂ ಇಲ್ಲಾ ಯಾಕಂದರೆ ಸದರ ಆಸ್ತಿಯನ್ನು ಮಾರಲಿಕ್ಕೆ ಅಗರ ಪತ್ರಿ ವಗೈರೆ ಹಾಕಲಿಕ್ಕೆ ಆಕಿಗೆ ಏನೂ ಅಧಿಕಾರವಿರುವದಿಲ್ಲಾ ಸದರ ಆಸ್ತಿಯಲ್ಲಿ ಆಕಿಗೆ ತನ್ನ ಜೀವಮಾನವಿರುವ ವರೆಗೆ ಇರಲಿಕ್ಕೆ ಅಗರ ಸದರ ಮನಿ ಈ ಸಮ್ಮಂಧಿ ಬಾಡಿಗೀ ಕರೀಕ ಬಂದ ಉತ್ಪನ್ನ ತಕ್ಕೊಳ್ಳಲಿಕ್ಕೆ ಅಧಿಕಾರವಿರುತ್ತದೆ ಅದ್ದರಿಂದ ಸದರೀ ಆಕಿಯ ಸಂಗಡಾ ಸದರ ಆಸ್ತಿಯ ಸಮ್ಮಂಧಿ ಯಾವದೇ ರೀತಿಯಿಂದಾನೂ ಯಾವ ಥರದ ವ್ಯವಹಾರ ನನ್ನ ಸಮ್ಮತಿ ಇಲ್ಲದೆ ಮಾಡಬಾರದು ಮತ್ತು ಲುಕ್ಸಾನ ಮಾಡಿಕೋಬಾರದು ಅಂತಾ ಯಾವತ್ತು ಜನರಿಗೆ ತಿಳಿಯಬೇಕು ಅಂತಾ ಈ ನೋಟೀಸು ಕೊಟ್ಟಿರುತ್ತೇನೆ ಮತ್ತು ಸದರ ಆಸ್ತಿ ಇವತ್ತಿನವರೆಗೂ ಸನಾಹಿಳ ರೀತಿಯಿಂದ ನನ್ನ ವಹಿವಾಟಿಯಲ್ಲಿದ್ದು ನನ್ನ ತಾಬಾ ಇರುತ್ತದೆ ಸದರೀ ಆಕಿಯು ಸದರ ಆಸ್ತಿಯಲ್ಲಿ ಈವರೆಗೂ ಇರುವದಿಲ್ಲಾ ತಾ|| ೧೯-೯-೩೪ ನೇ ಇಸ್ವಿ

ಸಹಿ- ಯಲ್ಲಪ್ಪಾ ತಿಪ್ಪಣ್ಣಾ ಹರಪನಹಳ್ಳಿ

ನೋಟೀಸಿಗೆ ಉತ್ತರ

—(೦)—

ಬಸನಗೌಡಾ ರುದ್ರಗೌಡಾ ಪಾಟೀಲ ಸಾ|| ಉಪ್ಪಿನಬೆಟಗೇರಿ ತಾಲೂಕ ಧಾರವಾಡ ಇವರಿಗೆ-

ಕೆಳಗೆ ಸಹೀ ಮಾಡುವವನು ಈ ನೋಟೀಸಿನಿಂದಾ ತಿಳಿಸುವದೇನಂದರೆ- ನೀವು ಧಾರವಾಡ ವಿಜಯ ವರ್ತಮಾನಪತ್ರದಲ್ಲಿ ತಾರೀಖು ೨೨ ಆಗಸ್ಟ ೧೯೩೪ ಇಸ್ವಿ ದಿವಸ ಕೊಟ್ಟ ನೋಟೀಸನ್ನು ನೋಡಿದೆನು ಅದರಲ್ಲಿಯ ಬಹುತೇಕ ಮಜಕೂರು ಸುಳ್ಳು ವ ಮಳ್ಳಬಿದು ಇರುತ್ತದೆ ಬಹಳ ಕಾಲದಿಂದಾ ನಮ್ಮ ನಿಮ್ಮ ಆಸ್ತಿತ್ವ ಇದ್ದ ಮೂಲಕಾ ಮತ್ತು ನನ್ನ ಮೇಲೆ ನಿಮ್ಮದು ಪ್ರೀತಿ ಇದ್ದ ಕಾರಣಾ ನೀವು ನನ್ನನ್ನು ದಾನಪ್ರತಿಗ್ರಹಪೂರ್ವಕ ಮತ್ತು ಖ್ಯಾತೀ ರಿವಾಜ ಪ್ರಕಾರಾ ಖುಷಿಯಿಂದಾ ದತ್ತಕ ತೆಗೆದುಕೊಂಡು ತಾ|| ೧೨-೬-೧೯೧೯ ದಿವಸ ದತ್ತಕ ಪತ್ರವನ್ನು ಬರಕೊಟ್ಟು ಅದನ್ನು ನೊಂದಾಯ್ಸಿಕೊಟ್ಟಿರುತ್ತೀರಿ ನೀವು ನನ್ನನ್ನು ದತ್ತಕ ತೆಗೆದುಕೊಳ್ಳುವ ವೇಳೆಗೆ ನೀವು ನೋಟೀಸಿನಲ್ಲಿ ನಮೂದ ಮಾಡಿದಂತೆ ಯಾವ ಕರಾರಗಳನ್ನು ನಿಮ್ಮ ಸಂಗಡ ಮಾಡಿದ್ದಿಲ್ಲಾ ಮತ್ತು ನಿಮಗೆ ಬುಲ್ತಾಪೆ ಯಾವ ರೀತಿಯಿಂದಾನು ಕೊಟ್ಟದ್ದಿಲ್ಲಾ ಆದರೆ ನನ್ನ ದತ್ತಕ ಆದ ಕೆಲವು ದಿವಸಗಳ ಮೇಲೆ ನನ್ನ ದ್ವೇಷಿಕರ ಮಾತು ಕೇಳಿ ನನಗೆ ಲುಕ್ಸಾನೇ ಮಾಡುವ ಇರಾದೆಯಿಂದಾ ನನ್ನ ದತ್ತಕ ಇನಕಾರ ಮಾಡುವ ಪ್ರಯತ್ನ ನಡ್ಸಿರಿ ಆಗ್ಗೆ ನಾನು ಧಾರವಾಡ ೧ನೇ ವರ್ಗ ಸಬ್ಬ ಜಜ್ಜ ಕೋರ್ಟಿನಲ್ಲಿ ನಿಮ್ಮ ಮೇಲೆ ದಾವಾ ತಂದೆನು ಅದರಲ್ಲಿ ನನ್ನ ದತ್ತಕಕ್ಕೆ ಒಪ್ಪಿಕೊಂಡು ನನಗೆ ಬಹುಪರಿಯಿಂದಾ ಹೇಳಿಕೊಂಡದ್ದರಿಂದಾ ಮನೆತನದ ಯಾವತ್ತು ಸ್ಥಾವರ ಜಂಗಮ ಆಸ್ತಿಯನ್ನು ನೀವು ಜೀವಮಾನ ಇರುವವರೆಗೂ ವುಪಭೋಗ ಮಾಡಬೇಕು ಅಂತಾ ಕಬೂಲ ಕೊಟ್ಟೆನು ಆ ಪ್ರಕಾರಾ ನಮ್ಮ ನಿಮ್ಮ ನಡುವೆ ಆಪಸಾತ ಡಿಕ್ರಿ ಆಯಿತು ಸದರ ಡಿಕ್ರಿ ಕಾಲಕ್ಕೆ ನಿಮ್ಮಗೂಡ ನಾನು ಬೇರೆ ಯಾವ ಕರಾರವು ಮಾಡಲಿಲ್ಲಾ ಮತ್ತು ಯಾವ ಸಮಜೂತು ಕೊಟ್ಟಿಲ್ಲಾ ಈ ಬಗ್ಗೆ ನೋಟೀಸಿನಲ್ಲಿ ನೀವು ನಮೋದ ಮಾಡಿದ ಮಜಕೂರು ಸುಳ್ಳು ಇರುತ್ತದೆ ಸದರ ಡಿಕ್ರಿ ಆದ ನಂತರಾ ನೀವು ನನ್ನ ಕೂಡಾ ಚಲೋ ರೀತಿಯಿಂದಾ ಇದ್ದಿರಿ ಮತ್ತು ನೀವು ಮುಪ್ಪಿನವರಾದ್ದರಿಂದಾ ಸ್ವಸಂತೋಷದಿಂದಾ ನನಗೆ ಐದು ವರ್ಷ ಪಾಟೀಲ್ಕಿ ಕೆಲಸಾ ನನಗೆ ನೇಮಿಸಿ ಕೊಟ್ಟಿರಿ ಇಗ್ಗ್ಯೆ ಸಹಾ ನಿಮಗೆ ಯಾವ ಸುಳ್ಳು ಸಮಜೂತು ಕೊಟ್ಟಿಲ್ಲಾ ಹೀಗಿದ್ದು ಈಲೀಕಡಿಗೆ ಪುನಾಃ ನನ್ನ ದ್ವೇಷಿಕರ ಚಿತಾವಣಿಯಿಂದಾ ನನಗೆ ಲುಕ್ಸಾನ ಮಾಡುವ ಇರಾದೆಯಿಂದಾ ಮತ್ತು ಖರ್ಚಿನಲ್ಲಿ ಹಾಕುವ ಉದ್ದೇಶದಿಂದಾ ಈ ಸುಳ್ಳು ನೋಟೀಸು ಕೊಟ್ಟಿರುತ್ತೀರಿ ನನ್ನನ್ನು ನೀವು ದತ್ತಕ ತೆಗೆದುಕೊಳ್ಳುವ ವೇಳೆಗೆ ಏನೂ ದೇಣೆ ಇದ್ದಿಲ್ಲಾ ನಿಮ್ಮ ತಾಬಾದಲ್ಲಿದ್ದ ನಮ್ಮ ಮನೆತನದ ಸ್ಥಾವರ ಆಸ್ತಿಯ ವಾರ್ಷಿಕ ಉತ್ಪನ್ನವು ನಿದಾನ (೧೫೦೦) ರೂಪಾಯಿ ಆಗತಿದ್ದು ದೇಣೇ ಮಾಡಲಿಕ್ಕೆ ನಿಮಗೆ ಯಾವದೂ ಯೋಗ್ಯ ವ ಕಾಯದೇಶೀರ ಕಾರಣವು ಇರುವದಿಲ್ಲಾ ಕೇವಲ ಲುಕ್ಸಾನ ಮಾಡುವ ಇರಾದೆಯಿಂದಾ ಪೋಕಳ ದೇಣೆ ತೋರಿಸುವ ಹವ್ಯಾಸದಲ್ಲಿ ಇದ್ದಂತೆ ತಿಳಿಯುತ್ತದೆ ನಮ್ಮ ಮ[illegible]ತವರ ಸ್ಥಾವರ ಆಸ್ತಿಯನ್ನು ನಿಮ್ಮ ಹಯಾತಿವರೆಗೆ ಉಪಭೋಗ ಮಾಡುವ ಹಕ್ಕು ಮಾತ್ರ ನಿಮಗೆ ಇರುತ್ತದೆ ಅವುಗಳನ್ನು ಯಾವ ರೀತಿಯಿಂದಾನು ವಿಲೇವಾಟ ಮಾಡುವ ಅಧಿಕಾರವು ನಿಮಗೆ ಇರುವದಿಲ್ಲಾ ನೀವು ನನ್ನನ್ನು ದತ್ತಕ ತೆಗೆದುಕೊಂಡ ದಿವಸದಿಂದಾನೆ ನಿಮ್ಮ ಯಾವತ್ತು ಸ್ಥಾವರ ಜಂಗಮ ಆಸ್ತಿಯ ಮೇಲೆ ನನ್ನದು ಕಾಯದೇಶೀ ಹಕ್ಕು ಪ್ರಾಪ್ತವಾಗಿರುತ್ತದೆ ನಮ್ಮ ನಿಮ್ಮ ನಡುವೆ ಆದ ಆಪಸಾತ ಡಿಕ್ರಿಯಿಂದಾ ಸದರ ಆಸ್ತಿಯನ್ನು ನಿಮ್ಮ ಹಯಾತಿವರೆಗೆ ವುಪಭೋಗ ಮಾಡುವ ಅಧಿಕಾರ ಮಾತ್ರ ಪ್ರಾಪ್ತವಾಗಿರುತ್ತದೆ ಇದಕ್ಕೂ ಹೆಚ್ಚಿನ ಅಧಿಕಾರವು ನಿಮ್ಮದು ಸದರ ಆಸ್ತಿಯ ಮೇಲೆ ಇರುವದಿಲ್ಲಾ ಹೀಗಿದ್ದು ನೀವು ಒಂದು ವೇಳೆ ನಿಮ್ಮ ತಾಬಾದಲ್ಲಿ ಇದ್ದ ಮಿಳಕತಿಯನ್ನು ವಿಲೇವಾಟ ಮಾಡಿದರೆ ಅದೂ ನನ್ನ ಮೇಲೆ ಬದ್ಧವು ಇರುವದಿಲ್ಲಾ ನೀವು ನನಗೆ ಸಂತೋಷದಿಂದ ಪಾಟೀಲ್ಕಿ ಕೆಲ್ಸವನ್ನು ಐದು ವರುಷ ನೇಮಿಸಿ ಕೊಟ್ಟದ್ದು ಸದರ ಅವಧಿಯು ಮುಗಿಯುವವರೆಗೆ ಅದನ್ನು ನಾನು ಬಿಡುವದಿಲ್ಲಾ ಮತ್ತು ನಿಮಗೆ ಆ ಪ್ರಕಾರ ಬಿಡಿಸಲಿಕ್ಕೆ ಬರಲಾರದು ಒಂದು ವೇಳೆ ನೀವು ಏನಾದರೂ ದೇಣೆ ಮಾಡಿದರೆ ಅದನ್ನು ನಾನು ತೀರಿಸಲಿಕ್ಕೆ ಜವಾಬದಾರನಲ್ಲಾ ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲೆ ಇರುತ್ತದೆ.

ತಾರೀಖು ೧೯-೯-೧೯೩೪

ಸಹಿ- ಗುರನಗೌಡಾ ಬಸನಗೌಡಾ ಪಾಟೀಲ ಮುಕ್ಕಾಮ ಉಪ್ಪಿನಬೆಟಗೇರಿ

ಈ ಪತ್ರವನ್ನು ಆಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಸತ್ಯ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶುಕ್ರವಾರ ತಾರೀಖು ೩೦ ನೇ ಸಪ್ಟಂಬರ ೧೯೩೮ (ಸಂಚಿಕೆ ೩೦೯

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಮುಂಜಾನೆ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ.

ಚಾಲೂ ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಸೇವಿಂಗ್ಸ ಬ್ಯಾಂಕು:— ಬಡ್ಡೀ ದರದಿಂದ ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೩ ರೂ.

ಮುದತಿ ಠೇವುಗಳು:— ಒಂದು ವರ್ಷದ ಮುದ್ದತಿನಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೩॥ ರೂ.

ಸಾಲ:— ಬಂಗಾರದ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡೀದರ ೬ ರೂ. ಹತ್ತಿ ಮತ್ತು ಧಾನ್ಯಗಳ ಆಧಾರದ ಮೇಲೂ ಸರಕಾರೀ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ವ ನಿಯಮಿತ ಕಂಪನಿಯ ಶೇರುಗಳ ನಫೆ ವಸೂಲ ಮಾಡಿ ಅಯಾ ಖಾತೆಗೆ ಜಮೆ ಹಿಡಿಯುವದರಲ್ಲಿಯೂ ಅಥವಾ ಕಳಿಸಿಕೊಡುವದರಲ್ಲಿಯೂ ಮತ್ತು ಯೋಗ್ಯ ಕಮಿಶನ್ ತಕ್ಕೊಂಡು ಗಿರಾಕಿಗಳಿಗೆ ಅವುಗಳ ಖರೀದಿ ವ ವಿಕ್ರಿ ಮಾಡುವದರಲ್ಲಿಯೂ ಬರುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವದರಲ್ಲಿಯೂ ಮತ್ತು ಇತ್ಯ ಹುಂಡಿಗಳನ್ನು ಮಾರುವದರಲ್ಲಿಯೂ ಬರುವದು.

ಬ್ಯಾಂಕಿಗೆ ಮೇಲ್ಕಾಣಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲ ತರದ ಅಧಿಕಾರವಿರುತ್ತದೆ.

ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಬಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್. ರಿಕಾರ್ಟ್,
ಏಜಂಟರು.

ದಿ ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ— ಮಂಗಳವಾರಪೇಟೆ, ಲಕಮಣ ವಕೀಲ ಪಾಂಡುರಂಗರಾಯರ ಮಾಳಿ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಚಾಲು ಮತ್ತು ಬಹಳ ಮುದ್ದತಿಯ ಸಾಲ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ರಾಥಿಕರಣಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಬಾಕಿ ವ್ಯವಹಾರ ಯೋಗ್ಯವಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೀರೆಟಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಕೃಷ್ಣರಾವ ಬಿ. ಜಹಾಗೀರದಾರ,
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ಸೋಯಿಕ್ಕೆ ತಕ್ಕಂತೆ ಇರುತ್ತದೆ.

ವಿ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ. ೨೦-೯-೨೯ ನೇ ಇಸ್ವಿ.

ಶ್ರೀ.

ಆ ವಿಜಯೋ ತ್ರೀಕೃಷ್ಣಾ
ನೀ ವಸಮರತಿಯು ನವಿಸಿ ಸುಖತಶರತೆಗಳಂ ನಿ
ಬೀ " ವಿಜಯಂ " ಶ್ರೀಕರಪ್ರಾಣ ।
ನಾ ವಿಹಿತಾಗಳ ವಿವರಿಸನಲವರು ಸಾಜ ॥೧॥

ಅನ್ನತ್ಯಾಗಿಗಳ ಸತ್ಯಾಗ್ರಹ ಮತ್ತು ಸರಕಾರದ ಸೋತು ನಡಿಯುವಿಕೆ.

ಮೀರತ ಮತ್ತು ಲಾಹೋರದ ಆರೋಪಿಗಳು ತುರಂಗದಲ್ಲಿ ನಡೆಯುವ ಹಿಂಸೆ ಮತ್ತು ಯುರೋಪಿಯನ್ ಪಕ್ಷಪಾತಗಳ ದೆಸೆಯಿಂದ ಮಾಡಿದ ಅನ್ನ ತ್ಯಾಗದಿಂದ ಜ್ಯೋತಿನ ಸತ್ತನು. ಸತ್ತನೆನ್ನುವದಕ್ಕಿಂತ ವೀರ ಸ್ವರ್ಗಾರೋಹಣ ಮಾಡಿದನು. ಇದೊಂದು ಸತ್ಯಾಗ್ರಹ ಯುದ್ಧದ ಕುರುಕ್ಷೇತ್ರವೇ ಸೈ. ಕುರುಕ್ಷೇತ್ರ ಯುದ್ಧದಲ್ಲಿ ಬೆನ್ನು ಕೊಡಬಾರದೆಂದು ಕ್ಷಾತ್ರ ಧರ್ಮದ ನೀತಿಯಾಗಿತ್ತು. ಅನ್ನತ್ಯಾಗಿಗಳು ಸತ್ಯಾಗ್ರಹದ ಸತ್ಯ ಯುದ್ಧ ಪ್ರಾರಂಭಿಸಿದ್ದರಿಂದ, ಆಳುವವರು ನ್ಯಾಯವಾದ ಮತ್ತು ಸತ್ಯವಾದ ರೀತಿಯಿಂದ ಯುದ್ಧ ಮಾಡದೆ ಅವರ ಪತ್ನಿ [illegible] ಅವರ ಮೇಲಿರುವ ಆರೋಪಗಳ ವಿಚಾರಮಾಡಿ ಶಿಕ್ಷೆ ಕೊಟ್ಟು ಅವರನ್ನು ಸೆರೆಯ ತುರಂಗ ಯಾತನೆಗಳಿಗೆ ಗುರಿಮಾಡಬೇಕೆಂದು ಮನಸಿನ ಸಂಕಲ್ಪ ಮಾಡಿ, ಆ ಪ್ರಕಾರ ಕಾಯದೆ ಜಾರಿ ಮಾಡುವದನ್ನು ಅಸೆಂಬ್ಲಿಯಲ್ಲಿ ಬಿಟ್ಟರು. ಅಸೆಂಬ್ಲಿಯಲ್ಲಿ ಸ್ವರಾಜ್ಯ ಪಕ್ಷೀಯರು ಇದನ್ನು ವಿರೋಧಿಸುವದಂತೂ ಸರಿಯೆ, ಆದರೆ ಈ ತರಂಗದ ಭಾಗಿಯು ಸ್ವತಂತ್ರ ಪಕ್ಷೀಯರ ದೆಸೆಯಿಂದ ಉಂಟಾಗಲಾರದು. ಅದ್ದರಿಂದ ಮಿ॥ ಕ್ರೆರಾರ ಸಾಹೇಬರು ಬ್ಯಾ॥ ಜಿನ್ನಾರವರನ್ನು ಉಪಯೋಗಕ್ಕೆ ತಂದು ಅವರ ಕೂಡ ಸಂಧಿಯ ಪ್ರಸ್ತಾಪ ನಡೆಸಿದರು. ಜಿನ್ನಾ ಸಾಹೇಬರು ತಮಗೆ ಅನುಕೂಲವಾಗಿ ನಡೆಕೊಡಬೇಕು ಸತ್ಯಾಗ್ರಹಿಗಳ ಬೆನ್ನು ಮೇಲೆ ಬೀಳುವದಕ್ಕೆ, ಅವರನ್ನು ತುರಂಗಕ್ಕೆ ಕಳಿಸುವ [illegible] ಕೊನೆಗಾಣಬೇಕೆಂಬ [illegible] [illegible] ಜಿನ್ನಾರವರು ಸೋತು [illegible]. ಆಗ ಕ್ರೆರಾರ ಸಾಹೇಬರ ಠರಾವಿಗೆ ವಿರೋಧವು ಬಹಳಾಗಿ ಅಂತಹುದು ಸ್ವತಂತ್ರ ಪಕ್ಷೀಯರು ತಮಗೆ ಅನುಕೂಲವಿಲ್ಲ. ಶ್ರೀ ಜಯಕರ ಕೇಳಕರ ಮೊದಲಾದ ಪ್ರತಿಯೋಗಿ ಸಹಕಾರಿಗಳೂ ಅನುಕೂಲವಿಲ್ಲ. ಸ್ವರಾಜ್ಯ ಪಕ್ಷೀಯರಂತೂ ಸರಿಯೇ ಈ ತ್ರಿವಿಧ ತ್ರಿದೋಷಗಳು ತಮ್ಮ ಬಿಲ್ಲನ್ನು ಕೊಂದುಹಾಕಿದರೆ, ಜಗತ್ತಿನಲ್ಲಿ ತಮ್ಮ ಅಪಹಾಸಕ್ಕೆ ಕೊನೆಯೇ ಉಂಟಾಗಲಾರದೆಂದು ಆಳುವರು ಹೆದರಿಕೊಂಡು ಪ್ರತಿಯೋಗಿ ಸಹಕಾರಿಗಳ ಮಾರ್ಗಾವಲಂಬನೆ ಮಾಡಿದರು. ಈ ಬಿಲ್ಲು ಈಗ್ಗೆ ಪಾಸಾಗಬಾರದು ಲೋಕ ಚರ್ಚೆಯಾಗಬೇಕು ಇಲಾಖೆಯ ಸರಕಾರಗಳ ಅಭಿಪ್ರಾಯ ತೆಗೆದುಕೊಳ್ಳಬೇಕು. ಅನಂತರ ರಾಜಕೀಯ ಕೈದಿಗಳಿಗೆ ತುರಂಗದಲ್ಲಿ ದೊರೆಯುವ ನಿಯಮಗಳಾಗಬೇಕು ಕರೀ ಬಿಳೀ ಭೇದ ಉಳಿಯಬೇಕೆಂಬ [illegible] ಕೇಳಕರರ ಮತ. ಈ ಮತವನ್ನು ಕ್ರೆರಾರ ಸಾಹೇಬರು ಅಂಗೀಕರಿಸಿದರು. ಇದು ಸಧ್ಯದ ಅಸೆಂಬ್ಲಿಯಲ್ಲಿ ಲೋಕಮತದ ದೊಡ್ಡ ಜಯವು. ಸರಕಾರವು ಈ ಪ್ರಕಾರ ತಗ್ಗಿ ನಡೆಯಲಿಕ್ಕೆ ವಿಜಾಯತಿಯ ಮಂತ್ರಿಗಳಿಂದ ಬಹುತ್ತಿಯದ ಸೂಚನೆಯು ಒಂದು ಕಾರಣವಾಗಿರುವದೆಂದು ಹೇಳುತ್ತಾರೆ. ವಿಲಾಯತಿಯ ಮತ್ತು ಇಲ್ಲಿಯ ರಾಜ್ಯಕರ್ತರು ಲೋಕಮತಕ್ಕೆ ಮಾನಕೊಟ್ಟರೂ, ಯುರೋಪಿಯನ್ ಮೆಂಬರರಿಗೆ ಅಧಿಕ ಸಿಟ್ಟು ಬಂದು ಅವರ ವೇಸಿಸಿತು. ಯುರೋಪಿಯನ್ ಮೆಂಬರರು ದೊಡ್ಡ ಧ್ವನಿತೆಗೆದು ಇಲ್ಲವೇ ಕೇಸರಿಟ್ಟು ಈ ಸೂಚನೆಯನ್ನು ನಿಷೇಧಿಸಿದರು. ಯುರೋಪಿಯನ್ ರಂತೂ ಇರಲಿ, ಸರಕಾರದವರಿಂದ ಅವರ ವರ್ತನಕ್ಕೆ ನಾವು ವಿಶೇಷ ಮಹತ್ವ ಕೊಡತಕ್ಕದ್ದಿಲ್ಲ. ಏಕಂದರೆ, ಅವರ ವೃತ್ತಿಯು ತಮ್ಮ ಭಾಗ್ಯವನ್ನು ಸಾಧಿಸುವದರಲ್ಲಿಯೇ ಉಂಟು. ಮುಸಲ್ಮಾನರನ್ನು ನೋಡಿರಿ ಅವರಿಗೆ ಮಹಾ ಕೋಪ ಬಂತು. ಕ್ರೆರಾರ ಸಾಹೇಬರ ಮೇಲೆ ದೊಡ್ಡ ಉಪಹಾಸವನ್ನೇ ಚೆಲ್ಲಿದರು. ಮುಸಲ್ಮಾನರು ರಾಜಕೀಯ ಕೈದಿಗಳಾಗುವದಿಲ್ಲ ಅವರಿಗೆ ತುರಂಗದಲ್ಲಿ ಯಾವ ಅನುಕೂಲಗಳೂ, ಬೇಡವೇ ಬೇಡ. ರಾಜಕೀಯ ಸ್ವಾತಂತ್ರ್ಯದ ಉದಾತ್ತ ಧ್ಯೇಯದ ದೆಸೆಯಿಂದ ಬಿದ್ದಂತೆ ತುರಂಗದಲ್ಲಿ ಕಳೆಯಬೇಕು ಕೂಲಿಕಾರರಂತೆ ಆಲ್ಪಸ್ತ್ವ ನಾಕಿಲ ಎಂದು ಇವರು ಮನೋಭಾವನೆ ಇದ್ದಂತೆ ತೋರುತ್ತದೆ. ಬ್ಯಾ॥ ಜಿನ್ನಾ ಕೇವಲ ಮುಸಲ್ಮಾನ ಮನಸ್ಸಿಯರು ಅಪವಾದವಾಗಿದ್ದರು. ಬಹುವಾಗಿ ಮುಸಲ್ಮಾನ ಮೆಂಬರರು ಸ್ವರಾಜ್ಯ ಸ್ವಾತಂತ್ರ್ಯ ಸಂಪಾದನೆಯಲ್ಲಿ ಹೆಜ್ಜೆ ನಂತೆ ಅಡ್ಡಬೀಳುವರು ಧಿಕ್ಕಾರವೇ ಸರಿ!

ಶ್ರೀ ಕೇಳಕರ ಸೂಚನೆ ಮತ್ತು ಕ್ರೆರಾ ಸಾಹೇಬರ ಒಪ್ಪಿಗೆಯಿಂದ ಇಂದು ಲಾಹೋರ ಮತ್ತು ಮೀರತದ ಆರೋಪಿಗಳು ಸದ್ಯ ಅಪರಿಹಾರ್ಯದಲ್ಲಿ ನ್ಯಾಯ ನಿರ್ಣಯ ಹೊಂದುವದು ತಪ್ಪಿದ್ದರಿಂದ ಸಂತೋಷವು.

ಮುದಿವೆಯ ಕಾಯಿದೆಯು ವಯಸ್ಸಿನ ವಿಚಾರ.

——(೦)——

ಹುಡುಗ ಹುಡಿಗೆಯರ ಮದುವೆಯ ಕಾಯದೆಯ ವಿಚಾರದಲ್ಲಿ ವಯಸ್ಸಿನ ನಿರ್ಬಂಧವನ್ನು ಮಾಡುವ ಕುರಿತು ವಿಶೇಷ ಉತ್ಸಾಹ ಜನಕವಾದ ಚರ್ಚೆ ಅಸೆಂಬ್ಲಿಯಲ್ಲಿ ನಡೆಯಿತು. ಶ್ರೀ॥ ಕೇಶವ್ಯಂಗಾರರು ಸನಾತನ ಧರ್ಮಾಭಿಮಾನಿಗಳ [illegible] ಪಡಿಸಲೋಸುಗ ಹುಡಿಗೆಯ ವಯ [illegible] ದು ಇರಬೇಕೆಂದೂ, ಶ್ರೀ ಗಂಗಾನಂದ [illegible] ರ ಸನ್ನೆರಡು ಇರಬೇಕೆಂದೂ ಹೇಳಿದರು. [illegible] ಮೂಲಾಗ್ರವಾಗಿ ಕೆತ್ತಿ [illegible] ವಿಚಾರ ಮಾಡಿದ ಬೆಳಗಾವಿಯ [illegible] ದು ಬೇಕ ಹವನೂರು ಇಂಲಿ [illegible] ನ್ಯಾಯ ಮಾಡಹೋದರು ಶ್ರೀ॥ [illegible] ಗರು, ಶಾಸ್ತ್ರ ಮತ್ತು ವೈದ್ಯಕೀಯ [illegible] ಗಳನ್ನು ಮತ್ತು ಸೂತ್ರಗಳನ್ನು [illegible] ಕೊಂಡು, ಹುಡಿಗೆಯ [illegible] ಪಧಿಕಾರು ವಷ ದೊಳಗಾಗಿ ಮದುವೆ [illegible] ಪ್ರತಿಪಾದಿಸಿದರು. [illegible] ವು ಧರ್ಮ ಪುಷ್ಟವಾಗಬೇಕಾದರೆ [illegible] ಮದುವೆಯಾಗಬೇಕೆಂದರು. [illegible] ಮತ್ತು ಮದ್ರಾಸಿ ಶಾಸ್ತ್ರಪಂಡಿತರು ಬಿಲ್ಲಿಗೆ ಪ್ರತಿಕೂಲರಾದ್ದರಿಂದ ಸಪ್ತಿಗಳನ್ನು ಮಾಡಿ ವಿರೋಧಿಸಿದರು. ಅವರ ಪಾಂಡಿತ್ಯದ ತಳಿಯನ್ನು ನೋಡಿರಿ. ಮತ್ತು [illegible] ಹೇಳುವ ನಂತಿರುವ ಕೃತ್ಯವಾದ [illegible] ನೋಡಿರಿ. ದೇಹವು ಪುಷ್ಟವುಳ್ಳದ್ದಾಗಬೇಕಾದರೆ ಹದಿನಾರು ವರ್ಷದೊಳಗೆ ಮಾಡುವೆ ಮಾಡಬಾರದು. ತಪ್ಪಾಯ ಪಾದ್ರಿ [illegible] ವರು. ಕ್ರಿಶ್ಚನ್ನ ಮಂಡಳಿಯು ಹದಿನಾರು ವರ್ಷ ವೇಳೆಯನ್ನು ಒಹು ಆನಂದದಿಂದ ಅಂಗೀಕರಿಸುತ್ತಿದ್ದರು. ಡಾ॥ ಮುಂಜೆಯವರು ನಾವು ಡಾಕ್ಟರನಾಗಿ ಹೇಳುವದೇನಂದರೆ ಹದಿನಾರು ವರ್ಷದ ಒಳಗ ಮದುವೆ ಮಾಡಕೂಡದು. ವಿಲಾಯಿತಿಯಲ್ಲಿ ಹದಿನೆಂಟು ವರ್ಷವನ್ನು ಗೊತ್ತುಪಡಿಸಿದ ಗ [illegible] ದಲ್ಲಿ ಅದಕ್ಕೂ ಮುಂದೆ ಏರಿಸಬೇಕು. ಮುಸಲ್ಮಾನರಲ್ಲಿ ಇಂತಿಷ್ಟೇ ವಯಸ್ಸಿಗೆ ಮದುವೆ ಮಾಡಬೇಕೆಂಬ ನಿರ್ಬಂಧವಿಲ್ಲ, ಧರ್ಮವು ಅಡ್ಡಬರುವದಿಲ್ಲ. ಮುದ್ದಿವೆಯ ಬೇಡದು, ಪತಿಯ ಮನೆಯ ದಿವಳನ್ನು ಆಸ್ಪತ್ರೆ ಅಂದಿಯಲ್ಲಿ ಬಿಡಬೇಕೆಂದರು. ಹಳಿವಿದ್ದು ಹದಿನೆಂಟು ಮುದುವೆ ಬಿಲ್ಲನ್ನು ವಿರೋಧಿಸಿದ ಒಂದು [illegible] ರನ್ನು ಅಸೆಂಬ್ಲಿಯ ಮುಂದೆ ಕಾಗೆದು ಮುದುಕರು ಸ್ವರ್ಗಕ್ಕೆ

ಸ್ಥಾಪಿಸಿದ ಹಕ್ಕುಗಳಿಗೆ ಬಾಧೆ ಬರುತ್ತದೆಂದು ಹೇಳಿದ್ದಾರೆ. ಆದರೆ ಏಳು ಜನರು ಮಾತ್ರ ಇದರಿಗೆ ಪ್ರತಿಕೂಲರಿದ್ದಾರೆ. ಈ ಬಗ್ಗೆ ಇನ್ನೂ ಚರ್ಚೆ ನಡೆದಿದ್ದು ಅದನ್ನು ಕ್ರಮೇಣ ಕೊಡುತ್ತ ಹೋಗುವೆವು.

ಬೈಲಹೊಂಗಲದ

ಸರದಾರ ವಲ್ಲಭಭಾಯಿಯವರ ಆಗಮನವು.

ಇಲ್ಲಿ ತಾ|| ೧೮-೯-೨೮ ದಿಂದ ಮಳೆಯಾಗುತ್ತಿರುವದು. ಈ ಮೊದಲು ೩ ತಿಂಗಳಿಂದ ಮಳೆಯಿಲ್ಲದ್ದರಿಂದ ಜನರಲ್ಲಿ ಹಾಹಾಕಾರವಾಗಿದ್ದಿತು. ದೇಶಭಕ್ತ ಸರದಾರ ವಲ್ಲಭಭಾಯಿಯವರ ಆಗಮನದ ದಿವಸವೇ ಮಳೆಯಾಯಿತು! ಇದರಿಂದ ಸರದಾರರ ವಿಷಯದಲ್ಲಿ ಜನರಲ್ಲಿದ್ದ ಪೂಜ್ಯಭಕ್ತಿಯು ಇಮ್ಮಡಿಸಿತು !!

ಬೈಲಹೊಂಗಲ ಮ್ಯುನಿಸಿಪಾಲಿಟಿಯಲ್ಲಿ ಸರದಾರ ವಲ್ಲಭಭಾಯಿಯವರಿಗೆ ಮಾನಪತ್ರ ಕೊಡಬೇಕೆಂಬ ಠರಾವು ಸರ್ವಾನುಮತಗಳಿಂದ ಅಂಗೀಕರಿಸಲ್ಪಟ್ಟಿತು. ಅಂದಿನ '[illegible]' ಸಂಖ್ಯಾದ ಸಭೆಯ [illegible] ಬಾರದ ಅಧ್ಯಕ್ಷರು ವೆ|| ಮಾರುತೇಂದ್ರ ರಾ|| ರೂ. ಮತ್ತು ವಿ|| ಶೀವಪ್ಪಗೌಡರ ಬಂದಿರಲಿಲ್ಲ! ಯಾಕೆ ಬರಲಿಲ್ಲೆಂಬುವದು ಅವರಿಗೇ ಗೊತ್ತು! ಆದರೂ ಮಾನಪತ್ರಕ್ಕೆ ಅವರ ಸಹಾನುಭೂತಿಯು ಇತ್ತೆಂದು ನಾವು ಊಹಿಸಬಹುದು ಅಡ್ಡಿಯಿಲ್ಲ. ಈ ಮ್ಯುನಿಸಿಪಾಲಿಟಿಯಲ್ಲಿ ಇಂದಿನ ವರೆಗೆ ಅದರಲ್ಲಿ ದೇಶಭಕ್ತರಿಗೆ ಕೊಟ್ಟ ಮಾನಪತ್ರವೆಂದರೆ ಇದೇ ಮೊದಲು! ಈ ವೇಳೆಯಲ್ಲಿ ಮ್ಯುನಿಸಿಪಾಲಿಟಿಯು ಒಳ್ಳೇ ಕೆಲಸ ಮಾಡಿ ಬೆಳಗಾವ ಜಿಲ್ಲೆಗೆ ಭೂಷಣವನ್ನು ತಂದಿತು. ನಗರಾಧ್ಯಕ್ಷರಾದ ವೆಂಕಟರುದ್ರ ಗುರುಶಾಂತಪ್ಪನವರೂ, ಮೆಂಬರರಾದ ಡಾ|| ಗಿಂಡೆಯವರೂ, ಇನ್ನುಳಿದ ಎಲ್ಲ ಮೆಂಬರರೂ ಅಭಿನಂದನೆಗೂ, ಪ್ರಶಂಸೆಗೂ ಪಾತ್ರರಿರುತ್ತಾರೆ. ಈ ಮಾನಪತ್ರ ಸಮಾರಂಭದ ಖರ್ಚಿನ ಮಂಜೂರಿಗಾಗಿ ಮ್ಯುನಿಸಿಪಾಲಿಟಿಯು ಬೆಳಗಾವ ಕಲೆಕ್ಟರಸಾಹೇಬರಿಗೆ ತಾ|| ೧೩-೯-೨೮ ಕ್ಕೆ ವಿನಂತಿ ಮಾಡಿಕೊಂಡಿತು. ಸಾಹೇಬರು ತಮ್ಮ ನಿರ್ಣಯವನ್ನು ತಾ|| ೧೬-೯-೨೮ ಕ್ಕೆ ಹೇಳುವೆವೆಂದು ತಿಳಿಸಿದರು. ಮಾನಪತ್ರ ಕೊಡುವದು ೧೫-೯-೨೮ ದಿವಸ ಇದರಿಂದ ಸಾಹೇಬರ ಮನಸಿನ ಸ್ಥಿತಿಯು ಮಾತ್ರ ತಿಳಿಯುವದು !!

ಸರದಾರ ವಲ್ಲಭಭಾಯಿಯವರು ತಾ|| ೧೫-೯-೨೮ ಕ್ಕೆ ಧಾರವಾಡದಿಂದ ಮೋಟು ದಾರಿಯಲ್ಲಿ ನರೇಂದ್ರ, ಗುರ್ಲಹೊಸೂರ, ಹೊಸೂರ ಊರುಗಳಿಗೆ ಸಂದರ್ಶನವನ್ನು ಕೊಟ್ಟು ಅಂದೇ ಮಧ್ಯಾಹ್ನ ೨ ರ ಸುಮಾರಕ್ಕೆ ಬೈಲಹೊಂಗಲಕ್ಕೆ ತಲುಪಿದರು. ಶ್ರೀಮಾನ್ ಕಾಮತ ವಾಮನ ನಾಯ್ಕರಲ್ಲಿ ಆಹಾರವನ್ನು ಸೇವಿಸಿದರು. ಅವರ ಸಂಗಡ ದೇಶಭಕ್ತ ಮಹದೇವಭಾಯಿ ದೇಸಾಯಿಯವರೂ, ಧಾರವಾಡದ ಶ್ರೀ. ಜೋ[illegible]ರವರೂ, ದೇಶಭಕ್ತ ಗಂಗಾಧರರಾಯರು, ಬೆಳಗಾವಿಯ ಸುಪ್ರಸಿದ್ಧ ವಕೀಲರಾದ ಜೋಶಿ ನಾರಾಯಣರಾಯರೂ, ಬೆಳಗಾವಿಯ ನಗರಾಧ್ಯಕ್ಷರೂ ಇದ್ದರು.

ಸಭೆಗೆ ನಗರದಲ್ಲಿಯ ಜನರೂ, ಸುತ್ತಲಿನ ಹಳ್ಳಿಗಳ ಜನರೂ ಕೂಡಿದರು. ೫ ಸಾವಿರಕ್ಕಿಂತಲೂ ಹೆಚ್ಚು ಜನರು ಇದ್ದರೆಂದು ಹೇಳಬಹುದು. ಇಷ್ಟು ಜನರು ಹಿಂದಕ್ಕೆ ಇಲ್ಲಿಯ ಯಾವ ಸಭೆಗೂ ಕೂಡಿರಲಿಲ್ಲ. ಎಲ್ಲ ಪಂಥದ ಜನರೂ ಬಂದಿದ್ದರು.

ಸರದಾರರು ಬರುವಾಗ್ಗೆ ಬೈಲಹೊಂಗಲದ ತರುಣ ಸಂಘದವರು ಮಾನಪತ್ರವನ್ನು ಕೊಟ್ಟರು. ಸಭೆ ಮುಗಿದ ಮೇಲೆ ಸರದಾರರು [illegible] ತರುಣ ಸಂಘದವರ ಮಾನಪತ್ರದಿಂದ ಅವರಿಗೆ ಬಹಳ ಆನಂದವಾಯಿತೆಂದು ಹೇಳುವದು.

ನಗರಾಧ್ಯಕ್ಷರು ಮಾನಪತ್ರವನ್ನು ಕನ್ನಡದಲ್ಲಿ ಓದಿ ಸರದಾರರ ಆಗಮನದಿಂದ ತಮ್ಮ ನಗರ ಸಂಸ್ಥೆಯು ಅತ್ಯಂತ ಧನ್ಯವಾಗಿರುವದೆಂದು ಹೇಳಿ, ಸರದಾರ ವಲ್ಲಭಭಾಯಿಯವರನ್ನು ಮತ್ತು ಅವರ ಅಣ್ಣಂದಿರಾದ ವಿಠ್ಠಲಭಾಯಿಯವರನ್ನು ಯಥಾಯೋಗ್ಯವಾಗಿ ವರ್ಣಿಸಿ ಅಭಿನಂದಿಸಿದರು. ಮತ್ತು ಕೊನೆಗೆ ಇವರೀರ್ವರ ಮಹನೀಯರಿಗೂ, ದೇವರು ಆಯುರಾರೋಗ್ಯವನ್ನು ಕೊಡಲೆಂದು ಪ್ರಾರ್ಥಿಸಿ ಬೆಳ್ಳಿಯ ಕರಂಡಕದಲ್ಲಿ ಮಾನಪತ್ರವನ್ನು ಸರದಾರರಿಗೆ ಅರ್ಪಿಸಿ ಸನ್ಮಾನಿಸಿದರು.

ಇಲ್ಲಿಯ ಲ್ಯಾಂಡ ಲೀಗದವರೂ ಸರದಾರರಿಗೆ ಮಾನಪತ್ರವನ್ನು ಬೆಳ್ಳಿಯ ಕರಂಡದಲ್ಲಿ ಕೊಟ್ಟು ಹಿಂದಿಯಲ್ಲಿ ಪ್ರಶಂಸಿದರು.

ಸರದಾರ ವಲ್ಲಭಭಾಯಿಯವರು ಉತ್ತರವಾಗಿ ಮುಂದೆ ಕೊಟ್ಟಂತೆ ಇಂಗ್ರೇಜಿಯಲ್ಲಿ ಹೇಳಿದರು. ಅವನ್ನೇ ದೇಶಭಕ್ತ ಗಂಗಾಧರರಾಯರು ಕನ್ನಡದಲ್ಲಿ ಹೇಳಿದರು. ಸರದಾರರು ತಾವು ಇಲ್ಲಿ ಮಾನ [illegible] ಬಂದಿಲ್ಲವೆಂದೂ [illegible] ಭೆಟ್ಟಿಗೆ ಬಂದಿರುವೆನೆಂದೂ, ಆದರೂ ಮಾನಪತ್ರಗಳನ್ನು ಅತ್ಯಾನಂದದಿಂದ ಸ್ವೀಕರಿಸುವೆನೆಂತಲೂ ಹೇಳಿ ನಗರ ಸಂಸ್ಥೆಯ ಆಭಾರ ಮನ್ನಿಸಿದರು. ಬೈಲಹೊಂಗಲ ತರುಣ ಸಂಘದವರ ಸಮಾಚಾರವನ್ನು ವಿಶೇಷವಾಗಿ ತೆಗೆದುಕೊಂಡು ತರುಣರ ಸಂಘಗಳು ದೇಶದಲ್ಲೆಲ್ಲ [illegible] ಹೇಳಿ, ವೃದ್ಧರೂ, ತರುಣರೂ, ಕೂಡಿಯೇ ಕೆಲಸ ಮಾಡಬೇಕೆಂದು ತರುಣರಿಗೆ ಉಪದೇಶಿಸಿದರು. ತಮ್ಮ ನಾಡಿನಲ್ಲಿ ತರುಣರ ಸಂಘಗಳು ಬಹಳ ಇಲ್ಲೆಂದು ಆದರೂ ತಮ್ಮ ಹತ್ತರ ಎರಡು ಸಾವಿರ ತರುಣರು [illegible] ಕೆಲಸ ಮಾಡುತ್ತಿರುವರೆಂದೂ ಹೇಳಿ, ತರುಣರು ವೃದ್ಧರೊಡನೆ [illegible] ಗಳೊಡನೆ ಸಮರಸರಾಗಬೇಕೆಂದರು.

ಸರದಾರರು ಸಭಿಕರನ್ನು ಉದ್ದೇಶಿಸಿ ಹೇಳಿದ್ದೇನಂದರೆ [illegible] ನಾನು ನಿಮ್ಮ [illegible] ಲಿಗನಿದ್ದದರಿಂದ [illegible] ಬಲ್ಲೆನು [illegible] ನಾನು [illegible] ಗಾಂಧಿಯವರ [illegible] ಅದನ್ನು [illegible] ನಿಮಗೆ ನಾನು ಹೇಳಬೇಕಾದದ್ದು [illegible] ವಾಗಿ ನಿಮ್ಮ [illegible] ಅನ್ಯಾಯದ [illegible] ಗಿ ನಾನು ನನ್ನ ಪ್ರಾಣವನ್ನು ಕೊಡಲು ಸಿದ್ಧನಿದ್ದೇನೆ. ನೀವೂ ನನ್ನಂತೆಯೇ ಸಿದ್ಧರಾಗಿರಿ [illegible] ಮುಸಲ್ಮಾನ, ಬ್ರಾಹ್ಮಣ, ಲಿಂಗಾಯತ ಜೈನ ಧರ್ಮಗಳ [illegible] ಮೊದಲಾದ ಎಲ್ಲ ಜಾತಿಯ ಜನರೂ ಒಂದಾಗಿ ಕೆಲಸ ಮಾಡಿರಿ. ಯಾಕೆಂದರೆ ಈ ಸರಕಾರವು ಎಲ್ಲ ಜಾತಿಯವರಿಗೂ ಕರ ಹಾಕಿದ್ದು ಅದರಲ್ಲಿ ಎಲ್ಲರನ್ನೂ [illegible] ಮಾಡಿದೆ. [illegible] ಕರ ಕೊಡುವದಿಲ್ಲವೆಂದು ಸರಕಾರಕ್ಕೆ ಹೇಳಿರಿ.

ಲಾಹೋರಿನಲ್ಲಿ ಸಂಚುಗಾರರ ಹೊಸ ಶೋಧ

— (೦) —

ಪೋಲೀಸರು ರಾಜಕೀಯ ಕೊಲೆಗಳನ್ನು ಮಾಡುತ್ತಾರೆಂಬ ಆರೋಪದಿಂದ ಏಳು ಜನರ ಮೇಲೆ [illegible] ಮೂವರನ್ನು ಹಿಡಿದಿದ್ದಾರೆ. ಇವರಲ್ಲಿ ಸುಖದೇವ ಎಂಬ ಆರೋಪಿಯು ತಪ್ಪನ್ನೊಪ್ಪಿದ್ದಾನೆ. ಬಾಬರ ಅಕಾಲಿ ಪ್ರಕರಣದಲ್ಲಿ ಹೊಸದಾದ ಮ. ಧುರಂಧರನೇ ಇವನು. ಇವನು ಬಾಬರ ಅಕಾಲಿ ಪ್ರಕರಣದಲ್ಲಿ ಪೋಲಿಸ [illegible] ಮಾಡಿದ [illegible] ರನ್ನು ಈ ಪ್ರಕರಣದ ವಿಚಾರಣೆ ಮಾಡಲು ನಿಯಮಿಸಿದ್ದಾರೆ.

ಸೂಚನೆಯು

ಎ ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಿಸಿರಿ.

R. N. B. 1443

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶನಿವಾರ ತಾರೀಖು ೨೧ ನೇ ಸಪ್ಟಂಬರ ೧೯೨೯ (ಸಂಚಿಕೆ ೨೧೦

ವಿಜಯ.

ಧಾರವಾಡ ತಾ-೨೧-೯-೨೯ ನೆ ಇಸ್ವಿ

ತಲೆಗೊಬ್ಬ ಹಿರಿಯರು.

ಬಹಾದ್ದೂರ ಕರ್ನಾಟಕದ ಬದಲು,
ಗೊಂದಲ ಕರ್ನಾಟಕ.

—(೦)—

ಸರದಾರ ವಲ್ಲಭಭಾಯಿ ಪಟೇಲರು, ಬೆಳಗಾವಿಯಲ್ಲಿ ವರ್ತಮಾನಕಾಲದ ಕರ್ನಾಟಕದ ಮುಂದಾಳುಗಳ ನಿಜಸ್ವರೂಪವನ್ನು ಚನ್ನಾಗಿ ವರ್ಣಿಸಿದ್ದಾರೆ. ಹತ್ತು ವರ್ಷಗಳ ಹಿಂದೆ ಮಹಾತ್ಮರು ಕರ್ನಾಟಕಕ್ಕೆ ಬಂದಾಗ ಧಾರವಾಡದಲ್ಲಿ ಅವರ ವ್ಯಾಖ್ಯಾನವಾಯಿತು. ಹತ್ತು ಸಾವಿರ ಜನ ಕೂಡಿತ್ತು. ಆ ಕಾಲದ ದ್ವೇಷಿಗಳು ಸಭೆಯಲ್ಲಿ ಕಲ್ಲೆಸೆದರು. ಕಲ್ಲಿನ ಪೆಟ್ಟು ಬಿದ್ದರೂ, ಒಬ್ಬನೂ ಮಿಸುಕಲಿಲ್ಲ, ಕೂತ ಸ್ಥಳ ಬಿಡಲಿಲ್ಲ. ಇದನ್ನು ಕಂಡು ಮಹಾತ್ಮರು ಕನ್ನಡನಾಡಿಗೆ, ಬಹಾದ್ದೂರ ಕರ್ನಾಟಕವೆಂದರು. ಹತ್ತು ವರ್ಷಗಳ ನಂತರದ ಸ್ಥಿತಿ ನೋಡಿ ಸಭೆಯಲ್ಲಿ ಹೇಗೆ ಕೂಡಬೇಕೆಂದು ಆ ಕನ್ನಡಿಗರಿಗೆ, ಅದೇ ಧಾರವಾಡದ ಕನ್ನಡಿಗರಿಗೆ ತಿಳಿಯದೇ ಹೋಯಿತು. ಸರದಾರ ಪಟೇಲರು ಶಿಸ್ತಿನ ಉಪದೇಶ ಮಾಡಿಕೊಳ್ಳಬೇಕಾಯಿತು. ಸ್ಥಳಾಂತರದ ಮೂಲಕ ಸಭೆಯಲ್ಲಿ ತುಸು ಗೊಂದಲವೆಂದರೂ ಪ್ರೇಕ್ಷಕರ ವರ್ತನವು ಪೂರ್ಣವಾಗಿ ಕ್ಷಮ್ಯವಲ್ಲ. ಯಾವನೊಬ್ಬ ಲೋಕನಾಯಕನ ಮಾತನ್ನು ಲಷ್ಕರೀ ಹುಕುಮಿನಂತೆ ಮನ್ನಿಸಬೇಕೆಂಬ ಭಾವನೆಯು ನಮ್ಮ ಜನರಲ್ಲಿ ಇಂದಿಲ್ಲದಿರುವದೇ ಇದಕ್ಕೆ ಕಾರಣ. ಪ್ರತಿಯೊಬ್ಬರು ತಾವು ಸ್ವತಃ ಹಿರಿಯರೆಂದು, ಮುಖಂಡರೆಂದು ತಿಳಿದುಕೊಳ್ಳುತ್ತಾರೆ. ಆ ಹಿರಿಯತನದ ಸೊಬಗನ್ನು ಬೆಳಗಾವಿಯಲ್ಲಿ ಶ್ರೀ ಪಟೇಲರು ವರ್ಣಿಸಿದ್ದು ಮಾರ್ಮಿಕವಿದೆ. ಬೆಳಗಾವಿಯಲ್ಲಿ ಇವರು ಅಂದದ್ದೇನೆಂದರೆ-

“ಕರ್ನಾಟಕದಲ್ಲಿ ಬಹಳ ತುಸು ಹೊತ್ತು ತಿರುಗಿದ್ದೆನು. ಇಲ್ಲಿಯ ಅಸಂಖ್ಯ ಮತಭೇದಗಳನ್ನು ಕಂಡು ನನಗೆ ಬಹಳ ದುಃಖವಾಯಿತು. ಬ್ರಾಹ್ಮಣ ಬ್ರಾಹ್ಮಣೇತರ, ಕನ್ನಡ ಮರಾಠಿ ಮನಸ್ತಾಪ, ಸ್ಪೃಶ್ಯಾಸ್ಪೃಶ್ಯ, ಹಿಂದೂ ಮುಸಲಮಾನ ಇವೆಲ್ಲ ಪಂಥಗಳು ದುಃಖಕಾರಕವಾದಂಥವು. ಪ್ರತಿಯೊಬ್ಬರು ತಾವು ಸೇನಾಪತಿಯೆಂದು ತಿಳಿಯುತ್ತಾರೆ. ಎಲ್ಲಾದರೂ ಬರಿಯ ಸೇನಾಪತಿಗಳೇ ಯುದ್ಧ ಗೆದ್ದಿರುವದುಂಟೇ? ಆದ್ದರಿಂದ ತಮ್ಮಲ್ಲಿ ಮುಖಂಡರಿದ್ದು ಆ ಮುಖಂಡರ ಹೇಳಿಕೆಯಂತೆ ಎಲ್ಲರೂ ನಡೆಯುವರೆಂದು ಆಶಿಸುತ್ತೇನೆ”

ಸರದಾರ ಪಟೇಲರ ಭಾಷಣವು ಕರ್ನಾಟಕದ ಮುಖಂಡರೆಂಬವರ ಮೂಗು ಕೊಯ್ದು ಕೈಯಲ್ಲಿ ಕೊಟ್ಟಂತಾಗಿರುತ್ತದೆ. ಹತ್ತು ವರ್ಷಗಳ ಹಿಂದೆ ಒಬ್ಬೊಬ್ಬರು ನಿಜವಾದ ಮುಖಂಡರಿದ್ದರು. ಅವರಪ್ಪಣೆಯು ಲಷ್ಕರೀ ಹುಕುಮಿನಂತೆ ಮನ್ನಿಸಲ್ಪಡುತ್ತಿತ್ತು.

ಅಸಹಕಾರದ ಉರಿಯಲ್ಲಿ ಧುಮುಕಿ ಪ್ರವೇಶ ಮಾಡಿದರು. ಬಂಧು ಬಳಗ ಮಕ್ಕಳುಮರಿ ಆತನ ವಚನ ಕೀರ್ತಿ ಅಪಕೀರ್ತಿ ಕಷ್ಟನಷ್ಟಗಳ ಪರವೆಯೇ ಉಂಟಾಗಲಿಲ್ಲ. ಆಗಿನ ಮುಂದಾಳುಗಳುಗಳ ಧುರೀಣತ್ವವು ಎಲ್ಲಿ ಹೋಯಿತು. ಇದನ್ನು ಕಳೆದವರು ಹಸಿಬಿಸಿ ರಕ್ತದ ತರುಣರು, ಕಳೆದುಕೊಂಡವರು ದೇಶ ಸೇವಕರು. ಈ ಸಂಗತಿಗಳನ್ನು ಲಕ್ಷ್ಯಕ್ಕೆ ತಂದು ಹಿಂದೊಂದು ಮಾತಿನ ಮಟ್ಟಿಗೆ ಇದ್ದ ಮುಂದಾಳುಗಳೂ ತಮ್ಮ ಮುಂದಾಳುತ್ತನವನ್ನು ಬದಿಗಿಟ್ಟು ಒಗ್ಗಟ್ಟಿಗೆ ಕೂಡಿ ತಮ್ಮಲ್ಲೊಬ್ಬನನ್ನು ಹಿರಿಯನನ್ನಾಗಿ ಮಾಡಿಕೊಂಡು ದೇಶಕಾರ್ಯ ನೆರವೇರಿಸಿದರೆ ಕರ್ನಾಟಕವು ನಿಜವಾಗಿ ಮುಂದೆ ಬರುವದು. ಮತಭೇದವು ಆಲೋಚನೆಯ ಸಭೆಯಲ್ಲಿರಬೇಕಲ್ಲದೆ ಮತಭೇದವಾಯಿತೆಂದು ಕೂಡಲೆ ಮುಖ್ಯ ಉದ್ದೇಶದ ವಿರುದ್ಧ ಗೊಂದಲ ಎಬ್ಬಿಸತಕ್ಕದ್ದಲ್ಲ. ಸರದಾರ ಪಟೇಲರ ಮಾತನ್ನು ಬಾರಡೋಲಿಯು ಮನ್ನಿಸಿದಂತೆ ತಾವು ಆರಿಸಿಕೊಂಡ ಸರದಾರರ ಅಪ್ಪಣೆಯನ್ನು ಪ್ರತಿಯೊಬ್ಬನು ಪಾಲಿಸಿದರೆ ಮಹಾತ್ಮರು ಕೊಟ್ಟ ಬಹಾದ್ದೂರ ಕರ್ನಾಟಕವೆಂಬ ಬಿರುದು ಬರಲು ಅವಕಾಶ ಬೇಕಾಗಲಾರದು. ಶ್ರೀ ಕಂಬಳಿ, ದೇಶಪಾಂಡೆ, ಬೆಳವಿ ಆರ್ಕಿ, ಕೌಜಲಗಿ, ಕಾರಂತ, ರಂಗನಾಥ ಮುದ್ದುಯಾರ, ಚಿಕ್ಕೋಡಿ ಅಂಗಡಿ, ಪಳಕಟ್ಟೀ, ಪಾಟೀಲ ಹೊಸಮನಿ ಇವರೆಲ್ಲರೂ ಸರದಾರರ ಕೊಟ್ಟ ದುಷ್ಟ ಸರ್ಟಿಫಿಕೆಟನ್ನು ಸುಷ್ಟ ಮಾಡಿಕೊಳ್ಳುವರೆ?

ಕರ್ನಾಟಕ ಕಾಲೇಜದ ವಿದ್ಯಾರ್ಥಿಗಳೂ
ವೈ. ವಾ. ರೊದ್ದರಾಯರ ಸ್ಮಾರಕವೂ.

ಮೊನ್ನೆ ಸೋಮವಾರ ಕರ್ನಾಟಕ ಕಾಲೇಜದ ವಿದ್ಯಾರ್ಥಿಗಳು “ಪತಿವಶೀಕರಣ” ನಾಟಕವನ್ನಭಿನಯಿಸಿ ಒಂಭತ್ತುನೂರು ರೂಪಾಯಿಗಳನ್ನು ದೊರೆಯಿಸಿದ್ದಾರಷ್ಟೇ. ಈ ಬಂದ ಹಣದಿಂದ ವೈ. ವಾ. ರೊದ್ದರಾಯರ ಅರ್ಧ ಪುತ್ಥಳಿಯನ್ನು ಮಾಡಿಸಿ ಅದನ್ನು ಕಾಲೇಜದ ವಿಶಿಷ್ಟ ಸ್ಥಾನದಲ್ಲಿರಿಸಬೇಕೆಂದು ಅವರ ಸಂಕಲ್ಪವಿದ್ದಂತೆ ತಿಳಿಯಬರುತ್ತದೆ. ವಿದ್ಯಾರ್ಥಿಗಳ ಈ ಪ್ರಯತ್ನವು ಅಭಿನಂದನೀಯವೆಂದು ಬೇರೆ ಹೇಳಬೇಕಾಗಿಲ್ಲ. ಅರ್ಧ ಪುತ್ಥಳಿಗೆ ನಾಲ್ಕೈದನೂರು ರೂಪಾಯಿಗಳು ಸಾಕು. ಆದರೆ, ಕರ್ನಾಟಕ ಕಾಲೇಜದ ಸಂಸ್ಥಾಪಕರೆಂದು ಖ್ಯಾತಿಗೊಂಡ ರೊದ್ದರಾಯರ ಸ್ಮಾರಕವು ಚಿರಸ್ಥಾಯಿಯಾಗಬೇಕಾದರೆ, ಅರ್ಧ ಪುತ್ಥಳಿಗಿಂತ ಕಂಚಿನದೊಂದು ಎದ್ದು ನಿಂತಂಥ ಮೂರ್ತಿಯನ್ನು ಮಾಡಿಸಿ ಅದನ್ನು ಕಾಲೇಜದ ಮಹಾದ್ವಾರದಲ್ಲಿ ನಿಲ್ಲಿಸಿದ್ದಾದರೆ ಹೆಚ್ಚು ಗೌರವಾಸ್ಪದವಾಗುವದು. ಅದಕ್ಕೆ ಏನಿಲ್ಲೆಂದರೂ ಎರಡು-ಮೂರು ಸಾವಿರ ರೂಪಾಯಿಗಳು ಬೇಕಾಗಬಹುದು. ಅವುಗಳನ್ನು ಸಂಪಾದಿಸಲಿಕ್ಕೆ ಕಾಲೇಜದ ವಿದ್ಯಾರ್ಥಿಗಳೂ ಅಧ್ಯಾಪಕರೂ ಈ ಕೆಳಗಿನ ಉಪಾಯಗಳನ್ನು ಕೈಕೊಳ್ಳಬಹುದು. ಈಗ ಬಂದ ೯೦೦ ರೂಪಾಯಿಗಳಲ್ಲದೆ-

೧ ಮರಾಠಿಗರಾದ ವಿದ್ಯಾರ್ಥಿಗಳು ಮಾಡಿದ ನಾಟಕದಿಂದ ಬಂದ ನಾಲ್ಕಾರುನೂರು ರೂಪಾಯಿಗಳು

೨ ಕಾಲೇಜದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಇಟ್ಟಿರುವ ಐದು ರೂಪಾಯಿಗಳ ಕಾಶನ್ ಹಣದಲ್ಲಿ ಆ ಆ ವಿದ್ಯಾರ್ಥಿಯಿಂದ ಅವನ ಇಚ್ಛೆಯಂತೆ ದೊರಕಿಸಿದ ಹಣವು ಏಳೆಂಟು ನೂರು ರೂಪಾಯಿಗಳು.

೩ ಇದೂ ಅಲ್ಲದೆ, ಪ್ರೊಫೆಸರ ಮಹಾಶಯರು ಈ ಮಹತ್ಕಾರ್ಯಕ್ಕೆ ಕೊಡಬಹುದಾದ ಹಣ- ಕನಿಷ್ಟ ಐನೂರು ರೂಪಾಯಿಗಳು.

೪ ಇದೂ ಅಲ್ಲದೆ, ಕಾಲೇಜಕ್ಕಾಗಿ ಈ ಸತ್ಕಾರ್ಯಕ್ಕಾಗಿ ಕಾಲೇಜದವರಿಗೆ ಧಾರವಾಡಸ್ಥರು ಮುಕ್ತಹಸ್ತದಿಂದ ಸಾವಿರದ ಮೇಲೆ ಹಣ ಕೊಡಬಹುದು.

ಇವೇ ಮೊದಲಾದ ಮಾರ್ಗಗಳಿಂದ ಹಣ ಕೂಡಿಸಿ, ಅದರಿಂದ ಕಂಚಿನ ಪುತ್ಥಳಿಯನ್ನು ಮಾಡಿಸುವ ಹವ್ಯಾಸಕ್ಕೆ ವಿದ್ಯಾರ್ಥಿಗಳೂ ವಿದ್ಯಾಗುರುಗಳೂ ಬೀಳಲೆಂದು ಹಾರೈಸುತ್ತೇವೆ. ಈ ಸಂಬಂಧವಾಗಿ, ವಿದ್ಯಾರ್ಥಿಗಳು ಮಾಡುತ್ತಿರುವ ಪ್ರಯತ್ನಗಳನ್ನು ಈ ಪತ್ರದಲ್ಲಿ ಮುದ್ರಿಸುವ ವ್ಯವಸ್ಥೆಯನ್ನು ವಿದ್ಯಾರ್ಥಿಗಳು ಮಾಡುವರೆಂದು ನಾಗರಿಕರು ಬಯಸುತ್ತಾರೆ

ಪುಸ್ತಕಗಳ ಜಪ್ತಿ.

—(೦)—

ಹಿಂದಕ್ಕೆ ಸರಕಾರಕ್ಕೆ ಚಿಪಳೂಣಕರರ ನಿಬಂಧಮಾಲೆಯಲ್ಲಿ ರಾಜದ್ರೋಹದ ವಾಕ್ಯಗಳು ಇರುತ್ತವೆಂಬ ಸುಳ್ಳು ಭಯವಾಗಿ ಮುಂಬೈ ಸರಕಾರದವರು ಆ ಭಾಗಗಳನ್ನು ತೆಗೆಸಿದ್ದಾರೆ. ಎಷ್ಟೋ ವರ್ಷಗಳ ಹಿಂದೆ ಭಗವದ್ಗೀತೆಯು ರಾಜಕೀಯ ಭಯವಾಗಿತ್ತು. ಅದೇ ಪ್ರಕಾರ ರಾಜದ್ರೋಹದ ಬೆದರಬಡಕತನವು ಈಗ ಜ್ಯೋತಿಶಾಸ್ತ್ರ, ವ್ಯಾಕರಣ ಮುಂತಾದವುಗಳಲ್ಲಿಯೂ ಕಾಣುತ್ತದೆ. ಕಂಸನಿಗೆ ಕೃಷ್ಣನು ಕಂಡಂತೆ! ಮಿರಜದ ಆರೋಪಿ ಡಾ|| ಗಂಗಾಧರ ಅಧಿಕಾರಿ ಪಿ. ಎಚ್. ಡಿ. ಯವರು ಜರ್ಮನಿಯಿಂದ ತರಿಸಿದ ವ್ಯಾಕರಣ, ತತ್ವಜ್ಞಾನ ಮೊದಲಾದ ಪುಸ್ತಕಗಳನ್ನು ಜಪ್ತ ಮಾಡಿದ್ದಾರೆ. ಆರೋಪಿಯು ಈ ಬಗ್ಗೆ ಮ್ಯಾಜಿಸ್ಟ್ರೇಟರ ಮುಂದೆ ಬಲವಾದ ಆಕ್ಷೇಪಣೆ ಎತ್ತಿದ್ದಾನೆ.

ಧಾರವಾಡ ಆರೋಗ್ಯವರ್ಧಕ ಮಂಡಲದ
೬ ನೇ ವಾರ್ಷಿಕ ಮಹೋತ್ಸವವು.

—(೦)—

ಬುಧವಾರ ತಾ|| ೧೮-೯-೨೯ ನೇ ದಿನ ಸಂಜೆಯ ೫|| ಘಂಟೆಗೆ ಗಾಂಧಿಚೌಕ ವಿಶನ ಪ್ರಾಥಮಿಕ ಶಾಲೆಯಲ್ಲಿ ಒಳ್ಳೇ ಸೊಗಸಿನಿಂದ ಶ್ರೀ. ಡಾ. ರಾಮರಾವ ಮಹಿಷಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲು ಶ್ರೀ ನಾಗೇಶರಾವ ದೇಶಪಾಂಡೆ ಹಾಗು ಶ್ರೀ ಹರಿ ಸರ್ವೋತ್ತಮಾಚಾರ್ಯ ಮುಂಡರಗಿ ಇವರ ಕರ್ಣ ಮನೋಹರ ಹಾಗೂ ಇಂಪಾದ ಗಾಯನ ವಾದನವಾದನಂತರ ಶ್ರೀ. ಡಾ. ಮಳೇಬೆನ್ನೂರರವರ ಮಂಡಲದ ವೃತ್ತಾಂತವನ್ನೋದಿದರು. ಅದರ ಸಾರಾಂಶವೇನೆಂದರೆ— ಜನರನ್ನು ನಿಜವಾದ ಆರೋಗ್ಯ ಶಾಸ್ತ್ರದ ಜ್ಞಾನ ಪ್ರಸಾರದಿಂದ ಆರೋಗ್ಯ ಸಂಪನ್ನರನ್ನು ಹಾಗೂ ರೋಗ ಮುಕ್ತರನ್ನು ಮಾಡುವದೇ ಇದರ ಮುಖ್ಯ ಗುರಿಯಾಗಿರುತ್ತದೆ. ಈ ವರ್ಷ ೨೧ ಪಾಕ್ಷಿಕ ಉಪನ್ಯಾಸಗಳಾಗಿರುವವು ಆರೋಗ್ಯ ವರ್ಧಕ ವಾಚನ ಮಂದಿರದಲ್ಲಿ ೨೦೦ ಪುಸ್ತಕಗಳು ೬-೮ ಮಾಸಪತ್ರಿಕೆಗಳು ಬರುತ್ತಲಿವೆ ೯೦ ಜನ ಸ್ತ್ರೀ ಪುರುಷರು ಅದರ ಲಾಭ ಪಡೆದಿದ್ದಾರೆ ವಾರಕ್ಕೊಮ್ಮೆ ಆರೋಗ್ಯ ಶಾಸ್ತ್ರದ ವರ್ಗವು ನಡೆದಿರುವದು ಸಣ್ಣ ದೊಡ್ಡ ರೋಗಗಳ ಸಲುವಾಗಿ ೧೦೦ ಜನ ಬಡವರಿಗೆ ಔಷದೋಪಚಾರ ಮಾಡಲಾಗಿರುತ್ತದೆ ೩ ರೂ ೩ ಆ ೩ ಪೈ ಹೋದ ವರ್ಷದ ಶಿಲಕು ೧೧ ರೂ ೧೨ ಆ ೦ ಪೈ ವರ್ಗಣಿ ಮಿತ್ರ ದೇಣಗಿ ೩೫ ರೂ ಸಾಲ ಅಂತು ೪೯ ರೂ ೧೩ ಆ ೩ ಪೈ ಆಯ ೧೧ ರೂ ೯ ಆ ವಾಚನಾಲಯ ೨೪ ರೂ ಬಾಡಗಿ ೬ ಸ್ಟೇಶನರಿ ೬ ರೂ ಮುದ್ರಣ ೪ ರೂ ೧ ಆ ಕಿರಕೋಳ ೩ ರೂ ೧೩ ಆ ೩ ಪೈ ಶಿಲಕು ಅಂತು ೪೯ ರೂ ೧೩ ಆ ೩ ಪೈ ವ್ಯಯ ಶ್ರೀ ಶ್ರೀನಿವಾಸರಾವ ರೊದ್ದ, ಶ್ರೀ ನರಸಿಂಹಾಚಾರ್ಯ ಪುಣೇಕರ ಹಾಗು ವಾಮನರಾವ ಗೋಖಲೆ ಇವರ ನಿಧನದ ಬಗ್ಗೆ ದುಃಖ ಪ್ರದರ್ಶನ ಹಾಗು ಸಹಾಯಕರಿಗೆ ಆಭಾರ ಪ್ರದರ್ಶನ ಆಮೇಲೆ ಶ್ರೀ ಬೇಂದ್ರೆಯವರ ಪಂಚೀಕರಣ ವಿವರಣೆ ಎಂಬ ವಿಷಯವನ್ನು ಕುರಿತು ಮಾತಾಡಿದರು ಅದರ ಸಾರಾಂಶವೇನೆಂದರೆ- ಪಂಚೀಕರಣಾಗಳೆಂದರೆ ಪೃಥ್ವಿ, ಆಪ, ತೇಜ, ವಾಯು, ಆಕಾಶವೆಂಬ ಪಂಚ ಮಹಾ ಭೂತಗಳಿಂದ ಇಡಿ ಸೃಷ್ಟಿಯು ನಿರ್ಮಿತವಾಗಿರುವದು ಇದೇ ಪ್ರಕಾರವಾಗಿ ಈ ಪಂಚ ಮಹಾಭೂತಗಳ ಸಮತೆ ಅಥವಾ ವಿಷಮತೆ ನಮ್ಮ ಆರೋಗ್ಯ ಅಥವಾ ರೋಗಕ್ಕೆ ಕಾರಣವಿರಬೇಕೆಂದು ಮತ್ತು ವಾತ ಪಿತ್ತ ಕಫವೆಂಬ ತ್ರಿದೋಷಗಳು ಈ ಪಂಚಮಹಾಭೂತಗಳ ವಿಭಾಗಗಳೆಂದು ಆ ಆ ತತ್ವದ ಗುಣಧರ್ಮಗಳನ್ನು ಹಾಗು ರೋಗಗಳ ಲಕ್ಷಣಗಳನ್ನು ನೋಡಲಾಗಿ ಕಂಡುಬರುತ್ತದೆ. ಕಾರಣ ಈ ಹೊತ್ತು ಈ ವಿಷಯವನ್ನು ತಮ್ಮ ಮುಂದೆ ಇಡಲು ಕಾರಣವೇನಂದರೆ ಈ ವಿಷಯದ ಸಲುವಾಗಿ ಹೆಚ್ಚಾಗಿ ಅಭ್ಯಾಸ ಮಾಡಿ ಪ್ರಚಲಿತ ಸಶಾಸ್ತ್ರೀಯ ಭಾಷಾಪದ್ಧತಿಯಲ್ಲಿ ಯಾರಾದರೂ ಹೇಳಲು ಪ್ರೇರಣೆಯಾಗಲಿ. ಕೊನೆಗೆ ಅಧ್ಯಕ್ಷರು ಹೇಳಿದ್ದೇನಂದರೆ ಶ್ರೀ ಬೇಂದ್ರೆಯವರು ಹೇಳಿದಂತೆ ಈ ಪಂಚಮಹಾಭೂತಗಳಲ್ಲಿ ಔಷಧಿ ಗುಣಧರ್ಮಗಳುಂಟು ಅವುಗಳನ್ನು ಅರಿತು ಅದರಂತೆ ನಡಿಯುವದರಿಂದ ಆರೋಗ್ಯ ಹಾಗು ರೋಗಮುಕ್ತತೆಯಾಗುವದು ಸ್ವಾಭಾವಿಕ. ಈ ಉಪಾಯಗಳಿಗೆ ದೈವಿ ಚಿಕಿತ್ಸೆ ಅಥವಾ ನಿಸರ್ಗ ಚಿಕಿತ್ಸೆ ಎಂದನ್ನಬಹುದು. ಖನಿಜ ಔಷಧಿಗಳಕಿಂತ ವನಸ್ಪತಿ ಔಷಧಿಗಳು ಪ್ರಾಣಿಗಳಿಗೆ ಹೆಚ್ಚು ಹಿತಕರವು. ಪಾಶ್ಚಿಮಾತ್ಯ ವೈದ್ಯರೆ ಅಂದರೆ ಅಲೋಪಥಿಯಲ್ಲಿ ಖನಿಜ ಔಷಧಿಗಳೆ ಹೆಚ್ಚು ಆದ್ದರಿಂದ ಆಯುರ್ವೇದವೆ ನಿಜವಾಗಿ ಹೆಚ್ಚು ಹಿತಕಾರಿ ಎಂದು ಹೇಳಲು ಅಡ್ಡಿ ಇಲ್ಲ. ಹೋಮಿಯೋಪಥಿಕದ ರೋಗೋತ್ಪಾದಕ ಮೂರು ತತ್ವಗಳು ನಮ್ಮ ತ್ರಿದೋಷಗಳಿಗೆ ಸಂಪೂರ್ಣವಾಗಿ ಹೋಲುವವು. ಡಾ. ಶುಕ್ಲರು ಇವರ ೧೨ ಲವಣಗಳ ಚಿಕಿತ್ಸೆಯನ್ನು ಅನುಭವ ತೆಗೆದುಕೊಂಡು ನೋಡಿದಾಗಿನಿಂದ ಅಲೋಪಥಿಯ ಜಂತು ಶಾಸ್ತ್ರದೊಳಗಿನ ನನ್ನ ವಿಶ್ವಾಸವು ಹೋಗಿಬಿಟ್ಟಿದೆ. ಶರೀರ ಮಾದ್ಯಂ ಖಲು ಧರ್ಮಸಾಧನವು ಎಂಬಂತೆ ಯುಕ್ತಾಹಾರ ವಿಹಾರಗಳಿಂದ ಸತ್ಯವಾನ ಮುಂತಾದವುಗಳಿಂದ, ಗಂಟು ಮೋರೆಯನ್ನಿಕ್ಕದೆ ಯಾವಾಗಲು ನಕ್ಕು ನಗಿಸಿಕೊಂಡು ಇದ್ದು ಆರೋಗ್ಯವನ್ನು ಕಾಪಾಡಿಕೊಂಡು ದೃಢಕಾಯರಾಗಿ ಇನ್ನೊಂದು ೨೫ ವರ್ಷಗಳಲ್ಲಿ ಭಾರತೀಯರು ಬಲಹೀನರು ಷಂಡರು ಆಗುವರೆಂದು ವರ್ತಿಸಿದ್ದ ಮಿಸ್ ಮೇಯೋ ಇವಳ ಭವಿಷ್ಯವನ್ನು ಸುಳ್ಳು ಮಾಡಬೇಕೆಂದು ನನ್ನ ಪ್ರಾರ್ಥನೆ ಪಾಶ್ಚಿಮಾತ್ಯರು ನಮಗೆ ಕೊಡುವ ಮಾನವು ನಮ್ಮ ಪೂರ್ವಿಕರು ಮಾಡಿದ ಕರ್ತೃತ್ವದ ಬಗ್ಗೆ ಇರುತ್ತದೆ ಅದರಂತೆ ನಾವು ಆಗಲು ಯತ್ನಿಸಬೇಕು ಎಲ್ಲರು ಆರೋಗ್ಯಮಂಡಲಕ್ಕೆ ಯಥಾಶಕ್ತಿ ಸಹಾಯ ಮಾಡಬೇಕಾಗಿ ಪ್ರಾರ್ಥನೆ ಕೊನೆಗೆ ಎಲ್ಲರ ಆಭಾರಮನ್ನಣೆಯಾಗಿ ಸಭೆಯು ಮುಗಿಯಿತು.

ಸತೀಂದ್ರಸೇನರ ಬಿಡುಗಡೆ.

—(೦)—

೧೦೭ ದಿನಗಳವರೆಗೆ ಉಪವಾಸ ಮಾಡಿ ಬಳಲಿದ ಶ್ರೀ ಸತೀಂದ್ರಸೇನರನ್ನು ಸರಕಾರವು ಜಾಮೀನಿನ ಮೇಲೆ ಬಿಟ್ಟಿತು. ಇವರ ಪ್ರಕೃತಿಯು ಚಿಂತಾಜನಕವಾಗಿದೆ.

ಮಿರತದ ಕೈದಿಗಳ ಬೆದರುಗುಂಡು

—(೦)—

ಮಿರತದ ಕೈದಿಗಳು ತಮ್ಮ ಏಳು ಮುಖ್ಯ ತಾಪತ್ರಯಗಳನ್ನು ಪೂರೈಸಲು ಕೇಳಿದ್ದಾರೆ. ಪೂರೈಸುವದಾಗದಿದ್ದರೆ ೨೫ ಜನರು ಅನ್ನತ್ಯಾಗ ಮಾಡುವೆವೆಂದು ಹೆದರಿಸಿದ್ದಾರೆ.

ಮೃತ್ಯು—

ಬಾಗಿಲುಕೋಟೆಯ ಸುಪ್ರಸಿದ್ಧ ಸರಾಫರಾದ ಶ್ರೀ ಮಂಗಳವೇಢೆ ಕೃಷ್ಣರಾಯರು ಸ್ವರ್ಗವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ.

ನೋಟೀಸು

—(೦)—

ಅಡಿವೆಪ್ಪಾ ಬಿನ ಸೋಮಪ್ಪಾ ಶಿರವಾಡ ಸಾ|| ಮುಳಗುಂದ ತಾಲ್ಲೂಕ ಬಂಕಾಪೂರ ಇವರಿಗೆ

ಕೆಳಗೆ ಸಹಿ ಮಾಡುವವಳ ಕಡಿಂದಾ ನೋಟೀಸ ಕೊಡುವದರಲ್ಲಿ ಒರುತ್ತದಲ್ಲಾ. ಸದರ ಗ್ರಾಮದ ರಿ| ಸ| ೧೬ನೇದನ್ನು ನನ್ನ ಅಲ್ಪವಯಿ ಮಗಾ ಯಲ್ಲಪ್ಪಗೌಡಾ ಇತರ ಮಾಲ್ಕಿ ವಹಿವಾಟೀನು ಇದ್ದು ಅವನ ಪತಿಯಿಂದ ನನ್ನ ಗಂಡನ ಮರಣದನಂತರ ಕಳೆದ ೨-೩ ವರ್ಷಗಳಿಂದ ನಾನೇ ವಹಿವಾಟ ಮಾಡುತ್ತಾ ಬಂದೇನಿ. ಪಠೆವಾಕದಲ್ಲಿ ನನ್ನ ಗಂಡನ ಕಾಗದ ಲೇವಾದೇವಿ ಇದ್ದು ಅದನ್ನು ಸರಿಯಾಗಿ ಫಿಕಾಲೆ ಮಾಡಿಸುತ್ತೇನಿ. ಇದರ ಬಗ್ಗೆ ಅಪ್ಪಾ ಕಂಕರೆ ... ಬೇಕಾಗುತ್ತದೆ ಅಂತ ವಸ್ತುರೆ ಹೇಳಿ ನನ್ನ ಕಡಿಂದಾ ವಂದು ಲೇಖಿ ಮಾಡಿಕೊಂಡು ವಲಿಕಡಿಗೆ ವಿಚಾರ ಮಾಡುತ್ತಿ ಸದರ ಲೇಖವು ಈ ಕೆಲಸದ ಬಗ್ಗೆ ಇರದೆ ನನ್ನ ಮೇಲ್ಕಂಡ ಜಮೀನಿಯ ವಹಿವಾಟ ಬಗ್ಗೆ ಇರುತ್ತದೆ ಅಂತ ತಿಳೀತದೆ. ಈ ಜಮೀನಿಯ ವಿಷಯವಾಗಿ ಯಾವ ಅಧಿಕಾರ ವ ಹಕ್ಕನ್ನು ನಾನು ನಿನಗೆ ಎಂದೂ ಕೊಟ್ಟಿರುವದಿಲ್ಲಾ ವ ಕೊಡಲಿಕ್ಕೆ ಕಾರಣ ಇಲ್ಲಾ. ಈ ಬಗ್ಗೆ ನೀನು ಮಾಡಿಕೊಂಡ ಕಾಗದಪತ್ರಗಳು ಮೋಸ ಕೃತ್ಯವು ಅವೆ. ಅವು ಕಾಯಿದೆಕ್ಕೆ ಸಮ್ಮತವಿಲ್ಲಾ ಕಾರಣ ಅವೆಲ್ಲವುಗಳನ್ನು ಈ ನೋಟೀಸು ಮುಟ್ಟಿದ (೭) ಏಳು ದಿವಸಗಳಲ್ಲಿ ಕಾಯದೇಶೀರ ರೀತಿಯಿಂದ ನನಗೆ ಬಿಟ್ಟುಕೊಡಬೇಕು. ತಪ್ಪಿದರೆ ಕಾಯದೇಪ್ರಕಾರ ಇಲಾಜ ಮಾಡಲಾದೀತು ತಿಳಿಯೋದು

ತಾ|| ೧೦-೯-೧೯೩೯

ಈ ಎಡಗೈ ಹೆಬ್ಬಟ್ಟಿನ ಗುರ್ತು ಬಸವ್ವಾ ಕೋಂ ನಿಂಗನಗೌಡಾ ಶಿರವಾಡ ಈಕಿ ಮಾಡಿದ್ದು ಅದೆ

ಜಾಹೀರ ನೋಟೀಸು

—(೦)—

ಯಾವತ್ತು ಜನರಿಗೆ ಕೆಳಗೆ ಸಹಿ ಮಾಡುವವಳ ಕಡಿಂದಾ ಈ ನೋಟೀಸ ಮೂಲಕ ಪ್ರಕಟಿಸುವದೇನಂದರೆ- ಬಂಕಾಪೂರ ತಾಲ್ಲೂಕ ಮುಳಗುಂದ ಗ್ರಾಮದ ರಿ| ಸ| ೧೬ನೇ ... ನನ್ನ ಅಲ್ಪವಯಿ ಮಗ ಯಲ್ಲಪ್ಪಗೌಡಾ ಬಿನ್ನ ನಿಂಗನಗೌಡಾ ಇತನ ಮಾಲ್ಕಿ ವಹಿವಾಟೀದು ಇದ್ದು ಅದನ್ನು ಅತನ ಪತಿಯಿಂದ ನನ್ನ ಗಂಡನ ಮರಣದ ನಂತರ ಕಳೆದ ೨-೩ ವರ್ಷಗಳಿಂದ ನಾನು ವಹಿವಾಟ ವೃಷಭೋಗ ಮಾಡುತಾ ಬರುತ್ತೇನೆ. ಸಾಲೋಸಾಲ ಸದರ ಜಮೀನು ನಾನೇ ಲಾವಣಿ ಕೊಟಗೋತ ಒರುತ್ತೇನೆ. ಹೀಂಗೆ ಇದ್ದು ಸದರ ಗ್ರಾಮದಲ್ಲಿ ಇರುವ ವಟ್ಟು ಅಡಿವೆಪ್ಪಾ ಬಿನ್ನ ಸೋಮಪ್ಪಾ ಶಿರವಾಡ ಎಂಬವನು ಈ ಜಮೀನಿಯ ವಹಿವಾಟಿನ ವ ಹಕ್ಕನ್ನು ನಾನು ಅವನಿಗೆ ಕೊಟ್ಟಿರುತ್ತೇನೆಂದು ಕಲವು ಕಾಗದಪತ್ರಗಳನ್ನು ಕಪಟತನದಿಂದ ವುಂಟು ಮಾಡಿಕೊಂಡಂತೆ ನನಗೆ ಏಲಿಕಡಿಗೆ ತಿಳಿದು ಬಂದು ಈ ಜಮೀನನ್ನು ವಹಿವಾಟ ಮಾಡಲಿಕ್ಕೆ ನನಗೇ ಆಗುತ್ತದೆ ವ ಅದರಂತೆ ವಹಿವಾಟ ಮಾಡುತ್ತಾನು ಬಂದೇನಿ. ಈ ಬಗ್ಗೆ ಬೇರೆ ವಹಿವಾಟದಾರರ ಅವಶ್ಯಕತೆ ಏನು ಇಲ್ಲಾ ವ ಇದ್ದಿಲ್ಲಾ. ಅದರಂತೆ ಆವಶ್ಯಕತೆ ಇದ್ದಿದ್ದಾರೆ ಆಕೆಲ್ಲ ಮಾಡಿಕ್ಕೆ ... ಇದ್ದು ಅವನಿಗೆ ಈ ಅಧಿಕಾರ ಕೊಡುತ್ತಿದ್ದೆನು. ಅಡಿವೆಪ್ಪನು ನನ್ನ ವಿರುದ್ಧ ಹಿತಸಂಬಂಧವುಳ್ಳವನು ಇದ್ದದರಿಂದ ಅವನ ಕೈಯಲ್ಲಿ ನನ್ನ ಆಸ್ತಿ ಕೊಟ್ಟು ನನ್ನ ವ ನನ್ನ ಅಲ್ಪವಯಿ ಮಗನ ಲುಕ್ಸಾನ ಮಾಡಿಕೊಳ್ಳುವದು ಶಕ್ಯ ಇಲ್ಲಾ. ಈ ವಿಷಯದಲ್ಲಿ ಅವನಿಂದ ನಿರ್ಮಿತವಾದ ಕಾಗದಪತ್ರಗಳು ಖೋಟ ವ ಬನಾವಟ ಅವೆ. ಅವುಗಳನ್ನು ಆಧರಿಸಿ ಯಾರೂ ... ಹೋಗಿ ಮೋಸ ಹೋಗಬಾರದು ... ಈ ನೋಟೀಸ ಕೊಟ್ಟಿದ್ದೇನೆ

ತಾ|| ೧೦-೯-೧೯೩೯

ಈ ಎಡಗೈ ಹೆಬ್ಬಟ್ಟಿನ ಗುರ್ತು ಬಸವ್ವಾ ಕೋಂ ನಿಂಗನಗೌಡಾ ಶಿರವಾಡ ಈಕಿ ಮಾಡಿದ್ದು ಅದೆ

ನೋಟೀಸು

ರಾ|| ಯಮನಪ್ಪಾ ಪುಟ್ಟಪ್ಪಾ ಹೊಂಬರ ಸಾ|| ಜೈಲಕೊಂಗಲ ಇವರಿಗೆ-

ಕೆಳಗೆ ಸಹೀ ಮಾಡುವವನ ಕಡಿಂದ ಈ ನೋಟೀಸಿನಿಂದ ತಿಳಿಸುವದೇನಂದರೆ- ನೀನು ಕಾರ್ಡಿನ ಮೇಲೆ ಕೊಟ್ಟ ನೋಟೀಸು ಬಂದು ಮುಟ್ಟಿತು ಮಜಕೂರ ತಿಳೀತು. ನೀನು ನಾನು ಚಿಗದೊಡ್ಡಪ್ಪನ ಮಕ್ಕಳು ಆಗಬೇಕು. ನನ್ನ ತಂದಿ ನಿಮ್ಮ ತಂದಿ ವೇಳೆಕ್ಕೆ ಬ್ಯಾರ ಬ್ಯಾರೆ ಆಗಿರುತ್ತಾರೆ. ಈಗ ನೀನು ಹಿಸೆ ಕೊಡಬೇಕು ಅಂತಾ ನೋಟೀಸು ಮಾಡಿರುತ್ತಿ. ಅದು ಅಜಿ ಸುಳ್ಳು ನೋಟೀಸು ಮಾಡಿರುತ್ತಿ. ನಮ್ಮ ನಿಮ್ಮ ತಂದಿ ವಾಟಣಿ ಆದನಂತರ ನಮ್ಮ ತಂದಿ ಸ್ವಸಂಪಾದನೆ ದೊಡಿದ ಮಿಳಕತ್ತು ಅದೆ. ಅದರಲ್ಲಿ ನಿನಗೇನು ಬರೇ ಕಾಯದೇಶೀರ ಹಿಸ್ಸೇ ತಿಗಕ್ಕದ್ದು ಇಲ್ಲಾ ಹಾಗು ನೀನು ಬೇಡತಕ್ಕದ್ದು ಅಲ್ಲಾ. ನಮ್ಮ ಅಜ್ಜನ ಹೊಟ್ಟೀಲಿ ಆರು ಮಂದಿ ಮಕ್ಕಳು ಇದ್ದು ಆರು ಮರಾಣ ಆಗಿವೆ. ಆರು ಮರಾಣೆ ವಾಟಣೆ ಆಗಿ ಹೋಗಿವೆ. ಈ ಆರು ಘರಾಣೇದಲ್ಲಿ ನಷ್ಟ ನಿಂತ ಆ ಮರಾಣೆಂದ ಆಸ್ತಿ ಯಾವ ಕಡೆಕ್ಕೆ ಹೋಯಿತು ಇದನ್ನೆಲ್ಲಾ ಪಕ್ಕಾ ತಪಶಿಲ ಮಾಡಿಕೋಬೇಕು. ನೋಡಿಕೊಂಡು ಇದಕ್ಕೆ ಎಂಟು ದಿವಸದಲ್ಲಿ ಪೂರಾ ಕೊಡಬೇಕು. ತಪ್ಪಿದರೆ ಖೊಟ್ಟಿ ನೋಟೀಸ ಮಾಡಿದ ಬಗ್ಗೆ ರೀತಿಪ್ರಕಾರ ಇಲಾಜ ಮಾಡುವದರಲ್ಲಿ ಬರುವದು. ತಾ|| ೧೯-೯-೧೯೩೯

ಸಹಿ- ಮಲ್ಲಪ್ಪಾ ನೀಲಪ್ಪಾ ಹೊಂಬರ

ಜಾಹೀರ ನೋಟೀಸು

ರಾ|| ಮಲ್ಲಾ ತಂದಿ ಈರಪ್ಪಾ ಗುಂಡೂರವರ ಸಾ|| ಗಿರಿಯಾಲ ತಾ| ಬೆಳಗಾವಿ ಈತನಿಗೆ-

ಕೆಳಗೆ ಸಹಿ ಮಾಡುವವಳು ಈ ನೋಟೀಸಿನಿಂದ ಕಳಿಸುವದೇನಂದರೆ- ನೀನು ನನ್ನ ಉಡಿಕೀ ಗಂಡನಿದ್ದು ಒಂದೂವರೆ (೧½) ವರ್ಷಗಳ ಹಿಂದೆ ನನಗೂ ನನ್ನ ಮಗಳಿಗೂ ಹೊಟ್ಟೆಗೆ ಹಾಕದೆ ಹೊಡೆದು ಬಡದು ಉಟ್ಟಸೀರೀ ಮೇಲೆ ಹೊರಗೆ ಹಾಕಿದಿ. ಆದಿನಿಂದ ಎರಡು ನೂರು (೨೦೦) ರೂಪಾಯಿ ಸಾಲಾ ತಂದು ನಮ್ಮಿಬ್ಬರ ಹೊಟ್ಟೀ ಸಾಗಿಸಿಕೊಂಡಿದ್ದೇನೆ. ಈ ದುಷ್ಕಾಳವಿರುವದರಿಂದ ಮುಂದೆ ಸಾಲ ಸಹ ಸಿಗದಾಗಿದೆ. ಮೇಲಾಗಿ ಸಾಲ ಕೊಟ್ಟ ಸಾವಕಾರರ ತಗಾದೆಯಾದರೂ ಹೆಚ್ಚಾಗಿದೆ. ಕಾರಣ ಈ ನೋಟೀಸ ಮುಟ್ಟಿದ ಎಂಟು ದಿವಸಗಳಲ್ಲಿ ಬಂದು ಸದರೀ ಸಾಲಾ ತೀರಿಸಿ ನಮ್ಮನ್ನು ಚಲೋ ರೀತಿ ಇಟ್ಟುಕೊಳ್ಳುವಂತೆ ಯೋಗ್ಯ ಜಾಮೀನು ಕೊಟ್ಟು ಕರಕೊಂಡು ಹೋಗಬೇಕು. ಇದಕ್ಕೆ ತಪ್ಪಿದಲ್ಲಿ ಇದೇ ಸೋಡಚೀಟಿ ಅಂತ ತಿಳಿದು ನಾನು ನನ್ನ ಮರ್ಜಿಗೆ ಒಂದವನನ್ನು ಉಡಿಕಿ ಮಾಡಿಕೊಳ್ಳುತ್ತೇನೆ. ಹಿಂದಿನಿಂದ ನನ್ನ ಮತ್ತು ನನ್ನನ್ನು ಉಡಿಕಿ ಆದವನ ಮೇಲೆ ನಿನ್ನದು ಯಾವ ಪ್ರಕಾರದ್ದು ಹಕ್ಕು ತಕರಾರ ನಡೆಯಲಾರದು ತಿಳಿಯುವದು.

ತಾ|| ೧೨—೯—೩೯ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಕಾಯವ್ವಾ ಗಂಡ ಮಲ್ಲಪ್ಪಾ ಗುಂಡೂರವರ ಇಕೀದು ಅದೆ

ಜಾಹೀರ ನೋಟೀಸು.

ರಾ. ಶಿವರಾಯಾ ತಂದಿ ಬಸವಂತಪ್ಪ ಮಂಗಳಗಟ್ಟಿ ಸಾಕೀನ ಬಾಗೇವಾಡಿ ತಾಲೂಕ ಬೆಳಗಾವಿ ಈತನಿಗೆ-

ಕೆಳಗೆ ಸಹಿ ಮಾಡುವವಳು ಈ ನೋಟೀಸಿನಿಂದ ತಿಳಿಸುವದೇನಂದರೆ- ನೀನು ನನ್ನ ಮದುವೇ ಗಂಡನಿದ್ದು ನನ್ನ ಸಂಗಡ ಚಲೋ ರೀತಿಯಿಂದ ಪ್ರಪಂಚ ಮಾಡದೆ ನನ್ನನ್ನು ಎರಡು ವರ್ಷಗಳ ಹಿಂದೆ ಒಡೆದು ಹೊಡೆದು ಉಟ್ಟ ಸೀರಿ ಮೇಲೆ ಹೊರಗೆ ಹಾಕಿದಿ. ಆಗಿನಿಂದ ಈ ವರೆಗೆ ಎರಡನೆಯವರ ಕಡಿಂದ ಎರಡು ನೂರು ರೂಪಾಯಿ (೨೦೦) ಸಾಲಾ ಮಾಡಿ ಹೊಟ್ಟೆಗೆ ತಿಂದಿದ್ದೇನೆ. ಈಗ ದುಷ್ಕಾಳ ದಿವಸವಿದ್ದು ಸಾಲ ಹುಟ್ಟದಾಗಿದೆ. ಮೇಲಾಗಿ ಸಾವಕಾರರ ತಗಾದೆಯಾದರೂ ನನಗೆ ಬಹಳಾಗಿದೆ. ನೀನು ಎರಡನೇಯವಳನ್ನು ಉಡಿಕೀ ಮಾಡಿಕೊಂಡು ನಿನ್ನ ಪ್ರಪಂಚವನ್ನು ನಡೆಸುತ್ತಿರುವದಾಗಿ ತಿಳೀತದೆ. ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಬಂದು ಸಾವಕಾರರ ಸಾಲಾ ತೀರಿಸಿ ನನ್ನನ್ನು ಚಲೋ ರೀತಿಯಿಂದ ಇಟ್ಟುಕೊಳ್ಳುತ್ತೇನೆಂದು ಯೋಗ್ಯ ಜಾಮೀನು ಕೊಟ್ಟು ಕರಕೊಂಡು ಹೋಗಬೇಕು. ಇಲ್ಲದಿದ್ದರೆ ಇದೇ ಸೋಡಪತ್ರವೆಂದು ತಿಳಿದು ನಾನು ಬೇಕಾದವನನ್ನು ಉಡಿಕಿ ಮಾಡಿಕೊಳ್ಳುತ್ತೇನೆ. ಬಳಿಕ ನನ್ನ ಹಾಗು ನನ್ನನ್ನು ಉಡಿಕೆ ಮಾಡಿಕೊಂಡವನ ಮೇಲೆ ಯಾವ ತರದಲ್ಲಿ ಹಕ್ಕು ತಕರಾರ ನಡಿಯಲಾರದು. ತಿಳಿಯುವದು ತಾ. ೧೬-೯-೩೯ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಗಿರಿಜವ್ವಾ ಗಂಡ ಶಿವರಾಯಾ ಮಂಗಳಗಟ್ಟಿ ಈಕೀದು ಅದೆ

ನೋಟೀಸು

ಕಲಘಟಗಿ ತಾಲ್ಲೂಕ ... ಹಾಲಿವಸ್ತಿ ದೇವಲಿಂಗನಕೊಪ್ಪ ಗ್ರಾಮದ ಬರಮಪ್ಪಾ ಕೋಟಿಗಾರ ಇವನಿಗೆ ಬಸವಣ್ಣೆವ್ವ ಕೋಂ ಭರಮಪ್ಪಾ ತೋಟಿಗಾರ ಈ ನೋಟೀಸಿನ ಮುಖಾಂತ್ರ ತಿಳಿಸುವದೇನೆಂದರೆ ನೀನು ನನ್ನ ಮದುವೆಗಂಡನಾಗಿದ್ದು ಈಗ ಅಜಮಾಸು ಎರಡು ವರ್ಷದ ಹಿಂದೆ ನನ್ನನ್ನು ಹೊಡೆದು ಒಡದು ನಿನ್ನ ಮನೆಯಿಂದ ಹೊರಗೆ ಹಾಕಿದ್ದರಿಂದ ನಾನು ನಿನ್ನ ಮನಿಬಿಟ್ಟು ದುಮ್ಮವಾಡದಲ್ಲಿ ಇರುತ್ತೇನೆ. ಆದರೆ ನನ್ನ ವ ನನ್ನ ಕೂಸಿನ ಉಪಜೀವನ ಸಲುವಾಗಿ ನಿನ್ನ ಮನಿ ಬಿಟ್ಟಂದಿನಿಂದ ಈ ವರೆಗೆ ನಾನು ಮಹಾದೇವಪ್ಪಾ ಸಂಗನಬಸಪ್ಪಾ ಮೋಟಿಬಾವರು ಇವರಲ್ಲಿ ೩೦೦ರೂಪಾಯಿ ಸಾಲ ಮಾಡಿರುತ್ತೇನೆ. ಆದ್ದರಿಂದ ಈ ನೋಟೀಸು ನಿನಗೆ ಮುಟ್ಟಿದ ಏಳು ದಿವಸಗಳ ವಳಗೆ ಈ ಸಾಲ ನೀನು ನಾಲ್ಕು ಜನರ ಸಮಕ್ಷಮ ತೀರಿಸಿಕೊಂಡು ನನ್ನನ್ನು ಕರಕೊಂಡು ಹೋಗಬೇಕು. ಬಂದು ವೇಳ್ಯಾ ಆ ತಾರೀಖಿನ ವಳಗೆ ನನ್ನನ್ನು ಕರಕೊಂಡು ಹೋಗದಿದ್ದರೆ ಇದೇ ಸೋಡಪತ್ರ ಅಂತ ತಿಳಿ ತಾ. ೧೯-೯-೩೯ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಬಸವಣ್ಣೆವ್ವಾ ಕೋಂ ಭರಮಪ್ಪಾ ತೋಟಿಗಾರ ಈಕಿದು ಅದೆ

ನೋಟೀಸ.

ರಾ|| ರಾ|| ಹೊನ್ನಪ್ಪಾ ತಂದಿ ಹೊನ್ನಪ್ಪಾ ಡಂಗೀ ಸಾ|| ಹೆಳಸ ಹುಬ್ಬಳ್ಳಿ ಪೈಕಿ ಬಂಗೀ ಮಾಹಲದಾರ ಓಣಿ ಇವರಿಗೆ-

ಕೆಳಗೆ ಸಹಿ ವ ಗುರ್ತು ಮಾಡಿದವನ ಕಡಿಯಿಂದಾ ಈಗ ನಿನಗೆ ನೋಟೀಸಿನಿಂದ ತಿಳಿಸುವದೇನಂದರೆ- ನೀನು ... ತಗ ಅಜಮಾಸು ಎಂಬು ಹತ್ತು ವರ್ಷದ ಹಿಂದೆ ಕಾಗದಾ ಬರಿಸಿಕೊಂಡು ನನಗೆ ಸಾಲಾ ಒಂದು ನೂರು (೧೦೦) ರೂಪಾಯಿ ಕೊಟ್ಟು ನಮ್ಮ ಅಣ್ಣತಮ್ಮರ ಸದರ ಕಾಗದ ಮೇಲೆ ಸಹಿ ತಗೊಂಡು ನೀನು ನಮಗೆ ಹಣಾ ಕೊಟ್ಟಿ. ನಾವು ನಿನ್ನ ಮುದತ್ತಿಗೆ ಸರಿ ಆಗಿ ಸದರೀ ಹಣಾ ಅಸಲು ವ ಬಡ್ಡಿ ಸಹಿತಾ ಫೇಡು ಮಾಡಿರುತ್ತೀರಿ. ನಾವು ಉಭಯತರು ಬರಕೊಟ್ಟ ಕಾಗದಾ ಬೇಡಿದ್ರೆ ಕೊಡತೇನೆ ಅಂತಾ ಇವತ್ತಿನವರೆಗೆ ಹೇಳಿಕೋತಾ ಒಂದಿ ನಿನ್ನ ಈಗ ವಂದು ತಿಂಗಳ ಹಿಂದೆ ನನ್ನ ಕಾಗದಾ ಕೊಡು ಅಂತಾ ಬೇಡಿದ್ರೆ ನೀನು ಪುನಃ ನನಗೆ ಹಣಾ ಕೊಡುವದು ಆದೆ ಕೊಟ್ಟು ನಿನ್ನ ಕಾಗದಾ ತಗೊಂಡು ಹೋಗು ಅಂತಾ ಹೇಳಿದಿ. ನಾನು ನಿನಗೆ ಏನು ಕೊಡತಕ್ಕದ್ದು ಇಲ್ಲಾ ನನ್ನ ಕಾಗದಾ ಕೊಟ್ಟು ಹೋಗು ಅಂತಾ ಹೇಳಿದ್ರೆ ವಿಚಾರ ಇಲ್ಲದೆ ಏಕದಂ ನನ್ನ ಮನೀ ಹೆ... ನನ್ನ ಹೆಂಡತಿಗೆ ಹೊಡೆದದ್ದೂ ಬಾಯಿಗೆ ಬಂದಂತೆ ಹಲಕಟ ಬೇಗಳಿತ ಬೈದು ಹೋದಿ. ನಾನು ನಿನ್ನ ಮೇಲೆ ಫಿರ್ಯಾದಿ ಕೊಡಬೇಕು ಅಂತಾ ಪೋಲೀಸ ಚವಕಿಗೆ ಹೋಗಿ ಪೋಲೀಸರಿಗೆ ತಿಳಿಸಿದೆ. ... ಪೋಲಿಸ ಪಾಟೀಲರ ಕಡಿಗೆ ಹೋಗಿ ನಿನ್ನ ಫಿರ್ಯಾದಿ ಕೊಡು ಅಂತಾ ಹೇಳಿದ್ದರಿಂದ ನಾನು ... ಪೋಲೀಸಪಾಟೀಲರ ಕಡಿಗೆ ಹೋಗಿ ಯಾವತ್ತು ಹಕೀಕತ್ತು ತಿಳಿಸಿದೆ. ಸದರಿ ಪಾಟೀಲರು ನಿನಗೆ ಕರಿಸಿ ತಾಕೀತ ಮಾಡಿ ಕಳಸಿದನು. ಈ ನೋಟೀಸು ನೀನು ಅವನ ಮೈಯ್ಯಮೇಲೆ ಹೋದರೆ ನಿನ್ನ ಮೇಲೆ ಕಚ್ಚೆ ಮಾಡೇನು ಅಂತಾ ಹೇಳಿ ಕಳಿಸಿಕೊಟ್ಟರು. ನನಗೆ ಈ ನೋಟೀಸಿ ಮೇಲೆ ನಿನ್ನ ಹೆಸರ. ತಗಿದರೆ ನನ್ನ ಕಡಿಗ ಫಿರ್ಯಾದಿ ಕೊಡು ಅಂತಾ ಸಮಜೂತ ಹೇಳಿದರು. ನಿನ್ನದು ಕೊಡುವದು ಇದ್ರೆ ಕಾಯದೆ ಪ್ರಕಾರ ಕೋರ್ಟಿನಲ್ಲಿ ಫಿರ್ಯಾದಿ ಕೊಡು ಅಂತಾ ಹೇಳಿ ಕಳಿಸಿದರು. ನೀನು ಈಗ ದೈವದವರು ನೀವು ಮಾತಾಡಿಕೊಂಡು ನನಗ ಎಂಯಸಕಾರ ಕೊಟ್ಟು ಹೀಂಗೆ ವ ಬೇರೆ ಕಡೆಗೆ ಪ್ರತಿಬಂಧ ಮಾಡಿದಕ್ಕೆ ಈಗ್ಯೆ ನಿನಗೆ ನೋಟೀಸು ಕೊಡುವ ಕಾಗ ಬಿತ್ತು. ಈ ನೋಟೀಸು ನಿನಗೆ ಮುಟ್ಟಿದ ಮೂರು ದಿವಸದೊಳಗಾಗಿ ನನ್ನ ದಸ್ತಾವಿಜ ನನಗೆ ಮುಟ್ಟಿ ಕಾಯದೇಪ್ರಕಾರಾ ನನ್ನ ಕಡಿಯಿಂದಾ ಪಾವತಿ ತಗೋದೇಂ. ಮತ್ತು ನನಗೆ ಒಯ್ನಿಕಾರ ಕೊಟ್ಟಿದ್ದಕ್ಕೆ ನನ್ನ ಮರ್ಯಾದಿ ತಂಬಿ ಕೊಡಬೇಕು. ನೀವು ಹಿರಿಯರ ಅಗ್ಗೆ ನನ್ನ ನೆರೆಕ್ರ ಮ್ಯುನಿಸಿಪಾಲಿಟಿಯಲ್ಲಿ ಸುಳ್ಳು ಚಾಡ ಹೇಳಿ ತಗದಬಿಡರೀ ಈ ರೀತಿ ನೀವು ನನ್ನ ಬಡವನಿಗೆ ಹಾಕಲಿಕ್ಕೆ ಹತ್ತಿದರಿಂದಾ ಮುಂದೆ ಆದರೂ ನೀವು ನನಗೆ ಕರೀಕ್ಸಿರಿ ಕೊಟ್ಟರು ನಿಮ್ಮ ಮೇಲೆ ನಾನು ಫೌಜದಾರಿ ಮಾಡುವದರಲ್ಲಿ ಬಂದೀತು ಅಂತಾ ಕೊಟ್ಟ ನೋಟೀಸು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಇರುತ್ತದೆ

ತಾರೀಖು ೧೯-೯-೧೯೩೯

ಈ ಎಡಗೈ ಹೆಬ್ಬಟ್ಟಿನ ಗುರ್ತು ಕದರಪ್ಪಾ ತಂದಿ ನಿಲ್ಲಪ್ಪಾ ಬಂಗೀ ಈತನ ಕೈದು ಅದೆ

ನೋಟೀಸಿಗೆ ಉತ್ತರಾ

ಗಂಗವ್ವಾ ಯಲ್ಲವ್ವಾ ಕದಮ ಸಾ|| ಧಾರವಾಡ ಪೈಕಿ ಮಾವೇನಪೇಟ ಇವರಿಗೆ—

ಇದರಲ್ಲಿ ಕೆಳಗೆ ಸಹಿ ಮಾಡಿದವಳ ಕಡೆಯಿಂದ ನೋಟೀಸ ಕೊಡುವದರಲ್ಲಿ ಬರುತ್ತದಲ್ಲಾ. ನೀನು ತಾರೀಖು ೬-೯-೩೯ ನೇ ದಿವಸ ರಾಜಹಂಸ ಪತ್ರದಲ್ಲಿ ಕೊಟ್ಟ ನೋಟೀಸಿ ಮಜಕೂರು ತಿಳಿಯಿತು. ನೀನು ಲಗ್ನದ ಗಂಡನು ಜೀವಂತ ಇದ್ದು ನಿನ್ನಿಂದಾ ೪-೫ ಮಕ್ಕಳನ್ನು ಹಡದ ಆದರೆ ಏಲೀ ಕಡಿಗೆ ನೀನು ಒಬ್ಬ ರಂಡಿಯನ್ನು ಇಟ್ಟುಕೊಂಡ ನಂತರ ಮನಿತನದ ಯೋಗ್ಯ ವ್ಯವಸ್ಥಾ ಮಾಡನೆ ವ ಘರಾಣೇದ ಹಿತದ ಕಡಿಗೆ ಲಕ್ಷ್ಯಗೊಡದೆ ಮನಬಂದಂತೆ ರಂಡಿಯ ಮಾತು ಕೇಳಿ ಹಾಳ ಮಾಡಲಿಕ್ಕ ಹತ್ತಿದಿ ಮತ್ತು ನನಗೆ ಬುಲಾವೆ ಕೊಟ್ಟು ನಂನ ... ನಿಯವರು ನನಗೆ ಮನಿ ಕೊಡಿಸಿದ ಮುರಾಶಾ ಬ್ಯಾಂಕಿಗೆ ವತ್ತಿ ಹಾಕಿಸಿ ರೂಪಾಯಿಗಳನ್ನು ತೆಗದುಕೊಂಡು ಹಿಂದಿನಿಂದಾ ಬಿಡಿಸಿ ಕೊಡುತ್ತೇನ ಅಂತಾ ಹೇಳಿದ ನನ್ನ ತವರ ಮನೆಯಿಂದಾ ತಂದ ಭಂಗಾರದ ದಾಗೀನೆ ಸಹಾ ಇಸಕೊಂಡು ಹಾಳ ಮಾಡಿರುವದಲ್ಲದೇ ನಿಂನ ಆಸ್ತಿ ಸಹಾ ಬ್ಯಾಂಕಿಗ ವತ್ತಿ ಹಾಕಿ ಸಾಲಾ ತೆಗೆದು ವ್ಯರ್ಥ ಹಾಳ ಮಾಡಿದ್ದನ್ನು ... ನಿಂನ ನಡತಿಯು ನನಗ ಸರಿಬಾರದ್ದರಿಂದ ನೀನು ರಾಂಡಬಾಜಿ ತನದಿಂದ ವ ನಿನ್ನ ವ್ಯಸನದ ಬಗ್ಗೆ ಜಲಕೆ ಹಾಳ ಮಾಡಿದ್ದರಿಂದಾ ನನ್ನ ಮಕ್ಕಳು ಭಿಕ್ಷಾ ಪಾತ್ರರಾಗಾವು ಆದ್ದರಿಂದ ನೀನು ನನ್ನ ಬಾಬತ ಮನಿ ಬ್ಯಾಂಕಿಗೆ ವತ್ತಿ ಹಾಕಿದ್ದು ಮೋಕಳೀಕ ಮಾಡಸಿಕೊಡಬೇಕು ಮತ್ತು ನಂನ ಮೈಮೇಲೆ ಇದ್ದ ಬಂಗಾರದ ದಾಗೀನೆ ಇಸಕೊಂಡವು ಮರಳ ಕೊಡಬೇಕು ಇಲ್ಲದೇ ಇದ್ದರೆ ನೀನು ಮಾಡಿದ ಯಾವತ್ತು ವ್ಯವಹಾರಗಳು ಘರಾಣೇದ ಹಿತದ ಬಗ್ಗೆ ಆಗಿರುವದಿಲ್ಲ. ನಿಂನ ಮೇಲೆ ದಾವೆ ಮಾಡುತ್ತೇನೆ ಅಂತಾ ಅಂದ ಮಾತಿಗೆ ನೀನು ನನಗೆ ಅಂನವಸ್ತ್ರ ಕೊಡದೆ ರಂಡೀ ಮಾತಿನ ಮೇಲಿಂದಾ ಹೊರಗೆ ಹಾಕಿದ. ಆದರಿಂದ ಈಗ ೪-೬ ತಿಂಗಳಿಂದಾ ನಂನ ತವರ ಮನಿಯಲ್ಲಿ ಬೇರೆ ಇದ್ದು ಉಪಜೀವನ ಸಾಗಿಸುತ್ತೇನೆ ಮತ್ತು ಈಗ ನಾನು ೬-೮ ತಿಂಗಳ ಗರ್ಭಿಣಿ ಇದ್ದು ನಂನ ಉಪಜೀವನಕ್ಕೆ ಮಾಡಿದ ಸಾಲಾ ವ ಬಾಣಂತನಕ್ಕೆ ತಗಲಿದ ಖರ್ಚು ಸಹಾ ಕೊಡತಕ್ಕ ಜೋಜಾ ನಿಂನದೇ ಇದ್ದು ನೀನು ನಂನ ಸ್ತ್ರೀಧನದ ಆಸ್ತಿ ಅಪಹರಿಸುವ ಇರಾದೆಯಿಂದ ನಾನು ಮನಿಯಲ್ಲಿ ಇಲ್ಲದ ವೇಳೆಯಲ್ಲಿ ದಾಗೀನೆ ತೆಗೆದುಕೊಂಡು ಹೋಗಿರುತ್ತೀದಿ ಅಂತಾ ಸುಳ್ಳು ಮಜಕೂರು ... ಮಾಡಿಕೊಟ್ಟ ನೋಟೀಸಿನಿಂದ ನಂನ ಲಗ್ನದ ಹಕ್ಕು ನಷ್ಟವಾಗಬಾರದು. ನೀನು ಈ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ ನಂನ ಬಾಬತ್ತ ಮನಿ ಬ್ಯಾಂಕಿನಿಂದಾ ಮೋಕಳೀಕ ಮಾಡಿಸಿಕೊಡಬೇಕು ಇಲ್ಲವೇ ಅದರ ಕಿಮ್ಮತ್ತು ಆಗಲೀ ಕೊಡಬೇಕು ವ ನಂನ ಮೈಮೇಲೆ ಇದ್ದ ದಾಗೀನೆ ಅಗರ ಅವುಗಳ ಕಿಮ್ಮತ್ತು ಕೊಡಬೇಕು ಮತ್ತು ಈಗ ೫-೬ ತಿಂಗಳ ಆಗಿಯಿತು ನಂನ ಉಪಜೀವನದ ಬಗ್ಗೆ ಮಾಡಿದ ಸಾಲಾ ವ ಬಾಣಂತನದ ಖರ್ಚಿನ ರಕಮು ಪಂಚರು ಕಟ್ಟಿದ್ದು ಕೊಡಬೇಕು ಇಲ್ಲದೇ ಇದ್ದರೆ ನಿಂನ ಮೇಲೆ ಕಾಯದೇಪ್ರಕಾರ ದಿವಾಣಿಯಲ್ಲಿ ದಾವೇ ಮಾಡಿ ಆಗಲಿ ಮತ್ತು ಇತರ ರೀತಿಯಿಂದಾಗಲೀ ಕೆಲಸ ನಡಿಸಿ ವಸೂಲ ಮಾಡೇನು. ಈ ನೋಟೀಸಿನ ಖರ್ಚು ನಿಂನ ತಲೆಯ ಮೇಲೆ ಅದೆ.

ತಾರೀಖು ೧೯—೯—೧೯೩೯ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಶಂಕರಾಬಾಯಿ ಕೋಂ ಗಂಗವ್ವಾ ಕದಮ ಈಕಿ ಕೈದು ಅದೆ

ಈ ಪತ್ರವನ್ನು ಆಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ... ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನೋಟೀಸಿಗೆ ಉತ್ತರ

ಮೆ. ಸರವರಖಾನ ವ| ಹಸನಮಹಮ್ಮದ ಖಾನ ಜಹಾಗಿರದಾರ ಸಾಕೀನ ಬಾಡ ತಾಲೂಕ ಧಾರವಾಡ ಇವರಿಗೆ,

ಈ ಕೆಳಗೆ ಸಹಿ ಮಾಡುವವರ ಕಡೆಯಿಂದ ತಿಳಿಸಲ್ಪಡುವದೇನಂದರೆ ನೀವು ರಾಜಹಂಸ ವರ್ತಮಾನ ಪತ್ರದಲ್ಲಿ ತಾರೀಖು ೨೧-೬-೩೯ನೇ ದಿವಸ ನಿಮ್ಮ ಅಣ್ಣ ತಮ್ಮರ ಹೆಸರಿನಿಂದ ಒಂದು ನೋಟೀಸ ಕೊಟ್ಟಿರುತ್ತೀರಿ ಅದರಲ್ಲಿ ನಮ್ಮ ಹೆಸರುಗಳು ನಮೂದ ಇಲ್ಲಾ ಹೀಗಿರತಾ ನಮ್ಮ ಪೈಕಿ ಕಲ್ಲನಗೌಡಾ ನಾಗನಗೌಡ ಇವರ ಹೆಸರಸಲ್ಲಿ ಒಂದು ಪ್ರತಿ ಮಾತ್ರ ರಜಿಸ್ಟರ ಮಾಡಿದ್ದು ಇದ್ದು ಅದರಲ್ಲಿ ಬರೆದ ಮಜಕೂರು ನಮಗೆ ಯಾವದೇ ಕಾರಣದಿಂದಲೂ ಬಾಂಧವಾಗಲಾರದು ಯಾಕಂದರೆ ನಾವು ಕದೀಮ ಇನಾಮದಾರನಿದ್ದು ಆ ನಾತೆದಿಂದ ನಮ್ಮ ಕಬಜಾಕ್ಕೆ ಇರುವ ಜಮೀನಗಳು ವ ಗಾಂವ ಠಾಣದಲ್ಲಿರುವ ಮನಿ ವ ಹಿತ್ತಲ ಹಾಂಗು ಗಿಡಗಳು ವಗೈರೆ ಆಸ್ತಿಯು ನಮ್ಮ ಹಕ್ಕಿನವು ನಮ್ಮ ವಂಶಪರಂಪರ ನಮ್ಮ ಕಬಜಾದಲ್ಲಿ ಇರುತ್ತವೆ. ಆದರ ಮಾಲ್ಕಿ ನೀವು ಖಾತೇದಾರ ಇರುವ ಕಾರಣದಿಂದ ಮಾತ್ರ ನಿಮ್ಮದು ಆಗುತ್ತದೆ ಅನ್ನುವದು ನಿಮ್ಮ ತಪ್ಪು ತಿಳುವಳಿಕೆ ಅಂತಾ ಅನ್ನಲಿಕ್ಕೆ ಏನೂ ಅಡ್ಡಿಯಿಲ್ಲಾ ಹಾಂಗು ಜಾತ ಇನಾಮು ಆಸ್ತಿಯು ಬೇಕಾದಾಗ ಬೇಕಾದವರು ತಕ್ಕೊಳ್ಳಲಿಕ್ಕೆ ಬರುವದು ಆ ಪ್ರಕಾರ ನಾವು ಸದರ ಗ್ರಾಮದಲ್ಲಿ ತಕ್ಕೊಂಡಿದ್ದು ಅದೆ ಪ್ರಸಂಗೋಪಾತ ಮುಂದೆ ತಕ್ಕರೆ ತಕ್ಕೊಳ್ಳಬಹುದು ಕಾರಣ ಈ ನಿಮ್ಮ ಬೇಕಾಯದೇಶೀರ ಕೊಟ್ಟ ನೋಟೀಸು ನಮಗೆ ಲಾಗೂ ಆಗಲಾರದು ಕಾರಣ ಬಲ್ಲವರ ಕಡೆಯಿಂದ ಈ ನಿಮ್ಮ ತಪ್ಪು ತಿಳುವಳಿಕೆಯು ದುರಸ್ತ ಮಾಡಿಕೊಳ್ಳತಕ್ಕದ್ದು ತಾ. ೨೧-೯-೩೯

ಸಹಿ ಕಲ್ಲನಗವಡಾ ನಾಗನಗೌಡಾ ಪಾಟೀಲ

ಸಹಿ ದೊಡ್ಡ ಕಲ್ಲನಗವಡಾ ಪಾಟೀಲ ಬಾಡ

ಸಹಿ ಮರಿಗೌಡಾ ವ. ಬಿಗೌಡಾ ಪಾಟೀಲ

ಸಹಿ ಪರಪ್ಪಾ ಬಸಪ್ಪಾ ಬಡಿಗೇರ

ಸಹಿ ಗಂಗಯ್ಯಾ ಚಿಕಲದ

ಸಹಿ- ಚನಬಸಯ್ಯಾ ತಂದಿ ಅಡೆವ್ಯೆಯ್ಯಾ ಚಿಕ್ಕಮಠ

ಈ ಎಡಗೈ ಹೆಬ್ಬರಳಿನ ಗುರ್ತಾ ಗೂಳಯ್ಯಾ ತಂದಿ ಗದಗಯ್ಯಾ ಪೂಜಾರ ಈತನು ಮಾಡಿದ್ದು ಅದೆ

ಈ ಎಡಗೈ ಹೆಬ್ಬರಳಿನ ಗುರ್ತಾ ಬಸಪ್ಪಾ ಗೂಳಪ್ಪಾ ತಳವಾರ ಈತನದು ಅದೆ

ಈ ಎಡಗೈ ಹೆಬ್ಬರಳಿನ ಗುರ್ತಾ ಫಕ್ಕೀರಾ ತಂದಿ ಬಸಪ್ಪಾ ಧರ್ಮಪ್ಪನವರ ಈತನದು ಅದೆ.

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಮಲ್ಲಪ್ಪಾ ಕೆಂಚಪ್ಪಾ ತಳವಾರ ಈತನದು ಅದೆ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ. ಅಂಚೆ ವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮುಖ್ಯಬ್ಯಾಂಕ ಧಾರವಾಡ

☞ ಈ ಔಷಧ ಬೇಕಾದವರು ಯಾವ ವರ್ತಮಾನಪತ್ರದ ಜಾಹೀರಾತಿನ ಮೂಲಕ ಈ ಪೇಟಿಕೆಯನ್ನು ನೋಡಿರುವಿರೆಂಬುದನ್ನು ಬರೆಯಬೇಕು.

ನೋಟೀಸಿನ ಉತ್ತರ

ಮೆ. ಸರವರಖಾನ ವ| ಹಸನ ಮಹಮ್ಮದ ಖಾನ ಜಾಹಗೀರದಾರ ಸಾಕೀನ ಬಾಡ ತಾಲೂಕ ಧಾರವಾಡ ಇವರಿಗೆ-

ಕೆಳಗೆ ಸಹಿ ಮಾಡುವ ಬಾಡ ಇನಾಮಗ್ರಾಮದ ಯಾವತ್ತು ರೈತ ಜನರ ತರ್ಫೆಯಿಂದ ನಾವು ಪಂಚ ಜನರು ಈ ನೋಟೀಸಿನ ಮೂಲಕ ತಿಳಿಸಲ್ಪಡುವದೇನಂದ್ರೆ:-

ನೀವು ರಾಜಹಂಸ ವರ್ತಮಾನ ಪತ್ರದಲ್ಲಿ ತಾರೀಖು ೨೧-೬-೩೯ನೇ ದಿವಸ ನಿಮ್ಮ ಅಣ್ಣ ತಮ್ಮಂದಿರ ಹೆಸರಿನಿಂದ ವಂದು ನೋಟೀಸು ಕೊಟ್ಟದ್ದು ಅದರಲ್ಲಿ ಬಾಡ ಗ್ರಾಮದ ಯಾವತ್ತು ಜನರಿಗೆ ಅಂತಾ ನಮೂದ ಇದ್ದ ಕಾರಣ ನಮಗೆ ಅದರ ಉತ್ತರ ಕೊಡುವ ಭಾಗಬಿತ್ತು ಈ ಊರ ಗಾಂವ ಠಾಣದಲ್ಲಿರುವ ನಮ್ಮ ಮನಿಗಳು ವ ಹಿತ್ತಲಗಳು ವ ಗಿಡಗಳು ನಮ್ಮ ನಮ್ಮ ಹಕ್ಕಿನವು ನಮ್ಮ ಕಬಜಾ ಮತ್ತು ವಹಿವಾಟಿಯಲ್ಲಿ ಇರುವದನ್ನು ಈ ಊರ ಸ್ಥಾಪನಾ ಆಗುವ ಕಾಲದಿಂದ ನಮ್ಮ ಹಿರಿಯರ ಅನಗಾಯತ ನಮ್ಮ ತಾಬಾದಲ್ಲಿರುತ್ತವೆ ನೀವು ಖಾತೆದಾರ ಅನ್ನುವ ಶಬ್ದದಿಂದ ಮಾತ್ರ ನಮ್ಮ ಮಾಲ್ಕಿಯುಳ್ಳ ಆಸ್ತಿಯು ನಿಮ್ಮದು ಎಂದೂ ಆಗಲಾರದು ಮುಂದೆ ನಮ್ಮ ಕೂಡ ಏನಾದರೂ ತಂಟೆ ವಗೈರೆ ತೆಗಿಯುವ ಉದ್ದೇಶದಿಂದ ಈ ರೀತಿ ಗೈರ ಕಾಯದೇಶೀರ ವರ್ತನ ನೀವು ಮಾಡಿದ್ದು ನಿಮ್ಮ ತಿಳುವಳಿಕೆಯು ತಪ್ಪು ಅದೆ ಅಂತಾ ಅನ್ನಲಿಕ್ಕೆ ಏನೂ ಅಡ್ಡಿಯಿಲ್ಲಾ ಈ ಊರ ಜಾತ ಇನಾಮು ಇರುವದರಿಂದ ನಮ್ಮ ಇಚ್ಛಾ ಇದ್ದಾಯ ಬೇಕಾದವರ ಆಸ್ತಿ ಮಾರಲಿಕ್ಕೆ ಖರೀದಿ ತಕ್ಕರೆ ತಕ್ಕೊಳ್ಳಬಹುದು ಈ ಮೊದಲು ತಕ್ಕೊಂಡದ್ದು ಸಹ ಇರುತ್ತದೆ ನೀವು ಗೈರ ಕಾಯದೇಶೀರ ನಮ್ಮ ಮೇಲೆ ಏನಾದರೂ ತಗಾದಿ ಕೊಟ್ಟು ವಗೈರೆ ಮಾಡಿದರೆ ರೀತಿ ಪ್ರಕಾರ ಕಾಯದೇಶೀರ ಇಲಾಜ ಮಾಡುವದರಲ್ಲಿ ಬಂದೀತು ನೀವು ಕೊಟ್ಟ ನೋಟೀಸಿನಿಂದ ನಮ್ಮ ಮನಸ್ಸುಗಳು ಕೆಟ್ಟ ಪದಳ ಹುಟ್ಟಿರುತ್ತವೆ ತಾ. ೧೮-೯-೩೯ ಇಸ್ವಿ

ಸಹಿ ಚನ್ನಪ್ಪಾ ಕಲ್ಲಪ್ಪಾ ಜೋಡಳ್ಳಿ

ಈ ಯಡಗೈ ಹೆಬ್ಬಟ್ಟಿನ ಗುರ್ತಾ ಈರಬಸಪ್ಪಾ ಶಾಂತಿನಯ್ಯಾ ಹಿರೇಮಠ ಈತನ ಕೈದು ಅದೆ

ಈ ಯಡಗೈ ಹೆಬ್ಬಟ್ಟಿನ ಗುರ್ತಾ ಬಸಪ್ಪಾ ತಿಮ್ಮಪ್ಪಾ ಜೋಡಳ್ಳಿ ಈತನ ಕೈದು ಅದೆ

ಈ ಯಡಗೈ ಹೆಬ್ಬಟ್ಟಿನ ಗುರ್ತಾ ನಿಂಗಪ್ಪಾ ಈರಸಪ್ಪಾ ಜೋ. ಇವನ ಕೈದು ಅದೆ

ಸಹಿ ಮಲ್ಲಪ್ಪಾ ಬಸಪ್ಪಾ ಜೋಡಳ್ಳಿ

ಈ ಯಡಗೈ ಹೆಬ್ಬಟ್ಟಿನ ಗುರ್ತಾ ಬಸಪ್ಪಾ ಫಕೀರಪ್ಪಾ ಗುಡಿಯವರ ಈತನ ಕೈದು ಅದೆ.

ಸಹಿ ಅಪ್ಪಯ್ಯಾ ಬಡಿಗೇರ

ಈ ಯಡಗೈ ಹೆಬ್ಬಟ್ಟಿನ ಗುರ್ತಾ ಕಲ್ಲಪ್ಪಾ ಮಲ್ಲಪ್ಪಾ ಕಾಮಲಾಪೂರ ಈತನ ಕೈದು ಅದೆ

ಈ ಯಡಗೈ ಹೆಬ್ಬಟ್ಟಿನ ಗುರ್ತಾ ಬಸಪ್ಪಾ ಫಂಡಪ್ಪಾ ಜೋಂಟ್ಯಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧.೦) ಧಾರವಾಡ ರವಿವಾರ ತಾರೀಖು ೨೩ ನೇ ಸಪ್ಟಂಬರ ೧೯೩೪ (ಸಂಚಿಕೆ ೨೧೧

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಸೋಮವಾರ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ

ಚಾಲೂ ಖಾತೆಗಳು:— ಫಕ್ತ ಟಿಯಾಗಿ ತೆಗೆಯಲ್ಪಡುವವು

ಸೇವಿಂಗ್ಸ ಬ್ಯಾಂಕ:— ಬಡ್ಡೀ ದರದಿಂದ ತೆಗೆದುಕೊಳ್ಳಲ್ಪಡುವದು ಬಡ್ಡೀ ದರ ೩ ರೂ.

ಮುದತಿ ಠೇವುಗಳು:— ಒಂದು ವರ್ಷದ ಮುದ್ದತಿಸಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೩॥ ರೂ

ಬೇರೆ:— ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡೀದರ ೬ ರೂ. ಹತ್ತಿ ಮತ್ತು ಧಾನ್ಯಗಳ ಆಡವಿನ ಮೇಲೂ ಸಾವಕಾರೀ ನೋಟುಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ವ ಸಿಕ್ಯುರಿಟಿ ಕಂಪನಿಯ ಶೇರುಗಳ ನಫೆ ವಸೂಲ ಮಾಡಿ ಅವರ ಖಾತೆಗೆ ಜಮೆ ಹಿಡಿಯುವದರಲ್ಲಿಯೂ ಅಥವಾ ಕಳಿಸಿಕೊಡುವದರಲ್ಲಿಯೂ ಮತ್ತು ಯೋಗ್ಯ ಕಮಿಶನ್ ತಕ್ಕೊಂಡು ಗಿರಾಕಿಗಳಿಗೆ ಅವುಗಳ ಖರೀದಿ ವ ವಿಕ್ರಿ ಮಾಡುವದರಲ್ಲಿಯೂ ಒದುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವದರಲ್ಲಿಯೂ ಮತ್ತು ಚಕ್ಕು ಹುಂಡಿಗಳನ್ನು ಮಾರುವದರಲ್ಲಿಯೂ ಒದುವದು.

ಬ್ಯಾಂಕಿಗೆ ಮೇಲ್ಮಾಣಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲ ತರದ ಅಧಿಕಾರವಿರುವದು.

ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಒಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್. ರಿಕಾರ್ಟ.
ಏಜಂಟರು.

ದಿ ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ.

ನಂ. ೬- ಮಂಗಳವಾರಪೇಟೆ, ಆಚವಳಿ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಜಾಸ್ತಿ ಮತ್ತು ಬಹಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಂಸ್ಥೆ.

ಜಿಂದಗಿಯು ಎಂಟು ಲಕ್ಷದ ಮೇಲ್ಪಟ್ಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಶಾಹೀಯು ಮತ್ತು ಜೇಬು ರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಾಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೇಳಿಗಾಗಿ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ-೨೨-೯-೨೯ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಪ್ರಿಯ
ನೀ ವಸುಮತಿಯು ನಲಿಸಿರೆ ಸುಹೃತಚರಿತೆಗಳಿಂ ||
ದೀ "ವಿಜಯಂ" ಶ್ರೀಕರಣ ।
ನಾ ವಿಹಿತಂಗಳ ವಿವರಿಸಿನಲಿವುದು ಸಾಜಂ ||೧||

ಮೀರತದ ಆರೋಪಿಗಳ ಅನ್ನ ವರ್ಜ್ಯದ ನಿವಾರಣ

ಮೀರತದ ಆರೋಪಿಗಳು ರಾಜಕೀಯ ಕೈದಿಗಳ ಊಟ ಉಡಿಗೆ ಓದು ಬರಹ ಮತ್ತು ತುರಂಗದಲ್ಲಿಯ ಬೇರೆ ಸುಖ ಸೋಯಿಗಳ ದೆಸೆಯಿಂದ ಮೋದ ತಿಂಗಳ ೨೩ನೆಯ ತಾರೀಖಿನ ದಿವಸ ಹಿಂದುಸ್ಥಾನ ಸರಕಾರಕ್ಕೆ ಒಂದು ಪತ್ರ ಬರೆದಿದ್ದರು. ಆದರೆ ಆ ಸರಕಾರದವರು ಈ ಬಗ್ಗೆ ಏನೂ ವ್ಯವಸ್ಥೆ ಮಾಡಲಿಲ್ಲ. ಅಸೆಂಬ್ಲಿಯಲ್ಲಿ ಈ ವಿಷಯವು ತಮ್ಮದಲ್ಲ, ಇಲ್ಲಾಖೆಯ ಸರಕಾರದ್ದೆಂದು ಮೆ|| ಕ್ರೆರಾರರು ಘಾರಿಸಿಕೊಂಡ ಉತ್ತರ ಕೊಟ್ಟರು. ಪಂ. ಮಾಲವಿಯವರು ಈ ಬಗ್ಗೆ ವಿಶೇಷ ವಿಚಾರವಾಗಬೇಕೆಂದು ಠರಾವು ತರತಕ್ಕವರಿದ್ದರು. ಆದರೆ ಮೆ|| ಕ್ರೆರಾರ ಸಾಹೇಬರು ಏನೇನೋ ಕಿವಿಮಾತು ಹೇಳಿದ್ದರಿಂದ ಪಂಡಿತರು ಮುಂದಿಟ್ಟ ಹೆಜ್ಜೆಯನ್ನು ಹಿಂದೆ ತಕ್ಕೊಂಡಿದ್ದಾರೆ. ಆಳರಸರು ಸ್ವತಂತ್ರರು ಸ್ವರಾಜ್ಯ ಪಕ್ಷೀಯರು ಬೇರೆ ಒಬ್ಬಿಬ್ಬ ಅಸೆಂಬ್ಲಿಯ ಸದಸ್ಯರು ಸೇರಿ ಈ ಬಗ್ಗೆ ವಿಚಾರ ಮಾಡತಕ್ಕವರಿದ್ದಾರೆ. ಅದರ ಪರಿಣಾಮವು ಒಂದೆರಡು ದಿವಸಗಳಲ್ಲಿ ತಿಳಿಯುವದು.

ಕಳೆದ ವಾರದಲ್ಲಿ ಮೀರತದ ಆರೋಪಿಗಳು ಸರಕಾರಕ್ಕೆ ಈ ವಿಷಯವಾಗಿ ಸವಾಲು ಹಾಕಿದ ಬಿಂತ [illegible] ಕೆಲವು ಬೇಡಿಕೆ [illegible] ಗಳನ್ನು ಕೇಳಿದ್ದಾರೆ. ತಾವು ಹೇಳಿದ ಕರಾರುಗಳನ್ನು ಸರಕಾರವು ಒಂದು ವಾರದಲ್ಲಿ ಪೂರ್ಣ ಮಾಡಬೇಕು. ಇಲ್ಲವಾದರೆ ಅನ್ನ ನೀರು ಬಿಟ್ಟು ಉಪವಾಸದ ವ್ರತವನ್ನು ಅಂಗೀಕರಿಸುವೆವೆಂದಿದ್ದರೆ ಇವರು ಒಬ್ಬರಲ್ಲಿ ೨೫ ಜನರು ಯುರೋಪಿಯನ್ನರಾದ ಹಚಿನಸನ್, ಸ್ಪ್ರಟ ಬ್ರಾಡ್ಲೆ ಸ್ಪ್ರಾಟ್ ರು ಸಂಡತ್ವವನ್ನಂಗೀಕಾರ ಮಾಡಿದ್ದಾರೆ. [illegible] ಳಿದ ಕರಾರುಗಳೇನೆಂದರೆ-

೧ ಕೊಲೆ ಮತ್ತು ದರೋಡೆ ಆರೋಪಗಳ ಹೊರ್ತು ಉಳಿದ ರಾಜಕೀಯ ಅಪರಾಧಗಳ ಆರೋಪಿಗಳಿಗೆ ಮುಕ್ಕಾಲು ರೂಪಾಯಿ ಊಟ ಸಿಗಬೇಕು.

೨ ಕೈದಿಗಳಿಗೆ ಅರಿವೆಯ ಸೋಯಿಯ ಒಳ್ಳೇ ವ್ಯವಸ್ಥೆಯಿರಬೇಕು. ಸರಕಾರವೇ ಎಲ್ಲ ವೆಚ್ಚ ಹೊರಬೇಕು.

೩ ಓದುವ ಎಲ್ಲ ಪಕ್ಷಗಳ ವರ್ತಮಾನ ಪತ್ರಗಳನ್ನು ಭೇದವಿಲ್ಲದೆ ಕೊಡತಕ್ಕದ್ದು. ಬರೆವಣಿಗೆ ಮೊದಲಾದವುಗಳನ್ನು ಒದಗಿಸಿ ಕೊಡಬೇಕು.

೪ ತಮಗೆ ಮಾಡಲು ಬಾರದಂಥ ಕೆಲಸಗಳನ್ನು ಮಾಡಲು ಹಚ್ಚಬಾರದು. ಶಿಕ್ಷೆಯಾದ ನಂತರ ಆಯಾ ಪ್ರಾಂತದವರನ್ನು ಆಯಾ ಪ್ರಾಂತಕ್ಕೆ ಕಳಿಸಬೇಕು.

ತುರಂಗದಲ್ಲಿ ಎಲ್ಲ ರಾಜಕೀಯ ಕೈದಿಗಳನ್ನು ಒಂದೇ ಕಡೆ ಇಟ್ಟಿರಬೇಕು.

"ಕೋರ್ಟು ಬಂದು ಮಾಡಿರಿ"

—(೦)—

ಜತಿನದಾಸನ ಮರಣದ ಸುದ್ದಿಯು ಮೀರತದ ಆರೋಪಿಗಳಿಗೆ ತಿಳಿದ ಕೂಡಲೆ, ಅವರು ಉದ್ವಿಗ್ನರಾಗಿ ಆವನ ಮರಣದ ದುಃಖಪ್ರದರ್ಶನಕ್ಕಾಗಿ ಕೋರ್ಟು ಬಂದು ಮಾಡಿರೆಂದರು. ಶೌಕತ ಉಸಮಾನಿಯು ತನ್ನ ಸಂಗಾತಿಗಳನ್ನುದ್ದೇಶಿಸಿ "ಗೆಳೆಯರೇ ಜತಿನನು ಇಂದು ಸ್ವಾತಂತ್ರ್ಯ ಯುದ್ಧದಲ್ಲಿ ವೀರಸ್ವರ್ಗಕ್ಕೆ ತೆರಳಿದನು. ಆವರ ಮರಣದ ಬಗ್ಗೆ ನಾವು ಕೆಂಪು ಎಂದಿನ ಹಾಡನ್ನು ಹಾಡಿ ದುಃಖ ಪ್ರದರ್ಶನವನ್ನು ಮಾಡೋಣ ಬನ್ನಿ" ಎಂದ ಕೂಡಲೆ, ಆರೋಪಿಗಳೆಲ್ಲರೂ ಬಹಳ ಭಕ್ತಿಯಿಂದ ಹಾಡನ್ನು ಅಂದರು. ಆಗ ಕೆಲವರು ಕಣ್ಣೀರು ಸುರಿಸುತ್ತಲೂ, ಕೆಲವರು ಬಿಕ್ಕಿ ಬಿಕ್ಕಿಯಾಗಿ ಅಳುತ್ತಲೂ ತಮಗಾದ ಸಂತಾಪವನ್ನು ವ್ಯಕ್ತಪಡಿಸಿದರು. ನಂತರ ನ್ಯಾಯಾಧೀಶರು ಕೋರ್ಟನ್ನು ಬಂದು ಮಾಡುವದಿಲ್ಲವೆಂದ ಕೂಡಲೆ ಎಲ್ಲ ಆರೋಪಿಗಳು ತಮ್ಮ ಪರವಾಗಿದ್ದ ವಕೀಲರ ವಕಾಲತನ್ನು ಆ ದಿನದ ಮಟ್ಟಿಗೆ ರದ್ದುಪಡಿಸಿ, ತಮ್ಮ ವಕೀಲರಿಗೆ ಹೊರಟು ಹೋಗಿರೆಂದರು. ಹೀಗಾಗಿ ನ್ಯಾಯಾಧೀಶರು ಪೇಚಿನಲ್ಲಿ ಸಿಕ್ಕು ಕೋರ್ಟು ಬಂದು ಮಾಡಿದರು. ಆರೋಪಿಗಳು ಕೋರ್ಟಿನ ಹೊರಗೆ ಬಂದು ಪ್ರಚಂಡ ಧ್ವನಿಯಿಂದ ರಾಜ್ಯಕ್ರಾಂತಿಯು ಜಯಜಯಕಾರ ಮಾಡಿ ಕೋಲಾಹಲವೆಬ್ಬಿಸಿದರು!

ನವಿಲಿನ ಹಿಂದೆ ನಾಯಿಬಗಳಾಗಿ.

—(೦)—

ಮೀರತದ ಆರೋಪಿಗಳಲ್ಲಿ ಧರ್ಮವೀರಸಿಂಗನೆಂಬವನು ಕೆಂಪು ನಿಶಾನೆಯ ಜಯಜಯಕಾರದ ಹಾಡನ್ನು ಹಾಡಲಾರದವನಾಗಿದ್ದಾನೆ. ಆದ್ದರಿಂದ ಉಳಿದ ಆರೋಪಿಗಳು ಇವನನ್ನು ಆಗಿ [illegible] ಹಾಳೆಯನಂತೆ ಬಹಿಷ್ಕೃತನನ್ನಾಗಿ ಮಾಡಿದ್ದಾರೆ. ಕೋರ್ಟಿನಲ್ಲಿ ಇವನು ರಾಜ್ಯಕ್ರಾಂತಿಗೆ ಜಯ ಎಂದು ಕೂಗದಿರಲು ಪಕ್ಕದಲ್ಲಿದ್ದ ಆರೋಪಿಗಳು ಇವನ ಕಣಕವನ್ನು ಮೆತ್ತಗೆ ಮಾಡಿದರು. ದಾಂಗೆಸು "ಶೇಮ ಶೇಮ"ವೆಂದನು. ನಿನಗೆ ನಮ್ಮ ಬೊಲ್ಸವಿಕ ಪೋಷಾಕ ಮಾಡಲು ನಾಚಿಕೆಯಾಗುತ್ತಿದ್ದರೆ ಸರಕಾರದ ಕೂಡ ಸಹಕಾರ ಮಾಡು ಎಂದು ಮೂಗಿನೊಳಗೆ ಮೆಣಸಿನ [illegible] ಹೊಗೆ ಕೊಟ್ಟಂತೆ ಮಾತಾಡಿದನು. ಆಗ ಕೋರ್ಟಿನ ತುಂಬ ಗೊಂದಲವೆದ್ದಿತು. ಮ್ಯಾಜಿಸ್ಟ್ರೇಟರು, ಬೇರೆ ಜನರು ಈ ಜಗಳವನ್ನು ಶಾಂತಪಡಿಸಿದರು. ಧರ್ಮವೀರಸಿಂಗನು ಕ್ಲಲ [illegible] ರಸಿದ್ದು ಈತನು ನವಿಲಿನ ಹಿಂದಿನಲ್ಲಿ [illegible] ಗಾಗಿಯಂತೆ ನೋಡಿದ್ದ ಶೋಚನೀಯವೇ ಸರಿ.

ಕಾಬೂಲದ ಯುದ್ಧ.

—(೦)—

ಬಚ್ಚಾ ಅಮೀರನಾಗಿ ಅಮಾನುಲ್ಲಾನು ದೇಶತ್ಯಾಗ ಮಾಡುವತನಕ ಬಚಾ ಸಾಕುವಿನ ರಾಜ್ಯವು ಕಾಬೂಲದಿಂದ ಹನ್ನೆರಡು ಮೈಲು ದಾಟಿದ್ದಿಲ್ಲ. ಈಗ ಇವನ ರಾಜ್ಯವಿಸ್ತಾರವು ಹಿರಾಕದವರೆಗೆ ಹೋಗಿದೆ. ಕಾಬೂಲದಲ್ಲಿ ಮದ್ದುಗುಂಡು ಕೋಷ್ಠ ತುಬಾಕಿ ಇವನ ಕೈಸೇರಿದ್ದರಿಂದ ನಾದಿರಖಾನನಿಗೆ ಈತನನ್ನು ಸೋಲಿಸುವದು ಕಷ್ಟವಾಗಿದೆ. ನಾದಿರಖಾನನು ಸಂಪೂರ್ಣವಾಗಿ ಬಚ್ಚನನ್ನು ಸೋಲಿಸಿ ಬಿಡಬೇಕೆಂದು ದಾಳಿಯಿಟ್ಟಿದ್ದಾನೆ. ರಾಮುಸ್ಥಲ ಒಂದಾಕು ಮಶಿನಗನ್ ತೋಪುಗಳು ಹೋರಟಿವೆ. ಇವಲ್ಲದೆ ಹಳೇ ಕಾಲದ ದೊಡ್ಡ ದೊಡ್ಡ ತೋಫುಗಳನ್ನು ಆನೆಗಳಿಂದ ಎಳೆಯಿಸುತ್ತ ನಾದಿರಖಾನನ ಕೂಡ ಯುದ್ಧಾರ್ಥಿಯಾಗಿ ಹೊರಟಿರುತ್ತಾನೆ.

ಮೀರತದ ಕೈದಿಯಾದ ಶ್ರೀ|| ಆಳ್ವೆಯವರ ಹೆಂಡತಿಗೆ ಜಡ್ಡು ಬಹಳವಾಗಿದೆ. ಈಗಿಂಟು ದಿನಗಳ ಹಿಂದೆ ಇವರು ತಮ್ಮ ಹೆಂಡತಿಗೆ ಔಷಧ ಕೊಡಿಸುವ ವ್ಯವಸ್ಥೆ ಮಾಡಲು ಮುಂಬಯಿಗೆ ಹೋಗಲು ಅಪ್ಪಣೆ ಕೇಳಿಕೊಂಡಿದ್ದರು. ಸರಕಾರದವರು ಬಹುಷ್ಕಾಗಿ ಪತ್ರವ್ಯವಹಾರ ಮಾಡಿ ಕಡೆಗೆ ಅಪ್ಪಣೆ ಕೊಟ್ಟರು.

"ವೀರ ಅಭಿಮನ್ಯು"

ಭಾನುಸರಾವ ಮಹಾಸ್ವರ ನಾಟಕ ಮಂಡಳಿಯವರು ಪ್ರಯೋಗಿಸುತ್ತಿರುವ ವೀರ ಅಭಿಮನ್ಯು ನಾಟಕವನ್ನು ನೋಡುವ ಸುಯೋಗವು ನನಗೆ ಮೊನ್ನೆ ಸಿಕ್ಕಿತ್ತು. ಇದೇ ನಾಟಕವನ್ನು ಹುಬ್ಬಳಿಯಲ್ಲಿ ೧೫-೧೬ ಸಲ ಆಡಿ ತೆರಪಿಲ್ಲದಷ್ಟು ರೊಕ್ಕವನ್ನು ಗಳಿಸಿಕೊಂಡಿರುವರೆಂಬ ವದಂತಿಯೂ ಪಸರಿಸಿತ್ತು. ಆದುದರಿಂದ ನಾಟಕವು ಒಳ್ಳೆಯದಿರಬಹುದೆಂದು ಯೋಚಿಸಿ ನಾನೇನೂ ನೋಡಲಿಕ್ಕೆ ಹೋಗಿದ್ದೆ. ಹೊಳ್ಳ ಕಂಡು ಹುಳ್ಳಗ್ಯಾ ರ್ಯಾ ಎಂಬಂತೆ ನನ್ನಂತೆಯೆ ಕೆಲವರು ಆ ದಿನ ನಾಟಕವನ್ನು ನೋಡಲಿಕ್ಕೆ ಬಂದಿದ್ದರು. ನಾಟಕ ಗೃಹವು ಕಿಕ್ಕಿರಿದು ತುಂಬಿ ಹೋಗಿತ್ತು. ಆದರೆ ನನಗೆ ಮಾತ್ರ ಆ ದಿವಸ, ಯಾವ ನಾಟಕಕ್ಕೆ ರೊಕ್ಕವು ಹೆಚ್ಚಾಗಿ ದೊರೆಯುವದೋ ಆ ನಾಟಕವು ಒಳ್ಳೆಯದಾಗಿರುವದು ಎಂಬುದಾಗಿ ತಿಳಿದುಕೊಳ್ಳುವದು ತಪ್ಪೆಂದು ಕಂಡು ಬಂತು. ಈಗಿನ ನಾಟಕಗಳು ಅನೀತಿಪಥದ ಒಲಿಗೆ ಬಿದ್ದ ಅಜ್ಞಾನಸಮಾಜವನ್ನು ಸುಧಾರಿಸಲು ಶಕ್ತವಾಗಿಲ್ಲವೆಂದು ಹೊಳೆಯಿತು. ಕರ್ನಾಟಕ ರಂಗಭೂಮಿಯು ಶೋಚನೀಯ ಸ್ಥಿತಿಗೆ ಬಂದಿರುವದು ವಿದಿತವಾಯಿತು. ಒಂದು ಕಡೆಗೆ ಉದಾತ್ತ ಪುರುಷರ ಜೀವನ ಚರಿತ್ರೆಗಳನ್ನು ಚಿತ್ರಿಸಿ ಇನ್ನೊಂದು ಕಡೆಗೆ ನಾಟಕಕ್ಕೆ ಯಾವ ತರದಿಂದಲೂ ಸಹಾಯವನ್ನು ಮಾಡದ ಮತ್ತು ಶೃಂಗಾರ ಚೇಷ್ಟೆಗಳಲ್ಲಿಯೇ ಮಗ್ನರಾಗಿರುವ ನರ-ನಾರಿಯರ ಮೇಳನವನ್ನು ಅಸಂಬದ್ಧವಾಗಿ ಹೊಗೆ ಜೋಡಿಸುತ್ತಿರುವರೆಂಬುವದೂ ಅನುಭವಕ್ಕೆ ಬಂದಿತು. ದ್ರೋಣಾಚಾರ್ಯ, ಅರ್ಜುನ, ಜಯದ್ರಥ, ಅಭಿಮನ್ಯು ಮೊದಲಾದ ಶೂರ ಪುರುಷರ ಜೀವನ ಚರಿತ್ರೆಗಳನ್ನು ನಾಟಕ ರೂಪದಿಂದ ತೋರಿಸಿದ ಅರಣ್ಯದಲ್ಲಿಯೇ ರಣರಂಗಕ್ಕೆ ಹೆದರುವಂತಹ ಹೇಡಿಯಾದ ಮೇಘನಾದನ ಪಾತ್ರವನ್ನು ತೋರಿಸುವದರಲ್ಲಿ ಯಾವ ಮಹತ್ವವಿರುವದೋ ತಿಳಿಯದು. ಇದರಂತೆಯೇ ಸಾಧ್ವಿ ಶಿರೋಮಣಿಯಾದ ಉತ್ತರೆಯ ದಾಸಿಯಾದ ಸೌದಾಮಿನಿಯನ್ನು ಅತ್ಯಂತ ವಿಲಾಸಿನಿಯನ್ನಾಗಿ ತೋರಿಸಿದ್ದು ನಾಟಕಕ್ಕೆ ಯಾವ ತರದ ಶೋಭೆಯನ್ನು ತರುವದೋ ತಿಳಿಯದು. ಕೀಳುತರದ ಹಾವಭಾವಗಳಿಂದಲೂ, ಉಚ್ಚರಿಸಲಾರದ ಅವಾಚ್ಯ ಶಬ್ದಗಳಿಂದಲೂ ಅಜ್ಞಾನಸಮಾಜವನ್ನು ಮತ್ತಷ್ಟು ಅಧೋಗತಿಗೆ ಒಯ್ಯುತ್ತಿರುವ ಈ ಮೇಘನಾದ ಸೌದಾಮಿನಿಯರ ಪಾತ್ರಗಳನ್ನು ಈ ರೀತಿಯಾಗಿ ತೋರಿಸದಿದ್ದರೆ ನಾಟಕಕ್ಕೆ ಕಳೆಯೇರಬಹುದಾಗಿತ್ತು. ಅವರ ಮುಖದಿಂದ ಹೊರಡುವ ಅವಾಚ್ಯ ಶಬ್ದಗಳಿಗಂತೂ ಮಿತಿಯೇ ಇಲ್ಲ. ಮೇಘನಾದ ಸೌದಾಮಿನಿಯರ ಶೃಂಗಾರ ವಿಲಾಸಚೇಷ್ಟೆಗಳನ್ನು ನೋಡಿದರೆ ಇದೇನು ವೀರ ಅಭಿಮನ್ಯು ನಾಟಕವೋ ಇಲ್ಲವೆ ನೀತಿಯ ಮರ್ಯಾದೆಯನ್ನು ಬಿಟ್ಟ ತಮಾಷೆಗಾರರ ಆಟವೋ ಎಂಬ ಸಂಶಯವು ಬರುತ್ತಿತ್ತು. "ನಿಜವಾಗಿಯೂ ನೀನು ಪತಿವ್ರತೆಯಾಗಿರುವಿಯೆಂದು ಇಂದು ನನಗೆ ವ್ಯಕ್ತವಾಯಿತು" ಎಂದು ತನ್ನ ಹೆಂಡತಿಯಾದ ಸೌದಾಮಿನಿಯನ್ನು ಕುರಿತು ಮೇಘನಾದನು ಹೇಳುವದೂ ತನ್ನ ಸತಿಯು ಸತಿಯೋಗ್ಯಳೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಮೇಘನಾದನು ತಾನು ಸತ್ತಂತೆ ನಟಿಸಿ ತೋರಿಸುವದೂ ಹಿಂದೂ ಧರ್ಮದ ಅನುಯಾಯಿಗಳಿಗೆ ಎಂದೂ ಶೋಭಿಸಲಾರದು. ಸೌದಾಮಿನಿಯನ್ನು ಕುರಿತು ಮೇಘನಾದನು ಬಹಿರಂಗವಾಗಿ [illegible] ನನ್ನ ಮನೆಗೆ ನನ್ನ ಪರಾಕ್ರಮವನ್ನು [illegible]. ರಾತ್ರಿಯಲ್ಲಿ [illegible] ಯುದ್ಧ [illegible] ಈ ಆಕ್ಷೇಪದ ಮಾತುಗಳನ್ನು ಕೇಳಲು ಯಾರಿಗಾದರೂ ಮನಸ್ಸು ಬಗಲಾರದು. ಇಂಥ ಉದಾಹರಣೆಗಳನ್ನು ಎಷ್ಟೋ ತೋರಿಸಬಹುದು. ಅನೀತಿ ಪದದಲ್ಲಿ ಕಾಲಿಟ್ಟವರನ್ನು ಒಳ್ಳೇ ದಾರಿಗೆ ತರುವದೇ ನಾಟಕಕಾರರ ಮುಖ್ಯ ಕರ್ತವ್ಯವು. ಇಂಥ ಅವಾಚ್ಯ ಶಬ್ದಗಳಿಂದಲೂ, ಕೀಳುತರದ ಹಾವಭಾವಗಳಿಂದಲೂ, ಶೃಂಗಾರ ವಿಲಾಸ ಚೇಷ್ಟೆಗಳಿಂದಲೂ ಅವರಿಗೆ ಮತ್ತಷ್ಟು ಉತ್ತೇಜನವನ್ನು ಕೊಡುವದು ಸರ್ವಥಾ ಯೋಗ್ಯವಲ್ಲ. ಗ್ರಾಮ್ಯಜನರಿಗೆ ರುಚಿಸುವಂತಹ ಅಶ್ಲೀಲ ಬಗೆಯ ಅಭಿರುಚಿಕರ ನಾಟಕಗಳನ್ನು ರಂಗಭೂಮಿಯ ಮೇಲೆ ತರುವದರಿಂದ ಹಣವು ಬಹಳ ದೊರೆಯುವದೆಂದು ತಿಳಿದು ಅಂತಹ ನಾಟಕಗಳನ್ನು ಪ್ರಯೋಗಿಸುವದು ನಾಟ್ಯಕಲೆಯ ಪುನರುಜ್ಜೀವನಕ್ಕಾಗಿ ಹೊರಟ ನಾಟಕ ಮಂಡಳಿಗಳ ಕರ್ತವ್ಯವಲ್ಲ. ರೊಕ್ಕವನ್ನು ಗಳಿಸಿಕೊಳ್ಳುವ ಉದ್ದೇಶದಿಂದಲೇ ಹೊರಟವರ ಕರ್ತವ್ಯವಿದು ಸುಶಿಕ್ಷಿತರಾಗುವರು ಅಶಿಕ್ಷಿತ ಜನರಿಗೆ ಈ ರೀತಿಯಿಂದ ಶಿಕ್ಷಣ ಕೊಡಹತ್ತಿದರೆ ನಾಟಕ ಮಂಡಳಿಗಳಿಗೆ ಜನವಿದ್ಯಾಲಯವೆಂಬ ಹೆಸರು ಕೊಡುವುದು ನಿರರ್ಥಕವೇ ಸರಿ.

ಸಿಕ್ಕ ಸಿಕ್ಕವರ ಮೇಲೆ ಹರಿಹಾಯ್ದು ಜಾಣ್ಮೆಯನ್ನು ತೋರಿಸಿಕೊಳ್ಳುವ ಚಟವು ನಾಟಕಗಳಲ್ಲಿ ಪಾತ್ರಗಳನ್ನು ಧರಿಸುವ ಕೆಲವರಲ್ಲಿ ನೆಲೆಗೊಂಡಿದೆ. ಬೇಕು ಬೇಕಾದವರ ಮೇಲೆ ಟೀಕೆ ಮಾಡಲು ತಮಗೆ ಮುಕ್ತದ್ವಾರವಿದೆಯೆಂದು ಈ ಮಹನೀಯರು ತಿಳಿದಿರುವರೊ ಏನೋ? ಅದರಲ್ಲಿಯೂ ವಿಶೇಷವಾಗಿ ರಾಜಕೀಯ ಪಕ್ಷಗಳ ಮೇಲೆ ಟೀಕಾಸ್ತ್ರವನ್ನೆತ್ತಿದರೆ, ನಾಟಕಗಳಲ್ಲಿ ರಾಜಕೀಯ ವಿಷಯವನ್ನು ಸೇರಿಸಿಕೊಂಡಂತಾಯಿತೆಂದು ಇವರು ಭಾವಿಸಿರುವರೋ ಏನೋ? ಸೌದಾಮಿನಿಯು ಪುರುಷವೇಷದಿಂದ ಬಂದಾಗ ಹಾದಿಯಲ್ಲಿ ತನ್ನ ಗಂಡನಾದ ಮೇಘನಾದನನ್ನು ಕಂಡು "ನೀ ಯಾವ ಪಕ್ಷದವನು" ಎಂದು ಅವನನ್ನು ಕೇಳುತ್ತಾಳೆ, ಮೇಘನಾದನು ಮೊದಲು "ನಾನು ಪಾಂಡವ ಪಕ್ಷದವನು" ಎಂದು ಹೇಳಿಕೊಳ್ಳುತ್ತಾನೆ. ಪಾಂಡವ ಪಕ್ಷದವನಾದರೆ ನನ್ನೊಡನೆ ಯುದ್ಧಕ್ಕೆ ಸಿದ್ಧನಾಗು ಎಂದು ಸೌದಾಮಿನಿಯು ಅಹ್ವಾನಿಸುತ್ತಾಳೆ. ಇದಕ್ಕೆ ಹೆದರಿ "ಹಾಗಾದರೆ ನಾನು ಕೌರವ ಪಕ್ಷದವನು" ಎಂದು ಮೇಘನಾದನು ಹೇಳುತ್ತಾನೆ. ಮತ್ತೆ ಮೊದಲಿನಂತೆಯೆ ಅವನ ಹೆಂಡತಿಯು ಬೆದರಿಸುತ್ತಾಳೆ. ಇನ್ನು ಪಾರಾಗುವ ಹಾದಿಯಿಲ್ಲವೆಂದು ತಿಳಿದುಕೊಂಡು ಮೇಘನಾದನು "ನಾನು ಮೂರನೇ ಪಕ್ಷದವನು. ಅಂದರೆ ಯಥೇಷ್ಟವಾಗಿ ಸುಖದಿಂದ ಉಂಡು ತಿಂದು, ರಾಟಿಯನ್ನು ತಿರುಗಿಸುತ್ತಾ ಗಾದಿಯ ಮೇಲೆ ಒರಗಿಕೊಳ್ಳುವ ಖಾದ್ಯಪಕ್ಷದವರಾದ ಖಾದಿಯ ಪಕ್ಷದವನು" ಎಂದು ಹೇಳಿಕೊಳ್ಳುತ್ತಾನೆ. ಅರೆಹೊಟ್ಟೆಯುಂಡು ಬಡತನದಿಂದ ಜೀವಿಸುತ್ತಿರುವ ಬಡವರ ದುಃಖನಿವಾರಣೆಗಾಗಿ ಹಗಲಿರುಳೆನ್ನದೆ ಕಷ್ಟನಷ್ಟಗಳನ್ನು ಸಹಿಸುತ್ತಿರುವ ಖಾದಿಯ ಪಕ್ಷದವರ ಅಂದರೆ ಕಾಂಗ್ರೆಸ್ಸಿನ ಪಕ್ಷದವರ ಮೇಲೆ ನಿರರ್ಥಕವಾಗಿ ಬೊಗಳುವದು ಅವರಿಗೆ ಸಲ್ಲದೆ ನಿಜವಾಗಿಯೂ ನಾಟಕ ನೋಡಲು ಬರುವವರಿಗೆಯೇ ಸಲ್ಲುವದೆಂದು ಹೇಳಲು ಯಾವ ತರದ ಭೀತಿಯೂ ಕಾಣದು. ನಾಟಕಕಾರರೂ ನಾಟಕ ಮಂಡಳಿಯವರೂ ಇತ್ತ ಕಡೆಗೆ ಲಕ್ಷ್ಯಕೊಟ್ಟು ತಮ್ಮ ತಪ್ಪನ್ನು ತಿದ್ದಿಕೊಳ್ಳುವರೋ.

ತಮ್ಮ

ಶೀಲವಂತ.

ಶ್ರೀ ವೆಂಕಣ್ಣ ಹೊಸಮನಿಯವರ, ಕಲೆಕ್ಟರ ವಿಜಾಪೂರ ಇವರಿಗೆ ಧಾರವಾಡಕ್ಕೆ ವರ್ಗವಾದ್ದು, ರುದ್ರಯ್ಯಾ ಶಿವಲಿಂಗಯ್ಯಾ ಹಿರೇಮಠರು ಇವರ ಸ್ಥಳದಲ್ಲಿ ನಿಯಮಿಸಲ್ಪಟ್ಟಿದ್ದಾರೆ.

ಹುಬ್ಬಳ್ಳಿಯ ಸಾರ್ವಜನಿಕ ವಾಚನಾಲಯ ವ್ಯಾಖ್ಯಾನ ವಾಚನ ಮಂದಿರಗಳು ಲೋಕದ ಕಸನ ಬಹಿಷ್ಕರಿಸಿವೆ. ಶ್ರೀ [illegible]ರವರ ಮೇಲೆ ಬರೆದ ಟೀಕೆಯೇ ಇದಕ್ಕೆ ಕಾರಣವಂತೆ.

ನೋಟೀಸು

ಬಸವಪ್ಪಾ ಕೋಂ ಫಕ್ಕೀರಪ್ಪಾ ಕಂಡೂರ ಸಾ|| ಕಂಚುಗಾರಗಟ್ಟಿ, ಹಳ್ಳಿ ತಾಲ್ಲೂಕ ಕಚೇರಿ ಜಿಲ್ಲಾ ಧಾರವಾಡ ಇವರಿಗೆ—

ಕೆಳಗೆ ಸಹಿ ಮಾಡಿದವರ ಕಡಿಂದಾ ಈ ನೋಟೀಸಿನ ಮೂಲಕ ತಿಳಿಸುವದೇನಂದ್ರೆ, ನೀನ ನಿನ್ನ ಮಗಳಾದ ಶಾಂತವ್ವಾ ಅಂಬುವ ಹೆಣ್ಣುಮಗಳನ್ನು ಕೊಟ್ಟು ಲಗ್ನಾ ಮಾಡಿಯಿದ್ದು ಈ ವರೆಗೂ ಚಲೋ ರೀತಿಯಿಂದಾ ಬಾಳ್ವೆ ಮಾಡಿಸಿದಿ ಆದರೆ ಎಲಿಕಡಿಗೆ ನನಗೆ ಆಗದವರ ಮಾತು ಕೇಳಿ ನನ್ನಮೇಲೆ ದ್ವೇಷಾ ಮಾಡಿದಾ ಬಂದು ನೊನ್ನೆ ಹಬ್ಬಕ್ಕಂತ ಕರಿಯಾಕ್ಕೆ ಬಂದಿ ಆಗ ನಾನು ಈಗ ಕಳಿಸುವದಿಲ್ಲಾ ಎನಿಸಿ ಬಿಟ್ಟ ಕಳಿಸತಕ್ಕದ್ದು ಅಂತಾ ಅಂದ ಅದಕ್ಕ ನೀನು ಸಿಟ್ಟಾಗಿ ನಾನು ಮನಿಯಲ್ಲಿ ಇಲ್ಲದ ವೇಳೆಯಲ್ಲಿ ನನ್ನ ಹೇಣತಿ ಮೇಲೆ ಇದ್ದ ದಾಗೀನೆಗಳನ್ನು ಸಹಿತವಾಗಿ ಕರಕೊಂಡು ಹೋಗಿರುತ್ತಿ ಅವ್ವಗಳ ವಿವರಾ ಕೆಳಗೆ ಬರೆದ ಪ್ರಕಾರ—

೧ ಸರಿಗಿ ಬಂಗಾರದ್ದು ೭|| ತೊಲಿ ರೂ ೧೨೫
೨ ಬಳಿ ಜತಿ ಒಂದು ೬ ತೊಲಿ ರೂ ೧೨೦
೩ ಬೋರಿ ಸಿಂಹನ ಮುಖದ್ದು ೨|| ತೊಲಿ ರೂ ೫೦
೪ ಮುಖರ್ಶಿ ಒಂದು ೧೪ ರೂ
೫ ಬುಗಡಿ ಜತಿ ಒಂದು ೧೫ ರೂ
೬ ಗೆಜ್ಜಿ ಪಟ್ಟಿ ಒಂದು ೨೧ ರೂ
೭ ಕಾಲೊಳಗಿನ ಬೆಳ್ಳಿ ತೋಡೆ ಜತಿ ೫೨ ರೂ

ಈ ಪ್ರಕಾರದ ದಾಗೀನಗಳು ನನ್ನ ಹೇಣತಿ ಮೈಮೇಲೆ ಇದ್ದವುಗಳನ್ನು ತಕ್ಕೊಂಡು ಕರಕೊಂಡು ಹೋಗಿದಿ ಪುನಃ ನಾನು ನಾಲ್ಕು ಮಂದಿ ಬುದ್ಧಿವಂತರನ್ನು ಕರಕೊಂಡು ನೀನು ಮೊದಲು ಇದ್ದ ಊರು ಇಂದ್ರ ಕಾಣೆಬೆನ್ನೂರ ತಾಲ್ಲೂಕ ಕೂಸಭೀವ ಗ್ರಾಮಕ್ಕ ಬಂದು ಕೇಳಲಾಗಿ ಮನಿಯಲ್ಲಿ ಹುಟ್ಟಿದ್ದ ಮೂಲಕಾ ಕರಕೊಂಡು ಕಳಿಸದೆ ಒಂದೆ ಇನ್ನು ೮ ೧೦ ದಿವಸಗಳಲ್ಲಿ ಮೇಲೆ ಬರದ ಎಲ್ಲಾ ದಾಗೀನಗಳನ್ನು ಸಹಿತ ತಗೊಂಡು ಬಂದು ನಿನ್ನ ಹೇಣತಿ ಕಳಿಸುತ್ತೇನೆ ಅಂತಾ ಪ್ರಮಾಣ ಪೂರ್ವಕ ಹೇಳಿದಿ ಆ ಎವರಿಗೂ ಕರಕೊಂಡುಬಂದು ಕಳಿಸಲಿಲ್ಲಾ ಬಾಳ್ವೆಮಾಡತಕ್ಕವಳಿಗೆ ಈ ರೀತಿ ದುರ್ಭೋಧನೆ ಮಾಡಿದ್ದಕ್ಕೆ ಈ ನೋಟೀಸು ಕೊಡುವ ಭಾಗವಾಯಿತ್ತು ಆದ್ದರಿಂದಾ ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಹೆಂಡತಿ ಮತ್ತು ಆಕೆಯ ಮೈಮೇಲೆ ಇದ್ದ ದಾಗೀನೆ ಸಹಿತ ಒಪ್ಪಿಸಿ ನನ್ನ ಕಡಿಯಿಂದಾ ಪಾವತಿ ಪಡಿಯತಕ್ಕದ್ದು ಇಲ್ಲದಿದ್ದರೆ ನಿನ್ನ ಮೇಲೆ ಕಾಯಿದೇ ಪ್ರಕಾರ ಅಧಿಕಾರವುಳ್ಳವರ ಕಡಿಗೆ ಇಲಾಜ ಮಾಡುವದರಲ್ಲಿ ಬರುವದು ಆ ನಂತರಾ ಲುಕ್ಸಾನಕ್ಕೆ ಗುರಿಯಾಗುವಿ ಮತ್ತು ಮೇಲೆ ಬರೆದ ಮುದ್ದತಿನೊಳಗಾಗಿ ಕರಕೊಂಡು ಬಂದು ಕಳಿಸದಿದ್ದರೆ ನಿನ್ನ ಮಗಳಿಗೆ ಇದೇ ಸೋಡಚೀಟಿ ಅಂತಾ ತಿಳಿಯತಕ್ಕದ್ದು ಮತ್ತು ಇದರ ಖರ್ಚು ಸಹಿತ ವಸೂಲ ಮಾಡುವದರಲ್ಲಿ ಬರುವದು ಆಕೆಯ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣಾಗಲಿ ಗಂಡಾಗಲಿ ಮಕ್ಕಳು ಆ ವತ್ತಿನಿಂದಾ ನನ್ನ ಸ್ಥಾವರ ಜಂಗಮ ಆಸ್ತಿಗೆ ಬಾಧ್ಯರಾಗಲಾರರು ತಿಳಿಸುವದು ಈ ನೋಟೀಸಿನ ಖರ್ಚು ನಿನ್ನ ತಲೆಯಮೇಲಿದೆ.

ತಾ|| ೨೨-೯-೧೯೨೮

ಈ ಎಡಗೈ ಹೆಬ್ಬೆಟ್ಟು ಗುರ್ತು ಫಕೀರಪ್ಪಾ ಬಿನ್ ದೇವಪ್ಪ ಒಡಿಗಿಯವರ ಸಾ|| ರಾಣೇಬೆನ್ನೂರ ಈತ ಮಾಡಿದ್ದು ಇರುತ್ತದೆ

ಆವೇಳ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೇ, ಅಥವಾ ಯಾವತ್ತು ಪ್ರಕಾರ ಹಳೆಯ ಮುಟ್ಟಿನ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧದ ಸೇವನದಿಂದ ಬೇನೆಯು ಮೂರೆ ದಿನಗಳಲ್ಲಿ ಗುಣವಾಗುವದು ಇದಲ್ಲದೆ ವನಸ್ಪತಿಗಳ ಪ್ರಕೃತಿ ಪ್ರಕಾರ ತಯಾರಿಸಿದ್ದರಿಂದ ಬೆಲೆ ಎಂದೇ ರೂಪಾಯಿ ಇಟ್ಟಿದೆ ಬಡವರು ಸಹ ಆಧಾರದಿಂದಾ ಗಲಿ, ಪೋಸ್ಟ ಶಿಕ್ಕಿನ ರೂಪದಿಂದಾಗಲಿ ಕಳಿಸತಕ್ಕದ್ದು.

ವಿಳಾಸ — ಡಾ. ಜಾನಕಿರಾಮ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ಬಿಡಿ ನಿತ್ಯ ಔಷಧ ಬೇಕಾದ ವರು ನಮ್ಮ ಪತ್ರವನ್ನು ಬರೆದು ಔಷಧ ಪಡೆಯಬಹುದು.

ಜಾಹೀರ ನೋಟೀಸು

ಕೆಳಗೆ ಸಹಿ ಮಾಡುವವರ ಕಡಿಂದಾ ಯಾವತ್ತು ಜನರಿಗೆ ತಿಳಿಯತಕ್ಕ ಬಗ್ಗೆ ಪ್ರಕಟಿಸುವದೇನಂದರೆ—

ಕಲಘಟಗಿ ತಾಲೂಕ ಬುಳ್ಳನಾಯಕನಹೂಲಿಕಟ್ಟಿ ಗ್ರಾಮದ ಸರಕಾರಿ ರಿ|| ಸ|| ನಂಬರ ೬೩ ಯಕರೆ ೧೬-೧೦ ತರಮ ರೂಪಾಯಿ ೮-೮ ನೇ ಜಮೀನು ಒಂಕಾಪೂರ ವ ಕಲಘಟಗಿ ತಾಲೂಕಗಳಲ್ಲಿಯ ಬೇರೆ ಕೆಲವು ಆಸ್ತಿಗಳೊಂದಿಗೆ ನಮ್ಮ ವ ನಮ್ಮ ಕಕ್ಕ ಗುರುನಾಥ ವೆಂಕಾಜಿ ನಾಡಕರ್ಣಿ ಸಾ|| ಸೊಲಾಂಕೊಪ್ಪ ಈ ವ್ರತಮುಕರ ಸಮ್ಮೋಹಿಕ ಮಾಲಕಿ ವಹಿವಾಟಿದು ಅದೆ ಅದರ ಉತ್ಪನ್ನ ಸಂಯಾಗಿ ನಮ್ಮ ಇಬ್ಬರಿಗೆ ಮುಟ್ಟತಾ ಬರುತ್ತದೆ ಇದರ ಬಗ್ಗೆ ಕಾಗದಪತ್ರಗಳೂ ಇವೆ ಹೀಗಿದ್ದು ಸದರ ಗುರುನಾಥ ವೆಂಕಾಜಿ ಇವರು ಮೇಲ್ಕಂಡ ಜಮೀನಿಗೆ ತಾವೊಬ್ಬರೆ ಮಾಲಕರೆಂದು ಜನರಿಗೆ ಬೋಧಿಸಿ ಅದನ್ನು ಮಾರತಕ್ಕವರಿದ್ದಾರೆಂದು ನನಗೆ ತಿಳಿದು ಬಂದದೆ ಈ ಜಮೀನ ಮಾರಲಿಕ್ಕೆ ಅವರೊಬ್ಬರಿಗೆ ಅಧಿಕಾರ ಇರುವದಿಲ್ಲ ಅವರು ಮಾಡಿಕೊಡುವ ಖರೀದಿ ಪತ್ರವು ಪೂರ್ಣವಾಗಿ ಸ್ವೀಕಾರಾಯೋಗ್ಯವಾಗಿರ ಆಗೇ ಬಗತದೆ ಆದ ಕಾರಣ ಜನರೈತರು ಅವರ ಭೋದನೆಗೆ ಒಳಪಟ್ಟು ಮೋಸ ಹೋಗಬಾರದೆಂಬದಾಗಿ ಈ ನೋಟೀಸು ಕೊಟ್ಟದೆ ತಿಳಿಯುವದು ತಾರೀಖು ೨೦-೯-೧೯೨೮

ಸಹಿ- ದತ್ತಾತ್ರಯ ಹಣಮಂತರಾವ ನಾಡಕರ್ಣಿ ಸಾ|| ಸೊಲಾಂಕೊಪ್ಪ ತಾಲೂಕ ಕಲಘಟಗಿ

ಸುಸಮಯ

—(೦)—

ಎ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅನಂತ ನಾರಾಯಣ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಸೋಮವಾರ ತಾರೀಖು ೨೬ ನೇ ಸಪ್ಟಂಬರ ೧೯೩೮ (ಸಂಚಿಕೆ ೨೧೨

ಸೆಂಟ್ರಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಸೋಮವಾರ ೧೦ ರಿಂದ [illegible] ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧೨ ರ ವರೆಗೆ

ಚಾಲೂ ಖಾತೆಗಳ:— ಧಾರಾಳವಾಗಿ ತೆರೆಯಲ್ಪಡುವವು

ಸೇವಿಂಗ್ಸ ಖಾತೆ:— ಬಡ್ಡೀ ದರದಿಂದ ತೆಗೆದುಕೊಳ್ಳಲ್ಪಡುವದು ಬಡ್ಡೀ ದರ ೩ ರೂ.

ಮುದತಿ ಠೇವುಗಳು:— ಒಂದು ವರ್ಷದ ಮುದ್ದತಿಗೆ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೩॥ ರೂ.

ಲೋನ:— ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡೀದರ ೬ ರೂ. ಶಕ್ತಿ ಮತ್ತು ಧನಿಕರ [illegible] ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ವ ನಿಯಮಿತ ಕಂಪನಿಯ ಶೇರುಗಳ ಸಲುವಾಗಿ ಮಾಡಿ [illegible] ಮತ್ತು ಯೋಗ್ಯ [illegible] ಮಾಡುವದರಲ್ಲಿಯೂ ಒದಗುವದು [illegible] ಕೊಳ್ಳುವದರಲ್ಲಿಯೂ ಮತ್ತು ಹುಂಡಿಗಳನ್ನು ಮಾಡುವದರಲ್ಲಿಯೂ ಒದಗುವದು

ಬ್ಯಾಂಕಿಗೆ ಮೇಲ್ಕಾಣಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲ ತರದ ಅಧಿಕಾರವಿರುವದು.

ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಬಂದಲ್ಲಿ ತಿಳಿಸಲ್ಪಡುವದು.

ಆರ್ ಎಫ್ ರಿಕ್‌ಟರ.
ಏಜಂಟ.

ದಿ ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ.

೯ ಕೆ- ಮಂಗಳವಾರಪೇಟೆ, [illegible] ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸಾಲವು [illegible] ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳು ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು [illegible] ಕಮೀಶನ [illegible] ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಅಪೇಕ್ಷಿಸುವ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಘಂಟಿಮಠ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ ಬ್ಯಾಂಕ ಲಿಮಿಟೆಡ

ಮಂಗಳವಾರಪೇಟೆ [illegible]

ಕೋ-ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ಎಂಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮಾಡಲಿಕ್ಕಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಪೀಯು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಂಡು [illegible] ದರವು ನೂರಕ್ಕೆ ತಿಂಗಳಿಗೆ ಹನ್ನೆರಡು [illegible]

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ.

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೪ ,,	೪-೦-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ಕರ್ನಾಟಕದ ಖಾದಿಭಕ್ತರಲ್ಲಿ ಬಿನ್ನಹವು.

—(೦)—

೧೯೩೯ ಅಕ್ಟೋಬರ ೨ನೇ ತಾರೀಖಿನ ದಿನ ಮಹಾತ್ಮಾ ಗಾಂಧಿಯವರಿಗೆ ೭೦ ವರ್ಷ ತುಂಬಿ ೭೧ ನೇ ವರ್ಷವು ಪ್ರಾರಂಭವಾಗುವದು. ಈ ಅವರ ಷಷ್ಟ್ಯಬ್ದಿ ಪೂರ್ತಿಯ ಮಹೋತ್ಸವ ಪ್ರಸಂಗದಲ್ಲಿ ಅವರಿಗೆ ಅತ್ಯಂತ ಪ್ರಿಯಕರವಾದ ಖಾದಿಯ ಪ್ರಸಾರವನ್ನು ಮಾಡುವದರಿಂದಲೇ ಅವರು ಹಿಂದೀ ರಾಷ್ಟ್ರದ ಮೇಲೆ ಮಾಡಿದ ಅನಂತ ಉಪಕಾರಗಳ ಬಗ್ಗೆ ನಮ್ಮ ಕೃತಜ್ಞತೆಯನ್ನು ಸ್ವಲ್ಪ ಮಟ್ಟಿಗಾದರು ವ್ಯಕ್ತಮಾಡಿದಂತೆ ಆಗುವದು. ಆದ್ದರಿಂದ ಆ ದಿವಸ ಒಂದು ರೂಪಾಯಿ ಅಥವಾ ಅದಕ್ಕಿಂತ ಹೆಚ್ಚು ಖಾದಿಯನ್ನು ಕೊಂಡವರಿಗೆ ಒಂದು ರೂಪಾಯಿಗೆ ಒಂದಾಣೆಯಂತೆ ಕಮೀಶನ ಕೊಡಬೇಕೆಂದು ಅಖಿಲಭಾರತ ಚರಕ ಸಂಘದ ಕರ್ನಾಟಕದಲ್ಲಿಯ ಎಲ್ಲ ವ್ಯವಸ್ಥಾಪಕರಿಗೆ ತಿಳಿಸಿದೆ. ಆ ದಿವಸ ಊರಲ್ಲಿ ಖಾದೀ ಭಕ್ತರು ಸಹಾಯದಿಂದ ಮನೆಮನೆಗೆ ಹೋಗಿ ಖಾದಿಯನ್ನು ಮಾರುವ ವ್ಯವಸ್ಥೆಯನ್ನಾದರೂ ಮಾಡಬೇಕೆಂದು ಅವರಿಗೆ ತಿಳಿಸಿರುವವು.

ಅದೇ ರೀತಿಯಾಗಿ ೩ ನೇ ಅಕ್ಟೋಬರದಿಂದ ೧೫ ನೇ ಅಕ್ಟೋಬರದ ವರೆಗೆ ಕರ್ನಾಟಕದ ಎಲ್ಲ ಸ್ಥಳಗಳಲ್ಲಿ ಜರಗುವ ಮಹಾನವಮಿಯ ನಾಡಹಬ್ಬದಲ್ಲಿ ದಸರೆಯ ವರೆಗೆ ಒಂದು ರೂಪಾಯಿ ಅಥವಾ ಅದಕ್ಕಿಂತ ಹೆಚ್ಚು ಖಾದಿಯನ್ನು ಕೊಂಡವರಿಗೆ ಒಂದು ರೂಪಾಯಿಗೆ ಅರ್ಧ ಆಣೆಯಂತೆ ಕಮೀಶನ ಕೊಡಬೇಕೆಂದು ಸಹ ಎಲ್ಲ ಅಂಗಡಿಗಳ ವ್ಯವಸ್ಥಾಪಕರಿಗೆ ತಿಳಿಸಿದೆ. ಖಾದಿ ಭಕ್ತರೆಲ್ಲ ಖಾದಿಯನ್ನು ಮನೆಮನೆಗೆ ಒಯ್ದು ಮಾರುವ ಕಾರ್ಯದಲ್ಲಿಯೂ ಖಾದಿಯ ಪ್ರಸಾರವನ್ನು ಹೆಚ್ಚಿಸುವ ಕಾರ್ಯದಲ್ಲಿಯೂ ವ್ಯವಸ್ಥಾಪಕರಿಗೆ ನೆರವಾಗಬೇಕೆಂದು ಬಿನ್ನಯಿಸುವ,

ತಮ್ಮ
ಕೌಜಲಗಿ ಹನುಮಂತರಾಯರು
ಕಾರ್ಯದರ್ಶಿ
ಅ. ಭಾ. ಚ. ಸಂಘ, ಧಾರವಾಡ

ಮಹಾತ್ಮಾ ಗಾಂಧಿಯವರ ಜನ್ಮತಿಥಿ

—(೦)—

೨ನೇ ಅಕ್ಟೋಬರ ದಿವಸ ಗಾಂಧಿಜಿಯವರಿಗೆ ಎಪ್ಪತ್ತು ವರ್ಷಗಳು ತುಂಬುವವು. ಅದು ಎಲ್ಲ ಹಿಂದವಾಸಿಯರಿಗೆ ಭಾಗ್ಯದ ದಿನ. ಇರುವರೆಗೆ ಗಾಂಧಿಜಿಯವರು ತಮ್ಮ ಆಯುಷ್ಯವನ್ನೆಲ್ಲ ಹಿಂದುಸ್ಥಾನದ ಉದ್ಧಾರಕ್ಕಾಗಿಯೇ ವಿನಿಯೋಗಿಸುತ್ತಿದ್ದಾರೆ. ಅವರಿಗೆ ದೀರ್ಘಾಯುರಾರೋಗ್ಯವಾಗಲೆಂದು, ಅವರ [illegible] ಜನ್ಮತಿಥಿಯನ್ನು ಯೋಗ್ಯ ರೀತಿಯಿಂದ ಪಾಲಿಸುವದರ ಈಶ್ವರನನ್ನು ಪ್ರಾರ್ಥಿಸುವದು ನಮ್ಮೆಲ್ಲರ ಕರ್ತವ್ಯವಾಗಿದೆ.

ಕರ್ನಾಟಕದಲ್ಲಿ ಎಲ್ಲೆಡೆಯಲ್ಲಿಯೂ ಈ ಉತ್ಸವವು ಜರಗುವದು ಅವಶ್ಯವಿದೆ. ಆ ದಿನ ಎಲ್ಲ ವಿದ್ಯಾಪೀಠದವರು ಹಬ್ಬವೆಂದೆಣಿಸಿ ಸೂಟಿ ಕೊಡಬೇಕು. ಮುಂಜಾನೆ ರಾಷ್ಟ್ರಧ್ವಜ ವಂದನೆಯೂ ಅನಂತರ ಮನೆಮನೆಗೆ ಹೋಗಿ ಖಾದಿಯ ಮಾರಾಟವೂ ಸಾಯಂಕಾಲ ಊರೊಳಗೆ ಗಾಂಧಿಜಿಯವರ ಭಾವಚಿತ್ರದ ಮೆರವಣಿಗೆಯೂ ಅನಂತರ ಸಭೆಯೂ ಸಭೆಯ ಕೊನೆಗೆ ರಾಷ್ಟ್ರಗೀತವೂ ಈ ರೀತಿ ಒಂದು ಕಾರ್ಯಕ್ರಮವು ಅಲ್ಲಲ್ಲಿ ಅನುಕೂಲವಿದ್ದಂತೆ ಹೆಚ್ಚು ಕಡಿಮೆ ಮಾಡಬಹುದು. ಎಲ್ಲ ಕಡೆಗೂ ಈ ಹಬ್ಬದ ದಿನವು ಯೋಗ್ಯರೀತಿಯಿಂದ ಆಚರಿಸಲ್ಪಡುವದೆಂದು ನಂಬಿದ್ದೇವೆ.

ಜಯಭುವನೇಶ್ವರಿ.

—(೦)—

ಕರ್ನಾಟಕ ಸಿಂಹಾಸನ ಸ್ಥಾಪನೆಯು ಎಂದು?

(ಧಾರವಾಡ ಕನ್ನಡಿಗರ ಕೂಟದ ಜ್ಯೋತಿರ್ಮಂಡಲ ಶಾಖೆಯಿಂದ.)

—(೦)—

ನಾಗೇಶ್ವರೇ ನಿಯಮಿತ ಶಕೇ ಶಾಲಿವಾಹಸ್ಯ ಯಾತೇ | ಧಾತೃವರ್ಷೇ ಸುಗುಣಸಹಿತೇ ಮಾಸಿ ವೈಶಾಖನಾಮ್ನಿ | ಶುಕ್ಲೇಪಕ್ಷೇ ಸುರಗುರುಯುತೇ ಸೌಮ್ಯವಾರೇ ಸುಲಗ್ನೇ | ಸಪ್ತಮ್ಯಾಂ ಶ್ರೀ ವಿಜಯನಗರಂ ನಿರ್ಮಮೇ ದೇಶಿಕೇಂದ್ರಃ ||

ಈ ಮೇಲಿನ ಶ್ಲೋಕವು ಶ್ರೀ. ಡಿ. ವಿ. ಗುಂಡಪ್ಪನವರ "ವಿದ್ಯಾರಣ್ಯರೂ ಅವರ ಕಾಲವೂ" ಎಂಬ ಲೇಖದಿಂದ ತಯ್ದುಕೊಂಡಿದೆ. ಹಂಪೆಯಲ್ಲಿಯ ಒಂದು ದೇವಸ್ಥಾನದಲ್ಲಿರುವ ಶಿಲಾಲೇಖನದಲ್ಲಿ ಈ ಶ್ಲೋಕವು ಬರೆಯಲ್ಪಟ್ಟಿದೆ. ಇದರರ್ಥವೇನೆಂದರೆ:—

ಶಾಲಿವಾಹನ ಶಕದ ೧೨೫೮ ನೇ ವರ್ಷವು ಕಳೆದಬಳಿಕ ಬರುವ ೧೨೫೯ನೆಯ ಧಾತೃ ಸಂವತ್ಸರದ ವೈಶಾಖಮಾಸ ಶುಕ್ಲಪಕ್ಷ ಸಪ್ತಮಿ "ಶುಭ ವಾರ" ದಲ್ಲಿ ಬೃಹಸ್ಪತಿಯು ಲಗ್ನದಲ್ಲಿರುವ ಶುಭಸಮಯದಲ್ಲಿ ಶ್ರೀ ವಿದ್ಯಾರಣ್ಯರು ವಿಜಯನಗರವನ್ನು ನಿರ್ಮಿಸಿದರು.

ಶ್ರೀ. ಡಿ. ವಿ. ಗುಂಡಪ್ಪನವರೂ, ಅವರನ್ನನುಸರಿಸಿದ ಉಳಿದ ಲೇಖಕರೂ ಸೌಮ್ಯವಾರೇ ಎಂಬ ಶಬ್ದಕ್ಕೆ ಬುಧವಾರದಲ್ಲಿ ಎಂಬರ್ಥವನ್ನು ಮಾಡಿದ್ದಾರೆ. ಜ್ಯೋತಿಶ್ಶಾಸ್ತ್ರದಲ್ಲಿ ಬುಧನಿಗೆ ಸೌಮ್ಯನೆಂಬ ಹೆಸರು ಪ್ರಸಿದ್ಧವಿರುವದರಿಂದ ಹೀಗೆ ಅರ್ಥ ಮಾಡುವದಾದರೂ ಸ್ವಾಭಾವಿಕವಾಗಿದೆ. ಇದರಲ್ಲಿ ವಿವಾದಕ್ಕೆ ಆಸ್ಪದವಿಲ್ಲ. "[illegible]"ವೆಂಬ ಗ್ರಂಥದಲ್ಲಿ ಗುರುವಾರದ ಮುಖ್ಯ ನಕ್ಷತ್ರ ಅಭಿಜಿನ್ಮುಹೂರ್ತ ಸಿಂಹ ಲಗ್ನದಲ್ಲಿ ಎಂದು ಉಕ್ತವಿದೆ. ಇವರೂ ಇದೇ ಮೇರೆಗೆ ಇನ್ನೊಂದು ಮತದಲ್ಲಿ ತಪ್ಪಿದ್ದಾರೆ. ಅಭಿಜಿನ್ಮುಹೂರ್ತವೆಂದರೆ ಗುರುವಾರ ದಿನ ಚಂದ್ರನು ಪುಷ್ಯ ನಕ್ಷತ್ರದಲ್ಲಿರುವ ವರೆಗಿನ ಅತ್ಯಂತ ಸಿದ್ಧಯೋಗ ಕಾಲವು ಇದನು ಮುಖ್ಯ ಕ್ಷೇತ್ರವೆಂದು ಹೇಳ ತಪ್ಪಿದ್ದಾರೆ.

ಲೆಕ್ಕ ಮಾಡಲಾಗಿ ಬುಧವಾರ ದಿನ ಸಪ್ತಮಿ ತಿಥಿಯೂ ಪುನರ್ವಸು ನಕ್ಷತ್ರವೂ ಹೊಂದಿಕೆಯಾಗುವವು. ಆದ್ದರಿಂದ ಈ ಆರ್ಯರು ಲೆಕ್ಕದ ಆಧಾರದಲ್ಲಿ ವೈಶಾಖ ಶುದ್ಧ ಸಪ್ತಮಿ ದಿನ ಗುರುವಾರ ಅಭಿಜಿನ್ಮುಹೂರ್ತವೆಂಬ ಮಹಾ ಸಮಯವಾದದ್ದು ಶ್ರೀ ವಿದ್ಯಾರಣ್ಯರಂಥ ಜ್ಯೋತಿಶ್ಶಾಸ್ತ್ರದ ಶಿರೋರತ್ನ ಮಹಾ ಪುರುಷರು ಆ ವ್ಯತಿಪಾತ ಯೋಗ ಕಾಲವನ್ನು ಬಿಟ್ಟು, ಸ್ವಾತಂತ್ರ್ಯದ ಬುಧವಾರ ದಿನ ವಿಜಯನಗರದ ಕರ್ನಾಟಕ ಸಿಂಹಾಸನ ಸ್ಥಾಪನೆಯಂಥ ಅತ್ಯಂತ ಮಹತ್ವದ ಕಾರ್ಯವನ್ನು ಕೈಕೊಳ್ಳಲು ಉತ್ಕೃಷ್ಟವಾಗಿರಲಾರದು ಸಹಜವಾಗಿ ಸ್ವೀಕರಿಸುವದು ಯೋಗ್ಯವು ವಿಶ್ವಸನೀಯವಾದುದೂ ಆಗಿರುತ್ತದೆ.

ನಡೆಯುವ ೧೮೬೧ನೇಯ ಶಾಲಿ ಸಂವತ್ಸರವು ಅತೀತ ವರ್ಷವಾಗಿರುತ್ತದೆ ಪ್ರವರ್ತನಮಾನ ಪದ್ಧತಿಯಿಂದ ಈ ವರ್ಷವು ೧೮೬೨ನೇಯದಾಗುವದು. ಅದರಂತೆಯೇ, ಸಿಂಹಾಸನ ಸ್ಥಾಪನೆಯು ವರುಷವು ೬೦೩ನೇಯದೆಂದರೆ ಸುಲಭವಾಗಿ ತಿಳಿಯುವದು.

ಅಯುಲಂಡವು

ಹಿಂದುಸ್ಥಾನದ ಸ್ವಾತಂತ್ರ್ಯ ನಿರೀಕ್ಷಿಸುತ್ತಿದೆ.

—(೦)—

"ಜತಿನದಾಸರ ಮರಣದ ಬಗ್ಗೆ ಸ್ವಾತಂತ್ರ್ಯ ಪ್ರಿಯ ಮನಸ್ಸಿನವರು ಶ್ರೀ ಸೇನಗುಪ್ತರಿಗೆ ದುಃಖಪ್ರದರ್ಶನದ ಒಂದು ತಂತಿಯನ್ನು ಕಳುಹಿಸಿದ್ದಾರೆ. ಅದರಲ್ಲಿ ಮ್ಯಾಕ್ಸ್ವಿಯ ಮನಸ್ಸನ್ನು ಶ್ರೀ ಜತಿನದಾಸನ ಮರಣದ ಬಗ್ಗೆ ಹಿಂದುಸ್ಥಾನಕ್ಕುಂಟಾದ ದುಃಖ ಹಾಗೂ ಅಭಿಮಾನದಲ್ಲಿ ಭಾಗಿಗಳಾಗಿದ್ದೇವೆ ಸ್ವಾತಂತ್ರ್ಯದ ಹಾದಿಯನ್ನು ನಿರೀಕ್ಷಿಸುತ್ತಿದ್ದೇವೆ" ಎಂದು ಅಂದಿದ್ದಾರೆ.

ಬೈಪುವಾನದ, ಸಾರ್ವಜನಿಕಲ್ಲಿ ಶ್ರೀ ಜತಿನದಾಸರ ಮರಣದ ಬಗ್ಗೆ ದುಃಖಪ್ರದರ್ಶಕ ಸಭೆಗಳಾದವು.

ಸವದತ್ತಿಯಲ್ಲಿ

ಕರಡಿಗುದ್ದಲ್ಲಿ ಧಾಯಿ ಪಟೇಲ ಇವರ ಆಗಮನ ಪ್ರಚಂಡ ಸಭೆ ಗ್ರಾಮಸ್ಥರ ಪರ್ತಿಯಿಂದ ಮಾನಪತ್ರ.

ಸರದಾರರು ಬರುವರೆಂದು ಮೊದಲೆ ಗೊತ್ತಾದ್ದರಿಂದ ತಾ|| ೧೫-೯-೨೮ ಇಸ್ವಿ ದಿವಸ ಸ್ಥಳ ಪಂಚಾಯತ ಸಾವಕಾರರು ರೈತರು ವಗೈರೆ ಸಾವಿರಾರು ಜನರು ಹಣಮನಗೇರಿ ಹತ್ತರ ರಸ್ತೆಕ್ಕೆ ಮಾರ್ಗನಿರೀಕ್ಷಣ ಮಾಡುತ್ತ ಕುಳಿತಿದ್ದರು. ಅವರು ೪ ಘಂಟೆಗೆ ಬರತಕ್ಕವರು, ಪತ್ರದ ಹಳ್ಳಿ ಹೊಂಗಲದಲ್ಲಿ ಜನರು ತಡೆದಿಟ್ಟಿದ ಕಾರಣ ಇಲ್ಲಿಗೆ ೧೦ ಘಂಟೆ ನಂತರ ಬಂದರು.

ಅವರ ಮೋಟಾರವು ಬಂದ ಕೂಡಲೆ ವಂದೇ ಮಾತರಂ ಪಟೇಲ ಮಹಾರಾಜಕೀ ಜಯ ಗಾಂಧಿ ಮಹಾರಾಜಕೀ ಜಯ ಅಂತ ಜಯಘೋಷ ಮಾಡಿದರು. ಬ್ಯಾಂಡ ವಾದ್ಯ ಪ್ರಾರಂಭವಾಯಿತು. ಸರದಾರರಿಗೆ ಪೂಮಾಲೆ ಹಾಕಿ ಸಾವಿರಾರು ಜನರೊಂದಿಗೆ ಒಳ್ಳೇ ಸಂಭ್ರಮದೊಂದಿಗೆ ಮೆರವಣಿಗೆ ಹೊರಟು ಸಭಾಸ್ಥಾನಕ್ಕೆ ಕೊಪ್ಪದ ಧರ್ಮಶಾಲೆಗೆ ಕರೆದೊಯ್ದು ಎತ್ತರವಾದ ಪೀಠದಲ್ಲಿ ಕುಳ್ಳಿರಿಸಿದರು.

ಬಳಿಕ ಶಾಲೆಯ ಹುಡುಗರು ಸ್ವಾಗತ ಪದಗಳನ್ನು ಹಾಡಿದ ಬಳಿಕ ಸಭಿಕರ ಕಡೆಯಿಂದ ಸತ್ಕಾರ ಮಾಡಿದರು ನಂತರ ಸ್ವಾಗತಪರವಾದ ಭಾಷಣಗಳಾದವು ನಂತರ ತಾಲೂಕಿನ ಪರವಾಗಿ ಮಾನಪತ್ರವನ್ನು ಓದಿ ಮಾನಪತ್ರವನ್ನು ಸುಂದರವಾದ ಖಾದಿ ಚೀಲದಲ್ಲಿ ಹಾಕಿ ಜಯಘೋಷದೊಂದಿಗೆ ಸರದಾರರಿಗೆ ಸಮರ್ಪಣೆ ಮಾಡಲ್ಪಟ್ಟಿತು.

ಆ ವೇಳೆ ಸರದಾರರ ಭಾಷಣ ಇಂಗ್ಲಿಷದಲ್ಲಿ ಪ್ರಾರಂಭವಾಯಿತು. ಅದರ ಭಾಷಾಂತರ ದೇಶಭಕ್ತ ಗಂಗಾಧರರಾವ ದೇಶಪಾಂಡೆ ಇವರು ನನಗೆ ಇಷ್ಟೊಂದು ಸನ್ಮಾನ ಬೇಕಾಗಿಲ್ಲ. ನಾನೂ ನಿಮ್ಮಂತೆ ಒಬ್ಬ ರೈತನಿದ್ದೇನೆ ರೈತನಲ್ಲೇ ಸಾಯುತ್ತೇನೆ. ನಿಮಗೆ ಎಂಥ ಪ್ರಕಾರದ ರೋಗ ಉಂಟಾಗಿರುವದೆ ಆ ರೋಗದಿಂದ ನೀವು ನರಳುತ್ತೀರಿ. ಆ ರೋಗ ಹೋಗುವದಕ್ಕೆ ಒಬ್ಬ ಸಾಧು ವೈದ್ಯ ಔಷಧ ತಯಾರ ಮಾಡಿ ಕೊಟ್ಟಿರುತ್ತಾನೆ ನಿಮ್ಮಂತೆ ಬಾರಡೋಲಿ ರೈತರಿಗೆ ಆಗಿತ್ತು ಆ ಔಷಧವನ್ನು ಕೊಟ್ಟ ಬಳಿಕ ಅವರಿಗೆ ಗುಣವಾಯಿತು. ಅದೇ ಔಷಧ ನಿಮಗೆ ಕೊಡತಕ್ಕವನಿದ್ದೇನೆ ನಿಮ್ಮ ಹೆಸರಷ್ಟೇ ಬರಿ.

ಒಂದು ರೋಗ ಏನಂದರೆ ಸರಕಾರದವರು ವಸೂಲ ಮಾಡುವ ಕಂದಾಯದ ಪದ್ಧತಿ ಅದರಿಂದ ನಿಮಗೆ ತ್ರಾಸ ಆಗಿದೆ. ಮತ್ತೊಂದು ನೀವು ಜಮೀನಿಯಲ್ಲಿ ಹತ್ತಿ ಬಿತ್ತಿ ಮಾರಾಟ ಮಾಡುತ್ತೀರಿ. ಪರದೇಶದಿಂದ ಬಂದ ಮಾಲು ತಗೆದುಕೊಂಡು ಅದರಿಂದ ನಿಮಗೆ ದರಿದ್ರತೆ ಬಂದಿರುತ್ತದೆ ಇಲ್ಲಿ ನೆರೆದ ನಮ್ಮ ತಾಯಿ ಮೋಳರು ಪರದೇಶದ ವಸ್ತ್ರಗಳನ್ನೇ ಧಾರಣ ಮಾಡಿರುವಿರಿ ಎಂಬುದನ್ನು ನೋಡಿ ನನಗೆ ಖೇದವಾಗಿ ಕಣ್ಣೊಳಗಿಂದ ನೀರು ಬರುತ್ತವೆ. ನೀವು ಮಂದು ಆಗಿ ಘಟ್ಟಿ ಆಗಿರಿ ಕರೆ ತಂದಿ ಅಂಗಡಿಗಳ ಕಡಿಗೆ ಹೋಗಬೇಡಿರಿ ಹಿಂಡಿ ಮಾಡತಕ್ಕಂಥ ವಕೀಲರ ಕಡಿಗೆ ಹೋಗಬೇಡಿರಿ. ವಕೀಲರು ಘಂಟೆಗೊಮ್ಮೆ ನಿಮ್ಮ ದ್ರವ್ಯ ಹರಣ ಮಾಡುತ್ತಾರೆ. ಇದರ ಸಂಬಂಧವಾಗಿ ಒಳ್ಳೇ ಸ್ಫೂರ್ತಿದಾಯಕ ಭಾಷಣ ಮಾಡಿದರು.

ಒಂದು ತಾಲೂಕ ಕಮಿಟಿ ಸ್ಥಾಪಿಸಲ್ಪಟ್ಟಿತು ಅದಕ್ಕೆ ಬಹು ಜನರು ಮೆಂಬರರಾಗಿರುತ್ತಾರೆ ಮೆಂಬರ ಜನರ ಹೆಸರು ಗುರುರಾವ ಮೊದಲಾದವರು ಇವರು ಓದಿ ಹೇಳಿದರು. ಪುನಃ ಸರದಾರರ ಆಭಾರ ಮನ್ನಿಸಿದನಂತರ

ಸಹಗಮನ ಸಹಕಾರಿ ತತ್ವವಾದಿ

ದೇಶಭಕ್ತ ಕೌಜಲಗಿ ಹಣಮಂತರಾಯರ
ಏನೋಪಕಾರವಾದ ಪ್ರತಿಭೆ

ಕನ್ನಡ ನಾಡಿನ ತರುಣರಿಗೆ ಮಾಡಿದ ಉಪದೇಶ.

——)(o)(——

ಬಾಗಲಕೋಟೆಯಲ್ಲಿ ವಿದ್ಯಾರ್ಥಿಗಳಿಂದ ಸ್ಥಾಪಿತವಾದ ಶ್ರೀ ಬಲಭೀಮ ವಾಚನಾಲಯದ ದ್ವಿತೀಯ ವಾರ್ಷಿಕ ಸಮಾರಂಭವು ವಿನಾಯಕ ಚತುರ್ಥಿಯ ದಿನ ಶ್ರೀಯುತ ಕೌಜಲಗಿ ಹಣಮಂತರಾಯರ ಅಧ್ಯಕ್ಷತೆ ಕೆಳಗೆ ಜರುಗಿಸಲ್ಪಟ್ಟಿತು. ಅಧ್ಯಕ್ಷರು ಒಳ್ಳೇ ಬೋಧಪ್ರದವಾದ ಮನನೀಯ ಭಾಷಣ ಮಾಡಿದರು. ಅದರ ಮುಖ್ಯಾಂಶಗಳು.— ನನ್ನ ತರುಣ ಮಿತ್ರರೇ,

ನಿಮ್ಮ ಗುಣಗಳೇನೋ ಹಲವಾಗಿವೆ ಕನ್ನಡ ವಾಙ್ಮಯವನ್ನು ವಿಶೇಷವಾಗಿ ಬೆಳೆಸಿ ಜನರಲ್ಲಿ ಕನ್ನಡತನವನ್ನು ಬೀರಬೇಕೆಂದಿರುವ ನಿಮ್ಮ ಅಭಿಲಾಷೆಯು ಅಭಿನಂದನೀಯ. ಪ್ರತಿಯೊಬ್ಬ ಕನ್ನಡಿಗನು ಕನ್ನಡ ಮಾತೆಯ ಸೇವೆಯನ್ನು ಮಾಡಲೇಬೇಕು ನಿಜವಾಗಿ ಸೇವೆ ಮಾಡಬೇಕಾದರೆ ಸಾಂಪ್ರತ ಕೆಳಗಿನ ಸಂಗತಿಗಳ ಕಡೆಗೆ ಲಕ್ಷ್ಯ ಕೊಡಬೇಕು. ಅವು ಯಾವವೆಂದರೆ — (೧) ಉತ್ತಮ ಗ್ರಂಥಗಳನ್ನು ಚನ್ನಾಗಿ ಪರಿಶೀಲನ ಮಾಡಬೇಕು. (೨) ವಾಙ್ಮಯ ಸೇವಕರಿಗೆ ಸಹಾಯ ಮಾಡಬೇಕು (೩) ಗ್ರಂಥಕರ್ತರನ್ನು ನಿರ್ಮಲ ಮನಸ್ಸಿನಿಂದ ಮಾಡಬೇಕು. (೪) ಅಪಭಾವ ವಿಚಾರದು. ಅನ್ಯರ ದೋಷಗಳನ್ನು ತೋರಿಸುವದಕ್ಕಿಂತ ತಿದ್ದಿಕೊಳ್ಳಬೇಕು (೫) ಹಲವಾಗಿ ಅಭ್ಯಸಿಸಲಾಗದ ಹೊರತು ಗ್ರಂಥಗಳನ್ನು ಬರೆಯುವ ಗೋಜಿಗೆ ಹೋಗಬಾರದು. (೬) ಯಾಪ್ರತಿ ಆಗದಿದ್ದರೆ ವಾಙ್ಮಯ ಸೇವಕರ ಟೀಕೆಯನ್ನು ಮಾಡುತ್ತ ಕೂಡಬಾರದು. ಉಚ್ಚರಿಸಿದ ಕೂಡಲೇ ಜನರಿಗೆ ಅರ್ಥವಾಗುವಂಥ ಶಬ್ದಗಳನ್ನೇ ಉಪಯೋಗಿಸಬೇಕು. ಅನ್ಯಭಾಷೆ ಎನಗೆ ಮೇಲೆ ಪಂಡಿತ ಮಾನಾಗಿ ಭಾಷೆಯನ್ನು ಕಲಿಯದೆ ಬರಿದಾಗಿ ಅಲಂಕಾರಕೆಯು ಹುಟ್ಟುತ್ತದೆ. ಈಗ ಪಾತ್ರರು ತಮ್ಮ ಲೇಖನದಲ್ಲಿಯೂ ಭಾಷಣದಲ್ಲಿಯೂ ಎಷ್ಟೋ ಗುಜರಾಥಿ ಹೊಸ ಶಬ್ದ (ಬೇಗ ಅರ್ಥವಾಗುವಂಥ) ಗಳನ್ನು ಉಪಯೋಗಿಸಿದ ಅವರೇ ಅಷ್ಟು ಶಬ್ದಗಳನ್ನು ತಮ್ಮ ಭಾಷೆಯನ್ನು ಹೆಚ್ಚಿಸಿದಂತಾಗಿದೆ. ಇದರಂತೆ ಕಾಕಾ ಕಾಲೇಲಕರ ಇವರೇ ಗುಜರಾಥಿ ಭಾಷೆಯ ಭಾಂಡಾರ ಹೆಚ್ಚಾಗಿ ಬೆಳೆಸಿದ್ದಾರೆ ಅದುದರಿಂದಲೇ ಜನರ ಲಕ್ಷ್ಯವು ಅತ್ತ ಕಡೆಗೆ ಹೊರಳಿದೆ ಇದರಿಂದ ಲೋಕಮಾನ್ಯರ ಮರಾಠಿ ಭಾಷಾ ಭಾಂಡಾರವೂ ಹೆಚ್ಚಾಗಿದೆ. ತಮ್ಮ ಭಾಷೆಯನ್ನು ಹೆಚ್ಚಿಸಲು ಇದೊಂದೊಳ್ಳೇ ಉಪಾಯವಲ್ಲವೆ?

ಯಾವದಕ್ಕಾದರೂ ಯೋಗ್ಯತೆಯು ಬೇಕು ಆದರೆ ನನ್ನಂಥವನು ಹೊಸ ಶಬ್ದಗಳನ್ನು ಪಡೆದರೆ ಪ್ರಚಾರವಾಗುವದೇ? ನಾನು ಎಷ್ಟೋ ವರ್ಷಗಳಿಂದ ಸಹಗಮನ ಸಹಕಾರಿತತ್ವವಾದಿ ಶಬ್ದವನ್ನು ಪ್ರಚಾರ ಮಾಡಬೇಕೆಂದು ಪ್ರಯತ್ನ ಮಾಡುತ್ತಲಿದ್ದೇನೆ. ಆದರೆ ಇದೇ ಶಬ್ದವನ್ನು ಮಹಾತ್ಮರಾಗಲಿ ಪಟೇಲರಾಗಲಿ ರವೀಂದ್ರರಾಗಲಿ ಉಪಯೋಗಿಸಿದ್ದರೆ ಇಷ್ಟು ಹೊತ್ತಿಗೆ ಎಲ್ಲ ಕಡೆಗೂ ಪ್ರಚಾರವಾಗಿ ಹೋಗುತ್ತಿತ್ತು. ಸಹಗಮನ ಸಹಕಾರಿ ತತ್ವವಾದಿ ಎಂದರೆ ಈಗಿನ ಬ್ರಿಟಿಶ್ ಸರಕಾರ ಹೋದರೂ ಅದರ ಸಂಗಡವೇ ಸಹಗಮನ ಮಾಡುವಂಥ ಲಾಲಸೆಯುಳ್ಳ ಸರಕಾರದ ಅತ್ಯಂತ ಪ್ರಜನಿಷ್ಠ ಬಗಲಗೂಸುಗಳು.

ನಮ್ಮ ಕನ್ನಡ ವಾಙ್ಮಯವು ಚನ್ನಾಗಿ ಬೆಳೆಯಬೇಕಾದರೆ ಈಗ ನೀವು ಕೈಕೊಂಡ ಕಾರ್ಯಗಳು ಸಾಲವು, ಇನ್ನೂ ಕೆಲವು ಕಾರ್ಯಗಳನ್ನು ನೀವು ಕೈಕೊಳ್ಳಬೇಕು. ನಾನು ಭಾಷಣ ಮಾಡಿ ಮಾಡಿ ಬೇಸತ್ತು ಹೋಗಿದ್ದೇನೆ. ಆದ್ದರಿಂದ "ಭಾಷಣ ಮಾಡುವದರಿಂದ ಫಲವೇನು? ಮಾತಿನ ಮಲ್ಲರಾಗಬೇಡಿರಿ ಕೃತಿಯ ಕಲಿಗಳಾಗಿರಿ" ಎಂದು ಹೇಳುವ ಕಾರ್ಯಗಳನ್ನು ನೀವು ಮಾಡುವಿರೆಂಬ ಭರವಸೆ ಇತ್ತ ಕಾರಣ ನಿಮ್ಮ ಸಮಾರಂಭದ ಅಧ್ಯಕ್ಷನಾಗಲು ಒಪ್ಪಿದ್ದೇನೆ ಮತ್ತು ಆ ಕಾರ್ಯಗಳು ಯಾವವೆಂದರೆ— (೧) ಪ್ರತಿನಿತ್ಯ ನಿಮ್ಮ ವಾಚನಾಲಯದಲ್ಲಿ ಒಂದೊಂದು ಗ್ರಂಥವನ್ನು ಚನ್ನಾಗಿ ಓದಿ ಮನನ ಮಾಡಿಕೊಳ್ಳಬೇಕು. ಒಬ್ಬೊಬ್ಬರು ಒಂದೊಂದು ಕವಿಯ ಸಮಗ್ರ ಕೃತಿ, ಅವನ ಎಲ್ಲ ಕಾವ್ಯ ಮೊದಲಾದವುಗಳನ್ನು ಚನ್ನಾಗಿ ಅಭ್ಯಾಸ ಮಾಡಿ ಆ ಕವಿಯ ವಿಷಯ ಸಂಪೂರ್ಣ ಸಂಗತಿಗಳನ್ನು ತಿಳಕೊಳ್ಳಬೇಕು (೨) ಚನ್ನಾಗಿ ಅಭ್ಯಾಸ ಮಾಡಿದ ಮೇಲೆ ಗ್ರಂಥ ಬರೆಯಬೇಕು. (೪) ಕರ್ನಾಟಕ ಇತಿಹಾಸ ಸಂಶೋಧನೆಗಾಗಿ ಮೊದಲು ಶಿಲಾ ಅಭ್ಯಾಸ ಚನ್ನಾಗಿ ಮಾಡಬೇಕು.

ಹುಡುಗರು ಹಾಗೂ ಹುಡುಗಿಯರ ವಿವಾಹದ ವಯಸ್ಸು ಕನಿಷ್ಠವಾಗಿ ೨೨ ಮತ್ತು ೧೬ ವರ್ಷ ಇರಬೇಕು. ಇಂಥ ಧಾರ್ಮಿಕ ವಿಷಯಗಳಲ್ಲಿ ಸರಕಾರದವರು ಕೈಹಾಕತಕ್ಕದ್ದಲ್ಲ, ಇಂಥ ವಿಷಯಗಳಿಗೆ ಕಾಯಿದೆಗಳ ಅವಶ್ಯಕತೆಯೇ ಇಲ್ಲ. ಜನರಲ್ಲಿ ಇವುಗಳ ಬಗ್ಗೆ ಜಾಗೃತಿ ಹುಟ್ಟಿಸಿ ಸಮಾಜದ ಸ್ಥಿತಿಯನ್ನು ಸುಧಾರಿಸಬೇಕು ಹೀಗೆ ಕೆಲವರು ಹೇಳುತ್ತಿರುವದು ನನಗೆ ಗೊತ್ತಿದೆ. ಇವರ ಹೇಳಿಕೆಯ ಪ್ರಕಾರ ಸಮಾಜದ ಸುಧಾರಣೆಗೆ ಪ್ರಯತ್ನಿಸಲು ತೊಡಗಿದರೆ ಎಷ್ಟೋ ವರ್ಷಗಳು ಬೇಕಾಗಬಹುದು. ನಮ್ಮ ಜೀವಮಾನದಲ್ಲಿಯಂತೂ ಇದು ಆಗುವದು ಶಕ್ಯ ತೋರುವದಿಲ್ಲ. ಆದುದರಿಂದ ಈ ವಿಷಯಗಳ ಬಗ್ಗೆ ಕಾಯಿದೆಗಳು ಇರುವದೇ ಅತ್ಯವಶ್ಯವಾಗಿದೆ.

ಧಾರವಾಡದಲ್ಲಿ ಶಾಲೆ ಕಾಲೇಜುಗಳು ಬಂದಾದವು.

ಪರದೇಶಿ ಟೊಪ್ಪಿಗೆಗಳ ಹೋಳಿ.

— (೦) —

ನಿನ್ನಿನ ದಿವಸ ಈ ಊರಲ್ಲಿಯ ವಿದ್ಯಾರ್ಥಿಗಳು "ಜತೀನದಾಸ ದಿನ" ವನ್ನಾಚರಿಸಿದರು. ವಿದ್ಯಾರ್ಥಿಗಳಿಲ್ಲದೆ ಶಾಲೆಗಳು ಬಾಗಿಲುಮುಚ್ಚಿಕೊಂಡವು. ವಿದ್ಯಾರ್ಥಿಗಳು ಗುಂಪುಗುಂಪಾಗಿ ನಡೆದು ವಂದೇ ಮಾತರಂ [illegible] ಜಯಘೋಷ ಮಾಡುತ್ತ ಊರಲ್ಲಿ ತಿರುಗಾಡಿದರು. ಕಾಲೇಜದ ವಿದ್ಯಾರ್ಥಿಗಳು, ಕಾಲೇಜಕ್ಕೆ ಹೋಗದೆ ಮೆರವಣಿಗೆ ಕೂಡಿಸಿದರು. ಮುಂಜಾನೆ ೨೦೦ ರ ಮೇಲೆ ಪರದೇಶಿ ಟೊಪ್ಪಿಗೆಗಳ ದಹನವಾಗಿ ಖಾದೀ ಟೊಪ್ಪಿಗೆಗಳ ಮಾರಾಟಕ್ಕೆ ಹುರಿಯೇರಿತು.

ಜಾಹೀರ ನೋಟೀಸು

ಶ್ರೀ|| ಮ|| ರಾ|| ರಾ|| ಮಲ್ಲಪ್ಪಾ ಬಿನ ಮಲಪ್ಪಾ ಕುರಿಯರ ಸಾಕೀನ ಹುವಿನಕಟ್ಟಿ ತಾಲ್ಲೂಕ ರಾಣೇಬೆನ್ನೂರ ಇವರಿಗೆ.

ಕೆಳಗೆ ಸಹಿ ಮಾಡಿದವಳಾದ ಗಂಗವ್ವಾ ಕೋಂ ಮಲ್ಲಪ್ಪಾ ಕುರಿಯವರ ಸಾಕೀನ ಹುವಿನಕಟ್ಟಿ ತಾಲ್ಲೂಕ ರಾಣೇಬೆನ್ನೂರ ನಾನು ಈ ನೋಟೀಸಿನ ಮೂಲಕ ತಿಳಿಸೋದೇನಂದರೆ ನೀನು ಮಲ್ಲಪ್ಪಾ ಯಂಬುವವಳನ್ನು ಲಗ್ನವಾಗಿ ಲಗ್ನದ ಹೆಂಡತಿ ಕೂಡ ಸರಿಯಾಗಿ ಬಾಳ್ವೆ ಮಾಡದೆ ಅಕಿಯನ್ನು ಬಿಟ್ಟು ಮೂಲಕ [illegible] ವ್ಯಭಿಚಾರ ಮಾಡಿಕೊಂಡು ಹೋದರು. ಆ ಮೇಲೆ [illegible] ಯಲ್ಲವ್ವಾ ಅಂಬುವಳನ್ನು ವ್ಯಭಿಚಾರ ಮಾಡಿಕೊಂಡಿತ್ತಿ [illegible] ಯಲ್ಲವ್ವಾ ಯೆಂಬುವ ಒಬ್ಬ ಮಗಳು ಇರುತ್ತಾಳೆ. ಆ ಮಗಳನ್ನು ಇದೇ ಊರಲ್ಲಿ [illegible] ಯಲ್ಲವ್ವಾ [illegible] ಕೊಟ್ಟಿರುತ್ತಿ. ಆ ಮಗಳು ಸಹಿತ [illegible] ನಿನ್ನ ಮನೆಯಲ್ಲಿಯೇ ಇಟ್ಟುಕೊಂಡಿರುತ್ತಿ. ಆದರೆ ನನ್ನ ಗಂಡನು ಪೋಷಿಸದೆ [illegible] ನನ್ನನ್ನು [illegible] ವ್ಯಭಿಚಾರ ಮಾಡಿಕೊಂಡಿರುತ್ತಿ. ಆದರೆ ನನ್ನನ್ನು ವ್ಯಭಿಚಾರ [illegible] ನನ್ನ ಸಂಗಡಾ ಸರಿಯಾಗಿ ಬಾಳ್ವೆ ಮಾಡದೆ ನಿನ್ನ [illegible] ಹೆಂಡತಿ [illegible] ತ್ರಾಸು ಕೊಡದು [illegible] ರಾತ್ರಿ [illegible] ದಲ್ಲಿ ಹಾಕಿ ಮೇಲೆ ಒಂದು [illegible] ಮೇಲೆ [illegible] ಕಾಲಗಳ [illegible] ಈ ಪ್ರಕಾರ [illegible] ತ್ರಾಸು [illegible] ನನ್ನನ್ನು [illegible] ಬಿಟ್ಟು [illegible] ಅದನ್ನು ನೀನು [illegible] ಬಂದ್ದು [illegible] ಮಾಡಿಕೊಂಡು ಹೋದನು. ಅಂತಾ ನಾನು ನಿಂದಾ [illegible] ತ್ರಾಸು ಅದರೂ [illegible] ಒಂದೆ ಆದರ್ಕ್ಕ ನೀನು ಸುಧಾರಿಸಲಿಲ್ಲ. ದಿನದಿನಕ್ಕೆ ಮೋಸ [illegible] ಹೆಚ್ಚು ತ್ರಾಸು ಕೊಟ್ಟದ್ದಲ್ಲದೆ ತಾ|| [illegible] ನೇ ದಿವಸ ನನ್ನನ್ನು ಮನಿ ಬಿಟ್ಟು ಹೊರಗೆ ಹಾಕಿದಿ. ಆ ಲಾಗಾಯ್ತು ಇವತ್ತಿನ ವರೆಗೆ ಹೊರಗೆ ಇರುತ್ತೇನೆ. ಈಗ ನನಗೆ ಹೊಟ್ಟೆ ಬಟ್ಟೆ [illegible] ಉಪವಾಸ ವಗೈರೆ [illegible] ಊರಲ್ಲಿ ಮನಿ ಬಾಡಿಗಿ [illegible] ೪೦೦ ರೂಪಾಯಿಗಳ [illegible] ಈ ೪೦೦ ರೂಪಾಯಿಗಳನ್ನು ಮತ್ತು ನನ್ನ ಸಂಗಡ ಸರಿಯಾಗಿ ಬಾಳ್ವೆ ತಪ್ಪಿ [illegible] ಬಗ್ಗೆ ಯೋಗ್ಯ [illegible] ಕೊಟ್ಟ [illegible] ದಿವಸಗಳಲ್ಲಿ ತಂದುಕೊಂಡು ಹೋಗಬೇಕು. ಆ ಪ್ರಕಾರ ನೀನು ತಂದುಕೊಂಡು ಹೋಗದೆ ಇದ್ದ ಪಕ್ಷಕ್ಕೆ ಇದೇ ನೋಟೀಸು ಎಂದು ತಿಳಿಯತಕ್ಕದ್ದು. ಮತ್ತು ನಮ್ಮ ಊರಲ್ಲಿ ಜನರ [illegible] ನನ್ನ [illegible] ಈ ನೋಟೀಸಿನ ವಿರುದ್ಧ ನಡೆದು ನನ್ನ ಮೇಲೆ [illegible] ವಗೈರೆ ಮಾಡಿದಲ್ಲಿ ನಿನ್ನ ಮೇಲೆ [illegible] ಫಿರ್ಯಾದಿ ಮಾಡುವದರಲ್ಲಿ ಬರುವದು. ಮತ್ತು ಮುಂದೆ ನಾನು [illegible] ವ್ಯಭಿಚಾರ ವಗೈರೆ ಮಾಡಿಕೊಂಡು [illegible] ನನ್ನ ಮೇಲೂ ನನ್ನ ವ್ಯಭಿಚಾರದ ಮೇಲೂ ನಿನ್ನದು ಯಾವ ತರದ ಹಕ್ಕು [illegible] ಇಲ್ಲ ಮತ್ತು ನಾನು ನನ್ನ ಮರ್ಜಿ ಪ್ರಕಾರ ಇರುತ್ತೇನೆ. ಇದಕ್ಕೆ ನಿನ್ನದು ಯಾವ [illegible] ಹಕ್ಕು [illegible] ಈ ನೋಟೀಸು [illegible] ಕೊಟ್ಟಿದ್ದೇನೆ [illegible]

ತಾ|| [illegible] ನೇ [illegible]

ಈ [illegible] ಗಂಗವ್ವಾ ಕೋಂ ಮಲ್ಲಪ್ಪಾ ಕುರಿಯವರ ಸಾಕೀನ [illegible] ಕಟ್ಟಿ ಈಕಿ ಮಾಡಿದ್ದು

ನೋಟೀಸು

ಸಿದ್ದ ಕೋಂ [illegible] ಸಾ|| ಬಿದರ[illegible] ಗ್ರಾಮ [illegible] ನಿನ್ನ [illegible] ಸಹಿತ ಇವರ ಮನೆಯಲ್ಲಿ [illegible] ತಾಲ್ಲೂಕ [illegible] ಇವರಿಗೆ.

[illegible] ಬಿನ [illegible] ಸಾಕೀನ [illegible] ತಾಲ್ಲೂಕ [illegible] ನಾನು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ

ನೀನು ನನ್ನ ಲಗ್ನದ ಹೆಂಡತಿ ಇದ್ದು ನೀನು [illegible] ನನ್ನ ಬಿಟ್ಟು ಹೋಗಿ [illegible] ನನ್ನ [illegible] ಗ್ರಾಮದಲ್ಲಿ ಇರುತ್ತಿದಿ. ನೀನು ಈಗ ವ್ಯಭಿಚಾರದಿಂದ ಗರ್ಭಿಣಿ ಆಗಿರುತ್ತಿ [illegible] ನನಗೆ ತಿಳಿದು ಬಂದಿರುತ್ತದೆ. ಕಾರಣ ನಿನಗೆ ತಿಳಿಸುವದೇನಂದರೆ ನೀನು ವ್ಯಭಿಚಾರ [illegible] ಮೂಲಕ ನಿನ್ನ ಹಕ್ಕು ನನ್ನ ಮೇಲೆ ನನ್ನ ಹಕ್ಕು ನಿನ್ನ ಮೇಲೆ ಏನೂ ಯಾವ ಥರದ್ದೂ ಇರುವದಿಲ್ಲ. ಮತ್ತು ಈಗ ವ್ಯಭಿಚಾರ ದೋಷದಿಂದ ನೀನು ಬಸರಾದ ಮೂಲಕ ನಿನ್ನ ಹೊಟ್ಟೆಯಲ್ಲಿ ಹುಟ್ಟುವ ಶಿಶುವಿನ ಮೇಲೆ ನನ್ನ ಹಕ್ಕು [illegible] ಹುಟ್ಟಿದ ಶಿಶುವಿಗೆ ತಂದೆಯು [illegible] ನನ್ನ ಹೆಸರು [illegible] ಕಾಯಿಯು [illegible] ಬೇಕು ನನ್ನ ಹೆಸರು ಜನನ ರಜಿಸ್ಟರದಲ್ಲಿ ಹುಟ್ಟಬರದಂತೆ ನಿಮ್ಮ ಊರ ಪಾಟೀಲ ವೀರನಗೌಡನಿಗೆ ಬಂದು ನೋಟೀಸಿನ ಪ್ರತಿ [illegible] ಬಗ್ಗೆ ಕಳಿಸುತ್ತಿದೆ ಮತ್ತು ಇದರಂತೆ [illegible] ಮಾಮಲೇದಾರ ಸಾ|| [illegible] ಅವರಿಗೂ ವಂದು [illegible] ಕಳಿಸಿರುತ್ತೇನೆ ತಿಳಿಯುವದು

ತಾ|| ೧೩ — [illegible] ನೇ ಇಸ್ವಿ

ಈ ಎ ಹೆ. ಗು. [illegible] ಅಣ್ಣಪ್ಪಾ [illegible] ರಾವ [illegible] ಸಾ|| ಮಲ್ಲೂರ ಈತ ಮಾಡಿದ್ದು ಅದೆ

ಈ ಪತ್ರವನ್ನು [illegible] ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ [illegible]

R N. B. 1443

ನಿತ್ಯ ಪತ್ರ — ವಿಜಯ — ಬೆಲೆ [illegible]

[illegible]

[illegible] ಸಂಚಿಕೆ ೨೧೩

[illegible]

ವ್ಯಾಪಾರದ ವರ್ಗ— [illegible]

[illegible]

ದೇಶ:— [illegible]

[illegible]

[illegible]

ಎಲ್. ಎಫ್. ಟಿ. ಬಿ. [illegible]

ದಿ [illegible] ಬ್ಯಾಂಕ ಲಿಮಿಟೆಡ, ಧಾರವಾಡ

[illegible]

೧ ಈ ಬ್ಯಾಂಕಿನಲ್ಲಿ [illegible]

೨ [illegible]

೩ [illegible]

೪ ಈ ಬ್ಯಾಂಕಿನ [illegible]

೫ ಬ್ಯಾಂಕಿಗೆ [illegible]

ಕೃಷ್ಣರಾವ ವೆಂಕಟರಾವ ಭಂಡಾರಿ.
ಮ್ಯಾನೇಜಿಂಗ [illegible]

ದಿ ಧಾರವಾಡ [illegible]
[illegible] ಬ್ಯಾಂಕ ಲಿಮಿಟೆಡ

[illegible]

ಶೇರು [illegible] ಕ್ರೆಡಿಟ ಸೊಸಾಯಿಟಿಯು [illegible] ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible]

[illegible]

ಮಧ್ವರಾವ ಬಿ. [illegible]
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ [illegible]

[illegible]

ಈ ಬ್ಯಾಂಕಿನಲ್ಲಿ [illegible]

ಈ ಬ್ಯಾಂಕಿನಲ್ಲಿ [illegible]

[illegible]
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ [illegible] ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	[illegible]
೪ ,,	[illegible]
ವಾರ ಪತ್ರಕ್ಕೆ ೧ ವರ್ಷಕ್ಕೆ	[illegible]

ವಿಶೇಷ [illegible]

ಮ್ಯಾನೇಜರ [illegible]

ವಿಜಯ.

